ಮಹಿಳೆ ಮತ್ತು ಸ್ವಾವಲಂಬನೆ

(ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಮುನ್ನಡೆ)

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ವೈ.ಎಸ್.ಜ್ಯೋತಿಬಾಯಿ

ಮಾರ್ಗದರ್ಶಕರು
[illegible].ಎಸ್.ಶ್ರೀಮತಿ
ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮೇ ೨೦೦೩

14

ಮಹಿಳೆ ಮತ್ತು ಸ್ವಾವಲಂಬನೆ

(ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಮುನ್ನಡೆ)

ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ವೈ.ಎಸ್.ಜ್ಯೋತಿದೇವಿ

ಮಾರ್ಗದರ್ಶಕರು
ಡಾ. ಎಚ್.ಎಸ್.ಶ್ರೀಮತಿ
ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಮೇ ೨೦೦೩

14

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ವೈ.ಎಸ್.ಜ್ಯೋತಿದೇವಿ ಅವರು ಮಹಿಳೆ ಮತ್ತು ಸ್ವಾವಲಂಬನೆ(ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಮುನ್ನಡೆ) ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಭಾಷಾನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಚ್.ಎಸ್. ಶ್ರೀಮತಿ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 20-08-2002
ಸ್ಥಳ : ವಿದ್ಯಾರಣ್ಯ

H1

ಸಂಶೋಧಕರ ಪ್ರಮಾಣ ಪತ್ರ

ಮಹಿಳೆ ಮತ್ತು ಸ್ವಾವಲಂಬನೆ(ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಮುನ್ನಡೆ) ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಪಿಎಚ್.ಡಿ.ಪದವಿಗಾಗಿ ಡಾ.ಎಚ್.ಎಸ್.ಶ್ರೀಮತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಭಾಷಾನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ

ವೈ.ಎಸ್. ಜ್ಯೋತಿದೇವಿ
ಸಂಶೋಧಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 20-04-2002
ಸ್ಥಳ : ವಿದ್ಯಾರಣ್ಯ

[illegible]

[illegible]

[illegible]

[illegible]

ಪರಿವಿಡಿ

ಪ್ರಸ್ತಾವನೆ

ಪ್ರಸ್ತಾವನೆ

ಪ್ರಪಂಚದ ಎಲ್ಲ ದೇಶಗಳಲ್ಲೂ ಮಾನವ ಸಮಾಜದ ಕಟ್ಟುಪಾಡು, ಶಾಸ್ತ್ರ - ಧರ್ಮ, ನ್ಯಾಯ - ಶಾಸನ, ಆಚಾರ - ವಿಚಾರ, ಸಂಸ್ಕೃತಿ - ಕಲೆ, ಎಲ್ಲವೂ ಪುರುಷ ಪ್ರಧಾನವಾಗಿವೆ. ಮಾನವ ಇತಿಹಾಸದ ಮೂಲ ಕೇಂದ್ರವಾದ ಸ್ತ್ರೀ ಮಾತ್ರ ಅದೇ ಬಿಂದುವಾಗಿಯೇ ಉಳಿದಿದ್ದಾಳೆ. ಮಹಿಳೆ ಮಕ್ಕಳನ್ನು ಹೆರುವ, ಸಲಹುವ ಸ್ವಾಭಾವಿಕ ಕರ್ತವ್ಯದ ಜೊತೆಗೆ ತನ್ನ ವಿವೇಚನಾ ಶಕ್ತಿ ಹಾಗೂ ಚಾತುರ್ಯವನ್ನು ಪುರುಷನ ಕಾರ್ಯ ಸಾಧನೆಯಲ್ಲೂ ಧಾರೆಯೆರೆದಿದ್ದಾಳೆ. ಆಕೆಗೆ ಸೂಕ್ಷ್ಮವಾದ ಕೋಮಲ ಹೃದಯದ ಜೊತೆಗೆ ಅಸಾಧಾರಣ ಬುದ್ಧಿಬಲವೂ ಇದೆ. ಆದರೆ ಮಹಿಳೆಯನ್ನು ಕಾಣುವ ಪುರುಷರ ದೃಷ್ಟಿಕೋನ ಮಾತ್ರ ಕಾಲದಿಂದ ಕಾಲಕ್ಕೆ ಬದಲಾಗಿದೆ. ವಿವಿಧ ಧರ್ಮಗಳು ಮಹಿಳೆಗೆ ಪೂಜ್ಯಸ್ಥಾನ ನೀಡಿದ್ದವು ನಿಜ. ಆದರೆ ಅವೇ ಧರ್ಮಗಳು ಮಹಿಳೆಗೆ ಸಲ್ಲದ ನಿರ್ಬಂಧಗಳನ್ನು ವಿಧಿಸಿ ಆಕೆಯ ಬೌದ್ಧಿಕ ವಿಕಾಸಕ್ಕೆ ಕೊಡಲಿ ಪೆಟ್ಟು ಹಾಕಿದ್ದು ಪೀಠಕ್ಕೇರಿಸಿ ಪೂಜಿಸಲು ಸಂಕೋಲೆ ಬಿಗಿದಂತಾಯಿತು. ಯಾವುದೇ ಸಮಾಜದಲ್ಲಿ ಮಹಿಳೆಯರ ಬಗ್ಗೆ ಅಂದಿನ ಸಮುದಾಯವು ಹೊಂದಿರುವ ದೃಷ್ಟಿಕೋನಕ್ಕೆ ಹೆಚ್ಚಿನ ಸಾಮಾಜಿಕ ಮಹತ್ತ್ವ ನೀಡಲಾಗುತ್ತದೆ. ಇಂದಿನ ಸಾಮಾಜಿಕ ಸಂರಚನೆ(Social Structure)ಯನ್ನು ಹಾಗೂ ಮಹಿಳೆಯರ ಸ್ಥಾನಮಾನ ಹಾಗೂ ಅಂತಸ್ತನ್ನು ಯುಕ್ತವಾಗಿ ಅರ್ಥೈಸಬೇಕಾದರೆ ಅಂಥ ಸಮಾಜದ ಮೇಲೆ ಪ್ರಭಾವ ಬೀರುವ, ಅದನ್ನು ರೂಪಿಸುವ ಚಾರಿತ್ರಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಅಂಶಗಳು ಅಥವಾ ಒತ್ತಡಗಳನ್ನು ನಾವು ವಿಶ್ಲೇಷಿಸುವುದು ಅಗತ್ಯವಾಗುತ್ತದೆ. ಇನ್ನು ಮೂರು ಸಾವಿರ ವರ್ಷಕ್ಕೂ ಹೆಚ್ಚು ದೀರ್ಘಾವಧಿಯ ವರ್ಣರಂಜಿತ ನಿರಂತರ ಇತಿಹಾಸ ಹೊಂದಿರುವ ನಮ್ಮ ಭಾರತೀಯ (ಕರ್ನಾಟಕ) ಸಮಾಜದ ಬಗ್ಗೆ ಸರಳವಾಗಿ ವಿಶ್ಲೇಷಿಸುವುದು ಸುಲಭಸಾಧ್ಯವಲ್ಲ. ಆದ್ದರಿಂದ ಈ ಬಗ್ಗೆ ಚಾರಿತ್ರಿಕ ದೃಷ್ಟಿಕೋನ ಹೊಂದಿರುವುದು ಅಷ್ಟೇ ಮುಖ್ಯ. ಇತಿಹಾಸಜ್ಞೆ ರೋಮಿಲಾ ಥಾಪರ್ ಪ್ರಕಾರ 'ಭಾರತೀಯ ಉಪಖಂಡದಲ್ಲಿ ಸಾಂಸ್ಕೃತಿಕ ಸನ್ನಿವೇಶ, ಕೌಟುಂಬಿಕ ಸಂರಚನೆ, ವರ್ಗ, ಜಾತಿ, ಆಸ್ತಿಯ ಹಕ್ಕು ಮತ್ತು ನೈತಿಕತೆಗೆ ಸಂಬಂಧಿಸಿದಂತೆ ಸ್ತ್ರೀಯರ ಅಂತಸ್ತಿನಲ್ಲಿ ಅಸಂಖ್ಯ ವ್ಯತ್ಯಾಸಗಳಿವೆ. ಹೀಗಾಗಿ, ಪ್ರಗತಿಯ ವಿಭಿನ್ನ ಹಂತಗಳಲ್ಲಿನ ಮಹಿಳೆಯರ ಅಂತಸ್ತಿನ ಚಿತ್ರಣ ನೀಡುವುದು ಕಷ್ಟವಾಗುತ್ತದೆ'. ಭಾರತೀಯ ಮಹಿಳೆಗೆ ನಮ್ಮ ಧರ್ಮಶಾಸ್ತ್ರಗಳಲ್ಲಿ 'ಮಾತೃದೇವೋಭವ' ಎಂದು ಆದ್ಯತೆಯನ್ನು ನೀಡಿ ಪಿತೃ, ಆಚಾರ್ಯ, ಅತಿಥಿಗಳಂಥ ಸಮಾನ ಸ್ಥಾನಗಳ ಪೈಕಿ ಮಾತೆಯನ್ನು ಮೊದಲನೇ ಸ್ಥಾನದಲ್ಲಿರಿಸಲಾಗಿದೆ.

ತಾಯಿ ಹಾಗೂ ಪತ್ನಿಯಾಗಿ ಆಕೆ ಸ್ವಸುಖ ಸಂತೋಷಗಳನ್ನು ತೊರೆದು ತನ್ನ ಕುಟುಂಬ ಹಾಗೂ ಮಕ್ಕಳಿಗಾಗಿ ದುಡಿಯುತ್ತಾಳೆ. ಹೀಗಾಗಿ ಆಕೆಗೆ ಒಂದೆಡೆ ಗೌರವ ಮತ್ತೊಂದೆಡೆ ಬಲವಂತದ ಅತಿಶ್ರಮ, ದುಡಿತ ಒಟ್ಟೊಟ್ಟಿಗೆ ನಡೆಯುತ್ತವೆ. ಕುಟುಂಬದ ಸುಖ ಸಮೃದ್ಧಿಗಾಗಿ ಆಕೆ ಪತಿಗೂ ನೆರವಾಗುವುದಲ್ಲದೆ ಆರ್ಥಿಕ ಸುಸ್ಥಿತಿಗಾಗಿ ಹೊರಗೂ ದುಡಿಯುತ್ತಾಳೆ. ಇದರಿಂದ ಆಕೆ ದ್ವಿಮುಖ ಕರ್ತವ್ಯಗಳನ್ನು ನಿಭಾಯಿಸುವಂತಾಗುತ್ತದೆ.

ಮಾನವ ಸಮಾಜದ ಅರ್ಧಭಾಗದಷ್ಟಿರುವ ಮಹಿಳೆಯರು ಈಗಲೂ ಕೂಡ ಅಸಮಾನತೆ ಹಾಗೂ ಶೋಷಣೆಗೆ ಗುರಿಯಾಗಿದ್ದಾರೆ. ಮಹಿಳೆಯರ ಆತ್ಮಬಲ, ಕಾರ್ಯದಕ್ಷತೆ ಮತ್ತು ಕ್ರಿಯಾಶೀಲ ಗುಣಗಳನ್ನು ಸಮಾಜದ ಹಾಗೂ ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಬಳಸದೆ ನಿರ್ಲಕ್ಷ್ಯ ತೋರಿರುವುದು ಮಾನವ ಧರ್ಮಕ್ಕೆ ಅಪಚಾರವೆಸಗಿದಂತೆ ಎನ್ನಬಹುದು. ಯಾವ ಸಮಾಜದಲ್ಲಿ ಮಹಿಳೆಯರಿಗೆ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಹಕ್ಕುಗಳಲ್ಲಿ ಸಮಾನತೆ ಇರುವುದಿಲ್ಲವೋ ಅಂಥ ಸಮಾಜ ರೋಗಗ್ರಸ್ತವೆಂದು ತೀರ್ಮಾನಿಸಬಹುದು. ಸ್ವಾತಂತ್ರ್ಯ(Liberty), ಸಮಾನತೆ(Equality), ಜೀವನಾವಕಾಶ (Life) ಮತ್ತು ಭ್ರಾತೃತ್ವ(Fraternity) ಇವು ಮಾನವನ ಮೂಲಭೂತ ಹಕ್ಕುಗಳಾಗಿದ್ದು ಇವುಗಳನ್ನು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಸಿಗದಂತೆ ಮಾಡಿದರೆ ಅಥವಾ ಕ್ರೂರತನದಿಂದ ವರ್ತಿಸಿದರೆ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಮಹಿಳೆಯರ ಮಟ್ಟಿಗೆ ಇಂಥ ಉಲ್ಲಂಘನೆ ಪುರುಷರಿಂದ ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ.

ಮಹಿಳೆಯರಿಗೆ ವೇದಗಳ ಕಾಲದಲ್ಲಿ ಸಾಕಷ್ಟು ಸ್ವಾತಂತ್ರ್ಯ, ಸೌಲಭ್ಯ ಹಾಗೂ ಪುರುಷರೊಂದಿಗೆ ಸಮಾನ ಹಕ್ಕು, ಅಧಿಕಾರ ಇದ್ದುದ್ದನ್ನು ದಾಖಲೆಗಳಿಂದ ತಿಳಿಯಬಹುದು. ಮುಖ್ಯವಾಗಿ ಉಪನಯನ ಸಂಸ್ಕಾರ, ವೇದಾಧ್ಯಯನಕ್ಕೆ ಉತ್ತೇಜನ, ಪಾಂಡಿತ್ಯವುಳ್ಳ ಮಹಿಳೆಯರಿಗೆ ಮನ್ನಣೆ, ಬ್ರಹ್ಮಚರ್ಯೆಗೆ ಪ್ರಾಶಸ್ತ್ಯ ಇಂಥ ಅಂಶಗಳು ಅಚ್ಚರಿ ಹುಟ್ಟಿಸುತ್ತವೆ. ಜೊತೆಗೆ ಸೂಕ್ತ ವಿವಾಹ ವಯೋಮಾನ, ಪತಿಯ ಆಯ್ಕೆಯ ಸ್ವಾತಂತ್ರ್ಯ, ಪತಿಯೊಂದಿಗೆ ಎಲ್ಲ ಕಾರ್ಯಗಳಲ್ಲೂ ಸಹಧರ್ಮಿಣಿಯಾಗಿ ಸಮಾಜದಲ್ಲಿ ಆಕೆಗೆ ಗೌರವಾದರಗಳು ದೊರೆಯುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ, ಆಸ್ತಿಯ ಹಕ್ಕು ಮಹಿಳೆಯರಿಗೂ ಇದ್ದು ಆರ್ಥಿಕ ಭದ್ರತೆಹೊಂದಿದ್ದುದು ಅಭಿಮಾನದ ಸಂಗತಿ. ಹಾಗೆಯೇ ವೈದಿಕ ಕರ್ಮಗಳನ್ನು ನೆರವೇರಿಸಲೂ ಕೂಡ ಹೆಣ್ಣುಮಕ್ಕಳಿಗೆ ಅವಕಾಶವಿತ್ತು. ನೈತಿಕತೆಯೆಂಬುದಕ್ಕೆ ಆ ಕಾಲದಲ್ಲಿ ವಿಶಿಷ್ಟ ಅರ್ಥವನ್ನೇ ನೀಡಲಾಗಿತ್ತು. ಪಾತಿವ್ರತ್ಯಕ್ಕೆ ಗೌರವವಿದ್ದರೂ ಇತರರೊಂದಿಗಿನ ಲೈಂಗಿಕ ಸಂಪರ್ಕವನ್ನು ಕೀಳಾಗಿ ಕಾಣುತ್ತಿರಲಿಲ್ಲವೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಆದರೆ, ಕಾಲಾನುಕ್ರಮದಲ್ಲಿ ಮಹಿಳೆಗೆ ಮಾತ್ರ ಶೀಲ ರಕ್ಷಣೆ ಪಾವಿತ್ರ್ಯವನ್ನು ಎತ್ತಿ ಹಿಡಿದು ಆಕೆಯನ್ನು ಎಲ್ಲ ಹಕ್ಕು ಮತ್ತು ಸ್ವಾತಂತ್ರ್ಯಗಳಿಂದ ವಂಚಿಸಿ

ಕಟ್ಟಿಹಾಕಲಾಯಿತು. ಪುರಾಣಗಳ ಕಾಲಕ್ಕೆ ಸ್ತ್ರೀಯರು ಸ್ಥಾನಮಾನಗಳನ್ನು ಒಂದೊಂದಾಗಿ ಕಳೆದುಕೊಳ್ಳಬೇಕಾಯಿತು. ಇದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದು. ಉಪನಯನ, ವೇದಾಧ್ಯಯನ ಹಾಗೂ ವಿದ್ಯಾಭ್ಯಾಸ ತಪ್ಪಿತು. ಬಾಲ್ಯವಿವಾಹ ಪ್ರಚಲಿತವಾಗಿ ವಿಧವಾ ವಿವಾಹ ನಿಷೇಧಿತವಾಯಿತು. ಬಹುಪತ್ನಿತ್ವ ಪದ್ಧತಿಯಿಂದಾಗಿ ಪತಿಯ ಆಯ್ಕೆಹಕ್ಕು ಇಲ್ಲವಾಯಿತು. ಪ್ರಭತಿ ಮುಖರ್ಜಿ ಹೇಳುವಂತೆ "ಸಂಪೂರ್ಣ ಸಮಾಜದ ಮೇಲೆ ಬ್ರಾಹ್ಮಣ ವಿಧಿಗಳ ಹೇರಿಕೆ, ಜಾತಿ ವ್ಯವಸ್ಥೆ ಮೂಲಕ ಹೇರಲಾದ ಬಿಗು ನಿರ್ಬಂಧಗಳು, ಅವಿಭಕ್ತ ಕುಟುಂಬ ಪದ್ಧತಿ, ಸ್ತ್ರೀಯರಿಗೆ ಶೈಕ್ಷಣಿಕ ಸೌಲಭ್ಯಗಳ ಕೊರತೆ, ಆರ್ಯ ಕುಟುಂಬಗಳಲ್ಲಿ ಅನಾರ್ಯ ಹೆಂಡತಿಯ ಆಗಮನ ಮತ್ತು ಭಾರತದ ಮೇಲೆ ಪಾಶ್ಚಾತ್ಯರ ದಾಳಿ (ಅಲೆಕ್ಸಾಂಡರ್ ಮೊದಲಾದವರು) ಈ ಎಲ್ಲ ಕಾರಣಗಳಿಂದ ಪುರಾಣಗಳ ಕಾಲದಲ್ಲಿ ಸ್ತ್ರೀಯರ ಅಂತಸ್ತು ಪತನ ಹೊಂದಿತು". ಈ ವೇಳೆಗೆ ಮನುವಿನ ಸಿದ್ಧಾಂತಗಳು ಮಹಿಳೆಯ ವ್ಯಕ್ತಿ ಸ್ವಾತಂತ್ರ್ಯಕ್ಕೆ ಮುಳುವಾದವು. ಇದು ಆಕೆಗೆ ಬದುಕಲು ನೆಲೆಯಿಲ್ಲದೆ ಇನ್ನೊಬ್ಬರ ಹಂಗಿನಲ್ಲಿ ಪರರ ಸೇವೆಯಲ್ಲಿ ಕೂಳಿಗಾಗಿ ಬದುಕುವ ಹೀನಸ್ಥಿತಿ ಉಂಟಾಗಲು ಕಾರಣವಾಯಿತು. ಸತಿಪದ್ಧತಿ, ಪರದಾ ಪದ್ಧತಿ ಹಾಗೂ ಕೇಶಮುಂಡನದಂಥ ಅನಿಷ್ಟ ಪದ್ಧತಿಗಳು ರೂಢಿಯಲ್ಲಿ ಬಂದವು. ಗಂಡು ಸಂತಾನಕ್ಕೆ ಹಂಬಲಿಸಿ ಹೆಣ್ಣು ಮಕ್ಕಳನ್ನು ಕಡೆಗಣಿಸಿ ತಾರತಮ್ಯ, ದಬ್ಬಾಳಿಕೆಯಿಂದ ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವುದು ಸಾಮಾನ್ಯ ಸಂಗತಿಯಾಯಿತು.

೧೯ ಮತ್ತು ೨೦ನೇ ಶತಮಾನಗಳಲ್ಲಿ ಸ್ತ್ರೀಯರ ಬಗ್ಗೆ ಗಮನಹರಿಸುವ, ಅವರ ಏಳಿಗೆಯನ್ನು ಬಯಸುವ ಪ್ರಯತ್ನಗಳು ನಡೆದವು. ಪಾಶ್ಚಾತ್ಯೀಕರಣ, ಸಂಪ್ರದಾಯ ಸುಧಾರಣೆ, ದೇಶಭಕ್ತಿ, ಆಧುನೀಕರಣ ಮುಂತಾದ ವ್ಯವಸ್ಥೆಯ ತಿರುವುಗಳ ಬಗ್ಗೆ ನಡೆಯುತ್ತಿದ್ದ ಚರ್ಚೆಗಳಲ್ಲಿ ಭಾರತೀಯ ಮಹಿಳೆಯರ ಸ್ಥಾನಮಾನದ ಬಗ್ಗೆ ಪ್ರಶ್ನೆಗಳು ಏಳುತ್ತಿದ್ದವು. ೧೯ನೇ ಶತಮಾನದ ಪ್ರಾರಂಭದಲ್ಲಿ ಅನೇಕ ಸಮಾಜ ಸುಧಾರಕರು ಮುಂದೆ ನಿಂತು ಮಹಿಳೆಯರನ್ನು ಕಾಡುತ್ತಿದ್ದ ಅನೇಕ ದುಷ್ಟ ಪದ್ಧತಿಗಳ ನಿವಾರಣೆಗೆ ನಾಂದಿ ಹಾಡಿದ್ದರು. ಪಾಶ್ಚಿಮಾತ್ಯ ಶಿಕ್ಷಣ ಹಾಗೂ ಸಂಸ್ಕೃತಿಯ ಪ್ರಭಾವದಿಂದಾಗಿ ಸಮಾಜದ ಮೇಲೂ ಪರಿಣಾಮವುಂಟಾಗಿ ತುಳಿತಕ್ಕೆ ಒಳಗಾಗಿದ್ದ ಮಹಿಳೆಯರು ಜಾಗೃತರಾಗಿ ಸಂಪ್ರದಾಯಬದ್ಧ ಕಟ್ಟುಲೆಗಳನ್ನು ಮುರಿದು ಸಮಾಜದಲ್ಲಿ ಮಾರ್ಪಾಡು ತರಲು ಮುಂದಾದರು. ಮುಖ್ಯವಾಗಿ, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಅಸಹಕಾರ ಚಳವಳಿಯನ್ನು ಅಸ್ತ್ರವಾಗಿ ಬಳಸಿದ ರಾಷ್ಟ್ರಪಿತ ಗಾಂಧಿಯವರು ಅಸಂಖ್ಯಾತ ಮಹಿಳೆಯರಿಗೆ ದಾರಿದೀಪವಾದರು. ಮಹಿಳೆಯರ ಅಭಿವೃದ್ಧಿ, ಏಳಿಗೆ ಬಗ್ಗೆ ಅತ್ಯಾಸಕ್ತಿ ಹೊಂದಿದ್ದ ಬಾಪೂಜಿ ರಾಜಕೀಯ ಕಾರಣಗಳಿಗಾಗಿ ಮಹಿಳಾ ಸಂಘಟನೆಗಳನ್ನು, ಸಮುದಾಯಗಳನ್ನು ಮುಂಚೂಣಿಗೆ ಬರಲು ಕರೆ ನೀಡುತ್ತಿದ್ದರು. ಮಹಿಳೆಯರು ದೇಶಭಕ್ತಿಯ ಜೊತೆಗೆ ಆಗ ಉಂಟಾದ

ರಾಜಕೀಯ ಬದಲಾವಣೆಗಳಿಂದಾಗಿ ಶಿಕ್ಷಣ, ಗುಡಿ ಕೈಗಾರಿಕೆ, ನೇಯ್ಗೆ ಮುಂತಾದವುಗಳ ಮೂಲಕ ಕ್ರಮೇಣ ಆರ್ಥಿಕ ವಿಷಯಗಳತ್ತ ಕೂಡ ಗಮನಹರಿಸಲು ಪ್ರಾರಂಭಿಸಿದರು. ಹೀಗಾಗಿ ಸಹಕಾರವು ಇತರ ಸಾಮಾಜಿಕ ಆಂದೋಲನಗಳಂತೆ ಹೆಚ್ಚು ಜನ ಮಹಿಳೆಯರನ್ನು ಆಕರ್ಷಿಸಿತು.

ಸಾಮಾಜಿಕ ಸಹಕಾರದ ಮೂಲಕ ಮಹಿಳಾ ಸ್ವಾವಲಂಬನೆ, ಆರ್ಥಿಕ, ಸಾಮಾಜಿಕ-ಸ್ಥಾನಮಾನ ಪ್ರಗತಿ ಕುರಿತ ಈ ಅಧ್ಯಯನವನ್ನು ನಡೆಸಲಾಗಿದೆ. ಒಟ್ಟಾರೆಯಾಗಿ ಭಾರತೀಯ ಮಹಿಳೆಯರನ್ನು ಗಮನದಲ್ಲಿರಿಸಿದ್ದರೂ ಅತಿ ವಿಸ್ತಾರವಾಗುವ ಕಾರಣದಿಂದ ಕರ್ನಾಟಕ ರಾಜ್ಯಕ್ಕೆ ಸೀಮಿತಗೊಳಿಸಿಕೊಳ್ಳಲಾಗಿದೆ.

ಇಂದಿನ ವಿಶ್ವದಲ್ಲಿ ಮಹಿಳೆಯರ ಸ್ಥಾನಮಾನದ ಸ್ಥಿತಿಯ ಬಗ್ಗೆ ನೀಡಲಾಗಿರುವ ಜಾಗತಿಕ ವರದಿ ಹೀಗಿದೆ :

೧. ವಿಶ್ವದ ಒಟ್ಟು ಭೂ ಪ್ರದೇಶದ ಶೇ.೧ರಷ್ಟು ಮಾತ್ರವೇ ಮಹಿಳೆಯರ ಸ್ವಾಧೀನದಲ್ಲಿದೆ.

೨. ಮಹಿಳೆಯರು ಮಾಡುವ ಮನೆಗೆಲಸ, ಮಕ್ಕಳ ಆರೈಕೆ, ಕೃಷಿ ಕಾರ್ಯಗಳು ಹಾಗೂ ಇನ್ನಿತರ ಕೆಲಸಗಳ ಬಗ್ಗೆ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಸ್ತಾಪವನ್ನೇ ಮಾಡಿಲ್ಲ. ಸ್ಥೂಲ ಅಂದಾಜಿನಂತೆ ಅವುಗಳ ಮೌಲ್ಯ ಸುಮಾರು ೧೧ ಟ್ರೆಲಿಯ ಅಮೆರಿಕನಾ ಡಾಲರ್‌ಗಳಾಗುತ್ತದೆ ಎನ್ನಲಾಗಿದೆ.

೩. ಜಗತ್ತಿನ ಎಲ್ಲ ಕೆಲಸಗಳಲ್ಲಿ ಶೇ.೬೦ರಷ್ಟನ್ನು ಮಹಿಳೆಯರು ನಿರ್ವಹಿಸುತ್ತಾರೆ. ಆದರೆ ವರಮಾನದಲ್ಲಿ ಅವರ ಪಾಲು ಶೇ.೧೦ರಷ್ಟು ಮಾತ್ರ.

೪. ಎಲ್ಲ ದೇಶಗಳಲ್ಲೂ ಪುರುಷರಿಗಿಂತ ಮಹಿಳೆಯರು ಸಮಾನ ಕೆಲಸಗಳಿಗಾಗಿ ಶೇ.೩೦ ರಿಂದ ೪೦ರಷ್ಟು ಕಡಿಮೆ ವೇತನ ಪಡೆಯುತ್ತಿದ್ದಾರೆ.

೫. ಎಲ್ಲ ದೇಶಗಳಲ್ಲೂ ಪುರುಷರಿಗಿಂತ ಶೇ.೧೨ರಷ್ಟು ಹೆಚ್ಚು ಸಮಯ ದುಡಿಯುತ್ತಾರೆ.

೬. ಅಭಿವೃದ್ಧಿಶೀಲ ದೇಶಗಳಲ್ಲಿ ಆಹಾರೋತ್ಪಾದನೆಗೆ ಶೇ.೫೦ರಷ್ಟು ಮಹಿಳೆಯರು ದುಡಿಯುತ್ತಾರೆ.

೭. ವಿಶ್ವದಲ್ಲಿರುವ ಒಂದು ಬಿಲಿಯನ್ ವಯಸ್ಕ ಅನಕ್ಷರಸ್ಥರಲ್ಲಿ ೨/೩ ಭಾಗದಷ್ಟು ಮಹಿಳೆಯರಿದ್ದು ಅವರಿಗೆ ಮೂಲಶಿಕ್ಷಣ ಕೂಡ ಸಿಗುತ್ತಿಲ್ಲ.

೮. ಪ್ರತಿವರ್ಷ ಸುಮಾರು ಅರ್ಧ ಮಿಲಿಯನ್ ಮಹಿಳೆಯರು ಗರ್ಭಧಾರಣೆ, ಪ್ರಸೂತಿ ತೊಂದರೆಗಳಿಂದ ಸಾವಿಗೀಡಾಗುತ್ತಿದ್ದಾರೆ.

೯. ವಿಶ್ವಾದ್ಯಂತ ಇರುವ ಸುಮಾರು ೨೩ ಮಿಲಿಯನ್ ನಿರಾಶ್ರಿತರ ಪೈಕಿ ಶೇ.೮೦ರಷ್ಟು ಜನ ಮಹಿಳೆಯರು ಹಾಗೂ ಅವರನ್ನು ಅವಲಂಬಿಸಿದವರಿದ್ದಾರೆ. ಎಂದರೆ ದಾರಿದ್ರ್ಯ, ಹಸಿವು, ರೋಗ, ಅಂಗವಿಕಲತೆ ಹಾಗೂ ಅನಕ್ಷರತೆಯಿಂದ ನರಳುತ್ತಿದ್ದಾರೆ.

೧೦. ಯುದ್ಧ ಬೇಕೆ ಬೇಡವೆ ಎಂಬುದನ್ನು ನಿರ್ಧರಿಸುವಲ್ಲಿ ಮಹಿಳೆಯರ ಪಾತ್ರವೇನೂ ಇರದಿದ್ದರೂ ಯುದ್ಧದ ಸಮಯದಲ್ಲಿ ಹಾಗೂ ಅನಂತರ ಮಹಿಳೆಯರು ಹಿಂಸೆ, ಅತ್ಯಾಚಾರ, ಪ್ರಾಣ, ಆಸ್ತಿಹರಣ ದಂತಹ ತೀವ್ರ ಪರಿಣಾಮಗಳಿಗೆ ಈಡಾಗುತ್ತಾರೆ.

ತಾಯಿ, ಪತ್ನಿ, ಸೋದರಿ, ಗೆಳತಿ ಹಾಗೂ ಸಹೋದ್ಯೋಗಿಯಾಗಿ ಪುರುಷನ ಬದುಕಿನ ಸಂಗಾತಿಯಾಗುವ ಮಹಿಳೆಯರು ದಾರುಣ ಪರಿಸ್ಥಿತಿಗಳಿಂದ ಪಾರಾಗಲು, ಸುಧಾರಣೆ ತರಲು ಇದೀಗ ಜಾಗತಿಕ ಮಟ್ಟದಲ್ಲಿ ಹೋರಾಡಲು ಸಂಘಟಿತರಾಗುತ್ತಿದ್ದಾರೆ. ನಗರ ಹಾಗೂ ಗ್ರಾಮೀಣ ಮಹಿಳೆಯರನ್ನು ಹೋಲಿಸಿದಾಗ ನಗರದ ಸುಶಿಕ್ಷಿತ ಮಹಿಳೆ ಉತ್ತಮ ಸ್ಥಾನಮಾನವನ್ನು ಹೊಂದಿರುವುದನ್ನು ಗುರುತಿಸಬಹುದು. ಆದರೆ ಗ್ರಾಮೀಣ ಉದ್ಯೋಗಗಳಲ್ಲಿ ತೊಡಗಿರುವ ಮಹಿಳೆಯರ ಬವಣೆ ಅಷ್ಟಿಷ್ಟಲ್ಲ. ಅಲ್ಲದೆ, ನಗರದ ಉದ್ಯೋಗಸ್ಥ ಮಹಿಳೆಯರ ಸಂಖ್ಯೆ ಬೆಳೆಯುತ್ತಿದ್ದಂತೆ ಸಮಸ್ಯೆಗಳೂ ವಿಭಿನ್ನ ರೀತಿಯಲ್ಲಿ ಎದುರಾಗುತ್ತವೆ. ಬದಲಾದ ಉದ್ಯೋಗದ ಸ್ವರೂಪಕ್ಕೆ ತಕ್ಕಂತೆ ಕುಟುಂಬದ ಇತರ ಸದಸ್ಯರಿಂದ ಸರಿಯಾದ ಅಥವಾ ಯಾವುದೇ ಬೆಂಬಲ, ಒತ್ತಾಸೆ, ಪ್ರೋತ್ಸಾಹ ದೊರೆಯದಿದ್ದಾಗ ಆಕೆ ತನ್ನ 'ದ್ವಿಪಾತ್ರಗಳ ಪ್ರಯಾಸ'ವನ್ನು (Dual rule strain)ಎದುರಿಸಬೇಕಾಗುತ್ತದೆ. ಏನೇ ಆಗಲಿ, ಆಕೆಗೆ ನೆಲೆಯೂರಲು ಅಥವಾ ಯಾರ ಆಶ್ರಯವಿಲ್ಲದೆ ತನ್ನ ಕಾಲ ಮೇಲೆ ತಾನು ನಿಲ್ಲಲು ಅತಿ ಮುಖ್ಯವಾದ ಆಧಾರವೆಂದರೆ ಆರ್ಥಿಕ ಭದ್ರತೆಯೇ ಎಂಬುದು ಯಾರೂ ಒಪ್ಪಬೇಕಾದ ಅಭಿಪ್ರಾಯವಾಗಿದೆ. ಈ ದಿಸೆಯಲ್ಲಿ ಮಹಿಳೆ ಆರ್ಥಿಕವಾಗಿ ಮುನ್ನಡೆಯಲು 'ವ್ಯಕ್ತಿಗತ' ಪ್ರಯತ್ನಗಳು (Individual Efforts) ಹಾಗೂ ಸಂಘಟಿತ ಚಟುವಟಿಕೆಗಳ (Organisational Activities) ಮೂಲಕ ಮಹಿಳಾ ಸಮುದಾಯವಾಗಿ(Women Community) ಕಾರ್ಯನಿರ್ವಹಿಸಲು ಈಗಾಗಲೇ ಹಲವಾರು ಕ್ಷೇತ್ರಗಳಲ್ಲಿ ಅಡಿಯಿಟ್ಟಿರುವುದು ಪ್ರಶಂಸನಾರ್ಹ. ಈ ನಿಟ್ಟಿನಲ್ಲಿ ಸಂವಿಧಾನ, ಕಾನೂನುಗಳು ಹಾಗೂ ನಿಯಮಗಳಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ, ಹಕ್ಕು ಸ್ಥಾಪನೆಗಾಗಿ ನೀಡಿರುವ ಅವಕಾಶ, ಆಶಯಗಳನ್ನು ಯುಕ್ತವಾಗಿ ಬಳಸಿಕೊಳ್ಳಬೇಕು. ಇದಕ್ಕೆ ಮುಖ್ಯವಾಗಿ ಪುರುಷರ ಪ್ರೋತ್ಸಾಹ ಹಾಗೂ ಹೊಂದಾಣಿಕೆ ಮನೋಭಾವವೂ ಅಗತ್ಯ. ಮಹಿಳೆ ಪರಾವಲಂಬಿಯಾಗಿ ದೀನ ಬದುಕು ಸಾಗಿಸದೆ ವೈಯಕ್ತಿಕವಾಗಿ ಹಾಗೂ ಸಂಘಟಿತ ಸಮೂಹದೊಡನೆ ತನ್ನನ್ನು ತಾನು ಗುರುತಿಸಿಕೊಂಡು ಸ್ವಾವಲಂಬಿಯಾಗುವ ಛಲ ಹೊತ್ತು ತನ್ನಂಥದೇ ಮನೋಭಾವ ಹೊಂದಿರುವ ಇತರ ಮಹಿಳೆಯರೊಡನೆ ಸೇರಿ ಸಹಕಾರ ಸೌಹಾರ್ದದಿಂದ ಉದ್ಯಮಶೀಲಳಾಗಬೇಕು. ಕುಟುಂಬ, ಸರ್ಕಾರ, ನ್ಯಾಯಾಲಯ ಹಾಗೂ ಸಂಘ ಸಂಸ್ಥೆಗಳು ಇಂಥ ಪ್ರಗತಿಪರ ಮಹಿಳೆಯರಿಗೆ ಬೆಂಬಲವಾಗಿ ನಿಲ್ಲಬೇಕು. ಹೀಗಾದರೆ ಮಹಿಳಾ ಪ್ರಗತಿ ಸಾಧ್ಯವಾಗಿ, ಸಮಾಜ, ಉದ್ಯಮ, ರಾಜಕಾರಣ

ಮುಂತಾದ ಹಲವಾರು ಪ್ರಮುಖ ರಂಗಗಳಲ್ಲಿ ಮಹಿಳೆಯರ ಸ್ಥಾನಮಾನ ಉನ್ನತ ಮಟ್ಟಕೇರಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯೊಂದಿಗೆ ನನ್ನ ಅಧ್ಯಯನ ಪ್ರಾರಂಭವಾಗುತ್ತದೆ.

ಅಧ್ಯಯನದ ಪ್ರಮುಖ ಉದ್ದೇಶಗಳು

- ಸ್ತ್ರೀಪುರುಷ ತಾರತಮ್ಯ, ಸಾಮಾಜಿಕ, ಆರ್ಥಿಕ ಸ್ಥಾನಮಾನ, ಶಿಕ್ಷಣ, ಉದ್ಯೋಗಾವಕಾಶಗಳು ಮುಂತಾದ ಅಂಶಗಳ ದೃಷ್ಟಿಯಿಂದ ಮಹಿಳೆಯರ ಜೀವನದ ಬದಲಾವಣೆಯ ವಾಹಕಗಳನ್ನು ಗುರುತಿಸುವುದು.
- ಆರ್ಥಿಕ ಅವಲಂಬನೆ ಹಾಗೂ ಅಬಲತೆಗೆ ಕಾರಣಗಳು ಹಾಗೂ ಸ್ವಾವಲಂಬನೆಯನ್ನು ಕಳೆದು ಕೊಂಡುದರ ಪರಿಣಾಮಗಳು ಹಾಗೂ ಇದನ್ನು ಮರಳಿ ಪಡೆಯುವಲ್ಲಿ ಇತರ ಸಾಮಾಜಿಕ ಆಂದೋಲನಗಳಂತೆ ಸಾಮುದಾಯಿಕವಾದ ಸಹಕಾರ ಆಂದೋಲನದ ಮಹತ್ವ.
- ವ್ಯಕ್ತಿಗತವಾಗಿ ಹಾಗೂ ಸಂಘಟಿತರಾಗಿ ಮಹಿಳೆಯರು ಆರ್ಥಿಕ ಸ್ವಾವಲಂಬನೆಗೆ ಪ್ರಯತ್ನ ನಡೆಸುವಲ್ಲಿ ಮತ್ತು ಬೆಳೆಸುವಲ್ಲಿ ಸಹಕಾರ ಸಂಘಗಳು, ಮಹಿಳಾ ಕಲ್ಯಾಣ ಯೋಜನೆಗಳು ಇತ್ಯಾದಿಗಳ ಪಾತ್ರವನ್ನು ವಿಶ್ಲೇಷಿಸುವುದು.
- ಸಂಘ ಸಂಸ್ಥೆಗಳ ಮೂಲಕ ಮಹಿಳಾ ಸಂಘಟನೆ, ಆರ್ಥಿಕ ವಾಹಕವಾಗಿ ಸಹಕಾರ ಸಂಘದ ಪ್ರಾಬಲ್ಯ, ಅವುಗಳ ಸ್ಥಾಪನೆ, ಬೆಳವಣಿಗೆ ಹಾಗೂ ಮಹಿಳೆಯರ ಪ್ರವೇಶದ ಬಗ್ಗೆ ಅಧ್ಯಯನ.
- ಸಹಕಾರ ರಂಗದಲ್ಲಿ ಮಹಿಳೆಯರು ಪುರುಷರಿಂದ ಎದುರಿಸುತ್ತಿರುವ ಸ್ಪರ್ಧೆ, ಮಾರುಕಟ್ಟೆ ಸಮಸ್ಯೆ, ವಿವಿಧೋದ್ದೇಶ ಸಹಕಾರ ಸಂಘಗಳು, ಹಣ ವಹಿವಾಟಿನ ಬ್ಯಾಂಕಿಂಗ್ ವ್ಯವಹಾರಗಳ ನಿರ್ವಹಣೆಯಲ್ಲಿ ಮಹಿಳೆಯರ ಆಸಕ್ತಿ, ಯಶಸ್ಸುಗಳನ್ನು ಗುರುತಿಸುವುದು.
- ರಫ್ತು ಉದ್ಯಮಗಳಲ್ಲಿ ಸಹಕಾರ ಸಂಘಗಳ ಮೂಲಕ ಮಹಿಳೆಯರು ರಾಷ್ಟ್ರೀಯ ಹಾಗೂ ಅಂತಾ ರಾಷ್ಟ್ರೀಯ ಮಟ್ಟದ ಉದ್ಯಮಿಗಳಾಗುವ ಸಾಧ್ಯತೆಗಳ ಪರಿಶೀಲನೆ, ಅಭಿವೃದ್ಧಿ ಯೋಜನೆಗಳ ಅಧ್ಯಯನ ನಡೆಸುವುದು.

ಆರ್ಥಿಕ ಸ್ವಾವಲಂಬನೆಯ ಮೂಲಕ ಸಮಾಜದಲ್ಲಿ ಮಹಿಳೆ ಸಬಲಳಾಗಿ ಸ್ತ್ರೀ ಪುರುಷ ಸಮಾನತೆಯ ಸದೃಢ ಸಮಾಜವನ್ನು ನೆಲೆಗೊಳಿಸುವ ಸಾಧ್ಯತೆಗಳನ್ನು ಅಧ್ಯಯನ ಮಾಡುವುದು.

ಸಂಶೋಧನಾ ಚೌಕಟ್ಟು

ಆರ್ಥಿಕ ಸ್ವಾವಲಂಬನೆಯಿಂದ ಮಹಿಳೆಯರ ಸಾಮಾಜಿಕ ಸ್ಥಾನಮಾನ ಅಂತಸ್ತುಗಳನ್ನು ಏರಿಸುವುದು ಸಾಧ್ಯ. ಏಕಾಂಗಿಯಾಗಿ ಒಂಟಿ ಜೀವನ ನಡೆಸಲು, ಇತರರಿಗೆ ಜೀವನಾಧಾರ ಕಲ್ಪಿಸಲು ಆರ್ಥಿಕ

ಸ್ವಾವಲಂಬನೆ ಮಹಿಳೆಗೆ ಧೈರ್ಯವೊದಗಿಸುತ್ತದೆ. ಇವುಗಳನ್ನು ಮಾಹಿತಿಗಳ ನಿರೂಪಣೆಯೊಂದಿಗೆ ಚರ್ಚಿಸಲಾಗಿದೆ. ವೈಯಕ್ತಿಕವಾಗಿ ಹಾಗೂ ಸಮೂಹಗಳಲ್ಲಿ ಮಹಿಳೆ ಉದ್ಯೋಗಿಯಾಗಿ, ಉದ್ಯೋಗದಾತೆಯಾಗಿ ಹಾಗೂ ಉದ್ಯೋಗಶೀಲಳಾಗಿ ಆರ್ಥಿಕ ಸ್ವಾತಂತ್ರ್ಯಪಡೆಯಲು ಸಾಧ್ಯವಿದೆ. ಇಂಥ ಆರ್ಥಿಕ ಸಾಧನಗಳ ಮೂಲಕ ಆರ್ಥಿಕ ಸ್ವಾತಂತ್ರ್ಯದ ಸಂದೇಶವನ್ನು ಇತರ ಮಹಿಳೆಯರಿಗೂ ಕೂಡ ತಲುಪಿಸಲು ಸಾಧ್ಯ. ಇದಕ್ಕಾಗಿ ಆಕೆಗೆ ಅನೇಕ ಕ್ಷೇತ್ರಗಳು ಲಭ್ಯವಿವೆ. ಅವುಗಳ ಪೈಕಿ ಸಹಕಾರ ಕ್ಷೇತ್ರ ಅತಿ ಮುಖ್ಯವಾದುದು. ಸಹಕಾರ ಕ್ಷೇತ್ರ ಮಹಿಳಾ ಪ್ರಗತಿಗೆ ಹೇಗೆ ನೆರವಾಗುತ್ತದೆ ಎಂಬುದನ್ನು ವಿಶ್ಲೇಷಿಸುವ ಮೂಲಕ ಮಹಿಳಾ ಆರ್ಥಿಕ ಸ್ವಾವಲಂಬನೆಗೆ ಉತ್ತರ ತಿಳಿದುಕೊಳ್ಳಬಹುದು. ಆದ್ದರಿಂದ :

೧. ಸಹಕಾರ ತತ್ತ್ವ ಹಾಗೂ ಸಹಕಾರ ಸಂಘಗಳ ರಚನೆ

೨. ಗ್ರಾಮೀಣ ಸಹಕಾರ ಸಂಘಗಳ ಮೂಲಕ ಹಣದ ವಹಿವಾಟು ಏರಿಕೆ, ಸಹಕಾರದ ಮೂಲಕ ತಲೆ ಎತ್ತಿದ ಮಹಿಳಾ ಸಂಘಟನೆಗಳು, ಮಹಿಳಾ ಸಹಕಾರಿ ಸಂಘಗಳು ಮುಂತಾದವು.

೩. ಮಹಿಳೆಯರು ಸಹಕಾರ ಸಂಘಗಳನ್ನು ಬಳಸಿಕೊಂಡು ವ್ಯಕ್ತಿಗತವಾಗಿ ಆರ್ಥಿಕ ಬೆಂಬಲ ಪಡೆಯುವುದು, ವಿವಿಧ ಸ್ವರೂಪಗಳಲ್ಲಿ ಸಹಕಾರ ಕ್ಷೇತ್ರ ಸಬಲತೆ ಒದಗಿಸುವುದಕ್ಕೆ ಪುರಾವೆಯಾಗಿ ಸಹಕಾರ ಅಧಿನಿಯಮದ ರಚನೆ, ವ್ಯಾಪ್ತಿ, ಉಪಬಂಧಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ಆದ್ದರಿಂದ ಈ ಅಧ್ಯಯನದಿಂದ ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರದ ಬಗ್ಗೆ ತಿಳಿದುಬರುವ ಸಂಗತಿಗಳು ಈ ಕ್ಷೇತ್ರಕ್ಕೆ ಪ್ರವೇಶಿಸಲು ಆಶಿಸುವ ಹಾಗೂ ಅದರಲ್ಲಿ ಮುಂದುವರೆಯುತ್ತಿರುವ ಮಹಿಳೆಯರಿಗೆ ಮಾರ್ಗದರ್ಶನ ನೀಡುತ್ತವೆ.

ಅಧ್ಯಯನದ ವ್ಯಾಪ್ತಿ

ಈ ಮಹಾಪ್ರಬಂಧದ ಪ್ರಮುಖ ಉದ್ದೇಶಗಳಿಗನುಸಾರವಾಗಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಆದ್ದರಿಂದ, ಅನುಕ್ರಮವಾಗಿ ಅಧ್ಯಾಯಗಳನ್ನಾಗಿ ವಿಂಗಡಿಸಿ ವಿಷಯಗಳನ್ನು ವಿಶದಪಡಿಸಲಾಗಿದೆ. ಒಟ್ಟಾರೆಯಾಗಿ ವಿಸ್ತಾರವಾದ ಪ್ರಸ್ತಾವನೆ, ಐದು ಪ್ರತ್ಯೇಕ ಅಧ್ಯಾಯಗಳು, ಉಪಸಂಹಾರ, ಮಾಹಿತಿ ಸಂಗ್ರಹಣೆ, ಅಧ್ಯಯನದ ಆಕರ ಗ್ರಂಥಗಳ ಪಟ್ಟಿಯನ್ನು ಒಳಗೊಂಡಿದೆ. ವಿಷಯವಾರು ಅಧ್ಯಾಯಗಳು ಈ ಮುಂದಿನಂತಿವೆ :

ಮೊದಲನೆಯ ಅಧ್ಯಾಯ "ಭಾರತೀಯ ಮಹಿಳೆಯ ಸ್ಥಾನಮಾನ ಹಾಗೂ ಅವಳ ಪಾತ್ರದ ಚಾರಿತ್ರಿಕ ಹಿನ್ನೆಲೆ"ಯಲ್ಲಿ ಸಾಮಾಜಿಕ ಇತಿಹಾಸದಲ್ಲಿ ಮಹಿಳೆಗಿದ್ದ ಸ್ಥಾನಮಾನ ಹಾಗೂ ಆಕೆ ಕ್ರಮೇಣ ಸ್ವಾತಂತ್ರ್ಯ, ಸ್ವಾವಲಂಬನೆಯನ್ನು ಕಳೆದುಕೊಂಡು ಪುರುಷಾವಲಂಬಿಯಾದ ಹಂತಗಳನ್ನು ಗುರುತಿಸಲಾಗಿದ್ದು,

ಅದರ ಕಾರಣಗಳನ್ನು ವಿಶ್ಲೇಷಿಸಲಾಗಿದೆ. ಹಾಗೆಯೇ ಮಹಿಳಾ ಸ್ವಾವಲಂಬನೆ ಸ್ಥಗಿತಗೊಂಡುದರ ಪರಿಣಾಮವಾಗಿ ೧. ಕೌಟುಂಬಿಕ ನೆಲೆಯಲ್ಲಿ ೨. ಸಾಮಾಜಿಕ ಆರ್ಥಿಕ ನೆಲೆಯಲ್ಲಿ(ಆಸ್ತಿ ಹಕ್ಕುಗಳು) ೩. ರಾಜಕೀಯ ನೆಲೆಯಲ್ಲಿ ಆಕೆಯ ಅಂತಸ್ತು, ಗೌರವಕ್ಕೆ ಕುಂದುಂಟಾಗಿ ತಲೆಯತ್ತದಂತಾಗಿ ವ್ಯಕ್ತಿತ್ವಹೀನ ಬದುಕು ಭರಿಸುವ ಪರಿಸ್ಥಿತಿಗಳು ಒದಗಿದುದನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯ 'ಸಾಮಾಜಿಕ ಆರ್ಥಿಕ ಬದಲಾವಣೆಯ ವಾಹಕರು'ನಲ್ಲಿ ಮಹಿಳೆಯರ ದುಸ್ತರವಾದ ಬದುಕಿನಲ್ಲಿ ಕಡೇ ಪಕ್ಷ ಬೆಳಕಿಂಡಿಯೊಂದನ್ನು ತೋರಿಸಿ, ತನ್ಮೂಲಕ ಮಹಿಳೆಯರು ತಮ್ಮ ವ್ಯಕ್ತಿತ್ವ ಬೆಳವಣಿಗೆ ಹಾಗೂ ಪ್ರಗತಿಪಥವನ್ನು ಕಾಣಲು ಅನೇಕ ಮಹನೀಯರು ಕಾರಣರಾದರು. ಅವಿಭಕ್ತ ಕುಟುಂಬ ಪದ್ಧತಿಯಲ್ಲಿ ಸ್ತ್ರೀ ಪುರುಷರಿಬ್ಬರೂ ಆಹಾರ ಸಂಪಾದನೆಗೆ, ಸಂಗ್ರಹಣೆಗೆ ಸಮಾನವಾಗಿ ಜವಾಬ್ದಾರರಾಗಿರುತ್ತಿದ್ದರು. ಬರುಬರುತ್ತಾ ಆಹಾರ ಸಂಗ್ರಹಣೆ, ಸಂತಾನ ರಕ್ಷಣೆಗಾಗಿ ಮಹಿಳೆ ಕುಟುಂಬದ ಒಳಗೇ ಉಳಿದು ದುಡಿಯುವಂತಾಗಿದ್ದು ಅವಳನ್ನು ಅಷ್ಟೇ 'ನಿರ್ಬಂಧಿತ ಪರಿಸರ'ಕ್ಕೆ ಒಗ್ಗಿಕೊಳ್ಳುವಂತೆ ಮಾಡಿತು. ವಿವಾಹ ವ್ಯವಸ್ಥೆ ಕಡ್ಡಾಯವಾಗಿ ಬಾಲ್ಯವಿವಾಹ ಪದ್ಧತಿ, ವರದಕ್ಷಿಣೆ ಪಿಡುಗು, ವಿಧವೆಯರ ಬವಣೆ, ದೌರ್ಜನ್ಯ, ಅತ್ಯಾಚಾರ ಇವೆಲ್ಲದರಿಂದ ಮಹಿಳೆ ಪುರುಷರಿಂದ ಮಾತ್ರವಲ್ಲ ಮತ್ತೊಬ್ಬ ಮಹಿಳೆಯಿಂದಲೂ ಕ್ರೌರ್ಯಕ್ಕೆ ಬಲಿಯಾಗುತ್ತಾಳೆ. ಜೊತೆಗೆ ಶಿಕ್ಷಣವನ್ನು ಕೂಡ ನಿರಾಕರಿಸಿದ್ದುದರಿಂದ ಆಕೆಗೆ ಮನೆಯ ಹೊರಗಿನ ಪ್ರಪಂಚದ ಆಗುಹೋಗುಗಳೊಂದೂ ಅರಿವಿಗೇ ಬಾರದ ಸ್ಥಿತಿ ಉಂಟಾಯಿತು. ಸಾಮಾಜಿಕ ಸಂರಚನೆಯಲ್ಲಿ ಮಾತ್ರವಲ್ಲ ಕಾನೂನು ಹಾಗೂ ನ್ಯಾಯ ಪರಿಪಾಲನೆಯಲ್ಲಿ ಕೂಡ ಮಹಿಳೆಗೆ ನ್ಯಾಯ ದೊರೆಯುವುದಿಲ್ಲ. ಇದೆಲ್ಲದರ ಪರಿಣಾಮವಾಗಿ ಮಹಿಳೆಯರ ಸ್ಥಿತಿ ಶೋಚನೀಯವಾಯಿತು. ಈ ಹಂತದಲ್ಲಿ ೧. ಸಮಾಜ ಸುಧಾರಕರು ೨. ಆಧುನಿಕ ಶಿಕ್ಷಣ ಪದ್ಧತಿ ೩. ಮಹಿಳಾ ಕಲ್ಯಾಣ ಮತ್ತು ಅಭಿವೃದ್ಧಿ ಸಂಸ್ಥೆಗಳು ೪. ಮಹಿಳಾ ಸಂಘಟನೆಗಳು ಮಹಿಳೆಯರ ವಿದ್ಯಾಭ್ಯಾಸ, ಉನ್ನತ ಶಿಕ್ಷಣ ಹಾಗೂ ಸಂಘಟನೆಗಳಿಗೆ ಎಡೆ ಮಾಡಿಕೊಟ್ಟವು. ಹೀಗಾಗಿ ಅನೇಕ ಮಹಿಳಾ ಸಂಘ ಸಂಸ್ಥೆಗಳ ಆವಿರ್ಭಾವವಾಯಿತಲ್ಲದೆ, ಗಾಂಧೀಜಿಯವರ ಕರೆಗೆ ಓಗೊಟ್ಟ ಮಹಿಳೆಯರು ಸ್ವಾತಂತ್ರ ಸಂಗ್ರಾಮದಲ್ಲೂ ಭಾಗವಹಿಸಿ, ಮಹಿಳಾ ಜಾಗೃತಿಯನ್ನು ಜಗತ್ತಿಗೇ ಪ್ರಚುರ ಪಡಿಸಿದರು. ಈ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ಮೂರನೆಯ ಅಧ್ಯಾಯವಾದ 'ಸಾಮೂಹಿಕ ಸ್ವಾವಲಂಬನೆ ಕ್ಷೇತ್ರವಾಗಿ ಸಹಕಾರ ಕ್ಷೇತ್ರ'ದಲ್ಲಿ ಮಹಿಳೆಯರ ಸ್ವಾವಲಂಬನೆಯು ಪರಿಪೂರ್ಣಮಾರ್ಗವಾದ ಬಗೆಯನ್ನು ವಿಶ್ಲೇಷಿಸಲಾಗಿದೆ. ಗಾಂಧೀಜಿಯವರ ಸಹಕಾರ ಆಂದೋಲನ, ಸಹಕಾರ ತತ್ತ್ವಗಳು, ಅವುಗಳ ಪ್ರಚಾರ ಹಾಗೂ ಸಂಘಟನೆ, ಸಹಕಾರ ರಂಗದ

ಆವಿರ್ಭಾವ, ಆರ್ಥಿಕ ವಿಷಯಗಳಲ್ಲದೆ ಇತರೆ ಅಂಶಗಳ ಬಗ್ಗೆಯೂ 'ಸಹಕಾರ'ದ ಬೀಜ ಬಿತ್ತಿದ ಗಾಂಧೀಜಿಯವರು ಸಮೂಹ ಬಾಳುವೆಯ ಸಹಕಾರ ತತ್ವಗಳನ್ನು ಅನ್ವಯಿಸಿದರು. ಪ್ರತಿಯೊಬ್ಬನಿಗಾಗಿ ಎಲ್ಲರೂ ಹಾಗೂ ಎಲ್ಲರಿಗಾಗಿ ಪ್ರತಿಯೊಬ್ಬ ಎಂಬ ಉಕ್ತಿಯು ಉತ್ಪಾದಕತೆ, ಸೃಜನಾತ್ಮಕ ಮೌಲ್ಯಗಳು, ಕೆಲಸದ ಅಂತಸ್ತು, ಸಮಾನ ಹಕ್ಕು ಇವುಗಳ ಮಹತ್ವವನ್ನು ಸಮರ್ಥಿಸುತ್ತದೆ. ಸಹಕಾರ ಸಾಲ ಸಂಘದ ಅಧಿನಿಯಮ, ೧೯೦೪ ಇದು ೨೦ನೇ ಶತಮಾನದ ಕೊಡುಗೆಯಾಯಿತು. ಕೃಷಿ ಕಾರ್ಮಿಕರ ಶ್ರಮ, ಲೇವಾದೇವಿದಾರರು, ಭೂಮಾಲೀಕರು ಸಂಘರ್ಷ ಮುಂತಾದ ಸಮಸ್ಯೆಗಳಿಂದ ಸಹಕಾರ ಸಂಘಗಳ ಆರಂಭವಾಯಿತು. ಸಾಲ ನೀಡಿಕೆ, ವಸೂಲಿ, ಹಣಕಾಸು ವಹಿವಾಟಿನ ಮೂಲಕ ಸಹಕಾರ ಸಂಘ ಮೌಲ್ಯಾಧಾರಿತ ವಹಿವಾಟಿನ ಮೂಲಕ ಸಹಕಾರ ಸಂಘ ಮೌಲ್ಯಾಧಾರಿತ ಆರ್ಥಿಕ ಸಂಸ್ಥೆಯಾಗಿದೆ. ಈ ಬಗ್ಗೆ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯ 'ಮಹಿಳೆ ಮತ್ತು ಸಹಕಾರ ಕ್ಷೇತ್ರ'ದಲ್ಲಿ ಮಹಿಳೆಯ ಪ್ರವೇಶದ ಬಗ್ಗೆ ಪರಾಮರ್ಶಿಸಲಾಗಿದೆ. ಮಹಿಳೆ ದೋಷಿಯಾಗಲಿ ಅಥವಾ ಪುರುಷನೇ ಅತಿಕ್ರಮಿಸಿರಲಿ, ಅತ್ಯಾಚಾರದಂಥ ಕೃತ್ಯದಲ್ಲಿ ಮಹಿಳೆಯೇ ಹಾನಿಗೆ ಗುರಿಯಾಗುತ್ತಾಳೆ. ಸಮಾಜದ ಹಾಗೂ ಜನರ ಅಭಿಪ್ರಾಯದಲ್ಲಿ ದೂಷಿತೆಯಾದ ಸ್ತ್ರೀಗೆ ಸಿಗುವ ಸ್ಥಾನಮಾನವೆಂಥದ್ದು? ಗ್ರಾಮೀಣ ಮಹಿಳೆಯಂತೂ ಇನ್ನೂ ಸಂಕೋಲೆಯಲ್ಲೇ ಉಳಿದಿದ್ದಾಳೆನ್ನಬಹುದು. ಜಾತೀಯತೆ, ಅವಿಭಕ್ತ ಕುಟುಂಬಗಳ ವೈರುಧ್ಯ, ಶಿಕ್ಷಣದ ಅಭಾವ, ಮೂಢನಂಬಿಕೆ, ಗ್ರಾಮ ಸಮುದಾಯಗಳ ಕೊರತೆ, ಸಾಂಸ್ಕೃತಿಕ ಹಿಂಜರಿಕೆ ಇವುಗಳಿಂದಾಗಿ ಗ್ರಾಮೀಣ ಮಹಿಳೆ ಕತ್ತಲಲ್ಲೇ ಇರುವಂತಾಗಿದೆ. ನಗರ ಮಹಿಳೆಯರ ಜೀವನವೂ, ಮತ್ತೊಂದು ಬಗೆಯಲ್ಲಿ ಶೋಚನೀಯವಾಗಿದೆ. ಸಮಾನ ಮಜೂರಿಯಿರದ ಅನೇಕ ವೃತ್ತಿಗಳಿಂದ ಹಾಗೂ ದುಶ್ಚಟಗಳಿಗೆ ದಾಸನಾದ ಪತಿಯಿಂದ ಕಿರುಕುಳ, ಹೊಡೆತ, ನಿರಂತರ ಹಿಂಸೆಗಳಿಗೆ ಗುರಿಯಾಗುವ ಮಹಿಳೆಯರೊಂದು ಕಡೆ, ಇನ್ನೊಂದೆಡೆಯಲ್ಲಿ ಸಾಕಷ್ಟು ಶಿಕ್ಷಣ, ಜ್ಞಾನವಿದ್ದರೂ ವರದಕ್ಷಿಣೆ, ವಿವಾಹ ವಿಚ್ಛೇದನೆ, ಒಂಟಿ ಬದುಕಿನ ಬವಣೆ, ಗಳಿಸಿದ ಸಂಪಾದನೆಯನ್ನು ಅನುಭವಿಸಲಾರದೆ ಪುರುಷರ ದಬ್ಬಾಳಿಕೆಗೊಳಪಟ್ಟ ಮಹಿಳೆಯರು, ಅವಿವಾಹಿತೆಯರು, ಪರಿತ್ಯಕ್ತೆಯರು, ವಿಧವೆಯರು, ಬಲವಂತವಾಗಿ ಅನೈತಿಕ ಮಾರ್ಗಗಳಿಗೆ ಕಾಲಿಡಬೇಕಾದ ಪರಿಸ್ಥಿತಿಯಲ್ಲಿರುವ ಮಹಿಳೆಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇಂಥವರಿಗೆ ಉದ್ಯೋಗಾವಕಾಶಗಳನ್ನು ಎರಡು ವಿಧಾನಗಳಲ್ಲಿ ಎಂದರೆ ೧. ವ್ಯಕ್ತಿಗತವಾಗಿ ೨. ಸಾಮೂಹಿಕವಾಗಿ ಸ್ವಾವಲಂಬನೆ ಮಾರ್ಗಗಳನ್ನು ಸೂಚಿಸಬಹುದು. ಭಾರತದಲ್ಲಿ ಸಂಘ, ಸಂಸ್ಥೆ, ಏಜೆನ್ಸಿ, ಸಹಕಾರ ಸಂಘಗಳಲ್ಲಿ ಹಲವಾರು ವರ್ಷಗಳ ಕಾಲ ಪುರುಷರೇ ಇದ್ದು ಅನಂತರ ಕೇವಲ ಮಹಿಳಾ ಪ್ರಾತಿನಿಧ್ಯ ಇರಬೇಕೆಂಬ ಕಾರಣಕ್ಕೆ ಮಾತ್ರವೇ ಮಹಿಳೆಯರಿಗೆ ಸದಸ್ಯತ್ವ ನೀಡಲಾಗುತ್ತಿತ್ತು. ಅನಂತರ ಹಾಲು, ತರಕಾರಿ, ಧಾನ್ಯ, ಮೀನು ಮುಂತಾದ ಅವಶ್ಯಕ ವಸ್ತುಗಳ ಮಾರಾಟದಲ್ಲಿ ಕೂಡ ಮಹಿಳೆಯರು ಸುಲಿಗೆ, ವಂಚನೆಗಳಿಗೆ ಒಳಗಾಗಿ,

ಬಲಿಪಶುವಾಗುವ ಸಂದರ್ಭ ಉಂಟಾದಾಗ ಮಹಿಳೆಯರು, ಮಹಿಳೆಯರಿಗಾಗಿ ಮಹಿಳೆಯರಿಂದ ನಡೆಸುವ ಸಂಸ್ಥೆಗಳು ತಲೆಯೆತ್ತಬೇಕಾಯಿತು. ಇಂದು ಕರ್ನಾಟಕದಲ್ಲಿ ಸಹಕಾರ ಅಂದೋಲನ ಸಹಸ್ರಾರು ಮಹಿಳೆಯರಿಗೆ ಬಾಳಬೆಳಕು ತೋರುತ್ತಿದೆ. ಈ ಕ್ಷೇತ್ರದಲ್ಲಿ ಮಹಿಳೆಯರಿಗೆ ಎದುರಾಗುವ ಸ್ಪರ್ಧೆಗಳು ಸಮಸ್ಯೆಗಳು, ಪರಿಹಾರ, ಪ್ರಗತಿ ಈ ಬಗ್ಗೆ ಪರಾಮರ್ಶೆ ನಡೆಸಲಾಗಿದೆ.

ಐದನೆಯ ಅಧ್ಯಾಯದಲ್ಲಿ 'ಯಶಸ್ವಿ ಮಹಿಳಾ ಸಹಕಾರ ಸಂಘಗಳ ಬೆಳವಣಿಗೆ ಕಾರ್ಯನಿರ್ವಹಣೆ' ಹಾಗೂ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿದ್ದು ಕರ್ನಾಟಕದಲ್ಲಿ ಮಹಿಳಾ ಸಹಕಾರ ಸಂಘ, ಸಹಕಾರ ಬ್ಯಾಂಕುಗಳ ಉದಯ, ಅವುಗಳ ಸಂಖ್ಯೆ, ವಿವಿಧೋದ್ದೇಶ ಸಹಕಾರ ಸಂಘಗಳು ಹಾಗೂ ಪ್ರತಿಭಾನ್ವಿತ ಮಹಿಳೆಯರು ಈ ರಂಗದಲ್ಲಿ ನಡೆಸಿದ ಆಂದೋಲನ, ಕರ್ನಾಟಕದಲ್ಲಿ ಅತ್ಯಂತ ಯಶಸ್ವಿಯಾಗಿರುವ ಮಹಿಳಾ ಸಹಕಾರ ಸಂಘಗಳ ಕಾರ್ಯನಿರ್ವಹಣೆ ಶಾಖೆಗಳು, ಗ್ರಾಹಕ ಸೇವೆ ಇತ್ಯಾದಿಗಳ ಬಗ್ಗೆ ಸಂಗ್ರಹಿಸಿದ ಮಾಹಿತಿಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ಇವೆಲ್ಲದರ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಮಹಿಳಾ ಸಹಕಾರ ಸಂಘಗಳ ಪ್ರಗತಿಯಾಗಲು ಈಗ ಇರುವ ವ್ಯವಸ್ಥೆ ಎಷ್ಟರಮಟ್ಟಿಗೆ ಪೂರಕವಾಗಿದೆ? ಸಹಕಾರ ಸಂಘಗಳ ಅಧಿನಿಯಮ ಇಲ್ಲಿಯ ತನಕ ಅನೇಕ ಬಾರಿ ತಿದ್ದುಪಡಿಗಳನ್ನು ಕಂಡಿದೆ. ಆದರೂ ಅದು ಇನ್ನೂ ಸಮಗ್ರವಾದ ಅಧಿನಿಯಮವಾಗಿಲ್ಲ. ಆದ್ದರಿಂದ ಈಗ ಮಹಿಳಾ ಸಹಕಾರಿಗಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರವಾಗಿ ಮಹಿಳೆಯರಿಗೆಂದೇ (ಸಂವಿಧಾನ, ಭಾರತ ದಂಡ ಸಂಹಿತೆ ಸಿವಿಲ್ ಪ್ರಕ್ರಿಯಾ ಸಂಹಿತೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ಮುಂತಾದವುಗಳಲ್ಲಿಯಂತೆ) ಕೆಲವು ಉಪಬಂಧಗಳನ್ನು ಕಲ್ಪಿಸಿ ಮಹಿಳೆಯರ ಆರ್ಥಿಕ ಸ್ವಾವಲಂಬನೆಯ ದಾರಿಯನ್ನು ಸುಗಮಗೊಳಿಸಲು ಸರ್ಕಾರ ಮುಂದಾಗಬೇಕು. ಇದಕ್ಕೆ ಮಹಿಳೆಯರು, ಮಹಿಳಾ ಪರ ಕಾಳಜಿ ಹೊಂದಿರುವ ಏಜೆನ್ಸಿಗಳು, ಸಂಘ ಸಂಸ್ಥೆಗಳು, ಮಹಿಳಾ ಆಯೋಗ ಇವುಗಳು ಹೆಚ್ಚಿನ ಆಸಕ್ತಿವಹಿಸಿ ಆ ಬಗ್ಗೆ ತೀವ್ರ ಪ್ರಯತ್ನಗಳನ್ನು ನಡೆಸಬಹುದೆ ಎಂಬ ಬಗ್ಗೆ ಪರಾಮರ್ಶಿಸಲಾಗಿದೆ.

ಅಧ್ಯಯನದ ಅವಶ್ಯಕತೆ ಹಾಗೂ ಪ್ರಾಮುಖ್ಯತೆ

ಮಾನವ ಸಮಾಜದ ನವನಿರ್ಮಾಣ ಕಾರ್ಯದಲ್ಲಿ ಮಹಿಳೆಯರ ಪಾತ್ರ ಅಮೂಲ್ಯವಾದುದು ಹೊಸ ಸಮಾಜವು ಶೋಷಣೆರಹಿತ ಅಹಿಂಸಾತ್ಮಕ ಸಮಾಜವಾಗಿರಬೇಕು. ಇಂಥ ಅಹಿಂಸಾತ್ಮಕ ಸಮಾಜದ ವ್ಯವಸ್ಥೆಯಲ್ಲಿ ಮಹಿಳೆಯರೇ ಭವಿಷ್ಯದ ನಿರ್ಮಾಪಕಿಯರಾಗಬೇಕು ಎಂದು ಆಶಿಸಿದ್ದ ಗಾಂಧೀಜಿಯವರು 'ಸ್ತ್ರೀ ಅಬಲೆಯಲ್ಲ, ಸಬಲೆ' ಎಂದು ಸಾರಿದ್ದರು. ಇಂದಿಗೂ ಮಹಿಳೆಯರು ಮುಂಚೂಣಿಗೆ ಬರಲಾಗದೆ ಹಿಂದುಳಿಯಲು ಅಜ್ಞಾನ, ಅನಕ್ಷರತೆ ಮಾತ್ರವಲ್ಲ, ಪುರುಷರಿಂದ ನಿರಂತರ ಶೋಷಿತರಾಗಿ, ದೌರ್ಜನ್ಯಕ್ಕೆ ಗುರಿಯಾಗುತ್ತಿರುವುದೂ ಕೂಡ ಕಾರಣಗಳಾಗಿವೆ.

ಮಹಿಳೆಯರನ್ನು ಹೊಸ್ತಿಲಾಚೆ ಕಳುಹಿಸಿದರೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅವಕಾಶ ನೀಡಿದರೆ ಕುಟುಂಬದ ಆರ್ಥಿಕ ಪರಿಸ್ಥಿತಿ ಹದಗೆಡುತ್ತದೆ ಎಂಬ ಮನೋಭಾವದಿಂದಾಗಿ ಆಕೆಯ ಬುದ್ಧಿಶಕ್ತಿಗೆ ಪ್ರಚೋದನೆ ನೀಡದ ಕಾಲವಿತ್ತು. ಇದರಿಂದಾಗಿ ವಿವಾಹ ವೆಚ್ಚ, ವರದಕ್ಷಿಣೆಗಳ ಭಾರ ಹೆಚ್ಚಿ ಕುಟುಂಬದ ಗಂಡು ಮಕ್ಕಳಿಗೆ ಸಾಲದ ಹೊರೆ ಬೀಳುವ ಭಯ ತುಂಬಿರುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮಹಿಳೆ ಆರ್ಥಿಕವಾಗಿ ಸ್ವಾವಲಂಬಿಯಾದರೆ ಕುಟುಂಬದಲ್ಲಿ ಆಕೆಯ ಪ್ರತಿಷ್ಠೆ, ದರ್ಪ, ಹೆಚ್ಚಾಗಿ ಅಧಿಕಾರ ಆಕೆಯ ಪಾಲಾಗುತ್ತದೆ ಎಂಬ ಅನುಮಾನದಿಂದ ಶಿಕ್ಷಣ ಪಡೆದರೂ ಉದ್ಯೋಗಾವಕಾಶದಿಂದ ಆಕೆಯನ್ನು ವಂಚಿಸಲಾಗುತ್ತಿತ್ತು. ಒಂದು ವೇಳೆ ಆಕೆ ಅದೃಷ್ಟವಶಾತ್ ಉದ್ಯೋಗಿಯಾದರೆ ಆಕೆಯ ಸಂಪಾದನೆ ಸ್ವಂತಕ್ಕಾಗಿ ಉಳಿಯದೆ, ಅವಿವಾಹಿತೆಯಾದರೆ ತಂದೆ ಅಥವಾ ಅಣ್ಣ ತಮ್ಮಂದಿರ ಕೈ ಸೇರುತ್ತದೆ. ವಿವಾಹಿತೆಯಾದರೆ ಪತಿಯ ಅಥವಾ ಕುಟುಂಬದ ಇನ್ನಿತರ ಹಿರಿಯರ ಕೈ ಸೇರಿ ಆಕೆಗೆ ಕೇವಲ ದುಡಿತ ಹಾಗೂ ದೈಹಿಕ ಮಾನಸಿಕ ಅನಾರೋಗ್ಯ ಕಾಡುತ್ತದೆ. ಇದಿಷ್ಟು ಮಹಿಳೆಯ ಕುಟುಂಬದೊಳಗಿನ ಮಹಿಳೆಯ ಸಮಸ್ಯೆಗಳು.

ಮಹಿಳೆ ಉದ್ಯೋಗಿಯಾಗಿ ಕಾರ್ಖಾನೆ ಕಚೇರಿಗಳಲ್ಲಿ ಪುರುಷ ಉದ್ಯೋಗಿಗಳೊಂದಿಗೆ ಸರಿಸಮಾನವಾಗಿ ದುಡಿದರೂ ಅನೇಕ ಬಗೆಯ ಕಿರುಕುಳ (ಲೈಂಗಿಕ ಕಿರುಕುಳವೂ ಸೇರಿದಂತೆ) ಅಪಮಾನ ಅಸಮಾನತೆಗಳಿಂದ ತಾರತಮ್ಯವನ್ನು ಎದುರಿಸಬೇಕಾಗುತ್ತದೆ. ಸಂಶಯ ದೃಷ್ಟಿ ಯಾವಾಗಲೂ ಮಹಿಳೆಯರ ಮೇಲೆ ಮೊದಲು ಬೀಳುತ್ತದೆ ಎಂಬುದು ಸಾಬೀತಾಗಿರುವ ಸಂಗತಿಯಾಗಿದೆ. ಹೀಗಾಗಿ ಮಹಿಳೆಯರು ಸಂಘಟಿತರಾಗಿ ಸಾಮೂಹಿಕವಾಗಿ ಅವರ ಗರಿಷ್ಠ ಸಾಮರ್ಥ್ಯಗಳನ್ನು ಬಳಸಿ ತಮ್ಮ ಉದ್ದೇಶ ಅಥವಾ ಗುರಿಗಳನ್ನು ಸಾಧಿಸಬಹುದು. ಈ ನಿಟ್ಟಿನಲ್ಲಿ ಸಹಕಾರವು ಸಾಮಾಜಿಕ-ಆರ್ಥಿಕ ವ್ಯವಸ್ಥೆಯಾಗಿದ್ದು ೧. ಸಹಕಾರ : ಒಂದು ಆಂದೋಲನ; ಮತ್ತು ೨. ಸಹಕಾರ : ಒಂದು ಆರ್ಥಿಕ ವ್ಯವಸ್ಥೆಯಾಗಿ ಮಹಿಳೆಯರ ಸ್ವಾವಲಂಬನೆಗೆ ಹೊಸ ದೃಷ್ಟಿಕೋನವನ್ನು ಕೊಟ್ಟಿದೆ.

ಕರ್ನಾಟಕ ಎಂದರೆ ಹಳೆಯ ಮೈಸೂರು ರಾಜ್ಯವನ್ನು ಬ್ರಿಟಿಷರು ೧೮೮೧ರಲ್ಲಿ ಮತ್ತೆ ಅರಸು ಮನೆತನದವರಿಗೆ ಒಪ್ಪಿಸಿಕೊಟ್ಟ ನಂತರ ಕರ್ನಾಟಕದ ಮಹಿಳೆಯರ ಸ್ಥಾನಮಾನದಲ್ಲಿ ಬಹಳಷ್ಟು ಉತ್ತಮ ಪರಿಣಾಮಗಳುಂಟಾಯಿತು. ಮಹಿಳಾ ಸಂಘ ಸಂಸ್ಥೆಗಳು ಪ್ರಾರಂಭವಾದವು. ಅನೇಕ ಮಹಿಳಾ ಕಲ್ಯಾಣ ಕಾರ್ಯಕ್ರಮಗಳು ಜಾರಿಯಲ್ಲಿ ಬಂದವು. ಹಿಂದೂ ಲಾ ವನ್ನು ತಿದ್ದುಪಡಿ ಮಾಡಿ ಮಹಿಳೆಯರ ಹಕ್ಕುಗಳ ಪುನಃಸ್ಥಾಪನೆ ಮಾಡಲಾಯಿತು. ಶಿಕ್ಷಣ ಸೌಲಭ್ಯಗಳು ಮಹಿಳೆಯರಿಗೆ ಹೆಚ್ಚಿನ ಜ್ಞಾನ ನೀಡಿದವಲ್ಲದೆ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಹೊಸ ರೀತಿಯಲ್ಲಿ ಅವರು ಅರ್ಥಮಾಡಿಕೊಳ್ಳಲು, ಜೀವನಾಧಾರ ಮಾಗಲು ನೆರವಾಯಿತು. ಸಹಕಾರವು ವಿಶೇಷ ಬಗೆಯ ಆರ್ಥಿಕ ವ್ಯವಸ್ಥೆಯಾಗಿದ್ದು, ಜನರು ಸ್ವಯಂ ಪ್ರೇರಿತರಾಗಿ, ಸಮಾನ ಮನೋಭಾವದಿಂದ ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು

ಒಂದೆಡೆ ಸಂಘಟಿತರಾಗುತ್ತಾರೆ. ಹಿಂಜರಿಕೆಯ, ಸಂಕೋಚದ ವ್ಯಕ್ತಿಗಳೂ ಕೂಡ ಇತರರೊಡನೆ ಸೇರಿ ಶ್ರೀಮಂತ ಅಥವಾ ಅಧಿಕಾರಯುತ ವ್ಯಕ್ತಿಗಳಿಗೆ ದೊರೆಯುವ ಆರ್ಥಿಕ ಸೌಲಭ್ಯಗಳನ್ನು ಪಡೆಯಲು ಇಲ್ಲಿ ಅವಕಾಶವಿರುತ್ತದೆ. ಹೀಗಾಗಿ, ಮಹಿಳೆಯರಿಗೆ ಇದು ಆದರ್ಶಪ್ರಾಯವಾದ ಆರ್ಥಿಕ ಸಂಘಟನೆಯಾಗುತ್ತದೆ. ಕರ್ನಾಟಕದಲ್ಲಿ ಮಹಿಳಾ ನಗರ ಸಹಕಾರ ಬ್ಯಾಂಕಗಳು ಇತ್ತೀಚಿನ ವರ್ಷಗಳಲ್ಲಿ ಪ್ರಾರಂಭವಾಗಿವೆ. ಇವು ಮಹಿಳೆಯರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವುದರ ಜೊತೆಗೆ ಅವರ ವರಮಾನವನ್ನು ಹೆಚ್ಚಿಸಿ ಕುಟುಂಬದ ಜೀವನ ಮಟ್ಟವನ್ನೂ ಏರಿಸಿವೆ.

ಮಹಿಳಾ ಸಹಕಾರ ಬ್ಯಾಂಕುಗಳು ಕರಕುಶಲ ವಸ್ತುಗಳು ಪುಸ್ತಕಗಳು, ಸಿದ್ಧ ಉಡುಪುಗಳು, ಉಪ್ಪಿನಕಾಯಿ, ಹಪ್ಪಳ ಮುಂತಾದ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ಕಾರ್ಯಚಟುವಟಿಕೆಗಳನ್ನು ಹೊಂದಿವೆ. ಮುಖ್ಯ ಪ್ರಕಾರ್ಯವೆಂದರೆ ಔದ್ಯಮಿಕ ಸಾಮರ್ಥ್ಯ ಬೆಳೆಸಲು ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸುವುದರ ಜೊತೆಗೆ ಉಳಿತಾಯ ಹಾಗೂ ಮಿತವ್ಯಯವನ್ನು ಸಾಧಿಸಿ ಸಾಲ ಮುಂಗಡಗಳನ್ನು ನೀಡಿ ಮಹಿಳೆಯರನ್ನು ಆರ್ಥಿಕವಾಗಿ ಪ್ರಬಲೆಯರನ್ನಾಗಿ ಮಾಡಲು ಶ್ರಮಿಸುತ್ತಿವೆ.

ಈ ಬ್ಯಾಂಕುಗಳಲ್ಲಿ ಕೆಲಸ ಮಾಡುವ ಮಹಿಳೆಯರಲ್ಲಿ ಮುಖಂಡತ್ವ, ದೂರದೃಷ್ಟಿ, ಚಾಕಚಕ್ಯತೆ ಅಪಾಯವನ್ನೆದುರಿಸುವ ಸಾಮರ್ಥ್ಯ ಇರುವುದು ಅಗತ್ಯ. ಆದ್ದರಿಂದ ನಾಯಕತ್ವ ತರಬೇತಿ, ಸ್ಪರ್ಧಾ ಮನೋಭಾವವನ್ನು ಬೆಳೆಸಿಕೊಂಡಲ್ಲಿ ಮಾರುಕಟ್ಟೆಗಳ ಏರಿಳಿತವನ್ನು ನಿಭಾಯಿಸಲು ಸಾಧ್ಯ.

ಜಾಗತೀಕರಣ ಹಾಗೂ ಉದಾರೀಕರಣದ ಈ ಸಂಧಿಕಾಲದಲ್ಲಿ ಮಹಿಳಾ ಸಹಕಾರಿಗಳು ಹೊಸ ಹೊಸ ಆರ್ಥಿಕ ಕಾರ್ಯತಂತ್ರಗಳನ್ನು ರೂಪಿಸಿಕೊಂಡು, ಪುರುಷರಿಗೆ ಸಮಾನರಾಗಿ ಅಥವಾ ಅವರನ್ನು ಮೀರುತ್ತ ಅಂತಾರಾಷ್ಟ್ರೀಯ ರಂಗದಲ್ಲಿ ಪ್ರಗತಿ ಸಾಧಿಸುತ್ತಿದ್ದಾರೆ. ಹೀಗಾಗಿ, ಸಂವಿಧಾನ ಹಾಗೂ ಇನ್ನಿತರ ಪ್ರಮುಖ ಕಾನೂನುಗಳಲ್ಲಿ ತಿದ್ದುಪಡಿಯಾಗಿರುವಂತೆ ಸಹಕಾರ ಅಧಿನಿಯಮದಲ್ಲಿ ಮಹಿಳೆಯರಿಗಾಗಿ ಉಪಬಂಧಗಳನ್ನು ಕಲ್ಪಿಸುವುದು ಅವಶ್ಯಕವಲ್ಲವೇ ಮಹಿಳೆಯರು ತಮ್ಮ ಪರಿಧಿಗಳನ್ನು ದಾಟಿ ಮುಂದುವರಿ ಯಲು ಕಾನೂನು ಅಡಿಯಲ್ಲಿ ಉತ್ತೇಜನ ನೀಡುವುದು ಅಗತ್ಯವಲ್ಲವೇ ಎಂಬಂಥ ಹಲವಾರು ಸವಾಲುಗಳು ಎದುರಾಗುತ್ತವೆ. ಇದಕ್ಕೆ ಉತ್ತರಗಳನ್ನು ಪರಿಹಾರಗಳನ್ನು ಕೂಡ ಹುಡುಕುವ ವಿಶ್ಲೇಷಣೆ ಈ ಅಧ್ಯಯನದ ಅತ್ಯಂತ ಮಹತ್ತ್ವದ ಅಂಶವಾಗಿದೆ.

ಅಧ್ಯಯನದ ವಿಧಾನ

ಕೇವಲ ಪುರುಷರ ಇತಿಹಾಸ(History)ದ ಮೂಲಕ ಮಹಿಳೆಯರ ಸ್ಥಾನಮಾನವನ್ನು ಗುರುತಿಸುವುದು ಹಿಂದಿನಿಂದ ಬಂದಿರುವ ಪರಿಪಾಠವಾಗಿದೆ. ಆಕೆಯು ಸ್ವಂತಿಕೆ, ಅರ್ಹತೆ, ಬುದ್ಧಿಮತ್ತೆಗೆ ಎಂದೂ ಸರಿಯಾದ

ಮಾನ್ಯತೆ ದೊರೆತಿಲ್ಲ. ಪುರುಷರಿಗಿಂತ ಜಾಣೆಯಾದರೆ 'ಸ್ತ್ರೀ ಬುದ್ಧಿ: ಪ್ರಳಯಾಂತಕಃ' ಎಂದು ಅವಹೇಳನ, ಅಪಹಾಸ್ಯಕ್ಕೀಡು ಮಾಡುತ್ತಾರೆ. ಹೀಗಾಗಿ ಆಕೆಯಲ್ಲಿ ಸ್ವಾಭಾವಿಕವಾಗಿ ಇರಬಹುದಾದ ಅರ್ಹತೆಗೆ ಮಾನ್ಯತೆ ಸಿಗದೆ 'ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂದು ಘೋಷಿಸಲಾಗಿದೆ. ಆಕೆಯಲ್ಲಿರುವ ಗುಣಾತ್ಮಕ ಅಂಶಗಳನ್ನು ನಗಣ್ಯ ಮಾಡಿ ನಕಾರಾತ್ಮಕ ವ್ಯಕ್ತಿತ್ವವನ್ನು ಸೃಷ್ಟಿಸಲಾಯಿತು. ಇದು ಹಲವಾರು ಶತಮಾನಗಳಿಂದ ಬೆಳೆದು ಬಂದು ಬೇರೂರಿದೆ. ಸ್ವಂತ ಪ್ರತಿಭೆಯಿಂದ ಶಿಕ್ಷಣ ಪಡೆದು, ಸಂಘಟನೆ ಮೂಲಕ ಕಾರ್ಯಸಾಧಿಸುವ ಮಹಿಳೆಯರು ಸಮಾಜದ ಓರೆಕೋರೆಗಳಿಗೆ ಕನ್ನಡಿ ಹಿಡಿಯಬಲ್ಲರು.

ಸಂವಿಧಾನ ಹಾಗೂ ಕಾನೂನುಗಳಲ್ಲಿ ಕೇವಲ ವಾಚ್ಯಾರ್ಥ ಹಾಗೂ ಸೂಚ್ಯಾರ್ಥಗಳಲ್ಲಿ ಮಾತ್ರ ನೀಡಲಾಗಿರುವ ಸ್ತ್ರೀ ಪುರುಷ ಸಮಾನತೆ ವಾಸ್ತವದಲ್ಲಿ ನೈಜವಾಗಿದೆಯೆ? ಅಥವಾ ಮಹಿಳೆಯರಿಗೆ ದೊರೆಯಬೇಕಾದ ನ್ಯಾಯವಾದ ಸ್ಥಾನಮಾನ ಸಿಗಬೇಕಾದರೆ, ಅವರು ಆರ್ಥಿಕವಾಗಿ ಸ್ವಾವಲಂಬಿಗಳಾಗಲೇ ಬೇಕೆ? ಅಥವಾ ಪುರುಷರಿಗೆ ಎಲ್ಲ ರಂಗಗಳಲ್ಲೂ ಸ್ಪರ್ಧೆ, ಸವಾಲುಗಳನ್ನೆಸೆಯುತ್ತಿರುವ ಮಹಿಳೆಯರು ಹೇಗೆ ಮೇಲುಗೈಯಾಗಬಹುದು, ಇವೆಲ್ಲಕ್ಕೂ ಉತ್ತರ ಹುಡುಕಲು ಪುರುಷರ ಬೆಂಬಲವೂ ಮಹಿಳೆಯರಿಗೆ ಅಗತ್ಯವಾಗಬಹುದೆ? ಈ ಹಿನ್ನೆಲೆಯಲ್ಲಿ ಮುಖ್ಯವಾಗಿ ಈ ಮುಂದಿನ ಸಮಸ್ಯೆಗಳಿಗೆ ಅಧ್ಯಯನದಲ್ಲಿ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ :

೧. ಮಹಿಳೆಯರು ಆರ್ಥಿಕವಾಗಿ ಸ್ವತಂತ್ರರಾಗಿ ಸ್ವಾವಲಂಬಿಗಳಾದರೆ ಸಮಾಜ ಹಾಗೂ ಕುಟುಂಬದಲ್ಲಿ ಅವರ ವೈಯಕ್ತಿಕ ಸ್ಥಾನಮಾನಗಳು ಬದಲಾಗಬಹುದೆ?

೨. ಗ್ರಾಮೀಣ ಹಾಗೂ ನಗರ ಜೀವನದಲ್ಲಿ ಮಹಿಳಾ ಸ್ವಯಂ ಉದ್ಯೋಗ ಸಂಸ್ಥೆ ಅಥವಾ ಮಹಿಳಾ ಸಹಕಾರ ಸಂಘಗಳ ಸ್ಥಾಪನೆ ಹಾಗೂ ನಿರ್ವಹಣೆ ಬಗ್ಗೆ ಮಹಿಳೆಯರಿಗೆ ಅರಿವು ಹಾಗೂ ಶಿಕ್ಷಣವನ್ನು ಹೇಗೆ ಒದಗಿಸಬಹುದು?

೩. ಸಹಕಾರ ಕ್ಷೇತ್ರದಲ್ಲಿ ಮಹಿಳೆಯರಿಗೆ ಕುಟುಂಬ, ಸಮಾಜ, ಸರ್ಕಾರ ಹಾಗೂ ಸಹ ಉದ್ಯಮಿಗಳಿಂದ ಉಂಟಾಗುವ ಸಮಸ್ಯೆಗಳೇನು?

೪. ಮಾರುಕಟ್ಟೆ ಸಮಸ್ಯೆ, ಪೈಪೋಟಿಯಿಂದಾಗಿ ಮಹಿಳಾ ಸಹಕಾರ ಸಂಘಗಳು ಕೆಲಸ ಮಾಡಬಹುದಾದ ಇತರ ಕ್ಷೇತ್ರಗಳು ಯಾವುವು?

೫. ಮಹಿಳೆಯರ ಸ್ವಾವಲಂಬನೆಗಾಗಿ ಶಾಸನಗಳಿಗೆ ತಿದ್ದುಪಡಿ ತರುವುದರಿಂದ ಸಮಸ್ಯೆಯ ಪರಿಹಾರ ಸಾಧ್ಯವೇ?

ಮಹಿಳಾ ಸಮಸ್ಯೆಗಳ ಪರಿಹಾರಕ್ಕೆ ಸಹಕಾರ ಕ್ಷೇತ್ರವೊಂದು ಅದ್ವಿತೀಯ ಸಂಘಟಿತ ಸಾಮೂಹಿಕ ಅವಕಾಶದ ಅಪೂರ್ವ ಅವಕಾಶ ನೀಡುತ್ತದೆಯೇ ಎಂಬುದನ್ನು ನನ್ನ ಈ ಮುಂದಿನ ಅಧ್ಯಯನದಲ್ಲಿ ಪರಾಮರ್ಶೆಗೆ ಒಳಪಡಿಸಿದ್ದೇನೆ.

ಮಾಹಿತಿ ಸಂಗ್ರಹಣೆ

೧. ಲಭ್ಯವಿರುವ ಗ್ರಂಥ/ಕೃತಿ/ವರದಿಗಳ ಅಧ್ಯಯನ

೨. ಮಹಿಳಾ ಸಹಕಾರ ರಂಗದ ಏಳಿಗೆಗಾಗಿ ಶ್ರಮಿಸುತ್ತಿರುವ ಮಹಿಳೆಯರ ಪರಿಚಯ

೩. ಗ್ರಂಥ, ವೃತ್ತಪತ್ರಿಕೆ, ಲೇಖನ, ಉಪನ್ಯಾಸಗಳ ಮೂಲಕ ಮಾಹಿತಿ ಸಂಗ್ರಹಿಸುವುದು

೪. ಮಹಿಳಾ ಸಹಕಾರ ಸಂಘಗಳ ಕಾರ್ಯಚಟುವಟಿಕೆ ವ್ಯವಹಾರಗಳ ಬಗ್ಗೆ ಮಾಹಿತಿ ಸಂಗ್ರಹಣೆ

ಅಧ್ಯಾಯ ೧

ಭಾರತೀಯ ಮಹಿಳೆಯ ಸ್ಥಾನಮಾನ ಹಾಗೂ ಅವಳ ಪಾತ್ರದ ಚಾರಿತ್ರಿಕ ಸಮೀಕ್ಷೆ

೧. ಸಾಮಾಜಿಕ ಇತಿಹಾಸದಲ್ಲಿ ಮಹಿಳೆಗಿದ್ದ ಸ್ಥಾನಮಾನ ಹಾಗೂ ಸ್ವಾವಲಂಬನೆ ಅಥವಾ ಸ್ವಾತಂತ್ರ್ಯವನ್ನು ಕಳೆದುಕೊಂಡು ಪುರುಷಾವಲಂಬಿಯಾದ ಹಂತ ಹಾಗೂ ಅದರ ಕಾರಣಗಳು.

೨. ಮಹಿಳಾ ಸ್ವಾವಲಂಬನೆ ಸ್ಥಗಿತಗೊಂಡುದರ ಪರಿಣಾಮಗಳು :
ಕೌಟುಂಬಿಕ ನೆಲೆಯಲ್ಲಿ-ಸಾಮಾಜಿಕ-ಆರ್ಥಿಕ ನೆಲೆಯಲ್ಲಿ-ರಾಜಕೀಯ ನೆಲೆಯಲ್ಲಿ

ಭಾರತೀಯ ಮಹಿಳೆಯ ಸ್ಥಾನಮಾನ ಹಾಗೂ ಅವಳ ಪಾತ್ರದ ಚಾರಿತ್ರಿಕ ಸಮೀಕ್ಷೆ

ಮಾನವ ಇತಿಹಾಸ ಸಾವಿರಾರು ವರ್ಷಗಳಷ್ಟು ಹಳೆಯದು. ಈ ಬೆಳವಣಿಗೆಯಲ್ಲಿ ಮಹಿಳೆ ಪುರುಷನ ಸಂಗಾತಿಯಾಗಿದ್ದಾಳೆ. ಅವನ ಸುಖದುಃಖ, ಅಭಿವೃದ್ಧಿ, ಸಾಧನೆಗಳು, ಮಾನ್ಯತೆಗಳಲ್ಲಿ ಅವಳ ಬೆಂಬಲವಿದೆ. ಆದರೆ ಮಹಿಳೆಯನ್ನು ಪುರುಷನೇ ಶೋಷಿತೆಯನ್ನಾಗಿಸಿರುವುದೊಂದು ವಿಪರ್ಯಾಸ. ಗಂಡು ಹೆಣ್ಣಿನ ನಡುವೆ ಇಂಥ ಅಸಮಾನತೆ ಉಂಟಾಗಲು ಕಾರಣವೇನು ಎಂಬ ಪ್ರಶ್ನೆಗೆ ಉತ್ತರವನ್ನು ಇಂದಿಗೂ ಹುಡುಕಲಾಗುತ್ತಿದೆ. ಮಹಿಳೆ ತನ್ನ ಹೆಣ್ತನವೆಂಬ ಶಾರೀರಿಕ ರಚನೆಯಿಂದಾಗಿ ಪುರುಷನನ್ನು, ಸಂತಾನವನ್ನು ಕಾಪಾಡುವ ಸಿದ್ಧಪಾತ್ರವಾಗಿ ಶೋಷಿತೆಯಾದಳೆಂಬುದು ಒಪ್ಪತಕ್ಕ ಅಭಿಪ್ರಾಯವಲ್ಲ ಅಥವಾ ಪುರುಷ ತಾನು ಬಲಶಾಲಿ, ವೀರ್ಯವಂತನಾದ್ದರಿಂದ ಮಹಿಳೆಯನ್ನು ದ್ವಿತೀಯ ಸ್ಥಾನಕ್ಕೆ ಒತ್ತಾಯಪೂರ್ವಕವಾಗಿ ತಳ್ಳಿದ್ದಾನೆ ಎಂಬುದೂ ಸೂಕ್ತವಲ್ಲ. ಪುರುಷ ವಂಶೋದ್ಧಾರಕನೆಂಬುದರಿಂದ ಹಿಡಿದು ಯುಗಪುರುಷ ಎನಿಸಿಕೊಳ್ಳುವ ಹೆಗ್ಗಳಿಕೆಯನ್ನು ಪಡೆದರೂ, ಮಹಿಳೆ ಮಕ್ಕಳನ್ನು ಹೆರುವ, ಪೋಷಿಸುವ ತಾಯ್ತನಕ್ಕೆ, ಮಾತೃದೇವೋಭವ ಎಂಬ ಮಾತಿನ ಮಣೆಪೀಠವೇರಿದ್ದಕ್ಕೆ ಅದರಲ್ಲೇ ತನ್ನ ಜನ್ಮಸಾಫಲ್ಯವನ್ನು ಕಂಡುಕೊಳ್ಳುವ ಜೀವವಾಗಬೇಕೆ? ಸ್ವಾತಂತ್ರ್ಯ(Liberty), ಸಮಾನತೆ(Equality), ಜೀವನಾವಕಾಶ(life), ಹಾಗೂ ಭ್ರಾತೃತ್ವ (Fraternity) ಇವು ಮಾನವನ ಮೂಲಭೂತ ಹಕ್ಕುಗಳಾಗಿದ್ದು ಈ ಹಕ್ಕುಗಳನ್ನು ಯಾವೊಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಗೆ ಇಲ್ಲದಂತೆ ಮಾಡಿದರೆ ಅಥವಾ ಅದನ್ನು ಹೊಂದದಂತೆ ಕ್ರೂರತನದಿಂದ ವರ್ತಿಸಿದರೆ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಎಂದರೆ ಅದು ಅಮಾನವೀಯ ವರ್ತನೆಯಾಗುತ್ತದೆ. ಮಹಿಳೆಯರ ಮಟ್ಟಿಗೆ ಮಾನವಹಕ್ಕುಗಳ ಉಲ್ಲಂಘನೆ ಪುರುಷರಿಂದ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಪರಂಪರಾಗತವಾಗಿ ನಡೆದುಬಂದಿರುವ ಈ ವ್ಯವಸ್ಥಿತ ವರ್ತನೆಗೆ ಮಹಿಳೆ ಬಲಿಪಶುವಾಗಿದ್ದಾಳೆ. ಮಹಿಳೆಯು ತನ್ನ ಅಸ್ಮಿತೆಯನ್ನು(Identily) ಪಡೆದಿದ್ದ ಸಮಾಜದ ಸಂರಚನೆ ಹಾಗೂ ಪುರುಷಾವಲಂಬಿಯಾಗಿ ಮೂಲೆಗುಂಪಾದುದಕ್ಕೆ ಕಾರಣವಾದ ಸನ್ನಿವೇಶಗಳು, ಅಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಇನ್ನಿತರ ಪರಿಸ್ಥಿತಿಗಳ ಬದಲಾವಣೆಗಳನ್ನು ಚರ್ಚಿಸುವ ಮೂಲಕ ವಿಶ್ಲೇಷಿಸುವುದು ಯುಕ್ತವಾಗುತ್ತದೆ. ಪ್ರಾರಂಭದಲ್ಲಿ ಹೇಳಿದಂತೆ ಸಾವಿರಾರು ವರ್ಷಗಳಷ್ಟು ದೀರ್ಘಾವಧಿಯ ಸಾಂಸ್ಕೃತಿಕ ಪರಂಪರೆ ಹೊಂದಿರುವ ಭಾರತ ದೇಶದಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಆಯಾಕಾಲದ ಸಮಾಜ ಸಂರಚನೆಯು

ವೈವಿಧ್ಯಮಯ ಸನ್ನಿವೇಶಗಳು ಹಾಗೂ ಇತರ ಅಂಶಗಳ ಆಧಾರದ ಮೇಲೆ ನಿಷ್ಕರ್ಷಿಸಬೇಕಾಗುತ್ತದೆ. ಸಮಾಜ ವಿಜ್ಞಾನಿ ಅಲ್ತೇಕರ್ ಅವರು 'ಸ್ಥಾನಮಾನ' ಎಂದರೆ "ಇಡೀ ಸಮಾಜವು ಮಾನ್ಯ ಮಾಡಿದ ಹಾಗೂ ಬೆಂಬಲಿಸಿದ ಸಾಮಾನ್ಯ ಸಂಸ್ಥಾತ್ಮಕ ಪದ್ಧತಿಯಲ್ಲಿ ಒಂದು ಸ್ಥಾನವನ್ನು ನೀಡುವುದು; ಇದು ಉದ್ದೇಶಪೂರ್ವಕವಾಗಿ ಸೃಜಿಸಿದ ಸ್ಥಾನವಾಗಿರದೆ ತನ್ನಷ್ಟಕ್ಕೆ ತಾನೆ ಬೆಳೆದು ಬಂದಿರುವಂಥದ್ದಾಗಿದ್ದು, ಜಾನಪದ ಹಾಗೂ ಇನ್ನೂ ಅನೇಕ ಬಗೆಗಳಿಂದ ಬೇರೂರಿರುವಂಥದ್ದು. ಹಾಗೆಯೇ 'ಸಾಮಾಜಿಕ ಮಾದರಿಗಳು' ಎಂದರೆ ಸಾಮಾಜಿಕ ಆಂತರಿಕ ಕ್ರಿಯೆ-ಪ್ರತಿಕ್ರಿಯೆಗಳ ಪರಿಸ್ಥಿತಿಗಳಲ್ಲಿನ ಸಾಮಾಜಿಕ ಸ್ಥಾನಮಾನಗಳಿಂದ ಮೂಡಿನಿಂತ ಸಾಮಾಜಿಕ ಮಾದರಿಗಳಾಗುತ್ತವೆ" ಎನ್ನುತ್ತಾರೆ.[6]

'ಪರಂಪರೆ' ಹಾಗೂ ಸಾಂಸ್ಕೃತಿಕ ಮೌಲ್ಯಗಳಿಗೆ ಸಂಬಂಧಪಟ್ಟಂತೆ ಸಾಂಪ್ರದಾಯಿಕ ಭಾರತೀಯ ಪರಂಪರೆಯಲ್ಲಿ ಮಹಿಳೆಯರಿಗೆ ಸ್ವತಂತ್ರ ಸ್ಥಾನಮಾನವನ್ನು ನೀಡಿ ಮಾನ್ಯತೆ ನೀಡಿರುವುದನ್ನು ನಾವು ಎಲ್ಲಿಯೂ ಗುರುತಿಸಲು ಸಾಧ್ಯವೇ ಇಲ್ಲ. 'ಪರಂಪರೆ' ಎಂದರೆ ಡಾ.ವಿಜಯಾದಬ್ಬೆಯವರು "ನಮ್ಮ ಹಿಂದಿನವರು ನಡೆದ ಹಾದಿ, ಸಾಧಿಸಿದ ಸಾಧನೆ, ಕಂಡುಕೊಂಡ ಜೀವನದ ಸ್ವರೂಪ, ಒಪ್ಪಿಕೊಂಡ ಮೌಲಿಕ ವ್ಯವಸ್ಥೆ- ಈ ಎಲ್ಲವನ್ನೂ ಒಳಗೊಳ್ಳುತ್ತದೆ. ಪರಂಪರೆ ಸರಳ, ನೇರರೇಖೆಯಲ್ಲ, ಸಂಕೀರ್ಣವಾದದ್ದು" ಎನ್ನುತ್ತಾರೆ.[7] ಹಿಂದೂ ಧರ್ಮಗ್ರಂಥಗಳಲ್ಲಿ, ಪುರಾಣ ಹಾಗೂ ಜಾನಪದ ಹಾಡುಗಳಲ್ಲಿ ವರ್ಣಿಸಲಾಗಿರುವಂತೆ ಮಹಿಳೆಯ ಸ್ಥಾನಮಾನ ಹೇಗಿದ್ದರೂ ಪುರುಷನಿಗೆ ಅಧೀನವಾಗಿ (subordinative) ಮಾತ್ರವೇ ಸೂಚಿಸಲಾಗಿದೆ. ಪ್ರಾಚೀನ ಸಮಾಜದಲ್ಲಿದ್ದ ಸ್ತ್ರೀಯರ ಸ್ಥಾನಮಾನದ ಚಿತ್ರಣದ ಆಧಾರದ ಮೇಲೆ ಸಮಕಾಲೀನ ಸಮಾಜದ ಮಹಿಳೆಯರ ಸ್ಥಾನಮಾನವನ್ನು ವಿಶ್ಲೇಷಿಸುವಾಗ ಅನೇಕ ತೊಡಕುಗಳು ಎದುರಾಗುತ್ತವೆ. ಮಹಿಳೆ, ಸ್ತ್ರೀ, ಹೆಣ್ಣು, ನಾರಿ, ಹೆಂಗಸು(ಹೆಣ್ಣು+ಕೂಸು= ಹೆಣ್ಣುಹಸು?), ವನಿತೆ ಮುಂತಾಗಿ ಕರೆಸಿಕೊಳ್ಳುವ ಈ ವ್ಯಕ್ತಿಯ ಜೀವನದ ಅಧ್ಯಯನ ತುಂಬ ಕುತೂಹಲಕಾರಿಯಾಗಿದೆ. ಭೂಮಿಯಲ್ಲಿ ಮಾನವ ಜನನ(ಅಥವಾ ಸೃಜನೆ ಅರ್ಥಾತ್ creation) ಆದಂದಿನಿಂದ ಇದುವರೆಗೂ ಮಹಿಳೆಯ ಸ್ಥಾನಮಾನವನ್ನು ಸ್ಪಷ್ಟವಾಗಿ ಪರಿಭಾಷಿಸಿಲ್ಲ. ಪ್ರೊ.ಎಂ.ಎನ್. ಶ್ರೀನಿವಾಸ್ ಅವರು ಹೇಳುವಂತೆ "ಭಾರತೀಯ ಸ್ತ್ರೀಯರ ಬದಲಾಗುತ್ತಿರುವ ಅಂತಸ್ತು ವಿಭಿನ್ನ ಮುಖಗಳನ್ನು ಹೊಂದಿದೆ ಮತ್ತು ಗ್ರಾಮ-ನಗರ ಪ್ರದೇಶಗಳು, ವರ್ಗಗಳು ಮತ್ತು ವಿಭಿನ್ನ ಧಾರ್ಮಿಕ, ಜನಾಂಗೀಯ ಹಾಗೂ ಜಾತಿ ಸಮುದಾಯಗಳ ನಡುವಣ ವ್ಯತ್ಯಾಸದಿಂದಾಗಿ ಸಾಮಾನ್ಯೀಕರಿಸುವುದು ಸಾಧ್ಯವಿಲ್ಲ."[8] ಪ್ರಾಚೀನ ಸಮಾಜವು ಅಲ್ಲಿನ ವ್ಯಕ್ತಿಗಳ ಗುಂಪು ಅಥವಾ ಸಮುದಾಯವನ್ನು ತಾಯಿಯ ಮೂಲಕ ಗುರುತಿಸುತ್ತಿದ್ದು ಅದೊಂದು ಬಗೆಯ ಸ್ತ್ರೀ ಮೇಲ್ತನವನ್ನು ಸೂಚಿಸುತ್ತಿತ್ತು. ಆ ಕಾಲದ ಪುರುಷರು ಅಥವಾ ಮಹಿಳೆಯರ ಮೇಲ್ತನದ ಬಗ್ಗೆ ಇರುವ ವಿವರಣೆಗಳು ವಾದವಿವಾದ, ಸಂದಿಗ್ಧಗಳಿಗೆ,

ಗೊಂದಲಕ್ಕೆಡೆಗೊಡುತ್ತವೆ. ಆದ್ದರಿಂದ ನಾವು ಪ್ರಾಚೀನ ಸಮಾಜದಲ್ಲಿ ಗಂಡಸರು ಪ್ರಾಣಿಗಳೊಡನೆ ಹೋರಾಡುತ್ತ ಕಾಡುಗಳಲ್ಲಿ ಬೇಟೆಯಾಡಿ ಅಥವಾ ಸಮುದ್ರ ತೀರಗಳಿಗೆ ಹೋಗಿ ಆಹಾರ ಇತ್ಯಾದಿಗಳನ್ನು ಸರಬರಾಜು ಮಾಡುವ ವೃತ್ತಿಯಿಂದ ಹಾಗೂ ಹೆಂಗಸರು ಕಡಿಮೆ ಅಪಾಯಕಾರಿಯಾದ ಹಾಗೂ ಇದ್ದಲ್ಲೇ ಮಾಡಬಹುದಾದ ವೃತ್ತಿಗಳಿಂದ, ಒಟ್ಟಿನಲ್ಲಿ ವಿಭಿನ್ನ ಕಾರ್ಯಭಾರಗಳನ್ನು ಹೊಂದಿದ್ದರೆಂದು ಭಾವಿಸಬಹುದು. ಪ್ರಾಯಶಃ ಹೀಗೆ ಒಟ್ಟಿಗೆ ಇದ್ದು ಕೆಲಸ ಮಾಡದೆ ಬೇರೆ ಬೇರೆ ಬಗೆಯ ಕಾರ್ಯಚಟುವಟಿಕೆಗಳೇ ಅವರ ಕಾರ್ಯಕ್ಷೇತ್ರಗಳನ್ನು ನಿರ್ಧರಿಸಿದ ಒತ್ತಡಗಳೂ ಆಗಿರಬಹುದು. ಇದು ಮಹಿಳೆಯರ ಸ್ವಾವಲಂಬನೆ ಮನೋಭಾವ ತಗ್ಗಲು ಕೂಡ ಕಾರಣವಾಗಿರುವ ಸಂಭವವಿದೆ. ಚಾರ್ಲ್ಸ್ ಕಿಂಗ್ಸ್ ಲೇ ಹೀಗೆ ಉದ್ಗರಿಸಿದ್ದಾನೆ "ಪುರುಷರು ಕೆಲಸ ಮಾಡಲೇ ಬೇಕು ಮತ್ತು ಮಹಿಳೆಯರು ಅಳಲೇಬೇಕು"[೪] ಪ್ರತಿಯೊಂದು ಆರ್ಥಿಕ ವ್ಯವಸ್ಥೆಯಲ್ಲಿಯೂ ಮಹಿಳೆಯರ ಕೆಲಸವನ್ನು ಬಳಸಿಕೊಳ್ಳಲಾಗುತ್ತದೆಯಲ್ಲದೆ ಮಹಿಳೆಯರು ತಮ್ಮ ಸಂತೋಷಕ್ಕಾಗಿ, ಜೀವನ ನಿರ್ವಹಣೆಗಾಗಿ ಒಬ್ಬ ವ್ಯಕ್ತಿಯಾಗಿ ಹಾಗೂ ಸಮಾಜದ ಇತರ ವ್ಯಕ್ತಿಗಳಿಗಾಗಿ ದುಡಿಯಲೇ ಬೇಕಾಗುತ್ತದೆ. ಯಾವುದೇ ಸಮಾಜದಲ್ಲಿ ಸ್ತ್ರೀಯರ ಬಗ್ಗೆ ಸಮುದಾಯವು ಹೊಂದಿರುವ ಅಭಿಪ್ರಾಯಗಳಿಗೆ ಹೆಚ್ಚಿನ ಸಾಮಾಜಿಕ ಮಹತ್ವವಿರುತ್ತದೆ. ಸಮಾಜಶಾಸ್ತ್ರೀಯ ಹಾಗೂ ಸಮಾಜಶಾಸ್ತ್ರೀಯವಲ್ಲದ ಎರಡೂ ಪ್ರಕಾರಗಳಲ್ಲಿ ಸ್ತ್ರೀಯರ ಬಗೆಗೆ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಕೆಲವು ಸಾಂಪ್ರದಾಯಿಕ ಮೂಲಗಳನ್ನು ಉಲ್ಲೇಖಿಸಿ ಭಾರತೀಯ ಚರಿತ್ರೆಯ ವಿಭಿನ್ನ ಕಾಲಗಳಲ್ಲಿ ಸ್ತ್ರೀಯರ ಅಂತಸ್ತಿನ ಬಗ್ಗೆ ವಾದವಿವಾದಗಳನ್ನು ಮಂಡಿಸಿವೆ. ಇತರೆ ಅಧ್ಯಯನಗಳಲ್ಲಿ ಪುರುಷರ ಪ್ರವೃತ್ತಿ, ಪದ್ಧತಿ, ಸಂಪ್ರದಾಯಗಳಿಂದಾಗಿ ಪ್ರಸಕ್ತ ಕಾಲದಲ್ಲಿ ಮಹಿಳೆಯರು ಅನುಭವಿಸುತ್ತಿರುವ ತಾರತಮ್ಯ ಹಾಗೂ ಅಸಮಾನತೆಯ ಬಗ್ಗೆ ಚರ್ಚಿಸಲಾಗಿದೆ. ಇತಿಹಾಸಜ್ಞೆ ರೋಮಿಲಾ ಥಾಪರ್ "ಭಾರತೀಯ ಉಪಖಂಡದಲ್ಲಿ ಸಾಂಸ್ಕೃತಿಕ ಸನ್ನಿವೇಶ, ಕೌಟುಂಬಿಕ ಸಂರಚನೆ, ವರ್ಗ, ಜಾತಿ, ಆಸ್ತಿಯ ಹಕ್ಕು ಮತ್ತು ನೈತಿಕತೆಗೆ ಹೊಂದಿಕೊಂಡು ಸ್ತ್ರೀಯರ ಸ್ಥಾನಮಾನದಲ್ಲಿ ಅಸಂಖ್ಯ ವ್ಯತ್ಯಾಸಗಳಿವೆ. ಆದ್ದರಿಂದ, ಪ್ರಗತಿಯ ವಿಭಿನ್ನ ಹಂತಗಳಲ್ಲಿನ ಮಹಿಳೆಯರ ಸ್ಥಾನಮಾನದ ಚಿತ್ರಣ ನೀಡುವುದು ಕಷ್ಟಕರವಾಗುತ್ತದೆ. ಅಷ್ಟೇ ಅಲ್ಲದೆ, ಭಾರತೀಯ ಮಹಿಳೆಯ ಚಿತ್ರಣ ನೀಡಬಹುದಾದ ಸಪ್ರಮಾಣಿಕ ಆಕರಗಳನ್ನು ಹುಡುಕುವುದು ಕೂಡ ತ್ರಾಸದಾಯಕವಾದುದು" ಎಂದಿದ್ದಾರೆ.[೫] ಸ್ತ್ರೀಯರ ಅಂತಸ್ತಿನ ಚರ್ಚೆಯಲ್ಲಿ ಸ್ತ್ರೀಪುರುಷರ ಸಾಪೇಕ್ಷ ಪಾತ್ರಗಳನ್ನು ಚರ್ಚಿಸುವುದು ವಾಡಿಕೆ. ಹೀಗಾಗಿ ಸ್ತ್ರೀಯರ ಸ್ಥಾನಮಾನದ ಬಗ್ಗೆ ಎರಡು ವಿಭಿನ್ನ ದೃಷ್ಟಿಕೋನಗಳು ಕಂಡುಬರುತ್ತವೆ. ಒಂದು ಪ್ರಾಚೀನ ಸಾಹಿತ್ಯವನ್ನಾಧರಿಸಿದ ದೃಷ್ಟಿಕೋನ ಮತ್ತೊಂದು ಪ್ರಾಯೋಗಿಕ ದೃಷ್ಟಿಕೋನ. ಇಂದಿನ ಆಧುನಿಕ ಮಹಿಳೆಯರನ್ನೂ ಪ್ರಭಾವಿತಗೊಳಿಸಿರುವ ಅನೇಕ ಮಾನದಂಡಗಳು, ಮೌಲ್ಯಗಳು ಗತಕಾಲದಿಂದಲೂ ಬೇರೂರಿರುವುದರಿಂದ ಪ್ರಾಚೀನ ಸಮಾಜದ ಸ್ಥಿತಿಗತಿಗಳು, ಸಾಂಸ್ಕೃತಿಕ ಸನ್ನಿವೇಶ, ಕುಟುಂಬ, ಚಾರಿತ್ರಿಕ,

ರಾಜಕೀಯ, ಸಾಮಾಜಿಕ-ಆರ್ಥಿಕ, ಸಾಂಸ್ಕೃತಿಕ ಅಂಶಗಳ ಸೂಕ್ಷ್ಮಾವಲೋಕನ ಅಗತ್ಯ. ಭಾರತದ ಮಹಿಳೆಯರ ಸ್ಥಾನಮಾನದ ಬಗ್ಗೆ ನಾವು ಅಧ್ಯಯನ, ವಿಶ್ಲೇಷಣೆ ಅಥವಾ ಚರ್ಚೆನಡೆಸುವಾಗ ಅನೇಕ ವಿಷಯಗಳ ಬಗ್ಗೆ ಲಕ್ಷ್ಯಹರಿಸಬೇಕಾಗುತ್ತದೆ. ಏಕೆಂದರೆ ಮಾನವನ ಇತಿಹಾಸವೆಂದು ದಾಖಲಾದ ಅಂಶಗಳೆಲ್ಲವೂ ಒಂದು ಬಗೆಯ 'ಪುರುಷೇತಿಹಾಸವೇ ಆಗಿಬಿಟ್ಟಿರುವುದರಿಂದ ಮಹಿಳೆಯರ ಬಗ್ಗೆ ಪ್ರಸ್ತಾಪಗಳು ಕೇವಲ ಕ್ವಚಿತ್ತಾಗಿ ಕಂಡುಬರುತ್ತವೆ ಅಷ್ಟೆ. ತೀರಾ ಇತ್ತೀಚಿನ ದಶಕಗಳಲ್ಲಿ ಭಾರತೀಯ ಮಹಿಳೆಯರ ಸ್ಥಾನಮಾನದ ಬಗ್ಗೆ ಪ್ರಾಚೀನ ಕಾಲದಿಂದ ಆರಂಭಿಸಿ ಆಧುನಿಕ ಕಾಲದವರೆಗೂ ಐತಿಹಾಸಿಕ ದೃಷ್ಟಿಕೋನದಿಂದ ಅಭ್ಯಾಸಮಾಡುವ ಪ್ರಯತ್ನ ನಡೆದಿದೆ. ವ್ಯವಸ್ಥಿತ ರೂಪದಲ್ಲಿ ಮಹಿಳೆಯರ ಬಗ್ಗೆ ದಾಖಲೆಗಳಿಲ್ಲದಿರುವುದರಿಂದ ಈ ಬಗೆಯ ಅಧ್ಯಯನವೂ ಕಷ್ಟಸಾಧ್ಯ. ಭಾರತದಂಥ ವಿವಿಧ ಧರ್ಮಗಳು, ಅಸಂಖ್ಯಾತ ಜಾತಿಗಳು ಹಾಗೂ ವಿಶಿಷ್ಟ ಸಂಸ್ಕೃತಿಯ ರಾಷ್ಟ್ರದಲ್ಲಿನ ವಿಭಿನ್ನ ಸಮಾಜ ಸಂರಚನೆಗಳಲ್ಲಿ ಆಯಾ ಸಮುದಾಯಗಳ ಮಹಿಳೆಯರ ಬಗ್ಗೆ ತೌಲನಿಕವಾಗಿ ಅಥವಾ ಪ್ರಾತಿನಿಧಿಕವಾಗಿ ಸಮಾನವಾದ ಚಿತ್ರಣ ನೀಡುವುದು ಯುಕ್ತವಾಗಲಾರದು. ಕಾಲಾನುಕಾಲಕ್ಕೆ ಬೇರೆ ಬೇರೆ ವರ್ಗಗಳ ಸ್ತ್ರೀಯರ ಸ್ಥಿತಿಗತಿಗಳನ್ನು ತುಂಬಾ ಎಚ್ಚರಿಕೆಯಿಂದ ಪರಾಮರ್ಶಿಸಿ ಪರಿವರ್ತನೆಗಳನ್ನು ಗುರುತಿಸಬೇಕು. ಇಂತಹ ಪರಿವರ್ತನೆಗಳ ಪರಿಣಾಮವಾಗಿ, ಸ್ತ್ರೀಯರ ಸ್ಥಾನಮಾನದ ಬಗ್ಗೆ ಐತಿಹಾಸಿಕ ನಿರ್ಧಾರಗಳನ್ನು ದಾಖಲಿಸಲು ಸಾಧ್ಯವಾಗುತ್ತದೆ.

ಪ್ರಾಚೀನ ಭಾರತದಲ್ಲಿ ಮಹಿಳೆಯರ ಸ್ಥಾನ

ವೇದಗಳ ಕಾಲದಲ್ಲಿ ಮಹಿಳೆಯರ ಸ್ಥಾನದ ಬಗ್ಗೆ ವಿಶ್ಲೇಷಿಸುವಾಗ ಒಂದು ವೇದಕಾಲದಿಂದ(ಎಂದರೆ ಋಗ್ವೇದ ಕಾಲದಿಂದ ಯಜುರ್ವೇದ ಕಾಲದವರೆಗೆ ಇತ್ಯಾದಿ) ಮತ್ತೊಂದು ವೇದಕಾಲಕ್ಕೆ ಮಹಿಳೆಯರ ಸ್ಥಾನದಲ್ಲಿ ಉಂಟಾದಂಥ ಬದಲಾವಣೆಗಳನ್ನು ನಾವು ಪರಿಶೀಲಿಸಬೇಕಾಗುತ್ತದೆ.[೬] ವೇದಗಳ ಕಾಲವನ್ನು ಕ್ರಿ.ಪೂ.೨೫೦೦-೧೫೦೦ರವರೆಗೆ ಗುರುತಿಸಬಹುದು.'' ಇನ್ನೂ ಕೆಲವರು ವೇದಗಳ ಕಾಲವನ್ನು ''ಕ್ರಿ.ಪೂ. ೪೦೦೦ ವರ್ಷಗಳಷ್ಟು ಹಳೆಯದೆಂದು ಸೂಚಿಸುತ್ತಾರೆ.''[೮] ಋಗ್ವೇದದ ಕಾಲದಲ್ಲಿ ಸಂಪೂರ್ಣವಾಗಿ ಲಿಂಗವ್ಯವಸ್ಥೆಯಲ್ಲಿ ಸಮಾನತೆ ಇರಲಿಲ್ಲವಾದರೂ ಲಿಂಗತಾರತಮ್ಯವಂತೂ ಎಲ್ಲಿಯೂ ಎದ್ದು ಕಾಣುವಂತಿರಲಿಲ್ಲ ಎನ್ನಬಹುದು.

ವೇದಗಳನ್ನು ಭಾರತೀಯರಿಗೆ ಮಾತ್ರವಲ್ಲ, ಸಂಪೂರ್ಣ ವಿಶ್ವದ ಸಂಸ್ಕೃತಿಯ ಮೂಲಾಧಾರವೆಂದು ಪರಿಗಣಿಸಲಾಗಿದೆ. ಋಗ್ವೇದವು ಭಾರತೀಯ ಸಂಸ್ಕೃತಿಯ ಸರ್ವಾಂಗೀಣ ಹಾಗೂ ಮೌಲಿಕ ಜ್ಞಾನಕ್ಕೆ ಮೂಲ ತಳಹದಿಯಾಗಿದೆ. ಭಾರತದ ಆಧುನಿಕ ಸಂಸ್ಕೃತಿಯು ವಿಶ್ವದ ಬೇರೆ ಬೇರೆ ಸಂಸ್ಕೃತಿಗಳ ಸಂಸ್ಕಾರವನ್ನು ಹೊಂದಿರುವುದು ಅನುಭವ ವೇದ್ಯ. ಆದರೆ ವೈದಿಕ ಸಂಸ್ಕೃತಿಯ ಸಂಸ್ಕಾರ ನಮ್ಮ

ಧರ್ಮದಲ್ಲಿ ಹೆಚ್ಚು ದೃಢವಾದುದೂ, ಆಳವಾದುದೂ ಆಗಿದೆ. ಋಗ್ವೇದದ ಸೂಕ್ತಗಳಲ್ಲಿ ಅಭಿವೃದ್ಧಿಪರ ಧರ್ಮಮಾರ್ಗದ ಸಂದೇಶವನ್ನು ಕಾಣಬಹುದು. ಶತೃಗಳನ್ನು ಸೋಲಿಸುವುದು, ಮಕ್ಕಳು ಮೊಮ್ಮಕ್ಕಳು ಹಾಗೂ ಧನ ಧಾನ್ಯಗಳಿಂದೊಡಗೂಡಿದ ದೀರ್ಘಜೀವನ, ಸ್ವರಾಜ್ಯ, ಸಾಮ್ರಾಜ್ಯದ ಆಕಾಂಕ್ಷೆಗಳನ್ನು ನೀಡಲಾಗಿದೆ.

"ಸಮಾನೀವ ಆಕೂತಿಃ
ಸಮಾನ ಹೃದಯಾನಿವಃ
ಸಮಾನಮಸ್ತು ವೋಮನೋ
ಯಥಾವಃ ಸುಸಹಾಸತಿ||[೮]

ಭಾರತದ ಧರ್ಮಶಾಸ್ತ್ರವೆಂದರೆ ಸ್ಮೃತಿಸಾಹಿತ್ಯ. ಸಮಾಜದಲ್ಲಿ ಸುನಿಯಂತ್ರಿತ ಶಿಸ್ತುಬದ್ಧ ವ್ಯವಸ್ಥೆಯನ್ನು ನೆಲೆಗೊಳಿಸುವುದೇ ಸ್ಮೃತಿಕಾರರ ಏಕಮೇವ ಉದ್ದೇಶವಾಗಿತ್ತು.

ಧಾರ್ಮಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಗಳು

ಗೃಹಸ್ಥಾಶ್ರಮದಲ್ಲಿ ಅಗ್ನಿಯ ಉಪಾಸನೆಯೇ ಪರಮ ಕರ್ತವ್ಯವಾಗಿತ್ತೆಂದು ಹೇಳಲಾಗಿದೆ.[೯] ವಿವಾಹ ಸಮಯದಲ್ಲಿ ವಿವಾಹಾಗ್ನಿಯನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗಿ ವಧೂವರರು ಗೃಹಪ್ರವೇಶ ಮಾಡುತ್ತಿದ್ದರು. ಪತಿಯು ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಸಪತ್ನೀಕನಾಗಿಯೇ ಹೋಮ ಹವನಗಳನ್ನು ಮಾಡಬೇಕಾಗಿತ್ತು. ಪತಿ ಅಥವಾ ಪತ್ನಿ ತೀರಿಕೊಂಡರೆ ವ್ರತ ನಿಂತುಹೋಗುತ್ತಿತ್ತು. ಸಮಾಜದಲ್ಲಿ ವಿಧುರಾಗ್ನಿ ಹೋತ್ರ ರೂಢಿಯಲ್ಲಿರಲಿಲ್ಲ.

ಹೀಗೆ ಮಹಿಳೆಯು ವೇದಗಳ ಕಾಲದಲ್ಲಿ ಪತಿಯ ಸಹಧರ್ಮಿಣಿಯಾಗಿದ್ದ ಬಗ್ಗೆ ನಮಗೆ ಸಂಪೂರ್ಣ ಸಾಕ್ಷ್ಯಾಧಾರ ಲಭ್ಯವಿದೆ ಎಂದರೆ ಕೌಟುಂಬಿಕ ನೆಲೆಯಲ್ಲಿ ಮಹಿಳೆಯು ಪುರುಷನೊಂದಿಗೆ ಅಥವಾ ಪತಿಯೊಂದಿಗೆ ಸಮಾನವಾದ ಕರ್ತವ್ಯ, ಹಕ್ಕು ಹಾಗೂ ಆಚರಣೆಗಳನ್ನು ಹೊಂದಿದ್ದಳು ಎಂದು ತಿಳಿಯ ಬಹುದಾಗಿದೆ.

ಋಗ್ವೇದದ ಕಾಲದಲ್ಲಿ ಸ್ತ್ರೀ ಮತ್ತು ಪುರುಷರಿಗೆ ಹೆಚ್ಚು ಕಡಿಮೆ ಸಮಾನ ಸ್ಥಾನಮಾನವಿದ್ದಿರಬಹುದೆಂದು ತಿಳಿಯಲು ಅನೇಕ ಮಾಹಿತಿಗಳು ದೊರೆತಿವೆ. ಆಗ ಹುಡುಗಿಯರಿಗೆ ಹುಡುಗರಂತೆಯೇ ವೈವಾಹಿಕ ವ್ಯವಸ್ಥೆಯಲ್ಲಿ ತನ್ನ ಪತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿತ್ತು. ಅಲ್ಲದೆ ಬಾಲಕಿಯರು ಹರೆಯದ ವಯಸ್ಸಿಗೆ(ಸುಮಾರು ೧೬-೧೭) ಬಂದ ಮೇಲೆ ವಿವಾಹವಾಗುತ್ತಿದ್ದುದರಿಂದ, ಅವರಿಗೆ ಶಿಕ್ಷಣ ಪಡೆಯಲೂ ಅವಕಾಶವಿತ್ತು. ಹೀಗಾಗಿ ಉನ್ನತ ವರ್ಗದವರಿರಲಿ, ಸಾಮಾನ್ಯ ಮಹಿಳೆಯರು ಕೂಡ ಶಿಕ್ಷಣ, ಸಾಹಿತ್ಯ, ಸಂಗೀತ ಇನ್ನಿತರ ವಿಷಯಗಳಲ್ಲಿ ಪ್ರಬುದ್ಧರಾಗಿದ್ದ ಸಂಗತಿ ತಿಳಿಯುತ್ತದೆ. ಮುಂದೆ

ಅಥರ್ವ ಸಂಹಿತೆಯಲ್ಲಿ "ವೈದಿಕ ಅಧ್ಯಯನ ತೇಜಸ್ವಿ ಹಾಗೂ ತರುಣ ಪತಿಯನ್ನು ಪಡೆಯಲು ಅವಕಾಶ ನೀಡುತ್ತದೆ"[೯] ಎಂದು ಹೇಳಲಾಗಿದೆ.

ಸಮಾಜದ ಉನ್ನತ ವರ್ಗದ ಹೆಣ್ಣು ಮಕ್ಕಳಿಗೆ ಉಪನಯನ ಸಾಮಾನ್ಯವಾಗಿದ್ದು, ನಂತರದಲ್ಲಿ ಅವರು ಶಿಕ್ಷಣವನ್ನೂ ಪಡೆಯುತ್ತಿದ್ದರು. ಅವರಲ್ಲಿ ಹಲವರು ತತ್ತ್ವಶಾಸ್ತ್ರ, ಧರ್ಮಶಾಸ್ತ್ರಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಪುರುಷರೊಂದಿಗೆ ತಾತ್ವಿಕ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದರು. ಕೆಲವರು ಬೋಧಕರೂ ಆಗಿದ್ದರು. ಉಪನಿಷತ್ತುಗಳ ಕಾಲದಲ್ಲಿ ಗಾರ್ಗಿ, ಮೈತ್ರೇಯಿ, ಲೋಪಾಮುದ್ರ, ಸಿಕತ, ಘೋಷ ಮೊದಲಾದ ಬ್ರಹ್ಮವಾದಿನಿಯರಿದ್ದುದು ಸರ್ವವಿದಿತ ವಿಷಯ. ಅನೇಕ ಮಹಿಳೆಯರು ವೇದಮಂತ್ರಗಳ ರಚನೆಯನ್ನು ಮಾಡಿ ವೈದಿಕಯುಗಕ್ಕೆ ಕಾಣಿಕೆನೀಡಿರುವ ಬಗ್ಗೆ ಆಧಾರಗಳಿವೆ. "ಪುರುಷ ಪ್ರಧಾನ ವೈದಿಕ ಸಮಾಜದಲ್ಲೂ ಇಬ್ಬರು ಮಹಿಳೆಯರು ವೇದಗಳನ್ನು ರಚಿಸಿದ್ದು, ಕವಿಗಳ ಸಾಲಿನಲ್ಲಿ ಸೇರಿರುವುದು ಶ್ಲಾಘನೀಯ. ಅತ್ರಿ ಮನೆತನದ ವಿಶ್ವಾವರ ಎಂಬುವಳು ಋಗ್ವೇದದ ಐದನೆಯ ಮಂಡಲದ ೨೮ನೆ ಸೂಕ್ತವನ್ನು ರಚಿಸಿದ್ದರೆ ಋಷಿಕಕ್ಷಿವಾನನ ಮಗಳಾದ ಘೋಷಾ ಹತ್ತನೇ ಮಂಡಲದ ೩೯ ಮತ್ತು ೪೦ನೇ ಸೂಕ್ತಗಳನ್ನು ರಚಿಸಿದ್ದಾಳೆ." "ವೈವಾಹಿಕ ಜೀವನದಲ್ಲಿ ಮಹಿಳೆಯ ಯಶಸ್ಸು ಬ್ರಹ್ಮಚರ್ಯೆಯಲ್ಲಿ ಆಕೆಯು ಪಡೆದುಕೊಳ್ಳುವ ತರಬೇತನ್ನು ಆಧರಿಸಿದೆ"[೧೦] ಎನ್ನುತ್ತದೆ ಅಥರ್ವಣ ವೇದ. ಅಂದು ಸ್ತ್ರೀ ಶಿಕ್ಷಣಕ್ಕೆ ನೀಡಲಾಗಿದ್ದ ಪ್ರಾಧಾನ್ಯತೆಯನ್ನು ಇದು ಎತ್ತಿ ಹಿಡಿಯುತ್ತದೆ.

ಮಹಿಳೆಯ ಸ್ಥಾನಚ್ಯುತಿಯ ಆರಂಭ ಕೌಟುಂಬಿಕ ನೆಲೆಯಲ್ಲಿ

ಕ್ರಿಸ್ತ ಶಕೆಯ ಪ್ರಾರಂಭದ ಹೊತ್ತಿಗೆ ಎಂದರೆ ವೇದಾನಂತರದ ಕಾಲದಲ್ಲಿ ಹೆಣ್ಣಿನ ವಿವಾಹದ ವಯಸ್ಸನ್ನು ತಗ್ಗಿಸುವ ಪ್ರವೃತ್ತಿ ಪ್ರಾರಂಭವಾಯಿತು. ತತ್ಪರಿಣಾಮವಾಗಿ, ಉಪನಯನ ಮತ್ತು ಶಿಕ್ಷಣದ ಅವಕಾಶಗಳು ಕಡಿಮೆಯಾಯಿತು. ಮಹಾಕಾವ್ಯಗಳ ಕಾಲದ ಪ್ರಾರಂಭದಲ್ಲಿ ಧಾರ್ಮಿಕ ಸಂಸ್ಕಾರಗಳು ಮತ್ತು ಯಜ್ಞಯಾಗಾದಿಗಳಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಸ್ತ್ರೀಯರಿಂದ ಕಸಿದುಕೊಳ್ಳಲಾಯಿತು. ಹೀಗಾಗಿ ಹುಡುಗಿಯರು ವೈದಿಕ ಶಿಕ್ಷಣದಿಂದ ವಂಚಿತರಾದರು. ವಿವಾಹಪೂರ್ವದಲ್ಲಿ ಔಪಚಾರಿಕವಾಗಿ ಉಪನಯನವನ್ನು ಮಾಡಲಾಗುತ್ತಿತ್ತು. ಕ್ರಿ.ಶ.೨೦೦ರ ಸುಮಾರಿಗೆ ಹುಡುಗಿಯರಿಗೆ ಉಪನಯಕ್ಕೆ ಬದಲಾಗಿ ವಿವಾಹಮಾಡಬಹುದೆಂದು ಘೋಷಿಸಲಾಯಿತು. ಪರಿಣಾಮವಾಗಿ ಸ್ತ್ರೀಶಿಕ್ಷಣ ಸಂಪೂರ್ಣ ಸ್ಥಗಿತಗೊಂಡಿತು. ಋಗ್ವೇದ ಹಾಗೂ ನಂತರದ ಸ್ಮೃತಿಗಳ ಕಾಲದಲ್ಲಿ ಹೆಣ್ಣಿಗೆ ಬಾಲ್ಯ ವಿವಾಹವಿರದೆ ಸೂಕ್ತ ವಯಸ್ಸಿನಲ್ಲಿ ವಿವಾಹವಾಗುತ್ತಿತ್ತು. ಧರ್ಮಶಾಸ್ತ್ರಗಳಲ್ಲಿ ಹೇಳಿರುವಂತೆ ಹುಡುಗಿ ಋತುಮತಿಯಾದ ನಂತರ ಮೂರುವರ್ಷಗಳವರೆಗೆ ಕಾಯಬೇಕಿತ್ತು. ತರುವಾಯ ತಾಯ್ಮುಂದೆಗೆ ವಿವಾಹ ನಿರ್ಧರಿಸುವುದು

ಸಾಧ್ಯವಾಗದಿದ್ದರೆ ಆಕೆಗೆ ತನ್ನ ಆಯ್ಕೆಯ ಹುಡುಗನನ್ನು ವಿವಾಹವಾಗಲು ಸ್ವಾತಂತ್ರ್ಯವಿತ್ತು. ಕುಟುಂಬದಲ್ಲಿ ಆಕೆ ಗೌರವಾನ್ವಿತ ವ್ಯಕ್ತಿಯಾಗಿದ್ದು ಕುಟುಂಬದ ಪಾಲುದಾರಳಾಗಿ ಸಂಪೂರ್ಣ ಸ್ವಾತಂತ್ರ್ಯ ಹೊಂದಿದ್ದಳು. ಶ್ರೀಮಂತರಲ್ಲಿ, ರಾಜಮನೆತನಗಳಲ್ಲಿ ಬಹುಪತ್ನಿತ್ವವಿದ್ದಿತಾದರೂ ಸಾಮಾನ್ಯರಿಗೆ ಏಕಪತಿತ್ವ-ಪತ್ನಿತ್ವ ರೂಢಿಯಲ್ಲಿತ್ತು. ಮಹಿಳೆ ಪುರುಷನಿಗೆ ಸಮಾನಳಾಗಿದ್ದು ಎಲ್ಲ ಪಾವಿತ್ರ್ಯತೆ, ಧರ್ಮ ಹಾಗೂ ಸಂತೋಷದ ಮೂಲವಾಗಿ ಚತುಃ ಪುರುಷಾರ್ಥಗಳ ಸಂಗಾತಿಯಾಗಿದ್ದಳು.[೧೧] ಪಾತಿವ್ರತ್ಯಕ್ಕೆ ಗೌರವಿದ್ದಿತಾದರೂ ಇತರರೊಂದಿಗಿನ ಲೈಂಗಿಕ ಸಂಪರ್ಕವನ್ನು ಕೀಳಾಗಿ ಕಾಣುತ್ತಿರಲಿಲ್ಲ. ಅತ್ರಿ ಮತ್ತು ದೇವಲ ಹೇಳುವಂತೆ ಇತರೆ ಜಾತಿಯ ಪುರುಷನೊಂದಿಗೆ ಲೈಂಗಿಕ ಸಂಬಂಧ ಹೊಂದಿದ ಸ್ತ್ರೀ ಜಾತಿಭ್ರಷ್ಟಳಾಗುತ್ತಿರಲಿಲ್ಲ. ಆದರೆ ಮುಂದಿನ ಋತುಚಕ್ರದವರೆಗೆ ಅಥವಾ ಹೆರಿಗೆಯವರೆಗೆ ಆಕೆ ಅಶುದ್ಧಳಾಗುತ್ತಿದ್ದಳು. ಆದರೆ ಕಾಲಾನುಕ್ರಮದಲ್ಲಿ ಇದನ್ನು ಖಂಡಿಸಲಾಯಿತು. ಹಾಗೂ ಹೆಣ್ಣಿನ ಶೀಲರಕ್ಷಣೆ, ಪಾವಿತ್ರ್ಯವನ್ನು ಎತ್ತಿಹಿಡಿಯಲಾಯಿತು.

ಸಾಮಾಜಿಕ-ಆರ್ಥಿಕ ನೆಲೆಯಲ್ಲಿ

ಗಂಡು ಸಂತಾನವಿರದಿದ್ದರೆ ವಿಶೇಷ ಸಂದರ್ಭಗಳಲ್ಲಿ ಮಗಳಿಗೆ ತಂದೆಯ ಅಂತ್ಯಸಂಸ್ಕಾರ ಮಾಡಲು ಅವಕಾಶ ನೀಡಲಾಗಿತ್ತು. ಗಂಡುಮಗನಿರದಿದ್ದರೆ ಮಗಳ ಮಗನಿಗೂ ಈ ಕರ್ತವ್ಯ ನೀಡಲಾಗುತಿತ್ತು. ಆರ್ಥಿಕವಾಗಿ ಮಹಿಳೆಗೆ ಸಾಕಷ್ಟು ಸ್ವಾತಂತ್ರ್ಯವಿದ್ದಿತೆಂಬುದು ಆಶ್ಚರ್ಯದ ಸಂಗತಿಯೆ. ಆದರೆ ಅವರು ಅದನ್ನು ಬಳಸಿಕೊಳ್ಳಲು ಹೊರಗೆ ಗಂಡಸಿನ ಜೊತೆ ಹೋಗಲಿಲ್ಲ. ಕೂಲಿ ಸಂಪಾದನೆ ಅವರಿಗೆ ಬೇಡವಾಗಿತ್ತು. ಮನೆಯಲ್ಲಿ ನೂಲುವುದು, ನೇಯುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು. ಕೃಷಿಕಾರ್ಯದಲ್ಲೂ ಪುರುಷರಿಗೆ ಸಹಾಯ ನೀಡುತ್ತಿದ್ದರು.

"ಸ್ತ್ರೀಯರು ಆಸ್ತಿ ಹಕ್ಕನ್ನು ಪಡೆದಿದ್ದರು. ಮಗಳಾಗಿ ತಂದೆಯ ಆಸ್ತಿಯಲ್ಲಿ ಯಾವುದೇ ಅಧಿಕಾರವಿರದಿದ್ದರೂ ಅವಿವಾಹಿತ ಮಹಿಳೆ ತನ್ನ ಸೋದರರು ಪಡೆಯುವ ಪಿತ್ರಾರ್ಜಿತ ಆಸ್ತಿಯಲ್ಲಿ ೧/೪ ಭಾಗವನ್ನು ಪಡೆಯುತ್ತಿದ್ದಳು. ತಾಯಿಯ ಆಸ್ತಿಯಲ್ಲಿ ಆಕೆಯ ಮರಣಾನಂತರ ಗಂಡು, ಹೆಣ್ಣು ಮಕ್ಕಳಿಗೆ ಸಮನಾಗಿ ಹಂಚಲಾಗುತ್ತಿತ್ತು. 'ಸ್ತ್ರೀ ಧನವು ಅವಿವಾಹಿತ ಹೆಣ್ಣು ಮಕ್ಕಳಿಗೆ ಮಾತ್ರ ಲಭ್ಯವಿತ್ತು. ಗಂಡನ ಆಸ್ತಿಯಲ್ಲಿ ಹೆಂಡತಿಗೆ ಪಾಲುನೀಡಲಾಗುತ್ತಿತ್ತು. ಆದರೆ ಪರಿತ್ಯಕ್ತ ಹೆಂಡತಿಗೆ ೧/೩ ಭಾಗ ನೀಡುತ್ತಿದ್ದರು. ಗಂಡನ ಜೀವಿತಾವಧಿಯಲ್ಲಿ ಆಸ್ತಿ ವಿಭಾಗ ಮಾಡಿದರೆ ಗಂಡುಮಕ್ಕಳ ಜೊತೆಗೆ ಹೆಂಡತಿಗೂ ಸಮಪಾಲು ಇರುತ್ತಿತ್ತು. ವಿಧವೆಗೆ ಗಂಡನ ಆಸ್ತಿಯಲ್ಲಿ ಕೆಲವೊಂದು ಅಧಿಕಾರಗಳನ್ನು ನೀಡಲಾಗಿತ್ತು. ಒಟ್ಟಿನಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿಯ ಮೇಲೆ ಸಂಪೂರ್ಣ ಅಧಿಕಾರವಿಲ್ಲದಿದ್ದರೂ ಕೆಲವೊಂದು ರಕ್ಷಣೆಗಳಂತೂ ದೊರೆತಿತ್ತು.'

ಪುರಾಣಗಳು : ಪುರಾಣಗಳ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಗಣನೀಯ ಬದಲಾವಣೆಗಳಾದುದನ್ನು ಗಮನಿಸಬಹುದು. ಹಿಂದೆ ಹೇಳಿದಂತೆ ಉಪನಯನ ತಪ್ಪಿ ಬಾಲ್ಯವಿವಾಹ ವ್ಯವಸ್ಥೆಯನ್ನು ತಂದಿಟ್ಟುದರ ಪರಿಣಾಮವಾಗಿ ಸ್ತ್ರೀಯರು ವೇದಾಧ್ಯಯನಕ್ಕೆ ಅನರ್ಹರಾದರು. ಸಂಸ್ಕಾರಾದಿಗಳನ್ನು ಮರೆತು ಪುತ್ರ ಸಂತಾನ ಹೊಂದುವುದೇ ಧಾರ್ಮಿಕ ಅವಶ್ಯಕತೆಯಾಯಿತು. ಜೀವನಸಂಗಾತಿಯ ಆಯ್ಕೆಯಲ್ಲಿ ಅವಳ ಅಭಿಪ್ರಾಯಕ್ಕೆ ಬೆಲೆಯಿಲ್ಲವಾಯಿತಲ್ಲದೆ, ವಿಧವಾ ವಿವಾಹವನ್ನು ನಿಷೇಧಿಸಲಾಯಿತು. ಕುಡುಕ, ದುರ್ಮಾರ್ಗಿ ಹಾಗೂ ಬಹುಪತ್ನಿಯರನ್ನು ಹೊಂದಿದ್ದವನಿಗೆ ಮರುಮದುವೆ ಮಾಡುವ ಪದ್ಧತಿ ಬಂದಿತು. ಅಂಥ ಗಂಡನನ್ನು ದೇವರೆಂದು ಪೂಜಿಸಲು ಒತ್ತಾಯ ಮಾಡಲಾಗುತ್ತಿತ್ತು. ಈ ವೇಳೆಗೆ ಮನುವಿನ ಸಿದ್ಧಾಂತಗಳು ಇವೆಲ್ಲಕ್ಕೂ ಪೋಷಣೆ ನೀಡಿ ಹೆಣ್ಣಿನ ಕಣ್ಣೀರ ಕತೆ ಪ್ರಾರಂಭವಾಯಿತು. ಸತಿಪದ್ಧತಿ, ಪರದಾ ಪದ್ಧತಿ, ಬಹುಪತ್ನಿತ್ವಗಳು ರೂಢಿಗೆ ಬಂದವು. ಪ್ರಭತಿ ಮುಖರ್ಜಿ ಹೇಳುವಂತೆ ''ಸಂಪೂರ್ಣ ಸಮಾಜದ ಮೇಲೆ ಬ್ರಾಹ್ಮಣ ವಿಧಿಗಳ ಹೇರಿಕೆ, ಜಾತಿವ್ಯವಸ್ಥೆಯಿಂದ ಹೇರಲಾದ ಬಿಗುನಿರ್ಬಂಧಗಳು ಮತ್ತು ಅವಿಭಕ್ತ ಕುಟುಂಬ ಪದ್ಧತಿ, ಸ್ತ್ರೀಯರಿಗೆ ಶೈಕ್ಷಣಿಕ ಸೌಲಭ್ಯಗಳ ಕೊರತೆ, ಆರ್ಯಕುಟುಂಬದಲ್ಲಿ ಅನಾರ್ಯ ಹೆಂಡತಿಯ ಪರಿಚಯಿಸುವಿಕೆ, ಮತ್ತು ಭಾರತದ ಮೇಲೆ ಪಾಶ್ಚಾತ್ಯರ ದಾಳಿ(ಅಲೆಕ್ಸಾಂಡರ್ ಮೊದಲಾದವರು) ಈ ಎಲ್ಲ ಕಾರಣಗಳಿಂದ ಪುರಾಣಗಳ ಕಾಲದಲ್ಲಿ ಸ್ತ್ರೀಯರ ಅಂತಸ್ತು ಪತನ ಹೊಂದಿತು. ಮಹಿಳೆಯರಲ್ಲಿ ಹಿಂದೆಂದೂ ಕಾಣದ ಅಂಜಿಕೆ, ಹಿಂಜರಿಕೆ ಪ್ರಾರಂಭವಾಯಿತು. ಇದಕ್ಕೆ ಪ್ರಮುಖವಾಗಿ ಬಲವಂತದ ಮತಾಂತರಗಳೇ ಕಾರಣವಾಗಿರಬಹುದು. ಜೊತೆಗೆ ಪರದೃಷ್ಟಿ ಹಾಗೂ ಶೀಲಹರಣಕ್ಕೆ ಹೆದರಿದ ಸಂಪ್ರದಾಯಶರಣರು ಬಾಲ್ಯವಿವಾಹ, ಸತಿ ಹಾಗೂ ಕೇಶಮುಂಡನದಂಥ ಕಠಿಣ ಕ್ರೂರ ಪದ್ಧತಿಗಳನ್ನು ಅನುಷ್ಠಾನಕ್ಕೆ ತಂದಿರಬಹುದು. ಪ್ರಾಚೀನ ಭಾರತದಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ ಆಸಕ್ತಿ ತಾಳಿದ್ದ ಬ್ರಿಟಿಷ್ ಇತಿಹಾಸಜ್ಞರು, ಪಾದ್ರಿಗಳು ಯುರೋಪಿಯನ್ ಮಾನದಂಡಗಳಿಂದ, ಮೌಲ್ಯ ಹಾಗೂ ದೃಷ್ಟಿಕೋನದಿಂದ ವಿಶ್ಲೇಷಿಸಿದರು. ಅವರು ಹಿಂದೂ ಮಹಿಳೆಯರು ಸಂಪ್ರದಾಯಶೀಲ, ಧಾರ್ಮಿಕ ಪ್ರವೃತ್ತಿಯ ಸದಾ ಪುರುಷರನ್ನು ಓಲೈಸುವವರೆಂದೇ ಚಿತ್ರಿಸಿದ್ದಾರಲ್ಲದೆ, ಆ ಮಹಿಳೆಯರು ಅತ್ಯಂತ ಪರಿಮಿತ ಹಾಗೂ ದಮನಕಾರಿ ವಾತಾವರಣದಲ್ಲಿ ಬದುಕಿದ್ದರೆಂದು ಹೇಳಿದ್ದಾರೆ.[೨೩] ''ಭಾರತದ ಪುರಾಣಗಳು, ಸಾಹಿತ್ಯ ಮತ್ತು ಇತಿಹಾಸಗಳನ್ನಾಧರಿಸಿ ಹಿಂದೂ ಮಹಿಳೆಯ ಒಂದು ಸಂಪೂರ್ಣ ಚಿತ್ರಣವನ್ನು ಭಾರತದ ಸಮಾಜ ಸುಧಾರಕರು ಅನಂತರ ನೀಡಿದ್ದರು. ಇದರಿಂದ ಎರಡು ಉದ್ದೇಶಗಳು ಈಡೇರಬಹುದೆಂಬ ಅಭಿಪ್ರಾಯವಿತ್ತು. ಹಿಂದೂ ಸಮಾಜದಲ್ಲಿ ಮಹಿಳೆಯರನ್ನು ಕಾಣುತ್ತಿದ್ದ ರೀತಿಯನ್ನು ಟೀಕಿಸಿದ್ದವರಿಗೆ ಆದರ್ಶ ಭಾರತೀಯ ನಾರಿಯ ಸ್ವರೂಪವನ್ನು ತೋರಿಸುವುದೊಂದೆಡೆಯಾದರೆ, ಸ್ಮೃತಿಗಳಲ್ಲಿ ವಿವರಿಸಿರುವ ಹಿಂದೂ ಸ್ತ್ರೀತ್ವದ ಮೌಲ್ಯಗಳು, ಸಮಾಜ ಸುಧಾರಕರ ಕಾಲದಲ್ಲಿ ಪ್ರಚಲಿತ

ವಾಗಿದ್ದ ಪದ್ಧತಿಗಳು ಹಾಗೂ ಸಾಮಾಜಿಕ ವಿಧಿನಿಷೇಧಗಳನ್ನು ಚರ್ಚಿಗಿಡುತ್ತಿದ್ದುದು ಇನ್ನೊಂದೆಡೆಯಾಗಿತ್ತು." ಚರಿತ್ರೆ ಮತ್ತು ಪುರಾಣಗಳಲ್ಲಿ ಚಿತ್ರಿಸಿರುವಂತೆ ಹಿಂದೂ ಮಹಿಳೆಯರು ವಿದ್ಯಾವಂತೆಯರಾಗಿ ಪ್ರಸಿದ್ಧ ವಿದ್ವಾಂಸರೆನಿಸಿಕೊಂಡಿದ್ದರಲ್ಲದೆ, ಅನೇಕರು ತತ್ತ್ವಜ್ಞಾನಿಗಳಾಗಿ ಬೋಧಕರಾಗಿ ಸಾಧನೆಗಳನ್ನು ಮಾಡಿದ್ದರು. ಮಹಿಳೆಯರು ಮುಕ್ತವಾಗಿ ಚಲಿಸುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ(ವಾಚಾ, ಕಾಯಾ, ಮನಸಾ) ಹಕ್ಕುಗಳನ್ನು ಪಡೆದಿದ್ದು ಅವರಿಗೆ ಕುಟುಂಬ ಹಾಗೂ ಸಮಾಜಗಳೆರಡರಲ್ಲೂ ಘನತೆ ಹಾಗೂ ಗೌರವಯುತ ಸ್ಥಾನಮಾನಗಳಿದ್ದವು. ಹೀಗಾಗಿ ಸಮಾಜ ಸುಧಾರಕರು ಪ್ರಾಚೀನ ಭಾರತದಲ್ಲಿ ಮಹಿಳೆಯರು ಕುಟುಂಬ, ಸಮುದಾಯ ಹಾಗೂ ರಾಜಕೀಯ ಚಟುವಟಿಕೆಗಳಲ್ಲಿ ಪುರುಷರೊಡನೆ ಸರಿಸಮಾನವಾಗಿ ಭಾಗವಹಿಸುತ್ತಿದ್ದರು[೧೩] ಎಂಬ ಇಂಥ ಜಾಗೃತ ಮಹಿಳೆಯರ ಬಗ್ಗೆ ಪ್ರಶಂಸಾಪೂರ್ವಕ ವ್ಯಾಖ್ಯಾನಗಳನ್ನು ಉಪನ್ಯಾಸ ಮಾಡುತ್ತ ಸಾಮಾಜಿಕವಾಗಿ ಸುಧಾರಣೆ ತರಲು ಹಾಗೂ ಮಹಿಳೆಯರನ್ನು ರಾಜಕೀಯ ಚಟುವಟಿಕೆಗಳತ್ತ ಆಕರ್ಷಿಸಲು ಪ್ರಯತ್ನಿಸಲಾಗಿತ್ತು ಎಂಬ ಟೀಕೆಗಳೂ ಬಂದಿವೆ. ಸಮಾಜ ಸುಧಾರಕರು ಸ್ಮೃತಿಗಳಲ್ಲಿ ಉಕ್ತವಾಗಿರುವ ಮಾದರಿಗಳು ಹಾಗೂ ಸಂಪ್ರದಾಯಗಳ ಬಗ್ಗೆ ಒತ್ತಿ ಹೇಳುವ ಮೂಲಕ ಸಮಾಜದ ಸಂರಚನೆಯನ್ನು ಭಂಗಗೊಳಿಸದೆಯೇ ಪರಿವರ್ತನೆ ತರಲು ಪ್ರಯತ್ನಿಸಿರಬಹುದೇ ಎಂದು ಅನುಮಾನವೂ ಎದುರಾಗುತ್ತದೆ. ತಾವೇ ಅತ್ಯುತ್ತಮರೆಂದು ನಿರ್ಣಯಿಸಿಕೊಂಡಿದ್ದ ಪುರುಷರು ಮಹಿಳೆಯರನ್ನು ಬುದ್ಧಿವಂತೆಯರೆಂದು ಒಪ್ಪಿಕೊಂಡದ್ದು ಹಿಂದೂ ಸಂಸ್ಕೃತಿ ಮತ್ತು ಸಂಪ್ರದಾಯದಲ್ಲಿ ಅಂತರ್ಗತವಾಗಿದ್ದ ಮೇಲುಗಾರಿಕೆ ಹಾಗೂ ಅಷ್ಟಿಷ್ಟಾದರೂ ಸಮಾನತೆಯನ್ನು ಗೌರವಿಸಿದ ರೀತಿ ಎಂದೂ ಸಹ ಭಾವಿಸಬಹುದು. ಆದರ್ಶನಾರಿಯ ಚಿತ್ರಣವಂತೂ ಹಿಂದೂ ನಂಬಿಕೆಗಳು ಹಾಗೂ ಮೌಲ್ಯಗಳಿಗೆ ಸಂಬಂಧಿಸಿದಂತೆ ಇಂದಿಗೂ ಅದೇ ಜಾಡಿನಲ್ಲಿ ಮುಂದುವರಿದಿರುವುದನ್ನು ನಾವು ಕಾಣುತ್ತಿದ್ದೇವೆ.

[೧೪]ಕ್ರಿ.ಪೂ.೧೦೦೦ದ ವೇಳೆಗೆ ಆರ್ಯರು ಭಾರತದಲ್ಲಿ ತಮ್ಮ ಭೂಸ್ವಾಮ್ಯ ವಿಸ್ತರಿಸುತ್ತಾ ಹೋದ ಹಾಗೆಲ್ಲ, ಆರ್ಯ ಸಂಸ್ಕೃತಿಯ ಪ್ರಾಬಲ್ಯವೂ ಹೆಚ್ಚಾಯಿತು. ಭಾರತೀಯ ಸಮಾಜದ ವಿಭಜನೆ ಹಾಗೂ ಮಾತೃಪ್ರಧಾನವಾದಂಥ ಮೌಲ್ಯಗಳಿಗೆ ಗೌರವ ಆಚರಣೆಗಳು ಇದೇ ಯುಗದಲ್ಲಿ ಪ್ರಾರಂಭವಾಯಿತು. ಡಾ.ಆರ್.ಇಂದಿರಾ ಅವರು "ದ್ರಾವಿಡ ಸಂಸ್ಕೃತಿಯಲ್ಲಿ ಕಂಡುಬರುತ್ತಿದ್ದ ಸ್ತ್ರೀಪುರುಷ ಸಮಾನತೆಯ ಮೌಲ್ಯಗಳು ಆರ್ಯರಿಂದ ನಾಶವಾಯಿತು." ಎಂದು ಹೇಳುತ್ತ ಇದಕ್ಕೆ ಹಲವಾರು ಕಾರಣಗಳನ್ನು ನೀಡುತ್ತಾರೆ. ಕೃಷಿ ಪ್ರಧಾನ ವ್ಯವಸ್ಥೆಯಿಂದ ಸ್ತ್ರೀಯರನ್ನು ದೂರವಿಟ್ಟದ್ದು, ಮಹಿಳೆ ಗೃಹಬಂದಿಯಾಗಿದ್ದು, ಅವಳನ್ನು ಕೇವಲ ಮಕ್ಕಳನ್ನು ಹೆರುವ ಯಂತ್ರವನ್ನಾಗಿ ಪರಿವರ್ತಿಸಿದ್ದು, ಮೇಲ್ಜಾತಿಯ ಪುರುಷರು ಕೆಳಸ್ತರದ ಮಹಿಳೆಯರೊಡನೆ ವಿವಾಹೇತರ ಸಂಬಂಧ ಹೊಂದಿದ್ದುದು, ಜ್ಞಾನಾರ್ಜನೆಯನ್ನು ಕೇವಲ ಮೇಲ್ಜಾತಿಗಳ ಹಾಗೂ ಪುರುಷರ ಸ್ವತ್ತಾಗಿಸಿದ್ದು, ಈ ಎಲ್ಲ ಪ್ರವೃತ್ತಿಗಳೂ ಆರ್ಯ ಸಂಸ್ಕೃತಿಯ

ಸಮಾಜದಲ್ಲಿ ಸ್ತ್ರೀ ವಿರೋಧಿ ಮೌಲ್ಯಗಳನ್ನು ಸ್ಥಾಪಿಸಲು ಕಾರಣವಾಗಿರಬಹುದು. ಸ್ತ್ರೀಯರನ್ನು ಋತುಚಕ್ರದ ನೆಪಹೇಳಿ ಅಶುದ್ಧ ಹಾಗೂ ಮೈಲಿಗೆ ಎಂದು ಗುರುತಿಸಿ ಉಪನಯನದಿಂದ ದೂರವಿಟ್ಟಿದ್ದರಿಂದ ಧಾರ್ಮಿಕ ಕ್ಷೇತ್ರದಿಂದ ಮಹಿಳೆ ಹಿಂದೆ ಸರಿಯುವಂತಾಯಿತು. ಸ್ತ್ರೀಯರನ್ನು ಹಲವಾರು ಮೂಲಭೂತ ಹಕ್ಕುಗಳಿಂದ ವಂಚಿಸುವ ಧಾರ್ಮಿಕ ನಂಬಿಕೆಗಳು ಚಲಾವಣೆಗೆ ಬರತೊಡಗಿದಂತೆ ಪುನರ್ಜನ್ಮದ ಪರಿಕಲ್ಪನೆಯು ಮಹಿಳೆಯ ಸ್ಥಾನಮಾನದ ಮೇಲೆ ಅತ್ಯಂತ ತೀವ್ರವಾದ ಪರಿಣಾಮ ಬೀರಿತು. ಧಾರ್ಮಿಕ ವಿಧಿಗಳನ್ನು ನಡೆಸುವುದರಿಂದ ಮಾತ್ರವೇ ಮೃತವ್ಯಕ್ತಿಯ ಆತ್ಮಕ್ಕೆ ಶಾಂತಿ ಸಿಗುವುದೆಂಬ ಸಿದ್ಧನಂಬಿಕೆಯಿಂದ ಸ್ತ್ರೀಯರು ಧಾರ್ಮಿಕ ವಿಧಿಗಳಲ್ಲಿ ಪಾಲ್ಗೊಳ್ಳದಂತೆ ತಡೆಯಲಾಯಿತು. ಈ ವೇಳೆಗಾಗಲೇ ಸಮಾಜದಲ್ಲಿ ಪುರುಷ ಪ್ರಾಬಲ್ಯ ಬೇರೂರಿ ಧಾರ್ಮಿಕ ಕ್ರಿಯೆಗಳನ್ನು ನಡೆಸುವ ಅರ್ಹತೆ ಗಂಡುಮಕ್ಕಳಿಗೆ ಮಾತ್ರವೇ ಲಭ್ಯವಾಯಿತು. ಕ್ರಮೇಣ ಇದೇ ಮೂಲಕಾರಣವಾಗಿ ಕುಟುಂಬದಲ್ಲಿ ಹೆಣ್ಣುಮಗಳಿಗೆ ಪ್ರಾಶಸ್ತ್ಯ ತಪ್ಪಿ ಗಂಡುಸಂತಾನದಿಂದ ಮಾತ್ರವೇ ಪಿತೃಗಳಿಗೆ ಮುಕ್ತಿ ಸಾಧ್ಯವೆಂಬುದು ಬಲವಾಗಿ ನೆಲೆಯೂರಿತು. ಪರಿಣಾಮವಾಗಿ ಪಿತ್ರಾರ್ಜಿತ ಆಸ್ತಿಗೆ ಗಂಡುಮಕ್ಕಳು ಮಾತ್ರವೇ ಉತ್ತರಾಧಿಕಾರಿಗಳಾಗಲು ಅರ್ಹತೆ ಪಡೆದು ಹೆಣ್ಣು ಮಕ್ಕಳಿಗೆ ಆಸ್ತಿ ಹಂಚಿಕೆಯೂ ನಿಂತುಹೋಯಿತು.

ಸಮಾಜದಲ್ಲಿ ಪುರುಷ ಪ್ರಧಾನ ಸಂಸ್ಕೃತಿ ಬೇರೂರುತ್ತ ಹೋದಂತೆಲ್ಲ ಗಂಡು ಸಂತಾನಕ್ಕೆ ಸಾಮಾಜಿಕ-ಆರ್ಥಿಕ ಮೌಲ್ಯಗಳು ಹೆಚ್ಚುತ್ತಾ ಹೋಯಿತು. ಇಂಥ ಪರಿಸ್ಥಿತಿಗೆ ಈ ಕೆಳಗಿನ ಅಂಶಗಳು ಮುಖ್ಯಕಾರಣಗಳೆಂದು ಗುರುತಿಸಲ್ಪಟ್ಟಿವೆ.[೧೫]

೧. ಹಿರಿಯರ ಆತ್ಮಕ್ಕೆ ಮೋಕ್ಷವನ್ನು ದೊರಕಿಸಿಕೊಡಲು ನಡೆಸಬೇಕಾದ ಧಾರ್ಮಿಕ ಕ್ರಿಯಾವಿಧಿಗಳು.

೨. ಪೂರ್ವಜರ ಆಸ್ತಿಯನ್ನು ಕಾಪಾಡುವುದು.

೩. ಇಳಿವಯಸ್ಸಿನಲ್ಲಿ ತಂದೆತಾಯಿಯರ ರಕ್ಷಣೆ.

ಈ ಅಂಶಗಳು ಗಂಡು ಸಂತಾನಕ್ಕೆ ಹೆಚ್ಚಿನ ಸಾಮಾಜಿಕ ಸ್ಥಾನವನ್ನು ನೀಡುವುದರ ಜೊತೆಗೆ ಹೆಣ್ಣು ಸಂತಾನದ ಸ್ಥಾನವನ್ನು ನಿಕೃಷ್ಟಗೊಳಿಸಲೂ ಕಾರಣವಾದವು. ಇದರ ಪರಿಣಾಮವಾಗಿ ಅಷ್ಟಿಷ್ಟು ಧೈರ್ಯ ತೋರಿದ ಮಹಿಳೆಯರು ನಿಂದೆಗೆ ಗುರಿಯಾಗುತ್ತಿದ್ದರು. ಅಷ್ಟೇ ಅಲ್ಲ, ಭಾರತೀಯ ಸಮಾಜದಲ್ಲಿ ಮಾನವ ಸಹಜವಾದ ವಿವಿಧ ಸಂಕೀರ್ಣ ಭಾವನೆಗಳನ್ನು ಎಂದರೆ, ದ್ವೇಷ, ಹಗೆತನ, ಬಂಧನದಲ್ಲಿರುವುದು, ಅಸೂಯೆ ಮುಂತಾದ ದುರ್ಗುಣಗಳಿಗೆ ಹೆಣ್ಣನ್ನು ಸಮೀಕರಿಸುವುದು ಅನೂಚಾನವಾಗಿ ನಡೆದುಬಂದಿದೆ. ಹೆಣ್ಣು ಅಸೂಯೆಯ ಪ್ರತಿರೂಪ, ಹೆಣ್ಣಿನ ಕಾಲುಗುಣ, ಹೆಣ್ಣಿನ ವೈಯ್ಯಾರ, ಹೆಣ್ಣಿನ ಪ್ರತಿಯೊಂದು ನಡವಳಿಕೆಗೂ ಟೀಕೆಯ ಹಾಗೂ ಘಾತುಕತನದ ಗುಣವೆಂಬ ನಿಂದೆಯ ನುಡಿಗಳು ನೇರವಾಗಿ

ದೊರಕುತ್ತವೆ ಸಂಸ್ಕೃತ ಸುಭಾಷಿತವೊಂದರಲ್ಲಿ. ಇಂದಿಗೂ ಗ್ರಾಮೀಣ ಪುರುಷ ಅವಳನ್ನು ''ತನ್ನ ಎಡಗಾಲಿನ ಎಕ್ಕಡ(ಚಪ್ಪಲಿ)''[೧೬] ಎಂದು ತುಚ್ಛೀಕರಿಸಿದರೆ, ನಗರದ ಪುರುಷರಂತೂ ಅವಳನ್ನು ನಂಬಿಕೆಗೆ ಅನರ್ಹಳು, ಧೂರ್ತೆ, ಕಠಿಣ ಹೃದಯಿ ಹಾಗೂ ಸರ್ಪದಂತೆ ವಿಷಕಾರಕಳು ಮುಂತಾಗಿ ದೂಷಿಸುತ್ತಾರೆ. ಯುವಕರಿಗೆ ಅವಳು ರಹಸ್ಯ ವ್ಯಕ್ತಿಯಾಗಿ, ಕೆಣಕಬಹುದಾದ, ನಿಂದನೀಯ ಹಾಗೂ ಅವಕಾಶ ದೊರೆತರೆ ಮಾನಹಾನಿ(ಅತ್ಯಾಚಾರ) ಮಾಡಲೂ ಬಹುದಾದ ಕುತೂಹಲಕಾರಕ ವಸ್ತುವಿನಂತಿರುತ್ತಾಳೆ!, ಕೆಲಮಟ್ಟಿಗೆ ಮಹಿಳೆಯು ಯಾವ ಜಾತಿ, ಧರ್ಮ ಅಥವಾ ಸಾಮಾಜಿಕ ಗುಂಪಿಗೆ ಸೇರಿರುತ್ತಾಳೋ ಅದಕ್ಕೆ ತಕ್ಕಂತೆ ಆಕೆಯ ಸ್ಥಾನಮಾನ ಹಾಗೂ ಅಂತಸ್ತು ಬೇರೆ ಬೇರೆಯಾಗುತ್ತದೆ. ಅನೇಕ ಬಾರಿ ಉತ್ತಮ ಜಾತಿಯಲ್ಲಿ, ಮೇಲ್ವರ್ಗದವರಲ್ಲಿ ಕೂಡ ಮಹಿಳೆಯರಿಗೆ ಕೆಳಮಟ್ಟದ ಸ್ಥಾನಮಾನಗಳನ್ನು ನೀಡಿರುವುದು ಕಂಡುಬರುತ್ತದೆ. ಉದಾಹರಣೆಗೆ ಉತ್ತಮ ಜಾತಿ ಎಂದು ಹೇಳಲಾಗುವ ಬ್ರಾಹ್ಮಣವರ್ಗದಲ್ಲಿ ಮಹಿಳೆಯರು ಅನೇಕ ದೌರ್ಬಲ್ಯಗಳಿಂದ ನರಳುತ್ತಾರೆ. ಉಪ-ವರ್ಗಗಳಲ್ಲಿ ಅದನ್ನು ಬಿಟ್ಟು ಮತ್ತೊಂದಕ್ಕೆ ವಿವಾಹ ಮಾಡಬಾರದೆಂಬ ಪದ್ಧತಿಯೂ ಜಾರಿಯಲ್ಲಿದೆ. ಎಳೆವಯಸ್ಸಿನ ಬಾಲವಿಧವೆಗೆ ಕೂಡ ಮರುವಿವಾಹಕ್ಕೆ ಆಸ್ಪದವಿರಲಿಲ್ಲ! ಇದಕ್ಕೆಲ್ಲ ಅತ್ಯಂತ ಕಠಿಣ ಹಾಗೂ ಕಟ್ಟುನಿಟ್ಟಾದ ನೀತಿ ಸಂಹಿತೆಗಳನ್ನು ಅನ್ವಯಿಸುತ್ತಾರೆ. ಈ ಅನಿಷ್ಟ ಸಂಪ್ರದಾಯ ಕೂಡ ದಿನೇ ದಿನೇ ಮರೆಯಾಗುತ್ತಿದೆ. ಇದಕ್ಕೆ ಪ್ರತಿಯಾಗಿ ಗ್ರಾಮೀಣ ಬದುಕಿನಲ್ಲಿರುವ ಗ್ರಾಮೀಣ ಮಹಿಳೆಯರು ತಮ್ಮ ತಮ್ಮ ಹೊಲಗದ್ದೆಗಳಲ್ಲಿ ಗಂಡಸರೊಡನೆ ಸರಿಸಮವಾಗಿ ದುಡಿಯುತ್ತ ಸಮಾನ ಸ್ಥಾನಮಾನ ಹಾಗೂ ಅಂತಸ್ತನ್ನು ಹೊಂದಿರುತ್ತಾರೆ. ಆದಾಗ್ಯೂ ಹೆಂಗಸರನ್ನು ಅವಾಚ್ಯ ಪದಗಳಿಂದ ನಿಂದಿಸುವುದು, ಹೊಡೆಯುವುದು ತೀರಾ ಸಾಮಾನ್ಯವಾಗಿ ಕಂಡುಬರುತ್ತದೆ. ಗ್ರಾಮೀಣ ಕುಲಕಸಬುಗಾರರು ಹಾಗೂ ಕುಶಲಕರ್ಮಿಗಳೊಂದಿಗೆ ಅವರ ಹೆಂಗಸರೂ ಕೂಡ ಕೆಲಸ ಮಾಡುತ್ತಾರೆ.(ಉದಾಹರಣೆಗೆ, ನೂಲು ತೆಗೆಯುವ, ಸೀರೆ, ಬಟ್ಟೆ ನೇಯುವ, ಬುಟ್ಟಿ ಹೆಣೆಯುವ, ಕಬ್ಬಿಣ ಕುಟ್ಟುವುದು ಮುಂತಾದವು) ಅವರು ಪುರುಷರಿಗಿಂತ ಕೆಳಮಟ್ಟದಲ್ಲೆ ಇದ್ದಾಗ್ಯೂ ಅವರಿಗೆ ಅಷ್ಟಿಷ್ಟು ಸ್ಥಾನಮಾನ ಅಂತಸ್ತು ಇರುತ್ತದೆ. ಅಲ್ಲದೆ, ಅಸ್ಪೃಶ್ಯ ಹಾಗೂ ಬುಡಕಟ್ಟು ಜನಾಂಗಗಳಲ್ಲಂತೂ ಆರ್ಥಿಕ ಚಟುವಟಿಕೆಗಳಲ್ಲಿ, ಸಾಮಾಜಿಕ ವಲಯದಲ್ಲಿ ಮಹಿಳೆಯರೇ ಅತಿ ಮುಖ್ಯ ಪಾತ್ರವಹಿಸುತ್ತಿದ್ದು ತಮ್ಮ ಮನೆಗಳಿಂದ ಹೊರಗೆ ಹೋಗಿ ಬರುವ ಮುಕ್ತ ಸ್ವಾತಂತ್ರ್ಯವನ್ನು ಅವರು ಪಡೆದಿರುತ್ತಾರೆ. ತಮ್ಮ ಪರಿಮಿತ ಪ್ರಪಂಚದಲ್ಲಿ ಅವರು ಶ್ರಮಿಸುತ್ತ, ಕಷ್ಟಗಳನ್ನು ಎದುರಿಸುತ್ತ ಜೊತೆಗೆ ಗಂಡಸರಿಂದ ಶೋಷಣೆಗೀಡಾಗುತ್ತಲೂ, ಸಾಕಷ್ಟು ಸಮಾನ ಸ್ಥಾನಮಾನವನ್ನೇ ಹೊಂದಿರುವರೆನ್ನಬಹುದು. ಅವರು ತಮ್ಮ ಮನಸ್ಸಿಗೆ ಬಂದಂತೆ ಕೈಗೆ ಸಿಗುವ ಒಡವೆ ವಸ್ತ್ರಗಳಿಂದ ಸಿಂಗರಿಸಿಕೊಂಡು(ಉದಾ : ಲಂಬಾಣಿ, ಸೋಲಿಗರು ಇತ್ಯಾದಿ) ಆನಂದವಾಗಿರಬಲ್ಲರು. ಅಷ್ಟೇ ಅಲ್ಲ ಕುಡಿತ, ಧೂಮಪಾನವನ್ನು ಮಾಡುತ್ತಾರೆ! ಅದಕ್ಕೆ ಯಾರ ಆಕ್ಷೇಪಣೆಯೂ ಇರುವುದಿಲ್ಲ.

ಪೌರಾಣಿಕ ಕೃತಿಗಳಲ್ಲಿ ಸ್ತ್ರೀಯರ ಸ್ಥಾನಮಾನದ ಚಿತ್ರಣ

ಸಾವಿರಾರು ವರ್ಷಗಳಿಂದ ಭಾರತೀಯ ಸಮಾಜದಲ್ಲಿ ಪೌರಾಣಿಕ ಗ್ರಂಥಗಳಿಗೆ ಅತ್ಯಂತ ಮಹತ್ವ ನೀಡಲಾಗುತ್ತದೆ. ಜಾನಪದ ಸಾಹಿತ್ಯದಲ್ಲಂತೂ ಇದು ವ್ಯಕ್ತಿಯಿಂದ ವ್ಯಕ್ತಿಗೆ ಕಂಠಪಾಠವಾಗಿ ತನ್ಮೂಲಕ ಗ್ರಾಮೀಣ ಜೀವನದಲ್ಲಿ ಹಾಸುಹೊಕ್ಕಾಗಿದೆ. ಪೌರಾಣಿಕ ಕಥೆಗಳು ಪೀಳಿಗೆಯಿಂದ ಪೀಳಿಗೆಗೆ ಹೀಗೆ ಮೌಖಿಕವಾಗಿ ಸಾಗುತ್ತ ಬಂದಿರುವುದರಿಂದ ಇದು ಒಂದು ರೀತಿ ಯಾರ ಅರಿವಿಗೂ ಬಾರದಂತೆಯೇ ಮಹಿಳೆ ತನ್ನ ಪತಿಗಾಗಿ ಅಥವಾ ತನ್ನ ಕುಟುಂಬದ(ಮನೆತನದ) ಗೌರವವನ್ನು ಕಾಪಾಡಲು ಅಥವಾ ಎತ್ತಿಹಿಡಿಯಲು ಆತ್ಮ ಬಲಿದಾನ, ಮೌನವಾಗಿ ಸೇವೆ ಮಾಡುವುದು ಹಾಗೂ ಎಷ್ಟೇ ಕಷ್ಟಕೋಟಲೆಗಳು ಬಂದರೂ ಸಂತೋಷವಾಗಿಯೇ ಸ್ವೀಕರಿಸುವ ಆದರ್ಶನಾರಿಯ ಚಿತ್ರಣವನ್ನು ಸ್ಥಾಪಿಸಿತು. ಉದಾಹರಣೆಗೆ ಆದಿಕವಿ ವಾಲ್ಮೀಕಿ ವಿರಚಿತ ರಾಮಾಯಣದಂಥ ಮಹಾಕಾವ್ಯದಲ್ಲಿ ಎಂಥದೇ ಪರಿಸ್ಥಿತಿಯಲ್ಲೂ ತನ್ನ ಪತಿಯಾದ ರಾಮನನ್ನೇ ಅನುಸರಿಸುವ, ಅವನನ್ನು ಸದಾ ಪೂಜಿಸುವ ಸೀತೆಗೆ ಅವನಿಂದಲೇ ಘೋರ ಅಪಮಾನ, ಅನ್ಯಾಯವುಂಟಾಗುತ್ತದೆ. ಕೇವಲ ತನ್ನ ಮನೆತನದ ಗೌರವ ಕಾಪಾಡಲು ಆತ ನಿಸ್ಸಹಾಯಕ ಹೆಣ್ಣನ್ನು ಅಗ್ನಿ ಪರೀಕ್ಷೆಗೆ ಗುರಿಮಾಡಿ ರಾವಣನೊಡನೆ ಯುದ್ಧಮಾಡಿ ಜಯಿಸಿದ ತರುವಾಯ, ಆಕೆಯನ್ನು ಸ್ವೀಕರಿಸಲು ನಿರಾಕರಿಸುತ್ತಾನೆ. ಮತ್ತೊಮ್ಮೆ, ತುಂಬಿದ ಗರ್ಭಿಣಿಯನ್ನು ಕಾಡಿಗೆ ಕಳುಹಿಸುವ ನಿರ್ದಯಿ ರಾಜನಾಗುತ್ತಾನೆ. ಆದರೆ ಸೀತೆಯು ಧ್ವನಿ ಎತ್ತದೆ ಆತನನ್ನೇ 'ಕರುಣಾಳು ರಾಮ' ಎಂದು ಕಣ್ಣೀರು ಗರೆಯುತ್ತಾಳೆ. ಮೂಕತನದಿಂದ ಬಂದ ಕಷ್ಟವನ್ನು ಅನುಭವಿಸುತ್ತಾಳೆ.[೧೭] ಪೌರಾಣಿಕ ಸತಿಯರ ಮತ್ತೊಂದು ಮಾದರಿಯೆಂದರೆ ಸತಿ ಸಾವಿತ್ರಿಯದು. ಈ ಕಥೆಯಲ್ಲಿ ತನ್ನ ಮೃತ ಪತಿಯ ಪ್ರಾಣವನ್ನು ಮತ್ತೆ ಪಡೆಯಲು ತನ್ನ ಪಾತಿವ್ರತ್ಯ ಮಹಿಮೆಯ ಪವಾಡದಿಂದ ಯಮನ ಜತೆ ವಾಗ್ವಾದ ಮಾಡಿ ಗೆದ್ದ ಸತಿಸಾವಿತ್ರಿ ಈಕೆ. ಭಾರತೀಯ ನಾರಿಯರು ಪತಿವ್ರತೆಯರಾಗುವಂತೆ ಈ ಕಥೆಯನ್ನು ಹೆಣೆಯಲಾಗಿದ್ದೆ. ಜೊತೆಗೆ ಪ್ರಾತಃಸ್ಮರಣೀಯರಾದ [೧೮]ಪಂಚಕನ್ಯೆಯರನ್ನು ಆದರ್ಶವಾಗಿಸಿರುವುದರಲ್ಲೂ ಕೂಡ, ಇದೇ ಉದ್ದೇಶವಿದೆ ಎನಿಸುತ್ತದೆ. ಈ ಮಹಿಳೆಯರು ಪಟ್ಟ ಪಾಡು, ಸಂಕಷ್ಟದ ಜೀವನವನ್ನು ಎಳವೆಯಿಂದಲೇ ಬಾಲಕಿಯರಿಗೆ ಮಂದಟ್ಟುಮಾಡಿಸಿ ಮುಂದಿನ ದುಃಖ ಜೀವನಕ್ಕೆ ಅವರನ್ನು ಅಣಿಮಾಡುವ ಹುನ್ನಾರವೆಂದೆನಿಸದಿರದೆ? ಈ ಎಲ್ಲ ಆದರ್ಶ ನಾರಿಯರು ತಮ್ಮ 'ಪತಿ'ಗಳು ಬದುಕಿರಲಿ, ಮೃತರಾಗಿರಲಿ ಅವರಿಗೆ ಕಾಯಾ, ವಾಚಾ, ಮನಸಾ ಹಾಗೂ ಭಾವನಾತ್ಮಕವಾಗಿ ಕೂಡ ನಿಷ್ಠಾವಂತರಾದ ಸತಿಯರಾಗಿದ್ದರು. ಹೀಗಾಗಿ ಅವರ ಸ್ವಂತ ವ್ಯಕ್ತಿತ್ವವನ್ನು ಬೆಳೆಸುವುದು, ಬೆಳಕಿಗೆ ತರುವುದು ಇರಲಿ ಯಾವುದೇ ಸ್ವಾತಂತ್ರ್ಯ ಅಥವಾ ಸ್ವತಂತ್ರ ಅಭಿಪ್ರಾಯವನ್ನು ಕೂಡ ಅವರು ಹೊಂದಿರಲಿಲ್ಲವೆಂಬುದು ತಿಳಿಯುತ್ತದೆ. ಮಹಾಭಾರತ

ಮಹಾಕಾವ್ಯದ ವೀರನಾಯಕಿ ದ್ರೌಪದಿ ಮಾತ್ರ ಕ್ಷಾತ್ರ ತೇಜದ, ರೋಷದ, ಗಂಡಂದಿರನ್ನು ಹೀಯಾಳಿಸುವ, ಅವರನ್ನು ಯುದ್ಧಕ್ಕೆ ಹುರಿದುಂಬಿಸುವ ಪಾತ್ರವಾಗಿದೆ. ಈ ಮಹಾಕಾವ್ಯದಲ್ಲಿ ಕೂಡ ದ್ರೌಪದಿಯ ವೀರ ಗಂಡಂದಿರು ರಾಜಸಭೆಯಲ್ಲಿ ತಲೆತಗ್ಗಿಸಿ ಕೂತಾಗ, ಹಿರಿಯರು, ವೃದ್ಧರು, ಸ್ತ್ರೀಯೊಬ್ಬಳ ವಸ್ತ್ರಾಪಹರಣದಂಥ ಅಮಾನವೀಯ ಕೃತ್ಯ ನಡೆದಾಗಲೂ ಸುಮ್ಮನಿದ್ದಾಗ, ಆಕೆ ಶ್ರೀಕೃಷ್ಣನಿಂದ ರಕ್ಷಿತಳಾಗುತ್ತಾಳೆ. ಇದೇ ರೀತಿ ಗಂಗೆ, ಅಂಬೆ, ಹಿಡಿಂಬೆ, ಸುಭದ್ರೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಕಾವ್ಯದ ಮೊದಲಲ್ಲಿ (ತನ್ನಿಚ್ಛೆಯಂತೆ) ವಿವಾಹ ಪೂರ್ವದಲ್ಲಿ ಮಗುವನ್ನು ಪಡೆದ ಕುಂತಿ ಈ ಎಲ್ಲ ಪಾತ್ರಗಳು ಆ ಕಾಲದ ಮಹಿಳೆಯರ ಧೈರ್ಯ, ಸ್ವತಂತ್ರ ಮನೋಭಾವ ಹಾಗೂ ಛಲದ ಗುಣಗಳನ್ನು ಪ್ರತಿಬಿಂಬಿಸುತ್ತವೆ. ಇನ್ನು ಕಾವ್ಯದಲ್ಲಿ ಬರುವ ಉಲೂಪಿ ಎಂಬ ಪ್ರಮೀಳರಾಜ್ಯದ ರಾಜಕನ್ಯೆಯ ಕತೆ ಅತ್ಯಂತ ಆಸಕ್ತಿ ಹುಟ್ಟಿಸುವಂಥದ್ದು. ಪುರುಷ ದ್ವೇಷಿ ಕನ್ಯೆ ಅರ್ಜುನನ ಕೈಹಿಡಿದ ಪ್ರಸಂಗ ಆ ಕಾಲದಲ್ಲಿ ಇಂಥ ರಾಜ್ಯಗಳಿದ್ದಿರಬಹುದೆಂಬುದು ಕೂಡ ಅಚ್ಚರಿ ಹಾಗೂ ಮೆಚ್ಚುಗೆಯ ವಿಷಯವಾಗುತ್ತದೆ. ಜಮದಗ್ನಿಯ ಪತ್ನಿ ರೇಣುಕೆ ತನ್ನ ಪತಿಯ ಆಣತಿಯಂತೆ ಮಗನಾದ ಪರಶುರಾಮನ ಕೊಡಲಿಗೆ ತನ್ನ ಕುತ್ತಿಗೆ ಕೊಟ್ಟು ಸಾಯುತ್ತಾಳೆ! ಹರಿಶ್ಚಂದ್ರನ ಪತ್ನಿ ಚಂದ್ರಮತಿ ಉದ್ದಕ್ಕೂ ಕಷ್ಟಕೋಟಲೆಗಳಲ್ಲಿ ನೊಂದು, ಕಡೆಗೆ ಮಗನ ಅಂತ್ಯಸಂಸ್ಕಾರಕ್ಕೆ(ಶ್ಮಶಾನ ಕಾಯುತ್ತಿದ್ದ) ತನ್ನ ಪತಿಯೇ ಕೋರುವ ಶುಲ್ಕ ಕೊಡಲಾರದೆ ತನ್ನ ತಲೆಯನ್ನು ದಂಡಕೊಡಲು ಸಹ ಸಿದ್ಧಳಾಗುತ್ತಾಳೆ.

ಮನುಧರ್ಮ ಶಾಸ್ತ್ರದಲ್ಲಿ ಆಕೆಗೆ ಸ್ವತಂತ್ರಳಾಗಿರುವ ಅರ್ಹತೆಯನ್ನೇ ಅಲ್ಲಗಳೆದು ಮಗಳಾಗಿ ತಂದೆಯ, ಪತ್ನಿಯಾಗಿ ಪತಿಯ ಹಾಗೂ ವಿಧವೆಯಾಗಿ ತನ್ನ ಪುತ್ರನ ಅಧೀನದಲ್ಲಿ(ರಕ್ಷಣೆಯಲ್ಲಿ) ಇರಬೇಕೆನ್ನುತ್ತಾನೆ!

ಹಿಂದುತ್ವದಲ್ಲಿ 'ಧರ್ಮ'ಗಳೆಂದು ಕರೆಯಲಾಗುವ ಅನೇಕ ಕರ್ತವ್ಯಗಳನ್ನು ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯರಿಗೆ ವಿಧಿಸಲಾಗಿತ್ತು. ಆದರೆ ಮಹಿಳೆಯರಿಗೆ ಕೇವಲ ಒಂದೇ ಒಂದು ಧರ್ಮ ಪತಿವ್ರತಾಧರ್ಮ ಮಾತ್ರ ಇದ್ದಿತು. ಪತಿಯೇ ದೇವರು. ತನ್ನ ಪತಿಯ ಬಗ್ಗೆ ಚಕಾರವೆತ್ತದೆ ವಿಧೇಯತೆ ಯಿಂದ ಅವನೆಂಥವನೇ ಆಗಿದ್ದರೂ, ಅನ್ಯಾಯ, ವಂಚನೆ ಮಾಡಿದರೂ ಅವನ ಸೇವೆ ಮಾಡಿಕೊಂಡಿರುವಂತಹ ಧರ್ಮ ಅವಳಿಗೆ ಕರ್ತವ್ಯವಾಗಿತ್ತು. ಹಿಂದುಗಳಲ್ಲಿ ಧರ್ಮದ ಪರಿಕಲ್ಪನೆ ಅತ್ಯಂತ ಮಹತ್ತ್ವಪೂರ್ಣವಾಗಿದ್ದು, ಪ್ರತಿಯೊಬ್ಬ ಹಿಂದು ಪುರುಷ ಹಾಗೂ ಮಹಿಳೆಯ ಜೀವನದಲ್ಲಿ ಹಾಸುಹೊಕ್ಕಾಗಿದೆ. ಹಿಂದೂ ಧರ್ಮದಲ್ಲಿರುವ ಆಧ್ಯಾತ್ಮಿಕ ಪದ್ಧತಿ ಹಾಗೂ ಬೌದ್ಧಿಕ ಪರಿಕಲ್ಪನೆಗಳು ದೀರ್ಘಾವಧಿಯಿಂದಲೂ ಪರೋಕ್ಷವಾಗಿ ಮಹಿಳೆಯ ಗೌರವವನ್ನು ಕೆಳಮಟ್ಟಕ್ಕಿಳಿಸಿ ಕ್ಷಯಿಸುವಂತೆ ಮಾಡಿವೆ.

ಹಿಂದೂ ತತ್ವಜ್ಞಾನದ ಮಹಾ ಅಧ್ಯಯನಕಾರ ಅದ್ವೈತ ಪಂಥದ ಹರಿಕಾರ, ಸಂನ್ಯಾಸಿ ಆದಿ ಶಂಕರಾಚಾರ್ಯರು ತತ್ತ್ವಶಾಸ್ತ್ರಜ್ಞೆಯರಾದ ಮಿಥಿಲೆಯ ಭಾರತಿಯನ್ನು ಮತ್ತು ಪ್ರಖ್ಯಾತ ತತ್ವಶಾಸ್ತ್ರಜ್ಞ ಮಂಡನಮಿಶ್ರನ ಹೆಂಡತಿಯನ್ನು ಭೇಟಿಯಾಗಿ ತಾತ್ವಿಕ ಸೈದ್ಧಾಂತಿಕ ಚರ್ಚೆಗಳನ್ನು ನಡೆಸಿದ್ದರು. ಅದಾಗ್ಯೂ ಹೆಣ್ಣನ್ನು "ನರಕದ ಹೆಬ್ಬಾಗಿಲು" ಎಂದು ಕರೆದಿದ್ದರು. ದೇವಿ ಭಾಗವತದಲ್ಲಿ ಮಹಿಳೆಯರು ವೇದಾಧ್ಯಯನ ಮಾಡಬಾರದೆಂದೇ ಹೇಳಲಾಗಿದೆ. ಹಿಂದೂ ಧರ್ಮದ ಸುದೀರ್ಘವಾದ ಇತಿಹಾಸದಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಅನೇಕ ಬದಲಾವಣೆಗಳನ್ನು ತರಲಾಗಿದೆ. ಆದರೆ ಪ್ರಾರಂಭದಿಂದಲೂ ಮಹಿಳೆಯನ್ನು ಕಡೆಗಣಿಸುವುದನ್ನು ಮಾತ್ರ ಕೃತಿಗಳಲ್ಲಿ, ಹಾಡುಗಳಲ್ಲಿ, ಆಧ್ಯಾತ್ಮಿಕ ಪರಿಕಲ್ಪನೆಗಳಲ್ಲಿ ಅನೂಚಾನವಾಗಿ ಮುಂದುವರಿಸಿಕೊಂಡೇ ಬರಲಾಗುತ್ತಿದೆ. ಧಾರ್ಮಿಕ ನಂಬಿಕೆಗಳು, ಆಧ್ಯಾತ್ಮಿಕ ಪರಿಕಲ್ಪನೆಗಳು, ನೈತಿಕ ಮೌಲ್ಯಗಳು, ಸಿದ್ಧಾಂತಗಳು ಹಾಗೂ ಶಾಸನಕರ್ತನಾದ ಮನುವಿನ ನಿಯಮಗಳೆಲ್ಲದರ ಪರಿಣಾಮವಾಗಿ ಮಹಿಳೆಯರು ಮುಕ್ತ ನಾಗರಿಕರಾಗಿ ಅಥವಾ ವ್ಯಕ್ತಿಶಃವಾಗಿ ತಮ್ಮ ಸ್ವಂತ ಹಕ್ಕುಗಳನ್ನು ಚಲಾಯಿಸಬಲ್ಲ, ಸ್ವತಂತ್ರ ಸಾಮಾಜಿಕ-ಆರ್ಥಿಕ ಸ್ಥಾನಮಾನವನ್ನು ಒಟ್ಟಾರೆಯಾಗಿ ಕಳೆದುಕೊಂಡು ಬಿಟ್ಟಿದ್ದರು. ಅವರಿಗೆ ಸಾಮಾಜಿಕ, ಆರ್ಥಿಕ ಅಥವಾ ರಾಜಕೀಯವಾಗಿ ಯಾವುದೇ ಹಕ್ಕುಗಳೇ ಇಲ್ಲವೆಂಬುದು ಸಾಮಾನ್ಯ ನಂಬಿಕೆಯಾಗಿಬಿಟ್ಟಿತು. ಚಂದ್ರಗುಪ್ತ ಮೌರ್ಯ, ಅಶೋಕ ಚಕ್ರವರ್ತಿ ಮತ್ತಿತರರ ಕಾಲಕ್ಕೆ ಸ್ತ್ರೀಯರು ಕಳೆದುಕೊಂಡಿದ್ದ ಸ್ವಾತಂತ್ರ್ಯ ಹಾಗೂ ಸ್ಥಾನಮಾನವನ್ನು ಮತ್ತೆ ಪಡೆದುಕೊಂಡರು. ಆ ಕಾಲದಲ್ಲಿ ಮಹಿಳಾ ನ್ಯಾಯಾಧೀಶರಿದ್ದರು. ವ್ಯಾಜ್ಯವೊಂದರಲ್ಲಿ ನ್ಯಾಯ ವಿಚಾರಣೆ ಮತ್ತು ನಿರ್ಣಯ ನೀಡುವ ಜವಾಬ್ದಾರಿಯನ್ನು 'ವಿಶಾಖಾ' ಎಂಬ ಹೆಸರಿನ ಮಹಿಳೆಗೆ ಸ್ವತಃ ಬುದ್ಧನೇ ನೀಡಿದ್ದ ಬಗ್ಗೆ ಉಲ್ಲೇಖಗಳಿವೆ.

ಜೈನ ಹಾಗೂ ಬೌದ್ಧಧರ್ಮಗಳ ಕಾಲದಲ್ಲಿ ಮಹಿಳೆಯರು ಹೊಂದಿದ್ದ ಸ್ಥಾನಮಾನ

ಇವೆರಡು ಧರ್ಮಗಳ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಕೆಲವೊಂದು ಸಕಾರಾತ್ಮಕ(positive changes) ಬದಲಾವಣೆಗಳಾಗಿದ್ದ ಬಗ್ಗೆ ತಿಳಿದುಬರುತ್ತದೆ. ಧಾರ್ಮಿಕ ಕ್ಷೇತ್ರದಲ್ಲಿ ಹೆಣ್ಣಿಗೆ ಉನ್ನತಸ್ಥಾನ ನೀಡಲಾಗಿತ್ತು. ಸಂನ್ಯಾಸ ಸ್ವೀಕರಿಸಲು ಸ್ತ್ರೀಗೆ ಸ್ವಾತಂತ್ರ್ಯ ನೀಡಲಾಯಿತು. "ಜೈನ ಹಾಗೂ ಬೌದ್ಧಧರ್ಮಗಳು "ಹಸಿದ ಆತ್ಮ ಅದು ಹೆಣ್ಣಿನದಿರಲಿ ಅಥವಾ ಗಂಡಿನದಿರಲಿ ಪಾರಮಾರ್ಥಿಕ ಆಹಾರಕ್ಕೆ ಅರ್ಹವಾದದ್ದು" ಎಂದು ಹೇಳಿವೆ. ಜಾತಕ ಕಥೆಗಳಲ್ಲಿ "ಚಂದನ" ಎಂಬ ಸಂನ್ಯಾಸಿನಿಯರ ಸಂಘಟನೆ ಬಗ್ಗೆ ಹಾಗೆಯೇ ನಿರ್ಗಾಮಿಕಾ, ಪ್ರಿಯಾದಂಸನ್ (ಮಹಾವೀರನ ಮಗಳು) ಮೊದಲಾದವರ ಉಲ್ಲೇಖಗಳಿವೆ. 'ಪುಷ್ಪಚೂಲ' ಎಂದು ಕರೆಯಲಾಗುತ್ತಿದ್ದ ಮಹಿಳಾ ಭಿಕ್ಷುಗಳ ಬಗ್ಗೆ ಕಲ್ಪಸೂತ್ರದಲ್ಲಿ ಹೇಳಲಾಗಿದೆ. ಬುದ್ಧನ ಕಾಲದಲ್ಲಿ ಈ ಮಹಿಳಾ ಭಿಕ್ಷುಗಳನ್ನು ಥೇರಿ ಎಂದರೆ ಹಿರಿಯಕ್ಕ(Elder Lady) ಎಂದು ಕರೆಯಲಾಗುತ್ತಿತ್ತು.

ಥೇರಿಗಾಥಾ, ಥೇರಿಯರ ಹಾಡುಗಳು ಅವರ ಸೂಕ್ಷ್ಮದೃಷ್ಟಿ ಮತ್ತು ಅಪಾರ ಪರಿಜ್ಞಾನವನ್ನು ತಿಳಿಸುವ ಅದ್ಭುತ ಚರಿತ್ರೆಗಳಾಗಿವೆ.

ಜೈನಧರ್ಮದ ಆಚಾರ್ಯರು ಮಹಿಳೆಯ ಆಸ್ತಿ ಅಧಿಕಾರಕ್ಕೆ ಬೆಂಬಲ ಸೂಚಿಸಿದ್ದರು. ಜೈನ ಶಾಸನದಲ್ಲಿ ವಿಧವೆಗೆ ಆಸ್ತಿಯ ಸಂಪೂರ್ಣಾಧಿಕಾರ ಹಾಗೂ ಅದನ್ನು ಹೊಂದಿರುವ ಅಥವಾ ಮಾರಾಟಮಾಡುವ ಅಧಿಕಾರ ನೀಡಲಾಗಿತ್ತು. ದತ್ತಕಕ್ಕೆ ಸಂಬಂಧಿಸಿದಂತೆ ಸ್ತ್ರೀಪುರುಷರಿಬ್ಬರಿಗೂ ಸಮಾನ ಅಧಿಕಾರವಿತ್ತು ಎಂಬುದಾಗಿ ತಿಳಿದುಬರುತ್ತದೆ. ವಿಧವೆಗೆ ತನ್ನ ಗಂಡನ ಆಸ್ತಿಯನ್ನು ಪಡೆಯುವ ಹಕ್ಕು ಇದ್ದಿತು.

ಆದರೆ ದುರದೃಷ್ಟವಶಾತ್ ಮಧ್ಯಕಾಲೀನ ಯುಗದಲ್ಲಿ ಸ್ತ್ರೀಯರ ಸ್ಥಾನಮಾನದಲ್ಲಿ ಮತ್ತೆ ಅವನತಿ ಯುಂಟಾಯಿತು. ಎಂಟನೇ ಶತಮಾನದಲ್ಲಿ ಮೊಟ್ಟ ಮೊದಲಬಾರಿಗೆ ಭಾರತದ ಮೇಲೆ ಮುಸ್ಲಿಮರ ಆಕ್ರಮಣವಾಯಿತು. ನಂತರ ಹನ್ನೊಂದನೇ ಶತಮಾನದಲ್ಲಿ ಮತ್ತೊಮ್ಮೆ ಮುಸ್ಲಿಂ ಆಕ್ರಮಣವಾಗಿ ಘಜನಿ ಮಹಮ್ಮದನು ವಿಜಯಿಯಾದನು. ಇವೆರಡು ಆಕ್ರಮಣಗಳ ನಡುವಣ ಅವಧಿಯಲ್ಲಿ ಭಾರತೀಯ ಸಮಾಜದಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದವು. ಇದೇ ವೇಳಗೆ ಬೌದ್ಧಧರ್ಮದ ಪ್ರಭಾವವನ್ನು ತಡೆಯಲು ಶಂಕರಾಚಾರ್ಯರು ವೇದಗಳ ಪರಮಾಧಿಕಾರವನ್ನು ಸ್ಥಾಪಿಸ ಹೊರಟಿದ್ದರು. ಅಂತೂ ಹರ್ಷವರ್ಧನನ ಸಾವಿನೊಂದಿಗೆ ಬೌದ್ಧಧರ್ಮವೇ ಕಣ್ಮರೆಯಾಯಿತು. ಮತ್ತೊಮ್ಮೆ ವೈದಿಕ ಧರ್ಮ ಪ್ರಬಲವಾಗಿ ಜಾತಿನಿಯಮಗಳು ಆಚರಣೆಯಲ್ಲಿ ಬಂದವು. ಸಂಪೂರ್ಣವಾಗಿ ಭಾರತಕ್ಕೆ ಮಿತಾಕ್ಷರ ಶಾಸನವನ್ನು ಬಂಗಾಲ, ಅಸ್ಸಾಂ, ತ್ರಿಪುರ ಮತ್ತು ಮಣಿಪುರಗಳಲ್ಲಿ ಮಾತ್ರ ದಾಯಭಾಗ ಶಾಸನವನ್ನು ಅನ್ವಯಿಸಿದ್ದರಿಂದ ಸ್ತ್ರೀಯರ ಸ್ಥಾನಮಾನ ಇಳಿಯಿತು. ಮುಸ್ಲಿಮರ ಆಕ್ರಮಣ ಹಾಗೂ ವೈದಿಕ ಧರ್ಮದ ನಿಯಮಗಳ ಬಿಗಿಹಿಡಿತದಿಂದಾಗಿ ಮಹಿಳೆಯರ ಜೀವನದಲ್ಲಿ ಅನೇಕ ಬದಲಾವಣೆಗಳಾದವು. ಬಾಲ್ಯವಿವಾಹ, ಪರದಾ ಪದ್ಧತಿ, ಸತಿಪದ್ಧತಿ ಸಾಮಾನ್ಯವಾದವು. ಸ್ತ್ರೀಯರಿಗೆ ಅಕ್ಷರಜ್ಞಾನ ಪಾಪಕಾರಿ ಯಾಯಿತು. ಶಿಕ್ಷಣದ ರಹದಾರಿಯಾಗಿದ್ದ ಉಪನಯನವನ್ನು ನಿರಾಕರಿಸಲಾಗಿತ್ತು. ವಿಧವಾ ವಿವಾಹ ಅಥವಾ ಅತ್ತಿಗೆ ಮೈದುನ ವಿವಾಹ(Levirate)ಗಳನ್ನು ತಿರಸ್ಕರಿಸಲಾಯಿತು. ಬಾಲವಿಧವೆಯರ ಕರುಣಾಜನಕ ಸ್ಥಿತಿ ಹಾಗೂ ವಿಧವಾ ವಿವಾಹದ ಮೇಲಿನ ನಿಷೇಧದಿಂದಾಗಿ ವೇಶ್ಯಾವೃತ್ತಿ ಸಾಮಾನ್ಯವಾಗ ತೊಡಗಿತು. ಕೆಲವೊಮ್ಮೆ ವೇಶ್ಯೆಯರನ್ನು ದೇವಾಲಯದ ಸೇವೆಗೆ ಆಹ್ವಾನಿಸಲಾಗುತ್ತಿತ್ತು. ಪರಿಣಾಮವಾಗಿ, ದೇವದಾಸಿ ಪದ್ಧತಿ ಬೆಳೆದು ಬಂದಿತು.

ದೇವಾಲಯ ನರ್ತಕಿಯರಲ್ಲಿ ಬಹುಮಟ್ಟಿಗೆ ಈ ವೇಶ್ಯೆಯರ ವರ್ಗದಿಂದಲೇ ಬಂದವರು. ಬಡ ತಾಯ್ಮಂದಿಯರು ತಮ್ಮ (ವಿವಾಹವಾಗದ) ನತದೃಷ್ಟ ಹೆಣ್ಣು ಮಕ್ಕಳನ್ನು ದೇವಾಲಯಗಳಲ್ಲಿ ಸೇವೆಗಾಗಿ

ಬಿಡುತ್ತಿದ್ದರು. ಕೆಲವೊಮ್ಮೆ ಧರ್ಮಶ್ರದ್ಧೆಯಿಂದ, ಹರಕೆ ಸಲ್ಲಿಸಲೂ ಸಹ ಪ್ರಥಮ ಪುತ್ರಿಯನ್ನು ಹೀಗೆ 'ದೇವರಿಗೆ' ಬಿಡುವ ಸಂಪ್ರದಾಯ ಬೆಳೆಯಿತು. ರಾಜಾಶ್ರಯಗಳಲ್ಲಿದ್ದ ವೇಶ್ಯೆಯರು ಸಕಲ ಕಲಾ ಪ್ರವೀಣೆಯರಾಗಿದ್ದ ಬಗ್ಗೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಆದರೆ ಇದು ಕಾಲಕ್ರಮೇಣ 'ಸೂಳೆಯರ ಜಾತಿ'ಯಾಗಿ ಪರಿವರ್ತಿತವಾದದ್ದು ದುರಂತದ ಸಂಗತಿ. ಒಟ್ಟಾರೆ ಹೇಳುವುದಾದರೆ ಈ ಕಾಲದಲ್ಲಿ ಸತಿಪದ್ಧತಿ, ಜೋಹಿರ್, ಬಾಲ್ಯವಿವಾಹ, ದೇವದಾಸಿ ಪದ್ಧತಿ, ವಿಧವಾವಿವಾಹ ನಿಷೇಧ, ಶಿಕ್ಷಣ ನಿರಾಕರಣೆ ಇತ್ಯಾದಿ ಅಂಶಗಳು ಮಹಿಳೆಯರ ಜೀವನವನ್ನು ನರಕ ಸದೃಶವಾಗಿಸಿದವು. ಪುರುಷನ ಜೊತೆ ಜೊತೆಗೆ ಸಮಾನವಾಗಿರುತ್ತಿದ್ದ ಮಹಿಳೆಯರ ಸಾಮಾಜಿಕ ಜೀವನದ ಏರುಪೇರು ಅವಳ ಅಂತರಂಗದ ಏಕಾಂಗಿತನಕ್ಕೆ, ಮಾನಸಿಕ ಕ್ಷೋಭೆಗೆ ಕಾರಣವಾಗಿ ಬರುಬರುತ್ತ ಆಕೆ ಎಲ್ಲವನ್ನು ಒಪ್ಪಿಕೊಳ್ಳುವ, 'ಇಟ್ಹಾಂಗೆ ಇರುವ' ಸಂಕೀರ್ಣ ಪರಿಸ್ಥಿತಿಗೆ ಒಗ್ಗಿಕೊಳ್ಳತೊಡಗಿದ್ದು ಅನಿವಾರ್ಯವಾಯಿತು.

ಸ್ವಾತಂತ್ರ್ಯ ಪೂರ್ವದ ಬ್ರಿಟಿಷರ ಕಾಲದಲ್ಲಿ ಮಹಿಳೆಯರ ಸ್ಥಾನ

ಭಾರತದಲ್ಲಿ ಬ್ರಿಟಿಷರ ಆಡಳಿತ ಕೇವಲ ರಾಜಕೀಯ, ಆಡಳಿತ ಮಾತ್ರದ್ದಾಗದೆ ಭಾರತೀಯ ಅರ್ಥವ್ಯವಸ್ಥೆ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಭಾವನೆಗಳಲ್ಲಿ ಅತ್ಯಂತ ತೀವ್ರ ಪರಿಣಾಮಕಾರಿ ಬದಲಾವಣೆಗಳನ್ನುಂಟು ಮಾಡಿತು. ಬ್ರಿಟಿಷರು ರೂಢಿಗೆ ತಂದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ ಭಾರತದ ಆರ್ಥಿಕ ಪದ್ಧತಿಯ ಮೇಲೆ ಮಾತ್ರವಲ್ಲ ಸಾಮಾಜಿಕ ಸಂರಚನೆಯ ಮೇಲೆ ಅಗಾಧ ಪ್ರಭಾವ ಬೀರಿತು. ಅನಿವಾರ್ಯ ಇಂಗ್ಲಿಷ್ ಕಲಿಕೆ ಭಾರತೀಯ ಶಿಕ್ಷಣವ್ಯವಸ್ಥೆಯನ್ನೇ ಅಲುಗಾಡಿಸಿತು. ಬರುಬರುತ್ತ ಇಂಗ್ಲಿಷ್ ಭಾಷೆಯ ಬಳಕೆ ವ್ಯಾಪಕವಾಗುತ್ತ ಬಂದಂತೆ ಜನರಲ್ಲಿ ವ್ಯಾವಹಾರಿಕಜ್ಞಾನ ಬದಲಾಗಿ ಉತ್ಪಾದನಾರಂಗ ಉದಾರೀಕರಣದ(Liberalisation) ಭಾವನೆ ಮೂಡಲಾರಂಭಿಸಿತು. ತತ್ಪರಿಣಾಮವಾಗಿ ಸ್ವಾತಂತ್ರ್ಯ, ವ್ಯಕ್ತಿಗೌರವ, ಸಮಾನತೆ, ಧರ್ಮಾತೀತತೆ ಮುಂತಾದ ಸಾಮಾಜಿಕ ಮೌಲ್ಯಗಳು ಸ್ಥಾಪಿತವಾದವು. ಈ ಹಿಂದೆ ಇವು ಭಾರತದಲ್ಲಿರಲಿಲ್ಲವೆಂದಲ್ಲ. ನಡುವೆ ಅಧೋಗತಿಯಾಗಿದ್ದ ಹಳೆಯ ಮೌಲ್ಯಗಳು ಪುನಃ ಸ್ಥಾಪನೆಯಾದವೆನ್ನಬಹುದು. ಆದರೆ, ಅವು ವಿದೇಶಿಯರ ರಾಜ್ಯಭಾರ, ಭಾಷೆ, ಆಲೋಚನೆಗಳ ಪರಿಣಾಮವಾಗಿ ನಡೆದದ್ದು ವಿಶೇಷವೆಂದು ತಿಳಿಯಬೇಕು. ಅಷ್ಟೇ ಅಲ್ಲ, ಈ ಕಾಲದಲ್ಲಿ ಸ್ತ್ರೀಯರ ಸ್ಥಾನಮಾನದ ಮೇಲೂ ಅದ್ಭುತ ಪರಿಣಾಮ ಬೀರಿದ ಎರಡು ಪ್ರಮುಖ ಚಳವಳಿಗಳೂ ನಡೆದವು. ಅವುಗಳೆಂದರೆ ಹತ್ತೊಂಬತ್ತನೇ ಶತಮಾನದ ಸಮಾಜ ಸುಧಾರಣಾ ಚಳವಳಿಗಳು ಮತ್ತು ಇಪ್ಪತ್ತನೇ ಶತಮಾನದ ರಾಷ್ಟ್ರೀಯ(ಸ್ವಾತಂತ್ರ್ಯ) ಚಳವಳಿ. ಇವೆರಡೂ ಚಳವಳಿಗಳು ಮಹಿಳೆಯರ ಸರಿಸಮಾನ ಅಂತಸ್ತು, ಸ್ಥಾನಮಾನಗಳನ್ನು ಪ್ರಮುಖವಾಗಿ ಬದಲಿಸಿದ ಪ್ರಶ್ನೆಗಳನ್ನು ಆಧರಿಸಿದ್ದವು.

ಸಮಾಜ ಸುಧಾರಣಾ ಚಳವಳಿಯನ್ನು "ಆಧುನಿಕ ಭಾರತದ ನಿರ್ಮಾಣಕ್ಕೆ ಕಾರಣವಾದ ಬೌದ್ಧಿಕ ಕಾರ್ಯವಿಧಾನಗಳ ಕೀಲಿಕೈ"[೨೩] ಎಂದು ಭಾವಿಸಲಾಗಿದೆ. ರಾಜಾರಾಂ ಮೋಹನರಾಯ್, ಈಶ್ವರ ಚಂದ್ರ ವಿದ್ಯಾಸಾಗರ್, ಕೇಶವ್ ಚಂದ್ರಸೇನ್, ಎಂ.ಜಿ.ರಾನಡೆ, ದಯಾನಂದ ಸರಸ್ವತಿ,, ಮಹಾತ್ಮ ಜ್ಯೋತಿರಾವ್ ಫುಲೆ, ರಾವ್ ಬಹಾದ್ದೂರ್ ಬೆಹರಾಂಜೀ ಮಲಬಾರಿ, ಡಿ.ಜಿ.ಕಾರ್ವೆ, ಅನಿಬೆಸೆಂಟ್, ಸರೋಜಿನಿನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಮಾರ್ಗರೆಟ್ ಕಸಿನ್ಸ್, ಪಂಡಿತಾ ರಮಾಬಾಯಿ, ರೇಣುಕಾರಾಯ್, ಸರಳಾದೇವಿ ಮುಂತಾದ ಧೀಮಂತ ವ್ಯಕ್ತಿಗಳು ಮಹಿಳೆಯರಿಗಾಗುತ್ತಿದ್ದ ಅನ್ಯಾಯಗಳ ಬಗ್ಗೆ ಜಾಗೃತಿ ಮೂಡಿಸಿ ಅವುಗಳನ್ನು ತೊಡೆದುಹಾಕಲು ಬಯಸಿದ್ದರು. ಮುಖ್ಯವಾಗಿ ಸತಿ, ಬಾಲ್ಯವಿವಾಹ, ವಿಧವಾ ವಿವಾಹದ ಮೇಲಿದ್ದ ನಿಷೇಧ, ಶಿಕ್ಷಣ ಮತ್ತು ಆಸ್ತಿ ಹಕ್ಕು ನಿರಾಕರಣೆ ಮುಂತಾದವು ಈ ಸಮಾಜ ಸುಧಾರಕರ ಗಮನ ಸೆಳೆದಿದ್ದ ಸಮಸ್ಯೆಗಳಾಗಿದ್ದವು. ಸ್ತ್ರೀ ಶಿಕ್ಷಣ ಹಾಗೂ ಪ್ರಗತಿಪರ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಸಮಾಜವನ್ನು ಪರಿವರ್ತಿಸಲು ಅವರು ಆಲೋಚಿಸಿದ್ದರು. ಸ್ತ್ರೀಯರ ಶಿಕ್ಷಣದ ಕಲ್ಪನೆ ಬ್ರಿಟಿಷ್ ಆಡಳಿತದ ಮಹತ್ವದ ಪರಿಣಾಮವೆನ್ನಬಹುದು. ಕ್ರೈಸ್ತ ಮಿಷನರಿಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡಿದರು. ೧೮೨೪ರಲ್ಲಿ ಬೊಂಬಾಯಿಯಲ್ಲಿ ಮೊಟ್ಟ ಮೊದಲು ಸ್ತ್ರೀಯರಿಗೆಂದೇ ಶಾಲೆಯನ್ನು ತೆರೆಯಲಾಯಿತು. ೧೮೪೯ರಲ್ಲಿ ಕಲ್ಕತ್ತಾದಲ್ಲಿ ಬೆಥುನೆಶಾಲೆಯು ಪ್ರಾರಂಭವಾಯಿತು. ಲಾರ್ಡ್ ಡಾಲ್ ಹೌಸಿಯು ಸರ್ಕಾರದ ಬೆಂಬಲವನ್ನು ಘೋಷಿಸಿದ್ದನಲ್ಲದೆ ೧೮೩೫ರಲ್ಲಿ ಚಾರ್ಲ್ ಮೆಕಾಲೆ ಸ್ತ್ರೀ ಶಿಕ್ಷಣ ವಿಧೇಯಕವನ್ನು ಅನುಮೋದಿಸಿದ್ದನ್ನು ಬ್ರಿಟಿಷ್ ಸರ್ಕಾರದ ಕಾರ್ಯನೀತಿಯಲ್ಲಿನ ಸ್ತ್ರೀ ಶಿಕ್ಷಣದ ಅವಶ್ಯಕತೆಯನ್ನು ವುಡ್‌ರ ಸರ್ಕಾರಿ ರಾಜಪತ್ರದಲ್ಲಿ (ಗೆಜೆಟ್)ಕೂಡ ಉಲ್ಲೇಖಿಸಲಾಗಿತ್ತು. ಹಂಟರ್ ಆಯೋಗದಲ್ಲೂ ಮಹಿಳಾ ಶಿಕ್ಷಣದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ೧೮೮೨ರ ನಂತರ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಅವಕಾಶವೂ ಪ್ರಾಪ್ತವಾಯಿತು. ೧೯೧೬ರಲ್ಲಿ ಪೂನಾದಲ್ಲಿ ಸ್ತ್ರೀಯರ ಶಿಕ್ಷಣಕ್ಕಾಗಿ ಪ್ರತ್ಯೇಕವಾಗಿ ಮಹಿಳಾ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಸ್ತ್ರೀಯರಲ್ಲಿ ಸಾಕ್ಷರತೆಯ ಪ್ರಮಾಣದ ಬೆಳವಣಿಗೆಯನ್ನು ಸ್ಥೂಲವಾಗಿ ಹೀಗೆ ಗುರುತಿಸಲಾಗಿದೆ :

೧೯೦೧ - ಶೇ.೦೬

೧೯೩೧ - ಶೇ ೨.೯೩

೧೯೪೧ - ಶೇ ೭.೩೦

೧೯೯೧ - ಶೇ ೩೯.೪೨

೨೦೦೧ -

ಸಮಾಜ ಸುಧಾರಕರ ಅವಿರತ ಸಾಹಸದಿಂದಾಗಿ ಹಾಗೂ ಬ್ರಿಟಿಷ್ ಅನಂತರ ಭಾರತ ಸರ್ಕಾರಗಳ ಪ್ರಯತ್ನದಿಂದಾಗಿ ಮಹಿಳೆಯರ ಕತ್ತಲದಿನಗಳು ಕರಗಿ ಜ್ಞಾನದ ಬೆಳಕಿನ ಜೀವನ ಆರಂಭವಾಯಿತೆನ್ನಬಹುದು.

ಇದರ ಪರಿಣಾಮವಾಗಿ ವಿವಾಹ ವಯಸ್ಸಿನ ಏರಿಕೆ, ಸತಿಪದ್ಧತಿಯ ನಿವಾರಣೆ, ಮಹಿಳಾ ಉದ್ಯೋಗಾವಕಾಶಗಳುಂಟಾಯಿತು. ಎರಡನೇ ಮಹಾಯುದ್ಧ ಕೂಡ ಒಂದು ರೀತಿಯಿಂದ ಮಹಿಳೆಯರ ಅಂತಸ್ತಿನ ಸುಧಾರಣೆಗೆ ಕಾರಣವಾಯಿತೆನ್ನ ಬಹುದು. ಪುರುಷರನ್ನು ಯುದ್ಧಕ್ಕೆ ಆಹ್ವಾನಿಸಿದ್ದರಿಂದ ವಿಭಿನ್ನ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಉದ್ಯೋಗಾ ವಕಾಶಗಳು ದೊರೆತವು. ಮಹಿಳೆಯರ ಸರ್ವತೋಮುಖ ಪ್ರಗತಿಗೆ ಸಮಾಜ ಸುಧಾರಕರ ಪ್ರಯತ್ನ, ಸಾಹಸಗಳು ಅತಿಮಹತ್ತ್ವದ ವಿಷಯವಾಗಿರುವುದರಿಂದ ಈ ಬಗ್ಗೆ ಮುಂದಿನ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗಿದೆ.

ಮಹಿಳೆಯರ ಬಗೆಗಿನ ಗೌರವದ ಅಭಿಪ್ರಾಯ ಹಾಗೂ ಅವರ ಸ್ಥಾನಮಾನದಲ್ಲಿ ಬದಲಾವಣೆಯನ್ನು ತಂದ ಮತ್ತೊಂದು ಪ್ರಬಲ ಚಳವಳಿಯೆಂದರೆ ಗಾಂಧೀಜಿಯವರ ನಾಯಕತ್ವದಲ್ಲಿ ನಡೆದ ರಾಷ್ಟ್ರೀಯ ಚಳವಳಿ(National Movement). ಗಾಂಧೀಜಿಯವರು ಕೇವಲ ರಾಜಕೀಯ ನೇತಾರರಷ್ಟೇ ಅಲ್ಲದೆ ಸಮಾಜದ ಅನಿಷ್ಟ ವ್ಯವಸ್ಥೆಗಳನ್ನು ಕಟುವಾಗಿ ಟೀಕಿಸುವ ಟೀಕಾಕಾರರೂ ಆಗಿದ್ದರು. ಅವರ ಪ್ರಕಾರ 'ಸಮಾಜವಾದ' ಎಂಬುದೊಂದು[೨೪] ಸುಂದರವಾದ ಶಬ್ದ. ಸಮಾಜವಾದದಲ್ಲಿ ಸಮಾಜದ ಎಲ್ಲ ಸದಸ್ಯರೂ ಸಮಾನರು. ಯಾರೊಬ್ಬ ವ್ಯಕ್ತಿ ಮೇಲಲ್ಲ, ಯಾರೊಬ್ಬರೂ ಕೀಳಲ್ಲ. ವ್ಯಕ್ತಿಯ ದೇಹದಲ್ಲಿ ತಲೆ ಮೇಲ್ಭಾಗದಲ್ಲಿದೆಯಾದ್ದರಿಂದ ಮೇಲಲ್ಲ, ಅಂಗಾಲು ನೆಲಕ್ಕೆ ತಟ್ಟುವುದರಿಂದ ಕೀಳಲ್ಲ. ವ್ಯಕ್ತಿಯ ದೇಹದ ಅಂಗಗಳು ಸಮಾನವಾಗಿರುವಂತೆ ಸಮಾಜದ ಸದಸ್ಯರು ಸಮಾನರು ಇದು ಸಮಾಜವಾದ. ಇದನ್ನು ಮಹಿಳೆ ಮತ್ತು ಪುರುಷರಿಬ್ಬರಿಗೂ ಅನ್ವಯಿಸುತ್ತಾರೆ. ಗಾಂಧೀಜಿ ಬಾಲ್ಯವಿವಾಹ, ವಿಧವಾ ವಿವಾಹ ನಿಷೇಧ, ದೇವದಾಸಿ ಪದ್ಧತಿ, ಪರದಾಪದ್ಧತಿ ಇತ್ಯಾದಿಗಳನ್ನು ತೀವ್ರವಾಗಿ ಖಂಡಿಸಿದರು. ಮಹಿಳೆಯರ ಬಗ್ಗೆ ಗಾಂಧೀಜಿಯವರ ಅಭಿಪ್ರಾಯ ಧಾರ್ಮಿಕ ಮತ್ತು ವೈಚಾರಿಕ ಅಂಶಗಳಿಂದ ಕೂಡಿದ್ದವು. ಹೀಗಾಗಿ ಗಾಂಧೀಜಿಗೆ ಮಹಿಳೆಯ ಆತ್ಮಶಕ್ತಿ, ಸ್ಥೈರ್ಯ ಹಾಗೂ ಸಾಧನೆಯ ಬಗ್ಗೆ ಅಪಾರವಾದ ನಂಬಿಕೆಯಿತ್ತು. ಗಾಂಧೀಜಿಯವರು ನಡೆಸಿದ ಸತ್ಯಾಗ್ರಹಗಳಲ್ಲಿ 'ನಗರದ ಸುಶಿಕ್ಷಿತ ಮಹಿಳೆಯರಷ್ಟೇ ಅಲ್ಲದೆ ಗ್ರಾಮೀಣ ಮಹಿಳೆಯರೂ ಭಾಗವಹಿಸಿದ್ದರು. ಕೆಲವರು ಮುಂದಾಳ್ತನವನ್ನೂ ವಹಿಸಿದ್ದರು. ಸತ್ಯಾಗ್ರಹದಿಂದ ಪ್ರಾರಂಭಿಸಿ ಹರಿಜನರು ಮತ್ತು ಗಿರಿಜನರ ನಡುವಿನ ರಚನಾತ್ಮಕ ಕ್ರಿಯೆ ಹಾಗೂ ವ್ಯವಸ್ಥಿತ ಚುನಾವಣಾ ರಾಜಕೀಯದವರೆಗೆ ಎಲ್ಲ ಹಂತಗಳಲ್ಲೂ ಮಹಿಳೆಯರು ಭಾಗವಹಿಸಿದ್ದರು. ೨೦ನೇ ಶತಮಾನದ ಪ್ರಾರಂಭದಲ್ಲಿ ಉಂಟಾದ ಸ್ತ್ರೀಪರ ಚಳವಳಿಗಳು ಗಾಂಧೀಜಿಯವರ ಸ್ತ್ರೀ ಸ್ವಾತಂತ್ರ್ಯ ಹಾಗೂ ಸಮಾನತೆಯ ಕಲ್ಪನೆಗಳಿಂದಲೇ ಮುಖ್ಯ ಪ್ರೇರಣೆ ಪಡೆದಿದ್ದವು. ೧೯೨೭ರ (ಅಲ್ ಇಂಡಿಯಾ ವಿಮೆನ್ಸ್ ಕಾನ್ಫರೆನ್ಸ್) ಅಖಿಲ ಭಾರತ ಮಹಿಳಾ ಸಮಾವೇಶ ಅತಿ ಪ್ರಮುಖ ಘಟನೆಯಾಗಿತ್ತು. ಗಾಂಧೀಜಿಯವರ ಪ್ರಭಾವದಿಂದಾಗಿ ವಿಮೋಚಿತ ಮಹಿಳೆಯರ(ವಿಮೆನ್ಸ್ ಲಿಬರೇಷನ್) ಸಂಘಟನೆ

ಯಾಯಿತು. ಭಾರತೀಯ ಮಹಿಳೆಯರ ಪುನರುತ್ಥಾನ(RENNAISSANCE)ದಲ್ಲಿ ಇದರ ಪಾತ್ರ ಅತಿ ಮಹತ್ತ್ವದ್ದಾಗಿದೆ. ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿನಾಯ್ಡು, ರೇಣುಕಾರಾಯ್, ರಾಜಕುಮಾರಿ ಅಮೃತ್ ಕೌರ್, ಮೃದುಲಾ ಸಾರಾಭಾಯ್, ಸುಚೇತಾ ಕೃಪಲಾನಿ, ಪದ್ಮಜಾನಾಯ್ಡು, ದುರ್ಗಾಬಾಯಿದೇಶ್ ಮುಖ್, ಅರುಣಾ ಅಸಫ್ ಅಲಿ ಮುಂತಾದ ಸಾವಿರಾರು ಮಹಿಳೆಯರು ರಾಷ್ಟ್ರದ ಶಾಂತಿ ಹಾಗೂ ಸಂಕಷ್ಟಕಾಲಗಳಲ್ಲಿ ಪುರುಷರೊಂದಿಗೆ ಸರಿಸಮಾನವಾಗಿ ದುಡಿದಿರುವುದು ಸರ್ವವಿದಿತ.

ಸ್ವಾತಂತ್ರ್ಯ ಪೂರ್ವ ಬ್ರಿಟಿಷ್ ಆಡಳಿತ ಕಾಲದಲ್ಲಿ ಮಹಿಳೆಯರ ಅಂತಸ್ತು

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯಿದ್ದಾಗ ಹಾಗೂ ಭಾರತ ಆಧುನಿಕ ಯುಗದತ್ತ ಹೆಜ್ಜೆಯಿಟ್ಟ ಸಂಧಿಕಾಲದಲ್ಲಿ ಸ್ತ್ರೀಯರ ಅಂತಸ್ತು(status) ಇನ್ನಷ್ಟು ಮೇಲೇರಲು ಇನ್ನು ನಾಲ್ಕು ಕಾರಣಗಳಿದ್ದವು. ಅವುಗಳೆಂದರೆ,

೧. ಕೈಗಾರೀಕರಣ
೨. ಶಿಕ್ಷಣದ ಪ್ರಸಾರ
೩. ಸ್ತ್ರೀ ಸಂಘಟನೆಗಳ ಬೆಳವಣಿಗೆ ಮತ್ತು
೪. ಸಾಮಾಜಿಕ ಶಾಸನಗಳನ್ನು ರೂಪಿಸಿದ್ದು.

ಸ್ತ್ರೀಯರ ಸ್ಥಾನಮಾನ ಅಂತಸ್ತಿನ ಸುಧಾರಣೆಯಲ್ಲಿ ಮಹಿಳಾ ಸಂಘಟನೆಗಳ ಸಂಸ್ಥೆಗಳ ಪ್ರಾರಂಭ ಹಾಗೂ ಬೆಳವಣಿಗೆ ಮಹತ್ತ್ವದ ಸಂಗತಿಯಾಗುತ್ತದೆ. ಮಹಿಳೆಯರಲ್ಲಿ ಆಧುನಿಕ ಜೀವನ ವಿಧಾನಗಳನ್ನು ಅಳವಡಿಸಿಕೊಳ್ಳಲು ನೆರವಾದ ಬಂಗ ಮಹಿಳಾ ಸಮಾಜ, ಮಹಿಳಾ ಬ್ರಹ್ಮವಿದ್ಯಾ ಸಮಾಜ(Ladies Theosophical society) ಮುಂತಾದ ಸ್ಥಳೀಯ ಸ್ತ್ರೀ ಸಂಘಟನೆಗಳಿದ್ದವು. [೨೫]ರಾಷ್ಟ್ರಮಟ್ಟದಲ್ಲಿ ಐದು ಪ್ರಮುಖ ಸ್ತ್ರೀ ಸಂಘಟನೆಗಳಿದ್ದವು. ಅವುಗಳೆಂದರೆ,

೧. ಭಾರತ್ ಮಹಿಳಾ ಪರಿಷತ್ - ೧೯೦೪ರಲ್ಲಿ ಪ್ರಾರಂಭವಾಯಿತು

೨. ಭಾರತ್ ಸ್ತ್ರೀ ಮಹಾಮಂಡಲ ೧೯೧೦ ರಲ್ಲಿ ಪ್ರಾರಾಂಭವಾಯಿತು

೩. ಭಾರತೀಯ ಸ್ತ್ರೀಸಂಘ(Indian women's Association) ೧೯೧೭ರಲ್ಲಿ ಮದ್ರಾಸ್ ನಲ್ಲಿ ದಕ್ಷಿಣ ಭಾರತದ ಮಹಿಳೆಯರಿಂದ ಪ್ರಾರಂಭವಾಯಿತು.

೪. ಭಾರತದಲ್ಲಿ ಸ್ತ್ರೀಯರ ರಾಷ್ಟ್ರೀಯ ಸಮಿತಿ(National Council of Women in India)- ೧೯೨೫ರಲ್ಲಿ ಲೇಡಿ ಅಬೆರ್ಡೀನ್ ಮತ್ತು ಲೇಡಿ ಟಾಟಾರಿಂದ ಪ್ರಾರಂಭವಾಯಿತು.

೫. ಭಾರತದಲ್ಲಿ ಸ್ತ್ರೀಸಮಿತಿ - (All India women`s conterence) - ೧೯೨೭ರಲ್ಲಿ ಮಾರ್ಗರೆಟ್ ಕಸಿನ್ಸ್ ರಿಂದ ಪ್ರಾರಂಭವಾಯಿತು. ಈ ಸಂಘಟನೆಗಳು ಮುಖ್ಯವಾಗಿ ಸ್ತ್ರೀಶಿಕ್ಷಣ, ಬಾಲ್ಯವಿವಾಹ, ಸತಿಪದ್ಧತಿ, ಪರದಾ ಮುಂತಾದ ಸಾಮಾಜಿಕ ಪಿಡುಗುಗಳ ನಿವಾರಣೆ, ಹಿಂದೂ ಶಾಸನಗಳ

ಮಾರ್ಪಾಡು, ಮಹಿಳೆಯರ ನೈತಿಕ ಹಾಗೂ ಭೌತಿಕ ಪ್ರಗತಿ, ಹಕ್ಕು ಮತ್ತು ಅವಕಾಶಗಳಲ್ಲಿ ಸಮಾನತೆ, ಸ್ತ್ರೀ ಮತಾಧಿಕಾರ ಮುಂತಾದ ವಿಷಯಗಳನ್ನು ಇವುಗಳು ಉದ್ದೇಶವನ್ನಾಗಿ ಇಟ್ಟುಕೊಂಡಿದ್ದವು. ಪ್ರಮುಖ ಗುರಿಗಳೆಂದರೆ:

೧. ಸ್ತ್ರೀಯರನ್ನು ಮೇಲೆತ್ತುವುದು(uplifement women) ಮತ್ತು

೨. ಸ್ತ್ರೀಯರಿಗೆ ಸಮಾನ ಹಕ್ಕುಗಳನ್ನು ದೊರಕಿಸುವುದು.(Equal Rights) ಈ ಮಹಿಳೆಯರಿಗೆ ಸಮಕಾಲೀನ ಸಮಾಜದ ಬುದ್ಧಿಜೀವಿ ಪುರುಷರ ಮಾರ್ಗದರ್ಶನ ಮತ್ತು ಬೆಂಬಲ ದೊರಕಿತ್ತು.

ಇದೇ ಸಮಯದಲ್ಲಿ ಜಾರಿಗೊಳಿಸಲಾದ ಶಾಸನಾತ್ಮಕ ಸುಧಾರಣೆಗಳು ಮಹಿಳೆಯರ ಸ್ಥಾನಮಾನಗಳನ್ನು ಸುಧಾರಿಸಲು ಬಹಳಷ್ಟು ನೆರವಾದವು. ಮುಖ್ಯವಾದ ಕೆಲವು ಶಾಸನಗಳೆಂದರೆ : ೧೮೨೯ರ ಲಾರ್ಡ್ ವಿಲಿಯಂ ಬೆಂಟಿಂಕನಿಂದ ಸತಿಪದ್ಧತಿ ನಿಷೇಧ ಶಾಸನ, ೧೮೫೬ರಲ್ಲಿ ಹಿಂದೂ ವಿಧವಾವಿವಾಹ ಶಾಸನ, ೧೮೭೨ರ ನಾಗರಿಕ ವಿವಾಹ ಶಾಸನ(The civil marraige Act, ೧೮೭೨) ಈ ಮೂಲಕ ವಿವಾಹವನ್ನು ಧರ್ಮಾತೀತ, ಲೌಕಿಕ ಸಮಾರಂಭವೆಂದು ಸೂಚಿಸಿ ವಿವಾಹದ ನೋಂದಣಿಗೆ ಅವಕಾಶ ನೀಡಲಾಯಿತು. ಜೊತೆಗೆ ಹೆಣ್ಣುಮಕ್ಕಳ ವಿವಾಹದ ವಯಸ್ಸನ್ನು ೧೪ಕ್ಕೆ ಏರಿಸಲಾಯಿತಲ್ಲದೆ, ಅಂತರ್ಜಾತೀಯ ವಿವಾಹ ಹಾಗೂ ವಿಧವಾ ವಿವಾಹಕ್ಕೂ ಅನುಮತಿ ನೀಡಲಾಯಿತು. ಇದರಲ್ಲಿ ಏಕಪತಿತ್ವ ಮತ್ತು ಏಕಪತ್ನಿತ್ವವನ್ನು ಶಾಸನ ಸಮ್ಮತ ವಿವಾಹದ ಚೌಕಟ್ಟಿಗೆ ತರಲಾಯಿತು. ಸ್ತ್ರೀಧನದ ವ್ಯಾಪ್ತಿಯನ್ನು ಹೆಚ್ಚಿಸಿದ ೧೮೭೪ರ ವಿವಾಹಿತ ಸ್ತ್ರೀಯರ ಆಸ್ತಿ ಶಾಸನ ಅನೇಕ ಕ್ರಾಂತಿಕಾರಿ ಬದಲಾವಣೆಗಳನ್ನು ತಂದಿತು. ಬೆಹರಾಂಜೀ ಮಲಬಾರಿಯವರ ತೀವ್ರ ಪ್ರಯತ್ನದ ಫಲವಾಗಿ 'ಸಮ್ಮತಿ ಶಾಸನ ೧೮೯೧(consent Act) ಜಾರಿಯಲ್ಲಿ ಬಂದಿತು. ಇದು ವಿವಾಹಕ್ಕೆ ಸಮ್ಮತಿಯ ವಯಸ್ಸನ್ನು ೧೨ಕ್ಕೆ ಏರಿಸಿ, ಶಾಸನದ ಅನುಸಾರ ಕನಿಷ್ಠ ೧೨ ವರ್ಷಕ್ಕೆ ಮುಂಚೆ ಬಾಲಕಿಯರ ವಿವಾಹವನ್ನು ನಿಷೇಧಿಸಿತು. ಬಾಲ್ಯವಿವಾಹ ನಿಷೇಧ ಶಾಸನ ೧೯೨೯(The child marraige Restraint Act, ೧೯೨೯) ಇದನ್ನು ರಾವ್ ಬಹಾದ್ದೂರ್ ಹರ ಬಿಲಾಸ್ ಶರದಾರವರ ಹೆಸರಿನಲ್ಲಿ ಶರದಾ(ಶಾರದ) ಶಾಸನ(sharada Act) ಎಂದು ಕರೆಯಲಾಗಿತ್ತು. ಇದೊಂದು ಅತಿ ಮುಖ್ಯವಾದ ಶಾಸನವಾಗಿದ್ದಿತು. ದೇವದಾಸಿ ಪದ್ಧತಿಯನ್ನು ನಿಷೇಧಿಸಿದ ಮುತ್ತುಲಕ್ಷ್ಮಿರೆಡ್ಡಿ ಬಿಲ್, ೧೯೨೭ ಮತ್ತೊಂದು ಮಹತ್ವದ ಶಾಸನವಾಗಿತ್ತು. ೧೯೩೭ರ ಹಿಂದೂ ಸ್ತ್ರೀಯರ ಆಸ್ತಿ ಅಧಿಕಾರದ ಶಾಸನ ಜಾರಿಯಲ್ಲಿ ಬಂತು. ಇದರಲ್ಲಿ ಹೆಂಡತಿಗೆ ಆಸ್ತಿ ಪರಭಾರೆಯ ಅಧಿಕಾರ ನೀಡದೆ, ಅವಳು ತನ್ನ ಜೀವಿತಾವಧಿಯಲ್ಲಿ ಸಹಭಾಗಿತ್ವದ ಆಸ್ತಿಯ (partner ship proparty) ತನ್ನ ಗಂಡನ ಪಾಲನ್ನು ಅನುಭವಿಸಲು ಹಕ್ಕು ನೀಡಲಾಗಿತ್ತು.

೧೯೪೭ರ ನಂತರದ ಸಾಮಾಜಿಕ ಶಾಸನಗಳು

ರಾಷ್ಟ್ರೀಯ ಹೋರಾಟದ ಮೂಲಕ ಸ್ವಾತಂತ್ರ್ಯದ ಗುರಿಯನ್ನು ಸಾಧಿಸಿದ ಭಾರತದಲ್ಲಿ ರಾಜಕೀಯ ಬದಲಾವಣೆಗಳ ಜೊತೆಗೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೂಡ ಮಹತ್ತರ ಬದಲಾವಣೆಗಳು ಕಂಡುಬರಲಾರಂಭಿಸಿದವು. ಹೀಗಾಗಿ ಮಹಿಳೆಯರ ಅಂತಸ್ತಿನಲ್ಲಿ ಉಂಟಾದ ಮೂಲಭೂತ ಬದಲಾವಣೆಗಳನ್ನು ಸ್ವಾತಂತ್ರ್ಯ ಹೋರಾಟ ಹಾಗೂ ತರುವಾಯದ ಬದಲಾವಣೆಗಳಿಂದಲೇ ಆಯಿತೆಂದು ಖಂಡಿತವಾಗಿಯೂ ಹೇಳಬಹುದಾಗಿದೆ. ಏಕೆಂದರೆ ಸಂವೈಧಾನಿಕ ಕ್ರಮಗಳನ್ನು ಹೊರತುಪಡಿಸಿ ಅನೇಕ ಶಾಸನಗಳನ್ನು ಮಹಿಳೆಯರ ಅಂತಸ್ತಿನಲ್ಲಿ ಬದಲಾವಣೆ ತರಲೆಂದೇ ರೂಪಿಸಲಾಗಿದೆ.

ಭಾರತದ ಸಂವಿಧಾನದ ಪ್ರಸ್ತಾವನೆಯಲ್ಲಿ ಭಾರತದ ಎಲ್ಲ ಪೌರರಿಗೂ ನ್ಯಾಯಿಕ, ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯ, ಆಲೋಚನೆ, ಅಭಿವ್ಯಕ್ತಿ, ನಂಬಿಕೆ, ವಿಶ್ವಾಸ ಹಾಗೂ ಭಕ್ತಿಯ ಸ್ವಾತಂತ್ರ್ಯ, ಸಮಾನ ಸ್ಥಾನಮಾನ ಹಾಗೂ ಅವಕಾಶ, ಮತ್ತು ಪ್ರತಿಯೊಬ್ಬ ವ್ಯಕ್ತಿಯ ಘನತೆ ಹಾಗೂ ರಾಷ್ಟ್ರದ ಏಕತೆ ಹಾಗೂ ಭಾತೃತ್ವ ಖಚಿತಪಡಿಸುವುದನ್ನು ಸೂಚಿಸಲಾಗಿದೆ. ಈ ರಾಷ್ಟ್ರೀಯ ಉದ್ದೇಶಗಳನ್ನು ಸಾಧಿಸಲು ಸಂವಿಧಾನದಲ್ಲಿ ಕೆಲವೊಂದು ಮೂಲಭೂತ ಹಕ್ಕುಗಳು ಎಂದರೆ, ವಾಕ್ ಸ್ವಾತಂತ್ರ, ಜೀವನ ರಕ್ಷಣೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕುಗಳನ್ನು ನೀಡಲಾಗಿದೆ. ಇವುಗಳನ್ನು ಸಕಾರಾತ್ಮಕ(positive) ಹಕ್ಕುಗಳೆಂದು ಕರೆಯಲಾಗಿದ್ದು, ತಾರತಮ್ಯ ನಿಷೇಧ ಅಥವಾ ಸಮಾನರಕ್ಷಣೆಯನ್ನು ಇಲ್ಲವಾಗಿಸುವುದನ್ನು ನಕಾರಾತ್ಮಕ(Negative) ಹಕ್ಕುಗಳೆಂದು ಸೂಚಿಸಲಾಗಿದೆ.[೨೫] ಭಾರತೀಯ ಪುರುಷರಂತೆ ಮಹಿಳೆಯರಿಗೂ ಕೂಡ ಈ ಎಲ್ಲ ಹಕ್ಕುಗಳೂ ಕೂಡ ಸಮಾನವಾಗಿಯೇ ಅನ್ವಯವಾಗುತ್ತವೆ. ಅನುಚ್ಛೇದ ೧೫(೩)ರಲ್ಲಿ ನಿರ್ದಿಷ್ಟ ಉಪಬಂಧವೊಂದನ್ನು ಕಲ್ಪಿಸಲಾಗಿದ್ದು, ಅದರಲ್ಲಿ 'ಲೈಂಗಿಕತೆಯಂಥ ಇತರ ವಿಷಯಗಳೊಂದಿಗೆ ನಾಗರಿಕರ ನಡುವೆ ತಾರತಮ್ಯವಿರಬಾರದೆಂಬ ಮೂಲಭೂತ ಕಡ್ಡಾಯವನ್ನು ಉಲ್ಲಂಘನೆ ಮಾಡಿಯಾದರೂ 'ಮಹಿಳೆಯರು ಮತ್ತು ಮಕ್ಕಳಿಗಾಗಿ'' ಯಾವುದೇ ವಿಶೇಷ ಉಪಬಂಧ ಕಲ್ಪಿಸಲು ರಾಜ್ಯಕ್ಕೆ(ಸರ್ಕಾರಕ್ಕೆ) ಅಧಿಕಾರ ನೀಡಲಾಗಿದೆ. ಇದರಿಂದಾಗಿ ರಾಜ್ಯವು(ಸರ್ಕಾರವು) ಮಹಿಳೆಯರಿಗೆಂದೇ, ನಿರ್ದಿಷ್ಟವಾಗಿ ಕಾರ್ಖಾನೆಗಳ ಅಧಿನಿಯಮ, ಗಣಿಗಾರಿಕೆ ಅಧಿನಿಯಮ ಮುಂತಾದಂಥ ಕಾರ್ಮಿಕ ಕಾನೂನುಗಳಲ್ಲಿ ವಿಶೇಷ ಉಪಬಂಧ ಕಲ್ಪಿಸಲು ಸಾಧ್ಯವಾಯಿತು. ಮಹಿಳಾ ಪರವಾಗಿ ಮಾಡಲಾದ ಇಂತಹ ವಿಶೇಷ ಉಪಬಂಧಗಳಲ್ಲಿ ಅತ್ಯಂತ ಕಟ್ಟುನಿಟ್ಟಾಗಿ ಯಾವುದಕ್ಕೆ ಹೆಚ್ಚು ಮಹತ್ವವೆಂದು ತೂಕಹಾಕುವ ಅವಶ್ಯಕತೆಯೇನಿಲ್ಲವಾದ್ದರಿಂದ, ಪುರುಷನಿಗೆ ವ್ಯಭಿಚಾರಕ್ಕಾಗಿ ಶಿಕ್ಷೆ ವಿಧಿಸಬಹುದು ಆದರೆ ಅದನ್ನು ಮಹಿಳೆಗೂ ಅನ್ವಯಿಸಲಾಗದು ಎಂಬ ಉಪಬಂಧವನ್ನು ಮಹಿಳಾ ಪರವೆಂದು ಹೇಳಲಾಗುವುದಿಲ್ಲ.[೨೬]

ಸಾಮಾಜಿಕ ಶಾಸನಗಳನ್ನು ಗಮನಿಸಿದಾಗ ಹಿಂದೂ ವಿವಾಹ ಶಾಸನ, ೧೯೫೫ನ್ನು ಒಂದು ಮೈಲಿಗಲ್ಲೆಂದು ಹೇಳಲಾಗಿದೆ. ಇದರಲ್ಲಿ ವಿವಾಹದ ಕನಿಷ್ಠ ವಯೋಮಿತಿಯನ್ನು ಹುಡುಗರಿಗೆ ೧೮ ಹಾಗೂ ಹುಡುಗಿಗೆ ೧೫ ವರ್ಷಗಳೆಂದು ನಿಯಮಿಸಲಾಗಿದೆ. ಇದರಲ್ಲಿನ ಕೆಲವು ಮಹತ್ವದ ಅಂಶಗಳು ಹೀಗಿವೆ. ಏಕಪತಿತ್ವ, ಏಕಪತ್ನಿತ್ವ ವಿವಾಹಕ್ಕೆ ಶಾಸನಸಮ್ಮತಿ ನೀಡಲಾಗಿದ್ದು, ೫ ವರ್ಷಗಳವರೆಗೆ ಮಗುವಿಗೆ ತಾಯಿಯ ಪೋಷಕತ್ವ ನೀಡಿದೆ. ವಿವಾಹವನ್ನು ನೋಂದಣಿ ಮಾಡುವುದನ್ನು ಅಗತ್ಯಪಡಿಸಲಾಗಿದೆ. ವಿವಾಹ ವಿಚ್ಛೇದನೆಯ ಕಾರಣಗಳನ್ನು ನಿರ್ದಿಷ್ಟಪಡಿಸಲಾಗಿದ್ದು, ಮಾನಸಿಕ ಹಿಂಸೆಯೂ ಕೂಡ ವಿಚ್ಛೇದನೆಗೆ ಕಾರಣವಾಗಬಹುದೆಂದು ತೀರ್ಪುಗಳನ್ನು ನೀಡಲಾಗಿದೆ. ಹಿಂದೂ ಉತ್ತರಾಧಿಕಾರ ಅಧಿನಿಯಮ, ೧೯೫೬ರಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳೆಗೆ ಆಕೆ ಹೊಂದಿರುವ ಆಸ್ತಿಯ ಮೇಲೆ ಸಂಪೂರ್ಣಾಧಿಕಾರ ನೀಡಲಾಗಿದೆ. ವಿಶೇಷ ವಿವಾಹ ಅಧಿನಿಯಮ, ಹಿಂದೂದತ್ತಕ ಮತ್ತು ಜೀವನಾಂಶ ಅಧಿನಿಯಮ, ೧೯೫೬ ಕುಟುಂಬ ನ್ಯಾಯಾಲಯಗಳ ಅಧಿನಿಯಮ, ೧೯೮೪ ಮುಂತಾಗಿ ಮಹಿಳೆಯರಿಗೆ ಕಾನೂನು ಚೌಕಟ್ಟಿನಲ್ಲಿ ಅನೇಕ ಹಕ್ಕುಗಳನ್ನು, ಅಧಿಕಾರಗಳನ್ನು ನೀಡಲು ಇಂತಹ ಹಲವಾರು ಶಾಸನಗಳನ್ನು, ತರಲಾಗಿದೆ. ಕಾಲಕಾಲಕ್ಕೆ ಅವುಗಳ ತಿದ್ದುಪಡಿಯನ್ನು ಮಾಡುತ್ತಿದ್ದರೂ ಇನ್ನೂ ಮಹಿಳೆಯರಿಗೆ ಸಲ್ಲಬೇಕಾದಷ್ಟು ನ್ಯಾಯವನ್ನು ನ್ಯಾಯಾಲಯಗಳೂ ಸೇರಿ ಒದಗಿಸಲು ಆಗಿಲ್ಲವೆಂಬ ಕಟುಸತ್ಯ ನಮ್ಮ ಕಣ್ಣೆದುರಿಗಿದೆ. ವಾಸ್ತವಿಕವಾಗಿ ಮಹಿಳೆಯರು ಅನುಭವಿಸುತ್ತಿರುವ ಸೌಲಭ್ಯಗಳಿಗೂ ಅವರಿಗೆ ನೀಡಲಾಗಿರುವ ಶಾಸನಾತ್ಮಕ, ರಾಜಕೀಯ, ಆರ್ಥಿಕ ಹಕ್ಕುಗಳಿಗೂ ಸಾಕಷ್ಟು ಅಂತರವಿದೆ. ಸ್ತ್ರೀಯರ ಸ್ಥಾನಮಾನ ಮತ್ತು ಪಾತ್ರಗಳ ಬಗ್ಗೆ ಸಮಾಜದ ಧೋರಣೆಗಳು ಗಮನಾರ್ಹವಾಗಿ ಬದಲಾಗಿಲ್ಲ. ಹೆಂಗಸರ ಬವಣೆ, ನೋವುಗಳ ಬಗ್ಗೆ ಒಣಚರ್ಚೆ, ಬಾಯಿಮಾತು(Lip simpathy) ಇವುಗಳಲ್ಲೇ ಮುಗಿದು ಮಹಿಳೆಯ ಪ್ರಗತಿ ಅಥವಾ ಸಾಧನೆಯನ್ನು ಪತಿ ಅಥವಾ ತಂದೆಯ ಸ್ಥಾನದಿಂದಲೇ ಅಳೆಯಲಾಗುತ್ತದೆ. ಇಂದಿಗೂ ನಮ್ಮ ಸಮಾಜದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಪುರುಷ ಪ್ರಾಧಾನ್ಯತೆಯಿದ್ದು, ಮಹಿಳೆ ಕೇವಲ ಗೌಣ ಸ್ಥಾನವನ್ನೇ ಹೊಂದಿದ್ದಾಳೆ ಎನ್ನಬಹುದು. ಉದಾಹರಣೆಗೆ ಯಾವುದೇ ಕಾರಣದಿಂದ ಪತಿಯಿಂದ ಹಿಂಸೆಗೊಳಗಾದ ಪತ್ನಿ ವಿಚ್ಛೇದನೆ ಪಡೆಯಲು ತಾತ್ವಿಕವಾಗಿ(ಕಾನೂನಿನಲ್ಲಿ) ಸ್ವಾತಂತ್ರ್ಯವಿದೆಯಾದರೂ ಆರ್ಥಿಕ ಅವಲಂಬನೆ, ಶಿಕ್ಷಣದ ಕೊರತೆ, ಹಾಗೂ ಸಮಾಜದ ಅವಹೇಳನೆಯ ಕಾರಣದಿಂದಾಗಿ ಆಕೆ ವಿಚ್ಛೇದನಕ್ಕೆ ತಾನೇ ಮುಂದಾಗದೆ ನರಳುವ ಸಂದರ್ಭಗಳೇ ಹೆಚ್ಚು. ಹೀಗಾಗಿ, ಕಾನೂನುಗಳನ್ನು ಜಾರಿಯಲ್ಲಿ ತರುವುದಷ್ಟೇ ಅಲ್ಲದೆ, ನ್ಯಾಯಾಲಯಗಳಲ್ಲಿ ಮಹಿಳೆಯ ಪರವಾಗಿ(ತಾರತಮ್ಯವಿಲ್ಲದೆ) ಅವುಗಳನ್ನು ಮುಕ್ತವಾಗಿ ತೀರ್ಪು ಬರುವಂತೆ ನಿರೂಪಿಸುವುದು ಅತ್ಯಂತ ಕಠಿಣವಾದ ಹಾಗೂ ಅತ್ಯವಶ್ಯವಾದ ಜವಾಬ್ದಾರಿಯಾಗಿದೆ.

ಮಹಿಳೆಯರ ಸ್ಥಾನಮಾನ ಹಾಗೂ ಪಾತ್ರಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ನಂಬಿಕೆಗಳು, ಸಮೂಹ ಮಾಧ್ಯಮಗಳಲ್ಲಿ ಮಹಿಳೆಯರ ಚಿತ್ರಣ, ಕೆಲವೊಂದು ಸಾಂಪ್ರದಾಯಿಕ ಮಾನಂದಡಗಳು ಹಾಗೂ

ಸಾಮಾಜಿಕ ಮೌಲ್ಯಗಳು ಬದಲಾಗಬೇಕಾದ ಅವಶ್ಯಕತೆಯಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕುಟುಂಬದಲ್ಲಿ ಹಾಗೂ ಕುಟುಂಬದ ಹೊರಗೆ ಪುರುಷರು ಮಹಿಳೆಗೆ ಗೌರವಯುತ ಸ್ಥಾನಮಾನ ನೀಡಬೇಕೆಂಬುದನ್ನು ಮನಗಂಡರೆ, ಮನುಷ್ಯತ್ವವನ್ನು ನಿಜವಾದ ರೀತಿಯಲ್ಲಿ ಮೆರೆದರೆ ಮಹಿಳೆಗೆ ಸಮಸ್ಯೆಗಳೇ ಇಲ್ಲವಾಗಬಹುದೇನೊ! ಇಲ್ಲದಿದ್ದರೆ ಕೇವಲ ಕಾನೂನು, ಸಿದ್ಧಾಂತಗಳ ಮೂಲಕ ಸೈದ್ಧಾಂತಿಕವಾಗಿ ಆಕೆಗೆ ನೀಡಲಾಗಿರುವ ಸ್ವಾತಂತ್ರ್ಯ ವಾಸ್ತವವಾಗುವುದೇ ಇಲ್ಲ.

ಆಧುನಿಕ ಅಥವಾ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬದಲಾದ ಮಹಿಳಾಪರ ದೃಷ್ಟಿಕೋನ

ವಿಶ್ವಸಂಸ್ಥೆಯ ದಾಖಲೆಗಳನ್ನು ಗಮನಿಸಿದರೆ, ಮಹಿಳೆಯರು ಇಡೀ ಜಗತ್ತಿನ ಒಟ್ಟು ಜನಸಂಖ್ಯೆಯ ಅರ್ಧಭಾಗದಷ್ಟಿದ್ದಾರೆ.[೩೨] ಆದರೆ ಅವರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಾನಮಾನವು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಾದ 'ಅಮೆರಿಕ, ಯುಕೆ, ಸೋವಿಯತ್ ಯೂನಿಯನ್ , ಚೀನಾ ಅಥವಾ ಭಾರತ ಎಲ್ಲೆಡೆಯೂ ಪುರುಷರಿಗಿಂತ .ತೀರ ಕೆಳಗಿದೆ.

ನಾವು ಈವರೆಗೂ ಈ ಅಧ್ಯಾಯದಲ್ಲಿ ವಿಶ್ಲೇಷಿಸುತ್ತಿರುವಂತೆ ಇತಿಹಾಸದ ಯಾವುದೇ ಹಂತದಲ್ಲಿ ಯಾವುದೇ ಸಮಾಜದಲ್ಲಿಯೂ 'ಮಾದರಿ ಪಾತ್ರ'ಗಳು ಒಂದೇ ಬಗೆಯದಾಗಿ ಸ್ಥಾಯಿಯಾಗಿಲ್ಲವೆಂಬುದನ್ನು ಕಾಣುತ್ತೇವೆ. ಆಯಾ ಸಮಾಜದ ಆರ್ಥಿಕ ಪರಿಸ್ಥಿತಿ ಹಾಗೂ ರಾಜಕೀಯ ವ್ಯವಸ್ಥೆಗಳಿಗೆ ತಕ್ಕಂತೆ ಈ ಆದರ್ಶ ಅಥವಾ ಮಾದರಿ ಪಾತ್ರಗಳೂ ಕೂಡ ಬದಲಾಗಿವೆ. ಯಾವುದೇ ನಿರ್ದಿಷ್ಟ ಅವಧಿಯಲ್ಲಿನ ಮಹಿಳೆಯರ ಸ್ಥಾನಮಾನಕ್ಕೆ ಸಂಬಂಧಪಡುವ ಮೂಲಭೂತ ಅಂಶಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಕುರಿತ ಸಮಿತಿಯು "ಸಾಮಾಜಿಕ ಮಾದರಿಯಿಂದ ಬೆಳೆಯುವ ಸಾಮಾಜಿಕ ಮನೋವೃತ್ತಿಗಳು ಹಾಗೂ ವ್ಯವಸ್ಥೆಗಳು ಮಹಿಳೆಯರ ಕಾರ್ಯಚಟುವಟಿಕೆಗಳ ವೈವಿಧ್ಯದ ಮೇಲೆ ಅತ್ಯಂತ ಪರಿಣಾಮಬೀರುತ್ತವೆ" ಎಂದು ಅಭಿಪ್ರಾಯಪಟ್ಟಿದೆ.[೩೩] ಇದು ಆರ್ಥಿಕ ಅಭಿವೃದ್ಧಿಯ ವಿವಿಧ ಹಂತಗಳಲ್ಲಿ ವಿಭಿನ್ನವಾಗಬಹುದು. ಉದಾಹರಣೆಗೆ, ಅಭಿವೃದ್ಧಿಯ ಒಂದು ನಿರ್ದಿಷ್ಟ ಹಂತದಲ್ಲಿ ಕೆಲಸ ಮಾಡುವ ಸಾಮರ್ಥ್ಯವು ಸ್ಥಾನಮಾನವನ್ನು ಅತ್ಯಂತ ಉನ್ನತಸ್ತರಕ್ಕೆ ಏರಿಸಲೂ ಸಾಧ್ಯವಿದೆ. ಅಥವಾ ಇದಕ್ಕೆ ವ್ಯತಿರಿಕ್ತವಾಗಿಯೂ ಆಗಬಹುದು. ಜನಸಂಖ್ಯೆಯ ಬಗ್ಗೆ ಹೇಳುವಾಗ ೧೯೮೧ರ ಭಾರತೀಯ ಜನಸಂಖ್ಯಾ ವರದಿಯು ಭಾರತದಲ್ಲಿ ಪುರುಷರ ಸಂಖ್ಯೆಯೇ ಹೆಚ್ಚಿರುವುದನ್ನು ಸೂಚಿಸಿದೆ. ಭಾರತದಲ್ಲಿ ೧೦೦೦ ಜನ ಪುರುಷರಿಗೆ ೯೩೪ ಮಹಿಳೆಯರಿದ್ದಾರೆ. ಅಮೆರಿಕದಲ್ಲಿ ೧೦೫೪ ಹಾಗೂ ೧೦೭೦ ಮಹಿಳೆಯರಿದ್ದಾರೆ.

ಮಹಿಳಾ ಸಾಕ್ಷರತೆ : ೧೯೫೮ರಲ್ಲಿ ಭಾರತ ಸರ್ಕಾರವು ನಿಯಮಿಸಿದ ಮಹಿಳಾ ಶಿಕ್ಷಣ ಕುರಿತ ರಾಷ್ಟ್ರೀಯ ಸಮಿತಿಯ ಅಭಿಪ್ರಾಯ ಈ ಮುಂದಿನಂತಿದೆ.

[೨೯]“೧೯೪೭ರಿಂದ ೧೯೫೭ರ ವರೆಗೆ ಮಹಿಳಾ ಶಿಕ್ಷಣದಲ್ಲಿ ಆದ ಪ್ರಗತಿ ತೃಪ್ತಿಕರವಾಗಿಲ್ಲ. ಇಂದಿಗೂ ಪುರುಷರು ಮತ್ತು ಮಹಿಳೆಯರ ಶಿಕ್ಷಣದಲ್ಲಿ ಸಾಕಷ್ಟು ಅಂತರವಿದೆ. ಪ್ರತಿ ೧೦೦ ಬಾಲಕರಿಗೆ ಶಿಕ್ಷಣ ದೊರೆತರೆ ಶೇ.೩೬ ಬಾಲಕಿಯರಿಗೆ ಮಾತ್ರವೇ ಶಿಕ್ಷಣ ದೊರೆಯುತ್ತದೆ. ಇದು ಎಪ್ಪತ್ತು ಹಾಗೂ ಎಂಬತ್ತರ ದಶಕಗಳಲ್ಲಿ ಕೂಡ ಅಷ್ಟೇನು ಬದಲಾಗಲಿಲ್ಲ. ೧೯೮೧ರ ಪ್ರಾಸ್ತಾವಿಕ ವರದಿಯಲ್ಲಿ ಕೂಡ ಈ ಅಂತರ ಅಷ್ಟೇನು ಕಡಿಮೆಯಾಗಿಲ್ಲವೆಂದೇ ತಿಳಿಸಲಾಗಿದೆ.[೩೦] ಹೀಗಾಗಿ ಮಹಿಳೆಯರ ಸ್ಥಾನಮಾನ ಕುರಿತು ವಿಶ್ಲೇಷಣೆ ನಡೆಸಿದ ಸಮಿತಿಯು “ಉನ್ನತ ಹುದ್ದೆಗಳನ್ನು ಅಥವಾ ಉನ್ನತ ಶಿಕ್ಷಣ ಪದವಿಗಳನ್ನು ಹೊಂದಿರುವ ಕೆಲವೇ ಭಾರತೀಯ ಮಹಿಳೆಯರ ಚಿತ್ರಣವು ಭಾರತದ ಸಾಮಾನ್ಯ ಮಹಿಳೆಯ ಕೆಳಗಿನ ಸ್ಥಾನಮಾನ ಹಾಗೂ ಶಿಕ್ಷಣಮಟ್ಟವನ್ನು ಪ್ರತಿಬಿಂಬಿಸುವ ಬದಲು ಮುಚ್ಚಿಹಾಕುತ್ತದೆ” ಎಂದಿದೆ.[೩೧]

ಮಹಿಳಾ ಉದ್ಯೋಗ : ಭಾರತೀಯ ಮಹಿಳೆಯರ ಸಂಖ್ಯೆ ಉದ್ಯೋಗ ಕ್ಷೇತ್ರದಲ್ಲಿ ಪುರುಷರಿಗಿಂತ ತೀರಾ ಕಡಿಮೆಯಿದೆ. ೧೯೧೧ರಲ್ಲಿ ೩೪.೪೪ರಷ್ಟಿದ್ದುದು ೧೯೮೧ರಲ್ಲಿ ೧೪.೪೪ರಷ್ಟು ಕೆಳಗಿಳಿಯಿತು. ಅಲ್ಲದೆ ಕೆಲವೊಂದು ನಿರ್ದಿಷ್ಟ ಉದ್ಯೋಗಗಳಿಗೆ ಮಾತ್ರವೇ ಎಲ್ಲ ದೇಶಗಳಲ್ಲೂ, ಮಹಿಳೆಯರು ಹೋಗುತ್ತಿದ್ದುದು ಸಾಮಾನ್ಯವಾಗಿತ್ತು. ಅದೆಂದರೆ ಟೆಲಿಫೋನ್ ಆಪರೇಟರ್, ಬೆರಳಚ್ಚುಗಾರರು(Typists) ಹಾಗೂ ಗುಮಾಸ್ತೆ ಹುದ್ದೆಗಳು. ಬೆರಳೆಣಿಕೆಯಷ್ಟು ಮಂದಿ ಮಾತ್ರವೇ, ಆಡಳಿತಾತ್ಮಕ(ಸಿವಿಲ್ ಸೇವೆ) ಇಂಜನಿಯರಿಂಗ್, ವೈದ್ಯಕೀಯ ಮುಂತಾದ ಕ್ಷೇತ್ರಗಳಲ್ಲಿ ಕಾಣುತ್ತಿದ್ದರು. ಉದಾಹರಣೆಗೆ, ಅಮೆರಿಕದಲ್ಲಿ ಶೇ ೭.೫ರಷ್ಟು ಮಹಿಳೆಯರು ವೈದ್ಯೆಯರಾಗಿದ್ದಾರೆ. ಆದರೆ ರಷ್ಯಾದಲ್ಲಿ ಶೇ.೬೧ರಷ್ಟು ಮಹಿಳೆಯರು ಮಾಮೂಲಿ ಉದ್ಯೋಗಗಳಲ್ಲದೆ ವಿಭಿನ್ನ ಕ್ಷೇತ್ರಗಳಲ್ಲಿ ಎಂದರೆ ತಜ್ಞ ವೈದ್ಯರು, ದಂತವೈದ್ಯರು, ವಿನ್ಯಾಸಕಾರರು, ನರ್ಸ್ ಮುಂತಾದ ವೃತ್ತಿಗಳಲ್ಲಿದ್ದಾರೆ. [೩೨]ಭಾರತದಲ್ಲಿ ವಿವಿಧ ರಂಗಗಳಲ್ಲಿ ಮಹಿಳೆಯರ ಸ್ಥಾನಮಾನ ಈ ಮುಂದಿನಂತಿದೆ

ಉದ್ಯೋಗಕ್ಷೇತ್ರ	ಪುರುಷರು	ಮಹಿಳೆಯರು
ವಿಶ್ವವಿದ್ಯಾಲಯಗಳು	೫೧.೫೦೧	೫೮,೮೯೫
ಶಾಲೆಗಳು	೨.೭೩,೭೦೩	೭೧,೪೩೬
ಅಭಿವೃದ್ಧಿ ಸಂಸ್ಥೆಗಳು	೧೮,೯೭೯	೩೬,೧೬೧
ಖಾಸಗಿವಲಯ ಉದ್ಯಮ	೮೭,೮೭೯	೧,೬೩.೨(೧,೬೩.೨)
ಸಾರ್ವಜನಿಕವಲಯ ಉದ್ಯಮ	೫,೨೨,೨೪೦	೨,೭೫೪
ಇತರ	೧,೨೯,೨೦೪	೧೬,೭೮೬

ಭಾರತದಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದರಲ್ಲಿ ಅಸಾಮಾನ್ಯ ತಾರತಮ್ಯವಿದ್ದು ಲಿಂಗಾಧಾರಿತವಾಗಿ ವೇತನ ವ್ಯತ್ಯಾಸ ಮಾಡಲಾಗುತ್ತದೆ. ಸಮಾನ ವೇತನ ಕೋರಿದ ಮಹಿಳೆಯರು ಉದ್ಯೋಗವನ್ನೇ ಕಳೆದುಕೊಳ್ಳುವ ಸಂಭವಗಳೇ ಹೆಚ್ಚು.

ಮಹಿಳೆ ಮತ್ತು ರಾಜಕೀಯ : ಅಮೆರಿಕ ಮತ್ತು ಇಂಗ್ಲೆಂಡ್ ನಲ್ಲಿ ಮಹಿಳಾ ಪ್ರಾತಿನಿಧ್ಯ ರಾಜಕೀಯರಂಗದಲ್ಲಿ ಅವರ ಸಂಖ್ಯೆಗನುಗುಣವಾಗಿಲ್ಲ. ಬ್ರಿಟನ್ನಿನಲ್ಲಿ ಎಪ್ಪತ್ತರ ದಶಕದಲ್ಲಿ ಮಾರ್ಗರೆಟ್ ಥ್ಯಾಚರ್ ಪ್ರಧಾನಿಯಾಗಿದ್ದಲ್ಲದೆ ಹೆಚ್ಚಿನ ಮಹಿಳೆಯರು ರಾಜಕೀಯ ಪ್ರವೇಶ ಮಾಡಿಲ್ಲ. ಬಾರ್ಬರಾ ಜಾನ್ಸರ್ ಅವರ ಪ್ರಕಾರ "ಸಾಮಾನ್ಯವಾಗಿ, ಮಹಿಳೆಯರನ್ನು ಕೆಳಗಿನ ಮಟ್ಟಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದಾದರೂ ಪಕ್ಷ ಅಥವಾ ಸರ್ಕಾರವೆರಡರಲ್ಲೂ ಉನ್ನತ ಹುದ್ದೆಗಳಲ್ಲಿ ಕಂಡುಬರುವುದಿಲ್ಲ".'' ಭಾರತದಲ್ಲಿ ಮಹಿಳೆಯರ ರಾಜಕೀಯ ಪ್ರವೇಶ ಸ್ವಾತಂತ್ರ್ಯ ಚಳವಳಿಯಿಂದ ಪ್ರಾರಂಭವಾಯಿತೆನ್ನಬಹುದು. ಭಾರತದಲ್ಲಿ ೧೯೩೭ರಲ್ಲಿ ಮಹಿಳೆಗೆ ಮತದಾನದ ಹಕ್ಕು ಪ್ರಾಪ್ತವಾಯಿತು. ಮತ ನೀಡಲು ಕೂಡ ಅಂಜುತ್ತಿದ್ದ ಮಹಿಳೆಯರು ತರುವಾಯ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆಲುವು ಕಂಡು ರಾಜ್ಯ ವಿಧಾನಸಭೆ ಹಾಗೂ ದೇಶದ ಸಂಸತ್ತನ್ನು ಕೂಡ ಪ್ರವೇಶಿಸಿದರು. ಮಹಿಳೆಯರು ಉನ್ನತಾಧಿಕಾರಿಗಳಾಗಿ ಸಚಿವೆಯರಾಗಿ ಯಶಸ್ವಿಗಳಾದರಲ್ಲದೆ ರಾಜಕೀಯ ಪಕ್ಷಗಳ ಉನ್ನತ ಹುದ್ದೆಗಳನ್ನು ಪಡೆದರು. ಶ್ರೀಮತಿ ಇಂದಿರಾಗಾಂಧಿ ಭಾರತದ ಮೊದಲನೇ ಮಹಿಳಾ ಪ್ರಧಾನಿಯಾದರು. ಚುನಾವಣೆಯಲ್ಲಿ ಮಹಿಳೆಯರ ಸ್ಥಾನವೆಂದು ಗುರುತಿಸಲಾಗಿದ್ದರೂ ಮಹಿಳೆಯರಿಗೆ ಯಾವ ಪಕ್ಷವೂ, ಸರಕಾರವೂ ನೀಡಬೇಕಾದಷ್ಟು ಪ್ರಾಮುಖ್ಯತೆಯನ್ನು ನೀಡಿಲ್ಲವೆಂಬುದು ಸರ್ವವಿದಿತ, ಮಹಿಳಾ ಮೀಸಲಾತಿಯ ಬಗ್ಗೆ ವಿಧೇಯಕವನ್ನು ಮಂಡಿಸಲು ಕೂಡ ಪುರುಷರು ಆಡಳಿತ ಪಕ್ಷಕ್ಕೆ ಅವಕಾಶ ನೀಡುವುದಿಲ್ಲ ಹಾಗೂ ಅದು ಮತಕ್ಕೆ ಹಾಕಿದಾಗ ಬಿದ್ದು ಹೋಗುವುದನ್ನು ಕಂಡಾಗ ಇಂದಿಗೂ ಮಹಿಳೆಯರಿಗೆ ಸಮಾನ ಹಾಗೂ ಹಕ್ಕಿನ ಸ್ಥಾನಮಾನವನ್ನು ನೀಡಲು ಪುರುಷರು(ಎಷ್ಟೇ ಪ್ರಗತಿಪರರಾದರೂ) ಮುಂದಾಗುತ್ತಿಲ್ಲವೆಂಬುದನ್ನು ನಾವು ಕಾಣುತ್ತಿದ್ದೇವೆ. ಸ್ವಾತಂತ್ರ್ಯಾನಂತರದ ಭಾರತದ ಲೋಕಸಭೆಯಲ್ಲಿ ಮಹಿಳೆಯರ ಪ್ರಾತಿನಿಧ್ಯ ಈ ಮುಂದಿನಂತಿದೆ.''

ವರ್ಷ	ಒಟ್ಟುಸ್ಥಾನಗಳು	ಮಹಿಳೆಯರು	ಮಹಿಳಾ ಸಂಸದರ ಶೇಕಡಾವಾರು
೧೯೫೨	೪೯೯	೨೨	೪.೪
೧೯೫೭	೫೦೦	೨೭	೫.೪
೧೯೬೨	೫೦೩	೩೪	೬.೮
೧೯೬೭	೫೨೩	೩೧	೫.೯
೧೯೭೧	೫೨೧	೨೧	೪.೨
೧೯೭೭	೫೪೪	೧೯	೩.೯
೧೯೮೦	೫೪೪	೨೮	೭.೯
೧೯೮೪	೫೪೪	೪೪	೮.೧
೧೯೮೯	೫೧೭	೨೭	೫.೩
೧೯೯೧	೫೪೪	೩೯	೭.೨
೧೯೯೬	೫೪೩	೩೯	೭.೨
೧೯೯೮	೫೪೩	೪೩	೮.೯

ಮಹಿಳೆಯರ ರಾಜಕೀಯ ಪ್ರವೇಶದ ಬಗ್ಗೆ ಹೇಳುವುದಾದರೆ, ಇದೊಂದು ಅತ್ಯಂತ ಸಂದಿಗ್ಧ ಹಂತವೆನ್ನಬಹುದು. ಏಕೆಂದರೆ ಭಾರತದ ರಾಜಕೀಯ ರಂಗವೇ ಒಟ್ಟಾರೆ ಇಂಥ ಎಳೆದಾಟ ಜಗ್ಗಾಟ(push & pull)ಗಳಿಂದ ಕೂಡಿದೆ. ಯಾವುದೇ ರಾಜಕೀಯ ಪಕ್ಷಕ್ಕೂ ಸ್ಪಷ್ಟ ಬಹುಮತವಿರದ ಕಾರಣ ಈ ಪರಿಸ್ಥಿತಿ ಇನ್ನೂ ಮುಂದುವರೆಯುವ ಸಾಧ್ಯತೆಗಳೂ ಇಲ್ಲದಿಲ್ಲ. ಆದಾಗ್ಯೂ ಮಹಿಳೆಯರ ರಾಜಕೀಯ ನೇರಪ್ರವೇಶ ಹಾಗೂ ರಾಜಕೀಯ ಜಾಗೃತಿ(ಪ್ರಜ್ಞೆ) ಹಿಂದೆಂದಿಗಿಂತಲೂ ಹೆಚ್ಚಾಗುತ್ತಿದೆ. ಜೊತೆಗೆ ಪುರುಷರೊಂದಿಗಿನ ಸ್ಪರ್ಧೆಯಲ್ಲಿ ಎರಡು ಹೆಜ್ಜೆ ಮುಂದಡಿಯಿಟ್ಟರೆ ನಾಲ್ಕು ಹೆಜ್ಜೆ ಹಿಂದೆ ಎಳೆಯುವುದು ಇನ್ನೂ ಹೆಚ್ಚಾಗಿದೆ. ಅಷ್ಟೇ ಅಲ್ಲ, ಪಂಚಾಯಿತಿ ಅಧ್ಯಕ್ಷೆ, ಉಪಾಧ್ಯಕ್ಷೆ ಹಾಗೂ ಸದಸ್ಯರ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಸ್ಥಾನಗಳೆಂದು ನೀಡಲಾಗುತ್ತಿದೆ. ಆದರೆ ಇಂಥಸ್ಥಾನಗಳಲ್ಲಿ ಮಹಿಳೆಯ ಪತಿ ಅಥವಾ ಇತರ ಸಂಬಂಧಿಗಳು ಆಕೆಯನ್ನು ಕೀಲುಗೊಂಬೆಯಂತೆ ಕೂಡಿಸಿ ತಾವೇ ಅಧಿಕಾರ ಚಲಾಯಿಸುವುದನ್ನು ಕಾಣುತ್ತೇವೆ. ಮುಖ್ಯಮಂತ್ರಿ ಸ್ಥಾನವಾಗಬಹುದು ಅಥವಾ ಬೇರಾವುದೇ ಉನ್ನತ ಹುದ್ದೆಯಿರಬಹುದು. ನಿರ್ಣಯ ತೆಗೆದುಕೊಳ್ಳುವ ಸ್ಥಾನವನ್ನು ಮಹಿಳೆಗೆ ಬಿಟ್ಟುಕೊಡಲು ಪುರುಷರು ಸಿದ್ಧರಿಲ್ಲವೆಂಬುದು ಇದರಿಂದ ರುಜುವಾತಾಗಿದೆ. ಭಾರತೀಯ ಮಹಿಳೆ ಇಂದು ತೃತೀಯ ವಿಶ್ವದ ಮುಂದುವರಿದ ಹಾಗೂ ಮುಂದುವರಿಯುತ್ತಿರುವ ದೇಶಗಳ ಮಹಿಳೆಯರೊಂದಿಗೆ ಮುನ್ನಡೆಯಬೇಕಾಗಿದೆ.

ಸಾಮಾಜಿಕ ಸ್ಥಾನಮಾನ : ವಿಶ್ವಸಂಸ್ಥೆಯು ೧೯೭೫ನೇ ವರ್ಷವನ್ನು 'ಅಂತಾರಾಷ್ಟ್ರೀಯ ಮಹಿಳಾ ವರ್ಷ'ವೆಂದು ಘೋಷಿಸಿತು. ಆಗ ಅಂತಾರಾಷ್ಟ್ರೀಯ ಮಹಿಳಾ ಸಂಸ್ಥೆಯ ಸೆಕ್ರೆಟರಿ ಜನರಲ್ ಆಗಿದ್ದ

ಶ್ರೀಮತಿ ಹೆಲ್ವಿ ಸಿಪಿಲಾ ಹೀಗೆ ಉದ್ಗರಿಸಿದ್ದರು.[೩೪] ಮಾನವ ಜನಾಂಗದ ಅರ್ಧಭಾಗದಷ್ಟಿರುವ ಮಹಿಳೆಯರು ಪುರುಷರೊಂದಿಗೆ ಸಮಾನಸ್ಥಾನಮಾನವನ್ನು ಹಾಗೂ ಅವಕಾಶಗಳನ್ನು ಪಡೆಯಲು ಇನ್ನೂ ಅರ್ಧದಾರಿಯನ್ನು ಕ್ರಮಿಸಬೇಕಾಗಿದೆ. ಈಗ ಕೂಡ ಪುರುಷರು ಮತ್ತು ಮಹಿಳೆಯರ ನಡುವೆ ಸಮಾನತೆ ಇಲ್ಲ. ಹೆಣ್ಣಾಗಿ ಜನ್ಮ ತಾಳುವುದನ್ನು ಇಂದಿಗೂ ಶಾಪವೆಂದೇ ತಿಳಿಯಲಾಗುತ್ತದೆ. ಭಾರತದಲ್ಲಿ ಭಾರತೀಯ ಸಮಾಜದಲ್ಲಿ ಮಹಿಳೆಯ ಸ್ಥಾನಮಾನ ಹೇಗಿದೆ? ಎಂಬ ಪ್ರಶ್ನೆ ಸಾಕಷ್ಟು ಬಿಸಿಬಿಸಿಯಾದ ವಾದವಿವಾದಗಳಿಗೆ ಗ್ರಾಸ ನೀಡುತ್ತಿದೆ. ಈ ಬಗ್ಗೆ ದೇಶದಾದ್ಯಂತ ಚರ್ಚಾಗೋಷ್ಠಿ, ಸಮಾವೇಶ, ಸಮ್ಮೇಳನಗಳು ನಡೆಯುತ್ತಲೇ ಇವೆ. ಭಾಷಣಕಾರರಂತೂ, 'ಯತ್ರನಾರ್ಯಸ್ತು ಪೂಜಂತೇ ರಮಂತೇ ತತ್ರ ದೇವತಾಃ' (ಎಲ್ಲಿ ಮಹಿಳೆಯರನ್ನು ಗೌರವಿಸಲಾಗುವುದೋ ಅಲ್ಲಿ ದೇವತೆಗಳು ರಮಿಸುತ್ತಾರೆ) ಎಂಬ ಪ್ರಾಚೀನಶ್ಲೋಕವನ್ನು ಉಲ್ಲೇಖಿಸುತ್ತಾರೆ. ಆದರೆ ಈ ವಿಜ್ಞಾನ ತಂತ್ರಜ್ಞಾನದ ಯುಗದಲ್ಲಿ ಸಮಾಜವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು ಹಾಗೂ ಅರ್ಥಶಾಸ್ತ್ರಜ್ಞರು ಇದನ್ನೊಪ್ಪುವುದಿಲ್ಲ. ಯಾವುದೇ ಕ್ಷೇತ್ರಕಾರ್ಯ, ವೈಜ್ಞಾನಿಕ ಅಧ್ಯಯನ ಅಥವಾ ಸಂಶೋಧನೆ ನಡೆಸದೆ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದು ಎನ್ನುತ್ತಾರೆ. ಹೀಗಾಗಿ ಭಾರತಸರ್ಕಾರವು ಈ ಹಿಂದೆ ಪ್ರಧಾನಮಂತ್ರಿಗಳಾಗಿದ್ದ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಸದಸ್ಯರು ದೇಶದಾದ್ಯಂತ ಸಂಚರಿಸಿ ಗ್ರಾಮೀಣ ಹಾಗೂ ನಗರ ಮಹಿಳೆಯರ ವಾಸ್ತವಿಕಸ್ಥಾನಮಾನವನ್ನು ತಿಳಿಯಲು ಮಾಹಿತಿ ಸಂಗ್ರಹಣೆ ಮಾಡಿ ವರದಿಯನ್ನು (ಟುವಾರ್ಡ್ಸ್ ಈ ಕ್ವಾಲಿಟಿ)ನೀಡಿದೆ. ಅದರ ಕೆಲವು ಅಂಶಗಳು ಹೀಗಿವೆ.

"ಸ್ವಾತಂತ್ರ್ಯಾನಂತರ ಗಾಂಧೀಜಿ[೩೫] ಮತ್ತು ಪಂಡಿತ್ ಜವಾಹರಲಾಲ್ ನೆಹರೂರಂಥ ಮುಖಂಡರ ನಾಯಕತ್ವದಲ್ಲಿ ಮಹಿಳೆಯರಿಗೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳು ಲಭ್ಯವಾದವು. ಸ್ವತಂತ್ರ ಭಾರತದ ಸಂವಿಧಾನದಡಿಯಲ್ಲಿ ಭಾರತೀಯ ಮಹಿಳೆಯರು ಮುಕ್ತ ನಾಗರಿಕರಾಗಿ ಮತನೀಡಲು ಅಥವಾ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಹೊಂದಿ ಸಂಸತ್ತು ಅಥವಾ ವಿಧಾನಮಂಡಲವನ್ನು ಅಥವಾ ಸ್ಥಳೀಯ ಸಂಘಸಂಸ್ಥೆಗಳಿಗೆ ಪ್ರವೇಶ ಪಡೆದರು. ಸರ್ಕಾರಿ ಕಚೇರಿಗಳಲ್ಲಿ ಉದ್ಯೋಗಿಗಳಾಗಿ ಭಾರತೀಯ ಸಿವಿಲ್ ಸೇವೆ ಮುಂತಾದವುಗಳನ್ನು ಸೇರುವಂತಾಯಿತು. ಅಲ್ಲದೆ, ವಿವಾಹ, ಆಸ್ತಿಯ ಉತ್ತರಾಧಿಕಾರ, ದತ್ತು ಸ್ವೀಕಾರ ಮುಂತಾದ ಸಾಮಾಜಿಕ ವಿಷಯಗಳಲ್ಲಿ ಸಮಾನತೆ ನೀಡಲಾಯಿತು. ಆದರೆ ಇಂಥ ಸಮಾನತೆ ಹಾಗೂ ಬಗ್ಗೆ ಹೆಚ್ಚುಹೆಚ್ಚು ಅಧ್ಯಯನಗಳು ನಡೆದಂತೆ ಕಾಗದದ ಮೇಲಿರುವ ಸಂವಿಧಾನ ಪ್ರದತ್ತ ಸಮಾನತೆಗೂ ಮಹಿಳೆಯರ ವಾಸ್ತವಿಕ ಜೀವನದ ಅತಿ ಕೆಳಮಟ್ಟದ ದಾರುಣವಾದ ಸ್ಥಾನಮಾನಗಳ

ನಡುವೆ ಭಾರಿಪ್ರಮಾಣದ ವ್ಯತ್ಯಾಸಗಳಿರುವುದನ್ನು ಗಮನಿಸಬಹುದು. ಅನಕ್ಷರಸ್ಥರಾದ ಕೋಟ್ಯಾಂತರ ಭಾರತೀಯ ಮಹಿಳೆಯರು ದೀನರಾಗಿ, ದರಿದ್ರರಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ನೀರು ಹೊರುತ್ತ, ಸೌದೆ ಅರಸುತ್ತ ಸಮಾಜಕ್ಕೆ ಹೊರೆಯಾಗಿ ಪುರುಷರಿಂದಲೇ ಶೋಷಿತರಾಗಿ ಪ್ರಾಣಿಗಳಂತೆ ಬದುಕುತ್ತಿದ್ದಾರೆ! ಮಹಿಳೆಯರ ಮೇಲಿನ ದೌರ್ಜನ್ಯವು ಮಿತಿಮೀರಿದೆ. ಸ್ವತಂತ್ರ ಭಾರತದಲ್ಲಿ ಇಂದಿಗೂ ಕೂಡ ಒಂದು ಮಾರಾಟದ ವಸ್ತುವೇ ಆಗಿರುವ ಮಹಿಳೆ ಪುರುಷರ ಕಾಮನೆಗೆ ತಕ್ಕಂತೆ ಸುಲಭವಾಗಿ ಮಾರಾಟ ಮಾಡಬಹುದಾದ, ವಿಲೆಯಾಗುವ ಸರಕಾಗಿದ್ದಾಳೆ. ''ಇನ್‌ಸ್ಟಿಟ್ಯೂಟ್ ಆಫ್ ಕ್ರಿಮಿನಾಲಜಿ ಅಂಡ್ ಫಾರೆನ್ಸಿಕ್ ಸೈನ್ಸ್ ೧೯೭೫ರಲ್ಲಿ ನಡೆಸಿದ ಸಮೀಕ್ಷೆಗನುಸಾರವಾಗಿ ಅತ್ಯಾಚಾರದ ಪ್ರಕರಣಗಳು ದಿಗಿಲು ಹುಟ್ಟಿಸುವಷ್ಟು ಹೆಚ್ಚಾಗಿವೆ. ಪೊಲೀಸರು ಮಹಿಳೆಯರಿಗೆ ರಕ್ಷಣೆ ನೀಡಲು ವಿಫಲರಾಗಿದ್ದಾರೆ. ಪುರುಷರಿಗಿಂತಲೂ ಮಹಿಳೆಯರ ಸಂಖ್ಯೆ ಆತ್ಮಹತ್ಯೆ ಪ್ರಕರಣಗಳಲ್ಲಿ ಅತಿ ಹೆಚ್ಚಾಗಿದೆ.''[೩೬] ಮಹಿಳೆಯರ ಪರಿಸ್ಥಿತಿಯನ್ನು ಅಕ್ಕಮಹಾದೇವಿ ವಚನವೊಂದರಲ್ಲಿ ಅತ್ಯಂತ ಸ್ಪಷ್ಟವಾಗಿ ಸಂಕ್ಷಿಪ್ತವಾಗಿ ಸೂಚಿಸಿದ್ದಾಳೆ.

ಹಿಂದಣ ಹಳ್ಳ ಮುಂದಣ ತೊರೆ
ಸಲ್ಲುವ ಪರಿಯೆಂತು ಹೇಳಾ
ಹಿಂದಣಕೆರೆ ಮುಂದಣ ಬಲೆ
ಹದುಳವಿನ್ನೆಲ್ಲಿಯದು ಹೇಳಾ

ವರದಕ್ಷಿಣೆಗಾಗಿ ವಧೂದಹನ, ಮಾನಭಂಗ, ಕಿರುಕುಳ, ವಂಚನೆ ಇನ್ನೂ ಹತ್ತು ಹಲವು ಸಂಕಷ್ಟಗಳಿಗೆ ಮಹಿಳೆ ಗುರಿಯಾಗುತ್ತಿರುವುದನ್ನು ನಾವು ದಿನವೂ ಸುದ್ದಿವಾಹಕಗಳ ಮೂಲಕ ತಿಳಿಯುತ್ತೇವೆ. ಹಿಂದೆಲ್ಲ ದಿಗ್ಭ್ರಮೆ, ಭಯ, ದುಃಖವಾಗುತ್ತಿತ್ತು. ಈಗ ಇತರ ಸುದ್ದಿಗಳಂತೆ ಇಂಥ ಘಟನೆಗಳೂ ಸಾಮಾನ್ಯವೆನ್ನುವಷ್ಟು ಹೆಚ್ಚಾಗುತ್ತಿವೆ. ಮಹಿಳೆಯ ಈ ದುಃಸ್ಥಿತಿಗೆ ಪುರುಷ ಪ್ರಧಾನ ವ್ಯವಸ್ಥೆಯೇ ಕಾರಣವೆಂದು ತಪ್ಪನ್ನು ಪುರುಷರ ಮೇಲೆ ಜಾರಿಸುವ ವ್ಯವಸ್ಥೆ ಈಗ ಬದಲಾಗಿದೆ. ಪುರುಷನ ಇಂಥ ನಡವಳಿಕೆಯ ಹಿಂದೆ ಮತ್ತೊಬ್ಬ ಹೆಣ್ಣಿನ ಕೈವಾಡ ಅಥವಾ ಬೆಂಬಲ ಅಥವಾ ಕುಮ್ಮಕ್ಕು ಇರುತ್ತದೆಯೆಂಬುದು ಎಲ್ಲ ಪ್ರಕರಣಗಳಲ್ಲೂ ಪ್ರಮುಖವಾಗಿ ಎದ್ದುಕಾಣುವ ಸಂಗತಿಯಾಗಿದೆ. ಹಾಗಾದರೆ ಹೆಣ್ಣಿಗೆ ಮತ್ತೊಬ್ಬ ಹೆಣ್ಣೇ ಶತ್ರುವಾಗುವ, ಘಾತುಕಳಾಗುವ ಪರಿಸ್ಥಿತಿ ನಿರ್ಮಾಣವಾಗಿದೆಯೆನ್ನಬಹುದಲ್ಲವೇ. ಈಗಿನ ಕಂಪ್ಯೂಟರ್ ಯುಗದಲ್ಲಿ ಪುರುಷರಿಗೆ ಎಲ್ಲಕ್ಷೇತ್ರಗಳಲ್ಲೂ ಸವಾಲೊಡ್ಡುವಂತೆ ಪ್ರತಿಭಾ ಪ್ರದರ್ಶನ ನೀಡಿ ಮಹಾನ್ ಸಾಧನೆ ಮಾಡುತ್ತಿರುವ ಭಾರತೀಯ ಯುವತಿಯರಿಗೆ[೩೭]

೧. ಕುಟುಂಬ ಕ್ರೌರ್ಯವನ್ನು ಎದುರಿಸಲು ಕಷ್ಟವಾಗುತ್ತಿದೆ. ಸೊಸೆಯಂದಿರನ್ನು ಸುಡುವ ಅತ್ತೆಯರಿದ್ದಾರೆ.

ವಿವಾಹಿತ ಪುರುಷನನ್ನು ತಾನೂ ಪ್ರೇಮಿಸಿ ಆ ಇನ್ನೊಬ್ಬ ಮಹಿಳೆಗೆ ಕಣ್ಣೀರು ತರಿಸುವ. ಜೀವನವನ್ನೇ

[illegible]

[illegible]

[illegible]

[illegible]

[illegible]

ಕಿತ್ತುಕೊಳ್ಳುವ ಸವತಿಯರಿದ್ದಾರೆ. ಒಂಟಿಯಾಗಿರುವ ಅಸಹಾಯಕಳಾದ ಮಹಿಳೆಗೆ ನೆರವು ನೀಡುವ ಬದಲು ಸಂಶಯದೃಷ್ಟಿಯಿಂದ ಅಸೂಯಾಪರರಾಗಿ ಆಕೆಯ ಚಾರಿತ್ರ್ಯವಧೆ ಮಾಡುವವರಿದ್ದಾರೆ. ಹೆಣ್ಣು ಮಕ್ಕಳನ್ನು ಕೆಟ್ಟಚಾಳಿಗಿಳಿಸಿ ಅವರ ಭವಿಷ್ಯವನ್ನು ಅಂಧಕಾರಕ್ಕೆ ತಳ್ಳುವವರಿದ್ದಾರೆ. ಇಂಥ ಹೆಂಗಸರ ಸಂಖ್ಯೆ ಈಗೀಗ ಇನ್ನೂ ಹೆಚ್ಚುತ್ತಿದೆ.

೨. ಮಹಿಳೆಯರು ಈಗ ಔದ್ಯೋಗಿಕ ಕ್ಷೇತ್ರದಲ್ಲಿ ಹಿಂದೆಂದಿಗಿಂತೂ ನಾಗಾಲೋಟದಿಂದ ಮುನ್ನಡೆಯುತ್ತಿದ್ದಾರೆ. ಕೃಷಿಕ್ಷೇತ್ರದಿಂದ ಪ್ರಾರಂಭಿಸಿ ಶಿಕ್ಷಣದಲ್ಲಿ ಅತ್ಯುನ್ನತ ದರ್ಜೆಯಲ್ಲಿ ಜ್ಞಾನಭಾಂಡಾರವನ್ನು ಸೂರೆಮಾಡುತ್ತಿದ್ದಾರೆ. ವಿಜ್ಞಾನದ ವಿವಿಧ ಶಾಖೆಗಳು, ವೈದ್ಯಕೀಯ, ಸಮಾಜಶಾಸ್ತ್ರಗಳಲ್ಲದೆ ವಿಮಾನ ಚಾಲನೆ, ಯುದ್ಧಭೂಮಿಯಲ್ಲಿ ಕೂಡ ತಾಂತ್ರಿಕ ತಜ್ಞೆಯರಾಗಿ ಭಾಗವಹಿಸುತ್ತಿದ್ದಾರೆ. ಆಡಳಿತ ರಂಗಗಳಲ್ಲಿ ಮಿಂಚುತ್ತಿದ್ದಾರೆ. ಎಲ್ಲ ಬಗೆಯ ಸ್ಪರ್ಧೆಗಳಲ್ಲೂ ಮುಂದಾಗಿ ಉತ್ಸಾಹದಿಂದ ಪಾಲ್ಗೊಂಡು ಮೇಲೇರುತ್ತಿದ್ದಾರೆ. ಕಲಾಜಗತ್ತಿನಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ, ಚಿತ್ರಕಲೆಯಲ್ಲಿ ಸಿನಿಮಾ, ದೂರದರ್ಶನ, ರೂಪದರ್ಶಿಗಳಾಗಿ ಬೆಡಗಿನ ಲೋಕದಲ್ಲೂ ಬೆಳಗುತ್ತಿದ್ದಾರೆ. ಕ್ರೀಡಾ ಕ್ಷೇತ್ರದಲ್ಲಿ ಕೂಡ ಆಧುನಿಕ ಮಹಿಳೆಯರು ಕಲಿಗಳಂತೆ ಹೋರಾಡುತ್ತಿದ್ದಾರೆ. ಆದರೆ ಇವೆಲ್ಲ ಕ್ಷೇತ್ರಗಳಲ್ಲೂ ಮಹಿಳೆಯು ಪುರುಷರಿಂದ ದೌರ್ಜನ್ಯಕ್ಕೆ, ಅಸೂಯೆಗೆ ಗುರಿಯಾಗುತ್ತಾಳೆ. ಎಲ್ಲಕ್ಕಿಂತ ಹೆಚ್ಚಾಗಿ ಅವಳನ್ನು ಹೇಗಾದರೂ ಮೆಟ್ಟಿನಿಲ್ಲುವ ಛಲಹೊತ್ತ ಪುರುಷರು ಅವಳ ತೇಜೋವಧೆ ಮಾಡಲು ಹವಣಿಸುತ್ತಲೇ ಇರುತ್ತಾರೆ. ಉದ್ಯೋಗದ ಸ್ಥಳಗಳಲ್ಲೂ ಆಗಬಹುದು, ಸ್ವತಃ ಪತಿ ಅಥವಾ ಸಂಬಂಧಿಕರೂ ಸಹ ಇಂಥ ವರ್ತನೆ ತೋರುವ ಘಟನೆಗಳು ಸಂಭವಿಸುತ್ತವೆ. ಅಷ್ಟೇ ಅಲ್ಲ ತಮ್ಮ ಅಧಿಕಾರ, ರೂಪ ಹಾಗೂ ಶ್ರೀಮಂತಿಕೆಯ ದರ್ಪದಿಂದ ಅಸಹಾಯಕ ಹೆಂಗಸರನ್ನು ತುಳಿಯುವ ಹೆಂಗಸರೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಮಹಿಳಾ ಪೊಲೀಸ್ ಠಾಣೆ, ನ್ಯಾಯಾಲಯಗಳಿವೆ. ಆದರೆ ತಪ್ಪಿತಸ್ಥರಿಗೆ ಅಪರಾಧದಿಂದ ತಪ್ಪಿಸಿಕೊಳ್ಳಲು ಸಾಕಷ್ಟು ಅವಕಾಶಗಳಿವೆ.

ಉದ್ಯೋಗಸ್ಥ ಮಹಿಳೆಯರು : ಕುಟುಂಬ ಹಾಗೂ ಉದ್ಯೋಗದ ಸ್ಥಳಗಳೆರಡರಲ್ಲೂ ಇಂದಿನ ಮಹಿಳೆಯರು ದ್ವಿಪಾತ್ರಗಳನ್ನು ನಿರ್ವಹಿಸಬೇಕಾದ ಸಂದಿಗ್ಧದಲ್ಲಿದ್ದಾರೆ. ಗೃಹಿಣಿಯರಾಗಿದ್ದು ಕೇವಲ ಗೃಹಕೃತ್ಯಗಳಿಗಷ್ಟೇ ತಮ್ಮನ್ನು ಸೀಮಿತಗೊಳಿಸಿಕೊಳ್ಳುವ ಮಹಿಳೆಯರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ.

ಮುಸಲ್ಮಾನ್ ಮತ್ತು ಕ್ರಿಶ್ಚಿಯನ್ ಮಹಿಳೆಯರು : ಮುಸಲ್ಮಾನ ಸಮಾಜದಲ್ಲಿ ಪುರುಷರು ಹಾಗೂ ಮಹಿಳೆಯರ ನಡುವೆ ಸ್ಥಾನಮಾನದಲ್ಲಿ ಅಪಾರ ವ್ಯತ್ಯಾಸವಿದೆ. ಮಹಿಳೆಯರು ಪರದಾ ಅಥವಾ

ಬುರ್ಖಾದ ಒಳಗೇ ತಮ್ಮ ವೈಮನಸ್ಸುಗಳನ್ನು ಮುಚ್ಚಿಟ್ಟುಕೊಳ್ಳಬೇಕು. ಹೀಗಾಗಿ ಅವರು ಯಾವುದೇ ಸಾಮಾಜಿಕ ಆರ್ಥಿಕ ಚಟುವಟಿಕೆಗಳಲ್ಲಾಗಲಿ ಸಾರ್ವಜನಿಕ ಜೀವನದಲ್ಲಾಗಲಿ ಮುಕ್ತವಾಗಿ ಭಾಗವಹಿಸಲು ನಿರ್ಬಂಧವಿರುತ್ತದೆ. ಪುರುಷರು ಮಹಿಳೆಯರ ಬಗ್ಗೆ ಹಲವು ಪೂರ್ವಾಗ್ರಹ ಪೀಡಿತರಾಗಿರುತ್ತಾರೆ. ಶ್ರೀಮತಿ ಸುಶೀಲಾ ಮೆಹತಾ ಅವರು ಹೇಳುವಂತೆ ''ಶ್ರೀಮಂತರಾದ, ಉನ್ನತವರ್ಗದ ಪುರುಷರು ಮಹಿಳೆಯರನ್ನು ತಮ್ಮ ಅಲಂಕರಣ ವಸ್ತುಗಳೆಂದು ಅಥವಾ ತಮ್ಮ ಅಂತಸ್ತಿನ ಸಂಕೇತವೆಂದು ಭಾವಿಸುತ್ತಾರೆ ಅಷ್ಟೇಕೆ ಶ್ರೀಮಂತಿಕೆ ಹೆಚ್ಚಾದಷ್ಟು ಹೆಚ್ಚು ಸಂಖ್ಯೆಯ ಮಡದಿಯರನ್ನು ಹೊಂದಿರುವುದು ಜೊತೆಗೆ ವೇಶ್ಯೆಯರನ್ನು ಇಟ್ಟುಕೊಳ್ಳುವುದು ಹೆಗ್ಗಳಿಕೆಯೆಂದು ತಿಳಿದಿರುತ್ತಾರೆ.''[೩೮]

ವರದಕ್ಷಿಣೆ, ಆಸ್ತಿ, ಉತ್ತರಾಧಿಕಾರ ಮುಂತಾದವುಗಳಲ್ಲಿ ಮುಸ್ಲಿಮ್ ಮಹಿಳೆಯರು ಅತ್ಯಂತ ಶೋಷಿತೆಯರೆನ್ನಬಹುದು. ವರದಕ್ಷಿಣೆ ಜಾರಿಯಲ್ಲಿದೆ ಇದನ್ನು ಜೋಡೇ ಕಾ ಪೈಸಾ(ವರನ ವೇಷಭೂಷಣ ಗಳಿಗಾಗಿ ನೀಡುವ ಹಣ) ಎನ್ನುತ್ತಾರೆ. ಸಾಮಾನ್ಯ ಕುಟುಂಬಗಳಲ್ಲಿ ಇದು ಸಾವಿರಾರು ರೂಪಾಯಿಗಳಲ್ಲಿದ್ದರೆ, ಶ್ರೀಮಂತ ಕುಟುಂಬಗಳಲ್ಲಿ ಇದು ಲಕ್ಷಗಳನ್ನು ದಾಟಬಹುದು. ಮುಸ್ಲಿಂ ವಿವಾಹ ವಿಧಿಗಳನ್ನು ನಿಕಾ(NIKAH) ಎಂದು ಕರೆಯಲಾಗಿದ್ದು ವರದಕ್ಷಿಣೆಯನ್ನು 'ಸಲಾಮಿ' ಎನ್ನುತ್ತಾರೆ. ಮುಸಲ್ಮಾನರ ದಾಳಿಗಳ ಪರಿಣಾಮವಾಗಿ ಭಾರತದಲ್ಲಿ ಹಿಂದೂ ಸಂಸ್ಕೃತಿಯ ಮೇಲೆ ಅಸಾಧಾರಣ ಹಾಗೂ ಅಮಾನವೀಯ ಪರಿಣಾಮಗಳುಂಟಾಯಿತು. ಇವುಗಳನ್ನು 'ಸಾಮಾಜಿಕ ಪಿಡುಗು'(social Evils) ಎಂದು ಕರೆಯಲಾಗಿದೆ.

ಮುಸ್ಲಿಂ ಕಾನೂನಾದ ಷೆರಿಯತ್‌ನಲ್ಲಿ, ತಾಯಿ, ಹೆಂಡತಿಯರು ಹಾಗೂ ಹೆಣ್ಣುಮಕ್ಕಳಿಗೆ ಆಸ್ತಿಹಕ್ಕು ನೀಡಲಾಗಿದೆ. ಆಕೆ ತನ್ನ ಪಾಲಿನ ಆಸ್ತಿಗೆ ಏಕೈಕ ಒಡತಿಯಾಗಿರುತ್ತಾಳೆ. ಕ್ರಿಶ್ಚಿಯನ್ ಮಹಿಳೆಯರಿಗೆ ಹಿಂದೂ ಉತ್ತರಾಧಿಕಾರ ಅಧಿನಿಯಮ ಅನ್ವಯವಾಗುತ್ತದೆ.

ಹಿಂದೂ ಮಹಿಳೆಯರಿಗಾಗಿ ಅನೇಕ ಕಾನೂನುಗಳನ್ನು ಮಾಡಲಾಗಿದೆ.(ಅನುಬಂಧದಲ್ಲಿ ನೀಡಿದೆ) ಆದರೆ ಮುಸ್ಲಿಮ್ ಮಹಿಳೆಯರಿಗೆ ಸಂಬಂಧಿಸಿದಂತೆ ಕಾನೂನುಗಳನ್ನು ಮಾಡಲಾಗಿಲ್ಲ. ಇದಕ್ಕೆ ಧರ್ಮ ಅಥವಾ ಶೆರಿಯತ್ ಅನ್ನು ಮಾತ್ರವೇ ಮುಸ್ಲಿಮರ ವೈಯಕ್ತಿಕ ಕಾನೂನು ಎಂಬುದಾಗಿ ಪರಿಗಣಿಸಿರುವುದು ಹಾಗೂ ಅದಕ್ಕೆ ವಿರುದ್ಧವಾಗಿ ನಡೆದವರನ್ನು ಧರ್ಮದ್ರೋಹಿ ಅಥವಾ ದಂಡನೀಯರೆಂದು ಪರಿಗಣಿಸಿ ಶಿಕ್ಷೆ ವಿಧಿಸಲಾಗುತ್ತದೆ. ಉದಾಹರಣೆಗೆ ಮುಸ್ಲಿಮರ ವಿವಾಹವನ್ನು ಸ್ತ್ರೀಪುರುಷರು ಕಾನೂನುಬದ್ಧ ಲೈಂಗಿಕ ಜೀವನನಡೆಸಿ ಮಕ್ಕಳನ್ನು ಪಡೆಯಲು ಮಾಡಿಕೊಳ್ಳುವ ಒಂದು ಒಪ್ಪಂದ ಅಥವಾ ಕರಾರು ಎಂದು ಹೇಳಲಾಗಿದೆ. ಒಬ್ಬ ಪುರುಷ ಏಕಕಾಲದಲ್ಲಿ ನಾಲ್ಕು ಜನ ಪತ್ನಿಯರನ್ನು ಹೊಂದಿರಬಹುದು. ಮುಸ್ಲಿಂ ಪುರುಷ ಮತಾಂತರ ಹೊಂದಿದವಳನ್ನು(ಅನ್ಯಮತೀಯಳನ್ನು) ಮದುವೆಯಾಗಬಹುದು. ಆದರೆ ಮುಸ್ಲಿಂ

ಮಹಿಳೆಗೆ ಇದು ನಿಷಿದ್ಧ. ವಿವಾಹ ವಿಚ್ಛೇದನೆಯ ಕಾನೂನು ಮುಸ್ಲಿಂ ಮಹಿಳೆಯರ ಪಾಲಿಗೆ ಶಾಪವಾಗಿದೆ. ಪುರುಷ ಮೂರು ಬಾರಿ 'ತಲಾಕ್' ಎಂದು ಘೋಷಿಸಿದರೆ ಅಲ್ಲಿಗೆ ವಿವಾಹ ವಿಚ್ಛೇದನೆ ಯಾಗುತ್ತದೆ. ಹೀಗಾಗಿ ಮುಸ್ಲಿಮರಲ್ಲಿರುವ ಪುರುಷ ಪರವಾದ ಬಹುಪತ್ನಿತ್ವ ಹಾಗೂ ಸುಲಭ ವಿಚ್ಛೇದನೆಗಳು ಮುಸ್ಲಿಂ ಮಹಿಳೆಯರ ಜೀವನವನ್ನು ದಾರುಣವಾಗಿಸಿದೆ. ಖುರಾನ್‌ನಲ್ಲಿ ಮಹಿಳೆಯರಿಗೂ ವಿಚ್ಛೇದನೆಯ ಹಕ್ಕುಗಳನ್ನು ನೀಡಲಾಗಿದೆ. ಆದರೆ ವಿವಾಹ ಕಾಲದಲ್ಲಿ ನೀಡಲಾಗುವ 'ಮೆಹರ್ ' ಅಥವಾ ಸ್ತ್ರೀಧನವನ್ನು ಆಕೆ ಹಿಂತಿರುಗಿಸಬೇಕು. ಜೀವನಾಂಶವೂ ಇರುವುದಿಲ್ಲ. ಕ್ರಿಶ್ಚಿಯನ್ ಮಹಿಳೆಗೆ ಸಂಬಂಧಿಸಿದಂತೆ ಸಿವಿಲ್ ವಿವಾಹ ಅಥವಾ ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ ೧೮೭೨ ಅನ್ವಯವಾಗುತ್ತದೆ. ಹಾಗೆಯೇ ಭಾರತ ವಿವಾಹವಿಚ್ಛೇದನ ಅಧಿನಿಯಮವೂ ಅನ್ವಯವಾಗುತ್ತಿದ್ದರೂ ಪತ್ನಿ ವ್ಯಭಿಚಾರಿಯಾಗಿದ್ದರೆ ಪತಿ ಅದೇ ಕಾರಣದ ಮೇಲೆ ವಿಚ್ಛೇದನೆ ಪಡೆಯಬಹುದು. ಆದರೆ ಮಹಿಳೆ ಪತಿಯಿಂದ ವಿಚ್ಛೇದನೆ ಪಡೆಯಲು ಅವನ ಕ್ರೌರ್ಯ, ಅತ್ಯಾಚಾರ, ದ್ವಿಪತ್ನಿತ್ವವನ್ನು ಅಥವಾ ಪತಿಯು ತನ್ನನ್ನು ಪರಿತ್ಯಜಿಸಿರುವುದನ್ನು ರುಜುವಾತುಪಡಿಸಬೇಕು.

ಹೀಗೆ ಮಹಿಳೆಯರು ಹಿಂದೂ ಅಥವಾ ಮುಸ್ಲಿಂ ಅಥವಾ ಕ್ರೈಸ್ತರೋ, ಪಾರ್ಸಿಗಳೋ ಆಗಿರಲಿ ಆಕೆ ಯಾವುದೇ ವರ್ಗದವಳಾಗಿರಲಿ, ಒಟ್ಟಿನಲ್ಲಿ ಆಕೆಗೆ ಸ್ವಾತಂತ್ರ್ಯವಾಗಲಿ, ನಿರಾತಂಕ ಜೀವನವಾಗಲಿ ಇಲ್ಲದಿರುವುದನ್ನು ನಾವು ಉದ್ದಕ್ಕೂ ನೋಡುತ್ತೇವೆ. ಕಾನೂನುಗಳನ್ನು ತಿದ್ದುಪಡಿಮಾಡಲು ಹಾಗೂ ಮಹಿಳೆಗೆ ಸಮಾಜದಲ್ಲಿ ಸಮಾನ ಸ್ಥಾನಮಾನ ನೀಡಲು ಸಾಧ್ಯವಾಗದಂತೆ, ಮುಂದಡಿಯಿಟ್ಟವರನ್ನೂ ಹಿಂದೆ ಎಳೆಯುವ ಕಾರ್ಯ ಅವ್ಯಾಹತವಾಗಿ ನಡೆದುಬಂದಿರುವುದನ್ನು ಮೂಕವಾಗಿ ಮಹಿಳೆ ಸಹಿಸುತ್ತಿದ್ದಾಳೆ.

ರಾಜರ ಆಳ್ವಿಕೆಯ ಮೈಸೂರು ರಾಜ್ಯದಲ್ಲಿ ಮಹಿಳೆಯರ ಸ್ಥಾನಮಾನ

ಮೈಸೂರು ರಾಜ್ಯವು ೫೦ ವರ್ಷಗಳ ಬ್ರಿಟಿಷ್ ಆಳ್ವಿಕೆಯ ನಂತರ ಮತ್ತೆ ೧೮೮೧ರಲ್ಲಿ ಹಿಂದೂ ರಾಜರ ಕೈಸೇರಿತು. ಮೈಸೂರು ರಾಜ್ಯದ ಇತಿಹಾಸದಲ್ಲಿ ಇದೊಂದು ಅತಿಮಹತ್ತ್ವಪೂರ್ಣ ಘಟನೆಯೆನ್ನ ಬಹುದು. ಸನ್ಮಾನ್ಯ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಅವರು ೧೮೮೧ರ ಮಾರ್ಚಿಯಲ್ಲಿ ಸಿಂಹಾಸನವೇರಿದರು. ಆ ಕಾಲದ ರಾಜರ ಆಡಳಿತವಿದ್ದ ಎಲ್ಲ ರಾಜ್ಯಗಳ ಪೈಕಿ ಮೈಸೂರನ್ನು ಮಾದರಿ ರಾಜ್ಯವೆಂದು ಹೆಸರಿಸಲಾಗುತ್ತಿತ್ತು. ಇಲ್ಲಿ ಮಹಿಳೆಯರಿಗಾಗಿ, ದುರ್ಬಲವರ್ಗದವರಿಗಾಗಿ ಆದಾಗಲೇ ಎಷ್ಟೋ ಸಮಾಜ ಸುಧಾರಣಾ ಕಾರ್ಯಗಳನ್ನು ನಿರ್ವಹಿಸಲಾಗುತ್ತಿತ್ತು!

ಮೈಸೂರು ರಾಜ್ಯದಲ್ಲಿ ಕೂಡ ಭಾರತದ ಇತರ ಭಾಗಗಳಲ್ಲಿದ್ದಂತೆಯೇ ಮಹಿಳೆಯರ ಸ್ಥಾನಮಾನ ಉತ್ತಮ ಮಟ್ಟದಲ್ಲಿ ಇರಲಿಲ್ಲ. ಶಿಕ್ಷಣವಿಲ್ಲದಿದ್ದುದೇ ಇದಕ್ಕೆ ಮುಖ್ಯ ಕಾರಣವಾಗಿತ್ತೆನ್ನಬಹುದು.

ತಾಯ್ತಂದೆ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದು ಸಂಪ್ರದಾಯ ವಿರೋಧಿ ನಡವಳಿಕೆ ಎಂದು ಭಾವಿಸಿದ್ದರು. ಮೂಢನಂಬಿಕೆಗಳು ತಾಂಡವವಾಡುತ್ತಿದ್ದವು. ಹೀಗಾಗಿ ಬ್ರಿಟಿಷ್ ಸರ್ಕಾರವೂ ಕೂಡ ಶಿಕ್ಷಣ ಪ್ರಸಾರಕ್ಕೆ ಆಸಕ್ತಿ ತೋರಿರಲೇ ಇಲ್ಲ. ಮಿಷನರಿ ಶಾಲೆಗಳಿಗೆ ಹುಡುಗಿಯರನ್ನು ಕಳುಹಿಸಲು ಭಾರಿ ವಿರೋಧವಿತ್ತು. ೧೮೮೧-೮೨ರ ವೇಳಗೆ ಇಂಥ ನಾರ್ಮಲ್ ಸ್ಕೂಲುಗಳಲ್ಲಿ ಭಾರತದಾದ್ಯಂತ ಕೇವಲ ೫೧೫೨ ಜನ ಹುಡುಗಿಯರಿದ್ದರು.[೬೯] ಇದಕ್ಕೆ ಸಾಮಾಜಿಕ ಕಾರ್ಯಕರ್ತೆ ಮೇರಿಕಾರ್ಪೆಂಟರ್ ಅವರ ಪ್ರೋತ್ಸಾಹವೇ ಕಾರಣವಾಗಿತ್ತು. ಮೈಸೂರು ರಾಜ್ಯದಲ್ಲಿ ಬಾಲ್ಯವಿವಾಹ, ಪರದಾ ಪದ್ಧತಿಯ ಜೊತೆಗೆ ಬಾಲವಿಧವೆಯರ ಪರಿಸ್ಥಿತಿಯೂ ಕೂಡ ಶಿಕ್ಷಣಕ್ಕೆ ಅಡ್ಡಿಯಾಗಿತ್ತು. ೧೮೯೧ರ ಜನಗಣತಿ ಪ್ರಕಾರ ರಾಜರ ಆಳ್ವಿಕೆಯಿದ್ದ ಈ ರಾಜ್ಯದಲ್ಲಿ ಪ್ರತಿ ೫ ಜನ ಬಾಲಕರಿಗೆ ಒಬ್ಬ ಹುಡುಗ ಹಾಗೂ ಪ್ರತಿ ೧೦೦ ಜನ ಬಾಲಕಿಯರಿಗೆ ಒಬ್ಬ ಹುಡುಗಿಗೆ ಶಿಕ್ಷಣ ಸೌಲಭ್ಯವಿತ್ತು.[೭೦]

೧೮೯೧ರ ಜನಗಣತಿಯನುಸಾರವಾಗಿ ಮೈಸೂರು ರಾಜ್ಯದಲ್ಲಿ ಪುರುಷರು ಮಹಿಳೆಯರ ನಡುವೆ ಇದ್ದ ಪರಿಸ್ಥಿತಿಗಳನ್ನು ಈ ಕೆಳಗಿನ ಕೋಷ್ಟಕದಿಂದ ತಿಳಿಯಬಹುದು :

ನಾಗರಿಕ ಪರಿಸ್ಥಿತಿಗಳು	ಪುರುಷರು	ಮಹಿಳೆಯರು
ಅವಿವಾಹಿತರು	೧೧,೫೫,೬೭೪	೭೫೭,೫೬೩
ವಿವಾಹಿತರು	೮,೧೪,೬೦೭	೮೦೨,೯೯೭
ವಿಧುರರು/ವಿಧವೆಯರು	೧,೨೭,೮೭೧	೫೨೮,೧೭೬
ವೃತ್ತಿ	ಪುರುಷರು	ಮಹಿಳೆಯರು
ವಾಣಿಜ್ಯ ಪ್ರವರ್ಗ	೪೫,೩೬೬	೧೦,೧೪೨
ಕೃಷಿ	೧೦,೦೮,೮೨೬	೫೯೯,೮೦೯
ಔದ್ಯಮಿಕ	೧,೨೮,೯೨೬	೪೬,೦೩೪
ಇತರ ವೃತ್ತಿಗಳು	೯೦,೪೫೨	೪,೯೪೮

ಮೂಲ : ೧೮೯೧ರ ಜನಗಣತಿ ಸಂಪುಟ XXV ಮೈಸೂರು ಭಾಗ I ವರದಿ-೧೮೯೩

ಮೇಲ್ಕಂಡ ಕೋಷ್ಟಕದಲ್ಲಿ ಕಂಡುಬರುವಂತೆ ವಿಧವೆಯರ ಸಂಖ್ಯೆ ವಿಧುರರ ಸಂಖ್ಯೆಗಿಂತ ನಾಲ್ಕು ಪಟ್ಟು ಹೆಚ್ಚಾಗಿತ್ತು. ಆ ಕಾಲದಲ್ಲಿ ರಾಜ್ಯದಲ್ಲಿನ ಬೇರಾವ ಭಾಗಕ್ಕಿಂತಲೂ ಮೈಸೂರು ರಾಜ್ಯದಲ್ಲಿ ವಿಧವೆಯರ ಸಂಖ್ಯೆ ಅತಿಹೆಚ್ಚು ಎಂದರೆ ಪ್ರತಿ ೧೦೦೦ ಜನರಿಗೆ ೨೫೧ ಜನ ವಿಧವೆಯರಿದ್ದರು.[೭೧] ವಿಧವೆಯರ ಪರಿಸ್ಥಿತಿಯಂತೂ ಅತ್ಯಂತ ಶೋಚನೀಯವಾಗಿತ್ತು. ಅವರಿಗೆ ಜೀವನದ ಮೂಲಭೂತ

ಅವಶ್ಯಕತೆಗಳೂ ಕೂಡ ಲಭ್ಯವಿರಲಿಲ್ಲ. ಮಾತ್ರವಲ್ಲ ಹೊರೆಗೆಲಸ ಮಾತ್ರ ಅವರಿಗೆ ಕಾದಿರುತ್ತಿತ್ತು. ನಾಲ್ಕು ಗೋಡೆಗಳ ಮಧ್ಯೆ ಬಂದಿಯಾಗಿಸಿ ಹೊರಪ್ರಪಂಚಕ್ಕೆ ಮುಖದೋರದಂತೆ ನಿರ್ಬಧಿಸಲಾಗುತ್ತಿತ್ತು. ಇದಕ್ಕೆ ತಪ್ಪಿದವರನ್ನು ಘೋರವಾಗಿ ಶಿಕ್ಷಿಸಲಾಗುತ್ತಿತ್ತು.

[೪೩]ವ್ಯಭಿಚಾರ ಮಾಡಿದ ಪುರುಷರು ಶಿಕ್ಷೆಯಿಂದ ಸುಲಭವಾಗಿ ಜಾರಿಕೊಳ್ಳುತ್ತಿದ್ದರು. ಹಾಗೂ ಸಾಮಾಜಿಕವಾಗಿ ಯಾವುದೇ ಕುಂದು ಅವರಿಗೆ ಉಂಟಾಗುತ್ತಿರಲಿಲ್ಲ. ಆದರೆ ಕ್ವಚಿತ್ತಾಗಿ ಇಂಥ ಆಪಾದನೆಗೆ ಒಳಗಾದ ಮಹಿಳೆಯನ್ನು-ಬ್ರಿಟಿಷ್ ಕಮೀಷನ್ ಆಳ್ವಿಕೆ ನಡೆಸಿದ ಪ್ರಾರಂಭದ ದಿನಗಳಲ್ಲಿ ಕೂಡ-ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡಲಾಗುತ್ತಿತ್ತು! ಆದರೆ ಈ ಕುತ್ತನ್ನು ೧೮೩೪ರಲ್ಲಿ ಹೊರಡಿಸಲಾದ ಘೋಷಣೆಯ ಮೂಲಕ ಪರಿಹರಿಸಲಾಯಿತು. ಬ್ರಾಹ್ಮಣ ಹಾಗೂ ವೈಶ್ಯ ಮಹಿಳೆಯರನ್ನು ಮಾರಾಟ ಮಾಡುತ್ತಿರಲಿಲ್ಲವಾದರೂ ಜಾತಿಯಿಂದ ಹೊರಗೆ ಹಾಕಿ ಸೂಳೆಯರೆಂದು ಹಣೆಪಟ್ಟಿ ಹಚ್ಚಲಾಗುತ್ತಿತ್ತು. ಅನಂತರ ಅವರು ದಲ್ಲಾಳಿಗೆ ತಾವು ಬದುಕಿರುವವರೆಗೂ ವಾರ್ಷಿಕ ಹಣಸಂದಾಯ ಮಾಡುತ್ತಿದ್ದರು. ಅವರು ಮೃತರಾದ ಮೇಲೆ ಅವರ ಸಕಲ ಆಸ್ತಿಯೂ ದಲ್ಲಾಳಿಯ ವಶಕ್ಕೆ ಸೇರುತ್ತಿತ್ತು. ಇತರ ಹಿಂದೂ ಜಾತಿಗಳ ಮಹಿಳೆಯರನ್ನು ಅವರ ಸಂಬಂಧಿಗಳು ಮುಂದೆ ಬಂದು ಜವಾಬ್ದಾರಿ ತೆಗೆದುಕೊಂಡ ಹೊರತು ದಲ್ಲಾಳಿಗಳು ಆ ಮಹಿಳೆಯರನ್ನೂ ಮಾರಾಟ ಮಾಡಿಬಿಡುತ್ತಿದ್ದರು. ಇಂಥ ಪದ್ಧತಿಗಳು ಪುರುಷರ ದ್ವಿಮುಖ ನೀತಿಯನ್ನು(ಗೋಮುಖ ವ್ಯಾಘ್ರತನ) ತೋರಿಸುವುದು ಮಾತ್ರವಲ್ಲ ಎಷ್ಟೋ ಮಂದಿ ನತದೃಷ್ಟ ಹೆಣ್ಣುಮಕ್ಕಳನ್ನು ಬಲಾತ್ಕರಿಸುವ ಮೂಲಕ ವೇಶ್ಯಾವೃತ್ತಿಗೆ ತಳ್ಳುತ್ತಿದ್ದಂಥ ಅತಿಮುಖ್ಯ ಸಂಗತಿಯನ್ನೂ ಹೊರಗೆಡವುತ್ತದೆ. ಶಿಕ್ಷಣವನ್ನು ನಿರಾಕರಿಸಿ ಮಹಿಳೆಯರಿಗೆ ಬದುಕಲು ಪರ್ಯಾಯ ಮಾರ್ಗವಿಲ್ಲದಂತೆ ಮಾಡಿ ಗುಲಾಮಗಿರಿಗೆ ಒಗ್ಗಿಕೊಳ್ಳುವಂತೆ ಮಾಡಿದ್ದ ದುರವಸ್ಥೆಯ ಚಿತ್ರಣವಿದು.

ಮೇಲಿನ ವಿವರಣೆ ೧೮೮೧ರಲ್ಲಿ ಮೈಸೂರು ರಾಜ್ಯವನ್ನು ಬ್ರಿಟಿಷ್ ಆಡಳಿತದಿಂದ ಮುಕ್ತಗೊಳಿಸಿ ರಾಜರಿಗೆ ಮರಳಿಸಿದ ಸಂದರ್ಭದಲ್ಲಿದ್ದ ಪರಿಸ್ಥಿತಿಯನ್ನು ಸೂಚಿಸುತ್ತದೆ. ಆಗ ಮಹಿಳೆಯರಿಗಿದ್ದ ಸ್ಥಾನಮಾನವಿದು. ಜನಗಣತಿಯಲ್ಲಿ ಕಂಡುಬಂದ ಅಂಕಿ ಅಂಶಗಳಿಂದ ವಿಚಲಿತವಾದ ಮಹಾರಾಜರ ಸರ್ಕಾರ ಮಹಿಳೆಯರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಅತಿ ತುರ್ತಾಗಿ ಸಾಮಾಜಿಕ ಸುಧಾರಣೆಗಳನ್ನು ಮಾಡುವ ಅವಶ್ಯಕತೆಯನ್ನು ಗಮನಿಸಿತು. ಅದೇ ಪ್ರಕಾರ ಚಾಮರಾಜ ಒಡೆಯರು ಮಹಿಳೆಯರ ಶಿಕ್ಷಣಕ್ಕಾಗಿ ಗಣನೀಯವಾದ ಪ್ರಯತ್ನಗಳನ್ನು ನಡೆಸಿ ಮಹಿಳೆಯರ ಅಸ್ತಿತ್ವಕ್ಕೆ ಮಾರ್ಗದರ್ಶನ ಮಾಡಿದರು.

ಗ್ರಾಮೀಣ ಮಹಿಳೆ : "ಯಾವುದೇ[೪೪] ಸಮಾಜದಲ್ಲಿಯೂ ಮಹಿಳೆಯರು ಒಂದೇ ಸ್ಥಳದಲ್ಲಿ, ಸ್ವತಂತ್ರ ಸಮುದಾಯವಾಗಿರಲು ಸಾಧ್ಯವಿಲ್ಲ. ಆಯಾ ಸಮಾಜದ ವರ್ಗ, ಜನಾಂಗ, ವೃತ್ತಿ, ಜಾತಿ, ಧರ್ಮ

ಮೊದಲಾದವುಗಳಲ್ಲಿ ಅವರು ಹಂಚಿಹೋಗಿರುತ್ತಾರೆ. ಮಹಿಳೆಯರಾಗಿ ಅವರು ಎದುರಿಸುವ ಸಮಸ್ಯೆಗಳಲ್ಲಿ ಕೆಲವು ಸಾಮಾನ್ಯ ಎಳೆಗಳು ದೊರಕುವಂತೆಯೇ ಅವರವರ ಸಮೂಹ ರಚನೆಗಳ ಭಿನ್ನತೆಯಲ್ಲಿ ಅವರನ್ನು ಬೇರೆ ಮಾಡುವ ಎಳೆಗಳೂ ಇವೆ. ಆಗ ನಾವು ಅವರನ್ನು 'ಕಪ್ಪು ಮಹಿಳೆ, ಮುಸ್ಲಿಂ ಮಹಿಳೆ, ದಲಿತ ಮಹಿಳೆ ಎಂದು ಪ್ರತ್ಯೇಕವಾಗಿ ಗುರುತಿಸಬೇಕಾಗುತ್ತದೆ'' ಎನ್ನುತ್ತಾರೆ ಡಾ.ವಿಜಯಾದಬ್ಬೆ. ಇದರೊಂದಿಗೆ ನಾವು ಗ್ರಾಮೀಣ ಹಾಗೂ ನಗರ ಮಹಿಳೆಯರ ನಡುವಣ ಅಂತರವನ್ನೂ ಗಮನಿಸಲೇಬೇಕು. ನಗರ ಮಹಿಳೆಯರಿಗೆ ದೊರೆತ, ದೊರೆಯುತ್ತಿರುವ ವಿಪುಲ ಅವಕಾಶಗಳು ಅವರನ್ನು ತೀವ್ರಗತಿಯಲ್ಲಿ ಮುನ್ನಡೆಯಲು ನೆರವಾಗುತ್ತವೆ. ಆದರೆ ಗ್ರಾಮೀಣ ಮಹಿಳೆಯರು ಬಹಳಷ್ಟು ಸಲ ಮೂಲಭೂತ ಅವಶ್ಯಕತೆಗಳಿಗಾಗಿ ಕೂಡ ಪರಿತಪಿಸುವ ಪರಿಸ್ಥಿತಿಯಲ್ಲಿದ್ದಾರೆ. ಗ್ರಾಮೀಣ ಮಹಿಳೆಯರ ವಾಸ್ತವ ಜೀವನದ ಬಗ್ಗೆ ಕೆಲವು ಮಹಿಳಾ ಸಮಾಜ ಕಾರ್ಯಕರ್ತೆಯರು ಅಧ್ಯಯನ ನಡೆಸಿದಾಗ ಗ್ರಾಮೀಣ ಮಹಿಳೆಯರ ನಡೆಸುತ್ತಿರುವ ದಾರುಣ ಜೀವನವನ್ನು ಕಣ್ಣಾರೆ ಕಾಣುವ ಸಂದರ್ಭವೊದಗಿತೆಂದು ತಿಳಿಸಿದ್ದಾರೆ. ಗ್ರಾಮಗಳಲ್ಲಿನ ಸಮಾಜ ವ್ಯವಸ್ಥೆಯು ಇಂದಿಗೂ ಎಂಥ ನಿಯಂತ್ರಣ ಹೊಂದಿದೆಯೆಂದರೆ ಮಹಿಳೆ ಪುರುಷ ಪ್ರಧಾನ ನಿಯಮಗಳಿಗೆ ಶರಣಾಗದೆ ಬೇರೆ ದಾರಿಯೇ ಉಳಿದಿಲ್ಲ. ಕೇವಲ ತನ್ನ 'ಇರುವಿಕೆ'ಗಾಗಿ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಹಕ್ಕುಗಳನ್ನು ಇಷ್ಟವಿರದಿದ್ದರೂ ಬಲವಂತವಾಗಿ ಬಿಟ್ಟುಕೊಡುವ ಪರಿಸ್ಥಿತಿಯಲ್ಲಿದ್ದಾಳೆ. ಜಮೀದ್ದಾರ ತನ್ನ ಕೆಳಗಿನ ಕೃಷಿ ಕಾರ್ಮಿಕನನ್ನು ಹಿಂಸೆ ಮಾಡಿದರೆ ನ್ಯಾಯಾಲಕ್ಕೆ ಹೋಗಿ ಆತನಿಗೆ ಶಿಕ್ಷೆ ವಿಧಿಸಬಹುದು. ಆದರೆ ಅದೇ ಜಮೀನ್ದಾರ ಅಥವಾ ಕೃಷಿಕನ ಮನೆಯಲ್ಲಿ ಮಹಿಳೆಯರನ್ನು ಹೊಡೆದರೆ ಹಿಂಸೆಮಾಡಿದರೆ ಅವರು ಯಾರಿಗೂ ಹೇಳಿಕೊಳ್ಳಲಾರರು. ಅದು ಮನೆಯ ಕುಟುಂಬದ ಗೌರವದ ಪ್ರಶ್ನೆಯಾಗುತ್ತದೆ. ಅವಳು ಅಬಲೆಯೇ ಸರಿ. ಗ್ರಾಮೀಣ ಮಹಿಳೆ ದಿನಕ್ಕೆ ೧೬ ಗಂಟೆಗಳ ಕಾಲ ದುಡಿಯುತ್ತಾಳೆ. ಹೊತ್ತಿಗೆ ಮುಂಚೆ ಎದ್ದು ಮನೆಗೆಲಸ, ಜಾನುವಾರುಗಳ ಸೇವೆ ಮುಗಿಸಿ ಗಂಡನೊಂದಿಗೆ ಹೊಲಗದ್ದೆಗಳಲ್ಲಿ ಕೃಷಿ ಕಾರ್ಮಿಕಳಾಗಿ ಸಂಜೆವರೆಗೆ ದುಡಿಯುತ್ತಾಳೆ. ಮತ್ತೆ ಮನೆಗೆಲಸ. ಗಂಡ ಕುಡಿತ ಇತ್ಯಾದಿಗಳ ಚಟಹೊಂದಿದ್ದರೆ ಅವಳ ಜೀವನ ಇನ್ನೂ ನರಕವಾಗಿರುತ್ತದೆ. ದೂರದ ಸ್ಥಳಗಳಿಂದ ನೀರು ಹೊರುವುದು, ಸೌದೆ ಆಯುವುದು, ಶುಚಿಯಾಗಿರಲು ಬಹಿರ್ದೇಶಕ್ಕೆ ಹೋಗಬೇಕಾದರೆ ಆಕೆ ಹೊಲಗಳ ಬದಿಯಲ್ಲಿ ಗಿಡ ಮರಗಳ ಪೊದೆ ಸಂದುಗಳಿಗೆ ಹೋಗಬೇಕು. ಅಲ್ಲಿ ಹಾವು ಹುಳಹುಪ್ಪಟೆಗಳಿಂದ ಜೀವಭಯವಿರುತ್ತದೆ. ಕೆಲವೊಮ್ಮೆ ನಿರ್ಜನ ಪ್ರದೇಶಗಳಲ್ಲಿ ಆಕೆ ಅತ್ಯಾಚಾರ ಅಥವಾ ಮಾನಭಂಗಕ್ಕೆ ಗುರಿಯಾಗುವುದೂ ಉಂಟು. ಗ್ರಾಮೀಣ ಮಹಿಳೆ ಮೂರು ಬಗೆಯ ತುಳಿತಕ್ಕೆ ಒಳಗಾಗಿದ್ದಾಳೆ.''

೧. ಕೆಲಸಗಾತಿಯಾಗಿ ಆಕೆಗೆ ಪುರುಷನ ಸಮಾನವಾದ ಹೊರೆಗೆಲಸವುಂಟು ಆದರೆ ಸಮಾನ ಮಜೂರಿ ದೊರೆಯುವುದಿಲ್ಲ. ಇದು ಗಾರೆಕೆಲಸ, ಗಿರಣಿ, ಕಾರ್ಖಾನೆ ಮುಂತಾದವುಗಳಿಗೂ ಅನ್ವಯಿಸುತ್ತದೆ.

೨. ಕುಟುಂಬದಲ್ಲಿ ಗಂಡನ ದಬ್ಬಾಳಿಕೆ, ಹೊಡೆತ, ದುಡಿತ ಇತ್ಯಾದಿ.

೩. ನಿರ್ದಿಷ್ಟ ಜಾತಿಯ ಪಂಗಡಕ್ಕೆ ಸೇರಿರುವುದರಿಂದ ಸಾಮಾಜಿಕ ಮೇಲುಸ್ತರಕ್ಕೆ ಏರಲಾಗದಿರುವುದು.

ಹೀಗಾಗಿ ಆಕೆ ವರ್ಗ, ಪುರುಷ ಪ್ರಧಾನತೆ ಹಾಗೂ ಜಾತಿ ಈ ಮೂರರಿಂದಲೂ ಸಮಸ್ಯೆಗಳ ಸುಳಿಗೆ ಸಿಲುಕಿದ್ದಾಳೆ. ಅವರಲ್ಲಿ ಬಹುಮಂದಿ ಸಾಕ್ಷರರು ಕೂಡ ಆಗಿಲ್ಲವಾದ್ದರಿಂದ ಶಿಕ್ಷಣ ಸೌಲಭ್ಯಗಳನ್ನು, ತಮ್ಮ ಹಕ್ಕುಗಳನ್ನು ತಿಳಿಯಲು ಕೂಡ ಅಶಕ್ಯರಾಗುತ್ತಾರೆ. ಆದರೂ ಅನ್ಯಾಯದ ವಿರುದ್ಧ ಸಿಡಿದೆದ್ದರೆ, ಮಾತನಾಡಿದರೆ ಗಯ್ಯಾಳಿ, ಗಂಡುಬೀರಿ ಇತ್ಯಾದಿ ಬಿರುದುಗಳನ್ನು ನೀಡಿ ಅವಳನ್ನು ಚಾರಿತ್ರ್ಯಹೀನಳನ್ನಾಗಿ ಹಳ್ಳಿಯಲ್ಲಿನ ಅವಳ ಬಂಧುವರ್ಗದವರೇ ದೂರಮಾಡುತ್ತಾರೆ. ಇನ್ನು ಆಸ್ತಿ, ಉತ್ತರಾಧಿಕಾರ ಮುಂತಾದ ಹಕ್ಕುಗಳ ಅಥವಾ ಆಧುನಿಕ ಜೀವನ, ಮುಂತಾದುವುಗಳ ಬಗ್ಗೆ ಅವಳು ಸಂಪೂರ್ಣ ಅಜ್ಞಾನಿಯಾಗಿರುತ್ತಾಳೆ. ಗ್ರಾಮೀಣ ಬಾಲಕಿಯರಿಗೆ ಕೂಡ ಬಾಲ್ಯದಿಂದಲೇ ಮನೆಗೆಲಸ ಹಾಗೂ ಸಹೋದರರ ಪಾಲನೆ, ದನಕರುಗಳನ್ನು ನೋಡಿಕೊಳ್ಳುವುದು ಇಂತಹ ಕೆಲಸಗಳಲ್ಲೇ ತೊಡಗಿಸಲಾಗಿರುತ್ತದೆ. ಆರೋಗ್ಯ, ನೈರ್ಮಲ್ಯ ಪರಿಸರ ಇವುಗಳಲ್ಲಿ ಭಾರತೀಯ ಗ್ರಾಮೀನ ಮಹಿಳೆ ತೀರಾ ಹಿಂದುಳಿದಿರುವುದನ್ನು ಅನೇಕ ಸಮೀಕ್ಷೆಗಳು, ಅಧ್ಯಯನಗಳಿಂದ ತಿಳಿಯಬಹುದು. ಹೀಗಾಗಿ ಗ್ರಾಮೀಣ ಮಹಿಳೆ ಹಲವು ಸಂಕೋಲೆಗಳಿಂದ ಬಂಧಿತಳಾಗಿದ್ದಾಳೆ. ಇವೆಲ್ಲದರ ಜೊತೆಗೆ ಮೂಢನಂಬಿಕೆಗಳು ಗ್ರಾಮೀಣ ಮಹಿಳೆಯರನ್ನು ಕತ್ತಲಿನಲ್ಲೇ ಇರಿಸಿವೆ. ಆದರೆ ಸಮೂಹ ಮಾಧ್ಯಮಗಳಾದ ದೂರದರ್ಶನ, ರೇಡಿಯೊ ಮುಂತಾದವುಗಳ ಮೂಲಕ ಹಾಗೂ ಸರ್ಕಾರಗಳು ಅನೇಕ ಸಂಸ್ಥೆಗಳು ಕೈಗೊಂಡ ಕಾರ್ಯಕ್ರಮಗಳಿಂದ ಇದುವರೆಗಿನ ಗ್ರಾಮೀಣ ಮಹಿಳೆಯ ದಾರುಣ ಸ್ಥಿತಿ ಈಗೀಗ ಸುಧಾರಿಸುತ್ತಿದೆ. ಬಾಲಕಿಯರನ್ನು ಶಾಲೆಗೆ, ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ಜೊತೆಗೆ ಗ್ರಾಮೀಣ ಮಟ್ಟಗಳಲ್ಲಿ ಸಮುದಾಯ ಅಭಿವೃದ್ಧಿ ಕೇಂದ್ರಗಳು, ಮಹಿಳಾ ಸಂಸ್ಥೆಗಳೂ ಹಿಂದುಳಿದ ಮಹಿಳೆಯರನ್ನು ಪ್ರಗತಿ ಪಥದ ಕಡೆ ನಡಸುವ ಪ್ರಯತ್ನ ಮಾಡುತ್ತಿವೆ. ಹೀಗೆ ಸ್ಥೂಲವಾಗಿ ಮಹಿಳೆಯರ ಸ್ಥಾನಮಾನವನ್ನು ನಾವು ಪರಿಶೀಲಿಸುವಾಗ, ಇಂದಿನ ಜಾಗತಿಕ ಮಹಿಳೆಯರ ಸ್ಥಾನಮಾನದ ಪರಿಸ್ಥಿತಿಯ ಬಗ್ಗೆ ನೀಡಲಾಗಿರುವ ವರದಿ ಒಟ್ಟಾರೆಯಾಗಿ ಹೀಗಿದೆ;

೧. ವಿಶ್ವದ ಒಟ್ಟು ಭೂಪ್ರದೇಶದ ಶೇ.೧ರಷ್ಟು ಮಾತ್ರವೇ ಮಹಿಳೆಯರ ಸ್ವಾಧೀನದಲ್ಲಿದೆ.

೨. ಮಹಿಳೆಯರು ಮಾಡುವ ಮನೆಗೆಲಸ, ಮಕ್ಕಳ ಆರೈಕೆ, ಕೃಷಿಕಾರ್ಯಗಳು ಹಾಗೂ ಇನ್ನಿತರ ಕೆಲಸಗಳ

ಬಗ್ಗೆ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಸ್ತಾಪವನ್ನೇ ಮಾಡಿಲ್ಲ. ಸ್ಥೂಲ ಅಂದಾಜಿನಂತೆ ಇವುಗಳ ಮೌಲ್ಯ ಸುಮಾರು ೧೧ ಟ್ರಿಲಿಯ ಅಮೆರಿಕನ್ ಡಾಲರುಗಳಷ್ಟಾಗುತ್ತದೆ ಎನ್ನಲಾಗಿದೆ.

೩. ಜಗತ್ತಿನ ಎಲ್ಲ ಕೆಲಸಗಳಲ್ಲಿ ಶೇ.೬೦ರಷ್ಟನ್ನು ಮಹಿಳೆಯರು ನಿರ್ವಹಿಸುತ್ತಾರೆ. ಆದರೆ ಅವರ ವರಮಾನದ ಪಾಲು ಶೇ.೧೦ರಷ್ಟು ಮಾತ್ರ.

೪. ಎಲ್ಲ ದೇಶಗಳಲ್ಲೂ ಸಮಾನ ಕೆಲಸಗಳಿಗಾಗಿ ಮಹಿಳೆಯರು ಪುರುಷರಿಗಿಂತ ಶೇ. ೩೦.೪೦ರಷ್ಟು ಕಡಿಮೆ ವೇತನ ಪಡೆಯುತ್ತಿದ್ದಾರೆ.

೫. ಎಲ್ಲ ದೇಶಗಳಲ್ಲೂ ಮಹಿಳೆಯರು ಪುರುಷರಿಗಿಂತಲೂ ಶೇ.೧೨ರಷ್ಟು ಹೆಚ್ಚು ಸಮಯ ದುಡಿಯುತ್ತಾರೆ.

೬. ಅಭಿವೃದ್ಧಿಶೀಲ ದೇಶಗಳಲ್ಲಿ ಆಹಾರೋತ್ಪಾದನೆಗಾಗಿ ಮಹಿಳೆಯರು ಶೇ.೫೦ರಷ್ಟು ದುಡಿಯುತ್ತಾರೆ.

೭. ವಿಶ್ವದಲ್ಲಿರುವ ಒಂದು ಬಿಲಿಯನ್ ವಯಸ್ಕ ಅನಕ್ಷರಸ್ಥರಲ್ಲಿ ೨/೩ ಭಾಗದಷ್ಟು ಮಹಿಳೆಯರಿದ್ದು, ಅವರಿಗೆ ಮೂಲಶಿಕ್ಷಣ ಕೂಡ ದೊರೆಯುತ್ತಿಲ್ಲ.

೮. ಪ್ರತಿವರ್ಷ ಸುಮಾರು ಅರ್ಧಮಿಲಿಯನ್ ಮಹಿಳೆಯರು ಗರ್ಭಧಾರಣೆ, ಪ್ರಸೂತಿ ತೊಂದರೆಗಳಿಂದ ಸಾವಿಗೀಡಾಗುತ್ತಿದ್ದಾರೆ.

೯. ವಿಶ್ವಾದ್ಯಂತ ಇರುವ ಸುಮಾರು ೨೩ ಮಿಲಿಯನ್ ನಿರಾಶ್ರಿತರ ಪೈಕಿ ಶೇ.೮೦ರಷ್ಟು ಮಹಿಳೆಯರು ಹಾಗೂ ಅವರನ್ನು ಅವಲಂಬಿಸಿದವರಿದ್ದಾರೆ. ಎಂದರೆ ದಾರಿದ್ರ್ಯ, ಹಸಿವು, ರೋಗ, ಅಂಗವಿಕಲತೆ ಹಾಗೂ ಅನಕ್ಷರತೆಯಿಂದ ನರಳುತ್ತಿದ್ದಾರೆ.

೧೦. ಯುದ್ಧ ಬೇಕೆ ಬೇಡವೆ ಎಂಬುದನ್ನು ನಿರ್ಧರಿಸುವಲ್ಲಿ ಮಹಿಳೆಯರ ಪಾತ್ರವೇನೂ ಇರದಿದ್ದರೂ ಯುದ್ಧದ ಸಮಯದಲ್ಲಿ ಹಾಗೂ ಅನಂತರ ಮಹಿಳೆಯರು ಹಿಂಸೆ, ಅತ್ಯಾಚಾರ, ಪ್ರಾಣ, ಆಸ್ತಿ ಹರಣದಂತಹ ತೀವ್ರ ಪರಿಣಾಮಗಳಿಗೆ ಈಡಾಗುತ್ತಾರೆ.[೪೫]

ಇಂದಿನ ವೈಜ್ಞಾನಿಕ-ತಂತ್ರಜ್ಞಾನದ ಯುಗದಲ್ಲಿ ಭಾರತೀಯ ಮಹಿಳೆಯರ ಜೀವನ ಶೈಲಿ, ಅನೇಕ ರೀತಿಗಳಿಂದ ಬದಲಾಗಿದೆ. ಇಂದು ಗ್ರಾಮೀಣ ಮಹಿಳೆಯರೂ ಶಿಕ್ಷಣ, ಉದ್ಯೋಗವನ್ನರಸಿ ನಗರಗಳಿಗೆ ಬರುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಉದ್ಯಮರಂಗದಲ್ಲೂ ಅವರು ಯಶಸ್ವಿಗಳಾಗುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಹಿಂದಿನಂತೆ ಮಹಿಳೆ ಈಗ ಏಕಾಂಗಿಯಾಗಿ ಜೀವನ ಹೋರಾಟ ನಡೆಸದೆ ಮಹಿಳೆಯರು ಸಂಘಟಿತರಾಗಿ ಒಗ್ಗಟ್ಟಿನಿಂದ ತಮ್ಮ ಉದ್ದೇಶ ಸಾಧನೆಗೆ ಮುಂದಾಗುತ್ತಿದ್ದಾರೆ. ಇಂತಹ ಕಾರ್ಯಕ್ಕೆ ಕೂಡ ಭಾರತದಲ್ಲಿ ಪೂರ್ವೋಲ್ಲೇಖಗಳು(Back References) ದೊರೆಯುತ್ತವೆ. ಮಹಿಳೆ

ಯರನ್ನು ಮಾನವವ್ಯಕ್ತಿಗಳೆಂದು ಗೌರವಿಸಲು, ಮುಖ್ಯವಾಹಿನಿಗೆ ತರಲು ಶ್ರಮಿಸಿದ ಸಮಾಜ ಸುಧಾರಕರು-ಪುರುಷರು ಮತ್ತು ಮಹಿಳೆಯರು, ಸಮಾಜದಲ್ಲಿ ಪರಿವರ್ತನೆಗೆ ಶ್ರಮಿಸಿದ ಬಗೆ ಅತ್ಯಂತ ಕುತೂಹಲಕಾರಿಯಾಗಿದೆ.

ಅಡಿಟಿಪ್ಪಣಿಗಳು

೧. ಎ.ಬಿ.ಅಲ್ತೇಕರ್, ಪೊಸಿಷನ್ ಆಫ್ ವಿಮೆನ್ ಇನ್ ಹಿಂದೂ ಸಿವಿಲೈಜೇಷನ್, ಮೋತಿಲಾಲ್ ಬನಾರಸೀದಾಸ್, ಡೆಲ್ಲಿ, ೧೯೬೨

೨. ಡಾ.ವಿಜಯಾ ದಬ್ಬೆ, ಮಧ್ಯಯುಗೀನ ಭಾರತೀಯ ಮಹಿಳೆ: ಕೆಲವು ವಿಚಾರಗಳು ನಾರಿ:ದಾರಿ:ದಿಗಂತ, ೧೯೯೮

೩. ಪ್ರೊ.ಎಂ.ಎನ್.ಶ್ರೀನಿವಾಸ್, ದಿ ಚೇಂಜಿಂಗ್ ಪೊಸಿಷನ್ ಆಫ್ ಇಂಡಿಯನ್ ವಿಮೆನ್, ಆಕ್ಸ್‌ಫರ್ಡ್‌ಯುನಿವರ್ಸಿಟಿ, ೧೯೭೮

೪. ಚಾರ್ಲ್ಸ್ ಕಿಂಗ್ಲೀ, ಮೆನ್ ಮಸ್ಟ್ ವರ್ಕ್ ಅಂಡ್ ವಿಮೆನ್ ಮಸ್ಟ್ ವೀಪ್, ಡೆವಲಪ್‌ಮೆಂಟ್ ಆಫ್ ವಿಮೆನ್ ಇನ್ ಮಾರ್ಡನ್ ಇಂಡಿಯಾ

೫. ರೊಮಿಲಾಥಾಪರ್: ಜಿ.ಸುಬ್ರಹ್ಮಣ್ಯ, ಭಾರತೀಯ ಸಮಾಜದ ಸಮಾಜಶಾಸ್ತ್ರ ''ಸ್ತ್ರೀಯರ ಬಗೆಗಿನ ಸಮಾಜಶಾಸ್ತ್ರೀಯ ದೃಷ್ಟಿಕೋನಗಳು'', ೧೯೯೭

೬. ಡಾ.ಆರ್.ಇಂದಿರಾ, ಭಾರತದಲ್ಲಿ ಮಹಿಳೆಯರು ಐತಿಹಾಸಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನ(ಮಹಿಳಾ ಅಧ್ಯಯನ)

೭. ಬಿ.ಎಸ್.ರಾಮಕೃಷ್ಣರಾವ್(ಅನು), ಭಾರತೀಯ ವಿದ್ಯೆ, ಮೂಲ: ಶ್ರೀಧರಭಾಸ್ಕರ್ ವೆಣೇಕರ್, ಭಾರತೀಯ ವಿದ್ಯಾಭವನ

೮. ಬಿ.ಎಸ್.ರಾಮಕೃಷ್ಣರಾವ್(ಅನು), ಭಾರತೀಯ ವಿದ್ಯೆ, ಮೂಲ: ಶ್ರೀಧರಭಾಸ್ಕರ್ ವೆಣೇಕರ್, ಭಾರತೀಯ ವಿದ್ಯಾಭವನ

೯. ಅಥರ್ವ ಸಂಹಿತೆ-೧೧-೫, ಪು.೧೮

೧೦. ಬಿ.ವಿ.ವೀರಭದ್ರಪ್ಪ(ಸಂ.), ವೇದಗಳಲ್ಲಿ ಮಹಿಳೆಯರು, ವಿಚಾರ ಸಾಹಿತ್ಯ, ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು

೧೧. ಕಾರ್ಯೇಷುದಾಸಿ, ಕರಣೇಷು ಮಂತ್ರಿ, ಶಯನೇಷು ವೇಶ್ಯ (ರಂಭಾ), ರೂಪೇಷು ಲಕ್ಷ್ಮೀ, ಭೋಜ್ಯೇಷು ಮಾತಾ ಕ್ಷಮಯಾಧರಿತ್ರೀ ಷಾಡ್ಗುಣ್ಯ ಲಕ್ಷ್ಮೀಂ ಕುಲಂ ಉದ್ಧರಂತೀ

೧೨. ಪಿ.ಎನ್.ಮುಖರ್ಜಿ ಮತ್ತು ಊಮೆನ್ ಟಿ.ಕೆ., **ಇಂಡಿಯನ್ ಸೋಷಿಯಾಲಜಿ ರಿಫ್ಲೆಕ್ಷನ್ಸ್ ಅಂಡ್ ಇಂಟ್ರಸ್ಪೆಷನ್ಸ್**, ಪಾಪ್ಯುಲರ್ ಪ್ರಕಾಶನ, ಬಾಂಬೆ, ೧೯೮೬

೧೩. ಹರ್ಬಿಲಾಸ್‌ಸಾರ್ದ, **ಸ್ಪೀಚಸ್ ಅಂಡ್ ರೈಟಿಂಗ್**, ಅಜ್ಮೀರ್ ವೇದಿಕ್ ಯಂತ್ರಾಲಯ, ೧೯೩೫

೧೪. ಅದೇ,

೧೫. ಡಾ.ಆರ್. ಇಂದಿರಾ, **ಭಾರತದಲ್ಲಿ ಮಹಿಳೆಯರು** (ಮಹಿಳಾ ಅಧ್ಯಯನ, ಜುಲೈ, ೧೯೯೯)

೧೬. ಅದೇ,

೧೭. ಸೀತೆಯ ಈ ಉದ್ಗಾರ ವ್ಯಂಗ್ಯವನ್ನು ಸೂಚಿಸಬಹುದು. ಈ ಎರಡನೇ ಸಂದರ್ಭದಲ್ಲಿ ಸೀತೆ ತನ್ನ ತಾಯಿಯಾದ ಭೂಮಿಯನ್ನು ಬಾಯ್ದೆರೆಯುವಂತೆ ಅರ್ಥಾತ್ ಭೂಕಂಪವಾಗುವಂತೆ ಕೋರುತ್ತಾಳೆ. ಆಗ ಭೂಮಿ ಅಗಲವಾಗಿ ಬಿರುಕುಬಿಟ್ಟು ಸೀತೆ ಧರೆಯೊಳಗೆ ಸೇರುತ್ತಾಳೆ ಎಂಬ ಪ್ರಕ್ಷಿಪ್ತ ಉಪಾಖ್ಯಾನವೂ ಇದೆ. ಇದು ಸತ್ಯವೋ, ಅಸತ್ಯವೋ ತಿಳಿಯದು. ಆದರೆ ನಾವು ಮಹಾಕಾವ್ಯದಲ್ಲೇ ಮೊಟ್ಟಮೊದಲ ಬಾರಿಗೆ ಸೀತೆಯೇ ರಾಮನ ಅನುಮಾನ ಹಾಗೂ ನಿರ್ದಯ ನಡವಳಿಕೆಗೆ ರೋಸಿ ಹೋಗಿ ವಿಚ್ಛೇದನೆ ನೀಡಿದಳೆಂದು ಅರ್ಥೈಸಲೂ ಅವಕಾಶವಿದೆ. ಈ ಸಂದರ್ಭದಲ್ಲಿ ಮಿನಿಗವಿತೆಯೊಂದನ್ನು ಇಲ್ಲಿ ಉಲ್ಲೇಖಿಸಬಹುದು.

ಶೀಲ ಶಂಕಿಸದ ಪತಿಯ
ಬಿರುನುಡಿ ಕೇಳಿ
ನಿಂತ ನೆಲವದುರಿ ಬಿರುಕುಬಿಟ್ಟಾಗ
ಕೆರಳಿದ ಸೀತೆ ಕಂಪಿಸದೆ
ಧರಾಗತೆಯಾದಾಗಲೇ ಬಹಿರಂಗ
ವಿಚ್ಛೇದನೆಯ ಮೊದಲ ನಿದರ್ಶನ
ಜಗದ ಮುಂದಿತ್ತು — ವೈ.ಎಸ್.ಜ್ಯೋತಿ **ಶಶಿಕುಮಾರ**, ೧೯೮೯

೧೮. ಅಹಲ್ಯಾ ದ್ರೌಪದಿ ಸೀತಾ ತಾರಾ ಮಂಡೋದರಿ ತಥಾ ಪಂಚಕನ್ಯಾ (ಪಂಚಕಂನಃ) ಸ್ಮರೇನ್ನಿತ್ಯಂ ಮಹಾಪಾಪವಿನಾಶನಂ,

೧೯. ಮಹಿಳೆಯರ ರಾಜ್ಯ

೨೦. ಪಿತಾರಕ್ಷತಿ ಕೌಮಾರೇ ಭರ್ತಾರಕ್ಷತಿ ಯೌವ್ವನೇ ಪುತ್ರಾಃ ರಕ್ಷಂತಿ ವಾರ್ಧಕ್ಯೇನಸ್ತ್ರೀ ಸ್ವಾತಂತ್ರ್ಯಮರ್ಹತೀ (ಮನುಸ್ಮೃತಿ)

೨೧. ಎನ್.ಜಿ.ಸುಬ್ರಹ್ಮಣ್ಯಂ, ಭಾರತೀಯ ಸಮಾಜಶಾಸ್ತ್ರ,

೨೨. "ಅವಿಭಕ್ತ ಕುಟುಂಬಗಳು ಹಿಂದೂ ಸಮಾಜವ್ಯವಸ್ಥೆಯ ಘಟಕಗಳಾಗಿದ್ದವು. ಮಿತಾಕ್ಷರ ಪದ್ಧತಿಯಲ್ಲಿ "ಕರ್ತೃ" ಎಂದರೆ ಕುಟುಂಬ ಮುಖ್ಯಸ್ಥನೇ ಎಲ್ಲ ವ್ಯವಹಾರಗಳನ್ನು ನಡೆಸುತ್ತಿದ್ದ ಗಂಡು ಸಂತಾನ ಮಾತ್ರ ಪಿತ್ರಾರ್ಜಿತ ಆಸ್ತಿಯ ಹಕ್ಕನ್ನು ಹುಟ್ಟಿನಿಂದಲೇ ಪಡೆಯುತ್ತದೆ. ಮಗಳು ದಾಯಾದಿ ಯಾಗುವುದಿಲ್ಲ ಕೇವಲ ಜೀವನಾಂಶ ಪಡೆಯಬಲ್ಲಳು. ದಾಯಭಾಗ ಪದ್ಧತಿಯಲ್ಲಿ ವಿಧವೆಯರ ಹಕ್ಕುಗಳ ದೃಷ್ಟಿಯಿಂದ ಉದಾರವಾಗಿದೆ. ಪತಿಯ ಮರಣದ ನಂತರ ವಿಧವೆಯು ಅವಳ ಮರಣದ ತನಕ ಆಸ್ತಿಯಲ್ಲಿ ಪಾಲುಪಡೆಯುವ ಹಕ್ಕುಳ್ಳವಳಾಗಿರುತ್ತಾಳೆ. ಆದರೆ ಅದು ಅವಳ ಜೀವಿತಾವಧಿಗೆ ಮಾತ್ರ ಸೀಮಿತವಾಗಿದೆ" ಗೀತಾ ಕೃಷ್ಣಮೂರ್ತಿ, ಮಹಿಳೆ ಕಾನೂನು ಮತ್ತು ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

೨೩. ಎನ್.ಜೆ.ಸುಬ್ರಹ್ಮಣ್ಯ, **ಭಾರತೀಯ ಸಮಾಜದ ಸಮಾಜಶಾಸ್ತ್ರ -ಸ್ತ್ರೀಯರ ಬಗೆಗಿನ ಸಮಾಜಶಾಸ್ತ್ರೀಯ ದೃಷ್ಟಿಕೋನಗಳು**

೨೪. ಅದೇ

೨೫. Basu, Commentary on the Constitution of India(3rd Edition) P.69

೨೬. ಯೂಸುಫ್-ವಿರುದ್ಧ-ಬೊಂಬಾಯಿ ಸರ್ಕಾರ, ೧೯೫೪, ಸ.ನ್ಯಾ.೩೯೮

೨೭. ಟುವಾರ್ಡ್ಸ್ ಈಕ್ವಾಲಿಟಿ, ಡೆವಲಪ್‌ಮೆಂಟ್ ಅಂಡ್ ಪೀಸ್ (ವರದಿ ಸಂ.೧೧) ವಿಶ್ವಸಂಸ್ಥೆಯ ಮಹಿಳಾ ದಶಮಾನ ವಿಶೇಷ ಸಮಾವೇಶ, ಜುಲೈ ೧೯೮೫

೨೮. ಟುವಾರ್ಡ್ಸ್ ಈಕ್ವಾಲಿಟಿ, ರಿಪೋರ್ಟ್ಸ್ ಆಫ್ ಸೋಷಿಯಲ್ ವೆಲ್‌ಫೇರ ಅಂಡ್ ಎಜುಕೇಷನ್, ೧೯೭೪, ಪು.೧೪೮

೨೯. ರಿಪೋರ್ಟ್ ಆಫ್ ದಿ ನ್ಯಾಷನಲ್ ಕಮಿಟಿ ಆನ್ ವಿಮೆನ್ಸ್ ಎಜುಕೇಷನ್ ಮಿನಿಸ್ಟ್ರಿ ಆಫ್ ಎಜುಕೇಷನ್, ಗೌರ್ನಮೆಂಟ್ ಅಫ್ ಇಂಡಿಯಾ, ಡೆಲ್ಲಿ, ೧೯೫೯, ಪು.೧೮೯

೩೦. ಟುವಾರ್ಡ್ಸ್ ಈಕ್ವಾಲಿಟಿ ವರದಿ

೩೧. ದಿ ಹಿಂದೂ (ಸಂಡೇ) ಫೆಬ್ರವರಿ ೨೧, ೧೯೮೨, ಪು.೪

೩೨. ಗೀತಾ ಕೃಷ್ಣಮೂರ್ತಿ, ಮಹಿಳೆ, ಕಾನೂನು ಮತ್ತು ರಾಜಕಾರಣ, ಕನ್ನಡ ವಿಶ್ವವಿದ್ಯಾಲಯ. ಹಂಪಿ, ಪು.೨೪೦

೩೩. ಡಾ.ಸುಶೀಲಾ ಮೆಹತಾ, ರೆವೊಲ್ಯೂಷನ್ ಅಂಡ್ ದಿ ಸ್ಟೇಟಸ್ ಆಫ್ ವಿಮೆನ್ ಇನ್ ಇಂಡಿಯಾ

೩೪. ಟುವಾಡ್ಸ್ ಈಕ್ವಾಲಿಟಿ, ರಿಪೋರ್ಟ್ ಆಫ್ ಡಿಪಾರ್ಟ್‌ಮೆಂಟ್ ಆಫ್ ಸೋಷಿಯಲ್ ವೆಲ್‌ಫೇರ್ ಅಂಡ್ ಎಜುಕೇನ್ ರಿಪೋರ್ಟ್

೩೫. ಡೆಟಾ ಇಂಡಿಯಾ, ಡೆಲ್ಲಿ, ಏಪ್ರಿಲ್ ೧೨, ೧೯೭೬

೩೬. ಸುಶೀಲಾ ಮೆಹತಾ, ಇಮೇಜ್ ಆಫ್ ಎ ವುಮನ್ ರೆವೊಲ್ಯೂಷನ್ ಅಂಡ್ ದಿ ಸ್ಟೇಟಸ್ ಆಫ್ ವಿಮೆನ್ ಇನ್ ಇಂಡಿಯಾ

೩೭. ಸೆನ್ಸಸ್ ಆಫ್ ಇಂಡಿಯಾ ೧೮೮೧, ಸಂ.೧, ಪು.೨೫೪

೩೮. ಆರ್.ಎಂ.ಬ್ಯಾನರ್ಜಿ, ನೇಟಿವ್ ಫೀಮೇಲ್ ಎಜುಕೇಷನ್ ಇನ್ ವಿಮೆನ್ಸ್ ಮೂವ್‌ಮೆಂಟ್ ಇನ್ ಇಂಡಿಯಾ, ಪು.೧೦೨-೧೦೩

೩೯. ಎಂ.ಶ್ಯಾಮರಾವ್, ಮಾಡರ್ನ್ ಮೈಸೂರ್, ೧೯೩೬, ಪು.೭೦-೭೧

೪೦. ಡಾ.ವಿಜಯಾದಬ್ಬೆ, ನಾರಿ:ದಾರಿ-ದಿಗಂತ

೪೧. ಎಸ್.ಬರ್ನಾಡ್ ಫಾತಿಮಾ, ದಿ ಪ್ಲೈಟ್ ಆಫ್ ರೂರಲ್ ವಿಮೆನ್

೪೨. ಟುವಾರ್ಡ್ಸ್ ಈ ಕ್ವಾಲಿಟಿ ರಿಪೋರ್ಟ್ ಆಫ್ ಡಿಪಾರ್ಟ್‌ಮೆಂಟ್ ಆಫ್ ಸೋಷಿಯಲ್ ವೆಲ್‌ಫೇರ್ ಅಂಡ್ ಎಜುಕೇಷನ್

ಅಧ್ಯಾಯ ೨

ಸಾಮಾಜಿಕ-ಆರ್ಥಿಕ ಬದಲಾವಣೆಯ ಮುಖ್ಯ ವಾಹಕಗಳು

೧. ಹತ್ತೊಂಬತ್ತನೆಯ ಶತಮಾನ - ಶಿಕ್ಷಣದ ಮೂಲಕ ಸಮಾಜ ಸುಧಾರಣೆ-ಪರಿವರ್ತನೆಯ ಮಾರ್ಗದಲ್ಲಿ - ಆಧುನಿಕ ಶಿಕ್ಷಣ ಪದ್ಧತಿ

೨. ಮಹಿಳಾ ಕಲ್ಯಾಣ ಮತ್ತು ಅಭಿವೃದ್ಧಿ ಸಂಸ್ಥೆಗಳು

ಗಾಂಧೀಜಿಯವರ ಪ್ರಭಾವ : ರಾಷ್ಟ್ರೀಯ ಆಂದೋಲನಕ್ಕೆ ಆಹ್ವಾನ - ಕರ್ನಾಟಕದ ಮಹಿಳೆಯರು ಮತ್ತು ಸಾಮಾಜಿಕ ಪರಿವರ್ತನೆ(೧೮೮೧ ರಿಂದ ೧೯೮೧), ಮಹಿಳಾ ಕಲ್ಯಾಣ ಕ್ರಮಗಳು.

ಸಾಮಾಜಿಕ-ಆರ್ಥಿಕ ಬದಲಾವಣೆಯ ಮುಖ್ಯ ವಾಹಕಗಳು

ಭಾರತದ ಇತಿಹಾಸದಲ್ಲಿ ಮಾತ್ರವಲ್ಲದೆ ಜಗತ್ತಿನ ಎಲ್ಲಾ ದೇಶಗಳ ಸಾಂಸ್ಕೃತಿಕ ಚರಿತ್ರೆಯಲ್ಲಿ ಮಹಿಳೆಯ ಸ್ಥಾನಮಾನ ದ್ವಿತೀಯ ಸ್ಥಾನದ್ದೇ ಆಗಿದೆ. ಸಹಸ್ರಾರು ವರ್ಷಗಳಿಂದ ಪುರುಷ ಆಕೆಯ ಬದುಕಿಗೆ, ಕೀಳರಿಮೆ, ನಿರ್ಬಂಧ, ಭಯ, ಒತ್ತಡಗಳನ್ನಷ್ಟೇ ನೀಡುತ್ತ ಬಂದಿದ್ದಾನೆ. ಅಲ್ಲಲ್ಲಿ ಬೆರಳೆಣಿಕೆಯ ಅಪವಾದಗಳನ್ನು ಹೊರತುಪಡಿಸಿದರೆ ಮಹಿಳೆ ಗಂಡಿನಂತೆ ಬೆಳಕುಮುಖವಾಗದೆ ಅಂಧಕಾರ ಮುಖಿಯಾಗಿಯೇ ಉಳಿದು ಗುಪ್ತಗಾಮಿನಿಯಾಗಿಬಿಟ್ಟಿದ್ದಾಳೆ. ತಮ್ಮಂತೆಯೇ ಜೀವಿಸಬೇಕಾದ ಜೀವಿಗಳಿಗೆ ಉಂಟಾದ ಈ ಆತ್ಮಹತ್ಯಾಕಾರಕ ಅವಸ್ಥೆಯನ್ನು ಕಂಡು ಮತ್ತು ಅದರಿಂದ ಆಗುತ್ತಿರುವ ಬೌದ್ಧಿಕತೆ ಹಾಗೂ ಕ್ರಿಯಾ ಶೀಲತೆಯ ವಿನಾಶವನ್ನು ಗುರುತಿಸಿ ಕೆಲವೇ ಮಂದಿ ಪುರುಷರು ಹೆಣ್ಣಿನ ನಿಜಶಕ್ತಿಯನ್ನು ಗುರುತಿಸಲು, ಆಕೆಯ ಅಂತಃಶಕ್ತಿ ವಿಕಾಸವಾಗಲು ಮತ್ತು ಗಂಡಿನೊಡನೆ ಸಮಸಮವಾಗಿ ಜಗತ್ತಿನ ಪ್ರಗತಿಯಲ್ಲಿ ಪಾಲ್ಗೊಳ್ಳಲು ಅವಕಾಶಗಳನ್ನು ನೀಡುವ ಪ್ರಯತ್ನಗಳನ್ನು ಮಾಡಿದ್ದಾರೆ. ಅನೇಕ ವಿದೇಶಿ ಆಕ್ರಮಣಗಳನ್ನು ಎದುರಿಸಿದ ಭಾರತದೇಶಕ್ಕೆ ಆಯಾ ಧರ್ಮಗಳ ಸಂಸ್ಕೃತಿ ಹಾಗೂ ಜೀವನವಿಧಾನಗಳನ್ನು ಕೂಡ ಪಾಲಿಸುವಂತಾಯಿತು. ಪರಿಣಾಮವಾಗಿ ಜನ ಮತಾಂತರ ಹೊಂದಿ ಕೆಲವೊಮ್ಮೆ ಮತಾಂತರವಾಗದೆಯೂ ಇತರ ಧರ್ಮಗಳನ್ನು ಅನುಸರಿಸಬೇಕಾಯಿತು. ಆದರೆ ಇದೆಲ್ಲದರಿಂದ ಭಾರತೀಯ ಮಹಿಳೆಯರ ಸ್ಥಿತಿಗತಿ, ಸ್ಥಾನಮಾನದಲ್ಲಿ ಸುಧಾರಣೆಯೇನೂ ಕಾಣಲಿಲ್ಲ. ಬದಲಿಗೆ ಇನ್ನಷ್ಟು ಕಠಿಣ ಜೀವನವೇ ಒದಗಿತು. ಎಂದರೆ ಬುರಖಾ, ಮುಸುಕು ಹಾಗೂ ಮನೆಯೊಳಗೆ ಕೂಡ ಪುರುಷರೆದುರು ಸುಳಿಯದಂತಹ 'ಶಿಕ್ಷೆ' ಎದುರಿಸಬೇಕಾಯಿತು. ಹೀಗಾಗಿ, ಮಹಿಳೆಯರು ಇನ್ನಷ್ಟು ಅಂಧಕಾರದಲ್ಲಿ ತೊಳಲುವಂತಹ ಪರಿಸ್ಥಿತಿಯೊದಗಿತು. ಶಿಕ್ಷಣ ಮತ್ತು ಸಂಚಾರ, ಉದ್ಯೋಗ ಮುಂತಾದುವುಗಳಿಂದಲೂ ವಂಚಿತರಾದರು. ಆದರೆ ಭಾರತದಲ್ಲಿ ಇಂಗ್ಲಿಷರ ಆಗಮನದಿಂದ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿವರ್ತನೆಗಳಾದವು. ಭಾರತ ಸ್ವಾತಂತ್ರ್ಯವನ್ನು ಕಳೆದುಕೊಂಡು ಆಂಗ್ಲರ ದಾಸ್ಯಕ್ಕೆ ಗುರಿಯಾಯಿತೇನೋ ನಿಜ. ಅದರ ಬೆನ್ನ ಹಿಂದೆ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಹೋರಾಟವೂ ಪ್ರಾರಂಭವಾಯಿತು. ಈ ನಡುವೆ ಮರುಭೂಮಿಯಲ್ಲಿ ತಂಪು ನೀರುದೊರಕಿದಂತೆ ಮಹಿಳೆಯರ ವ್ಯಕ್ತಿಗತ ಸ್ವಾತಂತ್ರ್ಯದ ಹೋರಾಟವೂ ಮೊದಲಾಯಿತು. ಇಂಗ್ಲಿಷರ ಶಿಕ್ಷಣ ಪದ್ಧತಿ, ಪಾಶ್ಚಾತ್ಯ ನಾಗರಿಕತೆ, ಆಡಳಿತ ವ್ಯವಸ್ಥೆ ಮಹಿಳೆಯರ ಪಾಲಿಗೆ ವರದಾನವಾಯಿತು. ಹೀಗಾಗಿ, ಹತ್ತೊಂಬತ್ತನೆಯ ಶತಮಾನ ಭಾರತದ ಸಮಾಜ ಸುಧಾರಣೆಗೆ ಮಹಿಳೆಯರನ್ನು ಅಣಿಗೊಳಿಸಿದ, ಮುಂಚೂಣಿಗೆ ತಂದ ಅಪೂರ್ವ ಅವಕಾಶಗಳನ್ನು ನೀಡಿತು.

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಪುರುಷರೇ ಮಹಿಳೆಯರಿಗೆ ನೆರವಾಗದಿದ್ದರೆ ಅವರಿಗೆ ಮುನ್ನಡೆಯ ದಾರಿಗಳೇ ತೆರೆಯುತ್ತಿರಲಿಲ್ಲವೇನೋ, ಇಂಥ, ಬದಲಾವಣೆಗಳನ್ನು ಒದಗಿಸಿದ ಕೀರ್ತಿ ಬ್ರಿಟಿಷರಿಗೇ ಸಲ್ಲುತ್ತದೆ. ಅದರಲ್ಲಿ ಮೊಟ್ಟ ಮೊದಲನೆಯದು ಮಹಿಳಾ ಶಿಕ್ಷಣ. ಮಹಿಳೆಯರಿಗೆ ಶಿಕ್ಷಣ ಪಡೆಯುವ ಅವಕಾಶ ನಿಧಾನವಾಗಿಯಾದರೂ ಆಸಕ್ತಿದಾಯಕ ರೀತಿಯಲ್ಲಿ ಪ್ರಚಾರ ಪಡೆಯಿತು. ಶಿಕ್ಷಣ ಪಡೆದ ಮಹಿಳೆಯರು ತಮ್ಮ ಸಮಸ್ಯೆಗಳ ಜೊತೆಗೆ ಇತರ ಮಹಿಳೆಯರ ಸಂಕಷ್ಟಗಳನ್ನು ಬರೆಯಲು ಮುಂದಾದರು. ತತ್ಫಲವಾಗಿ ಸಂಘ ಸಂಸ್ಥೆಗಳು ಹುಟ್ಟಿಕೊಳ್ಳುತ್ತ ಪುರುಷರು ಮಹಿಳೆಯರ ಸ್ಥಿತಿಗತಿ, ಸಮಸ್ಯೆಗಳ ನಿವಾರಣೆಗೆ ಹೆಚ್ಚು ಆಸ್ಥೆವಹಿಸುವಂತಾಯಿತು. ರಾಷ್ಟ್ರೀಯ ಆಂದೋಳನದಲ್ಲಿ ಮಹಿಳೆಯರ ಪ್ರವೇಶವಾದದ್ದರಿಂದ ಅವರು ತಮ್ಮ ಹಕ್ಕು ಬಾಧ್ಯತೆ, ಅಧಿಕಾರಗಳ ಬಗೆಗೂ ಹೋರಾಡುವ ದಿಕ್ಕಿನತ್ತ ಗಮನಹರಿಸುವಂತಾಯಿತು. ವಸಾಹತುಶಾಹಿಗಳ ಆರ್ಥಿಕ ನೀತಿಯಿಂದ ಮಹಿಳೆಯರ ಮೇಲೆ ಆಗುತ್ತಿದ್ದ ಸಾಮಾಜಿಕ, ವ್ಯಕ್ತಿಗತ ಪರಿಣಾಮಗಳ ಬಗ್ಗೆ ಜಾಗತಿಕವಾಗಿ ಜಾಗೃತಿಮೂಡಿತು. ಪ್ಲಾಂಟೇಷನ್, ಮನೆಗೆಲಸ, ಕೃಷಿಕ್ಷೇತ್ರ, ಗಣಿಗಳು ಮುಂತಾದ ಶ್ರಮದಾಯಕ ಕ್ಷೇತ್ರಗಳಲ್ಲಿ ಮಹಿಳೆಯರ ಬದುಕಿನ ಬಗ್ಗೆ ಗಮನಹರಿಸುವ ಪ್ರಜ್ಞೆ ಮೂಡಿತು. ಒಟ್ಟಿನಲ್ಲಿ ರಾಜಕೀಯ, ಸಾಮಾಜಿಕ ಬದಲಾವಣೆಗಳ ಜೊತೆಜೊತೆಗೆ ಮಹಿಳೆಯರ ಬೌದ್ಧಿಕ ಹಾಗೂ ಮಾನಸಿಕ ವಿಕಾಸದ ಮೆಟ್ಟಿಲುಗಳು ಸ್ಪಷ್ಟವಾಗತೊಡಗಿದವು.

ಹತ್ತೊಂಬತ್ತನೆಯ ಶತಮಾನ

ಭಾರತದಲ್ಲಿ ಇಂಗ್ಲಿಷರ ಪ್ರಭಾವ ಹಾಗೂ ಅನುಕರಣೆಯೆಂಬಂತೆ ಸಮಾಜ ಸುಧಾರಕರೆಂದು ಕರೆಯಲಾದ ಪುರುಷರು ಅನೇಕ ಸಮಾಜ ಹಿತಕಾರಿ ಚಟುವಟಿಕೆಗಳ ಮೂಲಕ ಮಹಿಳೆಯರಲ್ಲಿ ಪರಿವರ್ತನೆಗೆ ಕಾರಣರಾದರು. ಇಂಥ ಸಮಾಜ ಸುಧಾರಣಾವಾದಿಗಳಲ್ಲಿ ರಾಜಾರಾಮ ಮೋಹನರಾಯ್ (೧೭೭೨-೧೮೩೩) ಅವರ ಹೆಸರು ಮೊಟ್ಟ ಮೊದಲನೆಯದು.

ರಾಮ ಮೋಹನರಾಯ್ ತಾಯಿಯ ವಿರುದ್ಧವಾಗಿ ನ್ಯಾಯಾಲಯದ ಕಟ್ಟೆ ಹತ್ತಬೇಕಾಗಿಬಂದಿತ್ತು. ಇವರಿಗೆ ತಮ್ಮ ತಾಯಿಯ ಸಬಲತೆ ಹಾಗೂ ಸ್ವತಂತ್ರ ಮನೋಭಾವದ ಬಗ್ಗೆ ಮೆಚ್ಚುಗೆಯಿದ್ದರೂ. ಆಕೆಯನ್ನು ಸಾರ್ವಜನಿಕವಾಗಿಯೇ ಅವಮಾನಿಸಿದ್ದರೆಂದು ತಿಳಿದುಬರುತ್ತದೆ. ಅದು ನಿಜವಾಗಿದ್ದಲ್ಲಿ ರಾಮಮೋಹನ್ ರಾಯ್ ಮಹಿಳೆಯರ ಏಳಿಗೆಗಾಗಿ, ಸತಿಪದ್ಧತಿ, ಬಾಲ್ಯವಿವಾಹ, ವೈಧವ್ಯ, ಶಿಕ್ಷಣ ನಿರಾಕರಣೆ ಇಂಥವುಗಳ ವಿರುದ್ಧ ಹೋರಾಡಿದ ಆದರ್ಶವ್ಯಕ್ತಿಯೆಂಬುದನ್ನು ಒಪ್ಪುವುದು ಕಷ್ಟವಾದರೂ. ಅಲ್ಲಗಳೆಯುವುದೂ ಅಷ್ಟೇ ಕಠಿಣ. ಆದಾಗ್ಯೂ ಚರಿತ್ರೆಯಲ್ಲಿ ವರದಿಯಾದ ಅಂಶಗಳನ್ನು ಶ್ರೀಮತಿ ಲತಾಮಣಿಯವರು "ಸಾಮಾಜಿಕ ಸಂಗತಿಗಳೇ ಪ್ರಧಾನವಾದ ಚರ್ಚೆಗಳಲ್ಲಿ ಮಹಿಳೆಯರನ್ನು ಬಲಿಪಶುಗಳೆಂದೋ ಅಥವಾ ನಾಯಕಿಯರೆಂದೋ ವರ್ಣಿಸುವ ವಿಪರೀತಗಳಿದ್ದವೇ ಹೊರತು ಮಹಿಳೆಯರಲ್ಲಿ

ಅಥವಾ ಅವರ ಸಂಘ ಸಂಸ್ಥೆಗಳಲ್ಲಿ ಇದ್ದಿರಬಹುದಾದ ಸಂಕೀರ್ಣತೆಗಳನ್ನು ಗ್ರಹಿಸುವ ಪ್ರಯತ್ನಗಳಿರಲೇ ಇಲ್ಲ. ಮಹಿಳೆಯ ಸ್ಥಿತಿಗತಿಗಳನ್ನು ನಿರ್ಧರಿಸುವ ಅಂಶ ಪರಂಪರೆಯ ನೆಲೆಗಟ್ಟಿನಲ್ಲಿತ್ತು ಎಂಬುದೇ ವಿವಾದಾಸ್ಪದ. ಏಕೆಂದರೆ ವಾಸ್ತವದಲ್ಲಿ ಇದಕ್ಕೆ ವಿರೋಧವೇ ಎನಿಸುವಂತೆ ಪರಂಪರೆಯನ್ನು ಕುರಿತು ಚರ್ಚೆಗಳಿಗೆ, ಅಲ್ಲಿ ತರಲಾಗುವ ಪರಿವರ್ತನೆಗಳಿಗೆ ಮಹಿಳೆಯನ್ನೇ ನೆಲೆಗಟ್ಟನ್ನಾಗಿ ಬಳಸಲಾಯಿತು ಎಂಬುದೇ ನಿಜ'' ಎಂದು ಕೂಡ ಸೂಚಿಸುತ್ತಾರೆ.[೧]

ಬ್ರಿಟಿಷರು ಈ ದೇಶವನ್ನು ನಾಗರಿಕಗೊಳಿಸುವ, ಆಧುನಿಕವಾಗಿಸುವ ಉದ್ದೇಶದಿಂದ ಅದನ್ನು ಸಮಾಜ ಸುಧಾರಣೆ ಎಂದು ಕರೆದರು. ಮುಖ್ಯವಾಗಿ ಮಹಿಳೆಯರಿಗೆ ಪರಂಪರಾಗತವಾಗಿ ನೀಡುತ್ತಿದ್ದ ಸಾಮಾಜಿಕ ಚೌಕಟ್ಟನ್ನು ವ್ಯತ್ಯಯಿಸಿ ಅವರನ್ನು ಆಧುನಿಕರನ್ನಾಗಿಸುವ ಪ್ರಯತ್ನವಿದಾಗಿತ್ತು. ಹೀಗಾಗಿ, ವ್ಯಕ್ತಿಗತವಾಗಿ ಮಹಿಳೆಯರ ನೋವು, ಅಗತ್ಯತೆ ಆಕಾಂಕ್ಷೆಗಳಿಗೆ ಕಿಂಚಿತ್ತು ಲಕ್ಷ್ಯ ನೀಡದೆ ಪುರುಷರ ಅಭೀಷ್ಟಕ್ಕೆ, ಅಗತ್ಯತೆಗೆ, ಐಷಾರಾಮಕ್ಕೆ ತಕ್ಕಂತೆ ಎರಕಹೊಯ್ಯುವ ಹುನ್ನಾರವೇ ನಡೆದಿತ್ತು. ಆದಾಗ್ಯೂ, ೧೯ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಬ್ರಿಟಿಷ್ ಇಂಡಿಯಾದ (ಎಂದರೆ ರಾಜರ ಆಳ್ವಿಕೆಗಳಿದ್ದ- ಇತರ ವಿದೇಶಿ ಆಡಳಿತವಿದ್ದ ಭಾಗಗಳನ್ನು ಹೊರತುಪಡಿಸಿ) ಬಹುಪಾಲು ಭಾಗಗಳಲ್ಲಿ ಸುಧಾರಣಾವಾದಿಗಳ ಸಂಖ್ಯೆ ಹೆಚ್ಚಾಗಿದ್ದಿತು. ಇವರು ಮುಖ್ಯವಾಗಿ ಸತಿಪದ್ಧತಿ, ಹೆಣ್ಣು ಶಿಶುಗಳ ಹತ್ಯೆ ನಿಷೇಧ(ಇದು ಈಗ ಮತ್ತೆ ವಿವಿಧ ಹಂತಗಳಲ್ಲಿ ಗಂಭೀರಸ್ವರೂಪ ತಾಳಿದೆ), ಬಹುಪತ್ನಿತ್ವ, ಬಾಲ್ಯವಿವಾಹ ಪದ್ಧತಿ, ಪರದಾ ಪದ್ಧತಿ, ಸ್ತ್ರೀ ಶಿಕ್ಷಣದ ನಿಷೇಧ, ದೇವದಾಸಿ ಪದ್ಧತಿ(ಇದು ಕೂಡ ಇಂದಿಗೂ ಕೊನೆಗೊಂಡಿಲ್ಲ), ಅವಿಭಕ್ತ ಕುಟುಂಬ ಪದ್ಧತಿ ಮುಂತಾದ ಸಮಸ್ಯೆಗಳ ನಿವಾರಣಾ ಉದ್ದೇಶಗಳಿಗೆ ಹೆಚ್ಚು ಮಹತ್ತ್ವ ನೀಡಿದ್ದರು. ಅಖಿಲಭಾರತ ಮಟ್ಟದಲ್ಲಿ ಈ ಉದ್ದೇಶ ಸಾಧನೆಗಾಗಿ ಸುಧಾರಣಾವಾದಿಗಳು ಸಂಘ ಸಂಸ್ಥೆಗಳನ್ನು ಪ್ರಾರಂಭಿಸಿದರು. ಹೀಗೆ ಮಹಿಳೆಯರ ಏಳಿಗೆಗಾಗಿ, ಸಮಾಜದಲ್ಲಿ ಅವರಿಗೆ ಸ್ಥಾನಮಾನ ಕಲ್ಪಿಸುವಲ್ಲಿ ತೀವ್ರ ಪ್ರಯತ್ನಗಳನ್ನು ನಡೆಸಿದ ಪುರುಷ ಸುಧಾರಕರು ಸಾಕಷ್ಟು ಸಂಖ್ಯೆಯಲ್ಲಿದ್ದುದಾಗಿ ತಿಳಿದು ಬರುತ್ತದೆ. ಈಶ್ವರಚಂದ್ರ ವಿದ್ಯಾಸಾಗರ್, ಕೇಶವ ಚಂದ್ರಸೇನ್, ಸ್ವಾಮಿ ವಿವೇಕಾನಂದ, ಸ್ವಾಮಿ ದಯಾನಂದ ಸರಸ್ವತಿ, ಖ್ವಾಜಾ ಅಲ್ತಾಫ್ ಹುಸೇನ್ ಅಲಿ, ಮಹಾದೇವ ಗೋವಿಂದ ರಾನಡೆ, ಧೋಂಡು ಕೇಶವ ಕರ್ವೆ, ಆರ್.ವೆಂಕಟರತ್ನಂ ನಾಯ್ಡು, ವೀರೇಶ ಲಿಂಗಂ ಹೀಗೆ ಅದೆಷ್ಟೋ ಜನ ಪುರುಷರು ಮಹಿಳೆಯರ ಬದುಕನ್ನು ಅನಿವಾರ್ಯ ಸಂಕೋಲೆಗಳಿಂದ ತಪ್ಪಿಸಿ, ಮುಕ್ತ ವಿಚಾರಗಳ ಬೆಳಕಿನ ಹಾದಿಯನ್ನು ತೆರೆದಿಟ್ಟರು. ಮಾರ್ಗದರ್ಶಕರಾದರು. ಕ್ರಿಯಾಶೀಲ ಚಳವಳಿಗಾರರಾಗಿದ್ದ ಈ ಸುಧಾರಣಾ ವಾದಿಗಳು ಸಾಕಷ್ಟು ವಿದ್ಯಾವಂತರೂ ಉನ್ನತ ವಿಚಾರಗಳನ್ನು ಹೊಂದಿದ್ದ ಚಿಂತನ ಶೀಲರೂ ಆಗಿದ್ದರು. ಹೀಗಾಗಿ ತಂತಮ್ಮ ಕುಟುಂಬ, ಊರುಗಳಲ್ಲಿ ಹಿಂದೂ ಸಮಾಜ ಮಹಿಳೆಯರನ್ನು ನಡೆಸಿಕೊಳ್ಳುತ್ತಿದ್ದ

ಪರಿಯ ಬಗ್ಗೆ ಚೆನ್ನಾಗಿ ತಿಳಿದವರಾಗಿದ್ದರು. ಅದಕ್ಕೆಂದೇ ಮಹಿಳೆಯರ ದುಃಸ್ಥಿತಿಯನ್ನು ನಿವಾರಿಸಲು ಅವರ ಬದುಕನ್ನು ಪರಿವರ್ತಿಸಲು ಪ್ರಾಮಾಣಿಕವಾಗಿ ಮುಂದಾದರು.

ಈಶ್ವರ ಚಂದ್ರ ವಿದ್ಯಾಸಾಗರ್ (೧೮೨೦-೧೮೯೧) : ಬಡತನದಲ್ಲಿ ಬೆಳೆದು ಕಷ್ಟಕರ ವಿದ್ಯಾರ್ಥಿ ದೆಸೆಯನ್ನು ಕಳೆದವರು. ಎಳೆವಯಸ್ಸಿನ ಬಾಲ ವಿಧವೆಯರನ್ನು ಕಂಡು ಮಮ್ಮಲ ಮರುಗಿ ಬಾಲ್ಯವಿವಾಹಗಳನ್ನು ಆಗಲೇ ಪ್ರತಿಭಟಿಸಿದ್ದರು. ವಿಧವಾ ಪುನರ್ ವಿವಾಹಗಳಿಗೆ ಪ್ರೋತ್ಸಾಹ ನೀಡಲು ತಮ್ಮ ಬದುಕನ್ನೇ ಸಮರ್ಪಿಸಿಕೊಂಡಿದ್ದರು. ಒಂಟಿ ಮಹಿಳೆಯರ ದುರ್ಭರ ಜೀವನಕ್ಕೆ ದಾರಿತೋರಲು ಸ್ತ್ರೀ ಶಿಕ್ಷಣಕ್ಕೆ ತುಂಬಾ ಪ್ರೋತ್ಸಾಹ ನೀಡಿದರು. ಜೊತೆಗೆ ಬಹುಪತ್ನಿತ್ವ ವಿರೋಧಿ ಆಂದೋಲನವನ್ನೂ ಕೂಡ ಕೈಗೊಂಡಿದ್ದರು. ತಮ್ಮ ವಿಚಾರಗಳನ್ನು ಪ್ರಚಾರಕ್ಕೆ ತರಲು ಪ್ರಾಚೀನ ಸಂಸ್ಕೃತ ಗ್ರಂಥಗಳನ್ನು ಆಧಾರವಾಗಿ ಬಳಸಿದರು. ನಮ್ಮ ಧರ್ಮಗಳ ಮೇಲೆ ಪರಕೀಯ ದಬ್ಬಾಳಿಕೆಯಿಂದಾಗಿ ಮಹಿಳೆಯರ ಮೇಲೆ ಮಾತ್ರ ದುಷ್ಟಪದ್ಧತಿಗಳನ್ನು ಹೇರಲಾಗಿದೆ ಎಂಬುದನ್ನು ಪುರುಷರಿಗೆ ಮನದಟ್ಟು ಮಾಡಿಸಲು ಪ್ರಯತ್ನಿಸಿದರು. ವಿಧವೆಯರ ಮರುವಿವಾಹದ ಬಗ್ಗೆ ಬರೆದ ಪುಸ್ತಕ(೧೮೫೫) ಪ್ರಕಟವಾದ ಒಂದೇ ವಾರದೊಳಗೆ ಎರಡು ಸಾವಿರ ಪ್ರತಿಗಳು ಮಾರಾಟವಾದವು. ಎರಡನೆಯ ಮುದ್ರಣದ ಮೂರು ಸಾವಿರ ಪ್ರತಿಗಳು, ಕೂಡಲೇ ಬಂದ ಮೂರನೇ ಮುದ್ರಣದ ಹತ್ತು ಸಾವಿರ ಪ್ರತಿಗಳು ಹೀಗೆಯೇ ಮಾರಾಟವಾಗಿ ಹೋದವು.[೨] ಹಾಗೆಂದಾಕ್ಷಣ ಈ ಅಭಿಪ್ರಾಯವನ್ನು ಸಕಲ ಸಮಸ್ತರೂ ಒಪ್ಪಿಬಿಟ್ಟರೆಂದೇನಲ್ಲ. ಕಲ್ಕತ್ತದ ಬೀದಿಬೀದಿಗಳಲ್ಲಿ ವಿದ್ಯಾಸಾಗರರನ್ನು ಕೆಟ್ಟ ಬೈಗಳಿಂದ ಅವಮಾನಿಸಿದರು, ಕೊಲೆಯ ಬೆದರಿಕೆಯನ್ನು ಹಾಕಿದರು.[೩] ಆದರೆ ವಿದ್ಯಾಸಾಗರರು ವಿಧವಾ ಪುನರ್ ವಿವಾಹವನ್ನು ಕಾನೂನುಬದ್ಧಗೊಳಿಸಬೇಕೆಂದು ಸರ್ಕಾರಕ್ಕೆ ಒತ್ತಾಯದ ಮನವಿಗಳನ್ನು ಸಲ್ಲಿಸುವುದನ್ನು ಬಿಡಲಿಲ್ಲ. ಸಾವಿರಾರು ಜನರ ಬೆಂಬಲಸಹಿ ಸಂಗ್ರಹಿಸಿ ಇಂಡಿಯನ್ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಕಳುಹಿಸಿದ್ದರು. ಇದಕ್ಕೆ ವಿರುದ್ಧವಾಗಿ ಇನ್ನೂ ಹೆಚ್ಚಿನ ಸಂಖ್ಯೆ ಸಹಿಗಳು ಹೋಗಿದ್ದರೂ ಎಚ್ಚೆತ್ತ ಅಲ್ಪಸಂಖ್ಯಾತರ ಮನವಿಗೆ ಮನ್ನಣೆ ದೊರೆತು, ೧೮೫೬ರಲ್ಲಿ ಹಿಂದೂ ವಿಧವಾ ಮರುವಿವಾಹ ಶಾಸನವು ಜಾರಿಯಲ್ಲಿ ಬಂದಿತು. ಈ ಶಾಸನ ಎಷ್ಟರ ಮಟ್ಟಿಗೆ ವಾಸ್ತವವಾಗಿ ವಿಧವೆಯರ ಬಾಳನ್ನು ಬೆಳಗಿಸಿತು ಎಂಬುದು ಪ್ರಶ್ನಾರ್ಥಕವೇ ಆಗಿದ್ದರೂ, ಇಂಥದೊಂದು ಮಾನವೀಯ ವರ್ತನೆಗೆ ಸಮಾಜವನ್ನು ಪರಿವರ್ತಿಸಲು ಈಶ್ವರ ಚಂದ್ರರು ಪ್ರಾಮಾಣಿಕ ಪ್ರಯತ್ನ ನಡೆಸಿದ್ದರೆಂಬುದನ್ನು ಮರೆಯುವಂತಿಲ್ಲ.

ಹೆಣ್ಣು ಮಕ್ಕಳು ಎಳೆವಯಸ್ಸಿನಲ್ಲಿ ತನಗಿಂತ ವಯಸ್ಸಿನಲ್ಲಿ ಎಷ್ಟೋ ಹಿರಿಯನಾದ ಮುದುಕನನ್ನು ವಿವಾಹವಾಗಿ ತೀರ ಶೋಚನೀಯ ಸ್ಥಿತಿ ಎದುರಿಸಬೇಕಾಗುತ್ತಿತ್ತು. ಗಂಡನ ಸಾವಿಗೂ ಅವಳನ್ನೇ

ಹೊಣೆಯಾಗಿಸಿ ಅಲಂಕಾರವಿರಲಿ, ಎಲ್ಲರ ಕಣ್ಣಿನಲ್ಲಿ ವಿರೂಪಿಯಾಗುವಂತಹ ಶಿಕ್ಷೆ ಆಕೆಗೆ ಕಟ್ಟಿಟ್ಟ ಬುತ್ತಿಯಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಜೀವ ಉಳಿಸಿಕೊಳ್ಳಲು ಹೆರವರ ಕರುಣೆಯಲ್ಲಿ ದುಡಿಯುವ ಆಳಾಗಿ, ಒಪ್ಪತ್ತಿನ ಕೂಳು ತಿನ್ನಲೂ ಕೂಡ ಪರಾವಲಂಬಿಯಾಗುವ ಪರಿಸ್ಥಿತಿಯಿತ್ತು. ಜೊತೆಗೆ ಪ್ರಾಯದ ಹುಡುಗಿಯರಿಗೆ ಎಲ್ಲಿದ್ದರೂ ಮಾನಹಾನಿಗೆ, ಅತ್ಯಾಚಾರಕ್ಕೆ ಬಲಿಯಾಗುವ ಸಂದರ್ಭಗಳಿತ್ತು. ವೇಶ್ಯೆಯರನ್ನಾಗಿಸುವ ಪ್ರಯತ್ನಗಳೂ ಇರದಿರಲಿಲ್ಲ. ವಯಸ್ಸಿನ ಬಯಕೆ, ಕಾಮನೆಗಳನ್ನು ಹತ್ತಿಕ್ಕಲಾರದೆ ಪುರುಷರ ಬಲೆಗೆ ತಾವಾಗಿಯೇ ಬಿದ್ದು ಗರ್ಭವತಿಯರಾಗುತ್ತಿದ್ದ ಹೆಣ್ಣು ಮಕ್ಕಳನ್ನಂತೂ ಜೀವಂತ ಶವವಾಗಿಸುವಂತಹ ಶಿಕ್ಷೆ ಕಾದಿರುತ್ತಿತ್ತು. ೧೮೮೧ರಲ್ಲಿ[೪] ಸೂರತ್ ಕೋರ್ಟಿನಲ್ಲಿ ವಿಜಯಲಕ್ಷ್ಮಿ ಎಂಬ ಬ್ರಾಹ್ಮಣ ತರುಣಿ ವಿಧವೆಯು ಅನೈತಿಕ ಸಂಬಂಧದ ಮೂಲಕ ಜನಿಸಿದ ತನ್ನ ಮಗುವನ್ನು ಕೊಲೆ ಮಾಡಿದುದಕ್ಕಾಗಿ ವಿಚಾರಣೆ ನಡೆಸಿ ನೇಣು ಶಿಕ್ಷೆ ವಿಧಿಸಲಾಗಿತ್ತು. ಆದರೆ ಅನಂತರ ಮೇಲ್ಮನವಿಗಳ ಮೂಲಕ ನಡೆಸಲಾದ ವಿಚಾರಣೆಗಳಲ್ಲಿ ಈ ಶಿಕ್ಷೆಯನ್ನು ಜೀವಾವಧಿಗೆ, ತರುವಾಯ ಐದು(೫) ವರ್ಷಗಳ ಕಠಿಣ ಶಿಕ್ಷೆಗೆ ಇಳಿಸಲಾಯಿತು. ಆದರೆ ಅವಳ ಆ ದುಸ್ಥಿತಿಗೆ ಕಾರಣನಾದ ಪುರುಷ ಯಾರೆಂದು ಕೂಡ ತಿಳಿಸಲಿಲ್ಲ. ಇದರಿಂದ ರೋಸಿದ ತಾರಾಬಾಯಿ ಶಿಂಧೇ(೧೮೫೦-೧೯೫೦) ಎಂಬ ಮರಾಠಿ ಮಹಿಳೆ 'ಸ್ತ್ರೀ ಪುರುಷ ತುಲನಾ' ಎಂಬ ಕಟುಟೀಕೆಯ ಪುಸ್ತಕವನ್ನು ಬರೆಯುವ ಮೂಲಕ ಪ್ರತಿಭಟಿಸಿದಳು. ಮಹಿಳೆಯರ ದೇಹಗಳು ಮಾತ್ರವೇ ಎಲ್ಲ ಪಾಪಕೂಪಗಳ ಆಗರವೆಂದೂ, ಈ ಯಾವ ಪಾಪಗಳೂ ಪುರುಷರ ದೇಹದಲ್ಲಿ ಇಲ್ಲವೆಂದು ಅರ್ಥವೇನು? ಹೆಣ್ಣೊಬ್ಬಳ ಗಂಡನು ಸತ್ತು ಹೋದರೆ ಒಂದು ನಾಯಿಗೂ ಅಸಹನೀಯವೆನಿಸುವ ಗತಿ ಅವಳಿಗೆ ಒದಗಿಬಿಡುತ್ತದೆ" ಎಂದು ಆಕೆ ಗುಡುಗಿದರು. ಸ್ತ್ರೀ ಪುರುಷರಲ್ಲಿ ಸಮಾನತೆಯಿಲ್ಲದ ಬಗ್ಗೆ ತಾರಾಬಾಯಿ ಶಿಂಧೆಯವರು ಆಕ್ರೋಶದಿಂದ ಎತ್ತಿದ ಈ ಪ್ರಶ್ನೆ ಜನರು ವಿಧವಾ ಮರುವಿವಾಹದ ಬಗ್ಗೆ ಗಮನಹರಿಸಿ ಚರ್ಚೆಗಳನ್ನು ನಡೆಸಲು ಕಾರಣವಾಯಿತು. ಆದರೆ ಜನರಿಂದ ಅದಕ್ಕೆ ಸೂಕ್ತ ಬೆಂಬಲವಾಗಲಿ, ಪರಿಣಾಮವಾಗಲಿ ಕಂಡುಬರಲಿಲ್ಲ. ಏಕೆಂದರೆ ಮಹಿಳೆಯರ ಬಗ್ಗೆ ಸಹಾನುಭೂತಿ, ಕನಿಕರ ತೋರುವ ಸುಧಾರಕರಿದ್ದರೇ ವಿನಾ ಅವರಿಗೆ ಪುರುಷರ ಜೊತೆ ಸಮಾನ ಸ್ಥಾನಮಾನ ನೀಡಬಲ್ಲ ಸಹೃದಯ ಪುರುಷರಿರಲಿಲ್ಲ.

ವಿದ್ಯಾಸಾಗರರು ಬಹುಪತ್ನಿತ್ವದ ಭೀಕರ ಸಮಸ್ಯೆ ಕಂಡು ಭಯಭೀತರಾಗಿದ್ದರು. ಆ ಬಗ್ಗೆ ಸವಿವರವಾಗಿ ಅಧ್ಯಯನ ನಡೆಸಿದಾಗ ಅನೇಕ ಕಟುವಾಸ್ತವಗಳು ಎದುರಾದವು.[೫] ಐವತ್ತು ವರ್ಷದ ವ್ಯಕ್ತಿಯೊಬ್ಬ ನೂರಾ ಹಳುಬಾರಿ ವಿವಾಹವಾಗಿದ್ದ; ಐವತ್ತೈದು ವರ್ಷದ ಭೋಲಾನಾಥ ಬಂದೋಪಾಧ್ಯ ನೆಂಬುವನಿಗೆ ಎಂಬತ್ತು ಜನ ಮಡದಿಯರು, ಅರವತ್ನಾಲ್ಕು ವರ್ಷ ವಯಸ್ಸಿನ ಭಗವಾನ್ ಚಟ್ಟೋಪಾಧ್ಯಾಯನಿಗೆ

ಎಪ್ಪತ್ತೆರಡು ಜನ ಹೆಂಡತಿಯರು ಹೀಗೆ ಅನೇಕ ದಾಖಲೆಗಳಿದ್ದವು! ಈ ಬಹುಪತ್ನಿತ್ವ ಅಮಾನುಷ ರೂಢಿಯಾಗಿ ಮುಂದುವರೆದಿತ್ತು. ಈಗಲೂ ಎಂದರೆ ಬಹುಪತ್ನಿತ್ವವನ್ನು ಕಾನೂನು ರೀತ್ಯಾ ಅಪರಾಧವನ್ನಾಗಿ ಮಾಡಿದ ನಂತರವೂ ಬಹುಪತ್ನಿತ್ವ ನಿಷೇಧ ಅಧಿನಿಯಮ ಜಾರಿಯಲ್ಲಿರುವಾಗಲೂ ಒಬ್ಬಳಿಗಿಂತ ಹೆಚ್ಚು ಜನ ಪತ್ನಿಯರನ್ನು ಹೊಂದಿರುವ ಅನೇಕ ಪುರುಷರನ್ನು ಕಾಣುತ್ತಿದ್ದೇವೆ.ಮೇಲ್ಜಾತಿಯವರಲ್ಲಿದ್ದ ಈ ದುಷ್ಟ ಪ್ರವೃತ್ತಿಯು ಶ್ರೀಮಂತಿಕೆಯ, ಆಡಂಬರದ ಹಾಗೂ ಪೌರುಷತ್ವದ ಸಂಕೇತ ಎಂದು ಭಾವಿಸಲಾಗುತ್ತಿದ್ದ ಬಗ್ಗೆ ಸಾಕಷ್ಟು ಪುರಾವೆಗಳಿವೆ. ಕೆಳ ಹಾಗೂ ಅತ್ಯಂತ ಹಿಂದುಳಿದ ಸಮುದಾಯಗಳಲ್ಲಿ ಈ ಬಗ್ಗೆ ಯಾರಿಗೂ ಲಕ್ಷ್ಯವೇ ಇರಲಿಲ್ಲ! ಇಂಥ ಭ್ರಷ್ಟ ಪದ್ಧತಿಯನ್ನು ನಿಷೇಧಿಸುವ ಕಾನೂನನ್ನು ಜಾರಿಗೊಳಿಸಬೇಕೆಂದು ಸರ್ಕಾರವನ್ನು ಕೋರಿ ವಿದ್ಯಾಸಾಗರರು ಎರಡೂವರೆ ಸಾವಿರ ಜನರ ಸಹಿ ಸಂಗ್ರಹಿಸಿದ್ದರು, ಆದರೆ ಫಲದೊರೆಯಲಿಲ್ಲ. ಮತ್ತೆ ಹತ್ತುವರ್ಷಗಳ ನಂತರ ೧೮೫೭ರ ಸಿಪಾಯಿ ದಂಗೆಯ ಕಾಲದಲ್ಲಿ ಇಪ್ಪತೊಂದು ಸಾವಿರ ಜನರ ಸಹಿಗಳನ್ನು ಸಂಗ್ರಹಿಸಲಾಗಿತ್ತು.

ಸಹಜವಾಗಿಯೇ ಸರ್ಕಾರ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ ಈಶ್ವರಚಂದ್ರರು ೧೮೭೧ ಹಾಗೂ ೧೮೭೩ರಲ್ಲಿ ಬಹುಪತ್ನಿತ್ವ ವಿರೋಧಿ ಕೃತಿಗಳನ್ನು ಬರೆದಿದ್ದರು. ಮಹಿಳೆಯರು ದುಸ್ತರ ಪರಿಸ್ಥಿತಿಗಳಿಂದ ಪಾರಾಗಲು ಶಿಕ್ಷಣವನ್ನು ಪಡೆಯಬೇಕೆಂದು ಈಶ್ವರಚಂದ್ರರು ದೃಢವಾಗಿ ನಂಬಿದ್ದರು. ಹೀಗಾಗಿ. ಸಮೂಹ ಶಿಕ್ಷಣದ ಬಗ್ಗೆ ಪ್ರಚಾರ ಮಾಡಿದರು. ಅಧಿಕಾರವನ್ನೂ ಹೊಂದಿದ್ದ ಅವರು ಬಂಗಾಲದಲ್ಲಿ ದೇಶೀ ಶಿಕ್ಷಣ ಪದ್ಧತಿಯನ್ನು ಜಾರಿಯಲ್ಲಿ ತಂದರು. ಅದಕ್ಕಾಗಿ ಅನೇಕ ಶಾಲೆಗಳನ್ನು ತೆರೆದು ಶ್ರಮವಹಿಸಿ ದುಡಿದು ಕೆಲಮಟ್ಟಿಗೆ ಸಫಲರೂ ಆಗಿದ್ದರು. ಈಶ್ವರಚಂದ್ರ ವಿದ್ಯಾಸಾಗರರು ಮಹಿಳೆಯರ ಬಗ್ಗೆ ಆಪಾರ ಕಳಕಳಿ, ಪ್ರಗತಿಪರ ಧೋರಣೆ ಹೊಂದಿದ್ದರು. ಮಹಿಳೆಯರ ಉನ್ನತಿಗಾಗಿ ಅವರು ನಡೆಸಿದ ಎಡಬಿಡದ ಪ್ರಯತ್ನಗಳಿಗೆ ಖಚಿತವಾದ ಯಶಸ್ಸು ದೊರೆಯದಿದ್ದುದು ಅಚ್ಚರಿಯೇನಲ್ಲ. ಏಕೆಂದರೆ, ವಿಧವಾ ಮರುವಿವಾಹವನ್ನು ಆಗ ಒಪ್ಪುವವರೂ ಇರಲಿಲ್ಲ. ಮಾತ್ರವಲ್ಲ ಬಹುಪತ್ನಿತ್ವ ನಿಷೇಧವನ್ನೂ ಅಲಕ್ಷಿಸಲಾಗುತ್ತಿತ್ತು. ಮಹಿಳಾ ಶಿಕ್ಷಣವನ್ನೂ ಕೂಡ ಅನಿಷ್ಟವೆಂದು ಭಾವಿಸುವ ಜನರೇ ಹೆಚ್ಚಿನ ಸಂಖ್ಯೆಯಲ್ಲಿದ್ದುದರಿಂದ ಅದಕ್ಕೆ ಪ್ರೋತ್ಸಾಹ ನೀಡಲು ಯಾರೂ ಸಿದ್ಧರಿರಲಿಲ್ಲ. ವಿದ್ಯಾಸಾಗರರ ಜೀವನ ಚರಿತ್ರೆ ಬರೆದಿರುವ ಈಶ್ವರಚಂದ್ರಸೇನ್ ಅವರು ವಿದ್ಯಾಸಾಗರರ ಬಗ್ಗೆ ಹೀಗೆ ಬರೆದಿದ್ದಾರೆ : "ಮೂಲಭೂತ ಸುಧಾರಣೆಗಳನ್ನು ವಸಾಹತು ಸಂದರ್ಭದ ಒಳಗೇ ಬೆರೆಸಲು ಆತ ಪ್ರಯತ್ನಿಸಿದರು. ಅವರ ಚಿಂತನೆಗಳು ಅವರ ಅನೇಕ ಸಮಕಾಲೀನರಿಗೆ ತೀರಾ ಕ್ರಾಂತಿಕಾರಿಯದಾಗಿ ತೋರಿದವು. ಇತ್ತ ವಸಾಹತು ಪ್ರಭುತ್ವವು ಇಂಡಿಯಾದ ಪದ್ಧತಿಗಳನ್ನೇನೋ ಟೀಕಿಸುತ್ತಿತ್ತಾದರೂ ಪರಿವರ್ತನೆಯನ್ನು ತರಲು ವಿದ್ಯಾಸಾಗರರು ನಡೆಸುತ್ತಿದ್ದ ಪ್ರಯತ್ನಗಳನ್ನು ಬೆಂಬಲಿಸಲು ಇಚ್ಛಿಸಲಿಲ್ಲ. ೧೯ನೆಯ ಶತಮಾನದ ವಿಖ್ಯ,

ಸಮಾಜ ಸುಧಾರಕರ ಅತ್ಯುನ್ನತ ಪ್ರತಿನಿಧಿಯಾಗಿ ವಿದ್ಯಾಸಾಗರರು ದುಡಿದರು: ಸಾಮಾಜಿಕ ಬದಲಾವಣೆಗಾಗಿ ಅವರು ಅತ್ಯಂತ ಸಕಾರಾತ್ಮಕ ಚಟುವಟಿಕೆಗಳಲ್ಲಿ ನಿರಂತರ ಶ್ರಮವಹಿಸಿ ದುಡಿದರು.''[೬]

ಕುಂದುಕೂರಿ ವೀರೇಶಲಿಂಗಂ ಪಂತುಲು(೧೮೪೮-೧೯೧೯) : ಧಾರ್ಮಿಕ ಪದ್ಧತಿಗಳಲ್ಲಿ ಸೇರಿಹೋಗಿದ್ದ ಕೆಟ್ಟ ರೂಢಿಗಳನ್ನು ವಿರೋಧಿಸಿ, ನಿವಾರಿಸಿ ಧರ್ಮವನ್ನೇ ಮೂಲಭೂತವಾಗಿ ಶುದ್ಧೀಕರಿಸುವ ಅಗತ್ಯವಿದೆ ಯೆನ್ನುವುದು ಪಂತುಲು ಅವರ ಮುಖ್ಯ ವಿಚಾರವಾಗಿತ್ತು. ಹೀಗಾಗಿ ಶುದ್ಧವಾದ ಧರ್ಮ ಸಮಾಜಸುಧಾರಣೆ, ದೇಶ ಭಾಷೆಯಲ್ಲಿ ಶಿಕ್ಷಣ ಇವು ಸಮಾಜದ ಪ್ರಗತಿಗೆ ಆಧಾರವೆಂದು ಭಾವಿಸಿದ್ದರು. ಸಮಾಜಗಳ ಸದಸ್ಯರಾಗಿ ಸಮಾಜ ಸುಧಾರಣೆಗಾಗಿ 'ವಿವೇಕವರ್ಧಿನಿ' ಎಂಬ ಪತ್ರಿಕೆಯನ್ನೂ ಹೊರತರುತ್ತಿದ್ದರು. ೧೮೭೮ರಲ್ಲಿ ಒಂದು ಸಂಸ್ಥೆಯನ್ನೂ ಕಟ್ಟಿದರು. ಸಮಾರಂಭ, ವಿವಾಹ ಇತ್ಯಾದಿಗಳಲ್ಲಿ ನಾಚ್‌ವಾಲಿಗಳನ್ನು ಕರೆಸುವ ಪದ್ಧತಿ ನಿಲ್ಲಬೇಕೆಂದು ವಾದಿಸುತ್ತಿದ್ದರು. ತರುವಾಯ ವಿಧವಾ ಮರುವಿವಾಹವನ್ನು ತಮ್ಮ ಪ್ರಧಾನಗುರಿಯಾಗಿ ಸ್ವೀಕರಿಸಿದರು. ತತ್ಫಲವಾಗಿ ೧೮೮೧ರಲ್ಲಿ ಮೊತ್ತ ಮೊದಲಬಾರಿಗೆ ರಾಜಮಂಡ್ರಿಯಲ್ಲಿ ವಿಧವಾ ಮರುವಿವಾಹವನ್ನು ಮಾಡಿಸಿದರು. ಎದುರಾದ ವಿರೋಧಗಳ ನಡುವೆಯೇ ಹಲವಾರು ಇಂಥ ವಿವಾಹಗಳನ್ನು ನೆರವೇರಿಸಿದ್ದರು. ೧೮೯೧ರಲ್ಲಿ ವಿಧವಾ ವಿವಾಹ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಈ ಸಂಸ್ಥೆಯ ಉದ್ದೇಶಗಳನ್ನು ಅನುಮೋದಿಸಿದ ಹಲವಾರು ಬ್ರಾಹ್ಮಣ ಕುಟುಂಬಗಳು 'ಇಲ್ಲಿ ನಡೆಯುವ ಇಂಥಾ ವಿವಾಹಗಳಲ್ಲಿ ಭಾಗವಹಿಸಿ ಊಟ ಆತಿಥ್ಯಗಳನ್ನು ಸ್ವೀಕರಿಸುವೆವು' ಎಂದು ಸಹಿ ಮಾಡಿದ್ದರು.[೭] ಅಷ್ಟೇ ಅಲ್ಲ ಪ್ರಮುಖ ನಾಗರಿಕರು ವೀರೇಶಲಿಂಗಂರವರಿಗೆ ಬೆಂಬಲ ನೀಡುತ್ತಿದ್ದರು.

ಸ್ತ್ರೀ ಶಿಕ್ಷಣ ವೀರೇಶ ಲಿಂಗಂವರ ಮತ್ತೊಂದು ಸುಧಾರಣಾ ವಿಧಾನವಾಗಿತ್ತು. ಸಂಪ್ರದಾಯವಾದಿಗಳು ಹಾಗೂ ಸುಧಾರಣಾವಾದಿಗಳ ನಡುವೆ ನಡೆಯುತ್ತಿದ್ದ ಚರ್ಚೆಗಳು ವಿಭಿನ್ನವಾಗಿದ್ದು ಪಾಶ್ಚಾತ್ಯ ಜೀವನದ ಅಂಧಾನುಕರಣೆಯಾಗಿರಲಿಲ್ಲ. ಚಳವಳಿಯ ಸ್ವರೂಪದಲ್ಲಿರುತ್ತಿತ್ತು. ''ಪಾಶ್ಚಾತ್ಯ ಶಿಕ್ಷಣ ಪಡೆದ ಮೊದಲ ತಲೆಮಾರಿನ ಆಂಧ್ರದ ವಿದ್ಯಾವಂತ ತರುಣರಿಗೆ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸುಧಾರಣಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕಂಬ ಮೊದಲ ಪ್ರೇರಣೆ ದೊರೆತದ್ದು ವಿಧವಾ ಮರುವಿವಾಹದ ಪ್ರಚಾರದಿಂದಲೇ. ಇದು ಮಹಿಳೆಯರ ಸ್ಥಿತಿಗತಿಗಳಲ್ಲಿ ಬದಲಾವಣೆ ತರಬೇಕೆಂಬುದಕ್ಕೆ ಸಾಂಕೇತಿಕ ಪ್ರಯತ್ನವಾಗಿತ್ತು. ಕುಟುಂಬ ಮತ್ತು ಸಮಾಜದಲ್ಲಿ ಮಹಿಳೆಯರ ಪಾತ್ರಗಳೇನೆಂಬುದರ ಬಗ್ಗೆ ಇದ್ದ ಸಾಂಪ್ರದಾಯಿಕ ಚಿಂತನೆ, ಅಭಿಪ್ರಾಯಗಳಿಗೆ ಸವಾಲೆಸೆಯುವಂತಿತ್ತು. ಮುಖ್ಯವಾಗಿ ಈ ಹೊಸ ಮುನ್ನಡೆಯು ತೆಲುಗು ಸಾಹಿತ್ಯ ಮತ್ತು ಆಂಧ್ರದ ರಾಷ್ಟ್ರೀಯ ಚಳವಳಿಯ ಮೇಲೆ ತಾತ್ವಿಕವಾಗಿ ಗುರುತರವಾದ ಪ್ರಭಾವವನ್ನು ಬೀರಿತು''.[೮]

ಕಂದುಕೂರಿ ವೀರೇಶ ಲಿಂಗಂ ಪಂತುಲು ಅವರ ಉದಾತ್ತ ಧ್ಯೇಯ, ಆದರ್ಶ ಹಾಗೂ ಮಹಿಳಾ ಅಭಿವೃದ್ಧಿಯನ್ನು ಸಾಧಿಸಲು ಅವರು ಕೈಗೊಂಡ ಕ್ರಮಗಳು ಅಂದಿನ ಸಮಾಜದಲ್ಲಿ ದೊಡ್ಡ ಆಂದೋಲನ ವನ್ನೇ ಉಂಟುಮಾಡಿದ್ದವು. ಅವರಿಗೆ ತೆಲುಗುಭಾಷೆ, ಸಾಹಿತ್ಯ ಹಾಗೂ ರಾಷ್ಟ್ರೀಯತೆಯಲ್ಲಿ ಇದ್ದ ಅದಮ್ಯ ಉತ್ಸಾಹ, ಸಾಮರ್ಥ್ಯ ಅವರು ಕೈಗೊಂಡ ಸುಧಾರಣಾ ಕಾರ್ಯಗಳು ಗುರಿಮುಟ್ಟಲು ಕಾರಣವಾದ ಮಹಿಳಾ ಶಿಕ್ಷಣ ಪ್ರಸಾರಕ್ಕೆ ಹಾಗೂ ಸಮಾಜದ ಅನಿಷ್ಟ ಪದ್ಧತಿಗಳನ್ನು ತೊಡೆಯಲು ಅವರು ಯುವ ಜನಾಂಗವನ್ನು ಸಿದ್ಧಗೊಳಿಸಿದ ರೀತಿ ಇವು ಅನನ್ಯವೆನಿಸುತ್ತದೆ.

ಜಸ್ಟಿಸ್ ಮಹದೇವ ರಾನಡೆ (೧೮೪೨-೧೯೦೧): ಅಧ್ಯಾತ್ಮಿಕ ಪತ್ರಕರ್ತರಾಗಿದ್ದು ಅನಂತರ ನ್ಯಾಯಾಧೀಶ ರಾಗಿದ್ದರು. ಅಂದಿನ ಆಧುನಿಕ ತರುಣಜನಾಂಗದ ಆಸಕ್ತಿಗಳಂತೆ ರಾನಡೆಯವರೂ ಸಹ ಸಮಾಜದ ಓರೆಕೋರೆಗಳ ಬಗ್ಗೆ ಕಾಳಜಿ ಹೊಂದಿದ್ದರು. ವಿಧವಾ ವಿವಾಹ ಸಂಸ್ಥೆಯ ಪ್ರಾರಂಭಿಕ ಸದಸ್ಯರಾಗಿ ಸಕ್ರಿಯವಾಗಿ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಪೂನಾದಲ್ಲಿ ನ್ಯಾಯಾಧೀಶರಾಗಿದ್ದಾಗಲೇ ಇತರ ಸುಧಾರಣಾವಾದಿಗಳೊಂದಿಗೆ ಬೆರೆತು ಸಾಮಾಜಿಕ ಸುಧಾರಣೆಯ ಪ್ರಯತ್ನಗಳಲ್ಲಿ ತೊಡಗಿದರು. ಮೊದಲ ಪತ್ನಿ ನಿಧನರಾದಾಗ ತಂದೆಯ ಒತ್ತಾಯಕ್ಕೆ ಮಣಿದು ತನಗಿಂತ ೨೦ ವರ್ಷ ಕಿರಿಯಳಾದ ಹನ್ನೊಂದು ವರ್ಷದ ಬಾಲೆಯನ್ನು ಮರುವಿವಾಹವಾದರು. ಎಂದರೆ ಅಂಥವರಿಗೂ ತಮ್ಮ ಧ್ಯೇಯಕ್ಕನುಸಾರವಾಗಿ(ವಿಧವಾ ಮರುವಿವಾಹವಾಗಲು) ಸಾಧ್ಯವಾಗಲಿಲ್ಲವೆಂದರೆ ಸಾಮಾನ್ಯರ ಬಗ್ಗೆ ಏನು ಹೇಳಬಹುದು. ಆದರೆ ಅದೇ ಬಾಲಿಕೆಗೆ ಸರ್ವ ರೀತಿಯ ಶಿಕ್ಷಣ ಮಾರ್ಗದರ್ಶನ ನೀಡಿ ಆಕೆಯನ್ನು ಬೆಳೆಸಿದರು. ಮುಂದೆ ಭಾರತದ ಪ್ರಮುಖ ಮಹಿಳಾ ಸುಧಾರಣಾವಾದಿಗಳಲ್ಲಿ ಒಬ್ಬರಾದ ಪಂಡಿತಾ ರಮಾಬಾಯಿ ತಮ್ಮ ಸಾಮಾಜಿಕ ಚಟುವಟಿಕಗಳಿಂದ ಎಷ್ಟೋ ಜನ ಹೆಣ್ಣು ಮಕ್ಕಳಿಗೆ ದಾರಿದೀಪವಾದರು. ಉದಾತ್ತ ಧ್ಯೇಯಗಳನ್ನು ಹೊಂದಿದ್ದ ರಾನಡೆಯವರು ವಿಧವಾ ಮರುವಿವಾಹ, ಬಾಲ್ಯವಿವಾಹ, ಸ್ತ್ರೀ ಶಿಕ್ಷಣಗಳೇ ಮುಂತಾದುವುಗಳ ಬಗ್ಗೆ ಸಾಧನೆ ಮಾಡಬಯಸಿದ್ದರು. ಆದರೆ ಅಂದಿನ ಬಹುಜನ ತರುಣರಂತೆ ಸಂಪ್ರದಾಯ, ಪರಂಪರೆ ಹಾಗೂ ಆಧುನಿಕತೆಯ ನಡುವಣ ದ್ವಂದ್ವಕ್ಕೆ ಸಿಲುಕುವಂತಾಗಿತ್ತು. ಆದಾಗ್ಯೂ ತಮ್ಮ ಪ್ರಗತಿಪರ ನಿಲುವಿನಿಂದಾಗಿ ಅವರು ಸುಧಾರಣಾವಾದಿಯೆಂದೇ ಪ್ರಸಿದ್ಧಿಪಡೆದರು. ಮಹಿಳೆಯರು ಉನ್ನತ ಸ್ಥಾನಮಾನಗಳನ್ನು ಹೊಂದಿದ್ದು ಅವರು ಮತ್ತೆ ಅಧೋಗತಿಗೆ ಬೀಳಲು ಶಾಸ್ತ್ರ, ಪುರಾಣ, ಕಾವ್ಯಕರ್ತೃಗಳೇ ಕಾರಣವೆಂದು ಅವರು ನಂಬಿದ್ದರು. ಹಾಗಾಗಿ ಮತ್ತೆ ಮಹಿಳೆಯ ಪುನರುತ್ಥಾನ ಹಾಗೂ ಸಂಪೂರ್ಣ ಮೇಲುದಾರಿಕೆಯ ಸ್ವರ್ಣಯುಗ ಬರಬೇಕೆಂಬ ಹಂಬಲ ಹೊತ್ತಿದ್ದರು. ಇದಕ್ಕಾಗಿ ಕೇವಲ ಒಂದೇ ದಿನದಲ್ಲಿ ಇಂಥ ಪರಿವರ್ತನೆ ಸಾಧ್ಯವಾಗದ್ದರಿಂದ ಹಂತಹಂತವಾಗಿ ಇದನ್ನು ಸಾಧಿಸಬೇಕೆಂದು ಬಯಸಿದ್ದರು.

ರಾನಡೆಯವರು ಕಲ್ಪಿಸಿಕೊಂಡ ಸಂಪೂರ್ಣ ಪರಿವರ್ತಿತ ಸಮಾಜ "ಬಂಧಿತ ಸ್ಥಿತಿಯಿಂದ ಸ್ವತಂತ್ರ ಸ್ಥಿತಿಗೆ, ಅವಿಶ್ವಾಸದಿಂದ ವಿಶ್ವಾಸ ನಂಬಿಕೆಗಳಿಗೆ, ಅವ್ಯವಸ್ಥೆಯಿಂದ ಸುವ್ಯವಸ್ಥಿತ ಬದುಕಿಗೆ, ದ್ವೇಷ ಅಸಹನೆಗಳಿಂದ ಶಾಂತಿ ಸಹನೆಗಳಿಗೆ, ಕುರುಡು ದುರಂತಗಳಿಂದ ಮಾನವೀಯ ಭಾವದೆಡೆಗೆ ಸಾಗುವ ವಿಕಸನ ಪಡೆದ ಸಮಾಜವಾಗಿತ್ತು. ಬದಲಾವಣೆಯ ಬಗೆಗೆ ಜಡತೆಯಿಂದ ಇರುವುದು ಅಥವಾ ಅದರ ವಿರುದ್ಧವಾಗಿ ಕೆಲಸ ಮಾಡುವುದು ಇದರಿಂದ ಸಮಾಜವು ವಿನಾಶವಾದೀತು. ಅಷ್ಟೇ ಅಲ್ಲ ಭಾರತೀಯ ಸಮಾಜವು ಮರೆಯಾಗಿಯೇ ಬಿಡುವ ಸಾಧ್ಯತೆಯೂ ಇದೆ ಎಂದು ಎಚ್ಚರಿಸಿದರು." ಅವರೇ ಸ್ಥಾಪಿಸಿದ ನ್ಯಾಷನಲ್ ಸೋಷಿಯಲ್ ಕಾನ್ಫರೆನ್ಸ್ ನಲ್ಲಿ ರಾನಡೆಯವರು ಸಾಮಾಜಿಕ ಬದಲಾವಣೆಗಾಗಿ ನಾಲ್ಕು ಪ್ರಗತಿ ವಿಧಾನಗಳನ್ನು ಸೂಚಿಸಿದ್ದರು. ಅವುಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು:

೧. ನಮ್ಮ ಸನಾತನ ಧರ್ಮ ಅತ್ಯುನ್ನತ ಪರಂಪರೆಯನ್ನು ಹೊಂದಿದ್ದು ಅದರಲ್ಲಿ ಸೇರಿಕೊಂಡಿರುವ ಅನಿಷ್ಟ ಪದ್ಧತಿಗಳು ಇತರ ಧರ್ಮ ಪ್ರಭಾವದಿಂದ ಉಂಟಾಗಿವೆ. ಈ ಅಂಶವನ್ನು ಪರ ಹಾಗೂ ವಿರೋಧಿ ಅಭಿಪ್ರಾಯಗಳನ್ನು ಹೊಂದಿರುವವರೊಂದಿಗೆ ಮುಖಾಮುಖಿ ಚರ್ಚಿಸಿ ಇತ್ಯಾರ್ಥ ಮಾಡುವುದು.

೨. ಸುಧಾರಣೆ ತರಲು ಇತಿಹಾಸದ ಬಗ್ಗೆ ಚರ್ಚಿಸುವುದರಿಂದ ಸಾಧ್ಯವಾಗದಿದ್ದರೆ ನೈತಿಕ ಮಟ್ಟವನ್ನು ಆಧಾರವಾಗಿಟ್ಟು ಚರ್ಚೆಮಾಡಿ ಇತ್ಯರ್ಥ ಮಾಡಬೇಕು.

೩. ಸಮಾಜ ಹಾಗೂ ಜನರನ್ನು ಇವೆರಡರಿಂದ ಪರಿವರ್ತಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ ಕಾನೂನು, ನ್ಯಾಯಾಲಯಗಳಲ್ಲಿ ಪ್ರಕರಣಗಳ ಮೂಲಕ ಪರಿವರ್ತನೆಗೆ ಪ್ರಯತ್ನಿಸಬೇಕು.

೪. ಮೇಲಿನ ಎಲ್ಲವೂ ಪ್ರಯೋಜನಕಾರಿಯಾಗದಿದ್ದಲ್ಲಿ ಅಂತಿಮವಾಗಿ ಕ್ರಾಂತಿ, ಪ್ರತಿಭಟನೆಗಳನ್ನು ಆಂದೋಲನದ ಮೂಲಕ ನಡೆಸಿ ಸಮಾಜದಲ್ಲಿ ಬದಲಾವಣೆ ಉಂಟುಮಾಡಬೇಕು. ರಾನಡೆಯವರು ಈ ಉದ್ದೇಶಗಳನ್ನು ಹೊತ್ತು ೧೮೮೭ರಲ್ಲಿ ನಡೆಸಿದ ರಾಷ್ಟ್ರೀಯ ಸಮಾವೇಶದಲ್ಲಿ ನೂರಾರು ಜನ ಭಾಗವಹಿಸಿ ಬೆಂಬಲಿಸಿದ್ದರು. ಇದನ್ನು ರಾನಡೆ ಅಖಿಲಭಾರತ ಮಟ್ಟದಲ್ಲಿ ಮಹಿಳಾ ಸುಧಾರಣೆ ಆಗುತ್ತಿದೆಯೆಂದು ಭಾವಿಸಿದರು. ೧೯೦೧ರಲ್ಲಿ ಇಹಲೋಕವನ್ನು ತ್ಯಜಿಸಿದ ರಾನಡೆಯವರು (ಬಾಲ್ಯ)ವಿವಾಹವಾಗಿದ್ದ ರಮಾಬಾಯಿ(ಎಂಬ ಮಹಿಳೆ) ತನಗೆ ಅವರಿಂದ ದೊರೆತ ಮಾರ್ಗದರ್ಶನ, ಶಿಕ್ಷಣ ಹಾಗೂ ಆ ಕಾಲದ ಪದ್ಧತಿಗಳನ್ನು ದಾಖಲಿಸಿರುವ ಆತ್ಮಚರಿತ್ರೆಯೊಂದನ್ನು ಬರೆದಿದ್ದರು. ಅಷ್ಟೇ ಅಲ್ಲ ರಾನಡೆಯವರು ಸ್ಥಾಪಿಸಿದ ಆರ್ಯಸಮಾಜದ ಮಹಿಳಾ ಶಾಖೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಹಿಳೆಯರ ಜಾಗೃತಿಗಾಗಿ ಸಾಕಷ್ಟು ಪ್ರಯತ್ನ ನಡೆಸಿದ್ದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಸಮಾಜ ಪರಿವರ್ತನೆಯ ಕನಸುಕಂಡು ಆಧುನಿಕ ಸಮಾಜದ ಕನಸು ಕಟ್ಟಿಕೊಂಡಿದ್ದ ಸುಧಾರಣಾವಾದಿಗಳಿಗೆ ಮಹಿಳೆಯರು ಚರ್ಚೆಯ ವಿಷಯ ವಸ್ತುಗಳಾಗಿದ್ದರೆನ್ನಬಹುದು. ಏಕೆಂದರೆ ಮಹಿಳೆಯರು ತಮ್ಮ ಕುಟುಂಬದವರಾಗಿದ್ದು ಅವರಲ್ಲಿ ಸಾಮರಸ್ಯ, ಕೌಟುಂಬಿಕ ಸಮತೋಲನಗಳನ್ನು ತರುವ ಉದ್ದೇಶವೇ ಪ್ರಮುಖವಾಗಿತ್ತು. ಹೀಗಾಗಿ ಮಹಿಳೆಯರಿಗೆ ಪರಿಮಿತವಾದ, ಪುರುಷನಿಯಂತ್ರಿತ ಪ್ರಗತಿಯನ್ನು ಮಾತ್ರವೇ ಕಲ್ಪಿಸಿಕೊಡಬಯಸಿದ್ದರಲ್ಲದೆ, ಅವರಿಗೆ ಸ್ವತಂತ್ರ ವಿಚಾರ, ಸ್ವತಂತ್ರ ನಿರ್ಧಾರ ಹಾಗೂ ಪರಾವಲಂಬಿತನವಿಲ್ಲದೆ ಸ್ವಾವಲಂಬಿಗಳಾಗಿ ಸ್ವತಂತ್ರರಾಗಲು ಎಂದೂ ಅವಕಾಶ ನೀಡಲು ಸಿದ್ಧರಿರಲಿಲ್ಲ. ಅಷ್ಟೇ ಅಲ್ಲ ಸ್ವತಃ ಮಹಿಳೆಯರೇ ಆ ಬಗೆಯ ಮುಕ್ತಿ ಅಥವಾ ವಿಮೋಚನೆಯನ್ನು ಬಯಸಲಾರರು ಎಂದು ತಾವೇ ನಿರ್ಧರಿಸುತ್ತಿದ್ದರು. ಎಂದರೆ ಮಹಿಳೆಯರು ಶಿಕ್ಷಣ ಪಡೆಯಬೇಕು, ರೂಢಿಯಲ್ಲಿದ್ದ ಹಲಕೆಲವು ಅನಿಷ್ಟ ಪದ್ಧತಿಗಳ ಭಯಂಕರ ಪರಿಣಾಮದಿಂದ ಪಾರಾಗಬೇಕು ಎಂದು ಬಯಸುತ್ತಿದ್ದರು ಹಾಗೂ ಮಹಿಳೆಯರು ತಮ್ಮ ಕುಟುಂಬಗಳಲ್ಲೇ ತಮ್ಮ ಸಾರ್ಥಕತೆಯನ್ನು ಕಂಡುಕೊಳ್ಳುವಂತೆ ನೋಡಿಕೊಳ್ಳುತ್ತಿದ್ದರು.

ಶಿಕ್ಷಣದ ಮೂಲಕ ಸಮಾಜ ಸುಧಾರಣೆ

ಈ ಹಿಂದೆಯೇ ಹೇಳಿರುವಂತೆ ಸುಧಾರಣಾ ವಾದಿಗಳು ಮಹಿಳೆಯರಿಗೆ ಶಿಕ್ಷಣ ನೀಡಿದರೆ ಸಮಾಜವು ಪ್ರಗತಿಶೀಲವಾಗಲು ಸಾಧ್ಯವೆಂದು ಭಾವಿಸಿದ್ದರು. ಇದರಲ್ಲೂ ಸ್ವಾರ್ಥವಿಲ್ಲದಿರಲಿಲ್ಲ. ಮಹಿಳೆಯರಿಗೆ ಶಿಕ್ಷಣ ದೊರೆತರೆ ವಿದೇಶಿಯರು ಹಿಂದುಳಿದ, ಅಧಃ ಪತನಹೊಂದಿದ ಭಾರತೀಯ ಸಮಾಜವೆಂದು ಹೀಗಳೆಯಲು ಸಾಧ್ಯವಿರಲಿಲ್ಲ. ಇನ್ನು ಬಹುಪಾಲು ಶ್ರೀಮಂತ ಕುಟುಂಬದ ತರುಣರು ವಿದ್ಯಾವಂತರಾಗಿ, ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ವಾಸ್ತವ್ಯ ಮಾಡಿ ಬಂದಿರುತ್ತಿದ್ದರು. ಅವರಿಗೆ ಶಿಕ್ಷಣ ಪಡೆದ ಹೆಂಡತಿಯರನ್ನು ಹೊಂದುವ ಆಸೆ ಸಹಜವಾಗಿರುತ್ತಿತ್ತು. ಅಷ್ಟೇ ಅಲ್ಲ ತಮ್ಮ ವೃತ್ತಿಗೆ ಬೆಂಬಲವಾಗಿ ಹಾಗೂ ದುರ್ದೆಶೆಯಲ್ಲಿರುವ ಇತರ ಮಹಿಳೆಯರ ಉದ್ಧಾರಕ್ಕಾಗಿ, ಒಟ್ಟಿನಲ್ಲಿ ಸಮಾಜ ಸುಧಾರಣೆಗೆ ತಮ್ಮ ಹೆಗಲನ್ನು ಕೊಡುವ ಅರ್ಧಾಂಗಿಯರನ್ನು ಅವರು ಬಯಸುತ್ತಿದ್ದರು.

ಆಳುತ್ತಿದ್ದ ಬ್ರಿಟಿಷ್ ಅಧಿಕಾರಿಗಳಿಗೆ ತಮ್ಮ ನೌಕರರ ಪತ್ನಿಯರಿಗೆ ಶಿಕ್ಷಣ ನೀಡಿದರೆ ಅವರ ಗಂಡಂದಿರು ಇನ್ನಷ್ಟು ನಿಷ್ಠಾವಂತರಾಗುತ್ತಾರೆ. ಇಂಗ್ಲಿಷ್ ಕಲಿತ ಭಾರತೀಯ ಮಹಿಳೆ ತನ್ನ ಮಕ್ಕಳನ್ನು, ಕುಟುಂಬವನ್ನು ಅಷ್ಟೇಕೆ, ಸಮಾಜವನ್ನು ಇಂಗ್ಲಿಷ್ ಕಲಿಯಲು ಉತ್ತೇಜಿಸುತ್ತಾಳೆ. ಪಾಶ್ಚಾತ್ಯ ಮಹಿಳೆಯರಂತೆ ಆಧುನಿಕ ಜೀವನ ಶೈಲಿಯನ್ನು, ಕ್ರಿಶ್ಚಿಯನ್ ಧರ್ಮವನ್ನು ಅನುಸರಿಸಲು ಪ್ರೇರಕಳಾಗುತ್ತಾಳೆ ಎಂದೂ ಭಾವಿಸಿದ್ದರು. ಇದು ಬಹಳ ಮಟ್ಟಿಗೆ ಫಲನೀಡದಿದ್ದಾಗ್ಯೂ ದೂರಗಾಮಿ ಪರಿಣಾಮವನ್ನು ಮುಂದಿನ

ತಲೆಮಾರಿನ ಮೇಲೆ ಬೀರಿದ್ದನ್ನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಣಬಹುದು. ಒಮ್ಮೆ ವರ್ಜೀನಿಯಾ ವೂಲ್ಫ್ ಹೀಗೆ ಹೇಳಿದ್ದರು "Man is terribly hampered and partial in his Knowledge of women, as is a woman in her Knowledge of man" ಪ್ರಾಯಶಃ ಈ ಮಾತು ಸಾರ್ವಕಾಲಿಕ ಸತ್ಯವೆನ್ನಬಹುದು. ಏಕೆಂದರೆ ಪುರುಷ ಪ್ರಧಾನ ಸಮಾಜವಿರುವ ದೇಶದಲ್ಲಿ ಮಹಿಳೆಯರ ಪ್ರಗತಿ, ಸ್ವಾತಂತ್ರ್ಯ, ಹಕ್ಕು ಚಲಾವಣೆ ಕಡೆಗೆ ಆಕೆಯ ಬೇಕುಬೇಡಗಳು ಕೂಡ ಪುರುಷರ ಆಶಯದಂತೆ ಇರುತ್ತಿತ್ತು. ಹೀಗಾಗಿ ಮಹಿಳೆಯರ ಅವರದೇ ಆದ ಆಸೆ, ಆಕಾಂಕ್ಷೆ, ಬೇಕುಬೇಡಗಳನ್ನು ಪುರುಷರು ಗಮನಿಸಲಿಲ್ಲ. ಆ ಬಗ್ಗೆ ಮಹಿಳೆಯರೂ ಹೆಚ್ಚು ಚಿಂತಿಸದೆ ಪುರುಷಾನುವರ್ತಿಗಳಾಗಿದ್ದರು. ಆದರೆ ಇದಕ್ಕೆ ವಿರುದ್ಧವಾಗಿ ೧೯ನೇ ಶತಮಾನದ ವೈಶಿಷ್ಟ್ಯಗಳು ಹಲವಾರು ಇವೆ. ಈ ಶತಮಾನದಲ್ಲಿ ಮಹಿಳೆಯರ ಅಸ್ತಿತ್ವ, ಅವರ ಬದುಕಿನ ಸ್ಥಿತಿಗತಿ, ಸಮಾಜದ ಕ್ರೂರ ವ್ಯವಸ್ಥೆಗಳ ಬಗ್ಗೆ ಪುರುಷರ ಲಕ್ಷ್ಯ ಹರಿದಿದ್ದಲ್ಲದೆ ಮಹಿಳೆಯರ ಹಕ್ಕುಗಳು, ಅವರಿಗೆ ಆಗುತ್ತಿದ್ದ ಅಪಚಾರದ ಬಗ್ಗೆ ಮಹಿಳೆಯರಲ್ಲಿ ಅರಿವು ಮಾಡಿಸುವ ಹಾಗೂ ಸಮಾಜದ ಎಲ್ಲ ವರ್ಗಗಳಲ್ಲೂ ಮಹಿಳೆಯರ ಬಗ್ಗೆ ಕಾಳಜಿ ವಹಿಸುವಂತೆ ಮಾಡುವ ಪ್ರಯತ್ನಗಳು ನಡೆದವು. ಮುಖ್ಯವಾಗಿ ೧೯ನೇ ಶತಮಾನದ ಮೊದಲ ಭಾಗದಲ್ಲಿ ಪುರುಷರು ಸ್ವತಃ ಅರಿವು ಹೊಂದಿ ಮಹಿಳೆಯರ ಬಗ್ಗೆ, ಸಮಾಜದ ಪರಿವರ್ತನೆಯ ಬಗ್ಗೆ ಸುಧಾರಣಾ ಮನೋಭಾವ ತಳೆದು ಅದಕ್ಕಾಗಿ ಬ್ರಿಟಿಷ್ ಸರ್ಕಾರದ ಮನವೊಲಿಕೆಗೆ ಕೂಡ ಪ್ರಯತ್ನಿಸಿ ಕೆಲಮಟ್ಟಿಗೆ ಯಶಸ್ವಿಗಳಾದರು. ಎರಡನೆಯ ಭಾಗದಲ್ಲಿ ಇಂಥ ಸುಧಾರಣಾವಾದಿಗಳ ಪತ್ನಿಯರು, ಸೋದರಿಯರು, ಹೆಣ್ಣುಮಕ್ಕಳು, ಸಂಬಂಧಿಗಳಾದ ಮಹಿಳೆಯರು ಹಾಗೂ ಇತರರೂ ಕೂಡ ಮಹಿಳಾ ಶಿಕ್ಷಣ, ಸತಿಪದ್ಧತಿ, ಬಾಲ್ಯವಿವಾಹ, ವಿಧವಾ ಮರುವಿವಾಹ ಮುಂತಾದವುಗಳ ಬಗ್ಗೆ ನಡೆದ ಚಳವಳಿಗಳಿಂದ ಪ್ರೇರಿತರಾಗಿ ತಾವೂ ಅಂಥ ಆಂದೋಲನಗಳಲ್ಲಿ ಭಾಗವಹಿಸಿದರು, ಮಹಿಳಾ ಶಿಕ್ಷಣ ಸಂಸ್ಥೆಗಳನ್ನು ಕಟ್ಟಲು ಮುಂದಾದರು. ಹೀಗಾಗಿ ಇಪ್ಪತ್ತನೇ ಶತಮಾನದ ಪ್ರಾರಂಭದ ವೇಳೆಗೆ ಮಹಿಳೆಯರಲ್ಲಿ ಹಾಗೂ ಮುಖ್ಯವಾಗಿ ಸಮಾಜದಲ್ಲಿ ಪರಿವರ್ತನೆಯ ಪರಿಣಾಮಗಳು ಎದ್ದು ತೋರಲಾರಂಭಿಸಿದವು.

ಪರಿವರ್ತನೆಯ ಹೊಸ ಮಾರ್ಗದಲ್ಲಿ

ಮೇಲೆ ತಿಳಿಸಿದಂತೆ ಸುಧಾರಣಾವಾದಿಗಳ ಉದ್ದೇಶಗಳೇನೇ ಇದ್ದಾಗ್ಯೂ, ಮಹಿಳೆಯರ ಮಟ್ಟಿಗೆ ಹೊಸ ಜಗತ್ತಿನ ಬೆಳಕು ಕಾಣುವಂತಾಗಿದ್ದು ಖಂಡಿತ ನಿಜ. ಬ್ರಿಟಿಷರು ಕೂಡ ಬದಲಾವಣೆಗಳನ್ನು ತರಲು ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದರಿಂದ ಮಹಿಳೆಯರ ಜೀವನದ ಮಾದರಿಗಳೇ ಬದಲಾಗುವ ಪರಿಸ್ಥಿತಿಯುಂಟಾಯಿತು. ಸೀತೆ ಮುಂತಾದ 'ಆದರ್ಶ' ಪಾತ್ರಗಳ ಪರಿಕಲ್ಪನೆಗಳು ಹಿಂದೆ ಸರಿದು ಮನೆಯಿಂದ ಹೊರಗೆ, ಬೇರೆ ಬೇರೆ ಕ್ಷೇತ್ರಗಳತ್ತ ಮಹಿಳೆ ದೃಷ್ಟಿ ಹರಿಸುವಂತಾಯಿತು. ಹೀಗಾಗಿ ಹೆಚ್ಚು

ಮಕ್ಕಳನ್ನು ಬೆಳೆಸುವಾಗಲೇ ಆಕೆಯ ವ್ಯಕ್ತಿತ್ವದ ಬೆಳವಣಿಗೆಯನ್ನೂ ಗಮನಿಸುವಂತಹ ಪರಿವರ್ತನೆ ಕಂಡುಬಂದಿತು. ಹೀಗಾಗಿ ೧೯ನೇ ಶತಮಾನದ ಕೊನೆಯ ವೇಳೆಗೆ ಸಾಕಷ್ಟು ಸಂಖ್ಯೆಯ ಮಹಿಳೆಯರು ಶಿಕ್ಷಣ ಪಡೆದು ವೈದ್ಯಕೀಯ ಮುಂತಾದ ವೃತ್ತಿಗಳನ್ನು ಹಿಡಿಯಲು ಮುಂದೆಬಂದರು. ಅಷ್ಟೇ ಅಲ್ಲ ಹಲವಾರು ಜನ ಉತ್ತಮ ಭಾಷಣಕಾರರು, ಕ್ರಿಯಾಶೀಲರು, ಕಾರ್ಯಕರ್ತರು, ಸಾರ್ವಜನಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತಾದರು. ಹೀಗಾಗಿ ಸಾಮಾಜಿಕ ಕಾರ್ಯಕರ್ತೆಯರಾಗಿ ನತದೃಷ್ಟರ ಹಾಗೂ ಗತಿಹೀನ, ಅನಾಥ ಹೆಣ್ಣುಮಕ್ಕಳಿಗೆ ಬದುಕುವ ಮಾರ್ಗ ತೋರಿಸುವುದು ಸಾಧ್ಯವಾಯಿತು. ಗ್ರಾಮೀಣ ಬದುಕಿನಲ್ಲಿ ಅಂಥ ಮಹತ್ತರ ಬದಲಾವಣೆ ಕಂಡಬರಲಿಲ್ಲವಾದರೂ ನಗರದ ಮಹಿಳೆಯರಲ್ಲಿ ಹೊಸಬಗೆಯ ಆಧುನಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ಸಾಮಾಜಿಕ ಸಂಘಸಂಸ್ಥೆಗಳು ತಲೆಯೆತ್ತಿ ಕುಟುಂಬಗಳು ಒಡೆದು ಹಳ್ಳಿಯಿಂದ ನಗರದೆಡೆ ಬಂದು ಸೇರುವ ಘಟನೆಗಳು ಹೆಚ್ಚಾದವು. ವಿದೇಶ ವ್ಯಾಸಂಗದ ಪರಿಣಾಮವಾಗಿ ಪಾರಂಪರಿಕವಾಗಿ ಬಂದ ಕುಲಕಸಬುಗಳು ಮರೆಯಾದವು. ಗಂಡಸರಿಗೆ ಮಾತ್ರ ಪ್ರವೇಶವಿರುತ್ತಿದ್ದ ಸಭೆ ಸಮಾರಂಭಗಳಲ್ಲಿ ಧರ್ಮಾಚರಣೆಗಳಲ್ಲಿ ಹೆಂಗಸರಿಗೂ ಪ್ರವೇಶಾವಕಾಶ ದೊರೆಯಲಾರಂಭಿಸಿತು. ಇಂಥ ಮಹಿಳೆಯರಿಗೆ 'ನವ ಮಹಿಳೆ'ಯರೆಂದು ಹೆಸರಿಡಲಾಗಿತ್ತು. ಈ ಜಾಗೃತ ಮಹಿಳೆಯರು ಆಧುನಿಕ ಚಳವಳಿಯ ನಾಯಕಿಯರಾದರು. "ಈ ಚಳವಳಿಯು ಸ್ತ್ರೀ ಪುರುಷರಲ್ಲಿ ಸಮಾನತೆಯಿರಬೇಕೆಂದೂ, ಆ ದಿಕ್ಕಿನಲ್ಲಿ ಲಿಂಗವ್ಯವಸ್ಥೆಯ ಆಯಾಮಗಳ ಪರಿಗಣನೆಯಾಗಿ ಸೂಕ್ತ ಪರಿವರ್ತನೆಗಳಾಗಬೇಕೆಂದೂ ಒತ್ತಾಯಪಡಿಸಿತು."[೧೦]

ಭಾರತೀಯ ಸಮಾಜದಲ್ಲಿ ಎಂದರೆ ಹಿಂದೂ ಕುಟುಂಬಗಳಲ್ಲಿ ಆಗುತ್ತಿದ್ದ ಬದಲಾವಣೆಗಳ ಬಗ್ಗೆ ಅನೇಕ ಸುಧಾರಣಾವಾದಿಗಳು ತಮ್ಮ ಅಭಿಪ್ರಾಯವನ್ನು ನೀಡಿದ್ದಾರೆ. ತಮಗಿಂತ ಹಿಂದಿನ ಹಾಗೂ ತಮ್ಮ ಕಾಲದಲ್ಲಿ ಆಗಿರುವ ವ್ಯತ್ಯಾಸಗಳ ಬಗೆಗೂ ದಾಖಲಿಸಿದ್ದರು. ಬ್ರಜೇಂದ್ರನಾಥ್ ಡೇ(೧೮೫೨-೧೯೩೨) ಅವರು ಇಂಗ್ಲೆಂಡ್‌ಗೆ ಹೋಗಿ ಅಧ್ಯಯನ ಮಾಡಿ ಐಸಿಎಸ್ (ಇಂಡಿಯನ್ ಸಿವಿಲ್ ಸೇವೆ) ನಲ್ಲಿದ್ದಾಗ್ಯೂ ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣವನ್ನು ಒತ್ತಾಯವಾಗಿಯೇ ಕೊಡಿಸಿದ್ದರು. ಸರೋಜ್ ನಳಿನಿದತ್[೧೧] ಎಂಬ ಇವರ ಒಬ್ಬ ಮಗಳು ಮೊದಲ ಮಹಾಯುದ್ಧದ ತರುವಾಯ ಗ್ರಾಮೀಣ ಮಹಿಳಾ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸುತ್ತಿದ್ದರಂತೆ. ಇದೇ ಅವಧಿಯಲ್ಲಿ ಹುಡುಗಿಯರ ಶಿಕ್ಷಣದಲ್ಲಿ ಮಹತ್ತರ ಬದಲಾವಣೆಗಳು ಕಂಡುಬರಲಾರಂಭಿಸಿದ್ದನ್ನು ನಾವು ಗಮನಿಸಬಹುದು. ಮೊದಮೊದಲಿಗೆ ಹುಡುಗಿಯರ ವಿದ್ಯಾಭ್ಯಾಸ ಮನೆಗಳಲ್ಲೇ ಆಗುತ್ತಿತ್ತು. ಕ್ರಮೇಣ ಶಾಲೆಗಳಿಗೆ (ಆ ಕಾಲದಲ್ಲಿ ಒಬ್ಬ ಅಥವಾ ಇಬ್ಬರು ಹುಡುಗಿಯರು ಬಾಲಕರ ಶಾಲೆಯಲ್ಲಿ ಇರುತ್ತಿದ್ದ ಬಗ್ಗೆ ವಯೋವೃದ್ಧ ಮಹಿಳೆಯರು ಈಗಲೂ ನೆನಪಿಸಿಕೊಳ್ಳುತ್ತಾರೆ) ಹೋಗಿ ಕಲಿಯುವ ಅವಕಾಶ ದೊರೆಯಿತು. ಮುಂದೆ ಶಾಲೆಗೆ ಕಳಿಸುವ ಹಾಗೂ ವಿವಾಹಾನಂತರವೂ

ಶಾಲೆಗೆ ಕಳುಹಿಸುವಷ್ಟು ಉದಾರತೆ ಬೆಳೆಯಿತು. ಇದರಿಂದ ಹುಡುಗಿಯರು ಚಿಕ್ಕ ವಯಸ್ಸಿನಲ್ಲೇ ತಾಯಂದಿರಾಗುವುದೂ ಕೊಂಚ ಮುಂದೆ ಹೋಗಿ ಕೆಲಕಾಲವಾದರೂ ಆರಾಮವಾಗಿ ಇರಲು ಸಾಧ್ಯವಾಯಿತು. ಎಲ್ಲ ಪರಿವರ್ತನೆಗಳ ಮೊದಲ ಭಾಗದಲ್ಲಿ ಆಗುವಂತೆ ಶಿಕ್ಷಣ ಪಡೆಯುವಲ್ಲಿಯೂ ಕುಂಟುನಡೆ, ನಿಲುಗಡೆ ಇರುತ್ತಿದ್ದು ಸಾಮಾಜಿಕ ಸಮಾರಂಭಗಳಲ್ಲಿ, ಪುರುಷನೊಡನೆ ಪರದಾರಹಿತವಾಗಿ ಬೆರೆಯುವುದು ಕೂಡ ಕ್ವಚಿತ್ತಾಗಿತ್ತು. ಹೀಗಾಗಿ ಮಹಿಳೆಯರು ಮನೆಯೊಳಗೆ ಹುದುಗುವ ಅವಸ್ಥೆ ಬಲವಾಗಿಯೇ ಬೇರೂರಿತ್ತು.

ಆದಾಗ್ಯೂ ಅವಕಾಶ ದೊರೆತ ಮಹಿಳೆಯರು ತಮ್ಮ ಸ್ವಂತಿಕೆಯನ್ನು, ಅಸಾಧಾರಣ ಮನೋಬಲವನ್ನು ರುಜುವಾತುಪಡಿಸಿರುವುದನ್ನು ಕಾಣುತ್ತೇವೆ. ಆದರೆ ಇದರಿಂದ ಅವರಿಗೆ ಸ್ವಂತ ಅಸ್ತಿತ್ವವಿದ್ದಿತೇ, ಸ್ವಾವಲಂಬನೆ ಹಾಗೂ ನಿರ್ಧಾರ ತೆಗೆದುಕೊಳ್ಳುವ ಅವಕಾಶವಿದ್ದಿತೇ ಎಂಬುದಕ್ಕೆ ನಿರ್ದಿಷ್ಟವಾದ ಮಾಹಿತಿ ಲಭ್ಯವಿಲ್ಲ. ಆದಾಗ್ಯೂ ಮಹಿಳೆಯರ ಕಲ್ಪನಾಶಕ್ತಿ, ಲೇಖನಕಲೆ ಅರಳಲು, ಪ್ರಚುರಗೊಳ್ಳಲು ಅವಕಾಶವಾಯಿತು.[೧೧] "ಅಂದಿನ ಕಾಲದಲ್ಲಿ ಬಂಗಾಳದಲ್ಲಿ(೧೮೫೦) ಆತ್ಮಚರಿತ್ರೆ, ಕಾವ್ಯ, ಕಾದಂಬರಿ ಕೃತಿಗಳಲ್ಲದೆ ಇಪ್ಪತ್ತಕ್ಕೂ ಹೆಚ್ಚು ಪತ್ರಿಕೆಗಳನ್ನೂ ಮಹಿಳೆಯರು ನಡೆಸುತ್ತಿದ್ದ ಬಗ್ಗೆ ಆಧಾರಗಳಿವೆ." ಇಂಥ ಸಾಹಿತ್ಯ ಪ್ರಸಾರದ ಮೂಲಕ ಅಂದಿನ ಮಹಿಳೆಯರಲ್ಲಿ ಪರಸ್ಪರ ಅಭಿಪ್ರಾಯ ವಿನಿಮಯ, ಸಂಪರ್ಕವುಂಟಾಗಲು ಸಾಧ್ಯವಾಯಿತು. ನೊಬೆಲ್ ಪ್ರಶಸ್ತಿ ಪುರಸ್ಕೃತ ಶ್ರೀ ರವೀಂದ್ರನಾಥ ಠಾಕೂರ್ ಮನೆತನದ ಸರಳಾದೇವಿ ಚೌದುರಾಣಿ(೧೮೭೨-೧೯೪೫) ಇವರ ತಾಯಿ ಸ್ವರ್ಣಕುಮಾರೀ ದೇವಿಯವರು ಶ್ರೀಮಂತ ಮನೆತನದ ಸುಸಂಸ್ಕೃತ ವ್ಯಕ್ತಿ ಹಾಗೂ ಸಾಮಾಜಿಕವಾಗಿ ಪ್ರತಿಷ್ಠೆ ಹೊಂದಿದ್ದು ಕಾದಂಬರಿಕಾರ್ತಿ, ಪತ್ರಿಕಾ ಸಂಪಾದಕಿಯಾಗಿದ್ದರು. ಹೀಗಾಗಿ ಸರಳಾದೇವಿ ಫ್ರೆಂಚ್ ಪರ್ಷಿಯನ್, ಸಂಸ್ಕೃತ ಭಾಷಾ ಪ್ರೌಢಿಮೆಗಳಿಸಿ ಇಂಗ್ಲಿಷ್ ಎಂ.ಎ ಮಾಡಿದ್ದರು. ಅಂದಿನ ಕಾಲದಲ್ಲಿ ಆಕೆ ದಿಟ್ಟ ಹೆಜ್ಜೆಯಿಟ್ಟು ಮನೆಯಿಂದ ಹೊರಬಂದು ಮೈಸೂರಿನ ಮಹಾರಾಣಿ ಶಾಲೆಯಲ್ಲಿ ಅಧ್ಯಾಪಕಿಯಾಗಿದ್ದರು. ವಿಳಂಬವಾಗಿ ಪಂಜಾಬಿನ ರಾಷ್ಟ್ರೀಯವಾದಿ ರಾಮಭುಜ್ ದತ್ತರನ್ನು ವಿವಾಹವಾಗಿ ಸ್ತ್ರೀ ವಾದಿಯಾಗಿ, ಶಿಕ್ಷಕಿಯಾಗಿ, ದೇಶಪ್ರೇಮಿಯಾಗಿದ್ದರು."[೧೨]

ಸಮಾಜ ಸುಧಾರಕರು ಒಟ್ಟಿನಲ್ಲಿ ಸಮಾಜದ ಪ್ರಗತಿ, ಸುಧಾರಣೆಯಾಗಬೇಕಾದರೆ ಮಹಿಳೆಯರ ಬದುಕು, ಸ್ಥಾನಮಾನವನ್ನು ಉತ್ತಮಪಡಿಸುವುದೇ ಆಗಿದೆ ಎಂದು ತಿಳಿದು ಪ್ರಯತ್ನಿಸಿದರು. ಆದರೆ ಅವರು ನಿರೀಕ್ಷಿಸಿದಂತೆ ಯಶಸ್ಸು ದೊರೆಯಲಿಲ್ಲ. ಹೀಗಾಗಿ ಬ್ರಿಟಿಷರ ದವಡೆಯಿಂದ ದೇಶ ಪಾರಾಗಿ ಸ್ವಾತಂತ್ರ್ಯ ಗಳಿಸಿದಲ್ಲದೆ ತಮ್ಮ ಪ್ರಯತ್ನಗಳು ಫಲಿಸಲಾರವೆಂದು ಭಾವಿಸಿದರು. ಮುಖ್ಯವಾಗಿ ಆರ್ಥಿಕ ಹಾಗೂ ಹಕ್ಕು, ಅಧಿಕಾರಗಳಿಲ್ಲದೆ ಸಾಮಾಜಿಕ ಸ್ಥಿತಿಗತಿಯ ಪರಿವರ್ತನೆ ಸಾಧ್ಯವಿಲ್ಲವೆಂಬುವದನ್ನು

ಮನಗಂಡು ತಮ್ಮ ಅಸಾಮರ್ಥ್ಯ, ದೌರ್ಬಲ್ಯಗಳ ಕಾರಣಗಳನ್ನು ಹುಡುಕತೊಡಗಿದರು. ಅಷ್ಟೇ ಅಲ್ಲ ೧೯ನೇ ಶತಮಾನದ ಪಾಶ್ಚಾತ್ಯ ಲೇಖಕರು, ಚಿಂತಕರೂ ಕೂಡ ಸಮಾಜದಲ್ಲಿ ನಾಗರಿಕತೆಯ ಸಶಕ್ತ ತಳಹದಿ ಹಾಗೂ ಸಾಮರ್ಥ್ಯಕ್ಕೆ ಹಾಗೂ ಮಹಿಳೆಯರ ಸ್ಥಿತಿಗತಿಗಳಿಗೆ ಸಂಬಂಧವಿದೆ ಎಂಬ ಸಿದ್ಧಾಂತವನ್ನು ಮಂಡಿಸಿದ್ದರು. ಈ ಸಿದ್ಧಾಂತವನ್ನು ಅನ್ವಯಿಸಿ ಭಾರತೀಯಕ ಮಹಿಳೆಯರ ಶೋಚನೀಯ ಸ್ಥಿತಿಗತಿಗಳಿಗೆ ಅನುಸಾರವಾಗಿ ಇಲ್ಲಿನ ಪರಂಪರೆ, ಸಂಪ್ರದಾಯಗಳೂ ಅಧೋಗತಿಗಿಳಿದಿವೆ ಎಂಬುದಾಗಿ ತೀರ್ಮಾನಿಸಿದ್ದರು. ಇದರಿಂದ ನಮ್ಮ ಸುಧಾರಣಾವಾದಿಗಳಿಗೆ ತಮ್ಮ ವೈಫಲ್ಯ ಹಾಗೂ ದೌರ್ಬಲ್ಯಗಳಿಗೆ ಸೂಕ್ತ ಕಾರಣಗಳು ದೊರೆತಂತಾಯಿತು. ಆ ಬಗ್ಗೆ ಗಮನಹರಿಸಿದರು ಎಂದರೆ ಮಾತೃಭಕ್ತಿ, ಪೂಜೆ, ಸೇವೆ ಹಾಗೂ ಆಕೆಯನ್ನು ಪುನಃ ಸ್ಥಾಪಿಸಲು ತಮ್ಮ ಜೀವ, ಜೀವನವನ್ನೇ ಸಮರ್ಪಿಸುವ ಅಖಂಡ ಮನೋಬಲವನ್ನು ಹೊಂದಲು ಕಂಕಣಬದ್ಧರಾದರು. ಬಂಗಾಲದ ಬಂಕಿಮಚಂದ್ರ ಚಟ್ಟೋಪಾಧ್ಯಾಯರ ಆನಂದಮಠ(೧೮೮೨) ಕಾದಂಬರಿಯಲ್ಲಿ ದೇಶಾಭಿಮಾನ, ಮಾತೃಭಕ್ತಿಯ ಪ್ರಚೋದನೆ ದೊರೆಯುತ್ತದೆ. ಇಲ್ಲಿ ತಾಯಿ ದೇವಿಯ ಪಾವಿತ್ರ್ಯದ ಸಾಕಾರವಾದ ಸ್ತ್ರೀ ವಿಗ್ರಹವೊಂದು ಅಂಗಚ್ಛೇದಗೊಂಡಿರುವುದು, ಅದನ್ನು ಕಂಡ ಭಕ್ತರು ಅದರಿಂದ ದುಃಖ, ರೋಷ, ಆವೇಶಗಳಿಂದ ತಾಯರಕ್ಷಣೆಗಾಗಿ ಹೋರಾಡಲು ತೊಡಗುತ್ತಾರೆ. ಆ ತಾಯಿಗೆ 'ವಂದೇ ಮಾತರಂ' ಎಂದು ವಂದಿಸಿ ಮುನ್ನಡೆಯುತ್ತಾರೆ. ಇಲ್ಲಿ ಹೆಣ್ಣಿನ ಸರ್ವಾಂಗ ಹಾನಿ, ಮಾನಹಾನಿ ಹಾಗೂ ತುಳಿತಕ್ಕೊಳಗಾದ ಆಕೆಯ ರೂಪಕದ ಪ್ರತಿಮೆಯೊಂದನ್ನು ನಾವು(ಸ್ತ್ರೀವಾದಿಗಳು) ಗ್ರಹಿಸಬಹುದು. ರಾಮಕೃಷ್ಣಪರಮಹಂಸರಂತೂ ಜಗನ್ಮಾತೆಯೆಂದು ಆರಾಧಿಸಿದ 'ದೇವಿ'ಯನ್ನು ತಮ್ಮ ಹೆಂಡತಿಯಲ್ಲೂ ಕಂಡು ಸಂಸಾರತ್ಯಾಗ ಮಾಡಿದರು. ಇವರ ಶಿಷ್ಯರಾದ ಸ್ವಾಮಿ ವಿವೇಕಾನಂದರು ಆ ತಾಯಿಯನ್ನು ಜನ್ಮಭೂಮಿಯಲ್ಲಿ ಕಂಡರು. ಆಧುನಿಕ ಮನುಷ್ಯರಿಗೆ ಮೂರು ಪ್ರತಿಜ್ಞೆಗಳನ್ನು ಬೋಧಿಸಿದರು. ಒಂದು ದೇವಿ ಆರಾಧನೆ, ಎರಡನೆಯದು ತಾಯಿನಾಡಿನ ಸೇವೆ ಹಾಗೂ ಮೂರನೆಯದು ಸ್ತ್ರೀ ಶಿಕ್ಷಣ ಹಾಗೂ ಮಹಿಳೆಯರ ಸ್ಥಿತಿಗತಿಗಳ ಉದ್ಧಾರ.[೧೩] ಹಿಂದೂ ಧರ್ಮಜ್ಞಾನಿಗಳ ಅಪಾರ ತತ್ವಬೋಧೆ, ಮಾರ್ಗದರ್ಶನಗಳ ಮೂಲಕ ಇದನ್ನು ಸಾಧಿಸಬಹುದೆಂಧು ಅವರು ಅಭಿಪ್ರಾಯಪಟ್ಟಿದ್ದರು. ಹೀಗಾಗಿ ಮಹಿಳೆಯರ ಅಂತಃಸ್ವತ್ತ್ವವನ್ನು ಅರಿಯುವುದಾಗಲೀ, ಆಕೆಯ ಭಾವೋದ್ರೇಕಗಳು, ಆಕಾಂಕ್ಷೆಗಳು, ಬುದ್ಧಿಮತ್ತೆ, ಉತ್ಸಾಹಶೀಲತೆ, ದುಡಿಮೆ ಇವೆಲ್ಲಕ್ಕೂ ಮೂರ್ತಿಯ ಅಂಗಭಾಗಗಳ ವಿಭಂಜನೆಯಾದಂತೆ ಹೊಸಕಿ ಹೋಗಿದ್ದವು. ಆದರೆ ಮತ್ತದೇ ಮಾತೃ ಛಾಯೆಯ ಪ್ರತಿಮೆಯನ್ನು ಅಲಂಕರಿಸಿ ಪೀಠಕ್ಕೇರಿಸುವ ಕಾರ್ಯ ಸ್ವಾತಂತ್ರ್ಯ ಹೋರಾಟದೊಂದಿಗೆ ಜತೆಜತೆಯಾಗಿ ನಡೆಯಿತು ಎಂಬುದಂತೂ ಸರ್ವವಿದಿತ ವಿಷಯವೇ ಆಗಿದೆ.

ರಾಷ್ಟ್ರಭಕ್ತಿಯನ್ನು ಮಾತೃಭಕ್ತಿ ರೂಪದಲ್ಲಿ ಪ್ರಚುರಪಡಿಸಿದ ಧುರೀಣರು ಮಹಿಳೆಯರ ವೈಯಕ್ತಿಕ ಬೆಳವಣಿಗೆ, ಆರ್ಥಿಕ ಸಬಲತೆ, ಸ್ಥಿತಿಗತಿಯ ಬಗ್ಗೆ ಏನೂ ಆಲೋಚಿಸದಷ್ಟು ರಾಷ್ಟ್ರೀಯ ರಾಜಕಾರಣದಲ್ಲಿ ಅಸಕ್ತಿ ಹೊಂದಿದ್ದರು. "ಮಹಿಳೆಯರ ಪ್ರಶ್ನೆಗಳು ಹಾಗೆಯೇ ಉಳಿದವು"[೧೪] ಆದರೆ ಸುದೈವದಿಂದ ಶಿಕ್ಷಣ ಪಡೆದು ಪ್ರಗತಿಶೀಲರಾಗಿದ್ದ 'ಹೊಸಮಹಿಳೆ'ಯರು ಪರಿಸ್ಥಿತಿಯ ಅವಲೋಕನ ಮಾಡಿ ತಾವೇ ಸಮಾಜ ಸುಧಾರಣಾ ಕಾರ್ಯಕ್ಕೆ ಮುಂದಾದರು. ಸಂಘಸಂಸ್ಥೆಗಳನ್ನು ಸ್ಥಾಪಿಸಿದರು. ಇದರಿಂದ ಮಹಿಳಾ ಪ್ರಶ್ನೆಗಳನ್ನು ಗುರುತಿಸುವ ಹಾಗೂ ಅರ್ಥೈಸುವುದರಲ್ಲಿ ಹೊಸ ವಿಧಾನ, ಕಾಳಜಿ ಉಂಟಾಯಿತು. ವಾಸ್ತವವಾಗಿ ಪುರುಷರಿಗೆ ತಮ್ಮ ತಮ್ಮ ಕುಟುಂಬದೊಳಗಿನ ಮಹಿಳೆಯರ ಬದುಕು ಅರಿವಿದ್ದಿತೇ ವಿನಾ ಸಮಾಜದ ಉಳಿದ ವರ್ಗಗಳ ಮಹಿಳೆಯರ ಸ್ಥಿತಿಗತಿಯ ಬಗ್ಗೆ ತಿಳಿಯಲು ಸಾಧ್ಯವಿರಲಿಲ್ಲ. ಕಾನೂನುಗಳು ಜಾರಿಯಲ್ಲಿ ಬಂದರೂ ಅವುಗಳ ಪಾಲನೆ ಕಷ್ಟಸಾಧ್ಯವೇ ಆಗಿತ್ತು. ಹೀಗಾಗಿ ಸಮಾಜದ ಆಧುನೀಕರಣ ಹಾಗೂ ಮಹಿಳೆಯರ ಉತ್ತಮ ಸ್ಥಿತಿಗತಿಗಳಿಗೆ ಥಳುಕು ಹಾಕುತ್ತಿದ್ದರು. ಇಂದಿಗೂ ಈ ಪರಿಪಾಠ ಪ್ರಚಾರ ಗಳಿಸುತ್ತಿದೆ. ಅಷ್ಟೇ ಅಲ್ಲ ಹೊಸ ಸಂಸ್ಥೆಗಳನ್ನು ಸ್ಥಾಪಿಸುವಾಗ ಕೂಡ ಮಹಿಳಾ ಧುರೀಣರನ್ನು ಮಾತ್ರವೇ ದೃಷ್ಟಿಯಲ್ಲಿಟ್ಟುಕೊಳ್ಳುವುದು ಈಗಲೂ ಕಂಡುಬರುತ್ತಿರುವ ವಾಸ್ತವ ಸ್ಥಿತಿಯಾಗಿದೆ.

ಮಹಿಳಾ ಶಿಕ್ಷಣದ ಬಗ್ಗೆ ೧೯ನೆಯ ಶತಮಾನದಲ್ಲಿ ಸಾಕಷ್ಟು ಸುಧಾರಣಾ ವಾತಾವರಣ ಮೂಡಿದ್ದುದನ್ನು ನಾವು ಗಮಿಸಬಹುದು. ಆ ಕಾಲದಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅನೇಕ ಮೂಢನಂಬಿಕೆಗಳು, ಕುಕಲ್ಪನೆಗಳೂ ಇದ್ದಿತು. ಹೀಗಾಗಿ ಹುಡುಗಿಯರ ಓದುಬರಹಕ್ಕೆ ಅವಕಾಶ ನೀಡುವುದೇ ಅಪರಾಧ ಅಥವಾ ಶಾಸ್ತ್ರವಿರುದ್ಧ ಎಂಬ ಸಾಂಪ್ರದಾಯಿಕ ಅಭಿಪ್ರಾಯ ರೂಪುಗೊಂಡಿದ್ದಿರಬಹುದು. ಅದರಿಂದಾಗಿಯೇ 'ಸಮಾಜವಿರೋಧಿ'ಯೆನಿಸಿಕೊಂಡೂ ಶಿಕ್ಷಣ ಪಡೆಯಲು ಹಂಬಲಿಸಿ, ಯಶಸ್ವಿಗಳಾದ ಮಹಿಳೆಯರು ಬೆರಳೆಣಿಕೆಯಷ್ಟೇ ಸಂಖ್ಯೆಯಲ್ಲಿದ್ದರು. ೧೮೩೬ರಲ್ಲಿ ವಿಲಿಯಂ ಆಡಂ ನೀಡಿದ ವರದಿಯಲ್ಲಿ, "ಬಹುತೇಕ ಹಿಂದೂ ಕುಟುಂಬಗಳಲ್ಲಿ ಓದುಬರಹವನ್ನು ಕಲಿತ ಹುಡುಗಿ ಮದುವೆಯಾದ ತರುಣದಲ್ಲೇ ವಿಧವೆಯಾಗಿ ಬಿಡುತ್ತಾಳೆ ಎಂಬ ಒಂದು ಮೂಢನಂಬಿಕೆ ಪ್ರಚಲಿತವಿದ್ದು, ಇದನ್ನು ಸ್ವತಃ ಹೆಂಗಸರು ಗಾಢವಾಗಿ ನಂಬುತ್ತಾರಾದರೆ ಪುರುಷರೂ ಅದನ್ನೇ ಬೆಂಬಲಿಸುತ್ತಾರೆ. ಹಿಂದುಗಳಲ್ಲೂ ಮುಸ್ಲಿಮರಲ್ಲೂ ಅಕ್ಷರ ಜ್ಞಾನವು ಹೆಂಗಸರನ್ನು ಕೆಡಿಸಿಬಿಡುತ್ತದೆ ಎಂದು ಕೂಡ ಆಡಂ ಹೇಳಿದ್ದಾನೆ."[೧೫] ತಾಯಿಯ ಮನೆ ಅತ್ತೆಮನೆ ಎಲ್ಲ ಕಡೆಯೂ ಮಹಿಳೆಯರೇ ಮಹಿಳೆಯರ ಶಿಕ್ಷಣಕ್ಕೆ ವಿರೋಧ, ಅಡ್ಡಿ, ಆತಂಕಗಳನ್ನೊಡ್ಡುತ್ತಿದ್ದರು ಎಂದ ಮೇಲೆ ಪಿತೃ ಮೂಲವೂ ಪಿತೃ ಪ್ರಧಾನವೂ ಆದ ಪುರುಷ ನಿರ್ಮಿತ ಸಮಾಜದಲ್ಲಿ ವಿದ್ಯಾಭ್ಯಾಸದ ಕನಸು ಕಾಣಲು ಕೂಡ ಆಸ್ಪದವಿಲ್ಲದ ಕಗ್ಗತ್ತಲ ಬದುಕು ಮಹಿಳೆಯರದು ಎಂದಾಗ ಅವರಿಗೆ ಸ್ವಂತಿಕೆ, ಸ್ವಾವಲಂಬನೆಯ ಬಗ್ಗೆ ಏನು ಹೇಳಲಾದೀತು? ೧೮೭೦ಕ್ಕೂ ಮುಂಚಿನ ಕಾಲದಲ್ಲಿ ಕ್ವಚಿತ್ತಾಗಿ ಓದುಬರಹ

ಕಲಿಯಬಯಿಸಿದ ಹೆಂಗಸು ಕದ್ದುಮುಚ್ಚಿ(ವಿದ್ಯುದೀಪವಿಲ್ಲದ ಕತ್ತಲರಾತ್ರಿಗಳಲ್ಲಿ) ಹಣತೆಯ ಬೆಳಕಿನಲ್ಲಿ ಅಕ್ಷರ ಕಲಿಯಬೇಕಾಗುತ್ತಿತ್ತು. ಬೇರೆಯವರಿಗೆ ತಿಳಿದರೆ ನಿರ್ದಾಕ್ಷಿಣ್ಯವಾಗಿ ದಂಡನೆಗೊಳಪಡಿಸುತ್ತಿದ್ದರು. ಹೀಗಾಗಿ ವಿದ್ಯಾಭ್ಯಾಸಕ್ಕಾಗಿ ಮತ್ತೆ ಪುರುಷರ ಮನವೊಲಿಕೆ, ಅವರ ಕೃಪಾಕಟಾಕ್ಷವೇ ಅಗತ್ಯವಾಗಿದ್ದರಲ್ಲಿ ಅಚ್ಚರಿಯೇನಿಲ್ಲ.

ಕ್ರೈಸ್ತ ಧರ್ಮಪ್ರಚಾರಕರು ತೆರದ ಶಾಲೆಗಳಿಗೆ ಹುಡುಗಿಯರನ್ನು ಕಳುಹಿಸಲು ಹಿರಿಯರು ಒಪ್ಪುತ್ತಿರಲಿಲ್ಲ ಮಾತ್ರವಲ್ಲ ಭಾರತೀಯ ಸಮಾಜ ಸುಧಾರಕರೇ ಇದನ್ನು ವಿರೋಧಿಸುತ್ತಿದ್ದರು. ಬ್ರಿಟಿಷ್ ಸರ್ಕಾರ ಸ್ತ್ರೀ ಶಿಕ್ಷಣಕ್ಕೆ ಮಹತ್ತ್ವ ನೀಡದಿದ್ದರೂ ಮಿಷನರಿಗಳಿಗೆ ಸ್ತ್ರೀ ಶಿಕ್ಷಣ ಹಾಗೂ ಬಾಲಕಿಯರಿಗಾಗಿಯೇ ಶಾಲೆಗಳನ್ನು ತೆರೆಯುವ ಬಗ್ಗೆ ಅತ್ಯಾಸಕ್ತಿಯಿತ್ತು. ಈ ಹುನ್ನಾರದಲ್ಲಿ ಜಾತಿ ಪರಿವರ್ತನೆಯ ತಮ್ಮ ಉದ್ದೇಶ ಸಫಲವಾಗಲು ಮಹಿಳೆಯರನ್ನು ತಮ್ಮೊಂದಿಗೆ ಕೆಲಸ ಮಾಡಲು ಸೇರಿಸಿಕೊಳ್ಳಬೇಕೆಂದು ಅವರು ಯೋಚಿಸಿದ್ದರು. ತತ್ಪರಿಣಾಮವಾಗಿಯೆಂಬಂತೆ ೧೮೪೦ರ ದಶಕದಲ್ಲಿ ಅವಿವಾಹಿತ ಸಂನ್ಯಾಸಿನಿ ಮಿಷನರಿಗಳು ಬಂದರು. ಇವರು ಪ್ರೌಢವಿವಾಹಿತ ಭಾರತೀಯ ಮಹಿಳೆಯರನ್ನು ಕ್ರಿಶ್ಚಿಯನ್ ಜಾತಿಗೆ ಪರಿವರ್ತಿಸುವ ಕೆಲಸದಲ್ಲಿ ಮಗ್ನರಾದರು. ಆದರೆ ಕ್ರಮೇಣ ಈ ಉದ್ದೇಶ ಮರೆಯಾಗಿ ಮಹಿಳೆಯರು ಈ ಶಾಲೆಗಳಲ್ಲಿ ಕಲಿತು ಅಧ್ಯಾಪಕಿಯರಾದರು. ಆದಾಗ್ಯೂ, ೧೯ನೇ ಶತಮಾನದ ಕಡೆಯ ಭಾಗದಲ್ಲಿ ಮಹಿಳೆಯರಿಗಾಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿತವಾಗಿದ್ದಲ್ಲದೆ ವಿದ್ಯಾವಂತ ಮಹಿಳೆಯರೂ ಕೂಡ ಧೈರ್ಯವಾಗಿ ಮುನ್ನುಗ್ಗಿ ಇಪ್ಪತ್ತನೆಯ ಶತಮಾನದ ಹೊತ್ತಿಗೆ ಬಾಲಕಿಯರಿಗಾಗಿ ಶಾಲೆಗಳನ್ನು ತೆರೆಯಲು ಸ್ವತಃ ಯೋಜನೆ, ಕಾರ್ಯಕ್ರಮಗಳನ್ನು ರೂಪಿಸುವಂತಾದರು. ೧೮೪೮-೧೮೫೬ರ ಅವಧಿಯಲ್ಲಿ ಭಾರತದ ಗವರ್ನರ್ ಜನರಲ್ ಆಗಿದ್ದ ಲಾರ್ಡ್‌ಡೌಲ್‌ಹೌಸಿಯು ಸ್ತ್ರೀ ಶಿಕ್ಷಣಕ್ಕೆ ಅತಿಹೆಚ್ಚು ಮಹತ್ತ್ವ ನೀಡಿದ. ಅಲ್ಲಿಯವರೆಗೆ ಶ್ರೀಮಂತರು ಮಾತ್ರವೇ ಸರ್ಕಾರದ ಬೆಂಬಲದೊಂದಿಗೆ ಉನ್ನತ ಶಿಕ್ಷಣ ಪಡೆಯುತ್ತಿದ್ದು, ಶಿಕ್ಷಣನೀತಿಯನ್ನೇ ಬದಲಿಸಿ ಸ್ತ್ರೀ ಶಿಕ್ಷಣದಲ್ಲಿಯೂ ಬದಲಾವಣೆಗಳನ್ನು ತರಬಯಸಿದ್ದು ಭಾರತೀಯ ಮಧ್ಯಮವರ್ಗದ ಮಹಿಳೆಯರ ಜೀವನ ಕ್ರಮದ ಮೇಲೆ ನಿಧಾನವಾಗಿ ಆದರೆ ಸಕಾರಾತ್ಮಕ ಪರಿಣಾಮ ಬೀರತೊಡಗಿತು. ಏಕೆಂದರೆ ಈ ವರ್ಗದ ಸಮಾಜದಲ್ಲಿ ಬಾಲಕಿಯರ ಶಾಲೆಗಳಿಗೆ ಜನ ಬೆಂಬಲ ದೊರೆತಿರಲಿಲ್ಲ. ಕುಲದೀಪಕರಾಗುವ ಹುಡುಗರಿಗೆ ಶಿಕ್ಷಣದೊರೆತರೆ ಅದರಿಂದ ಆರ್ಥಿಕ ಭದ್ರತೆ. ಕುಟುಂಬದ ಪ್ರತಿಷ್ಠೆ ಏರುತ್ತದೆ. ಆದರೆ ಹುಡುಗಿಯರಿಗೆ ಶಿಕ್ಷಣ ನೀಡಿದರೆ ಲಾಭಕ್ಕಿಂತ ಹೆಚ್ಚಾಗಿ ಸಮಸ್ಯೆಗಳೇ ಎದುರಾಗುವಂತಿದ್ದಿತು. ಸಹಾಭ್ಯಾಸದ(ಹುಡುಗ ಹುಡುಗಿಯರಿಗೆ) ಬಗ್ಗೆ ಕಲ್ಪನೆಯೂ ಕೂಡ ಅಸಾಧ್ಯವೆನಿಸುತ್ತದೆ. ಹೆಣ್ಣು ಮಕ್ಕಳನ್ನು ಮನೆಯಿಂದ ಹೊರಗೆ ಕಳಿಸಬಾರದೆಂಬ ನಿಯಮ, ಚಿಕ್ಕವಯಸ್ಸಿನಲ್ಲಿ ವಿವಾಹ ಮಾಡಬೇಕೆಂಬ ಕಟ್ಟಳೆ, ವಿವಾಹಾನಂತರ ವಿದ್ಯಾಭ್ಯಾಸಬಿಟ್ಟು, ಮನೆಗೆಲಸ, ಪತಿ, ಮಕ್ಕಳು ಹಾಗೂ

ಇನ್ನಿತರರ ಯೋಗಕ್ಷೇಮದ ಕರ್ತವ್ಯ, ಮುಖ್ಯವಾಗಿ ಹೆಣ್ಣುಮಕ್ಕಳು ಋತುಮತಿಯರಾದರೆಂದರೆ ಆಕೆಯ ಮೇಲಿನ ನಿರ್ಬಂಧಗಳು ಮಡಿ-ಮೈಲಿಗೆ ಸಂಪ್ರದಾಯಗಳು, ಹುಡುಗಿಯರಿಗೆ ಶಿಕ್ಷಣವು ಗಗನ ಕುಸುಮವಾಗಿ, ಎಟುಕದ ನಕ್ಷತ್ರವಾಗಿಯೇ ಪರಿಣಮಿಸಿತ್ತು. ಸಮಾಜ ಸುಧಾರಕರು ನಡೆಸಿದ ಹಲವಾರು ಪ್ರಯತ್ನಗಳು ಹಾಗೂ ಪ್ರಚಾರ, ವಸಾಹತು ದೊರೆಗಳು ನೀಡಲು ಸಿದ್ಧರಿದ್ದ ಆರ್ಥಿಕ, ನೈತಿಕ ಬೆಂಬಲಗಳು ಸ್ತ್ರೀ ಶಿಕ್ಷಣಕ್ಕೆ ಹೊಸ ದಿಗಂತವನ್ನು ತೋರಿದ್ದಂತೂ ನಿಜ. ಆದರೆ ಸಂಪ್ರದಾಯದ ನೆಲೆಯಿಂದ ಹೊರಬೀಳಲು ಹವಣಿಸುತ್ತಿದ್ದ ಪೀಳಿಗೆಗಳು ಹೊರ ಅಡಿಯಿಡಲು ಧೈರ್ಯ ಹಾಗೂ ಉತ್ಸಾಹ ತೋರಿದ್ದು ಅಷ್ಟೇ ಅಚ್ಚರಿಯ ವಿಷಯವೂ ಆಗಿದ್ದಿರಬಹುದು.

ಆಧುನಿಕ ಶಿಕ್ಷಣ ಪದ್ಧತಿ

ಸರ್ಕಾರ ಬಾಲಕಿಯರಿಗಾಗಿ ಶಾಲೆಗಳನ್ನು ಸ್ಥಾಪಿಸಿ ಸ್ತ್ರೀ ಶಿಕ್ಷಣದ ಕ್ರಾಂತಿಯ ಆರಂಭ ಮಾಡಿತೆನ್ನಬಹುದು. ಇದೇ ವೇಳೆಗೆ ಸುಧಾರಣಾವಾದಿ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳೂ ಎಂದರೆ, ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ, ಆರ್ಯಸಮಾಜ ಹಾಗೂ ಥಿಯೋಸಾಫಿಕಲ್ ಸೊಸೈಟಿಗಳೂ ಕೂಡ ಸ್ತ್ರೀಯರಿಗಾಗಿ ಶಾಲೆಗಳನ್ನು ತೆರೆದು ಸ್ತ್ರೀ ಶಿಕ್ಷಣಕ್ಕೆ ಪ್ರತ್ಯಕ್ಷ ಬೆಂಬಲವನ್ನೊದಗಿಸಿದವು.[೧೬] ೧೮೫೫ರ ವೇಳೆಗೆ ಸುಮಾರು ೬೨೬ ಬಾಲಕಿಯರ ಶಾಲೆಗಳಿದ್ದವು. ಆ ಪೈಕಿ

ಬಂಗಾಲ-೨೮೮
ಮದ್ರಾಸ್-೨೫೬ ಮುಂಬೈ-೬೫
ಎನ್ ಡಬ್ಲ್ಯೆಎಫ್ ಡಿ ಮತ್ತು ಔಧ್-೧೭

ಈ ಎಲ್ಲ ಶಾಲೆಗಳಿಂದ ಒಟ್ಟು ೨೧ ರಿಂದ ೭೫೫ ಜನ ವಿದ್ಯಾರ್ಥಿನಿಯರಿದ್ದರು. ಇಲ್ಲಿನ ಸಂಖ್ಯೆಗಿಂತ ಸ್ತ್ರೀ ಶಿಕ್ಷಣ ಪರವಾಗಿ ಸಮಾಜದ ನಿಲುವಿನಲ್ಲಾದ ಪರಿಣಾಮಗಳ ಸ್ಪಷ್ಟವಾಗುತ್ತದೆ.

ಶಿಕ್ಷಣ ಕ್ಷೇತ್ರ ಮಹಿಳೆಯರಿಗೆ ಪ್ರವೇಶನೀಡಿದ ಪರಿಣಾಮವಾಗಿ ಸಾಮಾಜಿಕ ಪ್ರಗತಿಗೆ ಸ್ತ್ರೀ ಪುರುಷರಿಬ್ಬರ ವಿದ್ಯಾಭ್ಯಾಸವನ್ನು ಪರಿಗಣಿಸುವಂತಾಯಿತು. ಪಾಶ್ಚಾತ್ಯ ಶಿಕ್ಷಣ ಪಡೆದ ತರುಣರು ತಮ್ಮ ಪತ್ನಿಯರನ್ನು ಹಲವಾರು ಕೌಟುಂಬಿಕ ನಿರ್ಬಂಧಗಳಿಂದ ಮುಕ್ತಗೊಳಿಸಿದರು. ಎಂದರೆ ಮಹಿಳೆಯರಿಗೆ ಪ್ರವೇಶವಿಲ್ಲದಿದ್ದ ಅನೇಕ ವಿಷಯಗಳಲ್ಲಿ ಪ್ರಸಂಗಗಳಲ್ಲಿ ಅವರೂ ಭಾಗಿಗಳಾಗುವ ಅವಕಾಶಗಳು ಒದಗಿದವು. ಇದರಿಂದ ಪ್ರತಿಕೂಲ ಸನ್ನಿವೇಶವೊಂದು-ಕಲಿತ ಮಹಿಳೆಯರು, ಕಲಿಯದ ಮಹಿಳೆಯರ ನಡುವೆ ಅಂತರವುಂಟಾಗಿ ನಿರ್ಮಾಣವಾಯಿತು. ಬಂಗಾಲದ ಸುಧಾರಣಾ ಸಂಸ್ಥೆಯಾದ ಬ್ರಹ್ಮಸಮಾಜದ ಸದಸ್ಯರು ಸ್ತ್ರೀ ಶಿಕ್ಷಣ ಚಳುವಳಿಯ ನೇತಾರರಾದರು. ಇದೇ ವಿಷಯದ ಚರ್ಚೆ ಬ್ರಹ್ಮಸಮಾಜ ಒಳಗಡೆ ವಿಭಜನೆಯಾಗಲೂ ಕಾರಣವಾಯಿತು. ಭಾರತೀಯ ಹಾಗೂ ಇಂಗ್ಲಿಷ್ ಜನರ ನಡುವೆ

ತಿಳಿವಳಿಕೆ ಮೂಡಿಸಲು ನ್ಯಾಷನಲ್ ಇಂಡಿಯನ್ ಅಸೋಸಿಯೇಷನ್ ಎಂಬ ಸಂಸ್ಥೆ ಸ್ಥಾಪನೆಯಾಯಿತು. "ಅನೆಟ್ ಅಕ್ರಾಯ್ ಕೇಶವಸೇನ್ ಮತ್ತು ಬ್ರಹ್ಮಸಮಾಜದ ಇನ್ನೂ ಹಲವರು ಸೇರಿ ಹಿಂದೂ ಮಹಿಳಾ ವಿದ್ಯಾಲಯವನ್ನು ಸ್ಥಾಪಿಸಿದರು.[೧೭]

೧೮೭೮ರ ಹೊತ್ತಿಗೆ ಬೆಥೂನ್ ಸ್ಕೂಲ್ ಜೊತೆಗೆ ಈ ವಿದ್ಯಾಲಯವು ವಿಲೀನಗೊಂಡು ಬೆಥೂನ್ ಕಾಲೇಜ್ ಎಂದಾಗಿ ಕಲ್ಕತ್ತಾ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟಿತು. ೧೮೮೩ರಲ್ಲಿ ಕಾದಂಬಿನಿ ಬಸು ಮತ್ತು ಚಂದ್ರಮುಖಿಬಸು ಎಂಬ ಇಬ್ಬರು ವಿದ್ಯಾರ್ಥಿನಿಯರು ಬಿ.ಎ ಪದವಿ ಪಡೆದು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಪದವೀಧರೆಯರಾದ ಮೊಟ್ಟ ಮೊದಲ ಭಾರತೀಯ ಮಹಿಳೆಯರಾದರು.

ದಕ್ಷಿಣ ಭಾರತದಲ್ಲಿ ಸಮಾಜ ಸುಧಾರಣಾ ಚಳವಳಿಗಳು ೧೯ನೇ ಶತಮಾನದ ಕೊನೆಯವೇಳೆಗೆ ಪ್ರಾರಂಭವಾಯಿತು. ಅದಾಗ್ಯೂ ಈ ಶತಮಾನ ಮುಗಿಯುವ ತನಕ ಬಿರುಸುತನ ಪಡೆದಿರಲಿಲ್ಲ. ಮದರಾಸಿನಲ್ಲಿ ಥಿಯಾಸಾಫಿಕಲ್ ಸೊಸೈಟಿಯ ಮುಖಂಡರಾಗಿದ್ದ ಡಾ.ಅನಿಬೆಸೆಂಟ್ (೧೮೪೭-೧೯೩೩) ಪ್ರಾಚೀನ ಭಾರತದಲ್ಲಿ ಹಿಂದೂ ಮಹಿಳೆಯರಿಗೆ ಶಿಕ್ಷಣಾವಕಾಶವಿದ್ದುದನ್ನು, ಆ ಮಹಿಳೆಯರಿಗೆ ಮುಕ್ತವಾಗಿ ತಲೆಯೆತ್ತಿ ಸಮಾಜದಲ್ಲಿ ಗೌರವಿತರಾಗಿದ್ದನ್ನು ಸಮರ್ಥಿಸಿದ್ದಲ್ಲದೆ ಮಹಿಳೆಯರ ಆ 'ಸುವರ್ಣಯುಗ' ಮತ್ತೆ ಬರಬೇಕೆಂದು ಭಾಷಣಗಳಲ್ಲಿ ಹೇಳುತ್ತಿದ್ದರು. ಆಕೆಯನ್ನು ಇಂಗ್ಲೆಂಡಿನಲ್ಲಿ ಮಹಿಳಾವಾದಿ(Feminist) ಎಂದೇ ಗುರುತಿಸಲಾಗಿತ್ತು. ಅಷ್ಟೇ ಅಲ್ಲ ಭಾರತವನ್ನೇ ತಮ್ಮ 'ಮನೆ'ಯೆಂದು ನಿರ್ಧರಿಸಿ ಭಾರತೀಯ ಮಹಿಳೆಯರಿಗೆ ವಿಶಿಷ್ಟಬಗೆಯ ಶಿಕ್ಷಣದ ಅಗತ್ಯತೆಯಿರುವುದನ್ನು ಪ್ರಚಾರಮಾಡುತ್ತಿದ್ದರು. ಹಾಗೂ ಅದಕ್ಕಾಗಿಯೇ ಮಹಿಳಾ ಕಾಲೇಜನ್ನು ತೆರೆದರು. ೧೮೮೧-೮೨ರಲ್ಲಿ ಕೇವಲ ಆರುಮಂದಿ ಮಹಿಳೆಯರು ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗಮಾಡುತ್ತಿದ್ದರು. ೧೯ನೆಯ ಶತಮಾನದ ಅಂತ್ಯದ ವೇಳೆಗೆ ೨೬೪ರಷ್ಟು ಸಂಖ್ಯೆ ಹೆಚ್ಚಿತು. ಇದೇ ರೀತಿ ಪ್ರಾಥಮಿಕ ಶಾಲೆಗಳಲ್ಲಿ ೨೦೫೪ರಿಂದ ೪೧.೫೮೩ಕ್ಕೆ ಏರಿದ್ದು ಕೂಡ ಗಮನಾರ್ಹವೇ.[೧೮]

ಹಂಟರ್ ಕಮಿಷನ್ ನಿಂದಾರಂಭಿಸಿ ಶತಮಾನದ ಕೊನೆಯ ವೇಳೆಗೆ ಪ್ರಸರಿಸಿದ ಸ್ತ್ರೀ ಶಿಕ್ಷಣ ಕಾರ್ಯದಲ್ಲಿ ಮೂವರು ಪ್ರಮುಖ ವ್ಯಕ್ತಿಗಳನ್ನು ಗುರುತಿಸಬಹುದು. ಮುಂಬೈ ಪೂನಾಗಳಲ್ಲಿ ೧೮೮೯ರಲ್ಲಿ ಶಾರದಾ ಸದನವನ್ನು ಸ್ಥಾಪಿಸಿದ ಪಂಡಿತಾ ರಮಾಬಾಯಿ, ೧೮೯೩ರಲ್ಲಿ ಕಲ್ಕತ್ತಾದಲ್ಲಿ ಮಹಾಕಾಲಿಪಾಠಶಾಲೆಯನ್ನು ಆರಂಭಿಸಿದ ಮಾತಾಜಿ ತಪಸ್ವಿನಿ ಹಾಗೂ ೧೮೯೬ರಲ್ಲಿ ವಿಧವೆಯರಿಗಾಗಿ ಪೂನಾದಲ್ಲಿ ಶಾಲೆಯನ್ನು ತೆರೆದ ಡಿ.ಕೆ.ಕರ್ವೆ. ಈ ಮೂವರ ಪ್ರಯತ್ನ ಮಹಿಳಾ ಶಿಕ್ಷಣ, ಮನೋವಿಕಾಸ ಹಾಗೂ ಸಾಮಾಜಿಕ, ಆರ್ಥಿಕ ಸ್ವಾವಲಂಬನೆಗೆ ಅಡಿಪಾಯ ಹಾಕಿಕೊಟ್ಟ ಮಹತ್ವಪೂರ್ಣ ಹೆಜ್ಜೆಯಾಗಿತ್ತು.

ಪಂಡಿತಾ ರಮಾಬಾಯಿ(೧೮೫೮-೧೯೨೨) : ವಿದ್ವಾಂಸರಾದ, ಮಹಿಳಾ ಶಿಕ್ಷಣ ಹಾಗೂ ಪ್ರಗತಿಯ ಬಗ್ಗೆ ಅತೀವ ಕಳಕಳಿ ಹೊಂದಿದ್ದ ಸಮಾಜಸುಧಾರಕ ತಂದೆಯ ಮಗಳಾದ ರಮಾಬಾಯಿ, ಕ್ರಾಂತಿಕಾರಿ ಮಹಿಳೆಯಾಗಿದ್ದರು. ಆ ಕಾಲದ ಮಹಾನ್ ಪಂಡಿತರಿಂದ ಶ್ಲಾಘನೆ ಪಡೆದು ಪಂಡಿತಾ, ಸರಸ್ವತಿ ಮುಂತಾದ ಬಿರುದುಗಳನ್ನು ಪಡೆದಿದ್ದ ಪಂಡಿತಾ ರಮಾಬಾಯಿ ಅಂತರ್ಜಾತೀಯ ವಿವಾಹವಾಗಿದ್ದಾಕೆ. ಬಾಲವಿಧವೆಯರಿಗಾಗಿ ಶಾಲೆ ತೆರೆದು ಯಶಸ್ವಿಯಾಗಿ ನಡೆಸಿದ್ದರು. ಶಾರದಾ ಸದನ, ಮುಕ್ತಿ ಸದನವೆಂಬ ಶಾಲೆಗಳನ್ನು ತೆರೆದಿದ್ದರು. ಮನ್ ಮೋಹನ್ ಕೌರ್ ಅವರು ಶತಮಾನದ ಕೊನೆಯ ವೇಳೆಗೆ ಅಲ್ಲಿ ೧೯೦೦ ಮಕ್ಕಳಿದ್ದರು ಎನ್ನುತ್ತಾರೆ. ಮನ್ ಮೋಹನ್ ಕೌರ್ ಮುಂದುವರಿದು[೧೯] ತರಬೇತಿ ಶಾಲೆಯನ್ನು ಪ್ರಾರಂಭಿಸಲಾಯಿತು, ನಾಲ್ಕು ನೂರು ಜನ ಮಕ್ಕಳನ್ನು ಕಿಂಡರ್ ಗಾರ್ಟನ್ ನಲ್ಲಿ ಸೇರಿಸಿಕೊಳ್ಳಲಾಯಿತು. ಉದ್ಯಾನವನಗಳು, ಆಟದ ಬಯಲು, ಎಣ್ಣೆ ತೆಗೆಯುವ ಗಾಣ, ಹಾಲಿನ ಡೈರಿ, ಮಡಿವಾಳರ ವ್ಯವಸ್ಥೆ, ಒಲೆಗಳಿವ ತರಬೇತಿ ಶಾಲೆಯನ್ನು ಕೂಡ ತೆರೆಯಲಾಯಿತು. ಅದರಲ್ಲಿ ಹೊಲಿಗೆ, ನೇಯ್ಗೆ ಹಾಗೂ ಕಸೂತಿ ಕಲೆಗಳನ್ನೂ ಕೂಡ ಕಲಿಸಲಾಗುತ್ತಿತ್ತು ಎಂದು ತಿಳಿಸಿದ್ದಾರೆ. ಪಂಡಿತಾ ರಮಾಬಾಯಿ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕೆಂಬುದಕ್ಕೆ ಹೆಚ್ಚು ಮಹತ್ವ ನೀಡಿದ್ದರು. ಖಂಡಿತ ವಾಗಿಯೂ ಆ ಕಾಲಕ್ಕೆ ಇದೊಂದು ದಿಟ್ಟ ನಿಲುವು ಎನ್ನಬಹುದು.

ಮಾತಾಜಿ ಮಹಾರಾಣಿ ತಪಸ್ವಿನಿ ಗಂಗಾಬಯಿ : ಸಂಸ್ಕೃತ ಹಾಗೂ ಧಾರ್ಮಿಕ ಜ್ಞಾನವನ್ನು ಹೊಂದಿದ್ದ ಈಕೆ[೨೦] 'ಸ್ತ್ರೀ ಶಿಕ್ಷಣವನ್ನು ಅಭಿವೃದ್ಧಿ ಪಡಿಸಬೇಕು, ಆ ಶಿಕ್ಷಣ ಹಿಂದೂ ಧಾರ್ಮಿಕ ಮತ್ತು ನೈತಿಕ ನಿಯಮಗಳಿಗೆ ಹೊಂದಿಕೊಳ್ಳುವಂಥದ್ದಾಗಿರಬೇಕು' ಎಂಬ ಖಚಿತ ಧ್ಯೇಯವನ್ನು ಹೊಂದಿದ್ದ ಮಹಿಳೆ. ಅಂದಿನ ಹಿಂದೂ ಮಹಿಳೆಯರಿಗೆ ದೊರೆಯುತ್ತಿದ್ದ ಶಿಕ್ಷಣವು ಅವರ ನೈತಿಕತೆ ಮತ್ತು ರಾಷ್ಟ್ರೀಯಭಾವನೆಗಳನ್ನು ಹಾಳುಗೆಡವುತ್ತಿದೆ ಎಂದು ದೂರುತ್ತಿದ್ದ ಪುರುಷರಿಗೆ ಇದು ಸರಿಯಾದ ಉತ್ತರವಾಗಿತ್ತು.

ಮಹರ್ಷಿ ಧೋಂಡೋ ಕೇಶವ ಕರ್ವೆ : ಬಾಲವಿಧವೆಯನ್ನು ವಿವಾಹವಾಗಿ ೧೮೯೬ರಲ್ಲಿ ವಿಧವೆಯರಿಗಾಗಿಯೇ ಶಾಲೆಯನ್ನು ತೆರೆದಿದ್ದರು. ಅವರ ಕನಸನ್ನು ನನಸಾಗಿಸಿದ ಅವರ ಪತ್ನಿ ಆನಂದಿಬಾಯಿ ಪತಿಯನ್ನು ಕುರಿತು "[೨೧]ನೋಡಿ, ಜನ ನಿಮ್ಮನ್ನು ಮಹರ್ಷಿ ಎಂದು ಹಾಡಿ ಹೊಗಳುತ್ತಾರೆ. ಆದರೆ ಈ ಹೊಗಳಿಕೆಯ ಸ್ವಲ್ಪ ಅಂಶ ಖಂಡಿತವಾಗಿಯೂ ನನಗೇ ಸಲ್ಲಬೇಕು. ಏಕೆಂದರೆ ಕುಟುಂಬದ ಸಮಸ್ತ ಹೊಣೆಯನ್ನು ನನ್ನ ತಲೆಯ ಮೇಲೆ ಹೊತ್ತು, ಸಾರ್ವಜನಿಕ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ನಿಮಗೆ ಅವಕಾಶ ಕಲ್ಪಿಸಿದ್ದೇನೆ. ನನ್ನ ಈ ತ್ಯಾಗ ಇರದಿದ್ದರೆ ಇಷ್ಟೊಂದು ಸಾಧನೆ ನಿಮ್ಮಿಂದ ಆಗುತ್ತಿರಲೇ ಇಲ್ಲ ಎಂದು ಕರ್ವೆಯವರನ್ನು ರೇಗಿಸೋಣ ಎನಿಸುತ್ತದೆ ಎನ್ನುತ್ತಿದ್ದರು. ಕರ್ವೆ ತಮ್ಮಲ್ಲಿದ್ದ ಸಮಸ್ತ ಹಣವನ್ನೂ ಶಾಲೆಗಳ ಮೇಲೆ ಹಾಕಿದ್ದರಲ್ಲದೆ ಸಾಲವನ್ನೂ ಮಾಡಿದ್ದರು. ವಿಧವಾ ಮರುವಿವಾಹದ

ಪರಿಣಾಮವಾಗಿ ಮುಂದೆ ತಾನು ಪತಿಹೀನಳಾಗಿ ಒಂಟಿಯಾದರೆ ಅನಾಥಳಾಗಬಹುದೆಂಬ ಮುಂದಾಲೋಚನೆಯಿಂದ ಹಾಗೂ ಕರ್ವೆಯವರು ತಮ್ಮ ಹಾಗೂ ಕುಟುಂಬದ ಬದುಕಿನ ಬಗ್ಗೆ ನಿರ್ಲಕ್ಷ್ಯ ತಾಳಿದ್ದರಿಂದ ಆನಂದಿಬಾಯಿ ದಾಯಿ ತರಬೇತಿ ಪಡೆದು ಉದ್ಯೋಗಿಯಾಗಿ ಸಂಸಾರವನ್ನು ನಡೆಸುತ್ತಿದ್ದರು.[೨೭]

೨. ಮಹಿಳಾ ಕಲ್ಯಾಣ ಮತ್ತು ಅಭಿವೃದ್ಧಿ ಸಂಸ್ಥೆಗಳು

೧೯ನೆಯ ಶತಮಾನದ ಸಮಾಜ ಸುಧಾರಣೆಗಳು ಹಾಗೂ ಶಿಕ್ಷಣ ಪ್ರಸಾರದ ಫಲವಾಗಿ ಮಹಿಳೆಯರು ಸ್ವಂತ ಶಾಲೆಗಳನ್ನು ತೆರೆಯಲು ಪ್ರಯತ್ನಿಸತೊಡಗಿದ್ದರು. ಇಂಥವರ ಪೈಕಿ ಬೇಗಂ ರೋಕೆಯಾ ಶೆಖಾವತ್ ಹುಸೇನ್ (೧೮೮೦-೧೯೩೨) ಮುಸ್ಲಿಮ್ ಹುಡುಗಿಯರಿಗಾಗಿ ಕಲ್ಕತ್ತದಲ್ಲಿ ಶಾಲೆಯನ್ನು ಪ್ರಾರಂಭಿಸಿದರು. ಹಾಗೆಯೇ ಸಿಸ್ಟರ್ ಸುಬ್ಬುಲಕ್ಷ್ಮಿ(೧೮೮೬-೧೯೬೯)ಯವರು ಮದ್ರಾಸಿನಲ್ಲಿ ಬಾಲವಿಧವೆಯರಿಗಾಗಿ ಶಾಲೆಯನ್ನು ತೆರೆದರು.

ಆಧುನಿಕ ಶಿಕ್ಷಣ ಪದ್ಧತಿಯ ಪರಿಣಾಮವಾಗಿ ಉನ್ನತ ವರ್ಗದ ಮಹಿಳೆಯರು ತಮಗೆಂದೇ ಆರಂಭಿಸಲಾದ ಕ್ಲಬ್ ಗಳಿಗೆ ಸೇರುವುದರೊಂದಿಗೆ ಮೊದಲಬಾರಿಗೆ ಮಹಿಳೆಯರ ಸಂಘಟನೆ ಸಂಸ್ಥೆಯ ಮೂಲಕ ನಡೆಯಲು ಪ್ರಾರಂಭವಾಯಿತೆನ್ನಬಹುದು. ಇಂಥ ಕ್ಲಬ್ ಗಳು ಇಂಡಿಯನ್ ಕಾಂಗ್ರೆಸ್ ಮತ್ತು ನ್ಯಾಷನಲ್ ಸೋಷಿಯಲ್ ಕಾನ್ಫರೆನ್ಸ್‌ಗಳ ಉಪಶಾಖೆಗಳಾಗಿದ್ದವು. ಇದರಿಂದ ಪ್ರಭಾವಿತರಾಗಿ ಮಹಿಳಾಪರ ಕಾಳಜಿ ಹೊಂದಿದ್ದ ವಿವಿಧ ಸಂಘಸಂಸ್ಥೆಗಳು 'ರಾಷ್ಟ್ರೀಯ ಮಹಿಳಾ ಸಂಸ್ಥೆಗಳು'(National women organisations) ಎಂಬುದಾಗಿ ಹೊಸ ಸಂಸ್ಥೆಗಳ ಉದಯವಾಯಿತು. ಇವು ಮಹಿಳೆಯರ ವಿಚಾರಗಳನ್ನು ಹೊರಗೆಡಹುವ ಮಾಧ್ಯಮಗಳಾದವಲ್ಲದೆ ರಾಜಕೀಯ ಹಾಗೂ ಸಾಮಾಜಿಕ ಸಂಸ್ಥೆಗಳ ಮಹಿಳಾ ಮುಂದಾಳುಗಳಿಗೆ ತರಬೇತಿಯನ್ನೂ ನೀಡುತ್ತಿದ್ದವು. ಮುಂದೆ ಭಾರತ ಆಶ್ರಮ, ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜಗಳಲ್ಲದೆ ೧೯೦೫ರಲ್ಲಿ ನ್ಯಾಷನಲ್ ಸೋಷಿಯಲ್ ಕಾನ್ಫರೆನ್ಸ್‌ನಲ್ಲಿ ಮಹಿಳಾ ಉಪಶಾಖೆಯನ್ನು ಹೊಂದಲಾಗಿತ್ತು. ಇವೆಲ್ಲವೂ ಪುರುಷರು ಮಹಿಳೆಯರನ್ನು ಸೇರಿಸಿಕೊಂಡು ದುಡಿದ ಸಂಸ್ಥೆಗಳಾಗಿದ್ದವು. ತರುವಾಯ ಭಾರತ ಮಹಿಳಾ ಪರಿಷತ್ತು(Indian women council) ಪ್ರಾರಂಭವಾಗಿ ಜನಪ್ರಿಯವಾಯಿತು.

ಮಹಿಳೆಯರೇ ಸ್ಥಾಪಿಸಿದ ಪ್ರಪ್ರಥಮ ಮಹಿಳಾ ಸಂಸ್ಥೆಯನ್ನು ಸರಳಾದೇವಿ ಚೌಧುರಾಣಿಯವರು ಹುಟ್ಟು ಹಾಕಿದರು. ಭಾರತದ ಮಹಿಳೆಯರು ನೈತಿಕವಾಗಿ, ಆರ್ಥಿಕವಾಗಿ ಪ್ರಗತಿಯನ್ನು ಸಾಧಿಸಬೇಕೆಂಬ ಉದ್ದೇಶ ಹೊಂದಿದ್ದ 'ಭಾರತ ಸ್ತ್ರೀ ಮಹಾಮಂಡಲ'ವೆಂಬ ಈ ಸಂಸ್ಥೆ ೧೯೧೦ರಲ್ಲಿ ಕಾರ್ಯಾರಂಭ ಮಾಡಿತು. ಪಂಡಿತ ರಮಾಬಾಯಿ, ರಮಾಬಾಯಿ ರಾನಡೆ, ಫ್ರಾನ್ಸಿನಾ ಸೊರಾಬ್ಜಿ, ಆರ್. ಜಗನ್ನಾಥನ್, ಅನಿಬೆಸೆಂಟ್, ಮಾರ್ಗರೆಟ್‌ಕಸಿನ್ಸ್, ಸರೋಜಿನಿನಾಯ್ಡು, ಮುತ್ತುಲಕ್ಷ್ಮಿರೆಡ್ಡಿ, ಎಲ್.ಕಲ್ಯಾಣಮ್ಮ,

ಕಮಲಾದೇವಿ ಚಟ್ಟೋಪಾಧ್ಯಾಯ ಇವರೆಲ್ಲ ಈ ಬದಲಾವಣೆಯ ಆಂದೋಲನದ ಹರಿಕಾರರಾಗಿದ್ದರು. ಮಹಾಯುದ್ಧ ಪೂರ್ವ ಭಾರತದಲ್ಲಿ ಸ್ತ್ರೀ ಜೊರಾಷ್ಟ್ರಿಯನ್ ಮಂಡಲ್, ಗುಜರಾತಿ ಹಿಂದೂ ಮಹಿಳಾ ಮಂಡಲ್, ಬಂಗಾಲದ ಮಹಿಳಾ ಸಮಿತಿಗಳು, ಪೂನಾದ ಭಗಿನಿ ಸಮಾಜ, ಬೆಂಗಳೂರಿನ ಶಾರದಾಸ್ತ್ರೀ ಸಮಾಜ, ವಿಮೆನ್ ಇಂಡಿಯನ್ ಅಸೋಸಿಯೇಷನ್ ಮೊದಲಾದ ಮಹಿಳಾ ಸಂಘಗಳು ಕೆಲಸ ಮಾಡಲಾರಂಭಿಸಿದ್ದವು. ಯುದ್ಧೋತ್ತರ ಭಾರತದಲ್ಲಿ 'ವಿಮೆನ್ ಕೌನ್ಸಿಲ್ ಆಫ್ ಇಂಡಿಯಾ', ದಿ ಅಲ್ ಇಂಡಿಯಾ ವಿಮೆನ್ಸ್ ಕಾನ್ಫ್ ರೆನ್ಸ್ ಮೊದಲಾದವು ಕ್ರಿಯಾಶೀಲವಾಗಿದ್ದವು. ಮಹಿಳಾ ವಿಷಯದ ಬಗ್ಗೆ ಮಹಿಳಾ ಪತ್ರಿಕೆಗಳು, ಗ್ರಾಮೋದ್ಧಾರ, ಸ್ವಾತಂತ್ರ್ಯ ಚಳವಳಿಯ ಪಾತ್ರ ನಿರ್ವಹಣೆಗೆ ಕಾರಣವಾದವು. ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳು ಆರಂಭವಾದವು. "ವೈಚಾರಿಕ ಜಾಗೃತಿಯೇ ನಿಜವಾದ, ಶಿಕ್ಷಣದ ಉದ್ದೇಶ ಶಿಕ್ಷಣವೆಂದರೆ ಕೇವಲ ಸಾಕ್ಷರತೆಯನ್ನು ತರುವುದು ಮಾತ್ರವಲ್ಲ, ಓದುವುದು ಬರೆಯುವುದನ್ನು ಕಲಿಯುವುದು ಒಂದು ಪ್ರಾಥಮಿಕ ತಾಂತ್ರಿಕ ಅಗತ್ಯ. ಆದರೆ ಈ ಕಲಿಕೆ, ಈ ಸಾಕ್ಷರತೆ ನಮ್ಮನ್ನು ಆರೋಗ್ಯ ಸಾಕ್ಷರತೆಗೆ, ಕಾನೂನು ಸಾಕ್ಷರತೆಗೆ, ರಾಜಕೀಯ ಸಾಕ್ಷರತೆ ಎಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ ಸಾಕ್ಷರತೆಗೆ ಒಯ್ಯಬೇಕು. ಅಂದಾಗಲೇ ಅಕ್ಷರಕ್ಕೆ ಬೆಲೆ, ಈ ಎಲ್ಲ ದಿಕ್ಕಿನ ಸಾಕ್ಷರತೆ ನಮ್ಮನ್ನು ವಿಚಾರ ಪರರನ್ನಾಗಿಸುತ್ತದೆ. ಆಲೋಚನೆಯಿಂದ ವಿಮೋಚನೆ, ವಿಮೋಚನೆಯಿಂದ ಆಲೋಚನೆ, ಆಲೋಚನೆಯಿಲ್ಲದ ವಿಮೋಚನೆ ಕುರುಡು ಅನುಕರಣೆ" [೩೩]ಎನ್ನುತ್ತಾರೆ ಡಾ.ವಿಜಯಾದಬ್ಬೆ. (ನಾವು) ಈ ಎಲ್ಲಾ ಸಾಕ್ಷರತೆ, ಆಲೋಚನೆ ವಿಮೋಚನೆ ಆರ್ಥಿಕವಾಗಿ ಸ್ವಾವಲಂಬಿತನದಿಂದ ಗಟ್ಟಿಯಾಗುತ್ತದೆ. (ಎಂದು ಸೇರಿಸಬಹುದೆನಿಸುತ್ತದೆ. ಏಕೆಂದರೆ ದಾಸ್ಯದಲ್ಲಿರುವ ವೈಚಾರಿಕತೆಯಿಂದ ಮಹಿಳೆಗೆ ವಿಮೋಚನೆ ಸಾಧ್ಯವಿಲ್ಲ. ಆಕೆಯು ಆರ್ಥಿಕವಾಗಿ ನೆಲಕಚ್ಚಿ ನಿಂತಾಗ ಮಾತ್ರವೇ ಯಾವುದು ಅಪೇಕ್ಷಣೀಯ ಯಾವುದು ಉಪೇಕ್ಷಣೀಯ ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ಎಲ್ಲ ಮಹಿಳಾ ಸಂಸ್ಥೆಗಳಿಗೂ ಪುರುಷರ ಬೆಂಬಲ ಇದ್ದಿತೆಂಬುದನ್ನು ಹಿಂದೆಯೇ ಹೇಳಲಾಗಿದೆ. ಇದರಿಂದ ಸಾಮಾಜಿಕ ಸ್ತ್ರೀವಾದ ಎಂಬ ಪರಿಕಲ್ಪನೆ ಮೂಡಿ ಅದರ ಜೊತೆ ರಾಷ್ಟ್ರೀಯ ವಾದವೂ ಹೊಂದಿಕೊಂಡಿತ್ತು. ಬಹುಮಟ್ಟಿಗೆ ಮಧ್ಯಮ ವರ್ಗದ ಮಹಿಳೆಯರು ಈ ಸಂಘಟನೆಗಳಿಂದ ಹೆಚ್ಚು ಪ್ರಭಾವಿತರಾಗಿ ಯಶಸ್ಸನ್ನು ಕೆಲಮಟ್ಟಿಗೆ ಗಳಿಸಿದ್ದರೆಂಬುದು ಸತ್ಯಸಂಗತಿ.

೩. ಗಾಂಧೀಜಿಯವರ ಪ್ರಭಾವ : ರಾಷ್ಟ್ರೀಯ ಆಂದೋಲನಕ್ಕೆ ಆಹ್ವಾನ

'ಸಂಪ್ರದಾಯದ ಹೊಳೆಯಲ್ಲಿ ಈಜುವುದು ಒಳ್ಳೆಯದು, ಆದರೆ ಅದರಲ್ಲಿ ಮುಳುಗುವುದು ಆತ್ಮಘಾತಕ' ಎಂಬ ಗಾಂಧೀಜಿಯವರ ಈ ಮಾತು ಒಂದು ರೀತಿಯಲ್ಲಿ ಅವರ ಒಟ್ಟು ಸಾಮಾಜಿಕ ರಾಜಕೀಯ ಸಿದ್ಧಾಂತ ಹಾಗೂ ಸಾಮೂಹಿಕ ಕಾರ್ಯತಂತ್ರಕ್ಕೆ ದ್ಯೋತಕವಾಗಿದೆ. ಮಹಿಳೆಯರ ಉದ್ಧಾರ

ಕುರಿತಾದ ಗಾಂಧೀಜಿಯವರ ವಿಚಾರಗಳಲ್ಲಿ ೧೯ನೇ ಶತಮಾನದ ಸಮಾಜಸುಧಾರಕರ ವಿಚಾರಗಳಿಂದ ಭಿನ್ನವಾದ ಅಂಶಗಳೇನೂ ಕಂಡುಬರುವುದಿಲ್ಲ. ವರ್ಣಿಸಲು ಬಳಸುವ ಶಬ್ದಗಳಲ್ಲಿ ಹಿಡಿದಿಡಲಾಗದ ಆದರೆ ವಾಸ್ತವವಾಗಿ ಅತ್ಯದ್ಭುತ ಕ್ರಿಯಾಶೀಲ ವ್ಯಕ್ತಿತ್ವ ಪಡೆದಿದ್ದ ಅಪರೂಪದ ವ್ಯಕ್ತಿಗಳಲ್ಲಿ ಗಾಂಧೀಯವರೂ ಒಬ್ಬರೆಂದು ಭಾವಿಸಬಹುದು.[೩೪] ''ಸಾರ್ವಜನಿಕ ಜೀವನದಲ್ಲಿ ಹೊಸಘನತೆ, ಗೌರವ, ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಹೊಸಸ್ಥಾನಮಾನ, ಆತ್ಮವಿಶ್ವಾಸ, ಆತ್ಮಶೋಧನೆ ಹಾಗೂ ಶೋಷಣೆಯ ವಿರುದ್ಧ ತಾವೇ ಸ್ವತಃ ಹೋರಾಡಬೇಕೆಂಬ ಹೊಸ ಎಚ್ಚರ- ಇವೆಲ್ಲವನ್ನೂ ಗಳಿಸಿಕೊಳ್ಳಲು ಮಹಿಳೆಯರಿಗೆ ಗಾಂಧೀಜಿ ನೆರವಾದರು.'' ಈ ದಿಸೆಯಲ್ಲಿ ಇಂದಿಗೂ ಅವರು ಬೀರಿದ ಪ್ರಭಾವ ಮತ್ತು ಪರಿಣಾಮವನ್ನು ಬೇರೊಬ್ಬರು ಮೀರಿಸಲು ಸಾಧ್ಯವಿಲ್ಲ. ಜಡ್ಡುಗಟ್ಟಿದ್ದ ಮಹಿಳೆಯರು ಗಾಂಧಿಯವರ ಮಾತು, ಕೃತಿಗಳಿಂದ ಪೊರೆ ಕಳಚಿಕೊಂಡು ಕ್ರಿಯಾಶೀಲರಾದರು. ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಅನಾಹುತಗಳನ್ನು ತಾವೇ ನಿವಾರಿಸಿಕೊಳ್ಳುವ ವ್ಯಕ್ತಿತ್ವ ಸುಧಾರಣೆಯ ಪ್ರವರ್ತಕರಾದರು.

ಮಹಿಳಾ ಶಕ್ತಿಯೊಂದಿಗೆ ಗಾಂಧಿಯವರ ಪ್ರಥಮ ಮುಖಾಮುಖಿ ದಕ್ಷಿಣ ಆಫ್ರಿಕಾದಲ್ಲಿ ಆಗಿತ್ತು. ಸ್ತ್ರೀ ಪಾರತಂತ್ರ್ಯದ ಪರಿಣಾಮವಾಗಿ ಮಹಿಳೆಯರಲ್ಲಿ ಕೀಳರಿಮೆಯ ಭಾವನೆ ಉಂಟಾಯಿತೆಂಬುದನ್ನು ಗಾಂಧಿಯವರು ಮನಗಂಡಿದ್ದರು. ತಾವು ದೊಡ್ಡ ಮನುಷ್ಯರ ಪತ್ನಿಯರೆಂಬ ಕಾರಣಕ್ಕಾಗಿ ಗಣ್ಯ ಸ್ತ್ರೀಯರೆಂದು ಬೀಗುವ, ಗಂಡಂದಿರ ಸ್ಥಾನಮಾನಗಳ ದೆಸೆಯಿಂದ ಒದಗಿಬರುವ ಸುಖಸಂಪತ್ತುಗಳಿಗೆ ಗಟ್ಟಿಯಾಗಿ ಆತುಕೊಳ್ಳುವ ಸ್ತ್ರೀಯರನ್ನು ಗಾಂಧಿಯವರು ಟೀಕಿಸಿದ್ದಾರೆ. ಹಾಗೆಯೇ ಮಹಿಳೆಯರು ಪುರುಷರೊಂದಿಗೆ ಸ್ಪರ್ಧಿಸದೆ ಸಾರ್ವಜನಿಕ ಜೀವನ ಪ್ರವೇಶಿಸಲು ಗಾಂಧೀಯವರು ನೆರವಾದರು. ಇದರಿಂದ ನಗರದ ಮಧ್ಯಮವರ್ಗದ ಮಹಿಳೆಯರು ರಾಜಕೀಯರಂಗ ಪ್ರವೇಶಿಸಲು ಉತ್ತೇಜನ ದೊರಕಿತು. ಈಗ ಕೂಡ ಪ್ರತಿಯೊಂದು ಚುನಾವಣೆಯಲ್ಲೂ ಮಹಿಳಾ ಮೀಸಲಾತಿಯ ಕ್ಷೇತ್ರಗಳನ್ನು ಘೋಷಿಸುವುದಕ್ಕೆ ಮೊದಲೇ ರಾಜಕೀಯ ಪಕ್ಷಗಳು ಅವರಿಗಾಗಿ ಕೆಲವು ಸ್ಥಾನಗಳನ್ನು ಮೀಸಲಿಡುತ್ತವೆ! ಇದನ್ನು ಗಾಂಧೀಜಿಯವರ ಕೊಡುಗೆ ಎಂದೇ ಹೇಳಬಹುದು. ಹೀಗಾಗಿ ಕೆಳಗಿನ ಹಂತಗಳಲ್ಲಿ ಸಾಕಷ್ಟು ಒತ್ತಡ ಇಲ್ಲದಿದ್ದರೂ ಮಹಿಳೆಯರು ಸಾಮಾಜಿಕ ಹಾಗೂ ರಾಜಕೀಯ ರಂಗಗಳಲ್ಲಿ ಒಳಹೊಗಲು ಸಾಧ್ಯವಾಯಿತು. ಅಷ್ಟೇ ಅಲ್ಲ ಜಗತ್ತಿನ ಇತರ ಅತಿ ಮುಂದುವರಿದ ಭಾಗಗಳಲ್ಲಿ ಕೂಡ ಮಹಿಳಾ ಚಳವಳಿಗಳು ಎದುರಿಸಬೇಕಾಗಿ ಬಂದ ಪುರುಷರ ತೀವ್ರ ವಿರೋಧವು ಭಾರತದಲ್ಲಿ ಕಂಡುಬರದಿದ್ದುದು ಗಮನಾರ್ಹ. ಪ್ರಾಯಶಃ ಭಾರತದಲ್ಲಿ ಮಹಿಳಾ ಸಮಸ್ಯೆಗಳ ಬಗ್ಗೆ ತೀವ್ರ ಕಾಳಜಿ ಯಾವುದೇ(ರಾಷ್ಟ್ರೀಯ ಆಂದೋಲನ, ಮಹಿಳಾ ಆಂದೋಲನ) ಸಾಮಾಜಿಕ ಆಂದೋಲನದಲ್ಲೂ ಕಂಡುಬರದಿದ್ದುದು ಮತ್ತು ಪುರುಷ ಪ್ರಧಾನ ವ್ಯವಸ್ಥೆಯೊಳಗಿದ್ದೇ ಮಹಿಳೆಯರು ತಮ್ಮ ಬೇಡಿಕೆಗಳನ್ನು ಮಂಡಿಸಿದ್ದು.(ಎಂದರೆ

ವಿವಾಹದಿಂದ ಹೊರಬಂದುದ್ದು ಅಥವಾ ಒಂಟಿಯಾಗಿ) ಇದಕ್ಕೆ ಕಾರಣವಿರಬಹುದು. ಇಂದಿನ ಮಹಿಳಾ ಆಂದೋಲನ ಕೂಡ ಹೆಚ್ಚು ಕಡಿಮೆ ಇದೇ ಸ್ವರೂಪದಲ್ಲಿ ಮುಂದುವರೆಯುತ್ತಿದೆ.

"ಈಗ ಮಹಿಳೆಯರು ತಾವು ಸ್ವತಂತ್ರರಾಗಲು ಸಾಧ್ಯವೇ ಇಲ್ಲವೆಂದು ಭಾವಿಸಿದ್ದ ಹಿಂದಿನ ಕಾಲದ ಗುಲಾಮರಂತೆ ಇದ್ದಾರೆ. ಮಹಿಳೆಯರು ತಮ್ಮ ಘನತೆ ಗೌರವಗಳ ಪೂರ್ಣಸ್ವರೂಪವನ್ನು ಅರಿತು ಪುರುಷರಿಗೆ ಸಮಾನವಾಗಿ ಕರ್ತವ್ಯ ನಿರ್ವಹಿಸಲು ನೆರವಾಗಬೇಕು"[೨೫] ಎಂದು ಕಾಂಗ್ರೆಸ್ ಕಾರ್ಯಕರ್ತರಿಗೆ ಹೇಳುತ್ತಿದ್ದರು. ಈ ಮನೋಭಾವದಿಂದಾಗಿ ಉದಾರ ಪ್ರೋತ್ಸಾಹದ ವಾತಾವರಣವುಂಟಾಗಿ ಮಹಿಳೆಯರು ಸ್ವಾತಂತ್ರ್ಯ ಆಂದೋಲನದಲ್ಲಿ ಮುಕ್ತವಾಗಿ ಪಾಲ್ಗೊಳ್ಳಲು ಸಾಧ್ಯವಾಯಿತು. ಹಾಗೂ ಭಾರತದ ರಾಜಕೀಯ ವಾತಾವರಣದ ಮೇಲೂ ಇದು ಅಚ್ಚಳಿಯದ ಪ್ರಭಾವ ಬೀರಿತು.[೨೬] 'ಪ್ರತಿಭೆಯೇ ಒರೆಗಲ್ಲು, ಲಿಂಗದ ಆಧಾರದ ಮೇಲೆ ಸದಸ್ಯತ್ವದ ಬೇಡಿಕೆಯನ್ನು ಮುಂದಿಡುವುದು ಅಪಾಯಕರ, ಮಹಿಳೆಯರು ಮಾತ್ರವಲ್ಲದೆ ಇನ್ನುಳಿದ ಗುಂಪಿನವರೂ ಈ ಬಗೆಯ ಉತ್ತೇಜನವನ್ನು ನಿರಾಕರಿಸಬೇಕು. ನ್ಯಾಯವನ್ನು ಅಪೇಕ್ಷಿಸಬೇಕಲ್ಲದೆ ಕೃಪಾಭಿಕ್ಷೆಯನ್ನಲ್ಲ" ಎನ್ನುತ್ತಿದ್ದ ಗಾಂಧೀಜೀ "ಸ್ತ್ರೀಯರನ್ನು ಕಡೆಗಣಿಸುವುದು ನಮ್ಮಲ್ಲಿ ಪದ್ಧತಿಯಾಗಿಬಿಟ್ಟಿದೆ ಇದಕ್ಕೆ ವಿರುದ್ಧವಾಗಿ ಪುರುಷರಷ್ಟೇ(ಅಥವಾ ಇನ್ನು ಹೆಚ್ಚು) ಪ್ರತಿಭೆಯುಳ್ಳ ಸ್ತ್ರೀಯರಿಗೆ ಹೆಚ್ಚಿನ ಪ್ರಾಶಸ್ತ್ಯ ಸಲ್ಲಬೇಕು. ಇದರಿಂದ ಪುರುಷರು ಒಂದು ಪಕ್ಷ ಪದಚ್ಯುತರಾದರೂ ಚಿಂತೆಯಿಲ್ಲ" ಎಂದು ಹೇಳಿದ್ದರು. ಮಹಿಳೆಯರು ಸ್ವಾರ್ಥದ ಲವಲೇಶವಿಲ್ಲದೆ ಅರ್ಪಣಾ ಮನೋಭಾವದಿಂದ ಸಾಮಾಜಿಕ ಕಾರ್ಯಕರ್ತೆಯರಾಗಿ ಸಾರ್ವಜನಿಕ ರಂಗವನ್ನು ಪ್ರವೇಶಿಸಬೇಕೆಂಬುದು ಗಾಂಧಿಯವರ ಕನಸಾಗಿತ್ತು. ಈ ಕನಸನ್ನು ನನಸು ಮಾಡುವ ಯತ್ನವನ್ನು ಕಸ್ತೂರಬಾ ಸ್ಮಾರಕ ಟ್ರಸ್ಟ್ ನಡೆಸಿತು. ಮಹಿಳೆಯರು ಪುರುಷರೊಡನೆ ಅಧಿಕಾರ ಹಾಗೂ ರಾಜಕಾರಣದಲ್ಲಿ ಸ್ಪರ್ಧಿಸದೆ ಸಮಷ್ಟಿಯ ಹಿತಸಾಧನೆಗಾಗಿ ಪ್ರಯತ್ನಿಸಬೇಕು. ಮನೆಯೇ ಮಹಿಳೆಯ ನಿಜವಾದ ಕಾರ್ಯಕ್ಷೇತ್ರ ಎಂದು ಹೇಳುತ್ತಲೇ ಇದ್ದರೂ ಗೃಹಜೀವನದ ಸಂಕೋಲೆಗಳನ್ನು ಕಿತ್ತೊಗೆಯಲು ಅಗತ್ಯ ವಾತಾವರಣ ಸೃಷ್ಟಿಸಲು ಹೆಣಗಿದರು. ಆದರೆ ಸರೋಜಿನಿನಾಯ್ಡು, ಸುಚೇತಾ ಕೃಪಲಾನಿ ಮುಂತಾದ ಪ್ರಮುಖ ಮಹಿಳಾ ರಾಜಕಾರಣಿಗಳು, ವೃತ್ತಿಪರ ಮಹಿಳೆಯರಿಗೆ ಪ್ರೋತ್ಸಾಹ ನೀಡಿದರು. ಸಿದ್ಧಾಂತಗಳು ಹಾಗೂ ಘೋಷಿತ ನಿಲುವುಗಳು ಸೂಚಿಸುವ ದಿಕ್ಕು ಒಂದು; ಆಚರಣೆಗಳು ಸೂಚಿಸುವ ದಿಕ್ಕು ಇನ್ನೊಂದು, ಇಂಥವರ ಸಾಲಿನಲ್ಲಿ ಗಾಂಧಿ ಇದ್ದಾರೆ. ಪ್ರಾರಂಭದಲ್ಲಿ ತಾವು ಬ್ರಿಟಿಷ್ ಸಾಮ್ರಾಜ್ಯದ ನಿಷ್ಠಾವಂತ ಪ್ರಜೆ ಎಂದು ಪದೇ ಪದೇ ಹೇಳಿಕೊಳ್ಳುತ್ತಿದ್ದ ಗಾಂಧೀಜಿ ಅಷ್ಟೇ ವಸ್ತುನಿಷ್ಠವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಬುಡವನ್ನೇ ಕತ್ತರಿಸಿದರು. ಅದೇ ರೀತಿ ಸೀತೆ, ದ್ರೌಪದಿಯರ ಮಾದರಿಗಳನ್ನು ಮಹಿಳೆಯರ ಮುಂದಿಡುತ್ತಲೇ, ಅವರ ಗೃಹಬಂಧನವನ್ನೂ

ಕಿತ್ತೊಗೆಯಲು ಕಾರಣರಾದರು. ಸ್ವಾತಂತ್ರ್ಯ ಹೋರಾಟದಲ್ಲಿ ಸ್ತ್ರೀಯರು ಭಾಗವಹಿಸಿದ್ದು ಗುಣ ಮತ್ತು ಪರಿಮಾಣದ ದೃಷ್ಟಿಯಿಂದ ಸೀಮಿತವಾದುದಾಗಿತ್ತು. ನಗರಗಳ ಮಧ್ಯಮವರ್ಗದ ಮಹಿಳಾ ಗುಂಪು ಸಕ್ರಿಯವಾಗಿ; ನಿಯಮಿತವಾಗಿ ಹೋರಾಟದಲ್ಲಿ ಭಾಗವಹಿಸಿತ್ತು, ಆದರೆ ಗ್ರಾಮೀಣ ಮಹಿಳೆಯರು ಕೆಲವೇ ಘಟ್ಟಗಳಲ್ಲಿ ಎಂದರೆ ಪ್ರತಿಭಟನಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಆದಾಗ್ಯೂ, ಒಟ್ಟಾರೆ ಮಹಿಳೆಯರು ಭಾಗವಹಿಸಿದ್ದರಿಂದ ಸ್ವಾತಂತ್ರ್ಯ ಆಂದೋಲನಕ್ಕೆ ಹೊಸಚೈತನ್ಯ ಹಾಗೂ ತೀವ್ರತೆ ಲಭಿಸಿದ್ದರಲ್ಲಿ ಸಂದೇಹವಿಲ್ಲ.

ಶಾಲೆ ಕಾಲೇಜುಗಳ ವ್ಯಾಸಂಗ ಮುಗಿದೊಡನೆ ವಿವಾಹವಾಗುವ ಹುಡುಗಿಯರು ಸಾರ್ವಜನಿಕ ಕ್ಷೇತ್ರದಿಂದ ಮರೆಯಾಗುವ ಬಗ್ಗೆ ಗಾಂಧಿಯವರು ವಿಷಾದಿಸುತ್ತ 'ಹಿಂದೂ ಹುಡುಗಿಯರು ಪಾರ್ವತಿ ಮತ್ತು ಸೀತೆಯ ವೈಭವೀಕೃತ ಆವೃತ್ತಿಯನ್ನು ಮರುಸೃಷ್ಟಿಸಲು ಇದು ಸಕಾಲ' ಎಂದಿದ್ದರು. ಇದರರ್ಥ ಪ್ರತಿಯೊಬ್ಬ ಹುಡುಗಿಯೂ ಮದುವೆಯಾಗಲೆಂದೇ ಹುಟ್ಟಿದ್ದಲ್ಲ ಎಂದು ಒತ್ತಿಹೇಳಿದರೂ ಸಾರ್ವಜನಿಕ ಕ್ಷೇತ್ರಕ್ಕೆ ಮಹಿಳೆಯರನ್ನು ಆಕರ್ಷಿಸಲು ತಮ್ಮ ಜೀವನದುದ್ದಕ್ಕೂ ಗಂಡಂದಿರಿಗೆ ನಿಸ್ವಾರ್ಥಸೇವೆ ಸಲ್ಲಿಸಿದ ಆದರ್ಶ ಪತ್ನಿಯರು ಕೊನೆತನಕವೂ ಅನುಸರಿಸಿ 'ಅವರ' ಕರ್ತವ್ಯಗಳನ್ನು ಈಡೇರಿಸಿದಂತಹ ಸಂಕೇತಗಳನ್ನು ಮುಂದಿಟ್ಟಿದ್ದರು.

ಮಹಿಳೆಯರು ಹಾಗೂ ಅವರ ಸಾಮಾಜಿಕ ಪಾತ್ರ ಕುರಿತು ಗಾಂಧಿಯವರ ವಿಚಾರಗಳು ೧೯ನೇ ಶತಮಾನದ ಇತರ ಸುಧಾರಕರ ವಿಚಾರಗಳಿಂದ ತೀರ ಭಿನ್ನವೇನಲ್ಲವಾದರೂ ಕೆಲವೊಂದು ಮುಖ್ಯ ವಿಚಾರಗಳಲ್ಲಿ ಅವರು ಪರಂಪರೆಯಿಂದ ದೂರ ಸಿಡಿದು ನಿಲ್ಲುತ್ತಾರೆ. ಅವರು ಮಹಿಳೆಯರನ್ನು ಸುಧಾರಣೆಗೆ ಒಳಗಾಗಬೇಕಾದ ವಸ್ತುಗಳಾಗಿ, ಪುರುಷರ ಉದಾರ ಕಾಳಜಿಯನ್ನು ಬಯಸುವ ಅಸಹಾಯಕ ಜೀವಿಗಳೆಂದು ಭಾವಿಸಿಲ್ಲ. ಪ್ರತಿಯಾಗಿ, ಮಹಿಳೆ ಕ್ರಿಯಾಶೀಲಳಾದ, ಆತ್ಮಪ್ರಜ್ಞೆಯುಳ್ಳ ಸಾಮಾಜಿಕ ಬದಲಾವಣೆ ತರಬಲ್ಲ ಸಶಕ್ತಳೆಂದು ತಿಳಿಸಿದ್ದರು. ೧೯ನೇ ಶತಮಾನದ ಸಮಾಜ ಸುಧಾರಕರಂತೆ ಭಾರತೀಯ ಸಮಾಜದ ಪುನರ್ನಿರ್ಮಾಣಕ್ಕೆ ಕಾರಣವಾಗುವ ಶಿಕ್ಷಣ ಹಾಗೂ ವಿವಾಹದಂಥ ಆಯ್ದ ಕ್ಷೇತ್ರಗಳಿಗೆ ಮಾತ್ರವೇ ಅವರ ಕಾಳಜಿ ಸೀಮಿತವಾಗಿರಲಿಲ್ಲ. ಅವರು ಪ್ರಧಾನವಾಗಿ ಕ್ರಾಂತಿಕಾರಿಯಂತೆ ಸಾಮಾಜಿಕ ಪುನರ್ರಚನೆ ಮಾಡಬಯಸಿದ್ದರು. ಸಮಾಜದ ಪುನರ್ನಿರ್ಮಾಣದ ಪ್ರಕ್ರಿಯೆಯಲ್ಲಿ ಮಹಿಳೆಯರು ತಮ್ಮನ್ನು ಆವರಿಸಿರುವ ಬಂಧನಗಳಿಂದ ಸ್ವಯಂ ಮುಕ್ತಿ ಪಡೆಯಲು ಸಾಧ್ಯವೆಂದು ಭಾವಿಸಿದ್ದರು.

ಗಾಂಧಿಯವರ ಕಲ್ಪನೆಯ ಹೊಸ ಸಮಾಜವು ಗತಕಾಲದ ಸಮಾಜಕ್ಕಿಂತ ತುಂಬಾ ಭಿನ್ನವಾಗಿತ್ತು. ಗಾಂಧಿಯವರ ದೃಷ್ಟಿಯಲ್ಲಿ, ಮನೆಯೇ ಬಹುತೇಕ ಮಹಿಳೆಯರ ಕಾರ್ಯ ಚಟುವಟಿಕೆಗಳ ರಂಗ. ಸ್ತ್ರೀ

ಪುರುಷರಿಗೆ ಸಮಾನ ಗೌರವ ಹಾಗೂ ಆತ್ಮಸಂಸ್ಕಾರಕ್ಕಾಗಿ ಮಹಿಳೆಯರ ಸಂಪೂರ್ಣ ವಿಮೋಚನೆ ಈ ತತ್ವದಲ್ಲಿ ಗಾಂಧಿಜಿಯವರಿಗೆ ನಂಬಿಕೆ ಇತ್ತು. ಆದರೆ ಅವರ ಸಮಾನತೆಯ ಕಲ್ಪನೆಯು ಸಮಾನ ಉದ್ಯೋಗಾವಕಾಶ ಹಾಗೂ ಆರ್ಥಿಕ, ರಾಜಕೀಯ, ಅಧಿಕಾರ ಕ್ಷೇತ್ರಕ್ಕೆ ವಿಸ್ತರಿಸಲಿಲ್ಲ.

ಮಹಿಳೆಯರ ಹೋರಾಟಕ್ಕೆ ಗಾಂಧಿಯವರ ದೊಡ್ಡ ಕೊಡುಗೆ ಎಂದರೆ ಅವರು ಅದಕ್ಕೆ ನೈತಿಕತೆಯ ಮುದ್ರೆ ಒತ್ತಿ ಸತ್ಸಂಪ್ರದಾಯವನ್ನು ಆರಂಭಿಸಿದ್ದು ಎನ್ನಬಹುದು. ಇಂದಿಗೂ ಕೂಡ ಯಾರೇ ಆಗಲಿ ಸಾರ್ವಜನಿಕವಾಗಿ ಧೈರ್ಯದಿಂದ ಮಹಿಳೆಯರ ಮೂಲಭೂತ ಹಕ್ಕುಗಳನ್ನು ವಿರೋಧಿಸಲು ಸಾಧ್ಯವಿಲ್ಲ. ಇಂಥ ಸಾಮಾಜಿಕ, ರಾಜಕೀಯ ಸನ್ನಿವೇಶವನ್ನು ಗಾಂಧಿಯವರು ನಿರ್ಮಾಣ ಮಾಡಿದರು. ಅವರ ಹೋರಾಟಕ್ಕೆ ನೈತಿಕ ಸಮ್ಮತಿ ದೊರಕಿಸಿಕೊಟ್ಟರು.

ಮಹಿಳೆಯರ ಹಕ್ಕುಗಳ ಬಗ್ಗೆ ಗಾಂಧೀಯವರು ವಿಶೇಷ ಆಸಕ್ತಿವಹಿಸಿದ್ದರು. ಆದರೂ ಮಹಿಳೆಯರು ತಾವೇ ಒಂದು ರಾಜಕೀಯ ಶಕ್ತಿಯಾಗಿ ರೂಪುಗೊಂಡು ತಮ್ಮ ಸಮಸ್ಯೆಗಳ ಬಗ್ಗೆ ಹೋರಾಡುವುದನ್ನು ಅವರು ಪ್ರೋತ್ಸಾಹಿಸಲಿಲ್ಲ. ಸಾಮಾಜಿಕ ಜೀವನದಲ್ಲಿ ಮಹಿಳೆಯರಿಗೆ ಗೌರವ ತಂದು ಕೊಡುವ, ಅವರ ಬಗ್ಗೆ ಪೂರ್ವಾಗ್ರಹವನ್ನು ತೊರೆಯುವ, ಅವರ ಸಮಸ್ಯೆಗಳಿಗೆ ಸಹಾನುಭೂತಿ ಪರವಾದ ಅರಿವು ಮೂಡಿಸುವ ಗಾಂಧಿಯವರ ಕ್ರಿಯೆಯ ಪರಿಣಾಮಗಳು ಸಮಾಜದಲ್ಲಿ ಮಹಿಳೆಯರ ಸ್ಥಾನ ಹಾಗೂ ಪಾತ್ರದ ಬಗ್ಗೆ ತಾವೇ ಪ್ರತಿಪಾದಿಸುತ್ತಿದ್ದ ವಿಚಾರ ಹಾಗೂ ಘೋಷಣೆಗಳನ್ನು ಮೀರಿ ನಿಲ್ಲುತ್ತದೆ.

ಕರ್ನಾಟಕದ ಮಹಿಳೆಯರು ಮತ್ತು ೧೮೮೧ ರಿಂದ ೧೯೮೧ರವರೆಗೆ ಉಂಟಾದ ಸಾಮಾಜಿಕ ಪರಿವರ್ತನೆ

ಶೈಕ್ಷಣಿಕ ಸ್ಥಾನಮಾನ : ಚಾಮರಾಜ ಒಡೆಯರ್‌ರವರ ಆಳ್ವಿಕೆಯಲ್ಲಿ ಅವರು ಮಹಿಳಾ ಶಿಕ್ಷಣಕ್ಕೆ ಮಹತ್ವ ನೀಡಿದ್ದರು. ಬ್ರಿಟಿಷ್ ಮಿಷನರಿಗಳ ಶಾಲೆಗಳು ಜನಪ್ರಿಯವಾಗಿರಲಿಲ್ಲ. ೧೮೮೧ರಲ್ಲಿ ಅವರ ಆಳ್ವಿಕೆಯ ಮೊದಲ ವರ್ಷದಲ್ಲೇ ಮಹಾರಾಣಿ ಬಾಲಕಿಯರ ಶಾಲೆಯನ್ನು ಪ್ರಾರಂಭಿಸಿದ್ದು, ಇದು ಮುಂದೆ ಮಹಾರಾಣಿ ಕಾಲೇಜು ಎಂಬುದಾಗಿ ಅತ್ಯಂತ ಪ್ರಸಿದ್ಧಿ ಪಡೆಯಿತು. ಆಗ ದಿವಾನರಾಗಿದ್ದ ಶ್ರೀ ಸಿ.ರಂಗಾಚಾರ್ಲು ಅವರು ಶಾಲೆಯಲ್ಲಿ ಬಹುಮಾನ ವಿತರಣೆ ಮಾಡುತ್ತಾ "ನಮ್ಮ ಮುಂದುವರಿದ ಕುಟುಂಬಗಳ ಪೈಕಿ ಬಾಲಕಿಯರಿಗೆ ಇಂಗ್ಲಿಷ್ ನಲ್ಲಿ ಉನ್ನತ ಶಿಕ್ಷಣ ನೀಡುವುದು ಮಹತ್ವದ್ದೆಂದು ನಾನು ಭಾವಿಸುತ್ತೇನೆ, ಇದರಿಂದ ಉನ್ನತ ಶಿಕ್ಷಣ ಪಡೆದ ಪುರುಷರು ಹೊಂದಿರುವ ಸ್ಥಾನಮಾನಗಳನ್ನು ಇವರೂ ಹೊಂದಲು ಸಾಧ್ಯವಾಗುತ್ತದೆ. ಕೇವಲ ಪುರುಷರು ರೂಪಿಸುವ(ಒಂದು ವರ್ಗವು ಇನ್ನೊಂದು ವರ್ಗಕ್ಕಾಗಿ ರೂಪಿಸುವ) ಶಾಸನಗಳನ್ನು ನಾವು ನಂಬಿಕೊಂಡಿರಲು ಸಾಧ್ಯವಿಲ್ಲ. ಅಂಥ ಶಾಸನದಲ್ಲಿ ಬಾಲಕಿಯರ ಹಕ್ಕುಗಳು ಹಾಗೂ ಇತರ ಶಿಕ್ಷಣದ ದುಂದು ವೆಚ್ಚಗಳನ್ನು ಕುರಿತ ಕಲ್ಪಿತ(ಕಾಲ್ಪನಿಕ) ಊಹಾ

ಕ್ಷೋಭೆಗಳು ಅಸ್ಥಿರವಾಯಿತೆನಿಸುತ್ತದೆ. ಆದ್ದರಿಂದ ಮಹಿಳಾ ಶಾಲೆಗಳನ್ನು ಮತ್ತು ಅವರ ಏಳಿಗೆಗೆ ಬಿಟ್ಟು, ಅವರ ಅಭಿಪ್ರಾಯಗಳು ಹಾಗೂ ವಿಷಯದ ಗಾಂಭೀರ್ಯಕ್ಕೆ ಬದಲಾಗಿ ಸೂಕ್ಷ್ಮವೆನಿಸುತ್ತದೆ" ಎಂದಿದ್ದರು.

ಮತ್ತೆ ಎರಡು ಶಾಲೆಗಳು ಮೈಸೂರಿನಲ್ಲಿ ಮತ್ತು ತುಮಕೂರಿನಲ್ಲಿ ಪ್ರಾರಂಭವಾದವು. ಸರ್ಕಾರದಿಂದ ಪ್ರಾರಂಭವಾದ ಮಹಾರಾಣಿ ಬಾಲಿಕೆಯರ ಶಾಲೆ ಹಾಗೂ ಬೆಂಗಳೂರಿನ ಆರ್ಯಬಾಲಿಕಾ ಪಾಠಶಾಲಾ ಮತ್ತು ತುಮಕೂರಿನ ಐಂಪೆನ್ ಬಾಲಿಕೆಯರ ಶಾಲೆ ಇವುಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಸತತವಾಗಿ ಏರುತ್ತಿದ್ದುದರಿಂದ ಸರ್ಕಾರವೇ ಅವುಗಳ ನಿಯಂತ್ರಣವನ್ನು ವಹಿಸಿಕೊಂಡಿತು. ಮೊದಲಬಾರಿಗೆ ಶಿಕ್ಷಕ ತರಬೇತಿ ತರಗತಿಯನ್ನೂ ಆಗಲೇ ಪ್ರಾರಂಭಿಸಲಾಯಿತು.

ಮಹಿಳಾ ಶಿಕ್ಷಣದ ಪ್ರಗತಿಗೆ ಕಾರಣರಾದವರಲ್ಲಿ, ಚಾಮರಾಜ ಒಡೆಯರ ಗುರುಗಳಾಗಿದ್ದ ರಾವ್ ಬಹದ್ದೂರ್ ಎ.ನರಸಿಂಹ ಅಯ್ಯಂಗಾರ್ ಅವರ ಉತ್ಸಾಹ ಪೂರ್ಣ ಸೇವೆಗಳನ್ನು ಇಲ್ಲಿ ನೆನೆಯುವುದು ಪ್ರಸ್ತುತವೆನಿಸುತ್ತದೆ. ತಮ್ಮ ಸ್ವಂತ ಹಣದಲ್ಲಿ ಬಹಳಷ್ಟು ದಾನ ಕೊಟ್ಟು, ಪ್ರಮಾಣವನ್ನು ಬೆಳಸಿ ಮಹಿಳೆಯರ ಏಳಿಗೆಗಾಗಿ ಶ್ರಮಿಸಿದರು. ೪ ಲಂಡನ್ ಮಿಷನ್ ಶಾಲೆಗಳಲ್ಲಿ ೭೭೯ ಜನರಿಗೆ ವೆಸ್ಲಿಯನ್ ಮಿಷನ್ ೩೯ ಶಾಲೆಗಳಲ್ಲಿ ೨,೦೭೭ ಜನರಿಗೆ ಶಿಕ್ಷಣ ನೀಡಲಾಗುತ್ತಿತ್ತು. ೧೮೯೦-೯೧ರ ಸಾರ್ವಜನಿಕ ಶಿಕ್ಷಣ ವರದಿಯಲ್ಲಿ ಮಹಿಳಾ ಶಿಕ್ಷಣ ಪ್ರಗತಿ ದೊಡ್ಡ ಪ್ರಮಾಣದಲ್ಲಿ ಆಗುತ್ತಿದ್ದುದನ್ನು ತಿಳಿಸಲಾಗಿದೆ.

ಸಮಾಜ ಸುಧಾರಣಾವಾದಿಗಳಾದ ರಾಮಮೋಹನರಾಯ್, ಈಶ್ವರ ಚಂದ್ರವಿದ್ಯಾಸಾಗರ್ ಅವರ ಸುಧಾರಣಾ ಪ್ರಯತ್ನಗಳು ಮೈಸೂರನ್ನು ಮೂರು ದಶಕಗಳಷ್ಟು ದೀರ್ಘ ಕಾಲದನಂತರ ತಲುಪಿದವು. ೧೮೯೪ರಲ್ಲಿ ಮೈಸೂರು ಶಿಶು ವಿವಾಹ ನಿವಾರಣಾ ಶಾಸನವನ್ನು ಜಾರಿಯಲ್ಲಿ ತರಲಾಯಿತು. ಇದರಿಂದ ಸಾಕಷ್ಟು ಜನಜಾಗೃತಿಯುಂಟಾಯಿತು. ಮಹಾರಾಣಿ ಕೆಂಪನಂಜಮ್ಮಣ್ಣಿ ಅರಸು ಮಾತೆ ವಿಧವೆ ಸ್ತ್ರೀಯಾದ ಇವರೂ ಕೂಡ ಮಹಿಳಾ ಪ್ರಗತಿಗೆ ಸಾಕಷ್ಟು ಶ್ರಮಿಸಿದ್ದರು. ಆಕೆ ೧೮೯೪ ರಿಂದ ೧೯೦೨ರವರೆಗೆ ಪ್ರತಿಭಾನ್ವಿತ ದಕ್ಷ ಆಡಳಿತಗಾರಳಾಗಿ ಮೈಸೂರನ್ನು ಆಳಿದ್ದರು. ವಿಧವೆಯರ ಗೃಹ(Widows Home) ಮತ್ತು ಮಹಾರಾಣಿ ಕಾಲೇಜಿಗೆ ಹಾಸ್ಟೆಲ್ ಆಗಿ ಸೇರಿಸಲಾಯಿತು. ಮುಸ್ಲಿಂ ಹುಡುಗಿಯರಿಗಾಗಿ ಮೈಸೂರು ಎತ್ತಿನಗಾಡಿಗಳನ್ನು ವ್ಯವಸ್ಥೆ ಮಾಡಲಾಗಿತ್ತು.

ಮತದಾನ ಮತ್ತು ರಾಜಕೀಯ ಸ್ಥಾನಮಾನ : ೧೯೨೦ರಲ್ಲಿ ದಿವಾನರಾಗಿದ್ದ ಸರ್ .ಕಾಂತರಾಜ ಅರಸ್ ಅವರ ನೇತೃತ್ವದಲ್ಲಿ, ಮತದಾನ ಮತ್ತು ಪ್ರಾತಿನಿಧಿಕ ಅಸೆಂಬ್ಲಿಯ ಚುನಾವಣೆಯಲ್ಲಿ ಲಿಂಗಾಧಾರಿತವನ್ನುಬಿಡ

ಬಾರದೆಂಬ ಬಗ್ಗೆ ಚರ್ಚೆನಡೆದಿತ್ತು. ಡಾ.ಬ್ರಜೇಂದ್ರನಾಥ ಸೀಲ್ ಅವರನ್ನು ೧೯೨೩ರಲ್ಲಿ ಆಡಳಿತ ಸುಧಾರಣಾ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದು ಅವರ ಶಿಫಾರಸುಗಳ ಮೂಲಕ ಅನೇಕ ಸುಧಾರಣೆಗಳನ್ನು ತಂದಿದ್ದರು. ಮಹಿಳೆಯರಿಗೆ ಮತದಾನದ ಹಕ್ಕಿನ ಜೊತೆಗೆ ಕೆಲವೊಂದು ಮಂಡಳಿಗಳಿಗೆ ಸದಸ್ಯರಾಗುವ ಅವಕಾಶವೂ ದೊರೆಯಿತು.

೧೯೨೦-೩೦ರ ದಶಕದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಶಿಫಾರಸ್ಸುಗಳನ್ನು ಕುರಿತು ಮಹಿಳೆಯರ ಸ್ಥಾನಮಾನವನ್ನು ಸುಧಾರಿಸಲು ಹಿಂದೂ ಲಾಗೆ ತಿದ್ದುಪಡಿ ಮಾಡುವ ಮಹತ್ವದ ಗೊತ್ತುವಳಿಯನ್ನು ಮಂಡಿಸಲಾಯಿತು. ಮೈಸೂರಿನ ಮುಖ್ಯನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ದಿವಾನ್ ಬಹದ್ದೂರ್ ಕೆ.ಎಸ್.ಚಂದ್ರಶೇಖರ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಅದರಲ್ಲಿ ಶ್ರೀಮತಿ ಕೆ.ಡಿ.ರುಕ್ಮಿಣಿಯಮ್ಮ ಎಂಬ ಮಹಿಳಾ ಸದಸ್ಯೆಯೂ ಇದ್ದರು. ಅದರಲ್ಲಿದ್ದ ಪರಿಶೀಲನಾಂಶಗಳು ಈ ಮುಂದಿನಂತಿವೆ:

೧. ಹಿಂದೂ ಲಾದ ಮೇರೆಗೆ ಮಹಿಳೆಯರ ಅಂತಸ್ತನ್ನು ಸುಧಾರಿಸುವ ಪ್ರಶ್ನೆಯನ್ನು, ಅದಕ್ಕೆ ಸಂಬಂಧಪಟ್ಟಂತೆ ಉದ್ಭವಿಸಬಹುದಾದ ಯಾವುದೇ ಇತರ ಸಾಂದರ್ಭಿಕ ಅಂಶಗಳನ್ನು ಒಳಗೊಂಡು ಹಾಗೂ ಬ್ರಿಟಿಷ್ ಇಂಡಿಯಾದಲ್ಲಿ ಇತ್ತೀಚೆಗೆ ಮಾಡಲಾಗಿರುವ ಶಾಸನಕ್ಕೆ ಸಂಬಂಧಿಸಿದಂತೆ ಕೂಡ ಎಲ್ಲ ಅಂಶಗಳ ಬಗ್ಗೆ ಪರಿಶೀಲನೆ ನಡೆಸುವುದು.

೨. ಸುಧಾರಣೆಯ ಅವಶ್ಯಕತೆಯಿರುವ ಸಮಯದಲ್ಲಿ ಹಿಂದೂ ಲಾವನ್ನು ಯಾವುದಕ್ಕೆ ಸಂಬಂಧಪಟ್ಟಂತೆ ಅನ್ವಯಿಸಬೇಕೆಂಬ ಬಗ್ಗೆ ಸರ್ಕಾರಕ್ಕೆ ವರದಿ ನೀಡುವುದು ಮತ್ತು

೩. ವಿಷಯಕ್ಕೆ ಸಂಬಂಧಪಟ್ಟಂತೆ ಸಮಿತಿಯ ಶಿಫಾರಸ್ಸುಗಳನ್ನೊಳಗೊಂಡ ಕರಡು ವಿಧೇಯಕವನ್ನು ಸಿದ್ಧಪಡಿಸುವುದು.

ಸಮಿತಿಯು ದೀರ್ಘ ಚರ್ಚೆಗಳ ನಂತರ ೧೯೩೦ರ ಸೆಪ್ಟೆಂಬರ್ ತಿಂಗಳಲ್ಲಿ ವರದಿಯನ್ನು ಸಲ್ಲಿಸಿತು. ಹಾಗೂ "ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿದಂತೆ ಹಿಂದೂ ಲಾವನ್ನು ತಿದ್ದುಪಡಿಮಾಡುವ ವಿಧೇಯಕ" ಎಂದು ಕರೆಯಲಾದ ಕರಡು ವಿಧೇಯಕವನ್ನು ಸಿದ್ಧಪಡಿಸಿತ್ತು. ವಿಧೇಯಕವು ಐದು ಭಾಗಗಳನ್ನು ಹೊಂದಿದ್ದು ಅವು ಈ ಮುಂದಿನಂತಿವೆ.

೧. ಉತ್ತರಾಧಿಕಾರ
೨. ಪ್ರತ್ಯೇಕ ಸ್ವತ್ತು ಮತ್ತು ದತ್ತು ಹಕ್ಕು
೩. ಮಹಿಳೆಯರ ಸಂಪೂರ್ಣ ಆಸ್ತಿ

೪. ಮಹಿಳೆಯರ ನಿಯಮಿತ ಆಸ್ತಿ

೫. ಜೀವನಾಧಾರ(ಭತ್ಯ)

ಈ ವಿಧೇಯಕವನ್ನು ೧೯೩೧ರ ಜೂನ್ ತಿಂಗಳ ಬಜೆಟ್ ಅಧಿವೇಶನದಲ್ಲಿ ಮಂಡಿಸಲಾಯಿತು. ಕಾನೂನು ಕಾರ್ಯದರ್ಶಿಯವರು ವಿಧೇಯಕದ ಎರಡು ಸಾಮಾನ್ಯ ತತ್ವಗಳನ್ನು ವಿವರಿಸಿದ್ದು ಅವು ಹೀಗಿದ್ದವು. ಸಾವಿರಾರು ವರ್ಷಗಳ ಹಿಂದೆ ಮನು ರಚಿಸಿದ್ದ ಸಂಪ್ರದಾಯಶೀಲ ಧರ್ಮಸಂಹಿತೆಯನ್ನು ಉಳಿಸಬೇಕೆಂಬ ಒಂದು ಪಂಥ ಹಾಗೆ ಅತ್ಯಂತ ಹಳೆಯದಾದ ಧರ್ಮಸಂಹಿತೆಯ ಪರಿವರ್ತಿತವಾದ ಸಮಾಜದ ಪರಿಸ್ಥಿತಿಗಳಿಗೆ ಎಳ್ಳಷ್ಟು ಹೊಂದುವುದಿಲ್ಲವಾದ್ದರಿಂದ ಅದನ್ನು ಆಧುನಿಕ ಅಗತ್ಯಗಳಿಗೆ ತಕ್ಕಂತೆ ಮಾರ್ಪಾಡುಗೊಳಿಸಬೇಕೆಂಬುದು ಇನ್ನೊಂದು ಪಂಥ. ಈ ಎರಡು ಪಂಥಗಳ ವಾದಗಳನ್ನು ಜಾಗರೂಕತೆಯಿಂದ ಪರಿಶೀಲಿಸಲಾಯಿತು.

ಆಗ ವಿಧಾನಸಭೆಯಲ್ಲಿ ಶ್ರೀಮತಿ ಕಮಲಮ್ಮ ದಾಸಪ್ಪ ಹಾಗೂ ಶ್ರೀಮತಿ ಸಾಕಮ್ಮ ಎಂಬ ಇಬ್ಬರು ಮಹಿಳಾ ಸದಸ್ಯೆಯರಿದ್ದರು. ಇಂದಿನಂತೆಯೇ ಆಗ ಮಹಿಳಾ ಪ್ರಾತಿನಿಧ್ಯ ಕಡಿಮೆಯಿದ್ದು, ಮಹಿಳಾ ದನಿಗಳು ಕಡಿಮೆಯಿದ್ದರೂ ಮಹಿಳಾ ಸ್ಥಿತಿಗತಿಗಳ ಸುಧಾರಣೆಯ ಬಗ್ಗೆ ಶ್ರೀಮತಿ ಕಮಲಮ್ಮ ದಾಸಪ್ಪ ಅತ್ಯಂತ ಕಳಕಳಿ, ಆಕ್ರೋಶಗಳಿಂದ ಭಾಷಣ ಮಾಡಿ ಸರ್ಕಾರವು ಮಹಿಳಾ ಹಕ್ಕುಗಳನ್ನು ಕೊಡ ಮಾಡಿದ ಬಗ್ಗೆ ಕೃತಜ್ಞತೆ ಸಲ್ಲಿಸಿದರೂ ಶಿಫಾರಸುಗಳಲ್ಲಿ ಅಖಿಲ ಭಾರತ ಮಹಿಳಾ ಸಮಾವೇಶದಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳನ್ನು ಒಳಗೊಂಡಿಲ್ಲವೆಂದು ಟೀಕಿಸಿದ್ದರು. ಈ ಹಂತದಲ್ಲಿ ಮೈಸೂರು ರಾಜ್ಯ ಮಹಿಳಾ ಸಮಾವೇಶದ ಅಧ್ಯಕ್ಷೆಯು ೧೯೩೨ರ ಡಿಸೆಂಬರ್ ೧೨ರಂದು ಶಾಸಕಾಂಗ ಪರಿಷತ್ತಿಗೆ ಪತ್ರವನ್ನು ಬರೆದು ವಿಧೇಯಕದಲ್ಲಿ ಯಾವುದೇ ಮಹತ್ವದ ಬದಲಾವಣೆಗಳನ್ನು ಮಾಡಿಲ್ಲವಾದ್ದರಿಂದ ಮಹಿಳೆಯರಿಗೆ ಇನ್ನಷ್ಟು ಪ್ರಯೋಜನಗಳನ್ನು ಕೋರುತ್ತ ವಿಧೇಯಕವನ್ನು ಪರಿಶೀಲಿಸುವುದನ್ನು ಮುಂದೂಡಬೇಕೆಂದು ಕೋರಿದ್ದರು. ವಿಧೇಯಕವನ್ನು ಕೆಲವು ಮಾರ್ಪಾಡುಗಳೊಂದಿಗೆ ಅನುಮೋದಿಸಿ ಮಹಾರಾಜರ ಸಮ್ಮತಿ ಪಡೆದು ೧೯೩೪ರ ಜನವರಿ ೧ ರಿಂದ ಜಾರಿಯಲ್ಲಿ ತರಲಾಯಿತು.

ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಿದ ಮೈಸೂರು ಮಹಿಳೆಯರು

ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದ ಕರ್ನಾಟಕದ ಮಹಿಳೆಯರ ಪೈಕಿ ಬಳ್ಳಾರಿ ಸಿದ್ದಮ್ಮನವರ ಹೆಸರು ಮೊಟ್ಟಮೊದಲು ಕೇಳಿಬರುತ್ತದೆ. ಆಕೆ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದರಷ್ಟೇ ಅಲ್ಲ, ಕರ್ನಾಟಕದ ಏಕೀಕರಣದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ್ದರು. ಅದೇ ರೀತಿ ನಿಷ್ಠಾವಂತ ಕಾಂಗ್ರೆಸಿಗರಾಗಿ ರಾಜಕೀಯ ಹಾಗೂ ಸಾಮಾಜಿಕ ರಂಗಗಳಲ್ಲಿ ಸೇವೆ ಸಲ್ಲಿಸಿದ್ದ ಎಚ್ .ಆರ್

.ದಾಸಪ್ಪನವರ ಧರ್ಮಪತ್ನಿಯಾಗಿದ್ದ ಶ್ರೀಮತಿ ಯಶೋಧರಾ ದಾಸಪ್ಪನವರೂ ಕೂಡ ಅಷ್ಟೇ ಮಹತ್ತ್ವದ ಪಾತ್ರವಹಿಸಿದ್ದರು. ಇವರಷ್ಟೇ ಅಲ್ಲ ಉತ್ತರ ಕನ್ನಡ ಜಿಲ್ಲೆಯ ಕಮಲಾದೇವಿ ಚಟ್ಟೋಪಾಧ್ಯಾಯ(ಸಾಮಾಜಿಕ ಆಂದೋಲನದ ಆದ್ಯ ಪ್ರವರ್ತಕರಲ್ಲಿ ಒಬ್ಬರು), ಉಮಾಬಾಯಿಕುಂದಾಪುರ್ ಮತ್ತು ಗೌರಮ್ಮ ಮುಂತಾದವರು ತಮ್ಮ ಜತೆಗಾತಿಯರೊಂದಿಗೆ ಭಾಗವಹಿಸಿದ್ದರು. ೧೫ನೇ ಅಖಿಲಭಾರತ ಮಹಿಳಾ ಸಮಾವೇಶವು ೧೯೪೦ರ ಡಿಸೆಂಬರ್ ನಲ್ಲಿ ಬೆಂಗಳೂರಿನಲ್ಲಿ ಸಭೆಸೇರಿತ್ತು.

ಮಹಿಳಾ ಕಲ್ಯಾಣ ಕ್ರಮಗಳು

ಮಹಿಳೆಯರಿಗೆ ಸಂಬಂಧಿಸುವ ಶಾಸನಗಳನ್ನು ಜಾರಿಗೊಳಿಸುವಲ್ಲಿ ಕೂಡ ಮೈಸೂರು ಮುಂದಿತ್ತು. ೧೯೩೭ರಲ್ಲಿ ಮೈಸೂರು ಪ್ರಸೂತಿ ಸೌಲಭ್ಯ ವಿನಿಯಮನ ವಿಧೇಯಕವನ್ನು ಕಾನೂನಾಗಿ ಜಾರಿಗೊಳಿಸಲಾಯಿತು. ಹಾಗೆಯೇ ಮೈಸೂರು ಹಿಂದೂ ವಿಧವೆಯರ ಮರುವಿವಾಹ ಅಧಿನಿಯವನ್ನೂ ಜಾರಿಯಲ್ಲಿ ತರಲಾಯಿತು.

ಶಿಕ್ಷಣ ಕ್ಷೇತ್ರದಲ್ಲಂತೂ ಅನೇಕ ಭಾರಿ ಬದಲಾವಣೆಗಳುಂಟಾದವು. ಮಹಾರಾಣಿಕಾಲೇಜು ಬೆಂಗಳೂರಿಗೆ ವರ್ಗಾವಣೆಯಾಯಿತಲ್ಲದೆ, ಮಹಿಳೆಯರಿಗಾಗಿ ಕಲೆ ಮತ್ತು ವಿಜ್ಞಾನ ಕಾಲೇಜು, ಸೆಂಟ್ರಲ್ ಕಾಲೇಜು, ವೈದ್ಯಕೀಯ ಕಾಲೇಜು ಮತ್ತು ವೈದ್ಯಕೀಯ ಶಾಲೆಗಳು ಪ್ರಾರಂಭವಾದವು. ಮಹಿಳೆಯರಿಗಾಗಿ ಕೈಗೊಳ್ಳಲಾದ ಅಭಿವೃದ್ಧಿ ಕಾರ್ಯಕ್ರಮಗಳ ಪೈಕಿ ಅತ್ಯಂತ ಮುಖ್ಯವಾದುದೆಂದರೆ ೧೯೫೩ರಲ್ಲಿ ಕೇಂದ್ರೀಯ ಸಮಾಜ ಅಭಿವೃದ್ಧಿ ಮಂಡಲಿಯನ್ನು ಸ್ಥಾಪನೆಯ ಮಾಡಿದ್ದುದಾಗಿದ್ದು ಇದರ ಕಾರಣಕರ್ತೆ ಪ್ರಸಿದ್ಧ ಸಮಾಜ ಸುಧಾರಕಿ, ಉತ್ಕೃಷ್ಟ ಸಾಮಾಜಿಕ ಆಡಳಿತಗಾರ್ತಿ ಹಾಗೂ ಸಂಸ್ಥೆಗಳನ್ನು ನಿರ್ಮಿಸುವುದರಲ್ಲಿ ಸಿದ್ಧಹಸ್ತರಾಗಿದ್ದ ದುರ್ಗಾಬಾಯಿ ದೇಶ್‌ಮುಖ್ ಅವರಾಗಿದ್ದರು.

೧೯೫೪ರಲ್ಲಿ ಮೈಸೂರು ರಾಜ್ಯ ಸಮಾಜ ಕಲ್ಯಾಣ ಮಂಡಲಿಯ ಕೇಂದ್ರೀಯ ಸಾಮಾಜಿಕ ಅಭಿವೃದ್ಧಿ ಮಂಡಲಿ ಪೂರಕವಾಗಿ ವಿಸ್ತರಣೆಯಾಗಿ ಕಾರ್ಯನಿರ್ವಹಿಸಲಾರಂಭಿಸಲಾಯಿತು. ಶ್ರೀಮತಿ ಎಂ.ಆರ್ . ಲಕ್ಷ್ಮಮ್ಮನವರು ೧೯೫೪-೫೮ರಿಂದಲೂ ಅವರ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದರು. ಮಂಡಲಿಯು ತನ್ನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯೋಜನೆಗಳ ಮೂಲಕ ಗ್ರಾಮೀಣ ಪ್ರದೇಶಗಳಿಗೂ ಕೂಡ ಅನ್ವಯಿಸುವ ಕಾರ್ಯ ನಿರ್ವಹಿಸಿತು. ಅಭಿವೃದ್ಧಿ ವಿಸ್ತರಣಾ ಯೋಜನೆಗಳು ೧೯೬೧ರ ವೇಳೆಗೆ ನಿಂತುಹೋದವು. ಆದರೆ ಅವು ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ಮಹಿಳೆಯರ ಮನಸ್ಸಿಗೆ ಸಾಕಷ್ಟು ನೆಮ್ಮದಿಯನ್ನುಂಟು ಮಾಡಿದ್ದವು. ೧೯೫೦ರಲ್ಲಿ ಸ್ಟೇಟ್ ಸೋಷಿಯಲ್ ವೆಲ್ ಫೇರ್ ಸಲಹಾ ಮಂಡಳಿಯು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.

೧೯೬೧ರಲ್ಲಿ ಗ್ರಾಮೀಣ ಮಹಿಳೆಯರ ಸಾಮಾಜಿಕ ಆರ್ಥಿಕ ಸ್ಥಾನಮಾನವನ್ನು ಸುಧಾರಿಸುವ ಸಲುವಾಗಿ ಮಹಿಳಾ ಮಂಡಲವನ್ನು ಪ್ರಾರಂಭಿಸಲಾಯಿತು. ೧೯೭೩-೭೪ರ ಹೊತ್ತಿಗೆ ೫೬ ಮಹಿಳಾ ಮಂಡಲಗಳು, ೪ ಸ್ವಯಂ ಸೇವಾ ಸಂಸ್ಥೆಗಳು ೨೨ ಸೇವಾ ಕೇಂದ್ರಗಳಿದ್ದು ಕರ್ನಾಟಕ ಸಮಾಜ ಕಲ್ಯಾಣ ಮಂಡಲಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಮಹಿಳೆಯರ ಆರ್ಥಿಕ ಸ್ಥಾನಮಾನವನ್ನು ಸುಧಾರಿಸಲು ಹಲವಾರು 'ಕೆಲಸ ಮತ್ತು ಕೂಲಿಗಳು' ಕಾರ್ಯಕ್ರಮವನ್ನು ಒಳಗೊಳ್ಳಲಾಗಿತ್ತು. ಇವುಗಳಲ್ಲಿ ಭಾರತೀಯ ದೂರವಾಣಿ ಉದ್ಯಮದ ಸಲಕರಣೆಗಳ ಘಟಕಗಳು ಸೇರಿದಂತೆ, ಕ್ಯಾಂಟೀನ್, ಬೇಕರಿ ಘಟಕ, ಸಿದ್ಧ ಉಡುಪುಗಳ ತಯಾರಿಕೆ(garment Mraking) ಚರ್ಮಗಾರಿಕೆ, ಕಾಗದದ ಲಕೋಟೆಗಳು, ಮುದ್ರಣ, ಮೃದುವಾದ ಆಟಿಕೆಗಳನ್ನು ತಯಾರಿಸುವುದು, ಕಸೂತಿ ಘಟಕ ಇವೆಲ್ಲವೂ ಸೇರಿದ್ದವು. ಮಂಡಲಿಯು ಬೆರಳಚ್ಚು ತರಬೇತಿಯನ್ನೂ ಸಹ ನಿರುದ್ಯೋಗಿ ಮಹಿಳೆಯರು ಹಾಗೂ ಗ್ರಾಮೀಣ ಪ್ರದೇಶದ ಮಹಿಳೆಯರಿಗಾಗಿ ಪ್ರಾರಂಭಿಸಿತು. ಅಷ್ಟೇ ಅಲ್ಲ 'ಸಮಾಜಕಲ್ಯಾಣ' ಎಂಬ ಪತ್ರಿಕೆ, ಆಕಾಶವಾಣಿ ಭಾಷಣ ಗಳು, ಸೆಮಿನಾರುಗಳೇ ಮುಂತಾದುವುಗಳ ಮೂಲಕ ಮಹಿಳೆಯರ ಹಕ್ಕುಗಳು ಮತ್ತು ಸೌಲಭ್ಯಗಳ ಬಗ್ಗೆ ತಿಬಳಿವಳಿಕೆ ನೀಡಲಾಗುತ್ತಿತ್ತು.

೧೯೫೬ರಲ್ಲಿ ಏಕೀಕೃತ ಕರ್ನಾಟಕದ ನೂತನ ರಾಜ್ಯ ರಚನೆಯಾದ ಮೇಲೆ ಹೊಸ ಪ್ರದೇಶಗಳಿಗಾಗಿ ಹೊಸ ಹೊಸ ವಿವಿಧ ಕಲ್ಯಾಣ ಸ್ಕೀಮುಗಳನ್ನು ಹಾಕಿಕೊಳ್ಳಲಾಯಿತು. ಹಲವಾರು ಸ್ವಯಂಸೇವಾ ಏಜೆನ್ಸಿಗಳು ಅಖಿಲ ಭಾರತದ ಮಹಿಳೆಯರ ಸಮಾವೇಶ, ಇಂಡಿಯನ್ ಕೌನ್ಸಿಲ್ ಫಾರ್ ಸೋಷಿಯಲ್ ವರ್ಕ್ ಮುಂತಾದುವುಗಳು ಉತ್ತಮಕಾರ್ಯನಿರ್ವಹಣೆ ಮಾಡುತ್ತಿದ್ದವು. ಸ್ಥಳೀಯ ಸಂಸ್ಥೆಗಳ ಪೈಕಿ ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ (ಎಂ.ಎಲ್.ಎ) ಅತ್ಯುತ್ತಮವಾದ ಔಪಚಾರಿಕ ಹಾಗೂ ಅನೌಪಚಾರಿಕ ರೀತಿಗಳಲ್ಲಿ ಶಿಕ್ಷಣ ಪ್ರಸಾರ ಮಾಡಿ ಪ್ರಸಿದ್ಧವಾಗಿದೆ.

ಈ ಎಲ್ಲ ವಿವಿಧ ಮಹಿಳಾ ಸಂಸ್ಥೆಗಳೂ ಕೂಡ ಒಂದೇ ಬಗೆಯ ಮಹಿಳಾ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದ್ದವು. ಅದು ಇಂದಿಗೂ ಹಾಗೆಯೇ ಮುಂದುವರೆದಿದೆಯೆನ್ನಬಹುದು. ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿ ಕಂಡುಬಂದಿದೆಯಾದರೂ ಅಂಕಿ ಅಂಶಗಳು ಇನ್ನೂ ಕೊರತೆಯನ್ನೇ ಸೂಚಿಸುತ್ತವೆ. ಜೊತೆಗೆ ಪ್ರಮಾಣತ್ಮಕವಾಗಿ ಮುಂದಿದ್ದರೂ ಗುಣಾತ್ಮಕವಾಗಿ ಹಿಂದುಳಿದಿವೆ. ಈ ಸಂಸ್ಥೆಗಳು ಗ್ರಾಮೀಣ ಪ್ರದೇಶದ ಬಹುಸಂಖ್ಯಾತ ಕಷ್ಟಜೀವಿಗಳಾದ ಮಹಿಳೆಯರಿಗೆ ಅಂಥದೇನೂ ಮಹತ್ವಪೂರ್ಣ ಪ್ರಭಾವಬೀರಿಲ್ಲ. ಬಹಳಷ್ಟು ಸಂಸ್ಥೆಗಳನ್ನು ನಗರವಾಸಿಗಳಾದ ಮಹಿಳೆಯರೇ ನಿರ್ವಹಿಸುತ್ತಿದ್ದು ಸಹಜವಾಗಿಯೇ ಅವರ ಕಾರ್ಯಚಟುವಟಿಕೆಗಳು ನಗರಕೇಂದ್ರೀಕೃತವಾಗಿರುತ್ತವೆ.

ಮಹಿಳಾ ಮಂಡಲಗಳಿರಲಿ ಮಾತೃಸಂಘಗಳೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿ ಅಪೇಕ್ಷಿತ ಬದಲಾವಣೆಯನ್ನು ತರಲು ಸಾಧ್ಯವಾಗಿಲ್ಲ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹಲವಾರು ಅಧಿನಿಯಮಗಳನ್ನು ಮಹಿಳೆಯರ ಮಟ್ಟಿಗೆ ಕ್ರಾಂತಿಕಾರಿ ಎನ್ನುವಂತೆ ಜಾರಿಯಲ್ಲಿ ತರಲಾಗಿದೆ. ಆದರೆ ಬಹುಪಾಲು ಮಹಿಳೆಯರಿಗೆ ಎಲ್ಲ ಸಾಮಾಜಿಕ ಶಾಸನಗಳ ಬಗ್ಗೆ ಅರಿವೂ ಕೂಡ ಮೂಡಿಲ್ಲ.

೧೯೭೫ರಲ್ಲಿ ಅಂತಾರಾಷ್ಟ್ರೀಯ ಮಹಿಳಾ ವರ್ಷವನ್ನು ಆಚರಿಸಿದಾಗ ಈ ಪ್ರಮುಖ ಲೋಪವನ್ನು ಎತ್ತಿಹಿಡಿಯಲಾಯಿತು. ಹಿಂದೂ ಸಂಪ್ರದಾಯ ಮತ್ತು ಪದ್ಧತಿಗಳಲ್ಲಿ ಪುರುಷರು ಇಂದಿಗೂ ಮಹಿಳೆಯರಿಗೆ ಅತ್ಯುನ್ನತ ಸ್ಥಾನ ನೀಡಿರುವುದನ್ನೇ ಹಾಡಿಹೊಗಳುತ್ತಾರೆ. ಆದರೆ ಮಾತು(ತತ್ವ) ಹಾಗೂ ಆಚಾರದ ನಡುವಣ ಕಂದಕ ಅತಿ ದೊಡ್ಡದಾಗಿದೆ. ಹೀಗಾಗಿ ಕರ್ನಾಟಕದ ಮಹಿಳಾ ಸಂಘ ಸಂಸ್ಥೆಗಳು ಇನ್ನೂ ಸಾಕಷ್ಟು ದೂರಸಾಗಬೇಕಾಗಿದ್ದು, ಅವರು ಇನ್ನೂ ಪ್ರಯತ್ನಿಸುತ್ತಲೇ ಇದ್ದಾರೆ. ಹಿಂದಿನ ರಾಜರಾಳಿದ ಮೈಸೂರಿಗೆ ರಾಜ್ಯದ ಜನತಾ ಪ್ರತಿನಿಧ್ಯ ಅಸೆಂಬ್ಲಿಯಲ್ಲಿದ್ದ ಮಹಿಳೆಯರ ಪಾತ್ರವನ್ನು ಹೋಲಿಸಿದಾಗ ಇಂದಿನ ಶಾಸಕಿಯರು, ಸಂಸತ್ ಸದಸ್ಯೆಯರು ಮಹಿಳೆಯರ ಸ್ಥಾನಮಾನಗಳನ್ನು ಇನ್ನಷ್ಟು ಉತ್ತಮಪಡಿಸು ವಲ್ಲಿ ಅಂಥ ಮಹತ್ತ್ವದ ಜವಾಬ್ದಾರಿಯನ್ನು ವ್ಯಕ್ತಪಡಿಸುತ್ತಿಲ್ಲ. ಅಥವಾ ಅದು ಸಾಧ್ಯವಾಗುತ್ತಿಲ್ಲ ಎನ್ನಬಹುದು. ೧೯೭೫ ರಿಂದ ಪ್ರತ್ಯೇಕವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದ್ದು ಇದರಲ್ಲಿ ಸಾಮಾನ್ಯವಾಗಿ ಮಹಿಳೆಯರ ಅವಶ್ಯಕತೆಗಳ ಬಗ್ಗೆ ಪರ್ಯಾಲೋಚನೆ, ಪರಿಹಾರಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಆದರೆ ಮಹಿಳೆಯರ ಹಕ್ಕು ಮತ್ತು ಹಿತಾಸಕ್ತಿಗಳನ್ನು ರಕ್ಷಿಸಲು ವಿಶಾಲ ತಳಹದಿಯ ಮಹಿಳಾ ಆಂದೋಲನ ನಡೆದು ಯಶಸ್ವಿಯಾದ ಹೊರತು, ಸಾಮಾಜಿಕ ಶಾಸನಗಳೆಲ್ಲವೂ ಕೇವಲ ಕಾಗದದ ಮೇಲೆ ದಾಖಲೆಗಳಾಗಿ ಉಳಿದುಬಿಡುತ್ತವೆಯೆನ್ನಬಹುದು. ಆದ್ದರಿಂದ ಸಮಾಜ ಸುಧಾರಕರು, ರಾಜಕಾರಣಿಗಳು, ಇನ್ನಾವ ರಂಗದ, ಶ್ರೇಷ್ಠ ಮಹನೀಯರೇ ಇದ್ದರೂ ಸಹ ಮಹಿಳೆಯರ ಪ್ರಗತಿ ಮಹಿಳೆಯರಿಂದಲೇ ಆಗಬೇಕು. ಆಗ ಅದು ನಿಜವಾದ ಪ್ರಗತಿಯಾಗುತ್ತದೆ. ಈ ನಿಟ್ಟಿನಲ್ಲಿ ಮಹಿಳಾ ಸಂಘಸಂಸ್ಥೆಗಳ ಪಾತ್ರ ಅತ್ಯಂತ ಮಹತ್ತ್ವಪೂರ್ಣವಾದುದೂ ಅನಿವಾರ್ಯವೂ ಆಗುತ್ತದೆ.

ಅಡಿಟಿಪ್ಪಣಿಗಳು

೧. ಕಂಟೇಪಿಯಸ್ ಟ್ರೆಡಿಷನ್ಸ್, ದಿ ಡಿಬೇಟ್ ಆನ್‌ಸತಿ ಇನ್ ಕಲೋನಿಯಲ್ ಇಂಡಿಯಾ ರೀ ಕ್ಯಾಸ್ಟಿಂಗ್ ವಿಮನ್ ಎಸ್ಸೇಸ್ ಇನ್ ಕಲೋನಿಯಲ್ ಹಿಸ್ಟರಿ, ಕುಂಡಾಂಸಂಗಾರಿ ಅಂಡ್ ಸುದೇಶ್ ವೈದ್ ದೆಹಲಿ, ಕಾಲ್‌ಫಾರ್ ವಿಮೆನ್, ೧೯೮೯, ಪು.೧೧೭-೧೮

೨. ಎಸ್.ಕೆ. ಬೋಸ್, ಈಶ್ವರಚಂದ್ರ ವಿದ್ಯಾಸಾಗರ್, ನ್ಯಾಷನಲ್ ಬುಕ್‌ಟ್ರಸ್ಟ್, ನವದೆಹಲಿ, ೧೯೬೯, ಪು.೩೫

೩. ಎಸ್.ಕೆ. ಬೋಸ್, ಪು.೩೫

೪. ಡಾ.ಎಚ್.ಎಸ್.ಶ್ರೀಮತಿ(ಅನು), ವಿಮೆನ್ ಇನ್ ಮಾಡರ್ನ್ ಇಂಡಿಯಾ, ಮೂಲ : ಜೆರಾಲ್ಡಿನ್ ಫೋರ್ಬ್ಸ್

೫. ಅದೇ,

೬. ಈಶ್ವರಚಂದ್ರಸೇನ್, ಈಶ್ವರಚಂದ್ರ, ಪು.೧೬೫

೭. ಸೀರಾ ದೇಸಾಯಿ, ವಿಮೆನ್ ಇನ್ ಮಾಡರ್ನ್ ಇಂಡಿಯಾ, ಪ್ರತಿಮಾ ಆಸ್ಥಾನ, ವಿಕಾಸ, ದೆಹಲಿ, ೧೯೭೪

೮. ಲೆನಾರ್ಡ್ ಮತ್ತು ಲೆನಾರ್ಡ್, ಸೋಷಿಯಲ್ ರಿಫಾರ್ಮ್ಸ್, ಪು.೩೬

೯. ಹಿನ್ಸುತ್ ನ್ಯಾಷನಲಿಸಂ, ಪು.೧೮೧

೧೦. ಗುಲಾಮ್ ಮರ್ಶಿದ್, ರಿಲಕ್ಟಂಟ್ ಡೆಬ್ಯುಟೆಂಟ್, ರಾಜ್‌ಶಾಹಿ, ಬಾಂಗ್ಲಾದೇಶ್, ರಾಜ್‌ಶಾಹಿ ವಿಶ್ವವಿದ್ಯಾಲಯ, ಮುನ್ನುಡಿ

೧೧. ಹತ್ತೊಂಬತ್ತನೇ ಶತಮಾನದ ಸುಧಾರಣೆ, ಆಧುನಿಕ ಭಾರತದಲ್ಲಿ ಮಹಿಳೆ, ಜೆರಾಲ್ಡಿನ್ ಫೋರ್ಬ್ಸ್

೧೨. ಮಾಳವಿಕಾ ಕಾರ್ಲೇಕರ್, ವಾಯ್ಸಸ್ ಫ್ರಂವಿದಿನ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ೧೯೯೧, ಪು.೧೧

೧೩. ಬಾರ್ತ್‌ವಿಕ್ ದಿ ಚೇಂಜಿಂಗ್ ರೋಲ್ ಆಫ್ ವುಮನ್, ಜೆರಾಲ್ಡಿನ್ ಫೋರ್ಬ್ಸ್ ೪೩, ಹತ್ತೊಂಬತ್ತನೇ ಶತಮಾನದ ಸುಧಾರಕ, ಪು.೧೩೦-೩, ಸರಲಾದೇವಿ ಚೌಧುರಾಣಿ, ಡಿಪಿನ್‌ಲಿ ಸಂಚಿಕೆ ೧, ಸಂ.ಎಸ್.ಪಿ.ಸೇನ್, ಇನ್ಸ್‌ಟ್ಯೂಟ್ ಆಫ್ ಹಿಸ್ಟಾರಿಕಲ್ ಸ್ಟಡೀಸ್, ಕಲ್ಕತ್ತ್, ೧೯೭೨, ಪು.೨೮೯-೯೧

೧೪. ಎಂ.ಕೆ.ಹಲಧರ್, ರೆನೆಸಾನ್ಸ್ ಅಂಡ್ ರಿಯಾಕ್ಸನ್ಸ್ ಇನ್ ನೈಟೀಂತ್ ಸೆಂಚುರಿ, ಬೆಂಗಾಲ್, ಕೊಲಂಬಿಯಾ, ಮೊ ಸೌತ್ ಏಷಿಯಾಬುಕ್, ೧೯೭೭, ಪು.೧೮೮

೧೫. ರಾಷ್ಟ್ರೀಯತಾವಾದಿಗಳು, ಮಹಿಳಾ ಪ್ರಶ್ನೆಗಳನ್ನು ಆಧ್ಯಾತ್ಮಕತೆಯೆಡೆಗೆ ಚಿತ್ತರಿಸಿ ಕೈ ತೊಳೆದುಕೊಂಡರು ಎಂದು ಪಾರ್ಥಾ ಚಟರ್ಜಿಯವರು ವಾದಿಸುತ್ತಾರೆ. ರೀ ಕ್ಯಾಸ್ಟಿಂಗ್ ವಿಮೆನ್, ಪು.೨೩೩-೨೫೩

೧೬. ಸೈಯದ್ ನೂರುಲ್ ಮತ್ತು ಜೆ.ಪಿ.ನಾಯಕ್, ಹಿಸ್ಟರಿ ಆಫ್ ಎಜುಕೇಷನ್ ಇನ್ ಇಂಡಿಯಾ ಡ್ಯೂರಿಂಗ್ ದಿ ಬ್ರಿಟಿಷ್ ಪೀರಿಯೆಡ್, ದಿ ಚೇಂಜಿಂಗ್ ರೋಲ್ ಆಫ್ ವುಮನ್, ಮುಂಬಯಿ, ಮ್ಯಾಕ್‌ಮಿಲ್ಲನ್, ೧೯೪೩, ಪು.೨೧

೧೭. ಜೆರಾಲ್ಡಿನ್ ಫೋರ್ಬ್ಸ್, ಇನ್ ಸರ್ಚ್ ಆಫ್ ದಿ ಪ್ಯೂರ್ ಹೀದನ್, ಮಿಷನರಿ ವಿಮೆನ್ ಇನ್ ನೈನ್‌ಟೀಂತ್ ಸೆಂಚುರಿ ಇಂಡಿಯಾ, ಇಪಿಡಬ್ಲ್ಯೂ ೨೧, ಸಂ.೧೭, ಏಪ್ರಿಲ್ ೨೬, ೧೯೮೬

೧೮. ಸುಮಂತನ್ ಬ್ಯಾನರ್ಜಿ, ಮಾರ್ಜಿನಲೈಸೇಷನ್ ಆಫ್ ವಿಮೆನ್ಸ್ ಪಾಪ್ಯುಲರ್ ಕಲ್ಚರ್ ಇನ್ ನೈನ್‌ಟೀಂತ್ ಸೆಂಚುರಿ, ಬೆಂಗಾಲ್, ರೀ ಕ್ಯಾಸ್ಟಿಂಗ್ ವಿಮೆನ್ ಎಸ್ಸಸೇ ಇನ್ ಕಲೋನಿಯಲ್ ಹಿಸ್ಟರಿ, ಪು.೧೩೦-೧೩೧

೧೯. ದಿಬ್ರಹ್ಮೊ ಐಡಿಯಾಸ್ ಆಫ್ ಸೋಷಿಯಲ್ ರಿಫಾರ್ಮ್ಸ್ ಅಂಡ್ ಪ್ರಾಬ್ಲೆಮ್ಸ್ ಅಫ್ ಫೀಮೇಲ್ ಇಮ್ಯಾನ್ಸಿಪೇಷನ್ ಇನ್ ಬೆಂಗಾಲ್, ಬೆಂಗಾಲ್ ಇನ್‌ದಿ ನೈನ್‌ಟೀತ್ ಅಂಡ್ ಟ್ವೆಂಟಿಯತ್ ಸೆಂಚುರೀಸ್, ಪು.೪೭೫೦.

೨೦. ಥ್ಯಾಕರ್ಸೆ, ಎಜುಕೇಷನ್ ಆಫ್ ವಿಮೆನ್, ಪು.೪೦-೪೪

೨೧. ಮನ್‌ಮೋಹನ್ ಕೌಲ್, ಪಂಡಿತರಮಾಬಾಯಿ, ದಿಹೈಕ್ಯಾಸ್ಟ್ ಹಿಂದೂ ವುಮೆನ್, ೧೮೮೭, ಫ್ಲೆಮಿಂಗ್ ಎಚ್‌ರೆವೆಲ್, ಪು.೮೭.

೨೨. ರಾಧಾಕುಮಾರ್, ದಿ ಹಿಸ್ಟರಿ ಆಫ್ ಡೂಯಿಂಗ್, ಪು.೨೬

೨೩. ಡಾ.ಎಚ್.ಎಸ್.ಶ್ರೀಮತಿ(ಅನು), ಆಧುನಿಕ ಭಾರತದಲ್ಲಿ ಮಹಿಳೆ, ಮೂಲ: ಜೆರಾಲ್ಡಿನ್ ಫೋರ್ಬ್ಸ್, ೧೯೮೫, ಪು.೭

೨೪. ಡಿ.ಡಿ.ಕರ್ವೆ(ಸಂ), ದಿ ನ್ಯೂ ಬ್ರಾಹ್ಮಿನ್ಸ್, ಫ್ರೆವ್ ಮಹಾರಾಷ್ಟ್ರೀಯನ್ ಫ್ಯಾಮಲೀಸ್ ಅಸಿಸ್ಟೆನ್ಸ್, ೧೯೬೩, ಪು.೭೯

೨೫. ಧೋಂಡೋ ಕೇಶವಕರ್ವೆ, ಲುಕಿಂಗ್ ಬ್ಯಾಕ್, ಪೂನಾ ಹಿಂಜೆ ಸ್ತ್ರೀ ಶಿಕ್ಷಣ ಸಂಸ್ಥೆ, ೧೯೩೬, ಪು.೭೫

೨೬. ಡಾ. ವಿಜಯಾದಬ್ಬೆ, ವಿವೇಚನೆಯೂ, ಆಲೋಚನೆಯೂ, ನಾರಿ: ದಾರಿ-ದಿಗಂತ, ಡಿಸೆಂಬರ್, ೧೯೯೭, ಪು.೪೦-೪೧

೨೭. ಮಹಾಬಲೇಶ್ವರರಾವ್, ಗಾಂಧೀಜಿ ಮತ್ತು ಮಹಿಳೆಯರು, ಮಧುಕಿಶ್ವರ್, ಪು.೨೨-೨೩

೨೮. ಮಧುಕಿಶ್ವರ್, ಗಾಂಧೀಜಿ ಮತ್ತು ಮಹಿಳೆಯರು

೨೯. ರಿಪೋರ್ಟ್ಸ್ ಆನ್ ದಿ ಅಡ್ಮನಿಸ್ಟ್ರೇಷನ್ ಆಫ್ ಮೈಸೂರ್ ಫಾರ್ ದಿ ಇಯರ್ಸ್, ೧೮೮೧-೧೯೨೫

೩೦. ಸಿ.ಹಯವದನರಾವ್, ಮೈಸೂರು ಗೆಜೆಟಿಯರ್, ಆಧುನಿಕ ಕಾಲ ಭಾಗ ೪, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ೧೯೩೬

ಅಧ್ಯಾಯ ೩

ಸಾಮೂಹಿಕ ಸ್ವಾವಲಂಬನೆ ಕ್ಷೇತ್ರವಾಗಿ ಸಹಕಾರ ಕ್ಷೇತ್ರ

ಗಾಂಧೀಜಿ ಮತ್ತು ಸಹಕಾರ ಆಂದೋಲನ

ಬ್ರಿಟಿಷರ ಭಾರತದಲ್ಲಿ ಸಹಕಾರ ತತ್ತ್ವದ ಅನುಷ್ಠಾನ

ಸಹಕಾರ-ವಿಶ್ವಾಸ ಹಾಗೂ ಸರ್ವಜನರ ಕಲ್ಯಾಣ-ಭಾರತದ ಸಂವಿಧಾನದ

ನಿರ್ದೇಶಕ ತತ್ತ್ವಗಳು ಬೆಳವಣಿಗೆ

ಸಹಕಾರ ಸಂಸ್ಥೆಗಳ ಆವಿರ್ಭಾವ - ಸಹಕಾರ ಸಂಘಗಳ ವ್ಯವಸ್ಥೆ - ಕರ್ನಾಟಕದಲ್ಲಿ ನಗರ ಸಹಕಾರ ಬ್ಯಾಂಕುಗಳ ಉದಯ - ಸಹಕಾರ ಪದ್ಧತಿಯ ಮಹತ್ತ್ವ

ಸಾಮೂಹಿಕ ಸ್ವಾವಲಂಬನೆ ಕ್ಷೇತ್ರವಾಗಿ ಸಹಕಾರ ಕ್ಷೇತ್ರ

ಸಹಕಾರವು ಪರಸ್ಪರ ನೆರವು ನೀಡುವ ತತ್ತ್ವ ಹಾಗೂ ಉದ್ದೇಶವನ್ನೂ ಸಾಂಸ್ಥಿಕವಾಗಿ ನೆರವೇರಿಸುವ ವ್ಯವಸ್ಥೆಯಾಗಿದೆ. ಶ್ರೀಸಾಮಾನ್ಯ ಅಥವಾ ಬಡವ್ಯಕ್ತಿಯೊಬ್ಬನು ಭಾರಿ ಪ್ರಮಾಣದ ಆರ್ಥಿಕ ನಿರ್ವಹಣೆಗೆ ಸಂಸ್ಥೆಯಿಂದ ಸೌಲಭ್ಯವನ್ನು ಪಡೆಯುವ ಸ್ವಾತಂತ್ರ್ಯ ಹಾಗೂ ಅವಕಾಶವನ್ನು ಸಹಕಾರದ ಮೂಲಕ ಪಡೆಯಬಹುದು. ಆದ್ದರಿಂದ ರಾಷ್ಟ್ರದ ಪ್ರಸ್ತುತ ಪರಿಸ್ಥಿತಿಗಳಲ್ಲಿ ಆರ್ಥಿಕ ಸುಧಾರಣೆಯಾಗಬೇಕಾದರೆ ಸಾಮಾಜಿಕ, ಆರ್ಥಿಕ ಬದಲಾವಣೆಗಳೆರಡೂ ಅತ್ಯವಶ್ಯವಾಗಿದ್ದು, ಇದಕ್ಕೆ ಸಹಕಾರ ವ್ಯವಸ್ಥೆ ಅತ್ಯಂತ ಸೂಕ್ತ ಸಾಧನವಾಗಬಲ್ಲುದು. ಸಹಕಾರ ತತ್ತ್ವದ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲ ಪ್ರಸಿದ್ಧ ಸಹಕಾರಿ ಮಾರ್ಗರೆಟ್ ಡಿಗ್ ಬಿ "ಕೇವಲ ಸಹಕಾರ ಸಂಸ್ಥೆಗಳ ಮೂಲಕ ಮಾತ್ರವೇ ಶ್ರೀ ಸಾಮಾನ್ಯರು ಸಾಮಾಜಿಕ-ಆರ್ಥಿಕ ಬದಲಾವಣೆಯ ದಿಕ್ಕನ್ನು ನಿರ್ಣಾಯಕ ರೀತಿಯಲ್ಲಿ ಕಂಡುಹಿಡಿಯಲು ಸಾಧ್ಯ. ವಾಸ್ತವವಾಗಿ, ಸಹಕಾರವನ್ನು ವಿಶೇಷವಾಗಿ, ಗ್ರಾಮೀಣ ಸಮಾಜದ ಬಗ್ಗೆ ಹೇಳುವಾಗ ಭಾರತದಲ್ಲಿ ಭಾರತೀಯ ಸಾಮಾಜಿಕ ಪದ್ಧತಿಯ ಅವಿಭಾಜ್ಯ ಅಂಗವೆಂದೇ ಹೇಳಲಾಗಿದೆ" ಎಂದಿದ್ದಾರೆ. ಸಹಕಾರವು ವಿಶಿಷ್ಟವಾದ ಆರ್ಥಿಕ ಸಂಸ್ಥೆಯಾಗಿದ್ದು, ಇದರಲ್ಲಿ ಜನರು ತಂತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ನೆರವೇರಿಸಿಕೊಳ್ಳಲು ಸಮಾನತೆಯ ಆಧಾರದ ಮೇಲೆ ಸ್ವಯಂ ಸಂಘಟಿತರಾಗುತ್ತಾರೆ. ಏಕಾಂಗಿಗಳಾದವರು ಹಾಗೂ ದುರ್ಬಲ ವ್ಯಕ್ತಿಗಳೂ ಸಹ ಇತರರೊಂದಿಗೆ ಸೇರುವ ಮೂಲಕ ಶ್ರೀಮಂತರು ಹಾಗೂ ಪ್ರಬಲ ವ್ಯಕ್ತಿಗಳಿಗೆ ಲಭ್ಯವಿರುವ ಪ್ರಯೋಜನಗಳನ್ನು ಪಡೆಯಬಹುದು. ಮಾತ್ರವಲ್ಲ, ಇನ್ನಷ್ಟು ಉತ್ತಮ ಹಾಗೂ ಹೆಚ್ಚು ಸಮೃದ್ಧಿಯ ಜೀವನ ಮಟ್ಟವನ್ನೂ ಹೊಂದಲು ಸಾಧ್ಯವಿದೆ. ಹೀಗಾಗಿ, ಸಹಕಾರ ಆಂದೋಲನದಷ್ಟು ಸಮರ್ಥ ಹಾಗೂ ಸಂಪೂರ್ಣ ಸಾಮಾಜಿಕ ಉದ್ದೇಶವನ್ನು ಹೊಂದಿರುವ ಇನ್ನೊಂದು ಆಂದೋಲನವಿಲ್ಲ ಎಂಬುದಾಗಿ ಐದನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ(೧೯೭೪-೭೯, ಪು.೭೮) ಹೇಳಲಾಗಿದೆ.

ಗಾಂಧೀಜಿ ಮತ್ತು ಸಹಕಾರ ಆಂದೋಲನ

ಗಾಂಧೀಜಿಯವರ ಸಹಕಾರ ಆಂದೋಲನ ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಪ್ರಮುಖ ಮಾರ್ಗವಾಗಿತ್ತು. ಅದಕ್ಕಿಂತಲೂ ಹೆಚ್ಚಾಗಿ ಹೋರಾಟಕ್ಕೆ ಮುಖಂಡತ್ವವನ್ನು ಒದಗಿಸಿತು. ಸಮಾಜದ

ಸಾಮಾನ್ಯ ವ್ಯಕ್ತಿಯಾಗಿರಬಹುದಾಗಿದ್ದ ಗಾಂಧೀಜಿಯವರು ವ್ಯಕ್ತಿಯು ವೈಫಲ್ಯಗಳ ವಿರುದ್ಧ ಹೋರಾಡಲು, ವ್ಯಕ್ತಿ ಗೌರವವನ್ನು ಹಕ್ಕುಗಳನ್ನು ಸುಸ್ಥಾಪಿಸಲು ಹಾಗೂ ಜೀವನದಾದ್ಯಂತ ಮಾನವತೆಗಾಗಿ ಸೇವೆ ಸಲ್ಲಿಸಲು ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಅವರ ವ್ಯಕ್ತಿತ್ವ ಸತ್ಯ, ಅಹಿಂಸೆ, ವಿಶ್ವಬಾಂಧವ್ಯ, ಸ್ವಾತಂತ್ರ್ಯ, ಸಮಾನತೆ ಹಾಗೂ ಸಹಕಾರದ ಸಂದೇಶವಾಯಿತೆನ್ನಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಗಾಂಧೀಜಿಯವರು "ಆರ್ಥಿಕ ಸ್ವಾತಂತ್ರ್ಯದ ಮೌಲ್ಯವನ್ನು ಎತ್ತಿಹಿಡಿದು ಆ ಮೂಲಕ ರಾಷ್ಟ್ರೀಯತೆಯನ್ನು ಜನರಿಗೆ ಕಲಿಸಿಕೊಟ್ಟರು."[೨] ಅವರು ಜನರಿಗೆ 'ಜೀವನದ ಮೂಲಭೂತ ಅವಶ್ಯಕತೆಗಳನ್ನು ಒದಗಿಸಬೇಕೆಂದು ಬಯಸಿದ್ದರು. ಸಮಾಜದ ಅತ್ಯಂತ ಕೆಳವರ್ಗದ ವ್ಯಕ್ತಿ ಅತ್ಯುನ್ನತ ಹುದ್ದೆಯನ್ನು ಹೊಂದಿರಬೇಕೆಂದು ತಿಳಿಸಿದ್ದರು.

ಗಾಂಧೀಜಿಯವರು ೧೮೯೩ರ ಮೇಲೆ ತಿಂಗಳಲ್ಲಿ ದಕ್ಷಿಣ ಆಫ್ರಿಕೆಯ ಪ್ರಿಟೋರಿಯಾದ ಖಾಸಗಿ ಕಂಪೆನಿಯಲ್ಲಿ ಉದ್ಯೋಗಿಯಾಗಲು ಹೋಗಿದ್ದರು. ಬಿಳಿಯರು ಅಲ್ಲಿದ್ದ ಭಾರತೀಯರನ್ನು ಕೂಲಿಗಳು, ವರ್ಣೀಯರು, ಬ್ರಿಟಿಷ್ ಇಂಡಿಯನ್ಸ್, ಕಾಲಿ ವರ್ತಕರು, ಸಾಮಿಗಳು, ಏಷಿಯನ್ನರು ಮುಂತಾದ ಪದಗಳಿಂದ ಹೀಯಾಳಿಸಿ ಅವಮಾನಿಸುತ್ತಿದ್ದುದನ್ನು ಕಂಡು ನೊಂದು ಇದಕ್ಕೆ ಪರಿಹಾರ ಹುಡುಕ ತೊಡಗಿದರು. ಸಾಕಷ್ಟು ಅಧ್ಯಯನದ ನಂತರ ಹಿಂದೂ, ಮುಸಲ್ಮಾನ, ಪಾರ್ಸಿ, ಕ್ರಿಶ್ಚಿಯನ್ , ಗುಜರಾತಿ, ಮದ್ರಾಸಿ, ಪಂಜಾಬಿ, ಸಿಂಧೀ, ಕಚ್ಚಿ, ಸುತಿರ ಮುಂತಾದ ಭೇದಗಳನ್ನೆಲ್ಲ ಮರೆತು ಬಿಡಬೇಕು ಭಾರತೀಯರೆಲ್ಲ ಒಂದೇ ಎಂಬುದನ್ನು ಮನಗಂಡರು. ಅವರ ಜೀವನದ ಪ್ರಪ್ರಥಮ ಸಾರ್ವಜನಿಕ ಭಾಷಣದಲ್ಲಿ ಅಲ್ಲಿನ ಭಾರತೀಯ ಸಿಪಾಯಿಗಳು ಎದುರಿಸುತ್ತಿರುವ ಹಲವಾರು ಸಂಕಷ್ಟಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯಲು ಒಂದು ಸಂಘವನ್ನು ರಚಿಸಲು ಕರೆನೀಡಿದರು. ಅದು ಜನ ಸಾಮಾನ್ಯರ ಸಾಮಾನ್ಯ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಜಾತಿ, ಮತ ಹಾಗೂ ಪ್ರಾದೇಶಿಕ ಭಾವನೆಗಳನ್ನು ತೊಡೆದುಹಾಕಲು, ತನ್ನ ತೊಂದರೆಗಳಿಗೆ ಸಂವಿಧಾನಾತ್ಮಕ ಕ್ರಮಗಳಿಂದ ಪರಿಹಾರ ಪಡೆಯಲು ಮತ್ತು ಸಮುದಾಯದ ಏಳಿಗೆಗಾಗಿ ತನ್ನನ್ನು ತಾನೇ ಕಾರ್ಯಕರ್ತನಾಗಿ ಸಮರ್ಪಿಸಿಕೊಳ್ಳಲು ಇಟ್ಟ ಮೊಟ್ಟಮೊದಲ ಹೆಜ್ಜೆಯಾಗಿತ್ತು. ಹೀಗೆ ಆರ್ಥಿಕ ಉದ್ದೇಶವಿಲ್ಲದೆ ಜನರನ್ನು ಒಂದುಗೂಡಿಸಿ ಕೆಲಸ ಮಾಡಿಸುವ ಈ ವಿಶಿಷ್ಟ ಪ್ರಯತ್ನವು ಮುಂದೆ ಕ್ರಮೇಣ ಆರ್ಥಿಕ ಅಭಿವೃದ್ಧಿ ಅವಕಾಶಗಳಿಗೆ ಹಾಗೂ ಸಮೂಹ ಬಾಳುವೆಗೆ ಮೂಲವಾಯಿತು. ಸ್ವಂತ ಸುಖಕ್ಕಿಂತ ಸೇವೆಯೇ ಮುಖ್ಯವೆಂಬುದು ಅವರ ಸಿದ್ಧಾಂತವಾಗಿತ್ತು. ಅವರು "ಸಾರ್ವಜನಿಕ ಕಾರ್ಯಕ್ಕೆ ಶುಲ್ಕ ತೆಗೆದುಕೊಳ್ಳಬಾರದು. ಆದರೆ ಅದಕ್ಕೆ ಇಡೀ ಸಮುದಾಯವೇ ಸಹಕಾರ ನೀಡಬೇಕು" ಎನ್ನುತ್ತಿದ್ದರು. ಹೀಗಾಗಿ, ಎಲ್ಲರೂ ಒಟ್ಟಾಗಿ ಜೊತೆಗೂಡಿ ಬರುವ ಪಾಲುದಾರರೊಂದಿಗೆ ಕೈಜೋಡಿಸಿ ತಮ್ಮ ಮುಖಂಡನಲ್ಲಿ ನಂಬಿಕೆ ಇಟ್ಟಿರುವ ಜನರನ್ನು ಮುಂದೆ

ಕರೆದೊಯ್ದು ಮಾರ್ಗದರ್ಶನ ನೀಡಿದರು. ಸಹಕಾರದ ಯಶಸ್ಸಿಗೆ ಇವೇ ಮೂಲ ಅಗತ್ಯತೆಗಳು ಅಥವಾ ಗುಣಗಳಾಗಿವೆ. ಇದೇ ರೀತಿ ಭಾರತದಲ್ಲಿ ಹಲವಾರು ಪ್ರಯೋಗ ಹಾಗೂ ಪ್ರಯತ್ನಗಳನ್ನು ಮಾಡಿದ ಗಾಂಧೀಜಿ ೧೯೦೦ರಲ್ಲಿ ಪ್ಲೇಗ್ ರೋಗ ನಿವಾರಣೆಯಲ್ಲಿ 'ಇಂಡಿಯನ್ ಕೊ-ಆಪರೇಷನ್' ಸಂಸ್ಥೆಯಲ್ಲಿ ಕೆಲಸ ಮಾಡುತ್ತ ಸಹಕಾರದಿಂದಲೇ ಕೆಲಸ ಹಗುರಾದುದನ್ನು ತಿಳಿಸಿದರು. ಹೀಗೆ ಸಹಕಾರ ಅವರ ಸಾರ್ವಜನಿಕ ಕರ್ತವ್ಯಗಳ ಕಾರ್ಯವಿಧಾನವೇ ಆಗಿಬಿಟ್ಟಿತ್ತು:

೧೯೦೪ರಲ್ಲಿ ಬ್ರಿಟಿಷ್ ಸರ್ಕಾರವು ಭಾರತದಲ್ಲಿ ಸಹಕಾರ ಸಾಲಸಂಘ ಅಧಿನಿಯಮ, ೧೯೦೪ನ್ನು ಅಂತಿಮಗೊಳಿಸುತ್ತಿದ್ದಾಗ ಜೊಹಾನ್ಸ್ ಬರ್ಗ್‌ನಲ್ಲಿದ್ದ ಗಾಂಧೀಜಿ ರಸ್ಕಿನ್ನನ 'ಅನ್ ಟುದಿಸ್ ಲಾಸ್ಟ್' ಕೃತಿಯನ್ನು ಓದುತ್ತಿದ್ದರು.[೩] ಅವುಗಳಲ್ಲಿದ್ದ ಕೆಲವು ಬೋಧನೆಗಳು ಅವರ ಮನಸೆಳೆದವು, ಅವು ಇಂತಿವೆ

೧. ವ್ಯಕ್ತಿಯ ವೈಯಕ್ತಿಕ ಮೇಲ್ಮೆಯು ಸರ್ವರ ಮೇಲ್ಮೆಯಲ್ಲಿದೆ.

೨. ಎಲ್ಲರೂ ಕೂಡ ತಮ್ಮ ತಮ್ಮ ವೃತ್ತಿಗಳಿಂದಲೇ ತಮ್ಮ ಜೀವನಾಧಾರವನ್ನು ಗಳಿಸುವ ಸಮಾನ ಹಕ್ಕನ್ನು ಹೊಂದಿರುವುದರಿಂದ ಒಬ್ಬ ನ್ಯಾಯವಾದಿಯ ಉದ್ಯೋಗಕ್ಕೆ ಇರುವ ಮೌಲ್ಯವೇ ಒಬ್ಬ ಕ್ಷೌರಿಕನ ಉದ್ಯೋಗದ ಮೌಲ್ಯವೂ ಆಗಿರುತ್ತದೆ. ಮತ್ತು

೩. ಒಬ್ಬ ಕಾರ್ಮಿಕನ ಎಂದರೆ ಕೃಷಿ ಕಾರ್ಮಿಕನ ಹಾಗೂ ಕುಶಲಕರ್ಮಿಯ ಜೀವನವೂ ಕೂಡ ಅಮೂಲ್ಯವಾದುದೇ ಆಗಿರುತ್ತದೆ ಎಂದರೆ "ಎಲ್ಲರಿಗಾಗಿ ಪ್ರತಿಯೊಬ್ಬನು ಹಾಗೂ ಪ್ರತಿಯೊಬ್ಬನಿಗಾಗಿ ಎಲ್ಲರೂ" ಎಂಬ ತತ್ವ, ಕಾಯಕದ ಮಹತ್ವ, ಸಮಾನ ಹಕ್ಕುಗಳು ಹಾಗೂ ಜೀವನದ ಉತ್ಪಾದನಾಶೀಲ ಹಾಗೂ ಸೃಜನಶೀಲ ಕಾರ್ಯಗಳ ಮಹತ್ವವನ್ನು ಎತ್ತಿ ಹಿಡಿಯುತ್ತವೆ. ಇದೇ ತಳಹದಿಯ ಮೇಲೆ ಗಾಂಧೀಜಿಯವರು ೧೯೦೪ರಲ್ಲಿ ಫೀನಿಕ್ಸ್ (PHOENIX) ಹಾಗೂ ಟಾಲ್ ಸ್ಟಾಯ್ ಸಹಕಾರ ಸಂಘಗಳನ್ನು ದಕ್ಷಿಣ ಆಫ್ರಿಕಾದಲ್ಲಿ ಹುಟ್ಟುಹಾಕಿದ್ದರು. ಸಹಕಾರವನ್ನು ಅವರು ನೈತಿಕ ಆಂದೋಲನ(Moral movement) ಎಂದು ಭಾವಿಸಿದ್ದರು. ಹೀಗಾಗಿ ಪ್ರತಿಯೊಂದು ಸಹಕಾರ ಚಟುವಟಿಕೆಯೂ ಬದುಕಿನಲ್ಲಿ ವ್ಯಕ್ತಿಯ ನಡವಳಿಕೆಯನ್ನು ಇನ್ನಷ್ಟು ಸುಧಾರಿಸುವಂತಿರಬೇಕೆಂಬ ಒತ್ತಾಸೆ ಹೊಂದಿದ್ದರು. ಒಬ್ಬ ಸಹಕಾರಿಯಾಗಿ ಅವರು ಸಹಕಾರವು ಒಂದು ಸಿದ್ಧಾಂತವಾಗುವುದಕ್ಕಿಂತಲೂ ಪ್ರಾಯೋಗಿಕವಾದುದಾಗಿದೆಯೆಂದು ಹೇಳುತ್ತ ಒಳ್ಳೆಯದು ಹಾಗೂ ಕೆಟ್ಟ ರೀತಿಯ ಸಹಕಾರಗಳ ನಡುವಣ ವ್ಯತ್ಯಾಸಗಳನ್ನು ತೋರಿಸಿದ್ದಾರೆ. "ಸಹಕಾರವು ಆರ್ಥಿಕಉದ್ದೇಶಗಳಿಗಿಂತಲೂ ಮಿಗಿಲಾದ ಧ್ಯೇಯಗಳನ್ನು ಹೊಂದಿದೆ. ಒಬ್ಬ ನಿಷ್ಠಾವಂತ ಸಹಕಾರಿಯು ಸಾಮಾಜಿಕ ಜೀವನದ ಎಲ್ಲ ಉದ್ದೇಶಗಳಿಗೂ ಸಹಕಾರ ವಿಧಾನಗಳನ್ನು ಅಳವಡಿಸಲು ಬಯಸುತ್ತಾನೆ. ಹಾಗೂ ಅದೇ ರೀತಿ

ನಡೆದುಕೊಳ್ಳುತ್ತಾನೆ. ಏಕೆಂದರೆ ಎಲ್ಲರ ಒಳಿತಿಗಾಗಿ ದುಡಿಯುವಾಗ ವ್ಯಕ್ತಿಯ ಉತ್ಕೃಷ್ಟ ಗುಣಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅವುಗಳನ್ನು ರೂಢಿಸಿಕೊಂಡು ಬೆಳೆಸಲು ಪ್ರಯತ್ನಿಸುವ ವ್ಯಕ್ತಿಯು ಕ್ರಮೇಣ ಉತ್ತಮ ವ್ಯಕ್ತಿಯಾಗುತ್ತಾನಲ್ಲದೆ, ಮಾನವ ಜನಾಂಗದ ಗುಣಮಟ್ಟವೂ ಸುಧಾರಿಸುತ್ತದೆ." ಗಾಂಧೀಜಿಯವರ ಜೀವನ ಹಾಗೂ ಕಾರ್ಯಚಟುವಟಿಕೆಗಳು ಅವರು ಸಹಕಾರ ತತ್ತ್ವದ ಮೂರ್ತಿವೆತ್ತಂತೆ ಹಾಗೂ ನಿಷ್ಠಾವಂತ ಸಹಕಾರಿಯಾಗಿದ್ದರೆಂಬುದನ್ನು ಸೂಚಿಸುತ್ತವೆ.

ಬ್ರಿಟಿಷರ ಭಾರತದಲ್ಲಿ ಸಹಕಾರತತ್ತ್ವದ ಅನುಷ್ಠಾನ

ಬ್ರಿಟಿಷ್ ಸರ್ಕಾರದ ತೆರಿಗೆ ವ್ಯವಸ್ಥೆಯ ವೈಪರೀತ್ಯದ ಪರಿಣಾಮವಾಗಿ ಭಾರತದಲ್ಲಿ ಸಾಮಾನ್ಯ ಜನಜೀವನ ಹದಗೆಟ್ಟಿತ್ತು. ಅದರಲ್ಲೂ ಒಟ್ಟಾರೆ ಜನಸಂಖ್ಯೆಯ ಶೇ.೮೫ರಷ್ಟಿದ್ದ ಗ್ರಾಮೀಣ ಜನರು ಕೃಷಿಯನ್ನೇ ನಂಬಿದ್ದು ಕ್ಷಾಮ, ಹಸಿವು, ಏರಿದ ಮರಣಪ್ರಮಾಣ, ಸಂಪ್ರದಾಯ, ಅಂಧಶ್ರದ್ಧೆ, ಮೂಢನಂಬಿಕೆಯಿಂದ ಕುಟುಂಬಗಳು ತತ್ತರಿಸುವುದು, ಸಾಲದ ಹೊರೆ, ಜೀತಗಾರಿಕೆ, ಲೇವಾದೇವಿಗಾರರ ಅಟ್ಟಹಾಸ, ಇವರಿಗೆ ಬೆಂಬಲ ನೀಡುವಂತೆ ಸರ್ಕಾರವು ಅತಿ ಹೆಚ್ಚು ಬಡ್ಡಿದರಗಳನ್ನು ದೇಶೀಯ ಗುತ್ತಿಗೆಗಳಲ್ಲಿ ವಿಧಿಸಿದ್ದು- ಹೀಗೆ ಹಲವಾರು ಸಂಕಷ್ಟಗಳಿಂದ ಜನಸಾಮಾನ್ಯರ ಜೀವನ ಅಸ್ತವ್ಯಸ್ತಗೊಂಡಿತ್ತು. ಈ ಆರ್ಥಿಕ ಏರುಪೇರನ್ನು ಕೆಲಮಟ್ಟಿಗೆ ನಿಯಂತ್ರಿಸುವ ಕ್ರಮವಾಗಿ ಬ್ರಿಟಿಷ್ ಸರ್ಕಾರವು ಸಹಕಾರ ಸಾಲಸಂಘಗಳ ಅಧಿನಿಯಮ-೧೯೦೪ರ ಅಧಿನಿಯಮ ಸಂಖ್ಯೆ X- ಇದನ್ನು ಜಾರಿಯಲ್ಲಿ ತಂದಿತು. ಈ ಅಧಿನಿಯಮದಲ್ಲಿ ಸಾಲ ವ್ಯವಸ್ಥೆ ಮತ್ತು ಸ್ವಾವಲಂಬನೆಗೆ ಒತ್ತು ನೀಡಲಾಗಿತ್ತು. ಅದರಲ್ಲಿ ಸಹಕಾರದ ಪರಿಕಲ್ಪನೆ ಸಂಕುಚಿತಗೊಂಡಿದ್ದರೂ ಇಂಥದೊಂದು ವಿದೇಶಿ ಮಾದರಿಯನ್ನು ಪಾಲನೆ ಮಾಡುವುದರಿಂದ ಸಹಕಾರವು ಗ್ರಾಮೀಣ ಸಂಕಷ್ಟಗಳಿಗೆ ಪವಾಡಸದೃಶ ಪರಿಹಾರವಾದೀತೆಂಬ ವಿಶ್ವಾಸವಿತ್ತು. ಜರ್ಮನಿ ದೇಶದ ಸಾಮಾಜಿಕ ಸಂರಚನೆಗೆ ಅನುಗುಣವಾಗಿ ಹರ್ಮನ್ ಷೂಲ್ಸೆ(HERMAN SCHULTZE) ನಗರದ ಕುಶಲ ಕರ್ಮಿಗಳಿಗಾಗಿ ಸಹಕಾರ ಸಂಘವನ್ನು ಮೊದಲು ರಚಿಸಿದ್ದನು. "ಬ್ರಿಟಿಷ್ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್ ಸಾಮಾಜಿಕ ಅಭಿವೃದ್ಧಿಯಲ್ಲಿ ಅತ್ಯಾಸಕ್ತಿ ಹೊಂದಿ ಕ್ರಮತೆಗೆದುಕೊಂಡಿದ್ದರಿಂದ ಈ ಆಂದೋಲನವು ಭಾರತ ಸರ್ಕಾರ ಹಾಗೂ ಕೊಬ್ಬಿದ ಲೇವಾದೇವಿಗಾರರೊಂದಿಗೆ ಯಾವುದೇ ಸಂಘರ್ಷವನ್ನು ಹುಟ್ಟುಹಾಕಲಿಲ್ಲ." ಹಣಕಾಸು ಆಯೋಗದ ವರದಿಯಲ್ಲಿ(೧೯೦೧) ಇತರ ವಿಷಯಗ ಳೊಂದಿಗೆ "......ಬೇಸಾಯಗಾರರು ಹೊರಲಾರದ ಋಣಭಾರದಿಂದ ಸೊರಗುವುದನ್ನು ತಪ್ಪಿಸಲು, ಮುಕ್ತಗೊಳಿಸುವುದು ಮಾತ್ರವೇ ಸಹಕಾರದ ಗುರಿಯಾಗಿದ್ದು, ಕೃಷಿ ಸಾಲಗಳ ಮೇಲೆ ಅತಿಕನಿಷ್ಠ ಬಡ್ಡಿಯನ್ನು ಮಾತ್ರ ವಿಧಿಸುವುದಕ್ಕೆ ಒತ್ತು ನೀಡುತ್ತದಲ್ಲದೆ ಗ್ರಾಮೀಣ ಲೇವಾದೇವಿಗಾರರಲ್ಲಿ ಭೀತಿ ಮೂಡಿಸುವುದಿಲ್ಲ."

ಎಂದು ಅಭಯ ನುಡಿಯಲಾಗಿತ್ತು. ಎಂದರೆ ಸಹಕಾರ ಸಂಘಗಳು ಅತ್ಯಂತ ಪರಿಮಿತ ಉದ್ದೇಶದಿಂದ ಕಾರ್ಯನಿರ್ವಹಿಸಬೇಕಾಗಿತ್ತು. ವಿಷಾದನೀಯ ಸಂಗತಿಯೆಂದರೆ, ಸಹಕಾರ ಸಾಲ ಸಂಘಗಳನ್ನು ಸ್ಥಾಪಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಸರ್ಕಾರವು, ಅದಾಗಲೇ ದೇಶದಲ್ಲಿ ಲಭ್ಯವಿದ್ದ ಸಾಂಪ್ರದಾಯಿಕ ಸಾಲ ಸಹಕಾರ ಕ್ಷೇತ್ರ ಹಾಗೂ ಸಹಕಾರದ ಇನ್ನಷ್ಟು ಮುಂದುವರಿದ ರಚನೆಗಳಲ್ಲಿ ಉಪಯುಕ್ತ ಅನುಭವ ಹೊಂದಿದ್ದ ದೇಶೀಯ ಪರಿಣತರ ಅಭಿಪ್ರಾಯವನ್ನು ಪಡೆಯಲಿಲ್ಲ ಮಾತ್ರವಲ್ಲ ಅವರನ್ನು ಸಂಪೂಣರವಾಗಿ ಉಪೇಕ್ಷಿಸಿತ್ತು.

ಇಲ್ಲಿ ಗಮನಿಸಬಹುದಾದ ಮಹತ್ತ್ವದ ಅಂಶಹೊಂದಿದೆ. "೧೮೯೪ರಲ್ಲಿಯೇ ಮೈಸೂರು ರಾಜ್ಯದಲ್ಲಿ ಪ್ರತಿಯೊಬ್ಬ ಸದಸ್ಯನ ವಾಸ್ತವಿಕ ಅಗತ್ಯತೆಗನುಸಾರವಾಗಿ ಇತರರು ಪರಸ್ಪರ ಹೊಂದಿರುವ ವಿಶ್ವಾಸದ ಆಧಾರದ ಮೇಲೆ ಎಲ್ಲರೂ ಕೂಡಿ ತಮ್ಮದೇ ಆದ ಸಂಘಟಿತ ಹಣ ಸಂಗ್ರಹ ಮತ್ತು ಸಾಲ ನೀಡಿಕೆ ನಿಧಿಯಿಂದ ಹಣವನ್ನು ಪಡೆಯುವ ಉದ್ದೇಶದಿಂದ ಕೇವಲ ಕಟ್ಟುನಿಟ್ಟಾದ ಸಹಕಾರ ತತ್ತ್ವಗಳನ್ನಾಧರಿಸಿ ಕೃಷಿ ಬ್ಯಾಂಕುಗಳನ್ನು(೧೮೯೪) ತೆರೆಯಲಾಗಿತ್ತು. ಸಾಮಾನ್ಯ ವಾರ್ಷಿಕ ಬೇಸಾಯ ಅಗತ್ಯತೆಗಳು, ಕೃಷಿ ಸುಧಾರಣೆ ಅಥವಾ ಋಣ ವಿಮೋಚನೆಗಾಗಿ ಈ ಸಾಲಗಳನ್ನು ಒದಗಿಸಲಾಗುತ್ತಿತ್ತು. ಕೃಷಿ ಬ್ಯಾಂಕುಗಳನ್ನು ಸ್ಥಾಪಿಸಿದ ಕೇವಲ ನಾಲ್ಕೇ ವರ್ಷಗಳಲ್ಲಿ ಎಂದರೆ ೧೮೯೮ರ ವೇಳೆಗೆ ಅವುಗಳ ಸಂಖ್ಯೆ ೬೮ಕ್ಕೆ ಏರಿತು. ಎಂದರೆ ಇವು ವಾಸ್ತವವಾಗಿಯೂ ಸ್ವಾವಲಂಬನೆ, ಉತ್ಪಾದನಾ ಬಂಡವಾಳ ತತ್ತ್ವಗಳು ಹಾಗೂ ಭೂಹಿಡುವಳಿದಾರರ ಬುದ್ಧಿವಂತಿಕೆ ಹಾಗೂ ಅಗತ್ಯತೆಗಳಿಗೆ ಸೂಕ್ತವಾಗುವುದನ್ನು ಆಧರಿಸಿದ ಸಹಕಾರ ಸ್ವರೂಪದ ಸಂಘಟನೆಗಳಾಗಿದ್ದವು. ಅಷ್ಟೇ ಅಲ್ಲದೆ, ಋಣವಿಮೋಚನೆಗಾಗಿ ಸಾಲ ನೀಡುವ ಮೂಲಕ ಸದಸ್ಯರನ್ನು ಲೇವಾದೇವಿಗಾರರ ಹಿಡಿತದಿಂದ ಮುಕ್ತರನ್ನಾಗಿಸಿ ಅವರು ಗೌರವಾನ್ವಿತ ರೈತರಾಗಿ ಉತ್ತಮ ಜೀವನ ನಡೆಸಲು ಹೊಸ ಅವಕಾಶವನ್ನು ಒದಗಿಸುವ ಮೂಲಕ ಈ ಸಂಘಗಳು ಅತ್ಯುತ್ತಮ ಸಾಮಾಜಿಕ ಉದ್ದೇಶವನ್ನೂ ಸಹ ಈಡೇರಿಸುತ್ತಿದ್ದವು."[೭]

೧೯೦೪ರ ಸಹಕಾರ ಸಾಲ ಸಂಘಗಳ ಅಧಿನಿಯಮವನ್ನು ಜಾರಿಯಲ್ಲಿ ತರುವುದಕ್ಕೆ ಮುಂಚೆ ಭಾರತೀಯರ ಆರ್ಥಿಕ ಜೀವನ ವ್ಯವಸ್ಥೆಯಲ್ಲಿ ನೆಲೆಯೂರಿದ್ದ ಸಹಕಾರ ಪದ್ಧತಿಯ ಹೊರತಾಗಿಯೂ, ಜಂಟಿ ಕೃಷಿಪದ್ಧತಿ(Joint Farming system) ಮತ್ತು ಪರಸ್ಪರ ಕೊಡುಕೊಳ್ಳುವಿಕೆಯ ಸಂಪ್ರದಾಯಕತೆಗೆ ಪುರಾವೆಯಾಗುವ ಸಹಕಾರ ಸಿದ್ಧಾಂತವು ರಾಷ್ಟ್ರದ ಜನಜೀವನದಲ್ಲಿ ಹಾಸು ಹೊಕ್ಕಾಗಿದ್ದಿತೆಂಬುದು ತಿಳಿದುಬರುತ್ತದೆ. ಈ ಬಗ್ಗೆ ಸಮರ್ಥನೆಯಾಗಿ ವೇದಗಳಲ್ಲಿ, ಮನುವಿನ ಧರ್ಮಶಾಸನಗಳಲ್ಲಿ, ಹಾಗೂ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೂಡ ಉಲ್ಲೇಖಗಳು ಲಭ್ಯವಿದೆ. ಇನ್ನೂ ಮಹತ್ತ್ವದ ಸಂಗತಿಯೆಂದರೆ,

ಅರ್ಥಶಾಸ್ತ್ರದಲ್ಲಿ ಕೌಟಿಲ್ಯನು "ಯಾವುದೇ ಬಗೆಯ ಸಹಕಾರ ಪ್ರಯತ್ನದಲ್ಲಿ ಯಾರೊಬ್ಬನೇ ಆಗಲಿ ಭಾಗವಹಿಸಲಾಗದೇ ಇದ್ದರೆ ಕೆಲಸವನ್ನು ಮುಂದುವರಿಸುವ ಸಲುವಾಗಿ ತನ್ನ ಆಳುಗಳನ್ನು ಹಾಗೂ ಎತ್ತುಗಳನ್ನು ಕಳುಹಿಸತಕ್ಕದ್ದು ಮತ್ತು ಅವನು ವೆಚ್ಚದಲ್ಲಿ ಪಾಲನ್ನು ಪಡೆಯತಕ್ಕದ್ದಲ್ಲದೆ, ಲಾಭಗಳಲ್ಲಿ ಯಾವುದೇ ಪಾಲು ಪಡೆಯತಕ್ಕದ್ದಲ್ಲ" ಎಂದಿದ್ದಾನೆ.[೮] ಈ ಹಿಂದೆಯೇ ತಿಳಿಸಿರುವಂತೆ ಸಹಕಾರ ಸಾಲಸಂಘಗಳ ಅಧಿನಿಯಮ, ೧೯೦೪ ಇದು ಭಾರತದಲ್ಲಿ ಸಹಕಾರದ ಅಭಿವೃದ್ಧಿಗೆ ತಳಪಾಯಹಾಕಿತು. ಈ ಅಧಿನಿಯಮವನ್ನು ಬಹುಮಟ್ಟಿಗೆ ಇಂಗ್ಲಿಷ್ ಫ್ರೆಂಡ್ಲೀ ಸೊಸೈಟೀಸ್ ಆ್ಯಕ್ಟ್, ೧೮೯೬ ಮತ್ತು ೧೮೩೪ನ್ನು ಆಧರಿಸಿ ರಚಿಸಲಾಗಿತ್ತು. ೧೯೦೪ರ ಅಧಿನಿಯಮದ ಮೇರೆಗೆ ಗ್ರಾಮೀಣ ಹಾಗೂ ನಗರಗಳೆರಡರಲ್ಲೂ ಸಹ ಇಂಥ ಸಹಕಾರ ಸಂಘಗಳನ್ನು ಸ್ಥಾಪಿಸಲು ಸೂಚಿಸಲಾಗಿತ್ತು. ಇವುಗಳ ರಚನೆಯನ್ನು ಉತ್ತೇಜಿಸಲು ಸರ್ಕಾರವು ಸ್ಟಾಂಪ್ ಶುಲ್ಕ, ನೋಂದಣಿ ಹಾಗೂ ವರಮಾನ ತೆರಿಗೆಗಳಿಗೆ ವಿನಾಯಿತಿ ನೀಡಿತ್ತು. ಈ ಅಧಿನಿಯಮವನ್ನು ಕಾರ್ಯಾನುಷ್ಠಾನಗೊಳಿಸಿದ ಹತ್ತುವರ್ಷಗಳಲ್ಲಿಯೇ ಅದರಲ್ಲಿದ್ದ ಲೋಪದೋಷಗಳು ಬೆಳಕಿಗೆ ಬಂದವು. ಅದರಲ್ಲಿ ಸಾಲದಹೊರತಾಗಿ ಇತರ ಉದ್ದೇಶಗಳಿಗೆ ಅಥವಾ ಕೇಂದ್ರ ಏಜೆನ್ಸಿಗಳಿಗೆ, ಬ್ಯಾಂಕುಗಳು ಮತ್ತು ಕಾರ್ಮಿಕ ಸಂಘಗಳಿಂದ ಸಹಕಾರ ಸಂಘಗಳಿಗೆ ಯಾವುದೇ ಶಾಸನಾತ್ಮಕ ರಕ್ಷಣೆಯನ್ನೂ ನೀಡಲಾಗಿರಲಿಲ್ಲ.[೯] ಆದ್ದರಿಂದ, ಅಧಿನಿಯಮಕ್ಕೆ ತಿದ್ದುಪಡಿ ತರಬೇಕೆಂದು ಕೋರಲಾಯಿತು. ಅಂತೆಯೇ ಸಹಕಾರ ಸಂಘಗಳ ಅಧಿನಿಯಮ, ೧೯೧೨(೧೯೧೨ರ ಅಧಿನಿಯಮ ಸಂ.II) ಎಂದು ಕರೆಯಲಾದ ಮತ್ತೊಂದು ಕೇಂದ್ರ ಶಾಸನವನ್ನು ಜಾರಿಯಲ್ಲಿ ತರಲಾಯಿತು. ಇದೇ ಅಧಿನಿಯಮ ಅಂದಿನಿಂದ ಇಂದಿನವರೆಗೆ ಕಾಲಕಾಲಕ್ಕೆ ಭಾರತದ ವಿವಿಧರಾಜ್ಯ ಸರ್ಕಾರಗಳು ಎಲ್ಲಾ ಇತರ ಅಧಿನಿಯಮಗಳನ್ನು ಜಾರಿಗೊಳಿಸಲು ಆಧಾರವಾಯಿತು.

ಭಾರತದಲ್ಲಿ ಸಹಕಾರ ಸಂಘಗಳು ಅತಿ ವೇಗವಾಗಿ ಪ್ರಗತಿ ಹೊಂದಿದವು. ಅವುಗಳ ಸಂಖ್ಯೆ ೧೯೦೬-೭ರಲ್ಲಿ ೮೪೩ ಇದ್ದದ್ದು, ೧೯೧೧-೧೨ರ ವೇಳೆಗೆ ೮,೧೭೭ ಆಗಿದ್ದವು. ಈ ಹಿಂದೆ ಸೂಚಿಸಿರುವಂತೆ, ಸಹಕಾರ ಅಧಿನಿಯಮದಲ್ಲಿ ಇದ್ದ ನ್ಯೂನತೆಗಳನ್ನು ನಿವಾರಿಸಲು ಸಹಕಾರ ಸಂಘಗಳ ಅಧಿನಿಯಮ, ೧೯೧೨ನ್ನು ಜಾರಿಗೊಳಿಸಲಾಯಿತು. ಈ ಅಧಿನಿಯಮವನ್ನು ೧೮೫೨ರ ಇಂಗ್ಲಿಷ್ ಇಂಡಸ್ಟ್ರಿಯಲ್ ಅಂಡ್ ಪ್ರಾವಿಡೆಂಟ್ ಸೊಸೈಟೀಸ್ ಆ್ಯಕ್ಟನ್ನು ಆಧರಿಸಿ ರಚಿಸಲಾಗಿತ್ತು. "ಸಹಕಾರ ತತ್ತ್ವಗಳನುಸಾರವಾಗಿ ಸದಸ್ಯರ ಆರ್ಥಿಕ ಹಿತಾಸಕ್ತಿಗಳನ್ನು ಹೆಚ್ಚಿಸುವುದು" ಈ ಅಧಿನಿಯಮದ ಉದ್ದೇಶವಾಗಿತ್ತು.[೧೦] ಆದರೂ ಹಿಂದಿನ ಅಧಿನಿಯಮದಲ್ಲಿದ್ದ ಸಾಂಸ್ಥಿಕ, ಕಾರ್ಯಾಚರಣೆಯುಕ್ತ ಹಾಗೂ ಆಡಳಿತಾತ್ಮಕ ಪದ್ಧತಿಗಳಿಗೆ ಯಾವುದೇ ಮೂಲಭೂತ ಅಥವಾ ವಾಸ್ತವಿಕ ಬದಲಾವಣೆಗಳನ್ನು ಮಾಡಿರಲಿಲ್ಲ. ಸಹಕಾರ ಆಂದೋಲನವು

ಜನಸಾಮಾನ್ಯರನ್ನು ಹೆಚ್ಚುಹೆಚ್ಚಾಗಿ ಆಕರ್ಷಿಸತೊಡಗಿತು. ಗಾಂಧಿಯವರ ಅಭಿಪ್ರಾಯದಂತೆ ಇಡೀ ದೇಶದಲ್ಲಿ ದಿವಾಳಿತನ ಸಾರ್ವತ್ರಿಕ ಸಮಸ್ಯೆಯಾಗಿತ್ತು. ರೈತರು ''ಅತ್ಯಧಿಕ ತೆರಿಗೆಭಾರ, ದುಬಾರಿಕಂದಾಯ, ಕಾನೂನು ಬಾಹಿರ ಸುಲಿಗೆ ಹಿಂಗದ ಋಣಬಾಧೆ, ಅನಕ್ಷರತೆ, ಮೂಢನಂಬಿಕೆ ಹಾಗೂ ರೋಗಗಳಿಂದ ಜರ್ಝರಿತರಾಗಿದ್ದರು. ಅವರಿಗೆ ಪರಿಹಾರ ಅತ್ಯವಶ್ಯವಾಗಿತ್ತು. ಗಾಂಧೀಜಿಯವರು ಇಂಥ ದುಃಸ್ಥಿತಿಯಲ್ಲಿದ್ದ ಗ್ರಾಮೀಣ ಜನತೆಯ ಬಗ್ಗೆ ಅತೀವ ಕಾಳಜಿ ಹೊಂದಿದ್ದರು. ಅಂಥವರ ಉತ್ತಮ ಜೀವನಕ್ಕಾಗಿ ಸಾಮಾಜಿಕ ಸಹಕಾರವನ್ನು ಅವರು ರೂಢಿಯಲ್ಲಿ ತರಬಯಸಿದ್ದರು. ಕೃಷಿ ಉತ್ಪನ್ನಗಳ ಆಧಾರಿತವಾದ ಯಾವುದೇ ಉದ್ಯಮ ಉದಾಹರಣೆಗೆ ಹತ್ತಿ, ಸಕ್ಕರೆ, ಎಣ್ಣೆಬೀಜಗಳು, ಗೋದಿ ಮುಂತಾದುವುಗಳನ್ನು ಸಹಕಾರ ಆಧಾರಿತವಾಗಿ ಉತ್ಪಾದಿಸಿದರೆ ರೈತರ ಸಂಕಷ್ಟ ನಿವಾರಣೆ ಸಾಧ್ಯ. ಹಾಗೆಯೇ ಗಣಿಗಾರಿಕೆ, ಕಬ್ಬಿಣ ಕೆಲಸಗಳು, ಚರ್ಮ ಮತ್ತಿತರ ದೊಡ್ಡ ಪ್ರಮಾಣದ ಉದ್ಯಮಗಳು ಕೃಷಿಕರಿಗೆ ನಿಲುಕದ್ದರಿಂದ ಬಂಡವಾಳಗಾರರು ಸಹಿಸಿಕೊಂಡರೆ ರಾಷ್ಟ್ರ ಸಂಪತ್ತು ಅಭಿವೃದ್ಧಿಯಾಗುವುದೆಂದೂ ತನ್ಮೂಲಕ ಬೇಸಾಯಗಾರರ ಶೋಷಣೆ ಕಡಿಮೆಯಾದೀತೆಂದು ಭಾವಿಸಿದ್ದರು. ಸಾಮಾಜಿಕ ಸಹಕಾರತತ್ವದಲ್ಲಿ ''ನಿಮ್ಮ ಸಂಪತ್ತನ್ನು ಇತರರಿಗೆ ತೊಂದರೆಯುಂಟು ಮಾಡದಂತೆ ಬಳಸಿ, ತನ್ನನ್ನು ಇತರರಲ್ಲಿ ಕಾಣುವ ಹಾಗೂ ಇತರರನ್ನು ತನ್ನಂತೇ ಬಗೆಯುವ''(ಭಗವದ್ಗೀತೆ) ವ್ಯಕ್ತಿಯೇ ಶ್ರೇಷ್ಠನೆಂದು ತಿಳಿಯಲಾಗುತ್ತದೆ.[೧೧] ಸಹಕಾರವು ಉತ್ತಮ ಕೃಷಿ, ಉತ್ತಮವ್ಯಾಪಾರ ಹಾಗೂ ಉತ್ತಮ ಜೀವನಕ್ಕಾಗಿ ಅತ್ಯಗತ್ಯವಾಗುತ್ತದೆ. ಹೀಗೆ ಸಹಕಾರವು ಮಾನವ ಸಮಾಜದ ಮೂಲ ತಳಹದಿಯಾಗಿ ವ್ಯಕ್ತಿಯ ಹಾಗೂ ರಾಷ್ಟ್ರದ ಆರ್ಥಿಕ-ಸಾಮಾಜಿಕ ಜೀವನದಲ್ಲಿ ಅತಿಮುಖ್ಯ ಪಾತ್ರವಹಿಸುತ್ತದೆ.

ಈ ಸಂದರ್ಭದಲ್ಲಿ ಸಹಕಾರವು ಸರ್ಕಾರದ ಧೋರಣೆಗೆ ಪ್ರತಿಯಾಗಿ ಅಸಹಕಾರ ಚಳವಳಿಯಾಗಿ ರೂಪುಗೊಂಡಿದ್ದು ಕೂಡ ಸಹಕಾರದ ಬೆಳವಣಿಗೆಯ ಹಂತದ ಅತ್ಯಪೂರ್ವ ಹಾಗೂ ಮಹತ್ತ್ವದ ಸಂಗತಿಯಾಯಿತು. ಶ್ರೇಷ್ಠ ದಾರ್ಶನಿಕ ರಾಷ್ಟ್ರಭಕ್ತ ಹಾಗೂ ಮಾನವತಾವಾದಿಯಾದ ಶ್ರೀ ಅರವಿಂದರು ''ಸ್ವಾತಂತ್ರ್ಯ ಒಂದು ರಾಷ್ಟ್ರದ ಉಸಿರು, ರಾಜಕೀಯ ಸ್ವಾತಂತ್ರ್ಯ ಪಡೆಯುವುದನ್ನು ಮೊಟ್ಟ ಮೊದಲ, ಹಾಗೂ ಮಹತ್ತ್ವದ ಗುರಿಯಾಗಿರಿಸಿಕೊಳ್ಳದಿದ್ದರೆ ಸಾಮಾಜಿಕ ಸುಧಾರಣೆ, ಶೈಕ್ಷಣಿಕ ಸುಧಾರಣೆ, ಉದ್ಯಮ ವಿಸ್ತರಣೆ ಅಥವಾ ಜನತೆಯ ನೈತಿಕಮಟ್ಟ ಸುಧಾರಣೆಯ ಪ್ರಯತ್ನಗಳನ್ನು ಮಾಡುವುದು ಮೂರ್ಖತನ ಹಾಗೂ ನಿಷ್ಫಲ ಯತ್ನ'' ಎಂದು ಅವರು ಸಾರಿದ್ದರು.[೧೨] ಹೀಗಾಗಿ ಪರರ ಆಡಳಿತಕ್ಕೆ ನಾವು ಸಹಕಾರ ನೀಡುವುದನ್ನು ನಿಲ್ಲಿಸಿದರೆ ಆಡಳಿತ ಸೌಧ ಇಸ್ಪೇಟಿನ ಎಲೆಗಳ ಮನೆಯಂತೆ ಎಗುರಿ ಹೋಗುತ್ತದೆ.''[೧೩] 'ಬಹಿಷ್ಕಾರ'ವೇ ಅಸಹಕಾರದ ಬೀಜಮಂತ್ರವಾಗಿ ''ನಾಲ್ಕು ಬಗೆಯ ನಿರಾಕರಣೆಯಿಂದ

ಎಂದರೆ ಸರ್ಕಾರಕ್ಕೆ ಆರ್ಥಿಕ ಬಹಿಷ್ಕಾರ, ಶೈಕ್ಷಣಿಕ ಬಹಿಷ್ಕಾರ, ನ್ಯಾಯಿಕ ಬಹಿಷ್ಕಾರ ಹಾಗೂ ಆಡಳಿತ ಕಾರ್ಯ ನಿರ್ವಹಣೆ ಬಹಿಷ್ಕಾರ''[೧೪] ಅಸಹಕಾರ ವ್ಯಕ್ತಪಡಿಸಲು ನಿಶ್ಚಯಿಸಲಾಗಿತ್ತು. ಈ ಅಸಹಕಾರ ಚಳವಳಿ ಅಥವಾ ಸತ್ಯಾಗ್ರಹ ಹಾಗೂ ಸ್ವರಾಜ್ಯ ಬೇಡಿಕೆಯು ಜನರ ಜೀವನದ ದಿಕ್ಕು ದೆಸೆಯನ್ನೇ ಬದಲಿಸಿತು. ಗಾಂಧೀಜಿ ಅಸಹಕಾರವೇ ಸಹಕಾರದ ಕರ್ತವ್ಯವಾಗಲೆಂದು ಕರೆ ನೀಡಿದ್ದರು! ಸಹಕಾರ ಆಂದೋಲನದ ಅಧ್ವರ್ಯುಗಳಲ್ಲಿ ಒಬ್ಬರಾದ ಎಚ್.ಎಲ್.ಕಾಜಿ(H.L.kaJi)ಯವರು[೧೫] ಭಾರತದ ರಾಜಕೀಯ, ಆರ್ಥಿಕ, ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಜನರ ಸ್ಥಿತಿಗತಿಗಳನ್ನು ಸುಧಾರಿಸಲು ಸಹಕಾರ ಆಂದೋಲನವೇ ಅತಿ ಮಹತ್ತ್ವದ ಪಾತ್ರವಹಿಸುವುದರಲ್ಲಿ ಅನುಮಾನವೇ ಇಲ್ಲ... ಬಹುಸಂಖ್ಯಾತರಾದ ಜನಸಾಮಾನ್ಯರ ಪ್ರಗತಿಗೆ ಎಲ್ಲ ಸಾಧನೆ ಸಾಧ್ಯತೆಗಳನ್ನೂ ಹೊಂದಿರುವ ಸಹಕಾರ ಆಂದೋಲನಕ್ಕೆ ಮಿಗಿಲಾದ ಮತ್ತೊಂದು ಆಂದೋಲನವಿಲ್ಲ. ಗ್ರಾಮೀಣ ಸಹಕಾರ ಸಂಘವೊಂದು ಶಿಕ್ಷಕನಿದ್ದಂತೆ ಪ್ರಗತಿಶೀಲ ರಾಷ್ಟ್ರದ ನಾಗರಿಕರಿಗೆ ಮತದಾನ, ಸಂಘಟಿತ ಯೋಜನೆ ಮೂಲಕ ಕೆಲಸ ಮಾಡುವುದು, ಒಟ್ಟುಗೂಡುವ ಪದ್ಧತಿ ಅಳವಡಿಸಿಕೊಳ್ಳುವುದು, ಸ್ವಸಹಾಯ, ಸ್ವಾವಲಂಬನೆ, ರಾಜೀ ಮನೋಭಾವ ಹಾಗೂ ಕೊಳ್ ಕೊಡುವಿಕೆ, ಸೇವಾಮನೋಭಾವ ಈ ಅಂಶಗಳಲ್ಲಿ ಮಾರ್ಗದರ್ಶನ ಅತ್ಯಗತ್ಯವಾಗಿದ್ದು ಸಹಕಾರ ಆಂದೋಲನದಿಂದ ಮಾತ್ರವೇ ಇನ್ನೂ ಸಾಕಷ್ಟು ಹಿಂದುಳಿದಿರುವ ಕೃಷಿಕ ವರ್ಗದ ಜನರಲ್ಲಿ ಜಾಗೃತಿ ಮೂಡಿಸಲು ಸಾಧ್ಯ. ರಾಜಕೀಯ ಸಂಸ್ಥೆಗಳಾಗಿರದ ಈ ಸಹಕಾರ ಸಂಘಗಳು ರಾಜಕೀಯ ಹಾಗೂ ಪೌರಶಿಕ್ಷಣ ನೀಡಬಲ್ಲ ಅತಿ ಮಹತ್ತ್ವದ ಸಂಸ್ಥೆಗಳಾಗಿವೆ'' ಎಂದಿದ್ದಾರೆ.

ಭಾರತದಲ್ಲಿ ಸಹಕಾರ ಆಂದೋಲನವನ್ನು ಮುಖ್ಯವಾಗಿ ಅತಿ ಬಡವರು ಅದರಲ್ಲೂ ಭಾರತದ ಅತಿಹೆಚ್ಚು ಸಂಖ್ಯೆಯಲ್ಲಿರುವ ಬೇಸಾಯಗಾರರ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶದಿಂದ ಪ್ರಾರಂಭಿಸಲಾಯಿತು. ಜನರ ಮನಸ್ಸಿನಲ್ಲಿ ನೆಲೆಯೂರುತ್ತಿದ್ದ ಹತಾಶೆ ಹಾಗೂ ಅಸಹಾಯಕತೆಗಳನ್ನು ನಿವಾರಿಸಲು ಉತ್ತಮ ಬೇಸಾಯ, ಉತ್ತಮ ವ್ಯಾಪಾರ, ಉತ್ತಮ ಜೀವನ ಹಾಗೂ ವ್ಯಕ್ತಿತ್ವ ಸುಧಾರಣೆಯೂ ಕೂಡ ಸಹಕಾರದ ಮುಖ್ಯ ಉದ್ದೇಶವೇ ಆಗಿತ್ತು. ಇವೆಲ್ಲವನ್ನೂ ಸಾಧಿಸಲು ಸಹಕಾರವನ್ನು ಸರ್ಕಾರದ ಕಾರ್ಯನೀತಿಯಾಗಿ ಜಾರಿಗೊಳಿಸಲಾಯಿತು. ಸರ್ಕಾರವು, ಸಣ್ಣ ರೈತರಿಗೆ ಸಣ್ಣಪುಟ್ಟ ಸಾಲನೆರವು ನೀಡುವ ಸಣ್ಣ ಸಹಕಾರ ಸಾಲ ಸಂಘಗಳಿಗೆ ನೆರವು ನೀಡುವ ಮೂಲಕ ವಿವಿಧ ಬಗೆಯ ಸಹಕಾರ ಸಂಘಗಳ ಆಡಳಿತ ನಿರ್ವಹಣಾ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸಿತು. ಅಲ್ಲದೆ, ಸರ್ಕಾರೇತರ ಮುಖಂಡತ್ವವಿರುವ ಕ್ಷೇತ್ರಗಳಲ್ಲಿ ತಮ್ಮ ಐಶ್ವರ್ಯ ಅಥವಾ ಸಾಮಾಜಿಕ ಅಂತಸ್ತಿನ ಮೂಲಕ ಉನ್ನತ ಸ್ಥಾನಮಾನವನ್ನು ಹೊಂದಿದ್ದ ಶ್ರೀಮಂತರು ಸಹಕಾರ ಸಂಘಗಳಲ್ಲಿ ಸದಸ್ಯರ ಜೊತೆ ಸಮಾನ ಆರ್ಥಿಕ ಹಿತಾಸಕ್ತಿ ಹೊಂದಿರದಿದ್ದರೂ ಅದನ್ನು 'ಜನರ ಆಂದೋಲನ'ವನ್ನಾಗಿ ರೂಪಿಸಲು

ಸರ್ಕಾರವು ಉತ್ತೇಜನ ನೀಡಿತು. ಬಹಳಷ್ಟು ಮಟ್ಟಿಗೆ ಇಂಥ ಶ್ರೀಮಂತರು ಅಥವಾ ಮುಖಂಡರು ಪ್ರಥಮತಃ ಬಿರುದುಬಾವಲಿಗಳನ್ನು ಪಡೆಯಲು ತಮ್ಮ ಹಿಂಬಾಲಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಆಸಕ್ತರಾಗಿರುತ್ತಿದ್ದರು. ಇಂಥವರಿಗೆ ಸಹಕಾರವೊಂದು ಹವ್ಯಾಸವಾಗಿತ್ತು. ವಾಸ್ತವವಾಗಿ, ಬ್ರಿಟಿಷರ ಭಾರತದಲ್ಲಿ ಸಹಕಾರ 'ನಿರಂತರವಾಗಿರದ, ಪ್ರಜಾಸತ್ತಾತ್ಮಕ ಅಂಶವಿರದ, ಸಾಮಾಜಿಕ ಉದ್ದೇಶರಹಿತ, ವ್ಯವಹಾರ ಕ್ಷಮತೆ ಹಾಗೂ ನಿಸ್ಪೃಹ ಮುಖಂಡತ್ವ'ವಿರದ ಪ್ರಗತಿಯಾಗಿತ್ತು. ಏನೇ ಆಗಲಿ, ಮುಂದಿನ ವರ್ಷಗಳಲ್ಲಿ ಸಹಕಾರದ ಅಭಿವೃದ್ಧಿಗೆ ಅತಿ ಮುಖ್ಯವಾದ ತಳಪಾಯವೊದಗಿದ್ದು ಮಹತ್ತ್ವದ ಅಂಶ. ಅನೇಕ ಲೋಪದೋಷಗಳಿದ್ದಾಗ್ಯೂ, ಸರ್ಕಾರದ ನಿಯಂತ್ರಣವಿದ್ದುದು ಅನುಕೂಲಕರವಾಗಿತ್ತು. ಬಡರೈತರಿಗೆ ಪ್ರಯೋಜನವಾಗಲೆಂದು ಸಾಮಾಜಿಕ-ಆರ್ಥಿಕ ಕ್ಷೇತ್ರದಲ್ಲಿ ಮಾಡಿದ ಈ ಪ್ರಯೋಗಕ್ಕೆ ಹಿನ್ನೆಲೆಯಾಗಿ ಸರ್ಕಾರದ ಅಧಿಕಾರವಿದ್ದುದರಿಂದ ಸಹಕಾರ ಆಂದೋಲನದ ಪ್ರಾರಂಭಿಕ ದಿನಗಳಲ್ಲಿ ಸಾಕಷ್ಟು ಬೆಂಬಲವೊದಗಿತು.[೧೬]

ಭಾರತದಲ್ಲಿ ಸಹಕಾರ ಆಂದೋಲನದ ಆರಂಭ, ಬೆಳವಣಿಗೆ ಹಾಗೂ ಸಾಧನ ಸಾಫಲ್ಯಗಳ ಬಗ್ಗೆ ನಾವು ವಿಶ್ಲೇಷಿಸುವಾಗ ಗಾಂಧೀಜಿಯವರು ಅದರಲ್ಲಿಟ್ಟಿದ್ದ ದೃಢವಿಶ್ವಾಸ, ಬೆಳೆಸುವ ಹಂಬಲ ಹಾಗೂ ಪರಿಶ್ರಮವನ್ನು ಗುರುತಿಸಿಕೊಳ್ಳುತ್ತಲೇ ಹೋಗಬೇಕಾಗುತ್ತದೆ. ಅವರು ಹೀಗೆ ಹೇಳುತ್ತಾರೆ ''ಭಾರತದಲ್ಲಿ ಮಾನವಶಕ್ತಿಗೆ ಕೊರತೆಯಿಲ್ಲ, ಕೇವಲ ಯುಕ್ತ ನಿರ್ದೇಶನವಿರುವ ಒಟ್ಟು ಪ್ರಯತ್ನದ ಅಗತ್ಯವಿದೆ.''[೧೭] ಆರ್ಥಿಕ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವವು ಶಕ್ತಿಯುತವಾಗಲು ಸಹಕಾರವು ಅತ್ಯಮೂಲ್ಯ ಸಾಧನವಾಗುತ್ತದೆ. ಇದನ್ನು ಮುಂಗಂಡಿದ್ದ ಗಾಂಧಿಯವರು ''ಆರ್ಥಿಕ ಸ್ವಾತಂತ್ರ್ಯವೆಂದರೆ ಬ್ರಿಟಿಷ್ ಬಂಡವಾಳಗಾರರ ಬಂಡವಾಳ ಹಾಗೂ ಭಾರತದಲ್ಲಿದ್ದ ಅವರ ಪ್ರತಿನಿಧಿಗಳಿಂದ ಸಂಪೂರ್ಣ ಮುಕ್ತಿ ಪಡೆಯುವುದು. ಎಂದರೆ ಅತಿ ಸಾಮಾನ್ಯ ವ್ಯಕ್ತಿ ಕೂಡ ಅತ್ಯುನ್ನತ ವರ್ಗದ ಅಥವಾ ಶ್ರೀಮಂತ ವ್ಯಕ್ತಿಗೆ ಸಮಾನನಾಗಿರುವುದಾಗಿ ಭಾವಿಸಬೇಕು. ಇದು ಬಂಡವಾಳ ಅಥವಾ ಬಂಡವಾಳಗಾರರು ತಮ್ಮ ಕೌಶಲ್ಯ ಮತ್ತು ಬಂಡವಾಳವನ್ನು ಅತಿ ಕೆಳಮಟ್ಟದ ವ್ಯಕ್ತಿಯೊಂದಿಗೆ ಗರಿಷ್ಠ ಮಟ್ಟದಲ್ಲಿ ಹಂಚಿಕೊಂಡರೆ ಮಾತ್ರ ಸಾಧ್ಯವಾದೀತು''[೧೮] ಇದೇ ಸಹಕಾರ ತತ್ತ್ವದ ಸಾರ. ಹೀಗಾಗಿ ಅವರ ಪ್ರಕಾರ ಪ್ರಜಾಪ್ರಭುತ್ವದ ತಳಹದಿ ''ವಿವಿಧ ಸ್ತರಗಳ ಜನರ ಭೌತಿಕ, ಆರ್ಥಿಕ ಹಾಗೂ ಬೌದ್ಧಿಕ ಸಂಪನ್ಮೂಲಗಳನ್ನು ಬೆಳೆಸುವ ಕಲೆ ಹಾಗೂ ವಿಜ್ಞಾನವನ್ನು ಎಲ್ಲರ ಒಳಿತಿಗಾಗಿ ಮಾಡುವ ಸೇವೆಯಲ್ಲಿ ತೊಡಗಿಸುವುದರಲ್ಲಿ ಇದೆ.''[೧೯] ಭಾರತದ ನೆಲದಲ್ಲಿ ಬೇರೂರಿದ ಸಹಕಾರವು ಎಂದಿಗೂ ಯಶಸ್ಸು ಪಡೆದೇ ತೀರುವುದೆಂಬ ಅಚಲ ವಿಶ್ವಾಸ ಅವರಲ್ಲಿತ್ತು. ಹಾಗಾದರೆ ಭಾರತೀಯ ಮನೋಧರ್ಮಕ್ಕೆ ಹಾಗೂ ಭೂಮಿಗೆ ಯಾವ ಬಗೆಯ ಸಹಕಾರ ಅತ್ಯಂತ ಸೂಕ್ತವಾಗಬಹುದು ಎಂಬ ಪ್ರಶ್ನೆಗೆ 'ನೂಲುವುದು' ಎಂದು ಉತ್ತರಿಸಿದ ಗಾಂಧೀಜಿಯವರು

ಇವನ್ನು ಪ್ರಪಂಚದ ಶ್ರೇಷ್ಠ ಸ್ವಯಂಸೇವಾ ಸಹಕಾರವೆಂದು ಬಣ್ಣಿಸುತ್ತಿದ್ದರು. ಹೀಗಾಗಿ ಭಾರತದಲ್ಲಿ ನೂಲುವ ಕೇಂದ್ರವೇ ಮೊಟ್ಟ ಮೊದಲ ಸಹಕಾರ ಸಂಘವಾಗಿ ರೂಪುಗೊಂಡಿತ್ತೆನ್ನಬಹುದು. ಅದರಲ್ಲಿ ಹತ್ತಿ ಬೆಳೆಗಾರರು, ಎಳೆತೆಗೆಯುವವರು, ಜೋಡಿಸುವವರು, ನೂಲುವವರು, ನೇಯುವವರು ಹಾಗೂ ಬಿಳಿಚಿಗಾರರು- ಇವರೆಲ್ಲರೂ ಪರಸ್ಪರ ಸದ್ಭಾವನೆ ಹಾಗು ಸೇವೆ ಎಂಬ ಸಾಮಾನ್ಯ ಸೂತ್ರದಿಂದ ಬಂಧಿತರಾದ ಸದಸ್ಯರಾಗಿದ್ದರು. ಹೀಗಾಗಿ, 'ಖಾದಿ' ಉತ್ಪಾದಕರ ಸಹಕಾರಕ್ಕೆ ಹಾಗೂ ಗ್ರಾಹಕರ ಸಹಕಾರಕ್ಕೆ ಅಡಿಗಲ್ಲು ಒದಗಿಸಿತು. ಎಂದರೆ ಒಂದು ರೀತಿಯಲ್ಲಿ ಸಾಲ ನೀಡಿಕೆ ಪ್ರಯತ್ನದ ಮೇಲೆ ಭಾರತದ ಸಹಕಾರ ಆಂದೋಲನದ ಬೀಜಾಂಕುರವಾಯಿತೆನ್ನಬಹುದು. ಸಹಕಾರ ಸಾಲ ಆಂದೋಲನದ ಅಧ್ವರ್ಯುವಾದ ಡೇನಿಯಲ್ ಹ್ಯಾಮಿಲ್ಟನ್ ಅವರು "ನಂಬಿಕೆ ಹಾಗೂ ವಿಶ್ವಾಸದ ದ್ಯೋತಕವಾದ ಸಾಲವು ವಿಶ್ವದ ಹೆಚ್ಚು ಹೆಚ್ಚು ಶಕ್ತಿಯಾಗಿ ರೂಪುಗೊಳ್ಳುತ್ತಿದೆ" ಎಂದಿದ್ದರು. ಅದನ್ನು ಒಪ್ಪದಿದ್ದ ಗಾಂಧೀಜಿ ಪ್ರಪಂಚದ ಆರ್ಥಿಕ ಶಕ್ತಿಯಾಗುತ್ತಿರುವ ಸಾಲಕ್ಕೆ ಯಾವುದೇ ನೈತಿಕ ಆಧಾರವಿಲ್ಲ, ವಾಸ್ತವದಲ್ಲಿ ಕೇವಲ ನೈತಿಕ ಗುಣಗಳಾದ ನಂಬಿಕೆ ಅಥವಾ ವಿಶ್ವಾಸಕ್ಕೆ 'ಸಾಲ' ಸಂವಾದಿ ಪದವಾಗುವುದಿಲ್ಲ, ಧೂರ್ತನಾದವನು ಹೆಚ್ಚು ಸಾಲವನ್ನು ನೀಡುತ್ತ ತನ್ನ ಬ್ಯಾಂಕುಗಳನ್ನು ತುಂಬಿ ಹರ್ಷಿಸುತ್ತಾನೆ ಅದ್ದರಿಂದ, ನಮ್ಮ ಈ ಸುಂದರ ವಿಶ್ವವನ್ನು ಸಾಲಪದ್ಧತಿಯು ಸರ್ಪಸುತ್ತಿನಂತೆ ಬಳಸಿಕೊಂಡಿದೆ. ಬಿಡಿಸಿಕೊಳ್ಳಲು ನಾವು ಪ್ರಯತ್ನಿಸಿದ್ದರೆ ಅದು ಉರುಳನ್ನು ಬಿಗಿ ಮಾಡಿ ನಮ್ಮ ಉಸಿರುಕಟ್ಟಿಸುತ್ತದೆ ಎಂದಿದ್ದರು.

ಸಹಕಾರ-ವಿಶ್ವಾಸ ಹಾಗೂ ಸರ್ವಜನರ ಕಲ್ಯಾಣ

ಸಮಾಜದಲ್ಲಿ ಬಾಳಬೇಕಾದರೆ ವ್ಯಕ್ತಿಗತ ಸ್ವಾತಂತ್ರ್ಯ ಹಾಗೂ ಪರಸ್ಪರ ಅವಲಂಬನೆ ಇವೆರಡೂ ಅತಿಮುಖ್ಯ. ಮನುಷ್ಯರ ಜೀವನ ದಿನೇ ದಿನೇ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿರುವುದರಿಂದ ಅತೃಪ್ತ ಆಸೆಗಳು, ನಿರಂತರ ಪ್ರಗತಿ ಹಾಗೂ ಸಮೃದ್ಧ ಕಾಮನೆಗಳು, ವಿವಿಧ ರೂಪದ ಅಧಿಕಾರ, ಇವುಗಳಿಂದಾಗಿ ಸಹಕಾರದ ಬಗೆ ಹಾಗೂ ಸ್ತರಗಳು ಕೂಡ ಕಾಲಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಹಾಗೂ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತವೆ. ಹೀಗಾಗಿ ಸಹಕಾರ ಕ್ರಿಯೆಯು ಮಾನವನಷ್ಟೇ ಪುರಾತನವಾದುದಾಗಿದ್ದು, "ಒಳ್ಳೆಯದೂ ಅಲ್ಲ, ಕೆಟ್ಟದೂ ಅಲ್ಲ" ಎಂದು ತಿಳಿಯುವಂತಾಗುತ್ತದೆ.

ಸಹಕಾರವು ಸಾಮಾಜಿಕ ಅಂಶವನ್ನು ಹೊಂದಿರುವ ಆರ್ಥಿಕ ಸಂಸ್ಥೆಯಾಗಿರುವುದೇ ಆಧುನಿಕ ಕಾಲದ ಸಹಕಾರದ ಪರಿಕಲ್ಪನೆಯಾಗಿದ್ದು, ಆರ್ಥಿಕ ಮತ್ತು ಸಮಾಜ ವಿಜ್ಞಾನಗಳ ಸಿದ್ಧಾಂತಕ್ಕೆ ಇದನ್ನು ಪಾಶ್ಚಿಮಾತ್ಯರು ನೀಡಿದ ಕೊಡುಗೆಯೆಂದು ಭಾವಿಸಬಹುದು. ಆಧುನಿಕ ಸಹಕಾರ ಆಂದೋಲನದ ತಾತ್ತ್ವಿಕ ತಳಹದಿ ಹಾಗೂ ಆದರ್ಶಗಳನ್ನು ಬ್ರಿಟನ್ನಿನ ಅಧ್ವರ್ಯುಗಳಾದ ರಾಬರ್ಟ್ ಓವೆನ್ (Robert owen),

ಡಾ.ವಿಲಿಯಂ ಕಿಂಗ್ (Dr.William king) ಮತ್ತು ರಾಡೇಲ್ (Rachdale) ಸ್ವೀಡನ್ನಿನ ಆಯಂಡರ್ಸ್ ಓರ್ನೆ(Anderse orne) ಹಾಗೂ ಫ್ರಾನ್ಸ್‌ನ ಚಾರ್ಲ್ಸ್‌ಗೈಡ್ (charles Gide) ಇವರುಗಳು ರೂಪಿಸಿದ್ದರು. ಭಾರತಕ್ಕೆ ವಿಶಿಷ್ಟವಾದ ಸಿದ್ಧಾಂತಗಳನ್ನು ಜರ್ಮನ್ ವಿದ್ವಾಂಸರಾದ ಫ್ರೆಡರಿಕ್ ವಿಲ್ ಹೆಲ್ಮ್ ರೈಫೆಸೈನ್ (Froderich wilhelm Reiffeisen) ಹಾಗೂ ಡೆಲಿಜೆಕ್‌ನ ಮೇಯರ್ ಆಗಿದ್ದ ಹೆರ್ ಷೂಲ್ಸ್ (Harr schulze) ಅವರುಗಳು ರೂಪಿಸಿದ್ದರು.

೧೮೯೫ರಲ್ಲಿ ಲಂಡನ್ ನಲ್ಲಿ ನಡೆದ ಅಂತಾರಾಷ್ಟ್ರೀಯ ಸಹಕಾರ ಕಾಂಗ್ರೆಸ್ ನಲ್ಲಿ ಅಂತಾರಾಷ್ಟ್ರೀಯ ಕೊ ಆಪರೇಟಿವ್ ಅಲಯನ್ಸ್ (ಐಸಿಎ)ಯನ್ನು ಸ್ಥಾಪಿಸಲಾಯಿತು. ಇದು ಸಹಕಾರ ತತ್ವಗಳನ್ನು ರಚಿಸಿತು. ಪ್ರೊ.ಡಿ.ಜಿ.ಕರ್ವೆಯವರು ಅಧ್ಯಕ್ಷರಾಗಿದ್ದ ಸಹಕಾರ ತತ್ತ್ವಗಳನ್ನು ಕುರಿತ ಐಸಿಎ ಆಯೋಗವು ಮಾಡಿದ ಶಿಫಾರಸುಗಳ ಆಧಾರದ ಮೇಲೆ ಈ ತತ್ವಗಳನ್ನು ರೂಪಿಸಲಾಗಿತ್ತು. ೧೯೬೬ರ ಸೆಪ್ಟೆಂಬರ್ (೫ ರಿಂದ ೮ನೇ ದಿನಾಂಕ)ನಲ್ಲಿ ವಿಯನ್ನಾದಲ್ಲಿ ನಡೆದ ಐಸಿಎದ ೨೩ನೇ ಕಾಂಗ್ರೆಸ್ ನಲ್ಲಿ ಈ ಮುಂದಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತ್ತು.

೧. ಸಹಕಾರ ಸಂಘದ ಸದಸ್ಯತ್ವವು ಸ್ವಯಂ ಪ್ರೇರಿತವಾಗಿರತಕ್ಕದ್ದು ಹಾಗೂ ಅದರ ಉಪಯೋಗವನ್ನು ಹೊಂದಬಯಸುವ ಹಾಗೂ ಸದಸ್ಯತ್ವದ ಹೊಣೆಗಾರಿಕೆಗಳನ್ನು ಒಪ್ಪಿಕೊಳ್ಳುವ ಎಲ್ಲ ವ್ಯಕ್ತಿಗಳಿಗೂ ಕೂಡ ಯಾವುದೇ ಸಾಮಾಜಿಕ, ರಾಜಕೀಯ, ವರ್ಣೀಯ ಅಥವಾ ಮತೀಯ ತಾರತಮ್ಯದ ಕೃತಕ ನಿರ್ಬಂಧವಿರದ ಮುಕ್ತ ಸದಸ್ಯತ್ವವಿರತಕ್ಕದ್ದು.

೨. ಸಹಕಾರ ಸಂಘಗಳು ಪ್ರಜಾಪ್ರಭುತ್ವ ಸಂಸ್ಥೆಗಳಾಗಿರುತ್ತವೆ. ಇವುಗಳ ಪ್ರಕಾರ್ಯಗಳನ್ನು ಸದಸ್ಯರು ಒಪ್ಪಿಕೊಳ್ಳುವ ರೀತಿಯಲ್ಲಿ ಚುನಾಯಿತರಾದ ಅಥವಾ ನಿಯೋಜಿತರಾದ ಹಾಗೂ ಜನರಿಗೆ ಉತ್ತರ ನೀಡುವ ಹೊಣೆಗಾರಿಕೆಯುಳ್ಳ ವ್ಯಕ್ತಿಗಳು ನಿರ್ವಹಿಸತಕ್ಕದ್ದು, ಪ್ರಾಥಮಿಕ ಸಹಕಾರ ಸಂಘಗಳ ಸದಸ್ಯರು ಮತದಾನ ಮತ್ತು ತಮ್ಮ ಸಹಕಾರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಭಾಗವಹಿಸಲು, ನಿರ್ಧಾರ ತೆಗೆದುಕೊಳ್ಳಲು ಸಮಾನ ಹಕ್ಕುಗಳನ್ನು(ಒಬ್ಬ ಸದಸ್ಯ-ಒಂದು ಮತ) ಹೊಂದಿರಬೇಕು. ಉಳಿದ ಸಹಕಾರ ಸಂಘಗಳಲ್ಲಿ ಆಡಳಿತ ನಿರ್ವಹಣೆಯನ್ನು ಪ್ರಭಾಪ್ರಭುತ್ವದ ಆಧಾರದ ಮೇಲೆ ಸೂಕ್ತ ರೀತಿಯಲ್ಲಿ ನಡೆಸತಕ್ಕುದ್ದು.

೩. ಷೇರು ಬಂಡವಾಳದ ಮೇಲೆ ಕಟ್ಟುನಿಟ್ಟಾಗಿ ಪರಿಮಿತ ಬಡ್ಡಿದರಗಳನ್ನು(ನಿಗದಿಪಡಿಸಿದ್ದರೆ) ಮಾತ್ರವೇ ವಿಧಿಸಬೇಕು.

೪. ಸಹಕಾರ ಸಂಘದ ಪರಿಣಾಮಕಾರಿ ಕಾರ್ಯ ನಿರ್ವಹಣೆಯ ಫಲವಾಗಿ ಲಾಭ ಅಥವಾ ಉಳಿತಾಯ ವುಂಟಾಗಿದ್ದಲ್ಲಿ ಆ ಹಣವು ಸದಸ್ಯರಿಗೇ ಸೇರತಕ್ಕದ್ದು ಹಾಗೂ ಅದನ್ನು ಇತರರಿಗೆ ಇಲ್ಲವಾಗಿಸಿ ಒಬ್ಬನೇ ಸದಸ್ಯ ಪಡೆದುಕೊಳ್ಳದಂತೆ ಸಮಾನವಾಗಿ ಹಂಚತಕ್ಕದ್ದು, ಒಟ್ಟಾರೆ ಇಂಥ ಮಾರ್ಗದರ್ಶಕ ಸೂತ್ರಗಳನ್ನು ಒದಗಿಸಿದ ಸಹಕಾರ ತತ್ತ್ವಗಳನ್ನು ಇನ್ನೊಮ್ಮೆ ಇಲ್ಲಿ ಗಮನಿಸಬಹುದು. ಅವುಗಳೆಂದರೆ :

೧. ಮುಕ್ತ ಸದಸ್ಯತ್ವ
೨. ಪ್ರಜಾಪ್ರಭುತ್ವ ನಿಯಂತ್ರಣ
೩. ಖರೀದಿಯ ಮೇಲಿನ ಲಾಭಾಂಶಗಳು
೪. ಬಂಡವಾಳದ ಮೇಲೆ ನಿಯಮಿತ ಬಡ್ಡಿ
೫. ರಾಜಕೀಯ ಹಾಗೂ ಮತೀಯ ತಾಟಸ್ಥ್ಯ
೬. ನಗದು ವ್ಯವಹಾರ
೭. ಶೈಕ್ಷಣಿಕ ಪ್ರಗತಿ
೮. ಚಾಲ್ತಿ ಮಾರುಕಟ್ಟೆ ದರಗಳಲ್ಲಿ ಮಾರಾಟ
೯. ಪ್ರಾಮಾಣಿಕ ವ್ಯಾಪಾರ
೧೦. ಸ್ವಯಂ ಪ್ರೇರಿತ ಸದಸ್ಯತ್ವ
೧೧. ನಿಷ್ಠೆ[೨೦]

ಎರಡನೇ ಮಹಾಯುದ್ಧದ ನಂತರ ಹಾಗೂ ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಕೂಡ ಸಹಕಾರ ಸಂಸ್ಥೆಗಳನ್ನು ಯುದ್ಧ ಪೀಡಿತ ದೇಶದ ನಿಯಮಿತ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸಬಲ್ಲ ಬಹೂಪಯೋಗಿ ಏಜೆನ್ಸಿಯೆಂದೇ ಪರಿಗಣಿಸಲಾಗಿತ್ತು. ಎಂದರೆ ಭಾರತ ಸ್ವಾತಂತ್ರ್ಯ ಪಡೆಯುವ ಹೊತ್ತಿಗೆ ಸಹಕಾರ ಆಂದೋಲನ ನಾಲ್ಕು ದಶಕಗಳಿಗೂ ಹೆಚ್ಚು ಹಳೆಯದಾಗಿತ್ತು. ಗಾಂಧೀಜಿಯವರು ಕಂಡ ರಾಮರಾಜ್ಯದ ಕನಸಿನಲ್ಲಿ "ಸಂಪತ್ತನ್ನು ಸಮುದಾಯದ ಅಭಿವೃದ್ಧಿಗಾಗಿ ಮಾತ್ರವೇ ಬಳಸಬೇಕು" ಸಮಾಜದಲ್ಲಿರುವ ಶ್ರೀಮಂತ ಹಾಗೂ ಬಡವ, ಬಲಶಾಲಿ ಹಾಗೂ ಬಲಹೀನ ಹಾಗೂ ಸಂಪನ್ನ ಹಾಗೂ ಪರಿತ್ಯಕ್ತ ಇವರೆಲ್ಲರೂ ಒಂದೇ ಕಡೆ ಸಂಘಟಿತರಾಗಿ ತಮ್ಮೆಲ್ಲ ಸಂಪನ್ಮೂಲಗಳನ್ನೂ ಕ್ರೋಢೀಕರಿಸಿ ಎಲ್ಲರಿಗೂ ಒಳಿತಾಗುವಂತೆ ಬಳಸಬೇಕು. ಸಹಕಾರ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. "ಏಕಾಂಗಿಯಾದ ಅಧಿಕಾರ ಹೀನನಾದ ಸಾಮಾನ್ಯ ವ್ಯಕ್ತಿಯೊಬ್ಬನು ಇತರರೊಂದಿಗೆ ಸಂಘಟಿತನಾಗಿ ನೈತಿಕ ಬೆಳವಣಿಗೆಗೆ ಹಾಗೂ ಪರಸ್ಪರ ಬೆಂಬಲದ ಮೂಲಕ ತನ್ನ ಸ್ವಂತ ಪರಿಶ್ರಮದಿಂದ ಶ್ರೀಮಂತ ಹಾಗೂ

ಅಧಿಕಾರಯುತ ವ್ಯಕ್ತಿಗಳಿಗೆ ಲಭ್ಯವಿರುವ ಪ್ರಯೋಜನಗಳನ್ನು ಪಡೆಯಬಹುದು ಮತ್ತು ಆ ಮೂಲಕ ತನ್ನ ಸ್ವಾಭಾವಿಕ ಸಾಮರ್ಥ್ಯದ ಸಂಪೂರ್ಣ ಗರಿಷ್ಠ ಮಟ್ಟದವರೆಗೂ ಬೆಳೆಯಬಹುದು.''[೨೦] ಗಾಂಧೀಜಿಯವರ 'ಸರ್ವೋದಯದ ತತ್ತ್ವವೂ ಇದೇ ತಳಹದಿಯನ್ನು ಆಧರಿಸಿತ್ತು. ಜಾತಿಮತ ವರ್ಣ, ಧರ್ಮ ಅಥವಾ ಸ್ತ್ರೀ-ಪುರುಷ ಭೇದವಿಲ್ಲದೆ ಎಲ್ಲ ಸದಸ್ಯರೂ ಸಮಾನ ಹಕ್ಕುಗಳನ್ನು ಹೊಂದಿರುವುದು ಹಾಗೂ ಸದಸ್ಯತ್ವದ ಜವಾಬ್ದಾರಿಗಳನ್ನು ಅರಿತು ಸೇವೆಗಳನ್ನು ಪಡೆಯುವುದು ಹಾಗೂ ನೀಡುವುದು. ಪ್ರಜಾಪ್ರಭುತ್ವ ಸಹಕಾರದ ಅತ್ಯಗತ್ಯ ಅಂಶವಾಗಿದ್ದು, ಸಹಕಾರ ಸಂಘಗಳು ಪ್ರಜಾಪ್ರಭುತ್ವದ ರಚನೆಗಳಾಗಿವೆ. ಇವು ಈ ಮುಂದಿನ ಪ್ರಾಥಮಿಕ ಪರಿಗಣನೆಗಳನ್ನು ಆಧರಿಸಿರಬೇಕು. ಅವುಗಳೆಂದರೆ :

೧. ಸಹಕಾರ ಆಂದೋಲನದಲ್ಲಿ ಅತ್ಯಂತ ಕೆಳಗಿನ ಸ್ತರದ ಸದಸ್ಯರೂ ಸೇರಿರಬೇಕು.

೨. ಸಹಕಾರ ಸಂಘವು ಸಮಾಜದಲ್ಲಿರುವ ಸಮಾನ ಮನಸ್ಕ ವ್ಯಕ್ತಿಗಳಿಂದ ರಚಿತವಾಗಬೇಕು.

೩. ಉನ್ನತ ಮಟ್ಟದ ಸಹಕಾರಸಂಸ್ಥೆಗಳು ಪ್ರಾಥಮಿಕ ಸಂಘಗಳ ಒಕ್ಕೂಟವಾಗಿರಬೇಕು.

೪. ಸ್ಥಳೀಯ ಮತ್ತು ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಹಕಾರಿಗಳನ್ನು ಕೆಳಮಟ್ಟದ ಸಹಕಾರ ಸಂಘಗಳ ಪ್ರತಿನಿಧಿಗಳಿಂದ ಆಯ್ಕೆ ಮಾಡಲಾಗುತ್ತದೆ.

೫. ಅತ್ಯಂತ ಕೆಳಗಿನ ಮಟ್ಟದಿಂದ ಪ್ರಜಾಪ್ರಭುತ್ವವನ್ನು ನಿರ್ಮಿಸಲಾಗುತ್ತದೆ. ಅದೇ ರೀತಿ ಸಹಕಾರದ ಪ್ರಜಾಪ್ರಭುತ್ವವನ್ನು ಸ್ಥಳೀಯ ಸಂಘದ ಸುತ್ತ ಉನ್ನತ ಮಟ್ಟದವರೆಗೆ ಸ್ಥಾಪಿಸಲಾಗುತ್ತದೆ.

೬. ಪ್ರತಿಯೊಂದು ಸಹಕಾರ ಸಂಘವೂ ಸ್ವತಂತ್ರವಾದ ಹಾಗೂ ಸ್ವಾಯತ್ತವಾದ ಸಂಸ್ಥೆಯಾಗಿರುತ್ತದೆ. ಆದರೆ ಅದು ಸಹಕಾರ ಆಂದೋಲನದಿಂದ ಬೇರ್ಪಟ್ಟ ಘಟಕವಾಗಿರುವುದಿಲ್ಲ.

೭. "ಆರ್ಥಿಕ ಸಮಗ್ರತೆಯು ಸಹಕಾರ ಪ್ರಜಾಪ್ರಭುತ್ವವನ್ನು ಬಲಪಡಿಸಲು ಅಥವಾ ದುರ್ಬಲಗೊಳಿಸಲೂ ಕೂಡ ಸಾಧನವಾಗಬಹುದು."[೨೧]

೮. ಬೆಳವಣಿಗೆಯ ತತ್ತ್ವಗಳನ್ನು ಪರಿಪಾಲಿಸುವಲ್ಲಿ ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟಗಳಲ್ಲಿನ ಸಹಕಾರಿಗಳ ಸಹಕಾರವೇ ನಿರ್ಣಾಯವಾಗುತ್ತದೆ.[೨೨]

ಭಾರತದ ಸಂವಿಧಾನದ ನಿರ್ದೇಶಕ ತತ್ತ್ವಗಳು

ಸಹಕಾರ ಯೋಜನಾ ಸಮಿತಿಯು(c-operative planning committee) ಸಹಕಾರ ಆಂದೋಲನ ಎಲ್ಲ ಅಂಶಗಳನ್ನು ಪರಿಶೀಲಿಸಿ ಅದರ ಮುಂದಿನ ಪ್ರಗತಿಯ ಬಗ್ಗೆ ಯೋಜನೆಯನ್ನು ಮೊಟ್ಟ ಮೊದಲ

ಬಾರಿಗೆ ರೂಪಿಸಿದಾಗ ಎಂದರೆ ೧೯೪೫ರಲ್ಲಿ ಭಾರತದ ಸಹಕಾರ ಆಂದೋಲನದ ಆಧುನಿಕ ಬೆಳವಣಿಗೆಗಳ ನೈಜ ಇತಿಹಾಸ ಪ್ರಾರಂಭವಾಯಿತೆನ್ನಬಹುದು.[೨೩] ಸ್ವತಂತ್ರ ಭಾರತ ೧೯೫೦ರ ಜನವರಿ ೨೬ರಂದು ತನ್ನದೇ ಆದ ಸಂವಿಧಾನವನ್ನು ಅಳವಡಿಸಿಕೊಂಡಿತು. ಭಾರತದ ಸಂವಿಧಾನದ ಭಾಗ-೩ ಮೂಲಭೂತಹಕ್ಕುಗಳು ಹಾಗೂ ಭಾಗ-೪ "ರಾಜ್ಯನೀತಿಯ ನಿರ್ದೇಶಕ ತತ್ವ"ಗಳಲ್ಲಿ ಹೀಗೆ ಹೇಳಲಾಗಿದೆ.[೨೪]

ಭಾರತದ ಸಂವಿಧಾನದ ಭಾಗ-೩ "ಮೂಲಭೂತ ಹಕ್ಕು"ಗಳಲ್ಲಿ ಸಮಾನತೆಯ ಹಕ್ಕನ್ನು ನೀಡಲಾಗಿದೆ. ಅನುಚ್ಛೇದ ೧೪ - 'ಕಾನೂನಿನ ಮುಂದೆ ಸಮಾನತೆ' ಭಾರತದ ರಾಜ್ಯಕ್ಷೇತ್ರದಲ್ಲಿ ಯಾರೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆಯನ್ನು ಅಥವಾ ಕಾನೂನುಗಳಿಂದ ಸಮಾನರಕ್ಷಣೆಯನ್ನು ರಾಜ್ಯವು ನಿರಾಕರಿಸತಕ್ಕದಲ್ಲ.

ಅನುಚ್ಛೇದ ೧೫ - ಧರ್ಮ, ಮೂಲವಂಶ, ಜಾತಿ, ಲಿಂಗ ಅಥವಾ ಜನ್ಮಸ್ಥಳದ ಆಧಾರಗಳ ಮೇಲೆ ತಾರತಮ್ಯದ ನಿಷೇಧ

೧. ರಾಜ್ಯವು ಯಾರೇ ನಾಗರಿಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಅವುಗಳಲ್ಲಿ ಯಾವುದೇ ಒಂದರ ಅಧಾರದ ಮೇಲೆ ಮಾತ್ರವೇ ಯಾವುದೇ ತಾರತಮ್ಯವನ್ನು ಮಾಡತಕ್ಕುದಲ್ಲ.

೩೮ ಜನತೆಯ ಕಲ್ಯಾಣೋನ್ನತಿಗಾಗಿ ರಾಜ್ಯವು ಸಾಮಾಜಿಕ ವ್ಯವಸ್ಥೆಯನ್ನು ಸುನಿಶ್ಚಿತಗೊಳಿಸುವುದು

೧. (೧. ರಾಜ್ಯವು ರಾಷ್ಟ್ರೀಯ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವು ವ್ಯಾಪ್ತವಾಗಿರುವ ಸಾಮಾಜಿಕ ವ್ಯವಸ್ಥೆಯನ್ನು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಸುನಿಶ್ಚಿತಗೊಳಿಸುವ ಮತ್ತು ಸಂರಕ್ಷಣೆ ಮಾಡುವ ಮೂಲಕ ಜನತೆಯ ಕಲ್ಯಾಣವನ್ನು ಉನ್ನತಿಗೊಳಿಸಲು ಪ್ರಯತ್ನಿಸತಕ್ಕದ್ದು.

೨. (೨. ರಾಜ್ಯವು ವ್ಯಕ್ತಿ ವ್ಯಕ್ತಿಗಳಲ್ಲಿ ಮಾತ್ರವಲ್ಲದೆ ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿರುವ ಜನರ ಗುಂಪುಗಳಲ್ಲಿ ಸ್ಥಾನಮಾನ, ಸೌಲಭ್ಯ ಮತ್ತು ಅವಕಾಶಗಳಲ್ಲಿರುವ ಅಸಮಾನತೆಗಳನ್ನು ತೆಗೆದು ಹಾಕಲು ಪ್ರಯತ್ನಿಸತಕ್ಕದು ಮತ್ತು ವಿಶೇಷವಾಗಿ ಆದಾಯದಲ್ಲಿನ ಅಸಮಾನತೆಗಳನ್ನು ಕಡಿಮೆ ಮಾಡಲು ಪ್ರಯತ್ನಿಸತಕ್ಕದು)

೩೯. ರಾಜ್ಯವು ಅನುಸರಿಸಬೇಕಾದ ಕೆಲವು ತತ್ತ್ವಗಳು

ರಾಜ್ಯವು ವಿಶೇಷವಾಗಿ, ಕೆಳಕಂಡವುಗಳನ್ನು ಸುನಿಶ್ಚಿತಗೊಳಿಸುವಂಥ ದಿಸೆಯಲ್ಲಿ ತನ್ನ ನೀತಿಯನ್ನು ನಿರ್ದೇಶಿಸತಕ್ಕದು

೧. ನಾಗರಿಕರು ಅವರು ಪುರುಷರೇ ಆಗಿರಲಿ, ಸ್ತ್ರೀಯರೇ ಆಗಿರಲಿ ಸಮಾನವಾಗಿ ಜೀವನ ನಿರ್ವಹಿಸುವುದಕ್ಕೆ ಸಾಕಷ್ಟು ಸಾಧನಗಳನ್ನು ಹೊಂದಲು ಹಕ್ಕನ್ನು ಹೊಂದಿರುವುದು;

೨. ಜನ ಸಮುದಾಯದ ಭೌತಿಕ ಸಾಧನ ಸಂಪತ್ತಿಗಳ ಒಡೆತನ ಮತ್ತು ನಿಯಂತ್ರಣವು ಸಾಮೂಹಿಕ ಹಿತಸಾಧನೆಗೆ ಅತ್ಯುತ್ತಮ ರೀತಿಯಲ್ಲಿ ಹಂಚಿಕೆಯಾಗುವಂತೆ ಹಂಚಿಕೆಯಾಗುವುದು;

೩. ಸಕಲರ ಹಿತಸಾಧನೆಗೆ ಬಾಧಕವಾಗುವ ರೀತಿಯಲ್ಲಿ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಕ್ರೇಂದ್ರೀಕೃತವಾಗದಂತೆ ಆರ್ಥಿಕ ವ್ಯವಸ್ಥೆಯನ್ನು ನಿರ್ವಹಿಸುವುದು;

೪. ಪುರುಷರಿಗೆ ಮತ್ತು ಸ್ತ್ರೀಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರೆಯುವಂತೆ ಮಾಡುವುದು.

೫. ಪುರುಷ ಮತ್ತು ಮಹಿಳಾ ಕೆಲಸಗಾರರ ಆರೋಗ್ಯ ಮತ್ತು ಶಕ್ತಿ ಹಾಗೂ ಮಕ್ಕಳ ಎಳೆಯ ವಯಸ್ಸು ಇವುಗಳನ್ನು ದುರುಪಯೋಗಪಡಿಸಿಕೊಳ್ಳದಿರುವುದು ಮತ್ತು ಆರ್ಥಿಕ ಅವಶ್ಯಕತೆಯಿಂದಾಗಿ ನಾಗರಿಕರು ತಮ್ಮ ವಯಸ್ಸಿಗೆ ಅಥವಾ ಶಕ್ತಿಗೆ ತಕ್ಕುದಲ್ಲದ ಕಸಬುಗಳಲ್ಲಿ ತೊಡಗಲು ಅವರನ್ನು ಒತ್ತಾಯಿಸದೆ ಇರುವುದು.

೬. ಆರೋಗ್ಯಕರವಾದ ರೀತಿಯಲ್ಲಿ ಮತ್ತು ಸ್ವಾತಂತ್ರ್ಯ ಹಾಗೂ ಘನತೆಯ ವಾತಾರವರಣದಲ್ಲಿ ಅಭಿವೃದ್ಧಿ ಹೊಂದಲು ಮಕ್ಕಳಿಗೆ ಅವಕಾಶ ಮತ್ತು ಅನುಕೂಲತೆಗಳು ದೊರೆಯುವುದು ಹಾಗೂ ಬಾಲಕರಿಗೆ ಮತ್ತು ಯುವಕರಿಗೆ ಶೋಷಣೆಯ ಮತ್ತು ನೈತಿಕ ಹಾಗೂ ದೈಹಿಕ ಪತನದ ವಿರುದ್ಧ ಸಂರಕ್ಷಣೆ ಬದಗಿಸುವುದು) (೩೯ಎ ಸಮಾನ ನ್ಯಾಯ ಮತ್ತು ಉಚಿತ ಕಾನೂನು ನೆರವು)

ರಾಜ್ಯವು ಸಮಾನ ಅವಕಾಶದ ಆಧಾರದ ಮೇಲೆ ನ್ಯಾಯವು ಲಭಿಸುವಂತೆ ಕಾನೂನು ವ್ಯವಸ್ಥೆಯ ನಿರ್ವಹಣೆಯನ್ನು ಸುನಿಶ್ಚಿತಗೊಳಿಸತಕ್ಕದು ಮತ್ತು ವಿಶೇಷವಾಗಿ ಆರ್ಥಿಕ ಅಥವಾ ಇತರ ಅಸಮರ್ಥತೆಗಳ ಕಾರಣದಿಂದಾಗಿ ಯಾವನೇ ನಾಗರಿಕನಿಗೆ ನ್ಯಾಯವು ದೊರೆಯುವ ಅವಕಾಶಗಳು ತಪ್ಪದಿರುವುದನ್ನು ಸುನಿಶ್ಚಿತಗೊಳಿಸಲು ಸೂಕ್ತ ಕಾನೂನು ರಚನೆಯ ಮೂಲಕ ಅಥವಾ ಯೋಜನೆಗಳ ಮೂಲಕ ಅಥವಾ ಇತರ ಯಾವುದೇ ರೀತಿಯಲ್ಲಿ ಉಚಿತ ಕಾನೂನು ನೆರವು ಒದಗಿಸತಕ್ಕುದು)

ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಜನರ ಆರ್ಥಿಕ ಕಾರ್ಯಚಟುವಟಿಕೆಗಳಲ್ಲಿ ಸಹಕಾರ ಸಂಘಗಳ ಆದ್ಯತೆಯನ್ನು ಅನಿವಾರ್ಯತೆಯನ್ನು ಒತ್ತಿ ಹೇಳಲಾಗಿತ್ತು.[೨೫] ೧೯೫೪ರ ಡಿಸೆಂಬರ್ ನಲ್ಲಿ ಸಂಸತ್ತು ಸಾಮಾಜಿಕ, ಆರ್ಥಿಕ ಕಾರ್ಯನೀತಿಯ ಧ್ಯೇಯವಾಗಿ ಸಾಮಾಜಿಕ ಪದ್ಧತಿಯ ಸಮಾಜವನ್ನು ಅಳವಡಿಸಿಕೊಂಡಾಗ ಸಹಕಾರಕ್ಕೆ ಹೊಸದೊಂದು ಆಯಾಮ ದೊರೆಯಿತು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ (೧೯೫೬-೬೧) ಸಹಕಾರಕ್ಕೆ ಅತಿಮುಖ್ಯ ಸ್ಥಾನ ನೀಡಲಾಯಿತು. ಎಂದರೆ ಸಹಕಾರದ

ವಿಸ್ತರಣೆಗೆ ಬಲವಾದ ಅಭಿಪ್ರಾಯ ಒದಗಿಸಲಾಯಿತು. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದಿನ ಯೋಜನೆಯ ಉದ್ದೇಶವನ್ನು ಮುಂದುವರಿಸಿ ಹೀಗೆ ಹೇಳಲಾಗಿತ್ತು.

ಸಮಾಜವಾದ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಹೊಣೆಯಾಗುವ ಯೋಜಿತ ಆರ್ಥಿಕ ವ್ಯವಸ್ಥೆಯಲ್ಲಿ, ಸಹಕಾರವು ಆರ್ಥಿಕತೆಯ ವಿವಿಧ ಶಾಖೆಗಳಲ್ಲಿ ಪ್ರಗತಿದಾಯಕ ತಾತ್ತ್ವಿಕ ತಳಹದಿಯಾಗಬೇಕು. ಸಹಕಾರ ತತ್ತ್ವವು ಸಾಮಾನ್ಯ ವ್ಯಕ್ತಿಗೆ ಸ್ವಾತಂತ್ರ್ಯ ಹಾಗೂ ಅವಕಾಶಗಳೆರಡನ್ನೂ ಮೇಳೈಸಬಹುದಾದ ಅಂಶವನ್ನು ಒಳಗೊಂಡಿದೆ. ಇದರಿಂದ ಆತನಿಗೆ ಭಾರಿ ಪ್ರಮಾಣದ ನಿರ್ವಹಣೆ ಮತ್ತು ಸಂಘಟನೆಯ ಸೌಲಭ್ಯ ದೊರೆಯುವುದರೊಂದಿಗೆ ಸಮುದಾಯದ ಸದ್ಭಾವನೆ ಹಾಗೂ ಬೆಂಬಲವೂ ದೊರೆಯುತ್ತದೆ. ಆದ್ದರಿಂದ, ರೈತ, ಕಾರ್ಮಿಕ ಹಾಗೂ ಗ್ರಾಹಕರ ಅವಶ್ಯಕತೆಗಳ ಬಗ್ಗೆ ವಿಶೇಷ ಒತ್ತು ನೀಡುತ್ತ ತ್ವರಿತಗತಿಯಿಂದ ಬೆಳೆಯುತ್ತಿರುವ ಸಹಕಾರ ವಲಯವು ಅತ್ಯಂತ ಪ್ರಮುಖ ವ್ಯವಸ್ಥೆಯಾಗುತ್ತಿದೆ. ಇದರಿಂದ ಸಾಮಾಜಿಕ ಸಮತೋಲನ, ವಿಪುಲ ಉದ್ಯೋಗಾವಕಾಶಗಳು ಹಾಗೂ ತತ್ಪರಿಣಾಮವಾಗಿ ಆರ್ಥಿಕಾಭಿವೃದ್ಧಿಯಾಗುತ್ತದೆ. ಇಡೀ ಸಮುದಾಯಕ್ಕಾಗಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವ ಬೆಳೆಯುತ್ತಿರುವ ಸಾರ್ವಜನಿಕ ವಲಯ ಹಾಗೂ ಖಾಸಗಿ ವಲಯಗಳ ಮೇಲೆ ಸಹಕಾರದ ಪ್ರಭಾವ ಅಪರಿಮಿತವಾಗಿದೆ. ಇಂಥ ಪ್ರಭಾವದಿಂದ ಸಹಕಾರದ ಮಾದರಿಯಲ್ಲಿ ನಿರ್ದಿಷ್ಟ ಸಂಸ್ಥೆ ಕಾರ್ಯನಿರ್ವಹಣೆ ಮಾಡಿದಲ್ಲಿ ಸಾಮಾಜಿಕ ಸಂರಚನೆ ಹಾಗೂ ರಾಷ್ಟ್ರೀಯ ಆರ್ಥಿಕ ನೀತಿಗೆ ಸಮತೋಲನ, ನಿರ್ದಿಷ್ಟ ಗುರಿ ಹಾಗೂ ಮೌಲ್ಯ ಪ್ರಜ್ಞೆಯುಂಟಾಗುವುದರಲ್ಲಿ ಸಂದೇಹವಿಲ್ಲ.

ಸಹಕಾರ ಸಾಲ ಸಂಘಗಳ ಅಧಿನಿಯಮ, ೧೯೦೪ರಲ್ಲಿ ಪ್ರಾಥಮಿಕ ಹಂತದಲ್ಲಿ ಗ್ರಾಮೀಣ ಮತ್ತು ನಗರ ಸಾಲ ಸಹಕಾರ ಸಂಘಗಳನ್ನು ಏರ್ಪಡಿಸಲು ಅವಕಾಶ ಕಲ್ಪಿಸುವ ಮೂಲಕ ಭಾರತದಲ್ಲಿ ಸಹಕಾರ ಸಂರಚನೆಗೆ ಬುನಾದಿಯನ್ನು ಹಾಕಲಾಗಿತ್ತು. ಮುಂದೆ ಸಹಕಾರ ಸಾಲಸಂಘಗಳ ಅಧಿನಿಯಮ, ೧೯೧೨ನ್ನು ಜಾರಿಯಲ್ಲಿ ತಂದ ಹಂತದಲ್ಲಿ ಸಹಕಾರ ಆಂದೋಲನದ ಎರಡು ಘಟಕಗಳು ಎಂದರೆ

೧. ಸಹಕಾರ ಸಂಘಗಳ ರಿಜಿಸ್ಟ್ರಾರರು ಮುಖ್ಯಸ್ಥರಾಗಿರುವ ಅಧಿಕೃತ ವಿಭಾಗವೊಂದು, ಮತ್ತು

೨. ಸಹಕಾರಿಗಳು ಮತ್ತು ಅವರ ಯೂನಿಯನ್ ಹಾಗೂ ಫೆಡರೇಷನ್‌ಗಳಿರುವ ಅಧಿಕಾರೇತರ ವಿಭಾಗಗಳು ಎದ್ದುಕಾಣುವಂತಿದ್ದವು.

೧೯೦೪ರ ಸಹಕಾರ ಸಾಲಸಂಘಗಳ ಅಧಿನಿಯಮದಲ್ಲಿ "ಒಂದೇ ಗ್ರಾಮ ಅಥವಾ ಪಟ್ಟಣದಲ್ಲಿ ವಾಸಮಾಡುತ್ತಿರುವ ಅಥವಾ ಒಂದೇ ವರ್ಗ ಅಥವಾ ಜಾತಿಗೆ ಸೇರಿದ ಯಾರೇ ಹತ್ತು ಜನ ವ್ಯಕ್ತಿಗಳು ತಮ್ಮ ಸದಸ್ಯರ ನೆರವಿಗಾಗಿ ಸಾಲಸೌಲಭ್ಯ ಹಾಗೂ ಸ್ವಯಂ ಸಹಾಯಕ್ಕೆ ಉತ್ತೇಜನ ನೀಡಲು ಸಹಕಾರ

ಸಂಘವನ್ನು ನೋಂದಾಯಿಸಿಕೊಳ್ಳಬಹುದು" ಎಂಬುದಾಗಿ ಸೂಚಿಸಲಾಗಿತ್ತು.[೨೬] ಹೀಗೆ ವ್ಯಕ್ತಿಗಳಿಂದ ಆದ ಸಮಾಜದಲ್ಲಿ ವ್ಯಕ್ತಿಯೇ ಬೆಳವಣಿಗೆಯ ಕೇಂದ್ರ ಬಿಂದುವಾಗುತ್ತಾನೆ.

ಭಾರತದಲ್ಲಿ ಸಹಕಾರ ಆಂದೋಲನವು ವಿಕೇಂದ್ರೀಕೃತ ಪದ್ಧತಿಯಲ್ಲಿ ರೂಪಿತವಾಗಿದ್ದು ಪಿರಮಿಡ್ ರಚನೆಯಂತೆ ಬೆಳೆದುಬಂದಿದೆ. ಮೂಲದಲ್ಲಿನ ಪ್ರಾಥಮಿಕ ಸಹಕಾರ ಸಂಘಗಳು ಜಿಲ್ಲಾಮಟ್ಟದಲ್ಲಿ ಸೆಂಟಲ್ ಯೂನಿಯನ್ ಗಳಾಗಿ ವಿಭಜಿತವಾಗಿ ಜಿಲ್ಲಾಮಟ್ಟದ ಸಂಸ್ಥೆಗಳು ರಾಜ್ಯಮಟ್ಟದಲ್ಲಿ ಮತ್ತೆ ವಿಭಜಿತವಾಗಿರುತ್ತವೆ. ತರುವಾಯ ಕಾರ್ಯ ನಿರ್ವಾಹಕ ಅಪೆಕ್ಸ್ ಸಹಕಾರಿಗಳು ರಾಷ್ಟ್ರೀಯ ಫೆಡರೇಷನ್ ಗಳಾಗಿ ವಿಭಜಿತವಾಗುತ್ತವೆ. ಮತ್ತೆ ರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ರಾಷ್ಟ್ರೀಯ ಫೆಡರೇಷನ್ನುಗಳು ನ್ಯಾಷನಲ್ ಕೊಆಪರೇಟಿವ್ ಯೂನಿಯನ್ ಆಫ್ ಇಂಡಿಯಾ ಎಂಬ ಸಂಸ್ಥೆಯೊಡನೆ ಸಂಯೋಜಿತವಾಗಿರುತ್ತವೆ. ಇದರ ಸದಸ್ಯತ್ವವು ಪ್ರಾದೇಶಿಕ, ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸ.ಸಂಘಗಳಿಗೆ ಮುಕ್ತವಾಗಿರುತ್ತದೆ. ಮೇಲೆ ಹೇಳಲಾದ ಸಾಮಾನ್ಯ ಮಾದರಿಯು ವಿವಿಧ ವಲಯಗಳಲ್ಲಿ ವ್ಯತ್ಯಾಸಗಳನ್ನು ಹೊಂದಿರುವ ಸಾಧ್ಯತೆ ಇರುತ್ತದೆ.

ಗ್ರಾಮಮಟ್ಟದಲ್ಲಿ ಕಾರ್ಯನಿರ್ವಹಿಸುವ ಕೃಷಿ ಸಾಲ ಮತ್ತು ಸೇವಾ ಸಹಕಾರಸಂಘಗಳು ಮೂರು ಹಂತದ(Three Tier) ಸಹಕಾರ ಬ್ಯಾಂಕಿಂಗ್ ರಚನೆಯ ಅವಿಭಾಜ್ಯ ಅಂಗವಾಗಿರುತ್ತವೆ. ಈ ಸೇವಾ ಸಹಕಾರ ಸಂಘಗಳು, ಸಹಕಾರ ಮಾರುಕಟ್ಟೆ ಸಹಕಾರ ಸಂಘಗಳು, ಸಂಸ್ಕರಣ(processing) ಸಹಕಾರ ಸಂಘಗಳು, ಸಗಟು ಗ್ರಾಹಕ ಮಳಿಗೆಗಳು ಹಾಗೂ ಸಹಕಾರ ಸಕ್ಕರೆ ಕಾರ್ಖಾನೆಗಳು, ಸಹಕಾರ ನೇಕಾರ ಗಿರಣಿ(Spinning rills) ಮುಂತಾದುವುಗಳೊಂದಿಗೆ ಸಂಪರ್ಕ ಹೊಂದಿರುತ್ತವೆ.

ಒಟ್ಟಿನಲ್ಲಿ ಗಾಂಧೀಜಿಯವರು ಬಯಸಿದ್ದ ಸಹಕಾರ ಸಂರಚನೆಯ ಮಾದರಿಯು ಅವರು ಹಾಗೂ ಜವಾಹರಲಾಲ್ ನೆಹರೂರವರು ೧೯೪೫ರ ಅಕ್ಟೋಬರ್ ತಿಂಗಳಲ್ಲಿ ಜಂಟಿಯಾಗಿ ಈ ಮುಂದಿನ ರೀತಿಯಲ್ಲಿ ಇರಬೇಕೆಂದು ಸೂಚಿಸಿದ್ದರು.

"ಮಾನವ ಏಕಾಂಗಿಯಾಗಿ ಬದುಕಲೆಂದು ಹುಟ್ಟಿ ಬಂದಿಲ್ಲ, ಅವನು ಸಮಾಜ ಜೀವಿಯಾಗಿದ್ದು, ಸ್ವತಂತ್ರವಾಗಿ ಪರಸ್ಪರಾವಲಂಬಿತನಾಗಿದ್ದಾನೆ. ಯಾರೇ ವ್ಯಕ್ತಿ ಮತ್ತೊಬ್ಬನ ಬೆನ್ನೇರಿ ಸವಾರಿ ಮಾಡಲು ಸಾಧ್ಯವಿಲ್ಲ ಅಥವಾ ಹಾಗೆ ಮಾಡಬಾರದು. ಅಂಥ ಜೀವನಕ್ಕೆ ಅಗತ್ಯವಾದ ಪರಿಸ್ಥಿತಿಗಳ ನಿರ್ಮಾಣ ಮಾಡಲು ನಾವು ಪ್ರಯತ್ನಿಸುವುದಾದರೆ, ಅದು ಒಂದು ಗ್ರಾಮ ಅಥವಾ ಸುಲಭವಾಗಿ ನಿರ್ವಹಿಸಬಹುದಾದ ಜನರ ಸಣ್ಣಗುಂಪಾಗಿದ್ದು ಆ ಜನರು ಮಾದರಿಯೆನ್ನುವಂತೆ ಒಂದೇ ಘಟಕವಾಗಿ (ತಮ್ಮ ಅತಿಮುಖ್ಯ ಅಗತ್ಯತೆಗಳ ವಿಷಯದಲ್ಲಿ) ಸ್ವಯಂ ಪೂರ್ಣರಾಗಿ ಪರಸ್ಪರ ಸಹಕಾರ ಹಾಗೂ ಪರಸ್ಪರಾವಲಂಬನೆಯ ಬಂಧನದಲ್ಲಿ ಬದ್ಧರಾಗಿರುವ ಸಮಾಜದ ಘಟಕವಾಗಿರುತ್ತಾರೆ ಎಂದು ನಿರ್ಧರಿಸಬಹುದು."[೨೭]

ಗಾಂಧೀಜಿಯವರು ಸಹಕಾರ ತತ್ತ್ವವನ್ನು ಆಧ್ಯಾತ್ಮ ದೃಷ್ಟಿಯಿಂದಲೂ ವಿಶ್ಲೇಷಿಸಿದ್ದರು.[೨೮] ಈ ಶೋಪನಿಷತ್ತಿನ ಮೊದಲನೇ ಶ್ಲೋಕವನ್ನು ಅವರು ಸರ್ವಸಮಾನ ಸಮಾಜದ ಒಳಿತಿಗಾಗಿ ಸದಾ ಉದಾಹರಿಸುತ್ತಿದ್ದರು. ವ್ಯಕ್ತಿಯ ಹಾಗೂ ಎಲ್ಲರ ಜೀವನಗಳು ಸಂಪೂರ್ಣ ಸಮರ್ಪಿತವಾಗಬೇಕಾದರೆ ನಮ್ಮ ಸಹಜೀವಿಗಳ ಸತತ ಸೇವೆಯಲ್ಲಿ ತೊಡಗಿರಬೇಕು.[೨೯]

ಈ ಎಲ್ಲ ಅಂಶಗಳನ್ನು ಮನನ ಮಾಡಿದಾಗ ನಮ್ಮ ದೇಶದಲ್ಲಿ ನಮ್ಮ ಸಮಾಜದಲ್ಲಿ ಉಂಟಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಸಾಮಾಜಿಕ, ಆರ್ಥಿಕ ಪರಿವರ್ತನೆ ಅತ್ಯಗತ್ಯ. ಅದನ್ನು ಸಫಲಗೊಳಿಸಲು ಅತ್ಯಂತ ಸೂಕ್ತವಾದ ಹಾಗೂ ಪ್ರಬಲವಾದ ವ್ಯವಸ್ಥೆಯೆಂದರೆ ಸಹಕಾರ ವ್ಯವಸ್ಥೆ. ಸಹಕಾರ ಸಂಸ್ಥೆಗಳ ಮೂಲಕವಾಗಿ ಸಾಮಾನ್ಯ ವ್ಯಕ್ತಿಗಳೂ ಕೂಡ ಅಂಥ ಯಶಸ್ವಿ ಸಾಮಾಜಿಕ, ಆರ್ಥಿಕ ಪರಿವರ್ತನೆಯಲ್ಲಿ ಪಾಲ್ಗೊಳ್ಳುತ್ತಾರೆ.

ಸಹಕಾರ ಸಂಸ್ಥೆಗಳ ಆವಿರ್ಭಾವ

೧೯೦೧ರ ಬರಗಾಲ ವಿಶ್ಲೇಷಣೆ ಸಮಿತಿಯು ಸಾಲ ಸಂಘಗಳನ್ನು ರಚಿಸುವ ಬಗ್ಗೆ ಬಲವಾಗಿ ಶಿಫಾರಸು ಮಾಡಿತ್ತು. ತದನುಸಾರವಾಗಿ, ೧೯೦೪ರ ಸಹಕಾರ ಸಂಘಗಳ ಅಧಿನಿಯಮವನ್ನು ಜಾರಿಯಲ್ಲಿ ತರಲಾಯಿತು. ಈ ಅಧಿನಿಯಮದ ಅಡಿಯಲ್ಲಿ ಗ್ರಾಮೀಣ ಹಾಗೂ ನಗರ ಸಹಕಾರ ಸಂಘಗಳನ್ನು ಸ್ಥಾಪಿಸಲಾಯಿತು. ಗ್ರಾಮೀಣ ಸಹಕಾರ ಸಂಘಗಳ ರಚನೆಯಲ್ಲಿ ಸಾಮಾನ್ಯವಾಗಿ ರೈಫಿಸೆನ್ (RAIF FEISEN) ಹಾಗೂ ನಗರ ಸ.ಸಂ.ಗಳ ರಚನೆಯಲ್ಲಿ ಷೊತ್ಸೆ-ಡೆಲಿತ್ಸೆ (SCHULZ-DELITZE) (ಇವರಿಬ್ಬರೂ ಜರ್ಮನಿಯ ಸಹಕಾರ ಪ್ರವರ್ತಕರು) ಇವರ ತತ್ತ್ವಗಳನ್ನು ಅನುಸರಿಸಲಾಗಿತ್ತು.

ಸಹಕಾರಸಂಘಗಳ ವ್ಯವಸ್ಥೆ

ಭಾರತದಲ್ಲಿ ಮೂರುಹಂತಗಳ ಸಹಕಾರಿ ವ್ಯವಸ್ಥೆಯಿದೆ. ಅತ್ಯಂತ ಕೆಳಗಿನ ಹಂತದಲ್ಲಿ ಎಂದರೆ ಗ್ರಾಮಮಟ್ಟದಲ್ಲಿ ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು(primary Agricultural cradit societies at villege level) ಇವೆ. ಎರಡನೇ ಹಂತ ಎಂದರೆ ಜಿಲ್ಲಾ ಮಟ್ಟದಲ್ಲಿ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಗಳಿವೆ.(District cantral c-operative Banks) ಮೂರನೆಯ ಹಾಗೂ ಉನ್ನತ ಹಂತದಲ್ಲಿ ಎಂದರೆ ರಾಜ್ಯಮಟ್ಟದಲ್ಲಿ ರಾಜ್ಯ ಸಹಕಾರ ಬ್ಯಾಂಕುಗಳು (State co-operative banks)ಇವೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಎರಡು ಬಗೆಗಳಿವೆ.

೧. ಸಹಕಾರ ಬ್ಯಾಂಕಿಂಗ್ ಯೂನಿಯನ್ (co-operative Banking union) ಹಾಗೂ
೨. ಮಿಶ್ರ ಕೇಂದ್ರ ಸಹಕಾರ ಬ್ಯಾಂಕುಗಳು(mixed central co-operative Banks)

ಮೊದಲನೇ ವರ್ಗದ ಬ್ಯಾಂಕುಗಳಲ್ಲಿ ಕೇವಲ ಸಹಕಾರ ಸಂಘಗಳಿಗೆ ಮಾತ್ರವೇ ಸದಸ್ಯತ್ವಕ್ಕೆ ಅವಕಾಶವಿದೆ. ಆದರೆ ಎರಡನೇ ವರ್ಗದ ಬ್ಯಾಂಕುಗಳಲ್ಲಿ ವೈಯಕ್ತಿಕವಾಗಿ ಹಾಗೂ ಸಹಕಾರ ಸಂಘಗಳು ಈ ಉಭಯರಿಗೂ ಸದಸ್ಯತ್ವಕ್ಕೆ ಅವಕಾಶವಿದೆ. ಆದ್ದರಿಂದ, ಈಗ ನಮ್ಮ ದೇಶದಲ್ಲಿ ವಿವಿಧ ಗಾತ್ರದ, ಪ್ರಕಾರ್ಯಗಳ ಸಹಕಾರ ಸಂಘಗಳ ಜಾಲವಿದ್ದು ಅವು ವಿವಿಧ ಬಗೆಯಿಂದ ಯಶಸ್ವಿಗಳಾಗಿವೆ. ಪ್ರಾರಂಭದಲ್ಲಿ, ರೈತರು ಕೃಷಿಸಾಲನೆರವಿಗೆ ಯಾವುದೇ ಸಾಂಸ್ಥಿಕ ಏರ್ಪಾಟುಗಳಿಲ್ಲದ್ದರಿಂದ ಖಾಸಗಿ ಲೇವಾದೇವಿಗಾರರ ಬಳಿ ಹೋಗಿ ಹಣಕಾಸು ನೆರವು ಪಡೆಯಬೇಕಾಗಿತ್ತು. ಇಂಥ ರೈತರ ಸಾಲ ಅವಶ್ಯಕತೆಗಳ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರವು ಸಹಕಾರಸಂಘಗಳನ್ನು ಏಜೆನ್ಸಿಗಳಂತೆ ಪರಿಗಣಿಸಿ ಮೇಲ್ವಿಚಾರಣೆ ನಡೆಸುತ್ತಿತ್ತು. ಕ್ರಮೇಣ ಸಹಕಾರ ಸಂಘದ ಸೌಲಭ್ಯಗಳನ್ನು ಸಮುದಾಯದ ಕೃಷಿಯೇತರ ವರ್ಗಗಳು ಎಂದರೆ ಕುಶಲಕರ್ಮಿಗಳು, ಕರಕುಶಲ ವೃತ್ತಿಗಾರರು, ಸಣ್ಣಪುಟ್ಟ ಅಂಗಡಿ ಮಾಲೀಕರು ಮುಂತಾದವರಿಗೂ ಕೂಡ ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡಲ್ಲೂ ದೊರೆಯುವಂತೆ ಮಾಡಲಾಯಿತು.

ಕರ್ನಾಟಕದಲ್ಲಿ ನಗರ ಸಹಕಾರ ಬ್ಯಾಂಕುಗಳ ಉದಯ

೧೮೭೪ರ ಇಂಗ್ಲೆಂಡ್ ಫ್ರೆಂಡ್ಲಿ ಸೊಸೈಟೀಸ್ ಆ್ಯಕ್ಟ್‌ನ್ನು ಆಧರಿಸಿ ನಮ್ಮ ದೇಶದಲ್ಲಿ ರಚಿಸಿದ ಮೊದಲನೇ ಸಹಕಾರ ಸಂಘಗಳ ಅಧಿನಿಯಮ, ೧೯೦೪ರ ಮೂಲಕ ಕರ್ನಾಟಕದಲ್ಲೂ ಸಹಕಾರ ಸಾಲ ಆಂದೋಲನ ಆರಂಭವಾಯಿತೆಂದು ಗುರುತಿಸಲಾಗಿದೆ. ಧಾರವಾಡ ಜಿಲ್ಲೆಯಲ್ಲಿ ೧೯೦೫ರ ಆಕ್ಟೋಬರ್ ೧೮ರಂದು ಬೆಟಗೇರಿ ನಗರ ಸಹಕಾರ ಸಾಲಸಂಘವು ರಚನೆಯಾಗಿ ಬೊಂಬಾಯಿ ಕರ್ನಾಟಕ ಪ್ರದೇಶದ ಮೊಟ್ಟಮೊದಲನೇ ನಗರ ಬ್ಯಾಂಕ್ ಆಗಿ ಪ್ರಾರಂಭವಾಯಿತು. ಬೆಂಗಳೂರು ನಗರ ಸಾಲ ಸಹಕಾರ ಸಂಘವು(The Bangalore city credit co-operative socicty) ೧೯೦೬ರ ಡಿಸೆಂಬರ್ ೮ರಂದು ನೋಂದಾಯಿತವಾಯಿತು.

೧೯೧೨ರ ಸಹಕಾರ ಸಂಘಗಳ ಅಧಿನಿಯಮವು ಭಾರತದಲ್ಲಿ ಎಲ್ಲ ಸಹಕಾರಿ ಶಾಸನಗಳ ಮೂಲವಾಗಿದೆ. ಈ ಅಧಿನಿಯಮದಲ್ಲಿ ಎಲ್ಲ ಸಹಕಾರ ತತ್ತ್ವಗಳನ್ನು ಒಳಗೊಳ್ಳಲಾಗಿದೆ. ಸಾಲ ಹಾಗೂ ಸಾಲೇತರ ಸಹಕಾರ ಸಂಘಗಳು ಮತ್ತು ಫೆಡರಲ್ ಸಹಕಾರ ಸಂಘಗಳನ್ನೂ ಕೂಡ ಈ ಅಧಿನಿಯಮದ ಅಡಿಯಲ್ಲಿ ರಚಿಸಬಹುದಾಗಿದೆ. ೧೯೧೯ರಲ್ಲಿ ಸಂವಿಧಾನಾತ್ಮಕ ಸುಧಾರಣೆಗಳನ್ನು ಜಾರಿಗೊಳಿಸಲಾಯಿತು. ಹಾಗೂ ಅಂದಿನಿಂದ ಸಹಕಾರವು ಸರ್ಕಾರದ ಪ್ರಮುಖ ವಿಷಯಗಳಲ್ಲಿ ಒಂದಾಯಿತು. ೧೯೫೪ರಲ್ಲಿ ಭಾರತದ ರಿಸರ್ವ್‌ಬ್ಯಾಂಕು ಗ್ರಾಮೀಣ ಸಾಲಸಮೀಕ್ಷೆ ಸಮಿತಿ ವರದಿಯನ್ನು(The Rural credit survey committe Reprort) ಪ್ರಕಟಿಸಿದ ತರುವಾಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಹಲವಾರು ಪ್ರಗತಿಪರ ಕ್ರಮಗಳನ್ನು ಕೈಗೊಂಡುದರ ಪರಿಣಾಮವಾಗಿ ನಗರ ಸಹಕಾರ ವಲಯವು

ಸ್ವತಂತ್ರವಾಗಿ ಬೆಳೆಯಲು ಅವಕಾಶ ನೀಡಲಾಯಿತು. ೧೯೫೬ರಲ್ಲಿ ಭಾರತ ಸರ್ಕಾರವು ನಿಯೋಜಿಸಿದ ಕೇಂದ್ರ ಕಾನೂನು ಸಮಿತಿಯು(central Law committee) ಸಹಕಾರ ಶಾಸನವನ್ನು ಸರಳೀಕರಿಸಲು, ಮತ್ತು ಆಧುನೀಕರಿಸಲು ಮಾದರಿ ವಿಧೇಯಕವೊಂದನ್ನು ಸಿದ್ಧಪಡಿಸಿತು. ಅದನ್ನು ಎಲ್ಲಾ ರಾಜ್ಯಗಳಿಗೂ ಕೂಡ ಸ್ಥಳೀಯ ಪರಿಸ್ಥಿತಿಗಳಿಗನುಗುಣವಾದಂಥ ಮಾರ್ಪಾಡುಗಳ ಸಹಿತ ಅಳವಡಿಸಿಕೊಳ್ಳಲೆಂದು ಸುತ್ತೋಲೆಯಾಗಿ ಕಳುಹಿಸಲಾಯಿತು.

೧೯೫೬ರಲ್ಲಿ ಭಾಷಾವಾರು ರಾಜ್ಯಗಳ ಪುನಾರಚನೆಯಾದ ನಂತರ ಮೈಸೂರು ರಾಜ್ಯದಾದ್ಯಂತ ಏಕರೂಪದ ಶಾಸನವಿರುವಂತೆ ಕರಡು ವಿಧೇಯಕವನ್ನು ಸಿದ್ಧಪಡಿಸಲು, ಅಂದಿನ ಮೈಸೂರು ಸರ್ಕಾರವು, ಅಧಿಕಾರಿಗಳು ಹಾಗೂ ಅಧಿಕಾರೇತರರು ಇದ್ದ ಸಮಿತಿಯೊಂದನ್ನು ರಚಿಸಿತು. ಮೈಸೂರು ಸಹಕಾರ ಸಂಘಗಳ ಅಧಿನಿಯಮ, ೧೯೫೯ರ ಕರಡು ವಿಧೇಯಕವನ್ನು ಸಿದ್ಧಪಡಿಸಲಾಯಿತು. ಹಾಗೂ ೧೯೫೯ರ ಆಗಸ್ಟ್ ೧೧ರಂದು ಅದಕ್ಕೆ ಭಾರತದ ರಾಷ್ಟ್ರಪತಿಯವರ ಅಂಗೀಕಾರ ದೊರೆತು ಆ ಅಧಿನಿಯಮವು ೧೯೬೦ರ ಜೂನ್ ೧ರಂದು ಜಾರಿಯಲ್ಲಿ ಬಂದಿತು. ಇದೇ ಅಧಿನಿಯಮದನುಸಾರ ಕರ್ನಾಟಕ ಸರ್ಕಾರವು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, ೧೯೯೭ನ್ನು (೨೦೦೦ರ ಕರ್ನಾಟಕ ಅಧಿನಿಯಮ ಸಂಖ್ಯೆ ೧೭) ಜಾರಿಗೊಳಿಸಿದೆ. ಈ ಅಧಿನಿಯಮದ ಪ್ರಸ್ತಾವನೆಯ ಆಶಯ ಹೀಗಿದೆ.[೩೦] "ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ."

ಸಹಕಾರ ಪದ್ಧತಿಯ ಮಹತ್ತ್ವ : ಸಹಕಾರ ಪದ್ಧತಿಯು ವಾಣಿಜ್ಯ ಬ್ಯಾಂಕುಗಳಂತೆ ಕೇವಲ ಸಾಲನೀಡುವುದಕ್ಕೆ ಮಾತ್ರ ಸೀಮಿತಗೊಂಡಿಲ್ಲ, ಅವು ಕೃಷಿ, ಕೈಗಾರಿಕೆ ಮತ್ತು ಸೇವೆಗಳಲ್ಲಿ ಕೂಡ ಉತ್ಪಾದನೆಯ ಸಾಂಸ್ಥಿಕ ಚೌಕಟ್ಟನ್ನು ಒದಗಿಸಬಲ್ಲದು. ಹೀಗಾಗಿ, ಸಹಕಾರಿ ವಲಯವು ಜನರನ್ನು ತನ್ನ ಸಾಂಸ್ಥಿಕ ತೆಕ್ಕೆಯಲ್ಲಿ ಸುಲಭವಾಗಿ ನೇರವಾಗಿ ಒಳಗೊಳ್ಳಬಲ್ಲುದು. ಅಲ್ಲದೆ ವ್ಯಕ್ತಿಗಳು ವೈಯಕ್ತಿಕವಾಗಿ ಗುಂಪುಗಳಲ್ಲಿ ತೊಡಗಿಕೊಳ್ಳಲು ವಿಪುಲ ಅವಕಾಶಗಳನ್ನೊದಗಿಸುತ್ತದೆ. ಸಾಮಾನ್ಯವಾಗಿ, ಸಹಕಾರಿಗಳ ಬಗ್ಗೆ ಮಾತನಾಡುವಾಗ ಕಾರ್ಯನಿರ್ವಹಿಸದ ಸಹಕಾರ ಸಂಘಗಳು, ನಿಧಿಗಳ ದುರುಪಯೋಗ, ಅಧಿಕ ನಷ್ಟ, ಒಂದೇ ಕುಟುಂಬಕ್ಕೆ ಸೇರಿದ ಸದಸ್ಯರು ಇಡೀ ಸಂಸ್ಥೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವುದು ಮುಂತಾದ ಅಂಶಗಳನ್ನು

ಎತ್ತಿಹಿಡಿದು ಈ ವ್ಯವಸ್ಥೆಯ ಬಗ್ಗೆ ಅಸಮಾಧಾನ ವ್ಯಕ್ತವಾಗುವುದೂ ಸಹಜ. ಇದನ್ನು ಅಲ್ಲಗಳೆಯಲಾಗದಿದ್ದರೂ, ಉದ್ಯೋಗಾವಕಾಶಗಳ ಸೃಜನೆ, ಬಡತನವನ್ನು ಕಡಿಮೆ ಮಾಡಿರುವುದು ಕೃಷಿ ಆಧಾರಿತ ಉದ್ಯಮಗಳ ಅಭಿವೃದ್ಧಿ, ಮಹಿಳೆಯರಿಗೆ ಸಂಘಟನೆಯ ಅವಕಾಶವುಂಟಾಗಿರುವುದು ಎಲ್ಲಕ್ಕಿಂತ ಹೆಚ್ಚಾಗಿ ರೈತರ ಉತ್ಪನ್ನಗಳಿಗೆ ಸೂಕ್ತ ಬೆಲೆಯನ್ನು ಒದಗಿಸುವ ಮೂಲಕ ರೈತರ ಹಿತಾಸಕ್ತಿಗಳನ್ನು ಕಾಪಾಡುವುದು ಮುಂತಾದ ಅಭಿವೃದ್ಧಿಪರ ಪ್ರಕ್ರಿಯೆಗಳಿಗೆ ಸಹಕಾರಿಗಳು ನೀಡಿರುವ ಕೊಡುಗೆಯ ಮೌಲ್ಯ ಮಾಪನ ಮಾಡಲು ನಿಷ್ಪಕ್ಷಪಾತವಾದ ಅಧ್ಯಯನ ನಡೆಸುವುದು ಅಗತ್ಯ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮೂರು ಮುಖ್ಯ ಆದರ್ಶಗಳು ಎಂದರೆ ಆರ್ಥಿಕಾಭಿವೃದ್ಧಿಯನ್ನು ತೀವ್ರಗೊಳಿಸುವುದು, ಸಾಮಾಜಿಕ ನ್ಯಾಯ ಪ್ರವರ್ತನೆ ಹಾಗೂ ರಾಜಕೀಯವಾಗಿ ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಇವುಗಳಿಗೆ ಮಹತ್ತ್ವ ನೀಡಲಾಗುತ್ತದೆ. ಇದಕ್ಕಾಗಿ ವಿವಿಧ ರಾಷ್ಟ್ರಗಳು ವಿವಿಧ ಸಹಕಾರಿ ನೀತಿಯನ್ನು ಅಳವಡಿಸಿಕೊಂಡಿವೆ. ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ, ಹಿಂದೆಂದೂ ಈ ಬಗೆಯ ಯಾವುದೇ ಕಾರ್ಯನೀತಿಯನ್ನು ಪರಿಭಾಷಿಸಿರಲಿಲ್ಲ. ೧೯೯೭ರಲ್ಲಿ ಮಾತ್ರವೇ ಕರ್ನಾಟಕ ಸರ್ಕಾರ ಮೊಟ್ಟಮೊದಲ ಬಾರಿಗೆ ಅದರ ಸಹಕಾರಿ ಕಾರ್ಯನೀತಿಯನ್ನು ಸಹಕಾರ ಸಂಘಗಳ ಅಧಿನಿಯಮದಲ್ಲಿ ಉದ್ಘೋಷಿಸಿದೆ. ಸಾಮಾಜಿಕ, ಆರ್ಥಿಕ ಅಸಮತೋಲನವಿರುವೆಡೆಗಳಲ್ಲಿ ಸಹಕಾರಿಗಳ ಸಹಾಯ ಹಸ್ತಗಳು ಸಂಘಟಿತವಾಗುತ್ತವೆ. ಅವರು ಬಡವರು ಹಾಗೂ ದುರ್ಬಲವರ್ಗಗಳಿಗೆ ಸೇರಿದವರಿಗೆ ನೆರವು ನೀಡಿ, ಆದಾಯ ನೀಡುವ ಚಟುವಟಿಕೆಗಳಲ್ಲಿ ಮಹಿಳೆಯರಿಗೆ ಅವಕಾಶಗಳನ್ನು ಕಲ್ಪಿಸಿ, ಅಧಿಕಾರ ಹಾಗೂ ಅಧಿಕಾರಿ ವರ್ಗದ ವಿಕೇಂದ್ರೀಕರಣ ಮಾಡಿ, ದುರ್ಬಲರಿಗೆ ಬೆಂಬಲ ನೀಡಿ ಸಬಲರನ್ನಾಗಿಸುವ ಮೂಲಕ ನಗರ ಹಾಗೂ ಗ್ರಾಮೀಣ ಪ್ರದೇಶಗಳ ನಡುವಣ ಅಂತರವನ್ನು ಕಡಿಮೆ ಮಾಡುವ ಮೂಲಕ ಆರ್ಥಿಕ ಅಸಮತೋಲನವನ್ನು ತಗ್ಗಿಸುವಲ್ಲಿ ಸಕಾರಾತ್ಮಕ ಪಾತ್ರವನ್ನು ವಹಿಸಬಲ್ಲರು. **ಮಹಿಳೆಯರ ದೃಷ್ಟಿಯಿಂದ ನೋಡಿದಾಗ ಸಹಕಾರ ವಲಯವೊಂದು ಅವಕಾಶಗಳ ಕಣಜವೆಂದೇ ಹೇಳಬಹುದು.**

ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ೩೦೦ ನಗರ ಸಹಕಾರಿ ಬ್ಯಾಂಕುಗಳಿದ್ದು, ಇವುಗಳ ಸಾಧನೆ ಪ್ರಶಂಸನೀಯವಾಗಿದೆ. ಆಸಕ್ತಿ ಹಾಗೂ ಉತ್ಸಾಹದಿಂದ ಫಲಾಪೇಕ್ಷೆಯಿಲ್ಲದೆ ದುಡಿಯುವ ಕಾರ್ಯಕರ್ತರು, ಜನಸಾಮಾನ್ಯರ ಬೆಂಬಲ ಹಾಗೂ ವಿಶ್ವಾಸದಿಂದ ಈ ಸಹಕಾರಿ ಬ್ಯಾಂಕುಗಳು ಯಶಸ್ವಿಗಳಾಗಿವೆ. ಕೇಂದ್ರ ಸರ್ಕಾರ ಹಾಗೂ ಭಾರತದ ರಿಸರ್ವ್‌ಬ್ಯಾಂಕಿನ ಉದಾರವಾದ ಆರ್ಥಿಕ ನೀತಿಯಿಂದಾಗಿ ರಾಜ್ಯದಲ್ಲಿ ಬ್ಯಾಂಕುಗಳಿರದಿದ್ದ ಜಿಲ್ಲೆಗಳಲ್ಲೆಲ್ಲ ನಗರ ಸಹಕಾರಿ ಬ್ಯಾಂಕುಗಳು ತಲೆಯೆತ್ತುತ್ತಿವೆ. ಇಂಥ ಸದವಕಾಶವನ್ನು ಉಪಯೋಗಿಸಿಕೊಂಡು ಕರ್ನಾಟಕದಲ್ಲಿ ಮಹಿಳೆಯರು ಧೈರ್ಯದಿಂದ ಹೆಜ್ಜೆಯಿಟ್ಟು ಆರ್ಥಿಕ ರಂಗಪ್ರವೇಶ ಮಾಡಿದರು. ಹೀಗಾಗಿ ೧೯೯೭ರಿಂದ ಸುಮಾರು ೨೫ ಮಹಿಳಾ ಸಹಕಾರಿ ಸಂಘಗಳು ಹಾಗೂ ೬೪

ಸಾಮಾನ್ಯ ಬ್ಯಾಂಕುಗಳು ಸ್ಥಾಪಿತವಾಗಿವೆ. ಮಹಿಳಾ ನಗರ ಸಹಕಾರ ಬ್ಯಾಂಕುಗಳು ಮುಖ್ಯವಾಗಿ ಮಹಿಳೆಯರ ಆರ್ಥಿಕ ಅವಶ್ಯಕತೆಗಳನ್ನು ಭರಿಸುತ್ತಿವೆಯಲ್ಲದೆ, ಮಹಿಳೆಯರ ಕುಟುಂಬದ ಆದಾಯವನ್ನು ಹೆಚ್ಚಿಸಿ, ಜೀವನಮಟ್ಟವನ್ನೂ ಸುಧಾರಿಸಲು ನೆರವಾಗುತ್ತಿವೆ. ಇಂಥ ವಿಪುಲ ಅವಕಾಶಗಳಿರುವ ಸಹಕಾರ ರಂಗಕ್ಕೆ ಮಹಿಳೆಯರು ಕಾಲಿಟ್ಟು ಯಶಸ್ವಿಗಳಾಗಿರುವುದು ಇನ್ನೂ ಸ್ವಾವಲಂಬನೆಯ ಮಾರ್ಗವನ್ನು ಅರಸುತ್ತಿರುವ ಅಸಂಖ್ಯಾತ ಮಹಿಳೆಯರಿಗೆ ಆಶಾಭಾವನೆ ಮೂಡಿಸುತ್ತಿದೆ.

ಅಡಿಟಿಪ್ಪಣಿಗಳು

೧. ಮಾರ್ಗರೆಟ್ ಡಿಗ್‌ಬಿ, ಆನ್ ಅಸೆಸ್‌ಮೆಂಟ್ ಆಫ್ ಇಂಡಿಯನ್ ಕೋ ಆಪರೇಟಿವ್ ಮೂವ್‌ಮೆಂಟ್, (ಅಶೋಕ್ ವಿ., ಭೋಲೇಶಂಕರ್ ಸಂಪುಟ) ಪು.೬೬

೨. ಮಹಾತ್ಮಗಾಂಧಿ, ೧೦೦ ಇಯರ್ಸ್- ದಿ ನ್ಯಾಷನಲ್ ಕಮಿಟಿ ಫಾರ್ ದಿ ಗಾಂಧಿ ಸೆಂಟಿನರಿ, ಪು.೧೫

೩. ಹಾಲ್ ಅಂಡ್ ವ್ಯಾಟ್‌ಕಿನ್ಸ್, ಕೋ ಆಪರೇಷನ್, ಪು.೩೬೪

೪. ಇ.ಎಂ.ಹ್ಯೂಗ್, ದಿ ಕೋ ಆಪರೇಟಿವ್ ಮೂವಮೆಂಟ್ ಇನ್ ಇಂಡಿಯಾ, ೧೯೩೨, ಪು.೨೨೧

೫. ಎಚ್.ಕಾಲವೆರ್ಟ್, ದಿ ಲಾ ಅಂಡ್ ಪ್ರಾಕ್ಟೀಸ್ ಆಫ್‌ಕೋ ಆಪರೇಷನ್, ಪು.೬

೬. ಮೈಸೂರು ಕೋ ಆಪರೇಟಿವ್ ಕಮಿಟಿ ರಿಪೋರ್ಟ್, ೧೯೨೩, ಪು.೩-೪

೭. ಮುಖರ್ಜಿ, ಲೋಕಲ್ ಗೌರ್ನಮೆಂಟ್, ಪು.೧೩೧

೮. ಇ.ಎಂ.ಹ್ಯೂಗ್, ದಿ ಕೋ ಆಪರೇಟಿವ್ ಮೂವ್‌ಮೆಂಟ್ ಇನ್ ಇಂಡಿಯಾ, ಪು.೪೦

೯. ಎಸ್.ಎನ್.ಬ್ಯಾನರ್ಜಿ, ದಿ ನೇಷನ್ ಇನ್ ಮೇಕಿಂಗ್, ಪು.೨೦೮

೧೦. ನವಜೀವನ್ ಪತ್ರಿಕೆ, ೨೨.೧೧.೧೯೨೫

೧೧. ಅರಬಿಂದೋ, ದಿ ಡಾಕ್ಟ್ರಿನ್ ಆಫ್ ಪ್ಯಾಸಿವ್ ರೆಸಿಸ್ಟನ್

೧೨. ವಂದೇ ಮಾತರಂ, ವೀಕ್ಲಿ ಎಡಿಷನ್, ಬ್ಯೂರಾಕ್ರಸಿ ಅಂಡ್ ನ್ಯಾಷನಲೈಸೇಷನ್, ೨೯.೦೯.೧೯೦೭

೧೩. ಪ್ಯಾರೇಲಾಲ್: ಮಹಾತ್ಮಗಾಂಧಿ, ದಿ ಲಾಸ್ಟ್ ಫೇಜ್, ಪು.೭೨

೧೪. ಎಚ್.ಎಲ್.ಕಾಜಿ, ಕೋ ಆಪರೇಷನ್ ಇನ್ ಇಂಡಿಯಾ, ಪು.೧೨-೧೪

೧೫. ಸಿನ್ಹಾ ಬಿ.ಕೆ., ಕೋ-ಆಪರೇಷನ್ ಆಫ್ಟರ್ ಇಂಡಿಪೆಂಡೆನ್ಸ್, ಕುರುಕ್ಷೇತ್ರ ಎ ಸಿಂಪೋಸಿಯಂ, ೧೯೬೭, ಪು.೪೫೫-೪೫೬

೧೬. ಹರಿಜನ್ ಪತ್ರಿಕೆ, ೫.೫.೧೯೪೬

೧೭. ಎಂ.ಕೆ.ಗಾಂಧಿ, ಡೆಮಾಕ್ರಸಿ ರಿಯಲ್ ಅಂಡ್ ಡಿಸೆಪ್ಟಿವ್, ಪು.೩

೧೮. ಬಿ.ಕೆ.ಸಿನ್ಹಾ, ಕೋ ಆಪರೇಟಿವ್ಸ್ ಇನ್ ಇಂಡಿಯಾ, ಪು.೫

೧೯. ಮೈಕಲಾಗನ್ ಕಮಿಟಿ ರಿಪೋರ್ಟ್

೨೦. ಕೋ-ಆಪರೇಟಿವ್ ಕಾಲೇಜ್, ಇಂಗ್ಲೆಂಡ್, ಕೋ ಆಪರೇಟಿವ್ ಪ್ರಿನ್ಸಿಪಲ್ಸ್ ಇನ್ ದಿ ಮಾಡರ್ನ್ ವರ್ಲ್ಡ್, ಪು.೧೨

೨೧. ಅದೇ,

೨೨. ಡಿ.ಆರ್.ಗಾಡ್ಗೀಳ್, ಟುವಾರ್ಡ್ಸ್ ಕೋ ಆಪರೇಟಿವ್ ಕಾಮನ್‌ವೆಲ್ತ್, ಪು.೪೫-೪೯

೨೩. ಗೌರ್ನ್‌ಮೆಂಟ್ ಆಫ್ ಇಂಡಿಯಾ, ಸಹಕಾರಿ ಸಮಾಜ್ ಎ ಸಿಂಪೋಸಿಯಂ, ಪು.೪೫

೨೪. ಭಾರತದ ಸಂವಿಧಾನ ಜೂನ್ ೧,೨೦೦೧ರಂದು ಇದ್ದಂತೆ

೨೫. ೧೯೭೮ನೇ ಇಸವಿಯ ಸಂವಿಧಾನದ (ನಲವತ್ತನಾಲ್ಕನೆಯ ತಿದ್ದುಪಡಿ) ಅಧಿನಿಯಮದ ೯ನೇ ಪ್ರಕರಣದ ಮೂಲಕ (ದಿ.೨೦.೦೬.೧೯೭೯ ರಿಂದ ಜಾರಿಯಲ್ಲಿ ಬರುವಂತೆ) ೩೮ನೇ ಅನುಚ್ಛೇದವನ್ನು ೩೮ ೧ ಎಂದು ಮರು ಸಂಖ್ಯೆ ನೀಡಲಾಗಿದೆ. (ಭಾರತದ ಸಂವಿಧಾನ ಜೂನ್ ೧, ೨೦೦೧ರಂದು ಇದ್ದಂತೆ)

೨೬. ೧೯೭೮ನೇ ಇಸವಿಯ ಸಂವಿಧಾನದ (ನಲವತ್ತನಾಲ್ಕನೆಯ ತಿದ್ದುಪಡಿ ಅಧಿನಿಯಮದ ೯ನೇ ಪ್ರಕರಣದ ಮೂಲಕ ದಿ.೨೦.೦೬.೧೯೭೯ ರಿಂದ ಜಾರಿಯಲ್ಲಿ ಬರುವಂತೆ) ಸೇರಿಸಲಾಗಿದೆ.

೨೭. ೧ ಮತ್ತು ೨, ೯೭೬ರ ಸಂವಿಧಾನದ (೪೨ನೇ ತಿದ್ದುಪಡಿ) ಅಧಿನಿಯಮದ ೭ನೇ ಪ್ರಕರಣದ ಮೂಲಕ ೩.೧.೧೯೭೭ ರಿಂದ ಜಾರಿಯಲ್ಲಿ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

೨೮. ಯೋಜನಾ ಆಯೋಗ : ಭಾರತ ಸರ್ಕಾರದ ಮೂರನೇ ಪಂಚವಾರ್ಷಿಕ ಯೋಜನೆ

೨೯. ಈ.ಎಂ.ಹೂಗ್, ದಿ ಕೋ-ಆಪರೇಟಿವ್ ಮೂವ್‌ಮೆಂಟ್ ಇನ್ ಇಂಡಿಯಾ, ಪು.೪೭

೩೦. ಡಿ.ಜಿ.ತೆಂಡೂಲ್ಕರ್, ಮಹಾತ್ಮ, ಸಂಪುಟ ೭, ಪು.೧೭

೩೧. ಈ ಶಾವಾಸ್ಯಮಿದಂಸರ್ವಂ
ಯತ್ಕಿಂಚ ಜಗತ್ಯಾ ಜಗತ್
ತೇನ ತ್ಯಕ್ತೇನ ಭುಂಜೀಥಾ
ಮಾ ಗೃಧಃ ಕಸ್ಯಸ್ವಿದ್ಧನಮ್ ಈಶೋಪನಿಷತ್ತು ಶ್ಲೋಕ ೧

(ಆಳುವ ದೇವರು ಈ ವಿಶ್ವದಲ್ಲಿರುವ ಎಲ್ಲದರಲ್ಲಿಯೂ ವಾಸವಾಗಿದ್ದಾನೆ. ಆದ್ದರಿಂದ ಎಲ್ಲವನ್ನೂ ತ್ಯಜಿಸಿ ಅವನಿಗೆ ಅರ್ಪಿಸು. ಆ ಮೇಲೆ ಅದನ್ನು ಭೋಗಿಸು ಅಥವಾ ನಿನ್ನ ಪಾಲಿಗೆ ಬಂದುದನ್ನು ಮಾತ್ರ ನೀನು ಉಪಯೋಗಿಸು. ಪರರ ಸಂಪತ್ತಿಗಾಗಿ ಆಸೆಪಡಬೇಡ)

೩೨. ಹರಿಜನ ಪತ್ರಿಕೆ, ಜನವರಿ ೩೦, ೧೯೩೭

೩೩. ೨೦೦೦ರ ಮಾರ್ಚ್ ೨೮ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿ ಪಡೆಯಲಾಗಿದೆ.

ಅಧ್ಯಾಯ ೪

ಮಹಿಳೆ ಮತ್ತು ಸಹಕಾರ ಕ್ಷೇತ್ರ

೧. ವಿವಾಹ ಸಂಸ್ಥೆ ಅದರ ಸಾಧಕ ಬಾಧಕಗಳು, ವಿಧವೆಯರು, ಪರಿತ್ಯಕ್ತೆಯರು ಹಾಗೂ ಒಂಟಿ ಮಹಿಳೆಯರು.

೨. ಜೀವನ ಬೆಂಬಲಕ್ಕೆ ಪರಿಹಾರ ಮಾರ್ಗಗಳು, ವ್ಯಕ್ತಿಗತ ಉದ್ಯೋಗಾವಕಾಶಗಳು ಸಾಮೂಹಿಕ ಸ್ವಾವಲಂಬನೆ ಮಾರ್ಗ- ಮುಂಚೂಣಿಯಲ್ಲಿ ಮಹಿಳೆಯರು

೩. ಸಹಕಾರ ರಂಗದಲ್ಲಿ ಮಹಿಳಾ ಮುಖಂಡತ್ವ, ತರಬೇತಿ, ಯಶಸ್ಸು

ಮಹಿಳೆ ಮತ್ತು ಸಹಕಾರ ಕ್ಷೇತ್ರ

ಕಳೆದ ಎರಡು ಸಾವಿರ ವರ್ಷಗಳ ಸಾಮಾಜಿಕ ಬೆಳವಣಿಗೆಯನ್ನು ಅವಲೋಕಿಸಿದಾಗ ಪ್ರಪಂಚದಾದ್ಯಂತ ಆಯಾ ಸಮುದಾಯಗಳಿಂದ ಮಹಿಳೆಗೆ ಅನ್ಯಾಯ, ಅನಾದರ ಹಾಗೂ ಅಪಮಾನವಾಗಿರುವ ಅವಧಿಯೇ ಅಧಿಕವೆಂಬುದು ತಿಳಿಯುತ್ತದೆ. ಭಾರತವೂ ಇದಕ್ಕೆ ಹೊರತಲ್ಲ. ಇದಕ್ಕೆ ಕೆಲವೊಂದು ಅಪವಾದಗಳಿರ ಬಹುದು. ಆದರೆ ಒಟ್ಟು ಮಹಿಳಾ ಕುಲ ಮಾತ್ರ ಪೂರ್ಣ ನೆಮ್ಮದಿಯನ್ನು ಪಡೆಯಲು ಸಾಧ್ಯವಾಗಿಲ್ಲದಿರು ವುದು ಸಮಾಜ ಶಾಸ್ತ್ರದ ಇತಿಹಾಸದಿಂದ ಸ್ಪಷ್ಟವಾಗುತ್ತದೆ. ಅನಿಷ್ಟಕರ ಸಾಮಾಜಿಕ ಕಟ್ಟಲೆಗಳಿಂದ ಶೋಷಿತೆಯಾದ ಮಹಿಳೆ ಸಾಧಾರಣ ಮಾನವ ಸೌಲಭ್ಯಗಳಿಂದ, ಹಕ್ಕುಗಳಿಂದ ವಂಚಿತೆಯಾದರೂ ತನ್ನೆಲ್ಲ ದುಃಖ-ದುಮ್ಮಾನ, ಅವಮಾನ, ಅವಹೇಳನಗಳನ್ನು ಮರೆತು ತನ್ನ ಕುಟುಂಬ, ಗಂಡ, ಮಕ್ಕಳು ಹಾಗೂ ಮನೆತನದ ಮರ್ಯಾದೆಗಾಗಿ ದುಡಿಯುತ್ತಿದ್ದಾಳೆ. ತನ್ನ ಅಸ್ತಿತ್ವ(Existance), ಅಸ್ಮಿತೆ(Identity) ಹಾಗೂ ಅವಕಾಶ(opportunity)ಗಳನ್ನು ಕಳೆದುಕೊಂಡ ಮಹಿಳೆಗೆ ಜಾಗೃತಳಾಗುವ ಸಂದರ್ಭಗಳು ಒದಗಿದ್ದು ಆಕೆಯ ಅದೃಷ್ಟ. ತನಗೆ ದೊರೆತ ಅಂಥ ಸಂದರ್ಭಗಳನ್ನು ಆಕೆ ಸದುಪಯೋಗಪಡಿಸಿಕೊಂಡು ಯಶಸ್ವಿಯಾಗಿರುವ ದೃಷ್ಟಾಂತಗಳೂ ಸಾಕಷ್ಟಿವೆ. ಸಮಾಜ ಸುಧಾರಕರ ಅವಿರತ ಶ್ರಮದಿಂದಾಗಿ ಆಕೆಗೆ ಶಿಕ್ಷಣ ಪಡೆಯಲು ಸಾಧ್ಯವಾಯಿತು. ಅನಂತರ ಅಜ್ಞಾನ ತುಂಬಿದ ನಾಲ್ಕು ಗೋಡೆಗಳ ನಡುವಿನ ಲೋಕದಾಚೆಗಿನ ಸ್ವಾತಂತ್ರ್ಯದ ಬೆಳಕು ಕಾಣಲಾರಂಭಿಸಿತು. ಸಮಾಜ ಸುಧಾರಕರು ಬಾಲ್ಯವಿವಾಹ, ಸತಿಪದ್ಧತಿ ಮುಂತಾದ ಸಾಮಾಜಿಕ ಪಿಡುಗುಗಳನ್ನು ನಿವಾರಿಸಲು ಆಂದೋಲನ ನಡೆಸಿದುದರ ಜೊತೆಗೆ ವಿಧವಾ ಮರುವಿವಾಹದ ಬಗ್ಗೆ ಕೂಡ ಸಾಕಷ್ಟು ಚಿಂತನೆ, ಪ್ರಯತ್ನಗಳನ್ನು ಮಾಡಿದ್ದರು. ಆದರೆ ಇಂದಿಗೂ ಈ ಸಮಸ್ಯೆ ಬಗೆಹರಿದಿಲ್ಲ. ಹೀಗಾಗಿ ನಾವು ಇಂದು ವಿಧವೆಯರು, ವಿವಾಹ ವಿಚ್ಛೇದಿತ ಮಹಿಳೆಯರು ಹಾಗೂ ಅನೇಕ ಕಾರಣಗಳಿಂದಾಗಿ ಇನ್ನೂ ಕುಮಾರಿಯಾಗಿರುವ, ಒಂಟಿಯಾಗಿರುವ, ಮಹಿಳೆಯರ ಬಗ್ಗೆ ಹೆಚ್ಚು ಚಿಂತನೆಗಳನ್ನು ನಡೆಸಬೇಕಾಗಿದೆ. ಇಂದಿಗೂ ಇಂಥ ಬಹುಸಂಖ್ಯಾತ ವಿವಾಹವಾಗದೆ ತಾಯಂದಿರಾಗಿ ನೆಲೆ ಕಳೆದುಕೊಂಡ ಮಹಿಳೆಯರಿಗೆ ಯಾವುದೇ ಸ್ವತಂತ್ರವಾದ ಅಥವಾ ಸ್ವಾವಲಂಬನೆಯ ಸ್ಥಾನಮಾನಗಳಿಲ್ಲ. ಮನುವಿನ ಕಟ್ಟಳೆಯಂತೆ ವಿವಾಹಕ್ಕೆ ಮುಂಚೆ ತಂದೆ ಹಾಗೂ ಸೋದರರು, ವಿವಾಹದ ನಂತರ ಪತಿ ಹಾಗೂ ಮಾವನ ಮನೆ ಹಾಗೂ ಅನಂತರ ಮಕ್ಕಳ ನೆರಳಿನಲ್ಲಿ

ಇರುವ ಸ್ಥಿತಿಯನ್ನೇ ಕಾಣುತ್ತಿದ್ದೇವೆ. ಮಹಿಳೆ ಇಡೀ ಜೀವಮಾನವೆಲ್ಲ ಭದ್ರತೆ ಮತ್ತು ಸುರಕ್ಷತೆಯನ್ನು ಅರಸುತ್ತಾಳೆ. ಹೀಗಾಗಿ ಮಹಿಳಾ ಶೋಷಣೆ, ದೌರ್ಜನ್ಯ, ಅತ್ಯಾಚಾರ ಹಾಗೂ ಕೊಲೆಗಳಂತಹ ದಿನನಿತ್ಯದ ಘಟನೆಗಳು ಕೊನೆಯಿರದೆ ಸಂಭವಿಸುತ್ತಿದ್ದು, ಇವುಗಳಿಗೆ ಕಾರಣ ಹಾಗೂ ಪರಿಹಾರಗಳನ್ನು ಹುಡುಕುತ್ತಲೇ ಇರುವಂತಾಗಿದೆ. ಇದಕ್ಕೆ ಅತಿ ಮುಖ್ಯವಾದ ಒಂದು ಕಾರಣವೆಂದರೆ ಮಹಿಳೆಯರಿಗೆ ತಮ್ಮ ಕುಟುಂಬದೊಳಗೆ ಹಾಗೂ ಅದರ ಹೊರಗಡೆ ತಮಗೆ ಇರುವ ಅಸುರಕ್ಷತೆ, ಭೀತಿ ಹಾಗೂ ಅಭದ್ರತೆಯ ಬಗ್ಗೆ ಇನ್ನು ಅರಿವು(ಪ್ರಜ್ಞೆ) ಮೂಡಿಲ್ಲದಿರುವುದರಿಂದ ತಾವು ವಾಸ್ತವವಾಗಿ ನಿರ್ವಹಿಸಬೇಕಾದ ಪಾತ್ರದ ಬಗ್ಗೆಯಾಗಲಿ, ತಮ್ಮ ಹೊಣೆಗಾರಿಕೆ ಬಗ್ಗೆಯಾಗಲಿ ಯಾವುದೇ ಕಾಳಜಿ ಮೂಡಿಲ್ಲ. ಇದಕ್ಕೆ ಜವಾಬ್ದಾರರು ಯಾರು?

ವಿವಾಹಸಂಸ್ಥೆ, ಅದರ ಸಾಧಕ-ಬಾಧಕಗಳು

ಭಾರತೀಯ ಸಮಾಜದಲ್ಲಿ ವಿವಾಹವನ್ನೇ ಹುಡುಗಿಯ ಜೀವನದ ಏಕೈಕ ಗುರಿ ಹಾಗೂ ಎಲ್ಲಕ್ಕೂ ಪರಿಹಾರವೆಂದು ಭಾವಿಸಲಾಗುತ್ತದೆ. ಆದರೆ ವಾಸ್ತವವಾಗಿ ಪ್ರಸ್ತುತ ದಿನಗಳಲ್ಲಿ ಬೇರಾವುದೇ ಕಾರಣಗಳಿಗಿಂತ ವಿವಾಹ ವ್ಯವಸ್ಥೆಯಿಂದಲೇ ಬಹುಪಾಲು ಮಹಿಳೆಯರು ಹೆಚ್ಚಾಗಿ, ಕಿರುಕುಳಕ್ಕೆ ಗುರಿಯಾಗಿ ಅಭದ್ರತೆಯಿಂದ ದುಃಖಕ್ಕೀಡಾಗಿ ನರಳುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಸಾಕಷ್ಟು ಶಿಕ್ಷಣ ನೀಡಿರಲಿ, ಅಥವಾ ಉನ್ನತ ಶಿಕ್ಷಣವನ್ನೇ ನೀಡಿರಲಿ ಹುಡುಗಿಯಾಗಲಿ ತಾಯ್ತಂದೆಯರಾಗಲಿ ವಿವಾಹದ ಉದ್ದೇಶವನ್ನೇ ಅಂತಿಮವಾಗಿ ಹೊಂದಿರುತ್ತಾರೆ. ಹುಡುಗಿ ಪರೀಕ್ಷೆಗಳಲ್ಲಿ, ಸ್ಪರ್ಧೆಗಳಲ್ಲಿ ವಿಜ್ಞಾನ, ತಂತ್ರಜ್ಞಾನ, ರಾಜಕಾರಣ, ಕ್ರೀಡೆ, ಆರೋಗ್ಯ ಸೇವೆ, ಮಿಲಿಟರಿ ಮುಂತಾದ ಯಾವುವೇ ರಂಗಗಳಲ್ಲಿ ಪ್ರತಿಭಾಶಾಲಿಯಾಗಿದ್ದರೂ, ಯಾವುದೇ ಕ್ಷೇತ್ರದಲ್ಲಿ ಅಥವಾ ತನ್ನದೇ ಆದ ಸ್ವಂತ ಅಸ್ತಿತ್ವವನ್ನು ಸಾರುವ, ಸುಸ್ಥಾಪಿಸುವ ಹಾಗೂ ಅದರಲ್ಲಿ ಯಶಸ್ವಿಯಾಗಿರುವ ಮಹಿಳೆಯರು ಮಾತ್ರ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿದ್ದಾರೆ. ಭಾರತದಲ್ಲಿ ಪ್ರತಿಯೊಬ್ಬ ತಾಯ್ತಂದೆ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಅನಕ್ಷರಸ್ಥ ಕುಟುಂಬಗಳಲ್ಲಿ ಹುಡುಗಿಯರ ಪ್ರೌಢತ್ವ, ವಯಸ್ಸು, ಶಿಕ್ಷಣ, ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ಅವಳಿಗೆ ವಿವಾಹ ಮಾಡಿ ತಮ್ಮ ಹೊಣೆ ಕಳೆದುಕೊಳ್ಳುವ ಹುನ್ನಾರದಲ್ಲೇ ಇರುತ್ತಾರೆ. ಇದಕ್ಕಾಗಿ ತಮ್ಮ ಅಲ್ಪಸ್ವಲ್ಪ ಸ್ವತ್ತನ್ನು ಮಾರಾಟ ಮಾಡಿ, ಸಾಲ ಅಡಮಾನ, ಮುಂತಾದವುಗಳಿಂದಾಗಿ ಹಣಹೊಂದಿಸಿ ವರದಕ್ಷಿಣೆ ತೆತ್ತು ಹುಡುಗಿಗೆ ಭದ್ರವಾದ ಜೀವನನೆಲೆ ಒದಗಿಸಬಯಸುತ್ತಾರೆ. ಆದರೆ ಇಂದಿಗೂ ಜ್ವಲಂತ ಸಮಸ್ಯೆಯಾದ ವರದಕ್ಷಿಣೆ(ಕಾನೂನು ಬಾಹಿರವಾದರೂ) ಹುಡುಗಿಯರ ಸಾವಿಗೆ, ಸಕಲ ದುಃಖಗಳಿಗೆ ಮೂಲವಾಗಿದೆ. ವಿವಾಹದ ನಂತರ ಉದ್ಭವಿಸುವ ಇನ್ನೂ ಕೆಲ ಸಮಸ್ಯೆಗಳನ್ನು ಈ ಮುಂದೆ ಸಂಕ್ಷಿಪ್ತವಾಗಿ ನೀಡಲಾಗಿದೆ.

೧. ಹುಡುಗಿ(ಬಾಲ್ಯವಿವಾಹಗಳಲ್ಲಿರುವಂತೆ ಇನ್ನು ಚಿಕ್ಕ ವಯಸ್ಸಿನವಳಾಗಿದ್ದು, ತವರಿನಲ್ಲಿ ಮುದ್ದಿನಿಂದ ಬೆಳೆಸಿದ್ದರೆ, ಅವಳಿಗೆ ತಾನು ಸೇರಿದ ಮನೆಯ ಜನರು, ವಾತಾವರಣ, ಆಹಾರ ಹಾಗೂ ಪರಿಸ್ಥಿತಿಗಳಿಗೆ ಕೂಡಲೇ ಹೊಂದಿಕೊಳ್ಳಲು ಸಾಧ್ಯವಾಗಲಾರದು. ಅಷ್ಟೇ ಅಲ್ಲ, ಗಂಡನೊಂದಿಗೆ ಲೈಂಗಿಕ ಹೊಂದಾಣಿಕೆಯೂ ಕಷ್ಟವಾಗಬಹುದು. ಪರಿಣಾಮವೆಂದರೆ, ಆಕೆಯ ಜೀವನ, ಸಂಬಂಧಗಳು ಸುಖಕರವಾಗುವುದಕ್ಕಿಂತ ದುಃಖದಾಯಕವಾಗಬಹುದು.

೨. ಇನ್ನು ವ್ಯಾಸಂಗ ಮುಗಿಸದ ಹುಡುಗಿಗೆ ಉನ್ನತ ವ್ಯಾಸಂಗ ಮಾಡಿದ ವರನೊಂದಿಗೆ ವಿವಾಹವಾದಲ್ಲಿ ಆತನಿಗೆ ವಿವಾಹ ಕಾರಣದಿಂದಾಗಿಯೇ ವಿದ್ಯಾಭ್ಯಾಸ ನಿಂತುಹೋದ ಹೆಂಡತಿಯ ಬಗ್ಗೆ ಅನಾದರ, ನಿರ್ಲಕ್ಷ್ಯತನ ಉಂಟಾಗಿ ಆಕೆಯ ಜೀವನ ಶೋಚನೀಯವಾಗಬಹುದು.

೩. ವೃತ್ತಿ ಶಿಕ್ಷಣ ಪಡೆದು ಸ್ವಂತಿಕೆಯಿರುವ ಹುಡುಗಿ ವಿವಾಹದ ಕಾರಣದಿಂದಾಗಿ ಪತಿ ಹಾಗೂ ಅತ್ತೆ ಮನೆಯವರ ಒತ್ತಾಯದಿಂದಾಗಿ ತನ್ನ ವೃತ್ತಿ, ಆಸೆ ಆಕಾಂಕ್ಷೆ ಹಾಗೂ ಸ್ವಾವಲಂಬನೆಯನ್ನು ತ್ಯಾಗ ಮಾಡಬೇಕಾಗಬಹುದು. ತತ್ಪರಿಣಾಮವಾಗಿ ಆಕೆಗೆ ಹತಾಶೆ, ಮಾನಸಿಕ ಹಿಂಸೆ, ಪರಾವಲಂಬಿ ತನದಿಂದಾಗಿ ವಿವಾಹ ಜೀವನ ಹಾಗೂ ಸಂಬಂಧಗಳ ಬಗ್ಗೆ ಜಿಗುಪ್ಸೆ, ದ್ವೇಷ ಉಂಟಾಗಬಹುದು.

೪. ವಿದ್ಯಾವಂತೆಯಾಗಿ, ಸ್ವಾವಲಂಬಿಯಾಗಿ, ಸ್ವಂತಿಕೆಯಿರುವ ಹುಡುಗಿಗೆ ಪತಿ ಅಥವಾ ಅತ್ತೆ ಮನೆಯವರಿಂದ ಆಕೆಯ ವರಮಾನದ ಮೇಲೆ ಅಧಿಕಾರ ಚಲಾವಣೆ, ದುರಹಂಕಾರಿ ಎಂಬ ಬಿರುದಿನ ಜೊತೆಗೆ ಎಂಥದೇ ಉದ್ಯೋಗದಲ್ಲಿದ್ದರೂ, ಮನೆಗೆಲಸ, ಅಡುಗೆ, ಸಾಮಾನು ಖರೀದಿ ಎಲ್ಲವನ್ನೂ ನಿರ್ವಹಿಸಬೇಕಾದ ಕರ್ತವ್ಯ, ಜವಾಬ್ದಾರಿಯ ಜೊತೆಗೆ ತಾಯ್ತನ ಹಾಗೂ ಮಕ್ಕಳ ಪೋಷಣೆ ಇವುಗಳ ಹೊಣೆಗಾರಿಕೆಗಳೂ ಇರುತ್ತವೆ. ಇವುಗಳಲ್ಲಿ ಯಾವುದೊಂದಕ್ಕೆ ಚ್ಯುತಿಯಾದರೂ ಮನೆಯವರು ಆಕೆಯೊಂದಿಗೆ ಅನಿವಾರ್ಯ ಹೊಂದಾಣಿಕಗೆ ಸಿದ್ಧರಾದರೂ, ಅವಳಲ್ಲಿ ಅಪರಾಧಿತ್ವವನ್ನೇ ಕಾಣುವ ಪರಸ್ಥಿತಿಯುಂಟಾಗುತ್ತದೆ. ಆದರೆ ಪುರುಷನಿಗೆ ಇಂಥ ಸಮಸ್ಯೆಗಳು, ಸವಾಲುಗಳು ಎದುರಾಗುವುದು ಅಪರೂಪ. ಅಂಥ ಪರಿಸ್ಥಿತಿಗಳಲ್ಲಿ ಆಕೆಗೆ ವರ್ಗಾವಣೆ, ಬಡ್ತಿ ಅವಕಾಶ, ಉನ್ನತ ಶಿಕ್ಷಣ, ತನ್ನ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನ, ತರಬೇತಿ ಎಲ್ಲಕ್ಕೂ ತಿಲಾಂಜಲಿ ನೀಡಿ, ಕುಟುಂಬ, ಮಕ್ಕಳು ಹಾಗೂ ವೈವಾಹಿಕ ಬಂಧನವನ್ನಷ್ಟೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಆಕೆಯ ಗಳಿಕೆ, ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ನೆರವಾದರೂ ಕೂಡ ಅದನ್ನು ತನಗಿಷ್ಟಬಂದಂತೆ, ಬಳಸಿಕೊಳ್ಳಲು ಸಾಧ್ಯವಾಗದೆ ಆಕೆಗೆ ಮಾನಸಿಕ ಕ್ಷೋಭೆಯುಂಟಾಗಲು ಕಾರಣವಾಗಬಹುದು.

ಮೇಲೆ ಹೇಳಲಾದ ಎಲ್ಲ ಸಮಸ್ಯೆಗಳು, ಪರಿಸ್ಥಿತಿಗಳು ಶಾಶ್ವತ ಅಥವಾ ಸಾರ್ವಕಾಲಿಕವೆಂದು ಹೇಳಲಾಗದು, ಅಂಥ ಸಂದರ್ಭಗಳಲ್ಲಿ ಜನ ತಿಳಿವಳಿಕೆ, ಸಹನೆ, ಪರಸ್ಪರ ಸಹಾನುಭೂತಿ ಹೊಂದಿದ್ದರೆ

ಅವರ ಜೀವನ ಸಂತಸಕರವಾಗಿರಲೂಬಹುದು. ಆದರೆ ಮೇಲೆ ಹೇಳಲಾದ ವಿವಾಹ ಹಿರಿಯರಿಂದ ನಿಶ್ಚಿತವಾದುದಾಗಿದ್ದು, ವಧೂವರರದೇ ಆದ ಸ್ವಂತ ನಿರ್ಧಾರದ ವಿವಾಹಗಳಲ್ಲ. ಇಂಥ ಸಂದರ್ಭಗಳಲ್ಲಿ ಹುಡುಗಿಗೆ ತವರುಮನೆಯ ಆಶ್ರಯ, ಬೆಂಬಲ ದೊರೆಯುವ ಅವಕಾಶಗಳಿರುತ್ತವೆ. ಇನ್ನು ಕೆಲ ಸಂದರ್ಭಗಳಲ್ಲಿ ಹಿರಿಯರು, ತಾಯ್ತಂದೆಯರ ಅಭಿಪ್ರಾಯಕ್ಕೆ ಮಣಿಯದೇ, ಪರಸ್ಪರ ಸ್ಪಂದಿಸಿ ಪ್ರೇಮ ವಿವಾಹವಾದ ದಂಪತಿಗಳು ಪ್ರೌಢರಾಗಿ ಸವಾಲುಗಳನ್ನು ಎದುರಿಸಲು ಸಿದ್ಧರಿರುತ್ತಾರೆ. ಅಲ್ಲಿ ಮೇಲ್ಕಂಡ ಸಮಸ್ಯೆಗಳು ಅಷ್ಟಾಗಿ ಬಾಧಿಸಲಾರವು. ಆದರೆ ಕೌಟುಂಬಿಕ ಸಂಬಂಧಗಳು ಉಭಯ ಪಕ್ಷಗಳಲ್ಲೂ ಕೆಡುವುದರಿಂದ ಆಸ್ತಿ, ಮುಂತಾದ ಹಕ್ಕುಗಳೂ ಇಲ್ಲವಾಗುತ್ತದೆ. ಕೆಲವೊಮ್ಮೆ ಇಂಥ ದಂಪತಿಗಳಲ್ಲಿ ವೈಮನಸ್ಸುವುಂಟಾಗಿ ಅಲ್ಲಿಯೂ ಮಹಿಳೆ ಶೋಷಣೆ, ದೌರ್ಜನ್ಯ, ಅನಾದರಕ್ಕೆ ತುತ್ತಾಗುವ ಪರಿಸ್ಥಿತಿಯುಂಟಾದಲ್ಲಿ ಆಕೆ ಸಂಕಷ್ಟಕ್ಕೀಡಾಗಿ ಅತ್ತ ಪತಿಯಿಂದ ಇತ್ತ ತವರಿನಿಂದ ದೂರವಾಗಿ ಕಷ್ಟ ಕೋಟಲೆಗಳನ್ನು ಎದುರಿಸಬೇಕಾಗುತ್ತದೆ. ಇಲ್ಲಿಯೂ ಪುರುಷ ಮತ್ತೆ ತನ್ನ ತಾಯ್ತಂದೆಯ ಕುಟುಂಬಕ್ಕೆ ಸೇರಿಕೊಳ್ಳುತ್ತಾನೆ. ವಿದ್ಯಾಭ್ಯಾಸವನ್ನು ಮುಗಿಸದೆ, ಮನೆಬಿಟ್ಟುಬಂದಿದ್ದ ಹುಡುಗಿಯನ್ನು ತಾಯ್ತಂದೆ ಹಾಗೂ ಸಂಬಂಧಿಗಳು ದೂರ ಮಾಡಿದರೆ ಮತ್ತೆ ಆಕೆ ಆಶ್ರಯಹೀನಳಾಗಿ ಏಕಾಂಗಿಯಾಗಿ ದುಃಖಿತೆ ಯಾಗುತ್ತಾಳೆ. ಹೀಗೆ ಭಾರತೀಯ ಮಹಿಳೆಯರಿಗೆ ಜೀವನದಾದ್ಯಂತ ಸುರಕ್ಷೆ ಹಾಗೂ ಭದ್ರತೆಯನ್ನು ಅರಸುವುದೇ ಆಗಿದ್ದು, ಹುಡುಗಿಯಾಗಲಿ ಆಕೆಯ ತಾಯ್ತಂದೆಯಾಗಲಿ, ಅವಳ ಪ್ರತಿಭೆ, ಸಾಮರ್ಥ್ಯ, ಆಶೋತ್ತರಗಳ ಬಗ್ಗೆ ಆಲೋಚಿಸದೆ, ಅಪರಿಚಿತ ಅಥವಾ ಕೇವಲ ಪರಿಚಯ ಮಾತ್ರದ ಪರಕುಟುಂಬದಲ್ಲಿ ಇರುವ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಎಲ್ಲ ಬಗೆಯ ಜೀವನ ಸಂತೋಷವನ್ನು ನಿರೀಕ್ಷಿಸುತ್ತಾರೆ. ದಿನೇ ದಿನೇ ದುಂದು ವಿವಾಹವೆಚ್ಚಗಳು ಮಿತಿಮೀರುತ್ತಿದ್ದರೂ, ಈ ಬಗ್ಗೆ ಎರಡು ಪಕ್ಷಗಳವರೂ ಅನಿವಾರ್ಯ ವೆಂಬಂತೆ ವರ್ತಿಸುವುದು ಸಾಮಾನ್ಯವಾಗಿದೆ. ವಿವಾಹದ ನಂತರ ದಂಪತಿಗಳ ನಡುವೆ ಅಭಿಪ್ರಾಯಭೇದ, ಪರಸ್ಪರ ದೋಷಾರೋಪಣೆ, ಅನುಮಾನ ಹಾಗೂ ಒಟ್ಟಿಗೆ ಬಾಳಲಾರದ ಪರಿಸ್ಥಿತಿಯುಂಟಾದಲ್ಲಿ ಮಹಿಳೆಯ ಕನಸುಗಳು ಕುಸಿದು ದುರ್ಭರ ಜೀವನವಾಗುತ್ತದೆ. ೧೯೭೬ರ ಹಿಂದೂ ವಿವಾಹ ಅಧಿನಿಯಮದಲ್ಲಿ ನ್ಯಾಯಿಕ ಬೇರ್ಪಡೆ(Judicial separation) ಹಾಗೂ ವಿವಾಹ ವಿಚ್ಛೇದನೆಗೆ(Divorce) ಉಪಬಂಧ ಕಲ್ಪಿಸಿರುವುದು ಮಹಿಳೆಯರ ಪಾಲಿಗೆ ಬಹುಮಟ್ಟಿಗೆ ವರದಾನವಾಯಿತು. ಆದರೆ ಇದರಿಂದ ಜೀವನಾಧಾರ ಭತ್ಯ ಅಥವಾ ಜೀವನ ನಿರ್ವಹಣೆಯ ಸಮಸ್ಯೆ ಉದ್ಭವಿಸಿತು. ಭಾರತೀಯ ವಿಧವೆಯರ ದುಃಖಯುತ ಜೀವನದಂತೆ ವಿಚ್ಛೇದಿತ ಮಹಿಳೆಯರ ಜೀವನವೂ ಕೂಡ ಸಮಸ್ಯೆಯೇ ಆಯಿತು. ವಿಚ್ಛೇದಿತ ಮಹಿಳೆಯರನ್ನು ತಮ್ಮ ತವರಿನಲ್ಲಿ ಹಾಗೂ ಅತ್ತೆ ಮನೆ ಎರಡೂ ಕಡೆ ಅನಾದರ, ತಿರಸ್ಕಾರದಿಂದ ಕಂಡು ತಪ್ಪಿತಸ್ಥರೆಂದೇ ಭಾವಿಸುವುದರಿಂದ ಈ ಸಮಸ್ಯೆಗೆ ಅತಿ ತುರ್ತು ಪರಿಹಾರಗಳನ್ನು ಗುರುತಿಸಬೇಕಾಗುತ್ತದೆ. ಇದು ಅನಿವಾರ್ಯವೂ ಹೌದು. ತಮ್ಮೆಲ್ಲ ನಿರೀಕ್ಷೆ ಆಕಾಂಕ್ಷೆಗಳು ಬತ್ತಿ ಹೋಗಿ

ಅವಲಂಬನೆಯೂ ದೊರೆಯದೇ ಹೋದಾಗ ದಾರಿ ಕಾಣದ ದುರ್ದೈವಿ ಮಹಿಳೆಯರು ಆತ್ಮಹತ್ಯೆಯನ್ನೇ ಕಟ್ಟಕಡೆಯ ಪರಿಹಾರವೆಂದು ಆಯ್ಕೆಮಾಡಿಕೊಳ್ಳುವ ಅಪಾಯವಿದೆ. ಹೀಗಾಗಿ ಅತಿ ಮಹತ್ವದ ಸ್ಥಾನ ನೀಡಲಾಗಿರುವ ವಿವಾಹಸಂಸ್ಥೆಯಲ್ಲಿ ಹುಡುಗ ಹಾಗೂ ಹುಡುಗಿಯ ವಿವಾಹ ಮಾಡುವುದು ಭವಿಷ್ಯದ ಸುಖೀ ಕುಟುಂಬ ನಿರ್ಮಾಣ ಹಾಗೂ ಕೂಡಿ ಬಾಳುವ ಸುಖೀ ಜೀವನಕ್ಕಾಗಿರದೆ, ಕೇವಲ ಒಬ್ಬ ಹುಡುಗಿಯನ್ನು ಮತ್ತೊಂದು ಕುಟುಂಬದಲ್ಲಿ ಬಲವಂತವಾಗಿ ಜೋಡಣೆ(Transplantation) ಮಾಡುವುದು ಎಂಬ ಆಲೋಚನೆ ಮೂಡಿಸುತ್ತದೆ. ಇದಕ್ಕಾಗಿಯೇ ಅವಳ ಜೀವನ ಶೈಲಿ, ಶಿಕ್ಷಣ, ಮನೋಭಾವ, ಬುದ್ಧಿಮತ್ತೆ ಸಮಸ್ತವನ್ನೂ ಅಣಿಗೊಳಿಸಲು ಚಿಕ್ಕಂದಿನಿಂದಲೇ ಅವಳಿಗೆ ತರಬೇತಿ ನೀಡಲಾಗಿರುತ್ತದೆ. ಆದ್ದರಿಂದ ಇದ್ದಕ್ಕಿದ್ದಂತೆ ಎದುರಾಗುವ ಯಾವುದೇ ದುರಂತವನ್ನು ಅಥವಾ ಅಪಾಯವನ್ನು ಆಕೆ ಧೈರ್ಯವಾಗಿ ಎದುರಿಸಲು ತಾನೇ ತನ್ನ ಬದುಕನ್ನು ನಡೆಸುವ ಸ್ಥೈರ್ಯವನ್ನಾಗಲಿ, ಆತ್ಮವಿಶ್ವಾಸವನ್ನಾಗಲಿ ಹೊಂದಿರುವುದಿಲ್ಲ.

ವಿಧವೆಯರು, ಪರಿತ್ಯಕ್ತೆಯರು ಹಾಗೂ ಒಂಟಿ ಮಹಿಳೆಯರು

ಹಿಂದೂಗಳಲ್ಲಿ ವಿಧವೆಯರನ್ನು ನತದೃಷ್ಟರೆಂದು ಅಮಂಗಳಕಾರಕರೆಂದು ಪರಿಗಣಿಸಲಾಗಿದೆ. ೬ನೇ ಶತಮಾನದ ತರುವಾಯ ಬ್ರಾಹ್ಮಣರು ಹಾಗೂ ಅವರ ಶಾಸ್ತ್ರಗಳಲ್ಲಿ ವಿಧವಾ ಮರುವಿವಾಹವನ್ನು ಅತ್ಯಂತ ಕಟ್ಟುನಿಟ್ಟಾಗಿ ನಿಷೇಧಿಸಲಾಗಿತ್ತು. ಈ ಬಗೆಯ ವಿವಾಹದ ಬಗ್ಗೆ ಹಲವಾರು ಪಂಡಿತರು ನಿರ್ಬಂಧಗಳನ್ನು ವಿಧಿಸಿ ಮಹಿಳೆಯರ ಅತಿಮುಖ್ಯ ಸವಲತ್ತನ್ನು ಸಂಹಿತೆಗಳಲ್ಲಿ ಬಂಧಿಸಿಟ್ಟರು. ಅಂದಿನ ಬ್ರಾಹ್ಮಣರ ಮೇಲ್ಪಂಕ್ತಿಯನ್ನು ಅನುಸರಿಸಿದ ಇತರ ಜಾತಿಗಳ ಜನರೂ ಕೂಡ ಅದರಿಂದ ಪ್ರಭಾವಿತರಾಗಿದ್ದುದು ಸ್ಪಷ್ಟವಾಗುತ್ತದೆ. ಆದಾಗ್ಯೂ, ಇತರ ಜಾತಿಗಳಲ್ಲಿ ವಿಧವಾ ವಿವಾಹ ಒಂದಿಲ್ಲೊಂದು ರೀತಿಯಲ್ಲಿ ಇನ್ನೂ ಆಚರಣೆಯಲ್ಲಿ ಉಳಿದುಕೊಂಡಿದೆ.[೧] ಉತ್ತಮ ಜಾತಿಯ ಹಿಂದೂ ಮಹಿಳೆಯ ವಿಧವಾ ಬದುಕು ದುರಂತಮಯವಾಗಿದ್ದಿತಾದರೂ ಎಲ್ಲರೂ ಒಂದೇ ರೀತಿಯಲ್ಲಿ ದುಃಖಿಗಳಾಗುತ್ತಿರಲಿಲ್ಲ. ಬಾಲವಿಧವೆ ಅಥವಾ ಸಂತಾನವಿರದ ವಿಧವೆಯರ ಜೀವನಕ್ಕಿಂತ ವಯಸ್ಸಾದ ವಿಧವೆಯರ ಜೀವನ ಬಹುಪಾಲು ಉತ್ತಮವಾಗಿರುತ್ತಿತ್ತು. ಅವರಿಗೆ ಕುಟುಂಬದಲ್ಲಿ ಹಿರಿಯರೆಂಬ ಗೌರವ, ಗಂಡನ ಸ್ವತ್ತು ಆಕೆಗೆ ಬಾರದಿದ್ದರೂ ಅದರಿಂದ ಬರುವ ವರಮಾನ ದೊರೆಯುತ್ತಿತ್ತು. ಹಾಗೂ ಆಕೆ ಅದನ್ನು ಕುಟುಂಬದ ಕಾನೂನುಸಮ್ಮತ ಅವಶ್ಯಕತೆಗಳಿಗೆ ನೀಡಲೂಬಹುದಿತ್ತು. ಸಾಮಾನ್ಯವಾಗಿ ವಿಧವೆಯರಿಗೆ ಜೀವನದ ಅತಿಸಾಮಾನ್ಯ ಸುಖಗಳೂ ಕೂಡ ಲಭ್ಯವಿರಲಿಲ್ಲ. ದಿನಕ್ಕೊಂದು ಬಾರಿ ಊಟ ಮಾಡುವುದನ್ನು ಹೊರತುಪಡಿಸಿ ಬೇರೇನನ್ನೂ ತಿನ್ನಲೂ ಸಾಧ್ಯವಿರಲಿಲ್ಲ. ಬಾಲವಿಧವೆ ಋತುಮತಿಯಾದ ಕೂಡಲೇ ಕೂದಲನ್ನು ತೆಗೆಸಿ ವಿರೂಪಗೊಳಿಸಿ ಏಕವಸ್ತ್ರಧಾರಿಣಿಯನ್ನಾಗಿಸಲಾಗುತ್ತಿತ್ತು. ಆಕೆ ವಿವಾಹ ಮುಂತಾದ

ಯಾವ ಮಂಗಳಕರ ಸಂದರ್ಭಗಳಲ್ಲಿ ಭಾಗವಹಿಸುವಂತಿರಲಿಲ್ಲ. ಮಾತ್ರವಲ್ಲ ಯಾರ ಮುಂದೆಯೂ ಬರದೆ ಅಡಗಿಕೊಂಡಿರಬೇಕಿತ್ತು. ಗಂಡನ ಸಾವಿಗೆ ಅವಳ ಕಾಲುಗುಣ, ದುರದೃಷ್ಟ, ಕೆಟ್ಟ ನಕ್ಷತ್ರ ಮುಂತಾದುವನ್ನೇ ಗುರಿಮಾಡಲಾಗುತ್ತಿದ್ದು, ಕುಟುಂಬದವರೆಲ್ಲ ತಮ್ಮ ವಿಧವೆ ಹೆಣ್ಣು ಮಕ್ಕಳು, ಸೋದರಿಯರು ಹಾಗೂ ತಾಯಿ, ಅತ್ತೆಯರು ಮಾನಸಿಕವಾಗಿ ಹಾಗೂ ದೈಹಿಕವಾಗಿ ಅನುಭವಿಸುತ್ತಿದ್ದ ಬವಣೆಯನ್ನು ಕಂಡರೂ ಕಾಣದಂತಿರುತ್ತಿದ್ದರು.[5] ಆದರೂ ಎಳೆ ವಯಸ್ಸಿನ ಹುಡುಗಿಯರಿಗೆ ಮರುವಿವಾಹದ ಮಾತೆತ್ತುವಂತಿರಲಿಲ್ಲ. ಹೀಗಾಗಿ ವಿಧವೆಯರು ಜೀವನದಲ್ಲಿ ಎಲ್ಲ ಬಗೆಯ ಆಸಕ್ತಿ, ಉತ್ಸಾಹ ಹಾಗೂ ಜೀವಂತಿಕೆ ಕಳೆದುಕೊಂಡು ಮೂಕ ಪ್ರಾಣಿಗಳಂತೆ ದುಡಿಯುತ್ತ ಬದುಕಬೇಕಾಗಿತ್ತು. ಶಿಕ್ಷಣ ಪ್ರಸಾರ, ಅವಕಾಶ, ದೊರೆತು ವಿಧವಾ ಶಿಕ್ಷಣಕ್ಕೆ ಮಹತ್ವ ದೊರೆತದ್ದರಿಂದ ಅನೇಕ ಮಹಿಳೆಯರ ಕತ್ತಲ ಬಾಳಿಗೆ ಅರಿವಿನ ಬೆಳಕು ಮೂಡಿತು. ಎಂದೆಂದಿಗೂ ಮರುಮದುವೆಯ ಬಗ್ಗೆ ಮಾತನಾಡಬಾರದಿದ್ದ ವಿಧವೆಯರು ಆ ಬಗ್ಗೆ ಚಿಂತಿಸಿ ಮರುಮದುವೆಗೆ ಸಮ್ಮತಿಯನ್ನು ನೀಡಲಾರಂಭಿಸಿದರು. ತರುವಾಯ ವಿಧವೆಯರಿಗೆ ಶಿಕ್ಷಣ ನೀಡಿ ಅವರೂ ಕೂಡ ಶಿಕ್ಷಕಿಯರಾಗಲು ಪ್ರಯತ್ನಿಸಲಾಯಿತು. ಪ್ರಾರಂಭದಲ್ಲಿ ಈ ಪ್ರಯತ್ನ ಫಲನೀಡಿತಲ್ಲದೆ, ಅದಕ್ಕೆಂದೇ ಪ್ರಾರಂಭಿಸಲಾದ ಸಂಸ್ಥೆಗಳ ಮೂಲಕ ಪದವೀಧರೆಯರಾಗಿ ಶಿಕ್ಷಣ ಹಾಗೂ ಸಮಾಜ ಸುಧಾರಣೆಯ ಕ್ಷೇತ್ರದಲ್ಲಿ ಯಶಸ್ವಿಗಳಾದ ಮಹಿಳೆಯರೂ ಇದ್ದರು. ಆದಾಗ್ಯೂ ಇದರಿಂದ ಉಳಿದವರು ವಿಧವಾ ಮರುವಿವಾಹದ ಬಗ್ಗೆ ಹೆದರಿ ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಲು ಕಳುಹಿಸಲೇ ಇಲ್ಲ. ಇಂದಿಗೂ ಕೂಡ ವಿಧವೆಯರಾದ ಹೆಣ್ಣುಮಕ್ಕಳು ಬಹುಮಟ್ಟಿಗೆ ಸಾಮಾಜಿಕವಾಗಿ ಅಪಮಾನ, ಅಳುಕು ಹಾಗೂ ಕೀಳರಿಮೆಯಿಂದಾಗಿ ಜೀವನವನ್ನು ಎದುರಿಸಲು, ದಿಟ್ಟತನದಿಂದ ಮುಂದುವರಿಯಲು ಪ್ರಯತ್ನಿಸುವುದಿಲ್ಲ. ಇಂಥ ಮಹಿಳೆಯರಿಗೆ ಸ್ವಾವಲಂಬನೆಯ ಮಾರ್ಗದರ್ಶನ ನೀಡಿ ತಮ್ಮ ಹಾಗೂ ತಮ್ಮ ಅವಲಂಬಿತರ ಜೀವನವನ್ನು ಸಹನೀಯವಾಗಿ, ಸುಖಕರವಾಗಿ ಮಾಡಿಕೊಳ್ಳುವ ಅವಕಾಶವನ್ನು ಒದಗಿಸಬೇಕಾಗಿದೆ.

ಪರಿತ್ಯಕ್ತ(Deserted) ಹಾಗೂ ನಾನಾ ಕಾರಣಗಳಿಂದ ಒಂಟಿಯಾಗಬೇಕಾದ ಮಹಿಳೆಯರು ಹಿಂದೆಂದಿಗಿಂತಲೂ ಈಗ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಆಧುನಿಕ ಶಿಕ್ಷಣ, ಕಾನೂನುಗಳ ತಿದ್ದುಪಡಿ, ಹೊಸ ಕಾನೂನುಗಳ ಜಾರಿಯ ಕಾರಣದಿಂದ ಉಂಟಾದ ಹೊಸ ಸಾಮಾಜಿಕ ಬದಲಾವಣೆ ಹಾಗೂ ಮಹಿಳೆಯರಲ್ಲಿ ಏಕಾಂಗಿಯಾಗಿಯೂ ಬದುಕಬಲ್ಲೆ ಎಂಬ ಛಲ ಮೂಡುತ್ತಿರುವ ಈ ಇಪ್ಪತ್ತೊಂದನೆಯ ಶತಮಾನದಲ್ಲಿ ಕೂಡ ಹಲವಾರು ಕಾರಣಗಳಿಂದ ಪರಿತ್ಯಕ್ತೆಯರಾದ ಮಹಿಳೆಯರು ಒಂಟಿ ಜೀವನವನ್ನು ನಡೆಸಬೇಕಾದ ಪರಿಸ್ಥಿತಿಯುಂಟಾಗಿದೆ. ಕುಟುಂಬ ಸುಖಿ ಸಂಸಾರವಾಗಬೇಕಾದರೆ ಪತಿಪತ್ನಿಯರಿಬ್ಬರ ಪರಸ್ಪರ ಸಮಾನ ಅವಲಂಬನೆ, ಶ್ರಮ ಹಾಗೂ ಎಲ್ಲದರಲ್ಲೂ ಸಮಪಾಲು ಇರುವುದು ಅಗತ್ಯ. ಆದರೆ ನಮ್ಮ ವಿವಾಹ

ಕಾನೂನುಗಳಲ್ಲಿ ಇಂಥ ಭಾವನಾಬಂಧವನ್ನು ಪರಿಗಣಿಸುವುದಿಲ್ಲ. ವಿವಾಹ ಮುರಿದುಬಿದ್ದಲ್ಲಿ ಪತ್ನಿಗೆ ಮನೆಯ ಆಸ್ತಿಯಲ್ಲಾಗಲಿ, ಆ ಸಂಸಾರಕ್ಕಾಗಿ ಅವಳು ಮಾಡಿದ ಸೇವೆ, ದುಡಿತ ಅಥವಾ ಇನ್ನಾವುದೇ ಪರಿಶ್ರಮವನ್ನು ಕೇವಲ ಗೃಹಿಣಿಯ ಕರ್ತವ್ಯವೆಂದು ನಿರ್ಲಕ್ಷಿಸಲಾಗುತ್ತದೆ. ಹೀಗಾಗಿ ಅವಳನ್ನು ಮನೆಯಿಂದ ಗಂಡನು ಹೊರಹಾಕಿದರೆ, ಆಕೆ ತನ್ನ ಹಕ್ಕಿನದಾಗಿ ಅಥವಾ ಭಾವನಾತ್ಮಕವಾಗಿಯಾಗಲಿ ಏನನ್ನೂ ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಇದು ಹೆಣ್ಣಿನ ಮಾನಸಿಕ ಕ್ಷೋಭೆಗೆ ಅತಿಮುಖ್ಯ ಕಾರಣವಾಗುತ್ತದೆ. ಇನ್ನು ಅವಿಭಕ್ತ ಕುಟುಂಬಗಳಲ್ಲಿರಲಿ, ಸಣ್ಣ ಕುಟುಂಬದಲ್ಲೇ ಇರಲಿ, ಮಹಿಳೆಗೆ ಸ್ವಂತ ಅಭಿಪ್ರಾಯ ನೀಡಲು ಅಥವಾ ತನ್ನ ಸಂಪಾದನೆಯನ್ನು ತನ್ನಿಷ್ಟದಂತೆಯೇ ಕುಟುಂಬದಲ್ಲಿ ವೆಚ್ಚಮಾಡಲು ಅವಕಾಶ ನೀಡುವುದಿಲ್ಲ. ವಿವಾಹಕ್ಕೆ ಮುಂಚೆ ತಂದೆ ಹಾಗೂ ಅಣ್ಣಂದಿರು ಆಕೆಯ ವಿವಾಹಕ್ಕಾಗಿ, ಮನೆ ಕಟ್ಟಿಸಲು ಅಥವಾ ಇತರ ಬಗೆಯ ಆಸ್ತಿಯನ್ನು ಮಾಡಿಕೊಳ್ಳಲು ಹುಡುಗಿಯರ ವರಮಾನವನ್ನು ಬಳಸಿಕೊಳ್ಳುತ್ತಾರೆ. ಹೀಗಾಗಿ ಕೆಲವೊಮ್ಮೆ ವಿದ್ಯಾವಂತೆಯಾಗಿ ಸೂಕ್ತ ಉದ್ಯೋಗ ಹೊಂದಿದ್ದರೂ, ಆಕೆ ತನ್ನ ಇತರ ಸಹವರ್ತಿಗಳಂತೆ ಹಣವನ್ನು ತನಗಾಗಿಯೇ ಬಳಸಲು ಸಾಧ್ಯವಾಗಲಾರದು. ಇನ್ನು ವಿವಾಹದ ಮೊದಲೇ ಹುಡುಗಿಯ ಉದ್ಯೋಗದ ಬಗ್ಗೆ ಖಚಿತಪಡಿಸಿಕೊಳ್ಳುವ ಮಧ್ಯಮ ವರ್ಗದ ಜನ ತಮ್ಮ ಸಂಸಾರದ ನೊಗ ಹೊರಲು ಹೊಸದಾಗಿ ಕುಟುಂಬಕ್ಕೆ ಕಾಲಿಟ್ಟ ಸೊಸೆಯನ್ನೂ ಸೇರಿಸುತ್ತಾರೆ. ಇಲ್ಲಿ ಕೂಡ ಆಕೆ ಗಂಡ, ಮಾವ, ಅತ್ತೆ ಮುಂತಾದವರ ಹಿಡಿತದಲ್ಲಿದ್ದು, ಅವರ ಅಗತ್ಯತೆಗಳಿಗೆ, ಅಭಿಪ್ರಾಯಗಳಿಗೆ ತನ್ನ ಒಲ್ಲದ ಮನವನ್ನು ಒಗ್ಗಿಸಿಕೊಳ್ಳಬೇಕಾಗುತ್ತದೆ. ಆರ್ಥಿಕವಾಗಿ ತಾನು ಸ್ವತಂತ್ರಳಿದ್ದರೂ ಅದು ಗಳಿಸುವುದಕ್ಕಷ್ಟೇ ಸೀಮಿತವಾಗಿ ತನ್ನಿಷ್ಟದಂತೆ ವೆಚ್ಚಮಾಡಲು ಅವಕಾಶವಿಲ್ಲದಾಗ ಮಹಿಳೆಗೆ ತನ್ನ ಅಸ್ತಿತ್ವದ ಬಗ್ಗೆಯೇ ಜಿಗುಪ್ಸೆಯುಂಟಾಗಬಹುದು. ಆದರೆ ಮೊದಲೇ ತಾನು 'ಬದ್ಧ'ಳಾಗಿರುವುದಾಗಿ ವಚನ ಕೊಟ್ಟಿದ್ದ ತಪ್ಪಿಗೆ ಆಕೆ ಸಿಡಿದುಬಿದ್ದರೂ ಕರ್ತವ್ಯಚ್ಯುತಳಾಗದೆ ಹತಾಶಳಾಗಿ ತನ್ನ ಸ್ವಂತ ಮನೆ, ಸಂಸಾರ, ಸುಂದರ ಕನಸುಗಳಿಗೆ ತಿಲಾಂಜಲಿ ನೀಡಿ ಯಾಂತ್ರಿಕ ದುಡಿಮೆಗೆ ತನ್ನನ್ನು ಒಡ್ಡಿಕೊಳ್ಳುತ್ತಾಳೆ. ತನ್ನ ಪರಿಶ್ರಮದ ಫಲವನ್ನು ತಾನೇ ತನ್ನ ಇಚ್ಛೆಗೆ ತಕ್ಕಂತೆ ವೆಚ್ಚಮಾಡಿ, ಇತರರಿಗೆ ನೀಡಲು ತನಗೆ ಇಷ್ಟವಾದರೆ ಮಾತ್ರವೇ ನೀಡುವಂಥ ಪರಿಸ್ಥಿತಿಯುಂಟಾಗಲು ಮಹಿಳೆಗೆ ಇಚ್ಛಾ ಸ್ವಾತಂತ್ರ್ಯ ದೊರೆಯಬೇಕಾದ ಅಗತ್ಯತೆಯಿದೆ.

ಮಹಿಳೆಯರ ಲೈಂಗಿಕ ಶೋಷಣೆ ಅನಾದಿ ಕಾಲದಿಂದ ಇದ್ದರೂ, ಇಂದಿನ ಜಾಗತೀಕರಣದ ಯುಗದಲ್ಲೂ ಕೂಡ ಮಹಿಳೆಯ ಜೀವನದ ಜತೆಗೆ ಅಂಟಿಕೊಂಡಿರುವ ಪೀಡೆಯಾಗಿದೆ. ಹಸುಗೂಸುಗಳಿಂದ ಹಿಡಿದು ವಯೋವೃದ್ಧೆಯರವರೆಗೂ ಪುರುಷನ ಲೈಂಗಿಕ ತೃಷೆಯನ್ನು ತೀರಿಸುವ ಹೆಣ್ಣು ಅವನ ಕೈಗೆಟಕುವ ಕಾಮದ ಗೊಂಬೆಯಾಗುತ್ತಾಳೆ. ಅತ್ಯಾಚಾರ ಈಗ ಎಷ್ಟು ಸಾಮಾನ್ಯವಾಗಿದೆಯೆಂದರೆ, ಮೊದಲು ಅಂಥ

ಸುದ್ದಿಗಳಿಂದ ಮನಸ್ಸು ತಲ್ಲಣಗೊಂಡು ಘಾತವುಂಟಾಗುತ್ತಿತ್ತು. ಈಗ ಪ್ರತಿನಿತ್ಯದ ವಾರ್ತಾಪತ್ರಿಕೆಯ ಸಾಮಾನ್ಯ ಸಂಗತಿಯಾಗಿದೆ. ಹದಿಹರಯದ ಹುಡುಗರ ಅರೆಬರೆ ಅರಿವಿನ ಅತ್ಯುತ್ಸಾಹ, ಕುತೂಹಲ ಹಾಗೂ ವಯಸ್ಸಿನ ಆವೇಗದಿಂದ ತರುಣಿಯರು ಕೂಡ ಮೋಸ ಹೋಗಿ ಪರಿಸ್ಥಿತಿ ಹದಗೆಟ್ಟು ಪರಿಣಾಮವನ್ನು ಎದುರಿಸಲಾರದೆ, ಆತ್ಮಹತ್ಯೆಗೆ ಪ್ರಯತ್ನಿಸುವುದುಂಟು. ಕೆಲವೊಮ್ಮೆ ಇದು ಪರಸ್ಪರವಾದರೂ ಯಾವುದೇ ರೀತಿಯಿಂದಲೂ ಹುಡುಗಿಗೇ ಹೆಚ್ಚಿನ ಮಟ್ಟಿಗೆ ಮೋಸವಾಗುವುದು. ಇದೇ ರೀತಿ ಒಬ್ಬನೇ ಪುರುಷ ಅನೇಕ ಹೆಣ್ಣುಗಳಿಗೆ ಸಲ್ಲದ ಭರವಸೆ ನೀಡಿ ವಂಚಿಸುವುದು, ಅನೇಕ ಹೆಣ್ಣುಗಳನ್ನು ವಿವಾಹವಾಗುವುದು, ವಿದೇಶಿ ಉದ್ಯೋಗಿಗಳು ಅಲ್ಲಿಯ ಐಷಾರಾಮಕ್ಕೆ ತಕ್ಕಂತೆ ಜೀವನ ನಡೆಸಿ, ತಾಯ್ತಂದೆಯರ ಒತ್ತಾಯಕ್ಕೆ, ವರದಕ್ಷಿಣೆ ಆಸೆಗೆ ಬಲಿಬಿದ್ದು ಭಾರತೀಯ ಹುಡುಗಿಯನ್ನು ವಿವಾಹವಾಗಿ ಕೆಲದಿನ 'ಬದಲಿರುಚಿ' ಕಂಡು ಅನಂತರ ವಿದೇಶಗಳಿಗೆ ತೆರಳಿ, ಇಲ್ಲಿನ ಹೆಂಡತಿಯನ್ನು ನಿರ್ಲಕ್ಷಿಸುವುದು ಹೀಗೆ, ಹೆಣ್ಣಿನ ದೈಹಿಕ, ಮಾನಸಿಕ ಜೀವನಕ್ಕೆ ಕರಾಳ ಶಿಕ್ಷೆ ನೀಡಿ ತಾವು ಮಾತ್ರ ಪರಿಶುದ್ಧರಂತೆ, ಸೋಗು ಹಾಕುತ್ತ ಹೊಸ ಹುರುಪಿನಿಂದ ಹೊಸಹೊಸ ಅಪರಾಧಗಳನ್ನು ಮಾಡುವ ಪುರುಷ ಪೀಳಿಗೆ ಹೆಚ್ಚುತ್ತಿದೆ. ಇದಕ್ಕೆ ಈಗಿನ ಜಾಹೀರಾತು, ಸಿನಿಮಾ, ದೂರದರ್ಶನ, ಉನ್ಮಾದ ಹೆಚ್ಚಿಸುವ ಪತ್ರಿಕೆಗಳು ಒಟ್ಟಾರೆ ಸಮೂಹ ಮಾಧ್ಯಮಗಳು ಬಹುಮಟ್ಟಿಗೆ ಕಾರಣವಾಗುತ್ತಿವೆ. ಇನ್ನು ಹುಡುಗಿಯರನ್ನು ಅಪಹರಿಸಿ ಲೈಂಗಿಕ ಶೋಷಣೆ ನಡೆಸಿ, ಕೆಲವೊಮ್ಮೆ ಹಲವಾರು ಸ್ಥಳಗಳಲ್ಲಿ, ಸಾಮೂಹಿಕ ಅತ್ಯಾಚಾರ ನಡೆಸಿ ಕೊಲ್ಲುವ ಅಥವಾ ವೇಶ್ಯಾಗೃಹಗಳಿಗೆ ಮಾರುವ ವ್ಯವಸ್ಥಿತ ಜಾಲಗಳೇ ಇವೆ. ಯುದ್ಧದ ಪರಿಣಾಮದ ಭೀಕರತೆ ಅನುಭವಿಸುವುದು ಮಹಿಳೆಯಲ್ಲದೆ ಪುರುಷನಲ್ಲ. ಹುಡುಗಿಯರೇ ದಾರಿ ತಪ್ಪಲಿ, ಪುರುಷರೇ ದೌರ್ಜನ್ಯ ನಡೆಸಿರಲಿ ಅಂತಿಮವಾಗಿ ತನ್ನ ದೈಹಿಕ, ಮಾನಸಿಕ ಸ್ಥೈರ್ಯ, ಮಾನ ಮರ್ಯಾದೆ ಕಳೆದುಕೊಂಡು ಎಲ್ಲರಿಂದ ದೋಷಣೆಗೆ, ನಿಂದನೆಗೆ, ಬಹಿಷ್ಕಾರಕ್ಕೆ ಗುರಿಯಾಗುವ ನತದೃಷ್ಟೆ ಮಹಿಳೆಯೇ ಆಗಿರುತ್ತಾಳೆಂಬುದು ಕಟುಸತ್ಯ. ಇಂಥ ಸನ್ನಿವೇಶಗಳಲ್ಲಿ ಸಾಕ್ಷ್ಯಾಧಾರಗಳನ್ನು ಒದಗಿಸಿ ಕಾನೂನು ಸೌಲಭ್ಯವನ್ನು ಪಡೆಯಲು, ಒದಗಿಸಲು ಮೊದಲೇ ಅಪಮಾನ, ನಾಚಿಕೆಯಿಂದ ಕಂಗೆಟ್ಟ ಮಹಿಳೆಗೆ ಸಾಧ್ಯವಾಗಲಾರದು. ಹೀಗಾಗಿ ನ್ಯಾಯಾಲಯಗಳು ದೋಷಿಯಾದರೂ ಪುರುಷನನ್ನು ಶಿಕ್ಷಿಸಲು ಸಾಧ್ಯವಾಗುವುದಿಲ್ಲ. ಒಬ್ಬ ಅವಿವಾಹಿತ ಬಾಲಕಿ ಅಥವಾ ಯುವತಿ ಲೈಂಗಿಕ ದೌರ್ಜನ್ಯ ಅಥವಾ ಅತ್ಯಾಚಾರಕ್ಕೊಳಗಾದ ಪರಿಣಾಮವಾಗಿ ಬಲವಂತವಾಗಿ ಅವಿವಾಹಿತ ತಾಯಿಯಾಗುತ್ತಾಳೆ. ಅವಿವಾಹಿತ ಹುಡುಗಿ ತಾನಾಗಿಯೇ ಬಯಸಿ ವಿವಾಹಿತ ಅಥವಾ ಅವಿವಾಹಿತ ಪುರುಷನೊಡನೆ ಲೈಂಗಿಕ ಸಂಪರ್ಕ ಹೊಂದಿ ಗರ್ಭಿಣಿಯಾಗಿ ಮಗುವನ್ನು ಪಡೆದರೆ ಆಗಲೂ ಆಕೆ ಅವಿವಾಹಿತ ತಾಯಿಯೇ ಆಗುತ್ತಾಳೆ. ಆದರೆ ಇವೆರಡೂ ಸಂದರ್ಭಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ತಾಯ್ತಂದೆಯರ ಅತಿ ಶ್ರೀಮಂತಿಕೆ, ಮಕ್ಕಳಿಗೆ ಪ್ರೀತಿ, ನಿಯಂತ್ರಣ, ಮಾರ್ಗದರ್ಶನ

ನೀಡದಿರುವುದು ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಹರೆಯದ ವಯಸ್ಸಿನಲ್ಲಿ ಒಂಟಿತನ, ಹಟಮಾರಿತನವನ್ನು ಕಲಿಸುತ್ತದೆ. ಥಳುಕಿನ ಮಾತು, ವೇಷಭೂಷಣಕ್ಕೆ ಮನಸೋತು ಅವರು ಜಾರುವುದುಂಟು. ಹಾಗೆಯೇ ಆರ್ಥಿಕವಾಗಿ ಅತಿ ಹೀನಾವಸ್ಥೆಯಲ್ಲಿದ್ದು ಕೂಲಿ, ಮನೆಗೆಲಸ ಮುಂತಾದ ಕಡಿಮೆ ಮಜೂರಿಯಲ್ಲಿ ಕೆಲಸಮಾಡುವ ಮಹಿಳೆಯರು, ಹೆಣ್ಣು ಮಕ್ಕಳು ಮಾಲೀಕರು, ಅವರ ಬಂಧುಗಳು ಮತ್ತಿತರರ ಲೈಂಗಿಕ ತೃಷೆಗೆ ಆಹಾರವಾಗಿ ಅವಿವಾಹಿತ ತಾಯಂದಿರಾಗುತ್ತಾರೆ. ಗರ್ಭಪಾತ ಎಲ್ಲ ಸಂದರ್ಭಗಳಲ್ಲೂ ಪರಿಣಾಮಕಾರಿಯಾಗುವುದಿಲ್ಲ. ಕೆಲವರು ಮಕ್ಕಳನ್ನು ಹೆತ್ತು ದತ್ತು ನೀಡುತ್ತಾರೆ. ಮತ್ತೆ ಕೆಲವರು ವೇಶಾವೃತ್ತಿ ಹಿಡಿದು ತಮ್ಮ ಮಕ್ಕಳನ್ನು ಸಾಕುತ್ತಾರೆ. ಒಟ್ಟಿನಲ್ಲಿ ಅವಿವಾಹಿತ ತಾಯಂದಿರು ಒಂಟಿಯಾಗಿ ಬಲಿಪಶುಗಳಾಗುವ ಸಂದರ್ಭಗಳಿಗೆ ಪುರುಷರ ಪಲಾಯನ, ದರ್ಪ ಹಾಗೂ ಜವಾಬ್ದಾರಿಯಿಂದ ನುಣುಚಿಕೊಳ್ಳುವುದೇ ಕಾರಣವಾಗುತ್ತದೆ. ಕೆಲವೊಮ್ಮೆ ಉದ್ಯೋಗ ಸ್ಥಳಗಳಲ್ಲಿ ಎಂದರೆ ಕೂಲಿ ಕಾರ್ಮಿಕ ಮಹಿಳೆಯರು, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು, ಅಷ್ಟೇಕೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರನ್ನು ಕೂಡ ಲೈಂಗಿಕ ಕಿರುಕುಳ, ಅತ್ಯಾಚಾರ ಮುಂತಾದ ಪೀಡೆಗಳಿಂದ ಪುರುಷರು ಹಿಂಸಿಸುವುದು ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ. ಆದರೆ ಭೀತಿ ಹಾಗೂ ಅನಿವಾರ್ಯತೆಯ ಕಾರಣದಿಂದ ಇಂಥ ಘಟನೆಗಳು ಬೆಳಕಿಗೆ ಬರುವುದಿಲ್ಲ. ಅಷ್ಟೇಕೆ ತಮ್ಮ ಉದ್ಯೋಗದ ನಿಮಿತ್ತ ಪತ್ನಿಯರನ್ನು ನೀಚ ಕೆಲಸಕ್ಕೆ ಕಳುಹಿಸುವ ಪುರುಷರು ಸಾಕಷ್ಟು ಸಂಖ್ಯೆಯಲ್ಲಿರುವುದನ್ನು ಕೂಡ ಕಾಣಬಹುದು. ಹೀಗೆ ಮಹಿಳೆಯರ ಪಾಲಿಗೆ ನಿರಾತಂಕವಾದ, ನಿರ್ಭಯವಾದ, ಸ್ವಸಂತೋಷದ, ತೃಪ್ತಿದಾಯಕ ಜೀವನ ಬಹುಮಟ್ಟಿಗೆ ಅಲಭ್ಯವೇನೋ ಎನಿಸುವಷ್ಟು ಪುರುಷರ ದುಷ್ಟ ಪ್ರವೃತ್ತಿಗಳು ಬೆಳಕಿಗೆ ಬರುತ್ತಿವೆ. ಇಂಥವರನ್ನು ದಮನ ಮಾಡಲು, ಶಿಕ್ಷೆ ವಿಧಿಸಲು ಹಾಗೂ ಮಹಿಳೆಯರಿಗೆ ಪರಿಹಾರ, ಸಾಂತ್ವನ ನೀಡಲು ಸರ್ಕಾರ, ಸಂಘಸಂಸ್ಥೆಗಳು, ನ್ಯಾಯಾಲಯಗಳು ಹಲವಾರು ಪ್ರಯತ್ನಗಳನ್ನು ಮಾಡುತ್ತಿವೆ ನಿಜ, ಇದರಿಂದ ಕೆಲವರಿಗಾದರೂ ಜೀವನ ನಿರ್ವಹಣೆಗೆ ತಾತ್ಕಾಲಿಕ ಪರಿಹಾರ ಒದಗುತ್ತಿದೆ. ಆದರೆ ಶಿಕ್ಷಣ ಪಡೆಯದ, ಬೆಂಬಲವಿಲ್ಲದ, ದೋಷಿಯೆಂದು ನಿಂದಿತೆಯಾದ, ನಿರಪರಾಧಿ ಮಹಿಳೆಯರಿಗೆ ಆಶ್ರಯ, ಆದರ ನೀಡಲು ಮುಂದೆ ಬರುವವರು ಇಲ್ಲವೆಂದೇ ಹೇಳಬೇಕು. ಅಷ್ಟಿಷ್ಟು ಪ್ರತಿಭಟನೆ, ಚಳವಳಿ, ಪ್ರದರ್ಶನಗಳಿಂದ ತಾತ್ಕಾಲಿಕವಾಗಿ ಜನರಲ್ಲಿ ಕೆಚ್ಚು ಮೂಡಿ, ಸರ್ಕಾರದ ಗಮನ ಸೆಳೆಯಬಹುದು. ಆದರೆ ಮೂಲಭೂತ ಬದಲಾವಣೆಗೆ ಪ್ರಯತ್ನಿಸುವುದು ಅತ್ಯವಶ್ಯ. ಡಾ. ಸುಶೀಲಾ ಮೆಹತಾ ಅವರು ಹೀಗೆ ಹೇಳುತ್ತಾರೆ. "'ಇಂದು ಅನೇಕ ವಿದ್ಯಾವಂತ ಪುರುಷರು ಹಾಗೂ ಮಹಿಳೆಯರು ಭಾರತದಲ್ಲಿ ಈಗಾಗಲೇ ಶೈಕ್ಷಣಿಕ, ಔದ್ಯೋಗಿಕ ರಂಗಗಳಲ್ಲಿ ಮಹಿಳೆಯರು ಮುಂದುವರಿದಿದ್ದು, ರಾಜಕೀಯ, ಆರ್ಥಿಕ ಹಾಗೂ ಆಸ್ತಿ ಹಕ್ಕುಗಳನ್ನು ಕಾನೂನುಬದ್ಧವಾಗಿ ಪಡೆದಿರುವುದರಿಂದ ಮಹಿಳಾ ಆಂದೋಲನಗಳನ್ನು

ನಡೆಸುವ ಅವಶ್ಯಕತೆಯಿಲ್ಲವೆಂದು ವಾದಿಸುತ್ತಾರೆ. ಆದರೆ ಈ ಎಲ್ಲ ಬೆಳವಣಿಗೆ, ಸಂಶೋಧನೆ ಹಾಗೂ ಅಧ್ಯಯನಗಳಿಂದ, ಎಚ್ಚೆತ್ತ ಮಹಿಳೆಯರ ಸಂಖ್ಯೆ ಅತ್ಯಲ್ಪ ಪ್ರಮಾಣದ್ದಾಗಿದ್ದು, ಭಾರತದ ಅಸಂಖ್ಯಾತ ಮಹಿಳೆಯರು ಇಂದಿಗೂ ಕೂಡ ಅನೇಕ ನಿರ್ಬಂಧಗಳು, ಅಸಹಾಯಕತೆ ದೌರ್ಬಲ್ಯಗಳಿಂದ ನರಳುತ್ತಿದ್ದು, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಪುರುಷರೊಂದಿಗೆ ಸಮಾನತೆಯನ್ನು ಹೊಂದುವಲ್ಲಿ ವಿಫಲರಾಗಿದ್ದಾರೆ.'' ಇಂದು ಇಂದಿನ ಮಹಿಳೆಯರ ದಾರುಣ ಪರಿಸ್ಥಿತಿಯಾಗಿದೆ.

ಜೀವನ ಬೆಂಬಲಕ್ಕೆ ಪರಿಹಾರ ಮಾರ್ಗಗಳು

ಸಮಾಜದಲ್ಲಿ ಮಹಿಳೆಯರು ತಮ್ಮ ಜೀವನವನ್ನು ತಾವೇ ಕಂಡುಕೊಳ್ಳಲು ಅನುವು ಮಾಡಿಕೊಡ ಬೇಕಾದುದು ದೇಶ, ರಾಜ್ಯ ಸರ್ಕಾರಗಳ ಆದ್ಯ ಕರ್ತವ್ಯವಾಗಿರುತ್ತದೆ. ಭಾರತದಂಥ ಮಹಾನ್ ರಾಷ್ಟ್ರ ದಲ್ಲಿ ಅದರ ಮಾನವ ಸಂಪನ್ಮೂಲದ ಅರ್ಧಭಾಗದಷ್ಟಿರುವ ಮಹಿಳಾ ಜನಶಕ್ತಿಸಾಮರ್ಥ್ಯಗಳನ್ನು ರಾಷ್ಟ್ರೀಯ ಉತ್ಪಾದಕತೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಿಲ್ಲದಿರುವುದು ಈ ದೇಶಕ್ಕಾದ ಭಾರೀನಷ್ಟವೆಂದೇ ಹೇಳಬೇಕು. ಮಹಿಳೆಯರಿಗೆ ತಮ್ಮೊಳಗಿನ ಅಂತಚ್ಛಕ್ತಿಯ ಬಗ್ಗೆ ಅರಿವು ಮೂಡುವಂತೆ ಮಾಡಲು ಅವರಲ್ಲಿನ ಅಜ್ಞಾನದ ಕವಚವನ್ನು ತೆರೆಯಬೇಕಾಗಿದೆ. ಎಂದರೆ, ಉತ್ಪಾದನಾರಂಗಗಳಲ್ಲಿ ಅಥವಾ ಇನ್ನಾವುದೇ ಇತರ ಕ್ಷೇತ್ರಗಳಲ್ಲಿ, ಹೊಸ ತಂತ್ರಜ್ಞಾನ, ವಿಭಿನ್ನ ಕಾರ್ಯವಿಧಾನಗಳಲ್ಲಿ ಶಿಕ್ಷಣ, ತರಬೇತಿ ನೀಡಿ, ಹೊಸ ಅವಕಾಶಗಳನ್ನು ಸೃಷ್ಟಿಸಿದಲ್ಲಿ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ, ಪ್ರಯತ್ನಶೀಲತೆಯಲ್ಲಿ ಅತ್ಯುನ್ನತ ಮಟ್ಟದ ಸೃಜನಶೀಲೆಯರಾಗುವುದು ಮಾತ್ರವಲ್ಲ, ರಾಷ್ಟ್ರ ನಿರ್ಮಾಣದಲ್ಲಿ ಅತಿ ಮಹತ್ತ್ವದ ಪಾತ್ರವಹಿಸಬಲ್ಲರು. ಇದಕ್ಕಾಗಿ ಅವರಿಗೆ ನೈತಿಕ ಬೆಂಬಲ, ಗೌರವ, ಅವಕಾಶ ಒದಗಿಸುವುದು ಸರ್ಕಾರದ ಆದ್ಯತಾಪೂರ್ವಕ ಕಾರ್ಯನೀತಿಯಾಗಬೇಕು. ಈ ನಿಟ್ಟಿನಲ್ಲಿ ಮಹಿಳೆಯರು ಮೊಟ್ಟ ಮೊದಲು ಪರರಿಂದ ಜೀವನ ನಿರ್ವಹಣೆಯ ಪಾಲು ಪಡೆಯುವುದಕ್ಕಿಂತ ಎಂದರೆ ಪತಿ, ತಂದೆ, ಸೋದರರು, ಪುತ್ರರು ಅಥವಾ ಇನ್ನಾವ ಪುರುಷನನ್ನು ಅವಲಂಬಿಸುವುದಕ್ಕೆ ಬದಲಾಗಿ ತಾನೇ ಸ್ವತಃ ತನ್ನ ಬದುಕಿಗೆ, ಜೀವನೋಪಾಯವನ್ನು ಕಂಡುಹಿಡಿಯಬೇಕು. ಎಂದರೆ ವೈಯಕ್ತಿಕವಾಗಿ ಆಕೆಗೆ ಸ್ವಾವಲಂಬಿಯಾಗುವ ಮನೋಭಾವ ಮೂಡಬೇಕು. ಉದ್ಯೋಗಾವಕಾಶಗಳನ್ನು ಸೃಜಿಸುವಾಗ ಎರಡು ನೆಲೆಗಳಲ್ಲಿ ಎಂದರೆ

೧. ವ್ಯಕ್ತಿಗತವಾಗಿ(Individual)

೨. ಸಾಮೂಹಿಕವಾಗಿ(Group)

ಸ್ವಾವಲಂಬನೆಯ ಮಾರ್ಗಗಳನ್ನು ಸೂಚಿಸಬಹುದು. ಶ್ರೀಮತಿ ಹೆಲ್ವಿ ಸಿಪಿಲಾ(ಅಂತಾರಾಷ್ಟ್ರೀಯ ಮಹಿಳಾ ವರ್ಷದಲ್ಲಿ ಕಾರ್ಯದರ್ಶಿಯಾಗಿದ್ದವರು) ಹೀಗೆ ಸೂಚಿಸಿದ್ದಾರೆ.[೪] ನಿರ್ಧಾರ ತೆಗೆದುಕೊಳ್ಳುವ

ಪ್ರಕ್ರಿಯೆಯಲ್ಲಿ ಮಹಿಳೆಯರು ಭಾಗವಹಿಸಬೇಕಾದಲ್ಲಿ, ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕೊಡುವ ಮೂಲಕ ಅವರು ಸಿಲುಕಿರುವ ವಿಷವರ್ತುಲದಿಂದ ಹೊರಬರಲು ಕ್ಷಿಪ್ರ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಮತ್ತೆ ಅಸಮಾನತೆ ಮುಂದುವರಿಯುವ ಸಾಧ್ಯತೆಯಿರುವುದರಿಂದ ಅವರಿಗೆ ಸಮಾಜದಲ್ಲಿ ತಮ್ಮ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಲು ಅವಕಾಶವೊದಗಿಸಬೇಕು. ಶಿಕ್ಷಣ ಹಾಗೂ ತರಬೇತಿ ಅತ್ಯಂತ ಮುಖ್ಯ ವಿಷಯಗಳಾಗಿದ್ದರಿಂದ ಅವುಗಳಿಗೆ ಆದ್ಯ ಗಮನ ನೀಡಬೇಕು. ಅಷ್ಟೇ ಮುಖ್ಯವಾದುದೆಂದರೆ ಮಹಿಳೆಯರ ಕಾನೂನುಬದ್ಧಹಕ್ಕುಗಳು ವಿಶೇಷವಾಗಿ ವಿವಾಹ, ಉತ್ತರಾಧಿಕಾರ ಹಾಗೂ ಆಸ್ತಿ ಹಕ್ಕುಗಳಿಗೆ ಸಂಬಂಧಪಟ್ಟ ಕಾನೂನು ಉಪಬಂಧಗಳ ಬಗ್ಗೆ ಅವರಿಗೆ ಮನವರಿಕೆಯುಂಟುಮಾಡಿ ಅಲಿರಲ್ಲಿ ಕಾನೂನು ಪ್ರಜ್ಞೆ ಮೂಡಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಸಮಾಜ ಜೀವನದ ಮುಖ್ಯವಾಹಿನಿಯಲ್ಲಿ ಮಹಿಳೆಯರು ಸೇರಿ ಮುನ್ನಡೆಯಲು ತಮ್ಮ ಜೀವನಗುರಿಯನ್ನು ತಾವೇ ಮುಕ್ತವಾಗಿ ನಿರ್ಧರಿಸಲು ಬಲ ನೀಡುವಂಥ ಆರ್ಥಿಕ ಸ್ವಾತಂತ್ರ್ಯ ಅತಿಮುಖ್ಯವಾಗುತ್ತದೆ. ಪುರುಷರು ಹಾಗೂ ಮಹಿಳೆಯರಲ್ಲಿ ಶತಮಾನಗಳಿಂದ ಪೂರ್ವಾಗ್ರಹ ಪೀಡಿತವಾಗಿ ಸಾಗುತ್ತ ಬಂದಿರುವ ಪದ್ಧತಿಗಳು, ಸಂಪ್ರದಾಯಗಳು, ಮೂಢನಂಬಿಕೆಗಳು ಇಂದಿಗೂ ಮಹಿಳೆಯರಿಗೆ ಒದಗುತ್ತಿರುವ ವಿಪುಲ ಅವಕಾಶಗಳಿಂದ ಅವರು ಪ್ರಯೋಜನ ಪಡೆಯುವುದರಿಂದ, ತಮ್ಮ ಹಕ್ಕುಗಳನ್ನು ಚಲಾಯಿಸುವುದರಿಂದ ಅವರನ್ನು ಹಿಮ್ಮೆಟ್ಟಿಸುತ್ತಿವೆ. ಅನಕ್ಷರತೆ, ಅಪೌಷ್ಟಿಕತೆ, ದಾರಿದ್ರ್ಯ ಹಾಗೂ ಅನಿಯಂತ್ರಿತ ಜನಸಂಖ್ಯಾ ಸ್ಫೋಟ ಇವೆಲ್ಲವನ್ನು ಒಳಗೊಂಡಂತೆ ನಮ್ಮ ರಾಷ್ಟ್ರದ ಎಲ್ಲ ಅಭಿವೃದ್ಧಿ ಸಮಸ್ಯೆಗಳು ಹಾಗೂ ಸಾಮಾಜಿಕ, ಆರ್ಥಿಕ ಅಡಚಣೆಗಳಿಗೆ ಮಹಿಳೆಯರಿಗೆ ಹಕ್ಕು ಚಲಾವಣೆ ಹಾಗೂ ಅವಕಾಶಗಳನ್ನು ನೀಡದಿರುವುದೇ ಪ್ರಮುಖ ಕಾರಣವೆಂಬುದನ್ನು ಈಗಲಾದರೂ ನಾವು ಕಂಡುಕೊಳ್ಳಬೇಕಾಗಿದೆ.''

ಮಹಿಳೆಯರು ವೈಯಕ್ತಿಕವಾಗಿ ಸ್ವಾವಲಂಬಿಗಳಾಗುವಂತೆ ಅವರ ಸಂಪೂರ್ಣ ಸಾಮರ್ಥ್ಯಗಳನ್ನು ಬೆಳೆಸಲು, ಬಳಸಲು ಅನುವಾಗುವಂತೆ ಹಾಗೂ ಈ ಮೂಲಕ ರಾಷ್ಟ್ರೀಯ ಪ್ರಗತಿ ಸಾಧನೆಗೆ ನೆರವಾಗಲು ತಾಯ್ತಂದೆ, ಪೋಷಕರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಆಡಳಿತಗಾರರು, ಕಾರ್ಯನೀತಿ ರೂಪಿಸುವವರು ಎಲ್ಲಕ್ಕಿಂತ ಮುಖ್ಯವಾಗಿ ಉದ್ಯೋಗದ ನಿಯೋಜಕರು ದೃಢವಾದ ಪ್ರಯತ್ನಗಳನ್ನು ನಡೆಸುವುದು ಅತ್ಯಗತ್ಯ. ಮಹಿಳೆಯರ ಬಗ್ಗೆ ಪೂರ್ವಾಗ್ರಹರಹಿತ, ನಿಷ್ಪಕ್ಷಪಾತ ಹಾಗೂ ತಾರತಮ್ಯ ರಹಿತ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಅವಶ್ಯಕತೆಗಳಿಗೆ ತಕ್ಕಂತೆ ಮಹಿಳೆಯರು ಮಾನವ ಮಾತ್ರರೇ ಎಂಬುದನ್ನು ಬೋಧಕರು, ಯೋಜನಾಕರ್ತರು, ಆಡಳಿತಗಾರರು, ಅಧಿಕಾರಿಗಳು ಅರ್ಥಮಾಡಿಕೊಳ್ಳಬೇಕಲ್ಲದೆ, ಮಹಿಳೆಯರು ತಮ್ಮದೇ ಆದ ಸ್ವತಂತ್ರ ಸ್ಥಾನಮಾನ ಹಾಗೂ ಅಂತಸ್ತುಗಳನ್ನು ಹೊಂದಿದ್ದು ತಮ್ಮ ಕರ್ತವ್ಯಗಳನ್ನು ಹಾಗೂ ಹಕ್ಕುಗಳನ್ನು ಚಲಾಯಿಸಬಲ್ಲ

ವ್ಯಕ್ತಿಗಳು ಹಾಗೂ ನಾಗರಿಕರೆಂಬುದನ್ನು ಒಪ್ಪಿಕೊಳ್ಳಲೇಬೇಕು. ಆದ್ದರಿಂದ ಮಹಿಳೆಯರು ತಮ್ಮ ವ್ಯಕ್ತಿತ್ವ ಬೆಳವಣಿಗೆಗೆ(personality Develapment) ಸ್ವಾತಂತ್ರ್ಯ ಹಾಗೂ ಸಮಾನತೆಯ ಮೌಲ್ಯವನ್ನು ಕಂಡು ಕೊಳ್ಳಲು ನೆರವಾಗಬೇಕು. ಇದರಿಂದ ತಮ್ಮ ಸುತ್ತಲಿನ ಸಮುದಾಯದೊಂದಿಗೆ ಪರಸ್ಪರ ಸ್ಪಂದಿಸುವ ಮೂಲಕ ಅವರು ಬೌದ್ಧಿಕ ಮಟ್ಟದ ಮೇಲುಸ್ತರವನ್ನು ತಲುಪಲು ಸಾಧ್ಯವಾಗುತ್ತದೆ. ತರುವಾಯ ಸಮಾಜದಲ್ಲಿ ಮಹಿಳೆಯರ ಸ್ವಂತಿಕೆ ಹಾಗೂ ಸಮಗ್ರ ಬೆಳವಣಿಗೆಗೆ ಅವಕಾಶ ದೊರೆಯುತ್ತದೆ. ಇದರಿಂದ ಮಹಿಳೆಯರು ವ್ಯಕ್ತಿತ್ವ ವಿಕಸನದ ಜೊತೆಗೆ ತಮ್ಮ ವಿಶಿಷ್ಟತೆ, ಕೌಶಲ್ಯ, ಪ್ರತಿಭೆ, ಬೌದ್ಧಿಕತೆ ಹಾಗು ಆಸಕ್ತಿಗಳನ್ನು ಯಾವುದೇ ಶಿಕ್ಷೆ, ನಿರ್ಬಧ ಅಥವಾ ಹಿಂಜರಿಕೆಯಿಲ್ಲದೆ ಪ್ರಚುರಪಡಿಸಲು ಸಮರ್ಥರಾಗುತ್ತಾರೆ. ಇಂಥದೊಂದು ಸಮಗ್ರ ಸ್ವಾತಂತ್ರ್ಯ ದೊರೆಯಬೇಕಾದರೆ ಮಹಿಳೆಯರು ಸಾಮಾಜಿಕ, ಆರ್ಥಿಕ ವಿಷಮ ಪರಿಸ್ಥಿತಿಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಎದುರಿಸುವ ಛಲದಿಂದ ಮುನ್ನುಗ್ಗಬೇಕು. ತಮ್ಮ ಮಾನಸಿಕ ನಿರ್ಬಧ, ಹಿಂಜರಿಕೆಗಳನ್ನು ಮೊಟ್ಟಮೊದಲು ಜಾಗರೂಕತೆಯಿಂದ ತೊಡೆದುಹಾಕಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಹೀಗಾಗಿ ಬೌದ್ಧಿಕವಾಗಿ ಮೇಲ್ಮಟ್ಟ ತಲುಪಿದ ಮಹಿಳೆಯರು ತಮ್ಮ ಹೊಸ ಹೊಸ ಪಾತ್ರಗಳಲ್ಲಿ ಎಂದರೆ, ಶಿಕ್ಷಕಿಯರು, ವಿಜ್ಞಾನಿಗಳು, ಇಂಜಿನಿಯರುಗಳು, ಉದ್ಯಮಿಗಳು ಮುಂತಾದ ರಂಗಗಳಲ್ಲಿ ತಮ್ಮ ಯೋಗ್ಯತೆ ಹಾಗೂ ಬದಲಾದ ಸಾಮಾಜಿಕ ಅಂತಸ್ತಿಗೆ ತಕ್ಕಂತೆ ಸಮರ್ಥವಾಗಿ ಕಾರ್ಯನಿರ್ವಹಿಸಬೇಕು. ಅಷ್ಟೇ ಅಲ್ಲ, ಮಹಿಳೆಯರ ಬಗ್ಗೆ ಪುರುಷರು ಹಾಗೂ ಇತರ ಮಹಿಳೆಯರ ಮನೋಭಾವ ಬದಲಾಗಿ ನಿತ್ಯ ಪರಿವರ್ತನ ಶೀಲ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಹಾಗೂ ಮಾದರಿ ಪಾತ್ರಗಳ ಬಗ್ಗೆ ಅವರ ಅಭಿಪ್ರಾಯಗಳನ್ನು ಮಾರ್ಪಡಿಸಿಕೊಂಡು ಅನುಮೋದಿಸುವಂತಹ ಪ್ರಭಾವವನ್ನು ಬೀರಬೇಕು.

ವ್ಯಕ್ತಿಗತ ಉದ್ಯೋಗಾವಕಾಶಗಳು : ಕೃಷಿಯಾಧಾರಿತ ಸಮಾಜ ಸಂರಚನೆಯಿಂದ ಆಧುನಿಕ ಕಾಲದ ಔದ್ಯಮಿಕ ಅಭಿವೃದ್ಧಿಯವರೆಗೆ ಉಂಟಾದ ಸಾಮಾಜಿಕ-ಆರ್ಥಿಕ ಬದಲಾವಣೆಗಳಿಂದಾಗಿ ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ಪುರುಷರಿಗೆ ಸಮಾನವಾಗಿ ಹಣ ಗಳಿಸುವ ಅವಕಾಶ ತಪ್ಪಿಹೋಯಿತು. ಎಲ್ಲ ಉದ್ಯೋಗಸ್ಥ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಅಸಂಘಟಿತ ವಲಯದಲ್ಲಿ ಉದ್ಯೋಗಿಗಳಾಗಿದ್ದಾರೆ. ಸುಮಾರು ಶೇ.೯೪ರಷ್ಟು ಮಹಿಳಾ ಕೆಲಸಗಾರರು ಇಂಥ ಅಸಂಘಟಿತ ವಲಯದಲ್ಲಿದ್ದಾರೆ. ಸುಮಾರು ಶೇ.೮೧.೪ ರಷ್ಟು ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ಹಾಗೂ ಉಳಿದವರು ಕೃಷಿಯೇತರ ವೃತ್ತಿಗಳು ಹಾಗೂ ಸೇವೆಗಳಲ್ಲಿ ಕೆಲಸಮಾಡುತ್ತಿದ್ದಾರೆ. ನಿರುದ್ಯೋಗ ಸಮಸ್ಯೆ ಕುರಿತ ಸಮಿತಿಯು ಈ ಮುಂದಿನಂತೆ ವರದಿ ಮಾಡಿದೆ. "ಪ್ರಸ್ತುತ, ಸಾಂಪ್ರದಾಯಿಕ ಗ್ರಾಮೀಣ ಹಾಗೂ ಗುಡಿಕೈಗಾರಿಕೆಗಳು, ಗ್ರಾಮೀಣ ಹಾಗೂ ಅರೆನಗರ ಪ್ರದೇಶಗಳಲ್ಲಿ ವ್ಯಾಪಕವಾಗಿ ಚದುರಿಹೋಗಿರುವ ಸಾಕಷ್ಟು ದುರ್ಬಲ ವರ್ಗಗಳೆಂದು

ಪರಿಗಣಿಸಲಾದವರ ಪೈಕಿ ಸುಮಾರು ೧೦ ದಶಲಕ್ಷ ಜನರಿಗಿಂತಲೂ ಹೆಚ್ಚು ಜನರಿಗೆ ಉದ್ಯೋಗ ಒದಗಿಸಲಾಗಿದೆ." ೪ ಈ ಉದ್ಯಮಗಳಲ್ಲಿ ಕೈಮಗ್ಗ, ಖಾದಿ, ರೇಷ್ಮೆ ಕೃಷಿ, ನಾರು, ಗೋಡಂಬಿ, ಬೀಡಿ ತಯಾರಿಕೆ, ಎಣ್ಣೆ ತೆಗೆಯುವುದು, ಚರ್ಮ ಹದಮಾಡುವುದು, ಹೊಗೆಸೊಪ್ಪು, ಸಾಬೂನು ತಯಾರಿಕೆ ಮುಂತಾದ ಸಾಂಪ್ರದಾಯಕ ಸಣ್ಣ ಪ್ರಮಾಣದ ಉದ್ಯಮಗಳೆಲ್ಲವೂ ಸೇರುತ್ತವೆ. ಇವುಗಳಲ್ಲಿ ಒಟ್ಟಾರೆ ಮಜೂರಿ ಕಡಿಮೆಯಿರುತ್ತದೆ. ಅದರಲ್ಲೂ ಮಹಿಳೆಯರಿಗೆ ಪುರುಷರಿಗಿಂತಲೂ ಕಡಿಮೆ ಮಜೂರಿ ನೀಡಲಾಗುತ್ತದೆ.

ಬೀಡಿ ಉದ್ಯಮ ಇಡೀ ಗ್ರಾಮ ಹಾಗೂ ನಗರ ಪ್ರದೇಶಗಳೆರಡರಲ್ಲೂ ಹರಡಿರುವ ಉದ್ಯಮವಾಗಿದೆ. ಬೀಡಿ ತಯಾರಿಕೆಯಲ್ಲಿ ಮಹಿಳೆಯರು ಹಾಗೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ. ನಗರಗಳಲ್ಲಿ ಬೀಡಿ ಕಾರ್ಖಾನೆಗಳಿದ್ದರೆ ಗ್ರಾಮಗಳಲ್ಲಿ ಗುಡಿಕೈಗಾರಿಕೆಯಾಗಿ ಕುಟುಂಬಗಳು ತಮ್ಮ ಗುಡಿಸಲುಗಳಲ್ಲಿ ಕೆಲಸಮಾಡುತ್ತಾರೆ. ಮಹಿಳೆಯರು ಕಟ್ಟಡ ನಿರ್ಮಾಣ ಕೆಲಸವನ್ನು ಮಾಡುತ್ತಿದ್ದು, ಸುಮಾರು ಶೇ.೬ರಷ್ಟು ಮಹಿಳೆಯರು ಈ ಉದ್ಯೋಗದಲ್ಲಿದ್ದಾರೆ. ಒಂದು ವರದಿಯಂತೆ ೧೯೭೧ರಲ್ಲಿ ಸುಮಾರು ೨೦೩,೦೦೦ದಷ್ಟು ಮಹಿಳೆಯರು ಕಟ್ಟಡ ನಿರ್ಮಾಣಕ್ಕೆ ಕಾಮಗಾರಿಗಳಲ್ಲಿದ್ದರು. ಗುಡಿ ಕೈಗಾರಿಕೆಗಳಾದ ಬೆಲ್ಲ ತಯಾರಿಕೆ, ಅಕ್ಕಿ ಮಾಡುವುದು ಚಾಪೆ ಹೆಣೆಯುವುದು, ಬಿದಿರಿನ ಕೆಲಸ, ಚಿಕನ್ ಉದ್ಯಮ(ಸೀರೆ, ಮುಡುಪುಗಳಿಗೆ ಕಸೂತಿ ಮಾಡುವುದು) ಮಡಕೆ ತಯಾರಿಕೆ ಮುಂತಾದ ಉದ್ಯೋಗಗಳಲ್ಲಿ ಹಿಂದಿನಿಂದಲೂ ಮಹಿಳೆಯರು ದುಡಿಯುತ್ತಿದ್ದಾರೆ. ಇತ್ತೀಚೆಗೆ ಬಟ್ಟೆ ಹೊಲಿಯುವುದು(Tailoring) ಮತ್ತು ಸಿದ್ಧ ಉಡುಪುಗಳ ತಯಾರಿಕೆ(Ready Made Garments) ಇವು ಅತಿ ದೊಡ್ಡ ಉದ್ಯಮವಾಗಿ ಬೆಳೆಯುತ್ತಿವೆ. ತರಬೇತಿ ಹಾಗೂ ಯಂತ್ರಗಳನ್ನು ಒದಗಿಸುವ ಕಾರ್ಯವನ್ನು ಸರ್ಕಾರ ಹಾಗೂ ಅನೇಕ ಸರ್ಕಾರೇತರ ಸಂಘಸಂಸ್ಥೆಗಳು ಮಾಡುತ್ತಿರುವುದರಿಂದ ಅನೇಕ ಮಹಿಳೆಯರು ಏಕಾಂಗಿಯಾಗಿ ಬಟ್ಟೆ ಹೊಲಿಯಲು ಪ್ರಾರಂಭಿಸಿ ತರುವಾಯ ಹಂತಹಂತವಾಗಿ ಮೇಲೇರಿ ವಸ್ತ್ರೋದ್ಯಮಿಗಳಾಗಿ ರಫ್ತು ಮಾಡುತ್ತ ಲಾಭಗಳಿಕೆಯಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲೂ ಬೇಡಿಕೆ ಪಡೆಯುವಂತಾಗಿದ್ದಾರೆ. ನೂಲುವುದು, ನೇಯುವುದು ಭಾರತದ ಚರಿತ್ರೆಯಲ್ಲಿ ಮಹಿಳೆಯರಿಗೆ ಅತ್ಯುನ್ನತ ಸ್ಥಾನ ಕಲ್ಪಿಸಿದ ಕಸಬುಗಳಾಗಿವೆ. ಗಾಂಧಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರನ್ನು ಮನೆಗಳಿಂದ ಹೊರಬರಲು, ಆಂದೋಲನದ ಮುಂಚೂಣಿಗೆ ನುಗ್ಗಲು 'ಖಾದಿ' ಹಾಗೂ ಚರಕಗಳನ್ನು ಮಹಿಳೆಯರಿಗೆ ಅಸ್ತ್ರಗಳಾಗಿ ನೀಡಿದ್ದರು. ಈಗಲೂ ಮನೆಗಳಲ್ಲಿ ಯಂತ್ರಗಳನ್ನು ತಿರುಗಿಸಿ ಕೈಮಗ್ಗಕ್ಕೆ ಪ್ರಾಶಸ್ತ್ಯ ಉಳಿಸುವಲ್ಲಿ ಮಹಿಳೆಯರ ಕೊಡುಗೆಯೇ ಅಧಿಕವಾಗಿದೆ. ಆಹಾರ ಸಂಸ್ಕರಣೆ ಈಗ ಅಧಿಕ ಲಾಭದ ಉದ್ಯಮವಾಗಿದೆ. ಉಪ್ಪಿನಕಾಯಿ, ವಿವಿಧ ಹಣ್ಣುಗಳ ಜ್ಯಾಂಗಳೂ, ತಿಂಡಿಗಳೂ, ವಿವಿಧ ಬಗೆಯ ಹಪ್ಪಳ ಸಂಡಿಗೆ, ಶ್ಯಾವಿಗೆ, ಮಸಾಲೆ

ಪುಡಿಗಳು, ಚಟ್ನಿಪುಡಿ ಹಾಲಿನ ಡೈರಿ ಸಾಂಸ್ಕಾರಿಕ ಆಹಾರ ಪೊಟ್ಟಣಗಳು, ಪ್ಯಾಕೆಟುಗಳು ಹೀಗೆ ಹಲವು ಹನ್ನೊಂದು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಲಾಭದಾಯಕ ಉದ್ಯಮಗಳಾಗಿವೆ. ಇವೆಲ್ಲದರಲ್ಲಿ ಮಹಿಳೆಯರ ಶ್ರಮ, ಉತ್ಸಾಹ, ಆಸಕ್ತಿ, ಕೌಶಲ್ಯ ಎದ್ದುಕಾಣುತ್ತದೆ.

ವ್ಯಕ್ತಿಗತವಾಗಿ ಮಹಿಳೆಯರು ಈಗ ಅಂತಾರಾಷ್ಟ್ರೀಯ ಮಟ್ಟದವರೆಗೂ ಲಗ್ಗೆಯಿಟ್ಟಿರುವ ಉದ್ಯಮಿಗಳಾಗಿದ್ದಾರೆ. ಅಸಹಾಯಕ, ದಿಕ್ಕೆಟ್ಟ ಮಹಿಳೆಯರಿಗೆ ಸಹಾಯಹಸ್ತ ನೀಡಿ ಸಣ್ಣ ಪ್ರಮಾಣದ ಬಂಡವಾಳ, ಹಾಗೂ ತರಬೇತಿ ನೀಡಿ ಮಾರ್ಗದರ್ಶನ ನೀಡುವ ಹಲವಾರು ಸಂಸ್ಥೆಗಳ ಅವಿರತ ಶ್ರಮದಿಂದ ಏಕಾಂಗಿ ಮಹಿಳೆಯರಿಗೆ ಬದುಕಿನ ಹಾಗೂ ಅವರು ತಮ್ಮಂಥ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ನೆರವು ನೀಡುವಂಥ ಅವಕಾಶಗಳು ಪ್ರಾಪ್ತವಾಗುತ್ತಿವೆ. ಗ್ರಾಮಗಳ ಅಭಿವೃದ್ಧಿಗಾಗಿ ನಿಸ್ವಾರ್ಥಸೇವೆ ಸಲ್ಲಿಸುತ್ತಿರುವ ಚಿನ್‌ಯಾರ್ಡ್(ಕರ್ನಾಟಕ-ಅಗಡಿಗ್ರಾಮ-ಹುಬ್ಬಳ್ಳಿ) ಎಂಬ ಸಂಸ್ಥೆ ಹಿಂದುಳಿದ ವರ್ಗಗಳಿಗೆ ಸೇರಿದ ಲಂಬಾಣಿ ಮುಂತಾದ ಮಹಿಳೆಯರಿಗಾಗಿ ಅಂಗವಿಕಲರಿಗಾಗಿ ದುಡಿಯುತ್ತಿದ್ದು ಈ ಸಂಸ್ಥೆ ಅನೇಕ ಮಹಿಳಾ ಸ್ವಸಹಾಯಕ ಗುಂಪುಗಳು ಜನ್ಮ ತಾಳಲು ನೆರವು ನೀಡಿದೆ. ಅವೇಕ್ (ಅಸೋಸಿಯೇಷನ್ ಆಫ್ ವಿಮೆನ್ ಎಂಟ್ರೆಪ್ರೆನ್ಯೂರ್ಸ್ ಆಫ್ ಕರ್ನಾಟಕ) ಎಂದರೆ ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಘ ೧೯೮೩ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾಯಿತು. ಉದ್ಯಮ ಶೀಲರಾದ ಮಹಿಳೆಯರು ಸ್ವಯಂಪ್ರೇರಣೆಯಿಂದ ಉತ್ಸಾಹಿ ಮಹಿಳೆಯರಿಗಾಗಿ, ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸಿ ರಾಷ್ಟ್ರದ ಆರ್ಥಿಕ ಮುಖ್ಯವಾಹಿನಿಯಲ್ಲಿ ಸೇರುವಂತೆ ಮಾಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ಕುಗ್ರಾಮ, ನಗರ, ವಿವಿಧ ರಾಜ್ಯಗಳು, ದೇಶ, ವಿದೇಶ ಹೀಗೆ ಪ್ರದೇಶ ಭೇದವಿಲ್ಲದೆ ಇಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಈ ಸಂಸ್ಥೆ ಮಹಿಳೆಯರಿಗೆ ಪ್ರಪ್ರಥಮವಾಗಿ ಆರ್ಥಿಕ ಅಡ್ಡಿ ಆತಂಕಗಳನ್ನು ನಿವಾರಿಸಲು ಹಣಕಾಸು ಸಂಸ್ಥೆಗಳು ಹಾಗೂ ಬ್ಯಾಂಕುಗಳಿಂದ ಸಾಲಸೌಲಭ್ಯಗಳನ್ನು ಪಡೆಯಲು ನೆರವಾಗುತ್ತದೆ. ಪರಸ್ಪರ ಅನುಭವಗಳ ವಿನಿಮಯ, ಸಮಾಲೋಚನೆ, ಸಲಹೆ, ಮೆಚ್ಚುಗೆ ಮೂಲಕ ೨೦,೦೦೦ಕ್ಕೂ ಹೆಚ್ಚು ಮಹಿಳೆಯರಿಗೆ ಮಾರ್ಗದರ್ಶನ ನೀಡಲಾಗಿದೆ. ಮಹಿಳೆಯರು ಪ್ರಯತ್ನಶೀಲರಾಗಲು ಆಗಾಗ 'ಜಾಗೃತಿ ಶಿಬಿರ'ಗಳನ್ನು ಏರ್ಪಡಿಸಲಾಗುತ್ತದೆ. ಈ ಸಂಸ್ಥೆ ಮಹಿಳಾ ಉದ್ಯಮಿಗಳಿಗೆ ಅತ್ಯಮುಲ್ಯವಾದ ಗಣಕೀಕೃತ ಸಂಪನ್ಮೂಲ ಮಾಹಿತಿ, ತಂತ್ರಜ್ಞಾನ ಮಾಹಿತಿ, ವಿಳಾಸಗಳನ್ನು ಒದಗಿಸುತ್ತದೆ. ಅಷ್ಟೇ ಅಲ್ಲ 'ಅವೇಕನರ್ '(Awakner) ಎಂಬ ದ್ವೈಮಾಸಿಕವನ್ನು ಹೊರಡಿಸುತ್ತಿದೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ, ಬ್ಯಾಂಕುಗಳ ಸಂಪರ್ಕ ಹೊಂದಿದ್ದು, ಅಂತಾರಾಷ್ಟ್ರೀಯ ಮಟ್ಟದ ಮಾನ್ಯತೆ ಗಳಿಸಿದೆ. ಇದರ ಅಂಗಸಂಸ್ಥೆಗಳು ಬೆಳಗಾಂ, ಬಿಜಾಪುರ,

ಬಾಗಲಕೋಟೆ ಹಾಗೂ ಮೈಸೂರು ನಗರಗಳಲ್ಲಿವೆ. ತೆರಿಗೆ ವಿನಾಯಿತಿಯನ್ನೂ ಸಹ ಪಡೆದಿರುವ ಈ ಸಂಸ್ಥೆ ಉದ್ಯಮ ಪ್ರಪಂಚದಲ್ಲಿ ಮಹಿಳೆಯರಿಗೆ ಅವೇಕ್ (ಜಾಗೃತಿ) ಬೆಳಕು ತೋರುತ್ತಿದ್ದು, ಲೇಖಿಕಿ ಎಂ.ಆರ್. ಸುನಂದಾ ಅವರು ತಿಳಿಸುವಂತೆ [ⁿ]"ಮಹಿಳೆಯರು ಉದ್ಯಮಶೀಲತೆಯ ಮೂಲಕ ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ಸ್ಥಾನಮಾನ ಆತ್ಮವಿಶ್ವಾಸಗಳನ್ನು ಗಳಿಸಿಕೊಂಡು ಸ್ವಶಕ್ತಿಯನ್ನು ಅರಿಯಲು ಸಂಪೂರ್ಣಬೆಂಬಲ ನೀಡುತ್ತಿರುವ 'ಅವೇಕ್' ಉದ್ಯಮಶೀಲ ಮಹಿಳೆಯರ ಯಶಸ್ಸಿನ ಹಿಂದಿನ ಚೇತನ ಎಂದರೆ ಅತಿಶಯೋಕ್ತಿಯಾಗಲಾರದು." ಈ ಅವೇಕ್ ಸಂಸ್ಥೆಯಿಂದ ಪ್ರಚೋದಿತರಾಗಿ ಸಾಮಾನ್ಯ ಗೃಹಿಣಿಯರಾಗಿದ್ದ ಏಕಾಂಗಿಗಳಾಗಿ ದುಃಖ ಅಸಮಾಧಾನ ಪೀಡಿತರಾಗಿದ್ದ, ಉದ್ಯೋಗಶೀಲರಾಗಲು ಬಯಸಿದರೂ ಆರ್ಥಿಕ ನೆರವು, ಪ್ರೋತ್ಸಾಹ, ತರಬೇತಿ ಒದಗದೆ ನಿರಾಶರಾಗಿದ್ದ ಎಷ್ಟೋ ಮಂದಿ ಮಹಿಳೆಯರು, ಈಗ ಉದ್ಯಮ ರಂಗದಲ್ಲಿ ಕೇವಲ ಗೃಹೋಪಯೋಗಿ, ಕರಕುಶಲ ಕಲೆ, ತಿಂಡಿತಿನಿಸುಗಳು, ಉಡುಪುಗಳು ಮುಂತಾದುವಲ್ಲದೆ ವಿದ್ಯುನ್ಮಾನ ಉಪಕರಣ, ಕಂಪ್ಯೂಟರ್, ಹೊಟೇಲ್ ಉದ್ಯಮ, ಹಣಕಾಸು ಸಂಸ್ಥೆ, ಬ್ಯಾಂಕುಗಳು ಹೀಗೆ ಅನೇಕ ಕ್ಷೇತ್ರಗಳ ಬಗ್ಗೆ ಮಾಹಿತಿ, ತರಬೇತಿ ಪಡೆದು ಪ್ರತಿಭಾವಂತರಾಗಿ ಸಾಧನೆಯ ಉತ್ತುಂಗಕ್ಕೇರಿರುವ ಮಹಿಳೆಯರಿದ್ದಾರೆ.

ಹೀಗೆ ಮಹಿಳೆಯರು ಮಹಿಳೆಯರಿಗಾಗಿಯೇ ಯಶಸ್ವಿ ಉದ್ಯಮ ತಂತ್ರಗಳನ್ನು ಕಂಡುಹಿಡಿದಲ್ಲಿ ವೈಯಕ್ತಿಕವಾಗಿ ಅನಕ್ಷರಸ್ತರಾದ, ವಿದ್ಯಾವಂತರಾದ, ಉನ್ನತ ಶಿಕ್ಷಣ ಪಡೆದ ಆದರೆ ಸ್ವಾವಲಂಬನೆಯ ಮಾರ್ಗವನ್ನು ಕಂಡುಹಿಡಿಯಲಾಗದೆ ಸೊರಗುವ ಮಹಿಳೆಯರಿಗೆ ಇಂಥ ಸಂಘಸಂಸ್ಥೆಗಳು ನೆರವು ನೀಡಲು ಮುಂದೆ ಬರುವುದು ವರದಾನವೆಂದೇ ಹೇಳಬೇಕು.

ಸಾಮೂಹಿಕ ಸ್ವಾವಲಂಬನೆ ಮಾರ್ಗ : ಮಹಿಳೆಯರು ಸ್ವಾವಲಂಬನೆಯ ಬಗ್ಗೆ ಅಲೋಚಿಸಿ ದಿಟ್ಟ ನಿರ್ಧಾರ ಕೈಗೊಂಡು ಉದ್ಯಮಶೀಲರಾಗಿ ಸಬಲತೆಯನ್ನು ಪಡೆಯಲು ಸಾಧ್ಯವೆಂಬುದು ಈಗ ಸಾಬೀತಾಗಿದೆ. ಹೀಗೆ ವಿವಿಧ ಮಹಿಳಾ ಗುಂಪುಗಳು(women Groups) ಆರ್ಥಿಕ ಪ್ರಗತಿ ಹೊಂದಲು ಸಹಕಾರ ಕ್ಷೇತ್ರವು ವಿಪುಲ ಅವಕಾಶಗಳಿರುವ ಧೀಮಂತ ಹಾಗೂ ನಿರಂತರ ಚಟುವಟಿಕೆಯ ಕ್ಷೇತ್ರವಾಗಿದೆ. ಈ ಕಾರ್ಯಕ್ಷೇತ್ರದಲ್ಲಿ ಮಹಿಳೆಯರು ಪರಸ್ಪರ ನಂಬಿಕೆ, ವಿಶ್ವಾಸ ಹೊಂದಾಣಿಕೆಯಿಂದ ದಕ್ಷತೆಯೊಂದಿಗೆ ಶ್ರಮವಹಿಸಿ ದುಡಿದರೆ ಇನ್ನೂ ಅರಿವಿನ ಬೆಳಕು ಕಾಣದೆ ಪರಾವಲಂಬಿಗಳಾಗಿ ಬದುಕುತ್ತಿರುವ ಅಸಂಖ್ಯಾತ ನಾರಿಯರಿಗೆ ದಾರಿದೀಪವಾಗಬಹುದು. ತೀವ್ರಗತಿಯಲ್ಲಿ ಸಾಮಾಜಿಕ-ಆರ್ಥಿಕ ಬದಲಾವಣೆಯಾಗುತ್ತಿರುವ ಈ ಸಂಧಿಕಾಲದಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಉದ್ಯೋಗಶೀಲರಾಗುತ್ತಿರುವುದು ಸಮಾಧಾನಕರ ಸಂಗತಿ. ವೈಯಕ್ತಿಕ ಸಾಧನೆಗಳು ಎಷ್ಟೇ ಉನ್ನತಮಟ್ಟದ್ದಾಗಿದ್ದರೂ ಒಟ್ಟಾರೆ ಮಹಿಳಾ ಸಂಖ್ಯೆಯ ದೃಷ್ಟಿಯಿಂದ

ಕಡಿಮೆಯೇ ಆಗುವುದೆಂಬುದನ್ನು ಮನಗಂಡ ಮಹಿಳೆಯರು ತಮ್ಮ ತಮ್ಮಲ್ಲಿಯೇ ಸ್ವಸಹಾಯ ಗುಂಪು, ಸಮೂಹಗಳನ್ನು ಮಾಡಿಕೊಂಡು ಮಹಿಳಾ ಮಂಡಲಿ, ಮಹಿಳಾ ಸಮಾಜ ಹಾಗೂ ಸಂಸ್ಥೆಗಳೆಂಬ ಹೆಸರಿನಲ್ಲಿ ಮಹಿಳೆಯರ ಪ್ರಗತಿಗಾಗಿ ದುಡಿಯುತ್ತಿದ್ದಾರೆ.

ಗಾಂಧೀಜಿಯವರು "ಒಬ್ಬ ಹರಿಜನ ಮಹಿಳೆ ಭಾರತದ ಅಧ್ಯಕ್ಷಳಾದುದನ್ನು ಕಂಡಾಗ ನಾನು ಸಂತೋಷದಿಂದ ಕುಣಿದಾಡುತ್ತೇನೆ" ಎಂದಿದ್ದರು. ಮಹಿಳೆಯರು ಸ್ವತಂತ್ರರಾಗಬೇಕಾದರೆ ಅವರು ನಿರ್ಭೀತರಾಗಿರಬೇಕು. ಮಹಿಳೆಯರ ದೈಹಿಕ ದೌರ್ಬಲ್ಯಕ್ಕಿಂತ ಸಮಾಜ ಅವರ ಮೇಲೆ ವಿಧಿಸಿರುವ ಸಾಂಸ್ಕೃತಿಕ-ಆರ್ಥಿಕ ಅಸಹಾಯಕತೆ, ಮಾನಸಿಕ ಭಯ ಮುಂತಾದವು ಅವರ ಶಕ್ತಿಯನ್ನು ಉಡುಗಿಸುತ್ತವೆ. ಶೌರ್ಯ, ಸಾಹಸ, ಸಂಘಟನೆ ಇವು ಕೇವಲ ಪುರುಷರ ಗುತ್ತಿಗೆಯಲ್ಲ. ದೀರ್ಘಕಾಲದಿಂದ ಮಹಿಳೆಯರನ್ನು ಮನೆಗಳಲ್ಲಿ, ಮನೆಯ ಅಂಗಳದಲ್ಲಿ ಮಾತ್ರವೇ ನಿರ್ಬಂಧಿಸಿದ್ದುದರಿಂದ ಅವರ ಒಟ್ಟಾರೆ ವ್ಯಕ್ತಿತ್ವದ ಮೇಲೆ ಮಾರಕ ಪರಿಣಾಮವುಂಟಾಗಿದೆ. ಅವರ ಲೋಕದೃಷ್ಟಿ ಸೀಮಿತಗೊಂಡು ಆಸಕ್ತಿಗಳು ಕ್ಷುಲ್ಲಕ ವಿಷಯಗಳಿಗಷ್ಟೇ ಸೀಮಿತಗೊಂಡಿವೆ. ಗಾಂಧೀಜಿಯವರು "'ಸಾಮಾಜಿಕ ನೀತಿ ನಿಯಮಗಳನ್ನು ಮಹಿಳೆಯರ ಮೇಲೆ ಬಲಾತ್ಕಾರವಾಗಿ ಹೇರದೆ 'ಪರಸ್ಪರ ಸಮಾಲೋಚನೆ ಮತ್ತು ಸಹಕಾರ'ದಿಂದ ರೂಪಿಸಬೇಕು. ಎಂದಾದರೊಮ್ಮೆ ತಾನು ಜೀತಮುಕ್ತನಾಗಬಹುದು ಎಂದು ಕೂಡ ಯೋಚಿಸಲಾರದ ಹಳೆಯ ಕಾಲದ ಗುಲಾಮರಂತೆ ಹೆಂಗಸರನ್ನು ಗಂಡಸರು ನಿರ್ಲಕ್ಷಿಸಿದ್ದರು. ಶಾಸನಗಳನ್ನು(ಬಹುತೇಕ?) ಗಂಡಸರೇ ರೂಪಿಸುತ್ತಿದ್ದರು. ಈ ಸ್ವಕಪೋಲ ಕಲ್ಪಿತ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಗಂಡಸು ನ್ಯಾಯಪರನಾಗಿ, ವಿವೇಚನಾ ಶೀಲನಾಗಿ ವರ್ತಿಸುತ್ತಿಲ್ಲ. ಆದ್ದರಿಂದ ಸ್ತ್ರೀಯರಿಗೆ ನ್ಯಾಯ ದೊರೆಯಬೇಕಾದರೆ ಶಾಸ್ತ್ರಗ್ರಂಥಗಳ ಮರು ಪರಿಷ್ಕರಣೆ ಆಗಬೇಕು. ಮಹಿಳೆಯರ ಘನತೆ ಗೌರವ ಹಕ್ಕು ಬಾಧ್ಯತೆಗಳಿಗೆ ವಿರುದ್ಧವಾಗಿರುವ ಎಲ್ಲ ಧರ್ಮಗ್ರಂಥಗಳನ್ನು ನಿಷೇಧಿಸಬೇಕು" ಎಂದಿದ್ದರು. ಗಾಂಧಿಯವರ ದೃಷ್ಟಿಯಲ್ಲಿ ಮದುವೆ ಮತ್ತು ತಾಯ್ತನವಷ್ಟೇ ಹೆಣ್ಣಿನ ಜೀವನದ ಪರಮ ಧ್ಯೇಯವಲ್ಲ. ಸಮಾಜ ಸೇವೆಯ ಉನ್ನತ ಉದ್ದೇಶಕ್ಕಾಗಿ ಮದುವೆಯಾಗುವುದಿಲ್ಲವೆಂದು ನಿಶ್ಚಯಿಸುವುದು ಆತ್ಮಸಾಕ್ಷಾತ್ಕಾರದ ದೃಷ್ಟಿಯಿಂದ ಉನ್ನತ ಧ್ಯೇಯವೆಂದು ಅವರು ಭಾವಿಸಿದ್ದರು. 'ಪ್ರತಿಯೊಬ್ಬ ಪತ್ನಿಗೂ ತನ್ನದೇ ಹಾದಿ ಕಂಡುಕೊಳ್ಳುವ ಹಕ್ಕಿದೆ. ಒಂದು ಉನ್ನತ ಉದ್ದೇಶಕ್ಕಾಗಿ ಪತಿಯನ್ನು ವಿರೋಧಿಸುವ ಸಂದರ್ಭ ಬಂದರೆ, ತನ್ನ ಹಾದಿ ಸರಿಯಾಗಿದೆಯೆಂದು ಮನವರಿಕೆಯಾದರೆ ಆಕೆ ಪರಿಣಾಮವನ್ನು ಎದುರಿಸಲೂ ಸಿದ್ಧವಾಗಿರಬೇಕು. ಮಹಿಳೆಯರು ತಮ್ಮ ಬಿಡುಗಡೆಯ ಹೋರಾಟವನ್ನು ಇನ್ನಿತರ ಶೋಷಿತರ ಹೋರಾಟದೊಂದಿಗೆ ಸಮನ್ವಯಿಸಿಕೊಂಡು ಸಮಾನ ಉದ್ದೇಶಗಳಿಗಾಗಿ ಹೋರಾಡಬೇಕೆಂದು ಕರೆನೀಡಿದ್ದರು. ಮಹಿಳೆಯರ ಆಶೋತ್ತರಗಳನ್ನು ರಾಷ್ಟ್ರೀಯ ಆಶೋತ್ತರಗಳೊಂದಿಗೆ ಸಮ್ಮಿಲನಗೊಳಿಸುವ ಮೂಲಕ ಸಹಕಾರ ಆಂದೋಲನಕ್ಕೆ ವಿಶಾಲವ್ಯಾಪ್ತಿ ಹಾಗೂ ವಿಶೇಷ ಸಮರ್ಥನೆಯನ್ನು

ಗಾಂಧಿಯವರು ಒದಗಿಸಿದರು. "ಸ್ತ್ರೀಯರು ಕೇವಲ ತಮ್ಮ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಮಾತ್ರ ಆಸಕ್ತಿವಹಿಸದೆ ಒಟ್ಟು ಸಮಾಜದ ಪುನರ್‌ನಿರ್ಮಾಣದ ಬಗ್ಗೆ ಆಸಕ್ತಿವಹಿಸಬೇಕು. ಇದಕ್ಕಾಗಿ ದೇಶದಲ್ಲಿರುವ ಸುಶಿಕ್ಷಿತ ಮಹಿಳೆಯರು ಭಾರತದ ಬಯಲಿಗೆ ಇಳಿದು ಬರಬೇಕು. ಆಗ ಮಹಿಳೆಯರ ಬಿಡುಗಡೆ, ಭಾರತದ ಸ್ವಾತಂತ್ರ್ಯ, ಅಸ್ಪೃಶ್ಯತಾ ನಿವಾರಣೆ, ಜನ ಸಮೂಹದ ಆರ್ಥಿಕ ಅಭಿವೃದ್ಧಿ ಇವೇ ಮುಂತಾದ ಸಮಸ್ಯೆಗಳು ಅವರು ಹಳ್ಳಿಗಳಿಗೆ ತೆರಳುವಂತೆ, ಹಳ್ಳಿಗಳಲ್ಲಿ ಜನ ಜೀವನದ ಸುಧಾರಣೆ, ಪುನರ್ನಿರ್ಮಾಣಕ್ಕೆ ಬದ್ಧರಾಗುವಂತೆ ಉತ್ತೇಜಿಸುತ್ತವೆ" ಎನ್ನುತ್ತಿದ್ದರು.

ಮಹಿಳಾ ಶಕ್ತಿಯ ಪರಿಚಯ ಗಾಂಧೀಜಿಯವರಿಗೆ ಮೊಟ್ಟಮೊದಲು ದಕ್ಷಿಣ ಆಫ್ರಿಕಾದಲ್ಲಿ ಆಯಿತು. "ಪುಸ್ತಕಜ್ಞಾನ ಬೇಕಿಲ್ಲದ ಆದರೆ ಯಾತನೆ ಮತ್ತು ನಂಬಿಕೆಯಿಂದ ಹೊಮ್ಮುವ ವಿಶಾಲ ಹೃದಯದ ಅಗತ್ಯವಿರುವ ಸತ್ಯಾಗ್ರಹದಲ್ಲಿ ಮಹಿಳೆಯರು ಹೇಗೆ ಧುರೀಣರಾಗಬಹುದೆಂಬುದನ್ನು ದಕ್ಷಿಣ ಆಫ್ರಿಕೆಯಲ್ಲಿ ಮನಗಂಡರು" ಏಕೆಂದರೆ ಅಲ್ಲಿ ಮಹಿಳೆಯರ ನೈತಿಕ ಶಕ್ತಿಯಿಂದಾಗಿ ಸತ್ಯಾಗ್ರಹವು ಸಫಲವಾಯಿತು. ಮಹಿಳೆಯರ ಸ್ಥಿತಿಗತಿಗಳಿಂದಾಗಿಯೇ ಅನೇಕ ಬಾರಿ ಆಂದೋಳನಗಳು ಅರ್ಧದಲ್ಲಿಯೇ ನಿಂತುಬಿಡುತ್ತವೆ. ನಮ್ಮ ಬಹಳಷ್ಟು ಕಾರ್ಯಗಳು ಪರಿಣಾಮಕಾರಿಯಾಗುವುದಿಲ್ಲ. ನಮ್ಮ ಜನರು ಪೈಸೆ ಉಳಿಸಲು ಹೋಗಿ ರೂಪಾಯಿಯನ್ನೇ ಕಳೆದುಕೊಳ್ಳುವ ವ್ಯಾಪಾರಿಯಂತಾಡುತ್ತಾರೆ. ಆದರೆ ಗಾಂಧಿಯವರು ಭಾರತದಲ್ಲಿ ತಮ್ಮ ಆದರ್ಶದ ಹಂಬಲಕ್ಕೆ ತಕ್ಕಂತೆ 'ಸತ್ಯಾಗ್ರಹ' ಎಂಬ ಹೊಸ ಬಂಡವಾಳ ಹೂಡಿ ಅದರಿಂದ ಅತ್ಯಧಿಕ ಲಾಭಗಳಿಸಲು ಹವಣಿಸಿದರು. ಹೀಗಾಗಿ, ಮಹಿಳೆಯರ ಸಂಘರ್ಷವನ್ನು ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನದೊಂದಿಗೆ ಜತೆಗೂಡಿಸುವ ಉದ್ದೇಶದಿಂದಲೇ ಗಾಂಧೀಜಿಯವರು ೧೯೨೧ರಲ್ಲಿ ನಡೆದ ಮೊದಲನೇ ಅಸಹಕಾರ ಆಂದೋಲನದಲ್ಲಿ ಮಹಿಳೆಯರನ್ನು ಸೇರಿಸಿಕೊಂಡರು. ಅಲ್ಲದೆ ಮಹಿಳೆಯರಿಗೆ ತಮ್ಮ ಪರಿಸ್ಥಿತಿ ಮಾತ್ರವಲ್ಲದೆ ಸಾಮಾಜಿಕ ಪರಿಸ್ಥಿತಿಯನ್ನೂ ಬದಲಿಸುವ ಜವಾಬ್ದಾರಿ ಹೊರಬೇಕೆಂದೂ "ಭಾರತದ ಆರ್ಥಿಕ ಹಾಗೂ ನೈತಿಕ ಮುಕ್ತಿ ಮುಖ್ಯವಾಗಿ ನಿಮ್ಮ ಹೆಗಲ ಮೇಲಿದೆ" ಎಂದಿದ್ದರು.

ಮುಂಚೂಣಿಯಲ್ಲಿ ಮಹಿಳೆಯರು : ಉಪ್ಪಿನ ಸತ್ಯಾಗ್ರಹವು ಸ್ವಾತಂತ್ರ್ಯ ಆಂದೋಲನದಲ್ಲಿ ಮಹಿಳೆಯರು ಭಾಗವಹಿಸುವ ಹೊಸಹೆಜ್ಜೆಯನ್ನು ಸೂಚಿಸಿತು. ಸಹಸ್ರಾರು ವಿದ್ಯಾವಂತ ಹಾಗೂ ಅವಿದ್ಯಾವಂತ ಮಹಿಳೆಯರಿಗೆ ಈ ಆಂದೋಲನದಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯಿತು. ಜೊತೆಗೆ ಉನ್ನತ ವ್ಯಾಸಂಗ ಮಾಡಿದ ಮಹಿಳೆಯರು ತಮ್ಮನ್ನು ಜನಸಮೂಹದೊಂದಿಗೆ ಗುರುತಿಸಿಕೊಳ್ಳಲು ಹಾಗೂ ಅಂಥವರಿಗೆ ನೈತಿಕವಾಗಿ, ಆರ್ಥಿಕವಾಗಿ ಸಹಾಯ ಮಾಡುವ ಸದವಕಾಶವೂ ದೊರೆಯಿತು. ಆದರೆ ಮಹಿಳೆಯರ ಅಬಲತೆಗೆ ಮುಖ್ಯ ಕಾರಣಗಳಲ್ಲಿ ಒಂದಾದ ಅವರ ಸಂಪೂರ್ಣ ಆರ್ಥಿಕ ಪರಾವಲಂಬನೆ ಹಾಗೂ ಕುಟುಂಬದ ಆದಾಯದ ಮೇಲೆ ಅವರಿಗೆ ನಿಯಂತ್ರಣ ಇಲ್ಲದಿರುವ ಸಮಸ್ಯೆಗಳನ್ನು ಪರಿಹರಿಸಲು

ಗಾಂಧಿಯವರು ರಚನಾತ್ಮಕ ಕಾರ್ಯಕ್ರಮಗಳನ್ನೇನೂ ರೂಪಿಸಿರಲಿಲ್ಲ. ಮಹಿಳೆಯರ ಆರ್ಥಿಕ ಶಕ್ತಿ ಅಥವಾ ಸ್ಥಿತಿಗತಿಯ ಸುಧಾರಣೆಗೆ ಇದರಿಂದ ಕೇವಲ ನೈತಿಕ ಕಾಳಜಿಯುಂಟಾಗಿ ಗಾಂಧೀಜಿ ನಂತರದ ಭಾರತದಲ್ಲಿ ಕೇವಲ ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳಲ್ಲಿ, ಸಾರ್ವಜನಿಕ ವೇದಿಕೆಗಳಲ್ಲಿ ಪ್ರದರ್ಶನವಾಗುವ ಸಹಾನುಭೂತಿಯಾಗಿರುವುದನ್ನು ಇಂದಿಗೂ ಕಾಣಬಹುದಾಗಿದೆ. ಹೀಗಾಗಿ ಮಹಿಳಾ ಪ್ರಗತಿಯನ್ನು ವಿರೋಧಿಸುವ, ಅಪಮಾನ, ನಿಂದೆಗೆ ಈಡುಮಾಡುವ ಪ್ರವೃತ್ತಿಗಳೂ ಮರೆಯಾಗಲಿಲ್ಲ. ಆದರೆ ಮಹಿಳೆಯರ ಸಂಘಟನೆ, ಒಟ್ಟಾಗಿ ದುಡಿಯುವ, ಪರಸ್ಪರ ನಂಬಿಕೆ, ವಿಶ್ವಾಸದಿಂದ ವರ್ತಿಸುವ ನಡವಳಿಕೆ ಮೇಲೆ ಗಾಂಧೀಜಿಯವರ ಪ್ರಭಾವ ಅಚ್ಚಳಿಯದಂಥದ್ದು. ಇದರಿಂದಲೇ ಆ ಮಹಿಳೆಯರು ಸಹಕಾರ ತತ್ತ್ವದ ಆಧಾರವನ್ನು ಬಿಡದೆ ಪಾಲಿಸಿ ಗುಡಿಕೈಗಾರಿಕೆಗಳಿಗೆ ವಿಶೇಷವಾಗಿ ಕೈಮಗ್ಗಕ್ಕೆ ವಿಶ್ವಾದ್ಯಂತ ಬೇಡಿಕೆ ಹೆಚ್ಚುವಂತೆ ದುಡಿದಿದ್ದರು. ಮಹಿಳಾ ಸಬಲೀಕರಣದ ಮೊದಲ ಹೆಜ್ಜೆ ಇದಾಗಿತ್ತು. ಗಾಂಧೀಜಿಯವರು "ಎಲ್ಲಿ ಪರಸ್ಪರ ನಂಬಿಕೆ ಮತ್ತು ವಿಶ್ವಾಸಗಳಿರುವುದಿಲ್ಲವೊ ಅಲ್ಲಿ ಸಹಕಾರ ಒಂದು ಅಪರಾಧವಾಗುತ್ತದೆ" ಎನ್ನುತ್ತಿದ್ದರು. ಆರ್ಥಿಕ ವಿಷಯಗಳಲ್ಲದೆ ಇತರ ಅಂಶಗಳ ಬಗ್ಗೆಯೂ ಸಹಕಾರದ ಬೀಜ ಬಿತ್ತಿದ ವಿಶಿಷ್ಟ ನಿದರ್ಶನ ನೀಡಿದ ಗಾಂಧೀಜಿ ಆರ್ಥಿಕ ಉದ್ದೇಶಗಳೊಂದಿಗೆ ಸಮೂಹ ಬಾಳುವೆಗೆ, ಸಂಘಟನೆಗೆ ಕೂಡ ಸಹಕಾರವನ್ನು ಅನ್ವಯಿಸಿದರು. ಅವರು "ಭಾರತೀಯ ಸಮಾಜದಲ್ಲಿ ಮಹಿಳೆಯರು ಹಾಗೂ ದಲಿತರು(ಹರಿಜನರು) ಅತಿಹೆಚ್ಚು ದಮನಕ್ಕೆ ಒಳಗಾದ ಎರಡು ಗುಂಪುಗಳೆಂದು" ಗುರುತಿಸಿದ್ದರು.

ಭಾರತದಲ್ಲಿ ಸಹಕಾರಿ ಚಳವಳಿ ಆರಂಭವಾಗಿ ಒಂದು ಶತಮಾನವೇ ಕಳೆಯುತ್ತಿದೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಾಗ ಜನರಲ್ಲಿದ್ದ ಉತ್ಸಾಹ, ಸೇವಾಮನೋಭಾವ, ತ್ಯಾಗಶೀಲತೆ, ನಿಸ್ವಾರ್ಥರಹಿತ ಭಾಗವಹಿಸುವಿಕೆ ಈ ಗುಣಗಳು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮರೆಯಾಗಿವೆ. ಅದು ಮತ್ತೊಮ್ಮೆ ಜನತೆಯ ಆಂದೋಲನವಾದರೆ ಮಾತ್ರ 'ಸರ್ವೇಜನಾಃ ಸುಖಿನೋ ಭವಂತು' ಎಂಬ ಆಶಯ ಫಲಿಸಲು ಸಾಧ್ಯ. ನಾಲ್ಕು ಶತಮಾನಗಳ ಹಿಂದೆ ಸಹಕಾರ ಕ್ಷೇತ್ರದ ಬಗ್ಗೆ ಅನೇಕ ಮಹಿಳೆಯರಿಗೆ ಅರಿವೂ ಇರಲಿಲ್ಲ. ಅಲ್ಪಸ್ವಲ್ಪ ತಿಳಿದಿದ್ದ ಮಹಿಳೆಯರು ಅದು ಪುರುಷ ಪ್ರಧಾನ ಕ್ಷೇತ್ರವೆಂದು ಭಾವಿಸಿ ಈ ಕ್ಷೇತ್ರಕ್ಕೆ ಬರುವ ಸಾಹಸವನ್ನೇ ಮಾಡುತ್ತಿರಲಿಲ್ಲ. ಇದಕ್ಕೆ ಸಾಮಾಜಿಕ, ಸಾಂಪ್ರದಾಯಿಕ ಕಾರಣಗಳಿದ್ದಿರಬಹುದು. ಅಥವಾ ಮಹಿಳೆಯರಲ್ಲಿ ವೈಯಕ್ತಿಕ ಅನಾಸಕ್ತಿ, ಹಿಂಜರಿಕೆ, ಸ್ವಯಂ ರಕ್ಷಣೆಗೆ, ಸ್ವಾವಲಂಬನೆಗೆ ಹೆದರುವುದು, ಸ್ವಾಭಿಮಾನವನ್ನು ಮರೆತು ಪುರುಷನ ದಬ್ಬಾಳಿಕೆಗೆ ಒಗ್ಗಿಕೊಳ್ಳುವುದು, ತನ್ನೊಳಗಿನ ಅಂತಃಸತ್ತ್ವವನ್ನು ಅರಿಯದೆ ಅಸಹಾಯಕಳಂತೆ ಹತಾಶಳಾಗಿ ಯಾಂತ್ರಿಕ ಜೀವನ ನಡೆಸುವುದು, ಒಟ್ಟಾರೆಯಾಗಿ ಸಂಘರ್ಷ, ಸ್ಪರ್ಧೆ ಹಾಗೂ ಹೋರಾಟ ಮನೋಭಾವವನ್ನೇ ಕಳೆದುಕೊಂಡಿದ್ದುದನ್ನೇ ಇದಕ್ಕೆ ಕಾರಣಗಳೆಂದು ತಿಳಿಯಬಹುದು. ಮಹಿಳೆಗೆ ತನ್ನ ಅಂತಃಶಕ್ತಿಯ ಬಗ್ಗೆ ಮನವರಿಕೆಯಾದ ಕೂಡಲೇ ಆಕೆ ತನ್ನೆಲ್ಲ ಸಂಕೋಲೆ ಅಥವಾ ನಿರ್ಬಂಧನೆಗಳನ್ನು ಬಿಡಿಸಿಕೊಂಡು

ಹೊರಬರಲು, ತನ್ನ ವ್ಯಕ್ತಿತ್ವವನ್ನು ಹೊಸದಾಗಿ ರೂಪಿಸಿಕೊಳ್ಳಲು ಪ್ರಯತ್ನಿಸುವುದು ಶತ ಸಿದ್ಧ. ಇಂಥ ಮಹತ್ತ್ವದ ಪುನರ್ಜನ್ಮದ ಅವಕಾಶವನ್ನು ಮಹಿಳೆಗೆ ಒದಗಿಸಿದ್ದು ಸಹಕಾರ ಕ್ಷೇತ್ರ.

ಭಾರತದಲ್ಲಿ ಗ್ರಾಮೀಣ ಸಾಲ ನೀಡಿಕೆ ಸಹಕಾರ ಸಂಘಗಳು ಪ್ರಾರಂಭವಾದದ್ದು ಸಹಕಾರ ಆಂದೋಲನದ ಬಹುದೊಡ್ಡ ರೀತಿಯ ಪ್ರವರ್ತನೆಗೆ ಕಾರಣವಾಗಿತ್ತು. ಆಗ ಎಲ್ಲ ಬಗೆಯ ಸಂಘಸಂಸ್ಥೆಗಳು, ಏಜೆನ್ಸಿ, ಸಹಕಾರ ಸಂಘಗಳಲ್ಲೂ ದೀರ್ಘಕಾಲದವರೆಗೂ ಪುರುಷರೇ ಕಾರ್ಯನಿರ್ವಹಣೆ ಮಾಡುತ್ತಿದ್ದುದರಿಂದ ಮಹಿಳೆಯರು ಈ ರಂಗಕ್ಕೆ ಅಪರಿಚಿತರಾಗಿಯೇ ಉಳಿದಿದ್ದರು. ಮುಂದೆ ಕ್ರಮೇಣ ಮಹಿಳಾ ಪ್ರಾತಿನಿಧ್ಯದ ಪ್ರಶ್ನೆ ಬಂದಾಗ ಅಥವಾ ಮಹಿಳಾ ಸದಸ್ಯರನ್ನು ಹೊಂದುವ ಏಕೈಕ ಉದ್ದೇಶದಿಂದ ಒಬ್ಬರು ಅಥವಾ ಇಬ್ಬರು ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ಪರಿಪಾಠ ಬಂದಿತು. ಶೋಷಣೆಗೆ ಮೊದಲ ಬಲಿಪಶುವಾಗುವ ಮಹಿಳೆಗೆ ಸಹಕಾರ ಕ್ಷೇತ್ರದಲ್ಲೂ ಅಂಥದೇ ಅನುಭವವಾಗತೊಡಗಿದಾಗ ಮಹಿಳೆಯರು ಭಿನ್ನ ರೀತಿಯಲ್ಲಿ ಆಲೋಚನೆ ಮಾಡುವ ಅವಶ್ಯಕತೆಯುಂಟಾಯಿತು. ಹಾಲು, ತರಕಾರಿ, ಧಾನ್ಯಗಳು, ಮೀನು ಮುಂತಾದ ಅವಶ್ಯಕ ವಸ್ತುಗಳ ಮಾರಾಟ, ಸಾಗಣೆ, ಲಾಭಹಂಚಿಕೆ ಮುಂತಾದ ವಿಷಯಗಳಲ್ಲಿ ಪುರುಷರು ಮಹಿಳೆಯರನ್ನು ವಂಚಿಸಿ ಸುಲಿಗೆ ಮಾಡುತ್ತಿದ್ದರು. ಹೀಗಾಗಿ ಮಧ್ಯವರ್ತಿಗಳು, ಲಾಭಬಡುಕರು ಹಾಗೂ ಕಾಳಸಂತೆಕೋರರರನ್ನು ನಿವಾರಿಸಿಕೊಳ್ಳಲು ಮಹಿಳೆಯರು ತಾವಾಗಿಯೇ ಸ್ವತಃ ಮಾರಾಟವ್ಯವಸ್ಥೆ ಮಾಡಿಕೊಳ್ಳುವ ಪ್ರಯತ್ನ ನಡೆಸಿದರು. ತತ್ಪರಿಣಾಮವಾಗಿ ಮಹಿಳೆಯರೇ ಮಹಿಳೆಯರಿಗಾಗಿ ಮಹಿಳೆಯರಿಂದ ನಡೆಸುವ ಸಂಸ್ಥೆಗಳು ಉದ್ಭವವಾದವು. ಆದರೆ ಇದಕ್ಕೂ ಕೂಡ ನೆರವು ನೀಡುವ ಪುರುಷರ ಮಾರ್ಗದರ್ಶನ, ಬೆಂಬಲ ದೊರೆಯುತ್ತಿತ್ತು. ಇಂಥ ಮಹಿಳಾ ಸಹಕಾರ ಬ್ಯಾಂಕುಗಳು ಇಂದು ಭಾರತದಾದ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಉನ್ನತ ಮಟ್ಟವನ್ನು ತಲುಪಿವೆ. ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ ಸಹಕಾರ ಆಂದೋಲನ ಸಹಸ್ರಾರು ಜನ ಮಹಿಳೆಯರಿಗೆ ಬಾಳಬೆಳಕು ತೋರಿದೆ.

ಸಹಕಾರ ಕ್ಷೇತ್ರವು ಸಾಮಾಜಿಕ-ಆರ್ಥಿಕ ವ್ಯವಸ್ಥೆಯಾಗಿದ್ದು, ಎರಡು ಅತಿಮುಖ್ಯ ಅಂಶಗಳನ್ನು ಒಳಗೊಂಡಿವೆ.

ಎ. ಸಹಕಾರ - ಒಂದು ಆಂದೋಲನ ಮತ್ತು

ಬಿ. ಸಹಕಾರ -ಒಂದು ಆರ್ಥಿಕ ವ್ಯವಸ್ಥೆ

ಎ. ಸಹಕಾರ ಒಂದು ಆಂದೋಲನವಾಗಿ ಜನರ ಸಂಸ್ಥೆಯಾಗಿ ಅದರಲ್ಲೂ ಪ್ರಸ್ತುತ ಪರಿಸ್ಥಿತಿಯಲ್ಲಿ ಹಾಗೂ ದುರ್ಬಲ ವರ್ಗದವರು ಮಹಿಳೆಯರ ಸಾಮಾನ್ಯ ಅವಶ್ಯಕತೆಗಳಿಗೆ ಸ್ಪಂದಿಸುತ್ತದೆ.

ಬಿ. ಆರ್ಥಿಕ ವ್ಯವಸ್ಥೆಯಾಗಿ ಸದಸ್ಯರ ಸಾಮಾನ್ಯ ಆರ್ಥಿಕ ಹಿತಾಸಕ್ತಿಗಳನ್ನು ಸಾಧಿಸುವ ಗುರಿಹೊಂದಿರುವ ವ್ಯಾಪಾರೋದ್ಯಮವಾಗಿದೆ. ಅದು ಮಾರುಕಟ್ಟೆ ಸ್ಪರ್ಧೆಯನ್ನೆದುರಿಸಬೇಕು. ವೃತ್ತಿಪರವಾಗಿ ದಕ್ಷತೆ

ಹಾಗೂ ಕಾರ್ಯಾಚರಣೆ ಸಾಧ್ಯತೆಯಿರಬೇಕು. ಬಂಡವಾಳ ಕೂಡಿಸುವುದು ಸದಸ್ಯರನ್ನು ಭೇಟಿ ಮಾಡಿ ಅವರ ಅವಶ್ಯಕತೆಗಳನ್ನು ಸರಕು ಸೇವೆಗಳನ್ನು ಒದಗಿಸುವುದು, ದಿಟ್ಟವಾದ ಆರ್ಥಿಕ ವ್ಯವಸ್ಥೆಯ ಮೂಲಕ ಬೆಳವಣಿಗೆ ಹಾಗೂ ವೈವಿಧ್ಯತೆಯನ್ನು ಉಳಿಸಿಕೊಳ್ಳುವುದು ಈ ದಿಸೆಯಲ್ಲಿ ಪಂಡಿತ್ ಜವಾಹರಲಾಲ್ ನೆಹರೂರವರ ಅಭಿಪ್ರಾಯ ಹೀಗಿದೆ. 'ಸಹಕಾರದ ಇಡೀ ಪರಿಕಲ್ಪನೆಯು ಸಾರ್ವಜನಿಕಕ ಮುಂದಾಳತ್ವವನ್ನು ಆಧರಿಸಿರಬೇಕಲ್ಲದೆ, ಸರ್ಕಾರವು ಏರ್ಪಡಿಸಿದ ಆಂದೋಲನವಾಗ ಬಾರದು. ಸರ್ಕಾರದ ನೆರವು ಇರಬೇಕು. ಆದರೆ ಸಾರ್ವಜನಿಕ ಮೆಚ್ಚುಗೆ, ಅಭಿಪ್ರಾಯ ಮತ್ತು ಸಾರ್ವಜನಿಕ ಸಹಕಾರದ ಬೆಳವಣಿಗೆಂದಲೇ ಉದ್ಭವಿಸುವಂತಾಗಬೇಕು'' ಹೀಗಾಗಿ ಸಹಕಾರ ಸಂಘವು ನೈತಿಕ ಮೌಲ್ಯಾಧಾರಿತ ಆರ್ಥಿಕ ಸಂಸ್ಥೆಯಾಗಿದ್ದು, ಅದರ ಮುಖ್ಯ ಲಕ್ಷಣಗಳು ಹೀಗಿವೆ.

೧. ಮುಕ್ತ ಸದಸ್ಯತ್ವ (open membership)

೨. ಸಂಗ್ರಹಣೆ ಮತ್ತು ಪಾಲುದಾರಿಕೆ(porling and sharing)

೩. ಪ್ರಜಾಸತ್ತಾತ್ಮಕ ನಿರ್ಧಾರ ಕೈಗೊಳ್ಳುವುದು(Democratic Decission making)

ಈ ಮೂರೂ ಲಕ್ಷಣಗಳನ್ನು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ತರಲು ಜನರು ಸಂಘಟಿತರಾಗ ಬೇಕು. ಇನ್ನು ಸಹಕಾರ ಸಂಘರಚನೆಗೆ ಅತ್ಯಂತ ಮುಖ್ಯವಾದುದು ಮುಖಂಡತ್ವ, ಧುರೀಣತ್ವ ಅಥವಾ ನಾಯಕತ್ವ(Leader ship) ಸಹಕಾರ ತತ್ವದ ಪ್ರಮುಖ ಪ್ರತಿಪಾದಕವಾದ ''ಕೂನ್ಸ್ (Koontz) ಮತ್ತು ಒ.ಡನೆಲ್ (o.Donnel) ಮುಖಂಡತ್ವದ ಅರ್ಥವ್ಯಾಖ್ಯೆಯನ್ನು ಹೀಗೆ ಮಾಡುತ್ತಾರೆ. ಮುಖಂಡತ್ವವೆಂದರೆ ಸಾಮಾನ್ಯ ವರ್ಚಸ್ಸು ಇರುವ ಜನರು ಸ್ವಯಿಚ್ಛೆಯಿಂದ ಮುಂದ ಬಂದು ಸಮೂಹ ಗುರಿಗಳನ್ನು ಸಾಧಿಸಲು ಪ್ರಯತ್ನಿಸುವಂತೆ ಜನರ ಮೇಲೆ ಪ್ರಭಾವ ಬೀರುವ ಕಲೆ ಅಥವಾ ಕಾರ್ಯವಿಧಾನವನ್ನು ಅರಿತಿರುವುದು.... ಉತ್ಸಾಹ ಹಾಗೂ ಆತ್ಮವಿಶ್ವಾಸದಿಂದ ಕೆಲಸ ಮಾಡಲು ಮುಂದಾಗುವುದು..... ನಾಯಕರಾಗುವುದು ಎಂದರೆ ಇತರರಿಗೆ ಮಾರ್ಗದರ್ಶನ ನೀಡುವುದು, ಉತ್ತಮ ಚಾರಿತ್ರ್ಯನಿರ್ಮಾಣ, ನಿರ್ದೇಶನ ಹಾಗೂ ಉದ್ದೇಶ ಸಾಧನೆ ಇವೆಲ್ಲವೂ ಒಳಗೊಳ್ಳಬೇಕು. ಒಂದು ಸಮೂಹವು ಅದರ ಗರಿಷ್ಠ ಸಾಮರ್ಥ್ಯಗಳನ್ನು ಬಳಸಿ ಉದ್ದೇಶಗಳು ಅಥವಾ ಗುರಿಗಳನ್ನು ಸಾಧಿಸಲು ಮುಖಂಡರು ನೆರವಾಗುತ್ತಾರೆ.''

ಕರ್ನಾಟಕದಲ್ಲಿ ಮಹಿಳೆಯರು ಸಹಕಾರ ಕ್ಷೇತ್ರವನ್ನು ಆರಂಭದಲ್ಲಿ ಅತ್ಯುತ್ಸಾಹದಿಂದ ಆಯ್ಕೆ ಮಾಡಿಕೊಂಡಿರಲಿಲ್ಲ. ಕೇವಲ ಎರಡು ದಶಕಗಳಿಂದೀಚೆಗೆ ಮಹಿಳೆಯರು ಆಸಕ್ತಿವಹಿಸಿ ಸಕ್ರಿಯವಾದ ಪಾತ್ರವಹಿಸಲು ಮುಂದೆ ಬರುತ್ತಿದ್ದಾರೆ. ಪ್ರಸ್ತುತ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಜಿಲ್ಲಾ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳೂ, ಪಟ್ಟಣ ಸಹಕಾರಿಕ ಬ್ಯಾಂಕ್ ಗಳು ಸ್ಥಾಪನೆಯಾಗಿವೆ. ೧೯೫೦-೬೦ರ ದಶಕದಲ್ಲಿ ಬ್ಯಾಂಕುಗಳು ಸ್ಥಾಪನೆಯಾಗಿವೆ. ೧೯೫೦-೬೦ರ ದಶಕದಲ್ಲಿ ಬೆಂಗಳೂರು ನಗರದ

ಅನೇಕ ಬಡಾವಣೆಗಳಲ್ಲಿ, ಸಣ್ಣ ಸಣ್ಣ ಪಟ್ಟಣಗಳಲ್ಲಿ ಮಹಿಳೆಯರು ಗುಂಪುಗೂಡಿ ಮಹಿಳಾ ಸಮಾಜಗಳನ್ನು ಸ್ಥಾಪಿಸುತ್ತಿದ್ದುದು ಸಾಮಾನ್ಯವಾಗಿತ್ತು. ಆಗ ಹೆಣ್ಣು ಮಕ್ಕಳಿಗೆ ಕಾಲೇಜು ಶಿಕ್ಷಣ ನೀಡುವ ಬಗ್ಗೆ ಅಷ್ಟೇನು ಆಸಕ್ತಿ ಹೊಂದಿರಲಿಲ್ಲ ತಾಯ್ತಂದೆ ಸಂಗೀತ, ಹೊಲಿಗೆ, ಕಸೂತಿ, ಹಿಂದಿ ಭಾಷೆ ಮುಂತಾದವುಗಳನ್ನು ಕಲಿಯಲು ಕಳುಹಿಸುತ್ತಿದ್ದರು. ಇಂಥ ಮಹಿಳಾ ಸಮಾಜಗಳು ಈಗ ಕೂಡ ಯಶಸ್ವಿಯಾಗಿ ಶಾಲಾಶಿಕ್ಷಣವನ್ನೂ ನೀಡುತ್ತಿವೆ.

"೧೯೫೫ರಲ್ಲಿ ಬೆಂಗಳೂರಿನ ಶೇಷಾದ್ರಿಪುರದಲ್ಲಿ ಹಲವು ಮಹಿಳೆಯರು ಸೇರಿ 'ಸೋದರಿ ಸಂಘ'ವನ್ನು ಸ್ಥಾಪಿಸಿ ಅನೇಕ ರೀತಿಯ ತರಗತಿಗಳನ್ನು ನಡೆಸುವ ಏರ್ಪಾಡು ಮಾಡದರು. ಅದರಲ್ಲಿ ಶ್ರೀಮತಿ ಲೀಲಾಸೆಟ್ಲೂರ್ ಮುಖ್ಯ ಪಾತ್ರವಹಿಸಿದ್ದರು. ಚೀನಾದೇಶ ಭಾರತದ ಮೇಲೆ ಯುದ್ಧ ಪ್ರಾರಂಭಿಸಿತು.(೧೯೬೨-೬೩) ನಿತ್ಯಬಳಕೆಯ ದಿನಸಿ ಪದಾರ್ಥಗಳು ನಾಗರಿಕರಿಗೆ ಸಿಗುವುದು ಕಷ್ಟವಾಯಿತು. ವ್ಯಾಪಾರಸ್ಥರು ಅಗತ್ಯ ಪದಾರ್ಥಗಳನ್ನು ಬಚ್ಚಿಟ್ಟು ಕೃತಕ ಅಭಾವ ಸೃಷ್ಟಿಸಿ ಪರಿಸ್ಥಿತಿಯ ಲಾಭಪಡೆಯಲು ಸನ್ನದ್ಧರಾದರು" ಎಂದು ಪ್ರಾರಂಭಿಸುವ ರಾಜ್ಯದ ಪ್ರಮುಖ ಮಹಿಳಾ ಸಹಕಾರಿಯರಲ್ಲಿ ಒಬ್ಬರಾದ ಶ್ರೀಮತಿ ಟಿ.ಎಸ್. ರುಕ್ಮಾಯಿ ಪ್ರಪ್ರಥಮ ಮಹಿಳಾ ಗ್ರಾಹಕರ ಸಹಕಾರ ಸಂಘದ ಬಗ್ಗೆ ವಿವರಣೆ ಹೀಗೆ ಮುಂದುವರಿಸುತ್ತಾರೆ." ಜನರಿಗೆ ಕಲಬೆರಕೆ ಇಲ್ಲದ ವಸ್ತುಗಳನ್ನು ಸರಿಯಾದ ತೂಕದೊಂದಿಗೆ, ಸೂಕ್ತ ಬೆಲೆಗೆ ಮಾರುವುದು ಸಹಕಾರ ಸಂಘದ ಸಾಧನೆಯ ಉದ್ದೇಶ. ...ಷೇರು ಹಣ ಕೇವಲ ಹತ್ತು ರೂಪಾಯಿಯೇ ಆಗಿದ್ದರೂ ಸಹ ಆ ಹಣಕೊಟ್ಟು ಸದಸ್ಯೆಯರಾಗುವ ಆರ್ಥಿಕ ಸ್ವಾತಂತ್ರ್ಯ ಶೇ.೯೫ ಜನಮಹಿಳೆಯರಿಗೆ ಇರಲಿಲ್ಲ.... ಸಂಸ್ಥೆಯನ್ನು ನೋಂದಣಿ ಮಾಡಿಸಲು ಏಳೆಂಟು ತಿಂಗಳು ಹಿಡಿಯಿತು. ಒಂದುವರ್ಷಕಾಲ ಕಷ್ಟಪಟ್ಟು ಶೇಖರಿಸಿದ ಷೇರು ಬಂಡವಾಳ ೬ ಸಾವಿರ ರೂಪಾಯಿ ಮಾತ್ರ, ಸಹಕಾರ ಇಲಾಖೆ ನೀಡಿದ ರೂ. ೪ ಸಾವಿರ ಷೇರು ಬಂಡವಾಳ ಸೇರಿಸಿ ೧೦,೦೦೦ ರೂಪಾಯಿ ಬಂಡವಾಳದೊಂದಿಗೆ ೧೯೬೫ನೆಯ ಏಪ್ರಿಲ್ ಮಾಹೆ ನಾಲ್ಕನೆಯ ದಿನಾಂಕ(೪-೪-೧೯೬೫) 'ಸೋದರಿ ಸಂಘ ಬಳಕೆದಾರರ ಸಹಕಾರ ಸಂಘ' ಕಾರ್ಯಾರಂಭ ಮಾಡಿತು. ರಾಜ್ಯದಲ್ಲಿ ಸ್ಥಾಪಿಸಲ್ಪಟ್ಟ ಪ್ರಪ್ರಥಮ ಮಹಿಳಾ ಗ್ರಾಹಕರ ಸಂಘವೆಂಬ ಖ್ಯಾತಿಗೆ ಪಾತ್ರವಾಯಿತು. ಮಧ್ಯಮ ವರ್ಗದ ಸದಸ್ಯೆಯರಿಗೆ ಬೇಕಾದ ಉತ್ತಮ ರೇಷ್ಮೆ ಸೀರೆಗಳನ್ನು ಕಂಚಿ, ಅರಣಿ, ಧರ್ಮಾವರ ಮುಂತಾದ ಊರುಗಳಿಗೆ ಖುದ್ದಾಗಿ ಹೋಗಿ 'ಮಧ್ಯವರ್ತಿ'ಗಳ ನೆರವಿಲ್ಲದೆ ನೇರವಾಗಿ ನೇಕಾರರಿಂದಲೇ ಕೊಂಡುತಂದು ಸರಿಯಾದ ಬೆಲೆಗೆ ಮಾರಾಟ ಮಾಡುವಲ್ಲಿ ಯಶಸ್ವಿಯಾದರು. ಸೋದರಿ ಸಂಘ ಬಳಕೆದಾರರ ಸಹಕಾರ ಸಂಘದ ಸ್ಥಾಪನೆಯೊಂದಿಗೆ ಪ್ರಾರಂಭವಾದ ಲೀಲಾ ಸೆಟ್ಲೂರ್ ಅವರ ಸೇವೆ ಸಹಕಾರ ಕ್ಷೇತ್ರದಲ್ಲಿನ ಇತರ ರಂಗಗಳಲ್ಲಿ ಕೂಡ ಲಭ್ಯವಾಯಿತು. ಕರ್ನಾಟಕ ರಾಜ್ಯ ಸಹಕಾರ ಚಲನಚಿತ್ರ ಮಹಾಮಂಡಲದ ಸ್ಥಾಪಕ ಸದಸ್ಯೆಯಾದ ಇವರು.... ಮಹಿಳೆಯರಿಗೆ ಆರ್ಥಿಕ

ಬೆಂಬಲ ನೀಡುವ ಸಲುವಾಗಿ ಬೆಂಗಳೂರು ಜಿಲ್ಲಾ ಮಹಿಳಾ ಉದ್ಯಮಿಗಳ ಸಹಕಾರ ಸಂಘ ಸ್ಥಾಪಿಸುವುದರಲ್ಲೂ ಮುಖ್ಯಪಾತ್ರವಹಿಸಿದರು. ಕರ್ನಾಟಕ ರಾಜ್ಯ ಸಹಕಾರ ಯೂನಿಯನ್‌ನ ಮಹಿಳಾ ಸಲಹಾ ಸಮಿತಿಯಲ್ಲಿ ಸದಸ್ಯೆಯಾಗಿದ್ದರು. ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಇಲ್ಲವೇ ಇಲ್ಲದಿದ್ದಾಗ ಶ್ರೀಮತಿ ಲೀಲಾ ಸೆಟ್ಲೂರ್ ಧೈರ್ಯದಿಂದ ಸಹಕಾರ ಕ್ಷೇತ್ರದಲ್ಲಿ ಸಕ್ರಿಯ ಪಾತ್ರವಹಿಸಿದುದು ಮಾತ್ರವಲ್ಲದೆ ಇತರ ಮಹಿಳೆಯರಲ್ಲೂ ಸಹಕಾರ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಕಾರ್ಯದಲ್ಲಿ ಸಕ್ರಿಯ ಪಾತ್ರವಹಿಸಿದುದು ಸ್ತುತ್ಯಾರ್ಹ.'' ಈ ಮಹಾನ್ ಸಹಕಾರಿ ಮಹಿಳೆಗೆ ಕರ್ನಾಟಕ ರಾಜ್ಯ ಸರ್ಕಾರದ ಸಹಕಾರ ಇಲಾಖೆ "ಸಹಕಾರ ಶ್ರೀ'' ಪ್ರಶಸ್ತಿ ನೀಡಿ ಗೌರವಿಸಿದೆ.

ಹೊಸಹೊಸ ಮಹಿಳಾ ಮುಖಂಡರನ್ನು ಗುರುತಿಸಲು ಹಾಗೂ ಮಹಿಳೆಯರನ್ನು ಸಹಕಾರ ಚಳವಳಿಯಲ್ಲಿ ಒಳಗೊಳ್ಳಲು ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿರುವ ಸರ್ಕಾರೇತರ ಸಂಸ್ಥೆಗಳು(ಸ್ವಯಂಸೇವಾ ಸಂಸ್ಥೆಗಳು, NGOS) ನಿರ್ದಿಷ್ಟ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಬೇಕು. ೧೯೭೭ರಲ್ಲಿ ನ್ಯಾಷನಲ್ ಸೆಂಟರ್ ಫಾರ್ ಕಾಂಪಿಟಿಟಿವ್ ಎಜಕೇಷನ್ (ಎನ್ ಸಿಸಿಇ) ಇಂಥ ಕಾರ್ಯಗಳನ್ನು ಹಮ್ಮಿಕೊಂಡಿತ್ತು. ಇದೇ ರೀತಿಯಲ್ಲಿ ವಿವಿಧ ಏಜೆನ್ಸಿಗಳ ಪಾತ್ರವೂ ಮುಖಂಡತ್ವದ ಬೆಳವಣಿಗೆಯಲ್ಲಿ ಅತಿಮುಖ್ಯವಾಗುತ್ತದೆ. ಮಹಿಳೆಯರು ಇಂಥ ಏಜೆನ್ಸಿಗಳಲ್ಲಿ ಕೆಲಸ ಮಾಡುವ ಮೂಲಕ ಅನುಭವ ಗಳಿಸಿಕೊಳ್ಳಬಹುದು. ಅಲ್ಲದೆ ಈ ಕಾರ್ಯಕ್ರಮವನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ(HRD) ಕಾರ್ಯಕ್ರಮಗಳ ಭಾಗವಾಗಿ ಪರಿಗಣಿಸಬೇಕು.

ಸಮಾಜದಲ್ಲಿ ವ್ಯಕ್ತಿಯು ನಿಶ್ಚಿಂತನಾಗಿ ಬಾಳಬೇಕೆಂದರೆ ವೈಯಕ್ತಿಕ ಸ್ವಾತಂತ್ರ್ಯ ಹಾಗೂ ಪರಸ್ಪರಾವಲಂಬನೆ ಇವೆರಡೂ ಅತಿಮುಖ್ಯ ಅಂಶಗಳಾಗುತ್ತವೆ. ಗಾಂಧೀಜಿಯವರು ಸಹಕಾರಿಗಳ ಯಶಸ್ಸಿಗಾಗಿ ಕೆಲವೊಂದು ಸೂಚನೆಗಳನ್ನು ಆಗಿಂದಾಗ್ಗೆ ನೀಡುತ್ತಿದ್ದು, ಅವುಗಳಲ್ಲಿ ಕೆಲಮುಖ್ಯ ಸಂಗತಿಗಳು ಮಹಿಳಾ ಸಹಕಾರಿಗಳಿಗೆ ಅನ್ವಯಿಸುತ್ತವೆ. ಅವು ಹೀಗಿವೆ:

೧. ಸಹಕಾರವೆಂದರೆ ಅಹಿಂಸೆ. ಸಹಕಾರ ಸಂಘವನ್ನು ಸಂಘಟಿಸುವವರೆಲ್ಲರ ಸ್ವಯಂಇಚ್ಛೆಯ ಸಮ್ಮತಿಯಿಂದ ಮಾತ್ರವೇ ರಚಿಸಬೇಕು. ಪ್ರೀತಿ, ಪರಸ್ಪರ ಅರಿವು, ತನ್ನಂತೆ ಪರರನ್ನೂ ಬಗೆಯುವುದೇ ಇಲ್ಲಿನ ಬಾಂಧವ್ಯದ ಒತ್ತಾಸೆಯಾಗಬೇಕು. ಯಾವುದೇ ಬಗೆಯ ಒತ್ತಾಯ, ಕಡ್ಡಾಯ ಇರತಕ್ಕದಲ್ಲ.

೨. ಸಹಕಾರ ವ್ಯವಸ್ಥೆಯಲ್ಲಿ ಸರ್ವರಿಗೂ ಸಮಾನ ಸ್ವಾತಂತ್ರ್ಯವಿರತಕ್ಕದ್ದು.

೩. ವಿವಿಧ ಬಗೆಯ ಜನರ ಮನೋಭಾವ, ವಿಭಿನ್ನ, ಸ್ವಭಾವ, ವರ್ತನೆ, ವಿಭಿನ್ನ ಪರಿಸ್ಥಿತಿಗಳೂ ಸಹ ವಿಭಿನ್ನವಾಗಿರುತ್ತವೆ. ಬೇರೂರಿರುವ ಸಹಕಾರ ತತ್ತ್ವ ಇಂಥವೆಲ್ಲವನ್ನು ಏಕಮುಖಿಗೊಳಿಸುತ್ತದೆ.

೪. ಸದಸ್ಯರು ಮತ್ತು ಆಡಳಿತ ಮಂಡಳಿ ಪ್ರಾಮಾಣಿಕರಾಗಿದ್ದು, ಸಹಕಾರದ ಮಹತ್ತ್ವವನ್ನು ಅರಿತಿರಬೇಕು.

೫. ಸಹಕಾರ ಸಂಘವು ನಿರ್ದಿಷ್ಟ ಪ್ರಗತಿಪರಗುರಿಯನ್ನು ಹೊಂದಿರತಕ್ಕದ್ದು.

೬. ಸಹಕಾರ ಸಂಘಗಳ ಕಾರ್ಯಕ್ರಮಗಳಲ್ಲಿ ಕೆಲಸ ಮಾಡುವ, ನೆರವು ನೀಡುವ ಹಾಗೂ ಮಾರ್ಗದರ್ಶನ ನೀಡುವ ಸಂಘದ ಪದಾಧಿಕಾರಿಗಳು ಅತ್ಯಂತ ಪ್ರಾಮಾಣಿಕರಾಗಿದ್ದು, ತಮ್ಮ ಕರ್ತವ್ಯ, ಜವಾಬ್ದಾರಿಗಳನ್ನು ಅರಿತಿರಕ್ಕದ್ದು.

ಸಹಕಾರ ಸಂಘಗಳಲ್ಲಿ ಸ್ವಾರ್ಥಿಗಳು ಸೇರಿಕೊಂಡಲ್ಲಿ ಮುಖಂಡತ್ವಕ್ಕಾಗಿ ಹಾತೊರೆಯುವ ಹಾಗೂ ಅದಕ್ಕಾಗಿ ಎಂಥ ಹೀನಕೃತ್ಯವನ್ನಾದರೂ ಮಾಡುವ ಸಂಭವವಿರುತ್ತದೆ. ಪ್ರಾಯಶಃ ಸರ್ಕಾರದ ಪಾಲುದಾರಿಕೆಯಿರುವ ಕಡೆ ಇಂಥ ರಾಜಕೀಯ ಬುಡಮೇಲಾಟ ನಡೆಯಬಹುದು. ಇದೊಂದು ವಿಷ ವರ್ತುಲದಂತಾಗಿ ಪ್ರಾಮಾಣಿಕರಿಗೆ ತಮ್ಮ ಕರ್ತವ್ಯ ನಿರ್ವಹಿಸಲು ಆಸ್ಪದವಿಲ್ಲದಂತಾಗುತ್ತದೆ. ಹೀಗಾಗಿ, ಕೆಳಮಟ್ಟದ ಸಹಕಾರಿಗಳಿಂದ ಮತ್ತಿತರ ಉದ್ಯಮಿಗಳು ಹಾಗೂ ಉದ್ಯಮಗಳ ಯಶಸ್ಸಿಗೂ ಅಡಚಣೆಯೊಡ್ಡುವ ಪರಿಪಾಠಗಳೂ ಕಂಡುಬರುತ್ತವೆ. ಆದ್ದರಿಂದ ಮಹಿಳೆಯರ ಮಟ್ಟಿಗೆ ಹೇಳುವುದಾದರೆ ಅಂಥ ವಿಚ್ಛಿದ್ರಕಾರಿ ಶಕ್ತಿಗಳಿಂದ ತೊಂದರೆಯಾಗದಂತೆ ಜಾಗರೂಕರಾಗಿರಬೇಕು. ಇದಕ್ಕಾಗಿ ಕೆಲವೊಂದು ನಿರ್ಭೀತ ನಡವಳಿಗಳನ್ನು ಪ್ರತಿಯೊಬ್ಬರೂ ಹೊಂದಿರಬೇಕು. ಅವುಗಳು ಹೀಗಿವೆ.

೧. ಒಬ್ಬ ಸಮರ್ಥ ಮಹಿಳೆಯನ್ನು ನಾಯಕಿಯನ್ನಾಗಿ(Leader) ಗುರುತಿಸುವುದು.

೨. ಸಹಕಾರ ಸಂಘದ ಉದ್ದೇಶವು ಆದಾಯವನ್ನು ಮೀರಿ ಸಾಮಾಜಿಕ ಹಾಗೂ ಸಮುದಾಯದ ಗುರಿಗಳನ್ನು ಹೊಂದಿರಬೇಕು.

೩. ಸಮೂಹದ ಎಲ್ಲ ಸದಸ್ಯರೂ ಸಾಧ್ಯವಾದ ಮಟ್ಟಿಗೆ ಒಂದೇ ಬಗೆಯ ಹಿನ್ನೆಲೆ ಹಾಗೂ ಅನುಭವಗಳನ್ನು ಹೊಂದಿರಬೇಕು.

೪. ಸಹಕಾರ ಸಂಘದೊಂದಿಗೆ ಯಾವುದೇ ರಾಜಕೀಯ ಪಕ್ಷಗಳ ಸಂಪರ್ಕವಿರಬಾರದು.

೫. ಸಹಕಾರ ಸಂಘವು ನಿರ್ದಿಷ್ಟ ರಕ್ಷಣೆ ಅಥವಾ ಅನುಕೂಲಗಳನ್ನು ನಿರೀಕ್ಷಿಸದೆ ಸ್ವಾವಲಂಬಿ ಹಾಗೂ ಸ್ವಯಂಪೂರ್ಣವಾಗಬೇಕು.

೬. ಕಟ್ಟುನಿಟ್ಟಾದ ನಿಯಮಗಳು ಹಾಗೂ ಕಾರ್ಯವಿಧಾನವನ್ನು ಹೊಂದಿರಬೇಕು.

೭. ಸದಸ್ಯರು ವಿವಿಧ ಬಗೆಯ ಕೌಶಲ್ಯ, ಆಸಕ್ತಿ ಹಾಗೂ ಯೋಗ್ಯತೆಗಳನ್ನು ಹೊಂದಿರಬೇಕು.

೮. ಪ್ರಾರಂಭದಿಂದಲೂ ವಿವಿಧೋದ್ದೇಶ ಚಟುವಟಿಕೆಗಳನ್ನು ಹೊಂದಿರಬೇಕು.

ಮಹಿಳಾ ಮುಖಂಡತ್ವ, ತರಬೇತಿ, ಯಶಸ್ಸು

"ಒಂದು ಕುಟುಂಬದ ಯಜಮಾನ, ವಿದ್ಯಾಸಂಸ್ಥೆಯ ಮುಖ್ಯೋಪಾಧ್ಯಾಯ ಅಥವಾ ಪ್ರಾಂಶುಪಾಲ, ಕಾರ್ಖಾನೆಯ ಕಾರ್ಯ ನಿರ್ವಾಹಕ ನಿರ್ದೇಶಕ(managing Direetor), ಸ್ವಯಂ ಸೇವಾ ಸಂಸ್ಥೆಯ ಅಧ್ಯಕ್ಷ, ರಾಜ್ಯದ ಮುಖ್ಯಮಂತ್ರಿ, ದೇಶದ ಪ್ರಧಾನಿ ಇವರುಗಳೆಲ್ಲಾ ನಾಯಕರು" ಎಂದು ನಾಯಕತ್ವದ ವಿಶೇಷ ಗುಣಗಳನ್ನು ಸೂಚಿಸುತ್ತಾರೆ ಕರ್ನಾಟಕದ ಮಹಿಳಾ ಸಹಕಾರಿ ಶಿಕ್ಷಣಾಧಿಕಾರಿಯಾಗಿದ್ದು, ಅನೇಕ ಮಹಿಳಾ ಸಹಕಾರಿ ಸಂಘ ಬ್ಯಾಂಕುಗಳ ಪ್ರಾರಂಭ, ಬೆಳವಣಿಗೆ ಹಾಗೂ ಯಶಸ್ಸಿಗೆ ಕಾರಣಕರ್ತೆಯಾಗಿರುವ ಶ್ರೀಮತಿ ಎಸ್.ಕೆ.ನಾಗರತ್ನಾರಾವ್ ಅವರ ಪ್ರಕಾರ ಮಹಿಳಾ ಮುಖಂಡರು ಹೊಂದಿರಬೇಕಾದ ಕೆಲವು ವಿಶೇಷ ಲಕ್ಷಣಗಳು ಈ ಮುಂದಿನಂತಿವೆ:

೧. ತನ್ನ ಸಂಗಡಿಗರು, ಸಹೋದ್ಯೋಗಿಗಳು, ತನ್ನ ಕೈಕೆಳಗೆ ಕೆಲಸ ಮಾಡುವ ಸಿಬ್ಬಂದಿ ವರ್ಗದೊಂದಿಗೆ ಮಧುರ ಬಾಂಧವ್ಯವನ್ನು ಗಳಿಸಿಕೊಂಡು ಅದನ್ನು ಉಳಿಸಿಕೊಳ್ಳುವ ಜಾಣ್ಮೆಯನ್ನು ಪಡೆದಿರಬೇಕು.

೨. ನಾಯಕತ್ವವನ್ನು ವಹಿಸಿಕೊಂಡ ಸಂಸ್ಥೆಯ ಬಗ್ಗೆ ಸಂಪೂರ್ಣ ತಿಳಿವಳಿಕೆ, ಆ ಸಂಸ್ಥೆಯಲ್ಲಿನ ಲೋಪದೋಷ ಸಂಸ್ಥೆಯ ಅಭಿವೃದ್ಧಿಗೆ ತೊಡಕಾಗಿರುವ ಸಮಸ್ಯೆಗಳೇನು? ಅವುಗಳನ್ನು ಪರಿಹರಿಸಲು ಯಾವ ಕಾರ್ಯಕ್ರಮ ಕೈಗೊಳ್ಳಬಹುದು ಎಂಬ ಎಲ್ಲ ಅಂಶಗಳನ್ನು ಚಿಂತಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬಲ್ಲ ಧೀಮಂತಿಕೆ ಪಡೆದಿರಬೇಕು.

೩. ತನಗೆ ಅರಿಯದ ವಿಷಯಗಳನ್ನು ನುರಿತವರಿಂದ ತಿಳಿದುಕೊಳ್ಳುವ ಮನೋವೈಶಾಲ್ಯವಿರಬೇಕು. ಅವರು ತನಗಿಂತ ಕಿರಿಯರಾದರೂ ಅವರಿಂದ ಕಲಿಯುವ ಗುಣವನ್ನು ಅಳವಡಿಸಿಕೊಂಡಿರಬೇಕು.

೪. ತನ್ನ ಸಹೋದ್ಯೋಗಿಗಳ ಅಭಿಪ್ರಾಯವನ್ನು ಸಾವಧಾನದಿಂದ ಕೇಳುವ ತಾಳ್ಮೆ ಬಹುಮುಖ್ಯ. ತಾನು ನಾಯಕ(ನಾಯಕಿ) ತನ್ನ ಅಭಿಪ್ರಾಯಕ್ಕೆ ಎಲ್ಲರೂ ಮಾನ್ಯತೆ ಕೊಡಬೇಕೆಂಬ ದುರಭಿಮಾನವಿರಬಾರದು. ಸಹೋದ್ಯೋಗಿಗಳ ಅಭಿಪ್ರಾಯಕ್ಕೆ, ಸಲಹೆಗಳಿಗೆ ಮನ್ನಣೆ ನೀಡಿ ಕೂಲಂಕಷವಾಗಿ ಯೋಚಿಸಿ ತೀರ್ಮಾನವನ್ನು ಕೈಗೊಳ್ಳುವ ಸಹೃದಯಿಯಾಗಿರಬೇಕು.

೫. ಯಾವ ಕೆಲಸಕ್ಕೆ ಆದ್ಯತೆ ನೀಡಬೇಕೆಂದು ತೀರ್ಮಾನಿಸುವ ಶಕ್ತಿ ಇರಬೇಕು. ಕಷ್ಟಕರವಾದ ಸಮಸ್ಯೆಗಳು ಎದುರಾದಾಗ ಅದನ್ನು ಅಧ್ಯಯನ ಮಾಡಿ ಪರಿಹರಿಸುವ ಧೈರ್ಯಶಾಲಿಯಾಗಿರಬೇಕು. ಸಮಸ್ಯೆಗಳನ್ನು ತನ್ನ ಸಹಾಯಕರ ಹೆಗಲಿಗೆ ಜಾರಿಸುವ ಮನೋಧರ್ಮವಿರಬಾರದು.

೬. ಕೆಲಸದ ಗುಣಮಟ್ಟದ ಬಗ್ಗೆ ರಾಜಿ ಮಾಡಿಕೊಳ್ಳುವ ಪ್ರವೃತ್ತಿಯಿರಬಾರದು. ನಾಯಕರಾದವರ ಇಂಥ ರಾಜಿ ಪ್ರವೃತ್ತಿಯಿಂದ ಸಂಸ್ಥೆಯ ಉನ್ನತಿ ಕಷ್ಟವಾಗುತ್ತದೆ.

೭. ತ್ವರಿತವಾಗಿ ಮಾಡಬೇಕಾದ ಕೆಲಸಕ್ಕೆ ತಾನು ತೆಗೆದುಕೊಳ್ಳುವ ಕ್ರಮ ಸರಿಯಿಲ್ಲವೇನೋ ಎಂದು ಶಂಕಿಸುತ್ತ ಕಾಲಯಾಪನೆ ಮಾಡಬಾರದು.

೮. ಪ್ರತಿ ಸಣ್ಣಕೆಲಸಕ್ಕೂ, ವಿಷಯಕ್ಕೂ ಗಮನವಿಟ್ಟು ಪರಿಶೀಲಿಸಿದಲ್ಲಿ ಸರಿಯಾದ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

೯. ತನ್ನ ಸಹೋದ್ಯೋಗಿ, ಸಿಬ್ಬಂದಿ ವರ್ಗಕ್ಕೆ ಮಾದರಿಯಾಗಿರಬೇಕು. ನಿಗದಿಯಾದ ಕಚೇರಿ ವೇಳೆಗೆ ಬರುವ ಪರಿಪಾಠವಿದ್ದಲ್ಲಿ, ಇತರರೂ ಸಕಾಲದಲ್ಲಿ ಕಚೇರಿಗೆ ಬರುತ್ತಾರೆ.

೧೦. ಪೂರ್ಣಗೊಳಿಸಲು ಸಾಧ್ಯವಾಗದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಕಾಲವ್ಯಯ ಮಾಡುವುದು ಉತ್ತಮ ನಾಯಕನ ಲಕ್ಷಣವಲ್ಲ.

೧೧. ಮಾಡುವ ಎಲ್ಲ ಕಾರ್ಯಗಳೂ, ತೆಗೆದುಕೊಳ್ಳುವ ಎಲ್ಲ ನಿರ್ಧಾರಗಳೂ ಸರಿಯಾಗಿಯೇ ಇರಬೇಕೆಂಬ ಅಭಿಪ್ರಾಯ ಹೊಂದಿರಬಾರದು. ನಡೆಯುವವರು ಎಡವದೆ ಇರುವುದಿಲ್ಲ. ತೆಗೆದುಕೊಂಡ ತೀರ್ಮಾನ ತಪ್ಪಾದಲ್ಲಿ ಅದರಿಂದ ಸಂಭವಿಸಬಹುದಾದ ಆಗುಹೋಗುಗಳನ್ನು ಎದುರಿಸುವ ಧೈರ್ಯವಿರಬೇಕು.

೧೨. ಕೈ ಕೆಳಗೆ ಕೆಲಸಮಾಡುವ ಅಧಿಕಾರಿಗಳ ಸಾಮರ್ಥ್ಯವನ್ನು ಅರಿತುಕೊಳ್ಳುವ ಶಕ್ತಿ ಇರಬೇಕು. ಒಪ್ಪಿಸಿದ ಕೆಲಸವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಬಲ್ಲ ಸಹಾಯಕ ಅಧಿಕಾರಿಗಳನ್ನು ಪತ್ತೆಹಚ್ಚಿ ಅವರಿಗೆ ಉತ್ತೇಜನ ಕೊಟ್ಟು ಮತ್ತಷ್ಟು ದಕ್ಷರನ್ನಾಗಿಮಾಡಿ ರೂಪುಗೊಳಿಸುವ ಜಾಣ್ಮೆಯಿರಬೇಕು.

೧೩. ದೀರ್ಘಕಾಲದ ಅನುಭವದಿಂದ ತಾನು ಕಲಿತಿದ್ದನ್ನು ಮುಚ್ಚು ಮರೆಯಿಲ್ಲದೆ ತನ್ನೊಂದಿಗೆ ಕೆಲಸ ಮಾಡುವವರಿಗೆ ಕಲಿಸುವ ವಿಶಾಲ ಮನೋಭಾವವಿರಬೇಕು.

೧೪. ಕೈಕೆಳಗೆ ಕೆಲಸ ಮಾಡುವವರ ಮೇಲೆ ಅಧಿಕಾರ ಚಲಾಯಿಸಿ ಹೀಗಳೆಯಬಾರದೆಂದ ಮಾತ್ರಕ್ಕೆ ಅವರ ಕಾರ್ಯನಿರ್ವಹಣೆಯಲ್ಲಿ ಲೋಪದೋಷಗಳಿದ್ದು, ಅವುಗಳನ್ನು ಅವರ ಗಮನಕ್ಕೆ ತಂದರೂ ಸಹ, ಅವರು ತಮ್ಮ ಕಾರ್ಯವಿಧಾನವನ್ನು ಸರಿಪಡಿಸಿಕೊಳ್ಳದಿದ್ದರೆ ಅಂಥವರ ಬಗ್ಗೆ ಕಠಿಣವಾಗಿ ನಡೆದುಕೊಳ್ಳುವ ಗುಣವಿರಬೇಕು.

ಮಹಿಳಾ ಸಹಕಾರಿಗಳಲ್ಲಿ ಮುಖಂಡತ್ವದ ಕೊರತೆ ಇದೆ. ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಸರ್ವತೋಮುಖ ಬೆಳವಣಿಗೆಗೆ ನಾಯಕತ್ವ ಶಿಕ್ಷಣ ಹಾಗೂ ಪ್ರಚಾರ ಅತ್ಯಗತ್ಯವಾದ ಅಂಶಗಳು. ಮಹಿಳೆಯರು

ಅಧಿಕ ಸಂಖ್ಯೆಯಲ್ಲಿ ಮುಂದೆ ಬಂದು ಸಹಕಾರ ತತ್ವದ ಆಚರಣೆ ಹಾಗೂ ಅನುಷ್ಠಾನದಲ್ಲಿ ನಂಬಿಕೆ ಇರಿಸಬೇಕು. ನಾಯಕತ್ವದ ಆದರ್ಶದ ಹಿನ್ನೆಲೆಯಲ್ಲಿ ಸಂಘಟನೆ ಆಗಬೇಕು.* ಸಹಕಾರಿ ಕ್ಷೇತ್ರ ಸೇವಾಕ್ಷೇತ್ರ. ಇಲ್ಲಿ ಸ್ವಾರ್ಥಕ್ಕೆ ಎಡೆಯಿಲ್ಲ. ಆದ್ದರಿಂದ ಮಹಿಳೆಯರು ತಮ್ಮ ಇಚ್ಛೆಗನುಸಾರವಾಗಿ ತಮ್ಮ ಸಾಮರ್ಥ್ಯಕ್ಕೆ ತಕ್ಕಂಥ ವಿಭಾಗವನ್ನು ಆಯ್ದುಕೊಂಡು ಅವರಲ್ಲಿ ಸಂಪೂರ್ಣ ಗಮನ ಕೇಂದ್ರೀಕರಿಸಿ ಕೆಲಸ ಮಾಡಬೇಕು. ಪ್ರಜಾತಂತ್ರದ ತಳಹದಿಯ ಮೇಲೆ ನಿರ್ಮಿಸಲಾಗುವ ಯಾವುದೇ ಸಂಘಟನಾ ಸಮುದಾಯಗಳ ಪ್ರಗತಿ ಮತ್ತು ಧ್ಯೇಯಗಳು ಫಲಪ್ರದವಾಗಬೇಕಾದರೆ ಆ ಸಂಘಟನೆಯ ಪ್ರತಿ ಸದಸ್ಯರೂ ಕರ್ತವ್ಯಪ್ರಜ್ಞೆ, ತತ್ತ್ವಶ್ರದ್ಧೆವುಳ್ಳವರಾಗಿ ಆ ಜನಾಂಗದ ಮತ್ತು ಸಮಾಜದ ಸರ್ವತೋಮುಖ ಪ್ರಗತಿಯ ಏಕಮೇವ ಗುರಿ ಹೊಂದಿದವರಾಗಬೇಕು.

ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು ಸ್ವಭಾವತಃ ಹಿಂಜರಿಕೆ ಸ್ವಭಾವದಿಂದಾಗಿ ಮುನ್ನುಗ್ಗಿ ಬರುವುದಿಲ್ಲ. ಇದಕ್ಕೆ ಸಾಕಷ್ಟು ಉತ್ಸಾಹ, ಆಕರ್ಷಣೆ ಹಾಗೂ ಆತ್ಮವಿಶ್ವಾಸವಿರುವ ಮುಖಂಡತ್ವ ಅಥವಾ ಮುಂದಾಳತ್ವದ ಕೊರತೆಯೇ ಕಾರಣವೆನ್ನಬಹುದು. ಮುಖಂಡರಾಗುವ ಗುಣವನ್ನು ಪಡೆಯಲು ಅನುಭವ, ಪರಿಶ್ರಮ ನೀಡುವ ತರಬೇತಿ ಅಗತ್ಯತೆಯಿದ್ದು, ಸೂಕ್ತ ಅವಕಾಶಗಳು ಒದಗಬೇಕು. ಇಂಥ ಮುಂದಾಳುತ್ವ ಅಥವಾ ನಾಯಕರಾಗುವ ವಿಶಿಷ್ಟ ಶಕ್ತಿ ಹುಟ್ಟಿನಿಂದಲೇ ಬರಬೇಕೆಂದಿಲ್ಲ. ಪ್ರತಿಯೊಬ್ಬರಲ್ಲೂ ಅಂಥ ಶಕ್ತಿ, ಗುಣಗಳು ಸುಪ್ತವಾಗಿರುತ್ತವೆ. ಕ್ರಿಯಾಶೀಲರಾಗುವ ಮೂಲಕ ಕ್ವಚಿತ್ತಾಗಿ ಒದಗಿಬರುವ ಸಂದರ್ಭಾವಕಾಶಗಳನ್ನು ವಿವೇಚನೆಯಿಂದ ಬಳಸಿಕೊಂಡಲ್ಲಿ ಜವಾಬ್ದಾರಿ ಹೊರುವ ಮನೋಸ್ಥೈರ್ಯ ತಾನಾಗಿಯೇ ಮೂಡುತ್ತದೆ. ಅನುಭವಗಳು ಹೆಚ್ಚಿದಂತೆ ಕ್ಷೇತ್ರದ ಸಮಸ್ತ ವಿವರಗಳು, ಕಾರ್ಯತಂತ್ರಗಳು ಕರಗತವಾಗುತ್ತವೆ. ಆದ್ದರಿಂದ ನಿಷ್ಕ್ರಿಯರಾಗಿ ಚಿಂತಿಸುತ್ತ ಅವಕಾಶ ತಾನಾಗಿ ಬರಲೆಂದು ಕಾಯುವುದಕ್ಕೆ ಬದಲು ಅವಕಾಶಗಳನ್ನು ಹುಡುಕಿಕೊಂಡು ಹೋಗಿ, ಜನರನ್ನು ಭೇಟಿಯಾಗಿ, ಸಂದರ್ಶಿಸಿ ಕಾರ್ಯಸಿದ್ಧಿ ಮಾಡಿಕೊಳ್ಳುವುದು ಜಾಣತನವಾದೀತು. ಸೂಕ್ತ ಶಿಕ್ಷಣ, ತರಬೇತಿ, ಅನುಭವವಿಲ್ಲವೆಂದು ಕೊರಗುವುದಕ್ಕಿಂತ ಸಂಬಂಧಪಟ್ಟ ತಜ್ಞರನ್ನು ಕಂಡು ವಿಷಯ ವಿನಿಮಯ ಮಾಡಿಕೊಳ್ಳಬೇಕು. ಅತಿಮುಖ್ಯವಾದ ಸಪ್ತ ಸಹಕಾರ ತತ್ತ್ವಗಳು ಹೀಗಿವೆ.

೧. ಸ್ವಯಂ ಪ್ರೇರಿತ ಮತ್ತು ಮುಕ್ತ ಸದಸ್ಯತ್ವ
೨. ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ
೩. ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು
೪. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
೫. ಶಿಕ್ಷಣ, ತರಬೇತಿ, ಪ್ರಚಾರ

೬. ಸಹಕಾರ ಸಂಸ್ಥೆಗಳ ನಡುವೆ ಸಹಕಾರ

೭. ಸಾಮಾಜಿಕ ಕಳಕಳಿ

ಈ ಸಹಕಾರ ತತ್ತ್ವಗಳನ್ನು ಮನನಮಾಡಿಕೊಂಡು ಸಹಕಾರಿಗಳ ಸಂಘಟನೆಯನ್ನು ಮಾಡಬೇಕು. ಹಾಗೂ ರಾಜ್ಯ ಸಹಕಾರಿ ಒಕ್ಕೂಟವು ಸಹಕಾರ ತತ್ತ್ವಗಳು ಮಹಿಳೆಯರ ಮನಸ್ಸಿಗೆ ಹಿಡಿಸುವಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಶ್ರೀಮತಿ, ಕೆ.ಆರ್.ವಿಜಯಲಕ್ಷ್ಮಿ ಸೂಚಿಸಿದ್ದಾರೆ.

೧. ರಾಜ್ಯಸಹಕಾರಿ ಒಕ್ಕೂಟವು ಪ್ರಕಟಿಸಿರುವ ಸಹಕಾರ ತತ್ತ್ವಗಳ ಸರಳವಾದ ಕಿರು ಪುಸ್ತಕಗಳನ್ನು ಓದು ಬಾರದ ಹಾಗೂ ಓದಬಲ್ಲ ಮಹಿಳೆಯರು ಸೇರುವ ಸ್ಥಳಗಳಲ್ಲೆಲ್ಲ(ಗ್ರಾಮ ಅಥವಾ ಪಟ್ಟಣ ಅಥವಾ ನಗರಗಳಲ್ಲಿ) ಉಚಿತವಾಗಿ ಅಥವಾ ಸುಲಭ ಬೆಲೆಯಲ್ಲಿ ಒದಗಿಸುವುದು, ಇವುಗಳನ್ನು ಮಹಿಳೆ ಸಂಸ್ಥೆಗಳು, ಸಮಾಜಗಳು, ಮಹಿಳೆಯರಿಗೆ ಮೀಸಲಾದ ವಿದ್ಯಾಸಂಸ್ಥೆಗಳು ಮತ್ತು ವಿವಿಧೋದ್ದೇಶ ಎಜುಕೇಷನ್ ತರಗತಿಗಳಲ್ಲಿ ದೊರಕುವಂತೆ ಮಾಡಬೇಕು. ಈ ಜವಾಬ್ದಾರಿಯನ್ನು ಜಿಲ್ಲಾ/ನಗರ ಮಹಿಳಾ ಮಂಡಳಿಗಳು ತೆಗೆದುಕೊಳ್ಳಬೇಕು.

೨. ಸಹಕಾರ ತಜ್ಞರು, ಮುಂದಾಳುಗಳಿಂದ ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿರುವ ಬಗ್ಗೆ ಮಹಿಳಾ ಮಂಡಲಿ, ಸಮಾಜಗಳು ಹಾಗೂ ವಿದ್ಯಾಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿಗಳಲ್ಲಿ ಆಗಾಗ್ಗೆ ಚರ್ಚಾಕೂಟ, ಭಾಷಣ, ಸಂಕ್ಷಿಪ್ತ ತರಗತಿಗಳನ್ನು ನಡೆಸುವ ಮೂಲಕ ನಿರ್ದಿಷ್ಟ ಕಾರ್ಯಕ್ರಮದಂತೆ ನಡೆಸುವುದು.

೩. ಎರಡನೇ ಹಂತವಾಗಿ, ಈ ಕಾರ್ಯಕ್ರಮದಲ್ಲಿ ಸಾಕಷ್ಟು ಆಸ್ಥೆವಹಿಸಿ, ನಂಬಿಕೆ ಉದ್ಭವಿಸಿದ ಹಲವಾರು ಮಹಿಳೆಯರು ಕೂಡಿ ಸಂಘಟನಾ ಇಚ್ಛೆಯನ್ನು ವ್ಯಕ್ತಪಡಿಸಿದರೆ ಕ್ರಮಬದ್ಧ ತರಬೇತಿಯನ್ನು ಏರ್ಪಾಡು ಮಾಡಬೇಕು. ಇದರಿಂದ ಮಹಿಳೆಯರಿಗೆ ವಿವಿಧ ಸಹಕಾರ ಸಂಘಗಳ ಬಗ್ಗೆ, ಅವುಗಳ ಸಂಘಟನೆಯ ಬಗ್ಗೆ ತಿಳಿವಳಿಕೆ ಮೂಡಿ, ಅವರೂ ಅಂತಹ ಸಂಸ್ಥೆಯನ್ನು ನಡೆಸಬಲ್ಲೆವು ಎಂಬ ಆತ್ಮವಿಶ್ವಾಸ ಅವರಲ್ಲಿ ಉಂಟಾಗುತ್ತದೆ."

ಇಂಥ ಶ್ರದ್ಧಾವಂತ ಮಹಿಳೆಯರು ಒಂದು ಭೌಗೋಳಿಕ ಎಲ್ಲೆಯನ್ನೋ ಅಥವಾ ಬಡಾವಣೆಯನ್ನೋ ಆರಿಸಿಕೊಂಡು ಆ ಸ್ಥಳದ ಮೋಜಣಿ(survey) ಮಾಡಬೇಕಾಗುತ್ತದೆ. ತರುವಾಯ ಆ ಪ್ರದೇಶದಲ್ಲಿರುವ ಜನಾಂಗದ ಅವಶ್ಯಕತೆಗಳು, ವೈಶಿಷ್ಟ್ಯಗಳು ಅಥವಾ ವಿಭಿನ್ನವರ್ಗದ ಮಹಿಳೆಯರಿಗೆಂದೇ ಒಂದು ಸಹಕಾರ ಸಂಘವನ್ನು ಸ್ಥಾಪಿಸಬಹುದು. ಜೊತೆಗೆ ಆ ಮಹಿಳೆಯರ ಪ್ರಗತಿಗೆ ಅಥವಾ ಸಾಮಾಜಿಕ ಅಭಿವೃದ್ಧಿಗೆ ಅಥವಾ ಆರ್ಥಿಕ ಅಭಿವೃದ್ಧಿಗೆ ಯಾವ ವಿಧವಾದ ಸಹಕಾರ ಸಂಸ್ಥೆಯನ್ನು ಸ್ಥಾಪಿಸಿದರೆ ಪರಿಣಾಮಕಾರಿ

ಯಾಗಬಹುದು ಅಥವಾ ಹೆಚ್ಚು ಲಾಭದಾಯಕವಾಗಬಹುದು ಎಂಬುದನ್ನು ವಿಶ್ಲೇಷಿಸಿ ತರುವಾಯ ನಿರ್ಣಯವನ್ನು ಕೈಗೊಳ್ಳಬೇಕು. ಅದಾಗಲೇ ಅಂಥ ಸಹಕಾರಿ ಸಂಘಗಳು ಸ್ಥಾಪಿತವಾಗಿರದಿದ್ದರೆ ಇತರ ಸಂಸ್ಥೆಗಳ ಅಧ್ಯಯನ ನಡೆಸಬಹುದು. ಈ ಸಂಘಗಳ ಸ್ಥಾಪನೆಯ ಬಗ್ಗೆ ರಾಜ್ಯ ಸಹಕಾರ ಒಕ್ಕೂಟ, ಅದರ ಜಿಲ್ಲಾ ಶಾಖೆಗಳು ಮತ್ತು ಸಹಕಾರ ಇಲಾಖೆಯ ಅಧಿಕಾರಿಗಳಿಂದ ನೆರವು ಪಡೆದು ಸಂಘಗಳನ್ನು ಸ್ಥಾಪಿಸಬಹುದು.

ಮಹಿಳೆಯರು ಇಂಥ ಬೃಹತ್ ಆಂದೋಲನದಲ್ಲಿ ಪಾಲ್ಗೊಳ್ಳಬೇಕೆಂದು ಯಶಸ್ವಿಗಳಾಗಬೇಕೆಂದು ಆಶಿಸುವ ಸಂದರ್ಭದಲ್ಲಿ ಕೆಲವಂಶಗಳ ಬಗ್ಗೆ ಹೆಚ್ಚಿನ ಮುಂಜಾಗರೂಕತೆ ಹೊಂದಿರುವುದೂ ಸಹ ಅವಶ್ಯವಾಗುತ್ತದೆ. ಗ್ರಾಮೀಣ ಮಹಿಳೆಯರು ಅಭಿವೃದ್ಧಿ ಕಾರ್ಯಕ್ರಮದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಬಗ್ಗೆ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಹೀಗೆ ಅಭಿಪ್ರಾಯ ನೀಡಲಾಗಿತ್ತು(ಯುನ್‌ಡಿ.ಪಿ ೧೯೮೦):

"ಬಡಮಹಿಳೆಯರಿಗೆ ಅಭಿವೃದ್ಧಿ ಪ್ರಯತ್ನಗಳಲ್ಲಿ ಸಾಕಷ್ಟು ಅವಕಾಶಗಳನ್ನು ನೀಡಬೇಕೆಂದರೆ, ಈ ಪ್ರಯತ್ನದಲ್ಲಿ ಮಹಿಳೆಯರು ಸಂಪೂರ್ಣವಾಗಿ ಹಾಗೂ ಸಮಾನ ಪಾಲುದಾರರಾಗಿಯೇ ಭಾಗವಹಿಸಬೇಕೆಂದು ನಿರೀಕ್ಷಿಸುವುದಕ್ಕೆ ಸಾಕಷ್ಟು ಕಾರಣಗಳಿವೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಎರಡು ಹಂತಗಳ ಸಾಮಾಜಿಕ ಪದ್ಧತಿಗಳಿರುತ್ತವೆ. ಇದರಲ್ಲಿ ಸಮಗ್ರತೆಯ ಎರಡು ಸಮಸ್ಯೆಗಳಿರುತ್ತವೆ. ಒಂದು ಬಡತನದ ಸಮಸ್ಯೆ ಹಾಗೂ ವಿಶೇಷವಾಗಿ ಬಡತನವನ್ನೂ ಮೀರಿದ ಮಹಿಳೆ ಎಂಬ ಮುಖ್ಯವಾದ ಇನ್ನೊಂದು ಸಮಸ್ಯೆ ಇದರಿಂದಾಗಿ ಯಾವುದೇ ಕಾರ್ಯತಂತ್ರವೂ ಕ್ಷಿಪ್ರವಾಗಿ ಯಶಸ್ಸುಗಳಿಸಲು ಸಾಧ್ಯವಾಗುವುದಿಲ್ಲ." ಭಾರತದ ಮಹಿಳೆಯರ ಬಗ್ಗೆ ಇಂಥ ಅಭಿಪ್ರಾಯ ನೀಡಲು ಕಾರಣಗಳಿವೆ :

ಗುಜರಾತ್ ಜಿಲ್ಲೆಯ ಕೈರಾದಲ್ಲಿ ಸಹಕಾರ ಅಂದೋಲನವನ್ನು ಪ್ರಾರಂಭಿಸಲಾಯಿತು. ಆದರೆ ತತ್ಪರಿಣಾಮವಾಗಿ ಮಹಿಳೆಯರ ಸ್ಥಾನಮಾನದಲ್ಲೇನೂ ಸುಧಾರಣೆಯಾಗಲಿಲ್ಲ. ಇದಕ್ಕೂ ಹಿಂದೆ ಉತ್ಪಾದನೆ ಹಾಗೂ ಮಾರುಕಟ್ಟೆ ಎರಡೂ ಕೂಡ ಮಹಿಳೆಯರ ಕೈಯಲ್ಲೇ ಇದ್ದವು. ಆದರೆ ಆಧುನಿಕ ಹೊಸ ಡೈರಿ ಉದ್ಯಮದ ಆಡಳಿತ ನಿರ್ವಹಣೆಯಲ್ಲಿ ಕೆಲಸ ಮಹಿಳೆಯರಿಗೆ ಲಾಭಗಳಿಕೆಯನ್ನು ಪುರುಷರೇ ಅವರಿಂದ ಕಿತ್ತುಕೊಂಡುಬಿಡುತ್ತಿದ್ದರು. ಅಮೂಲ್‌ಹಾಲು (ಆನಂದ ಮಿಲ್ಕ್ ಯೂನಿಯನ್ ಲಿಮಿಟೆಡ್) ಉದ್ಯಮದಲ್ಲಿ "೨೦೦೦ಕ್ಕಿಂತಲೂ ಹೆಚ್ಚು ಜನ ಮಹಿಳಾ ಕಾರ್ಮಿಕರು ದುಡಿಯುತ್ತಿದ್ದರು. ಆದರೆ ಕೇವಲ ಏಕೈಕ ಮಹಿಳಾ ಪಶುವೈದ್ಯಾಧಿಕಾರಿಯಿದ್ದರು ಹಾಗೂ ಕೆಲವೇ ಜನ ಮಹಿಳಾ ಪಶುವೈದ್ಯಾಧಿಕಾರಿಯಿದ್ದರು ಹಾಗೂ ಕೆಲವೇ ಜನ ಮಹಿಳಾ ದೂರವಾಣಿ ಆಪರೇಟರ್‌ಗಳು ಹಾಗೂ ಸೆಕ್ರೆಟರಿಗಳಿದ್ದರು. ಆದರೆ ಸಾಂಪ್ರದಾಯಿಕವಾಗಿ ತಲೆತಲಾಂತರಗಳಿಂದ ಬೆಣ್ಣೆ ತುಪ್ಪಗಳನ್ನು ತಯಾರಿಸುತ್ತ ಬಂದಿದ್ದ ಮಹಿಳೆಯರ

ಕೆಲಸವನ್ನು ಕಸಿದುಕೊಂಡ ಹೊಸ ತಂತ್ರಜ್ಞಾನದ ಬಗ್ಗೆ ಕೇವಲ ಒಬ್ಬ ಮಹಿಳೆಗೆ ಕೂಡ ಯಾವುದೇ ಪರಿಣತಿಯನ್ನು, ಜ್ಞಾನವನ್ನು ಹೊಂದಲು ತರಬೇತಿ ನೀಡಲಿಲ್ಲ". ಇನ್ನು ಸಹಕಾರ ಸಂಘದ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ೪೮೧ ಸಹಕಾರ ಸಂಘಗಳಲ್ಲಿನ ಸದಸ್ಯರ ಪೈಕಿ ಕೇವಲ ಶೇ.೨ ರಿಂದ ಶೇ.೧೫ರಷ್ಟು ಜನ ಮಾತ್ರವೇ ಮಹಿಳಾ ಸದಸ್ಯೆಯರಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ, ಇಂಥ ಸದಸ್ಯೆಯರಲ್ಲಿ ಹೆಚ್ಚು ಸಂಖ್ಯೆಯವರು ಮೃತರಾದ ಪುರುಷರನ್ನು ಪ್ರತಿನಿಧಿಸುವ ಅವರ ಪತ್ನಿಯರಾಗಿದ್ದರು ಅಥವಾ ಹೆಚ್ಚಿನ ಸಂಖ್ಯೆಯ ಷೇರುಗಳನ್ನು ಹೊಂದಿ ನಿಯಂತ್ರಣಾಧಿಕಾರ ಹೊಂದಿರುವ ಪ್ರತ್ಯೇಕ ಕುಟುಂಬಗಳ ನಕಲಿ ಅಥವಾ ಸುಳ್ಳು ಸದಸ್ಯೆಯರಾಗಿರುತ್ತಿದ್ದರು. ಎಲ್ಲಾ ಮಹಿಳೆಯರೇ ಆಡಳಿತ ನಡೆಸುತ್ತಿದ್ದ ಏಕೈಕ ಮಹಿಳಾ ಸಹಕಾರ ಸಂಘವನ್ನು ಹೊರತುಪಡಿಸಿದರೆ, ಉಳಿದೆಲ್ಲ ಮಹಿಳಾ ಸಹಕಾರ ಸಂಘಗಳನ್ನೂ ಮಹಿಳೆಯರ ಹೆಸರುಗಳಲ್ಲಿ ಪುರುಷರೇ ಆಡಳಿತ ನಡೆಸುತ್ತಿದ್ದರು"(ಬ್ಯಾನ್ಜೆನ್ ೧೯೭೯). ಹೀಗೆ ಇಂದಿಗೂ ಅಭಿವೃದ್ಧಿ ಹೊಂದದ ಅಥವಾ ಅಭಿವೃದ್ಧಿಶೀಲ ರಾಷ್ಟ್ರವಾಗಿರುವ ಭಾರತದಲ್ಲಿ ಕಾರ್ಮಿಕ ಬಲ ಮೂರು ಪ್ರವರ್ಗಗಳನ್ನು ಹೊಂದಿದೆ. ೧. ನಿಯೋಜಕರು ಹಾಗೂ ಸ್ವಯಂ ಉದ್ಯೋಗಿಗಳಾದ ಕೆಲಸಗಾರರು(ಸ್ವಯಂ ಉದ್ಯೋಗಿಗಳು) ೨. ನೌಕರರು (ಕೂಲಿ ಕಾರ್ಮಿಕರು) ಮತ್ತು ಮಜೂರಿ ಅಥವಾ ಕೂಲಿರಹಿತ ಕುಟುಂಬ ಕೆಲಸಗಾರರು. ಮಹಿಳೆಯರು ಈ ಮೂರನೆಯ ಪ್ರವರ್ಗದಡಿ ಸೇರುತ್ತಿದ್ದು, ಇದರಲ್ಲಿ ಪುರುಷರ ಸಂಖ್ಯೆ ಹೆಚ್ಚಿರುತ್ತಿರಲಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮಹಿಳೆಯರು ಕಾರ್ಮಿಕರಾಗಿ ಉನ್ನತಮಟ್ಟದಲ್ಲಿ ಅತ್ಯಂತ ಕಡಿಮೆ ಪ್ರಾತಿನಿಧ್ಯವನ್ನು ಹಾಗೂ ಕೆಳಮಟ್ಟದಲ್ಲಿ ಹೆಚ್ಚಿನ ಸಂಖ್ಯೆಯ ಪ್ರಾತಿನಿಧ್ಯವನ್ನು ಹೊಂದಿರುತ್ತಿದ್ದರು". ಹೀಗಾಗಿ ಭಾರತದ ಯೋಜಿತ ಅಭಿವೃದ್ಧಿಯ ಇತಿಹಾಸದಲ್ಲಿ ಮಹಿಳೆಯರು ಅದೃಶ್ಯರಾಗಿಯೇ ಉಳಿಯಬೇಕಾಯಿತು.

ರಾಷ್ಟ್ರದ ಆರ್ಥಿಕ ಅಭಿವೃದ್ಧಿಯನ್ನು ಮಾನವಿಕ, ಭೌತಿಕ ಹಾಗೂ ಆರ್ಥಿಕ ಸಂಪನ್ಮೂಲಗಳನ್ನಾಧರಿಸಿ ನಿರ್ಧರಿಸಬಹುದು. ಆಧುನಿಕ ಜಗತ್ತಿನಲ್ಲಿ ಮಾನವ ಸಂಪನ್ಮೂಲದ ಬಳಕೆ ಬಗ್ಗೆ ಅಸಂಖ್ಯಾತ ಯೋಜನೆಗಳನ್ನು ಹಮಿಕೊಳ್ಳಲಾಗುತ್ತಿದೆ. ನಿಜ, ಜೊತೆಗೇ ಮಹಿಳೆಯರ ಸರ್ವತೋಮುಖ ಪ್ರಗತಿಯತ್ತ ಆ ಬಗ್ಗೆ ಅಧ್ಯಯನ ನಡೆಸಲು ಕೂಡ ಸಾಕಷ್ಟು ಗಮಹರಿಸಲಾಗುತ್ತಿದೆ. ಆದರೆ ಮಹಿಳೆಯರೇ ಮುನ್ನಡೆದು ಕಾರ್ಯಪ್ರವೃತ್ತರಾಗುವುದನ್ನು ಅವರ ಕುಟುಂಬದವರು, ಎಂದರೆ ಗಂಡ, ತಂದೆ, ಸೋದರ, ಮಾವ ಮುಂತಾದವರು ತಡೆಯುವುದು, ತಲೆಯೆತ್ತದಂತೆ ಮಾಡುವುದು ಎಷ್ಟರಮಟ್ಟಿಗೆ ಮಾನವೀಯ ಗುಣ ಎಂಬುದನ್ನು ಇಂಥ ಅಧ್ಯಯನಗಳಲ್ಲಿ ಚರ್ಚಿಸಬೇಕು. ಮಹಿಳೆಯರು ಅಂಥವರನ್ನು ಮೆಟ್ಟಿನಿಲ್ಲಬಲ್ಲ ಛಲ ಪಡೆಯುವಂತಹ ವತಾವರಣ ಉಂಟುಮಾಡಬೇಕು. ಭಾರತದಲ್ಲಿ ಮಾತ್ರವೇ ಅಲ್ಲ ಏಷ್ಯಾ, ಲ್ಯಾಟಿನ್ ಅಮೇರಿಕ ಹಾಗೂ ಆಫ್ರಿಕಾ ದೇಶಗಳ ಅಭಿವೃದ್ಧಿಪರ ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರೇ ಅತಿಪ್ರಮುಖ ಕಾರ್ಮಿಕಬಲವಾಗಿದ್ದರೂ ಕೂಡ ಅವರನ್ನು ಬೆಳವಣಿಗೆಯ ಅವಿಭಾಜ್ಯ ಅಂಗವೆಂದು

ಪರಿಗಣಿಸಲಾಗಿಲ್ಲ. ಅಷ್ಟೇ ಅಲ್ಲ ಅವರ ಅತ್ಯಮೂಲ್ಯ ಕೊಡುಗೆಯ ಬಗ್ಗೆ ಯಾವುದೇ ಪ್ರಶಂಸೆ ಅಥವಾ ಮೆಚ್ಚುಗೆಯನ್ನೂ ಕೂಡ ವ್ಯಕ್ತಪಡಿಸುವುದಿಲ್ಲ.

೧೯೭೦ರ ದಶಕದಿಂದೀಚೆಗೆ ಮಹಿಳೆಯರ ಕೆಲಸದ ಪರಿಸ್ಥಿತಿ, ಜೀವನಮಟ್ಟಗಳಲ್ಲಿ ಸುಧಾರಣೆ ತರುವ ಬಗ್ಗೆ ಜಾಗತಿಕ ಮಟ್ಟದಲ್ಲಿ ವಿಚಾರ ವಿಮರ್ಶೆ, ಸಮಾವೇಶಗಳನ್ನು ನಡೆಸಲಾಗುತ್ತಿದೆ. ಈ ಎಲ್ಲ ಚರ್ಚೆಗಳಲ್ಲಿ ಮಹಿಳೆಯರು ಮುನ್ನಡಿಯಿಡಲು ಸಾಕಷ್ಟು ಅಭಿಪ್ರಾಯಗಳನ್ನು ನೀಡಲಾಗುತ್ತಿದೆಯಾದರೂ ಅದರಲ್ಲಿ ಮಹಿಳೆಯರ ಅಭಿಪ್ರಾಯಗಳನ್ನು ಕೇಳುವುದಾಗಲಿ, ಅಥವಾ ವಾಸ್ತವಿಕ ಪರಿಸ್ಥಿತಿಗಳ ಬಗ್ಗೆ ಆಯಾಯ ಮಹಿಳಾ ಮುಖಂಡರನ್ನು ಸಂದರ್ಶಿಸುವ ಪ್ರಯತ್ನ ಮಾಡಿದ್ದರೆ ಅದರಿಂದ ಇನ್ನಷ್ಟು ಉಪಯೋಗವಾಗುತ್ತಿತ್ತು. ಆದಾಗ್ಯೂ, ವಿಶ್ವಸಂಸ್ಥೆಯು ಅಂತಾರಾಷ್ಟ್ರೀಯ ಮಹಿಳಾ ವರ್ಷವನ್ನು ೧೯೭೫ರಲ್ಲಿ ಘೋಷಿಸಿದ್ದರ ಹಿಂದೆಯೇ ಅಂತಾರಾಷ್ಟ್ರೀಯ ಮಹಿಳಾ ದಶಕವನ್ನು (೧೯೭೫ ೧೯೮೫) ಘೋಷಿಸಿದ್ದರಿಂದ ಮಹಿಳೆಯರ ಸುತ್ತಮುತ್ತ ಎದ್ದಿರುವ ಏಳುತ್ತಿರುವ ಹಲವಾರು ಪ್ರಶ್ನೆಗಳ ಬಗ್ಗೆ ಜಾಗತಿಕ ಮಟ್ಟದಲ್ಲಿ ಚರ್ಚಿಸುವ ವೇದಿಕೆಗಳುಂಟಾದವು. ೧೯೮೫ರಲ್ಲಿ ಕೀನ್ಯದಲ್ಲಿ ನಡೆದ ಮಹಿಳೆಯರ ಸ್ಥಾನಮಾನ ಕುರಿತ ವಿಶ್ವಸಂಸ್ಥೆಯ ಸಮಾವೇಶದಲ್ಲಿ ಸಮಾಜದ ಪ್ರಗತಿಗೆ ಜನಸಂಖ್ಯೆಯ ಎಲ್ಲ ವರ್ಗಗಳು ವಿಶೇಷವಾಗಿ ಮಹಿಳೆಯರ ಪಾಲ್ಗೊಳ್ಳುವಿಕೆ ಅತ್ಯಗತ್ಯವೆಂಬುದಕ್ಕೆ ಒತ್ತು ನೀಡಲಾಯಿತು. ಮಹಿಳೆಯರ ವಿರುದ್ಧ ತೋರಲಾಗುತ್ತಿರುವ ಎಲ್ಲ ಬಗೆಯ ತಾರತಮ್ಯವನ್ನು ಹೋಗಲಾಡಿಸುವುದನ್ನು ಕುರಿತ ಸಮಾವೇಶದಲ್ಲಿ(೧೯೭೯) ವಿವಾಹಿತಳಾಗಿರಲಿ, ಅವಿವಾಹಿತಳಿರಲಿ ಎಲ್ಲ ರಂಗಗಳಲ್ಲಿ ಎಂದರೆ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ನಾಗರಿಕ ಕ್ಷೇತ್ರಗಳಲ್ಲಿ ಸಮಾನ ಹಕ್ಕು ಬಾಧ್ಯತೆಗಳಿರಬೇಕೆಂಬುದಾಗಿ ಕರೆ ನೀಡಲಾಯಿತು. ಇಂಥ ಮಹತ್ವದ ಜ್ಞಾನೋದಯದಿಂದಾಗಿ ಮಹಿಳೆಯರ ಸಾಕ್ಷರತೆ ಹಾಗೂ ನಾಗರಿಕ ಶಿಕ್ಷಣದಲ್ಲಿ ಎದ್ದುಕಾಣುವಷ್ಟು ಪ್ರಗತಿಯನ್ನು ಸಂಧಿಸಲು ಸಾಧ್ಯವಾಯಿತು. (೧೯೭೫ ಮೆಕ್ಸಿಕೊ, ಕ್ರಿಯಾಯೋಜನೆ) ವಿಶ್ವಸಂಸ್ಥೆಯು ಅದರ ೨೫ನೇ ವರದಿಯಲ್ಲಿ ಪುರುಷರು ಮತ್ತು ಮಹಿಳೆಯರಲ್ಲಿ ಸಮಾನತೆ ಉಂಟುಮಾಡುವುದನ್ನು ಮತ್ತು ರಾಷ್ಟ್ರೀಯ ಜೀವನದ ಎಲ್ಲ ಸ್ತರಗಳಲ್ಲೂ ಮಹಿಳೆಯರಿಗೆ ಸರ್ವಾಂಗೀಣ ಪ್ರಗತಿಯುಂಟಾಗುವುದನ್ನು ಖಚಿತಪಡಿಸುವುದನ್ನು ಪುನರವಲೋಕಿಸಲು, ಮೌಲ್ಯ ಮಾಪನೆ ಮಾಡಿ ಕ್ರಮಗಳು ಹಾಗೂ ಆದ್ಯತೆಗಳನ್ನು ಶಿಫಾರಸ್ಸು ಮಾಡುವುದನ್ನು ಕಡ್ಡಾಯಗೊಳಿಸಿ ರಾಷ್ಟ್ರೀಯ ಆಯೋಗ ಅಥವಾ ಅಂಥವೇ ಸಂಸ್ಥೆಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿದೆ.

ಇಪ್ಪತ್ತೈದು ವರ್ಷಗಳ ಹಿಂದೆ ಮಹಿಳೆಯರ ಔದ್ಯಮಿಕ ಉತ್ಪಾದನಾ ಪಾತ್ರವನ್ನು ಹೆಚ್ಚಿಸುವ ಮೂಲಕ ಸರ್ಕಾರದ ಕಾರ್ಯನೀತಿ ಮತ್ತು ಕಾರ್ಯಕ್ರಮಗಳ ಪುನರವಲೋಕನ ಯೋಜನೆಯನ್ನು ಪ್ರಾರಂಭಿಸ ಲಾಯಿತು. ಮೊಟ್ಟಮೊದಲ ಬಾರಿಗೆ ಆರನೇ ಪಾಂಚವಾರ್ಷಿಕ ಯೋಜನೆಯಲ್ಲಿ ಮಹಿಳೆ ಮತ್ತು ಅಭಿವೃದ್ಧಿ ಎಂಬ ಹೊಸ ಅಧ್ಯಾಯವೊಂದನ್ನು ಪ್ರಾರಂಭಿಸಿ, ಸಂಬಳ ಪಡೆಯುವ, ಸ್ವಯಂ ಉದ್ಯೋಗಿಗಳಾದ

ಹಾಗೂ ಕೂಲಿಕಾರ್ಮಿಕರಾದ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಮೂಲಕ ಮಹಿಳೆಯರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವತ್ತ ಗಮನಹರಿಸಲಾಯಿತು. ಕಳೆದ ಎರಡು ದಶಕಗಳಲ್ಲಿ ಮಹಿಳೆಯರು ತಮ್ಮ ಬಹುಮುಖೀ ವ್ಯಕ್ತಿತ್ವದಿಂದಾಗಿ ಎದುರಿಸುತ್ತಿರುವ ಸಂಘರ್ಷಗಳನ್ನು ಒಳಗೊಂಡ ವಾಸ್ತವಿಕ ವಿಷಯಗಳನ್ನು ಗುರುತಿಸಿ ಅವುಗಳನ್ನು ಬೆಳಕಿಗೆ ತರಲು ಹಲವಾರು ಬಗೆಯ ಅಧ್ಯಯನಗಳು ನಡೆಯುತ್ತಿವೆ. ಮಹಿಳಾ ಸಂಬಂಧಿತ ವಿಷಯಗಳನ್ನು ಚರ್ಚಿಸಲು ಕೆಲಸಗಾರರ ಗುಂಪುಗಳನ್ನು ಗುರಿಯಾಗಿರಿಸಿಕೊಂಡ ತಂಡಗಳ ಬಗ್ಗೆ ರಾಷ್ಟ್ರೀಯ ಸಮಾವೇಶಗಳನ್ನು ನಡೆಸಲಾಯಿತು. ಜೊತೆಗೆ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹಿಳೆಯರು ಭಾಗವಹಿಸುವುದನ್ನು ಖಚಿತಪಡಿಸಲು ಅವಶ್ಯವಾದ ಪ್ರಯತ್ನ ಹಾಗೂ ಕ್ರಮಗಳನ್ನು ತೀವ್ರಗೊಳಿಸಲು ಮಹಿಳಾ ಕಲ್ಯಾಣ ಅಭಿವೃದ್ಧಿ ಸಂಸ್ಥೆಯನ್ನು(Women Welfare Development Bureau) ಸ್ಥಾಪಿಸಲಾಯಿತು.

ಎಂಭತ್ತರ ದಶಕದ ದ್ವಿತೀಯಾರ್ಧದಲ್ಲಿ ಮಹಿಳೆಯರ ಬಗ್ಗೆ ಕಾರ್ಯನೀತಿ ದೃಷ್ಟಿಕೋನದಲ್ಲಿಯೇ ಹಿಂದೆಂದೂ ಇರದಿದ್ದ ಅನಿರೀಕ್ಷಿತ ತಿರುವು ಉಂಟಾಯಿತು. ಮಹಿಳೆಯರಿಗಾಗಿ ರಾಷ್ಟ್ರೀಯ ಮಹಿಳಾ ದೃಷ್ಟಿಕೋನದ ಯೋಜನೆಯು ಭಾರತದಲ್ಲಿ ಮಹಿಳೆಯರ ಸಮಗ್ರ ಅಭಿವೃದ್ಧಿಯ ಅಭಿವ್ಯಕ್ತಿಯನ್ನೊಳಗೊಂಡಿರುವುದಲ್ಲದೆ ಸ್ವಯಂ ಉದ್ಯೋಗಿ ಮಹಿಳೆಯರು ಮತ್ತು ಅನೌಪಚಾರಿಕ ವಲಯಗಳಲ್ಲಿನ ಮಹಿಳೆಯರನ್ನು ಕುರಿತು ರಾಷ್ಟ್ರೀಯ ಆಯೋಗದ ವರದಿ ಹಾಗೂ ದುರ್ಬಲವಲಯದ ಮಹಿಳೆಯರು ವಿಶೇಷವಾಗಿ ಮಹಿಳಾ ವಿಷಯಗಳು, ಅಡೆತಡೆಗಳು ಮತ್ತು ಮಹಿಳೆಯರಿಗಾಗಿ ಕಾರ್ಯತಂತ್ರಗಳ ಬಗ್ಗೆ ದೂರದೃಷ್ಟಿಯ ಶಿಫಾರಸ್ಸುಗಳನ್ನೂ ಕೂಡ ಒಳಗೊಂಡಿದೆ.

ಭಾರತದ ಆರ್ಥಿಕತೆಯಲ್ಲಿ ಮಹಿಳೆಯರು

ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸುವುದು ಒಂದು ಮಾನದಂಡವೂ ಅಲ್ಲ ಹೊಸ ಬೆಳವಣಿಗೆಯೂ ಅಲ್ಲ. ಮಹಿಳೆಯರ ಆರ್ಥಿಕ ಕೊಡುಗೆಯನ್ನು ವಾಸ್ತವಿಕ ಅಂಶವೊಂದರಿಂದ ಎಂದರೆ ಗೃಹಕೃತ್ಯ ಹಾಗೂ ಮಕ್ಕಳ ಪಾಲನೆ ಚಟುವಟಿಕೆಗಳಿಗೆ ಸಂಭಾವನೆ (ಕೂಲಿ!) ನೀಡುವುದಾದರೆ ಅವರ ಮಜೂರಿ ಮೌಲ್ಯವು ರಾಷ್ಟ್ರೀಯ ವರಮಾನದ ಅರ್ಧದಷ್ಟಾಗುತ್ತದೆ ಎಂದಿದ್ದಾರೆ ರಾವ್(೧೯೮೬). ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು (International Labour Organisation)ಸಂದಾಯ ರಹಿತ ಗೃಹಕೃತ್ಯದ ಬೆಲೆಯು ಒಟ್ಟು ರಾಷ್ಟ್ರೀಯ ಉತ್ಪಾದನೆಯ (Gross National Product(GNP) ಶೇಕಡ ೨೫.೩೯ರಷ್ಟಾಗುತ್ತದೆ ಎಂದಿದೆ. ಅದೇರೀತಿ ಮಾಲತಿ ೧೯೮೮ ಮಹಿಳೆಯರ ಗೃಹಕೃತ್ಯ ಉದ್ಯೋಗದ ಬೆಲೆಯು ವರ್ಷಕ್ಕೆ ೭೬೦೦ರೂಗಳು (ಕುಟುಂಬದ ವರಮಾನದ ಶೇ.೪೨ರಷ್ಟು) ಆಗುತ್ತದೆಂದಿದ್ದಾರೆ. ಇದು ರಾಷ್ಟ್ರೀಯ ಉತ್ಪಾದನೆಯ(National Domestic Production(NDP) ಶೇ.೪೭ರಷ್ಟಕ್ಕೆ ಸಮನಾಗುತ್ತದೆ.

ಆಧುನೀಕರಣವು ಕೈಗಾರಿಕೆ ಹಾಗೂ ಕೃಷಿ ಕ್ಷೇತ್ರಗಳೆರಡಲ್ಲೂ ಮಹಿಳೆಗೆ ಪ್ರತಿಕೂಲವಾಯಿತೆನ್ನಬಹುದು. ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಔದ್ಯಮೀಕರಣದ ಪ್ರಗತಿಯೊಂದಿಗೆ ನೂಲು ತೆಗೆಯುವುದು, ನಾರು ಹೆಣೆಯುವುದು, ಕಾಗದ ತಯಾರಿಕೆ ಮುಂತಾದ ಗೃಹಕೈಗಾರಿಕೆಗಳು ನಿಂತುಹೋದವು. ಎಲ್ಲಕ್ಕಿಂತ ಹೆಚ್ಚಾಗಿ ಉತ್ಪಾದನೆಯ ತಾಂತ್ರಿಕ ಬದಲಾವಣೆ ಹಾಗೂ ಸಾರ್ವತ್ರೀಕರಣವು ಅಕುಶಲ ಕಾರ್ಮಿಕರಿಗಿದ್ದ ಬೇಡಿಕೆಯನ್ನು ತಡೆಯಿತು. ಕೈಗಾರಿಕೆ ಹಾಗೂ ಕೃಷಿಕ್ಷೇತ್ರದ ಅಕುಶಲ ಕಾರ್ಮಿಕರಲ್ಲಿ ಮಹಿಳೆಯರು ಅತಿ ಹೆಚ್ಚು ಸಂಖ್ಯೆಯ ಸಾಂಪ್ರದಾಯಿಕ ಉದ್ಯೋಗ ಮೂಲವಾಗಿದ್ದುದರಿಂದ ಈ ಆರ್ಥಿಕ ಬದಲಾವಣೆಗೆ ಅವರೇ ಮುಖ್ಯವಾಗಿ ಬಲಿಪಶುಗಳಾದರೆನ್ನಬಹುದು. ಕಡಿಮೆ ಕೂಲಿ ಬೇಡಿಕೆ ಹಾಗೂ ನಿಯತ ಮತ್ತು ಹಂಗಾಮು (Regular & Seasonal) ನಿರುದ್ಯೋಗವು ಹೆಚ್ಚಾಗಿದ್ದರಿಂದ ಮಹಿಳೆಯರು ತಮ್ಮ ಕುಟುಂಬದ ಜೀವನಾವಶ್ಯಕತೆಗಳಿಗೂ ಸಾಕಾಗದಷ್ಟು ಕಡಿಮೆ ಆದಾಯದ ಖಚಿತವಿರದ ಕೆಲಸಗಳಿಗೆ ಮೊರೆ ಹೋಗುವಂತಾಯಿತು. ಹೀಗೆ, ಆರ್ಥಿಕ ಒತ್ತಡಗಳು ಏರಿದ ಜೀವನಮಟ್ಟ ಹಾಗೂ ಇನ್ನಷ್ಟು ಉತ್ತಮ ಜೀವನದ ನಿರೀಕ್ಷೆ ಹಾಗೂ ಹೆಚ್ಚಿನ ಆಡಂಬರದ ಆಕಾಂಕ್ಷೆ ಇವುಗಳಿಂದಾಗಿ ಮಹಿಳೆಯರು ತಮ್ಮ ಕುಟುಂಬದ ವರಮಾನವನ್ನು ಏರಿಸಲು ಹೊರಗಿನ ಉದ್ಯೋಗಗಳನ್ನು ಅರಸುವಂತಾಯಿತು. ಇಂಥ ಪರಿಸ್ಥಿತಿಗಳಲ್ಲಿ ಹೊಸ ಹೊಸ ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡು ಲಾಭದಾಯಕ ಉದ್ಯೋಗವನ್ನು ಪಡೆಯಲು ಬಹಳಷ್ಟು ಜನ ಮಹಿಳೆಯರು ಸಿದ್ಧರಿದ್ದಾರೆ.

ಮಹಿಳೆ ಮತ್ತು ಉದ್ಯಮ

ಇದೆಲ್ಲದರ ಪರಿಣಾಮವಾಗಿ ನಗರದ ಮಹಿಳೆಯರ ಒಂದು ವರ್ಗವು ಸಮರ್ಥ ಉದ್ಯಮಿಗಳಾಗುವತ್ತ ಮುನ್ನಡೆದರು. ನಮ್ಮ ಸಂಪ್ರದಾಯಶೀಲ ಸಮಾಜದಲ್ಲಿ ಇದೊಂದು ಮಹತ್ತರ ಬೆಳವಣಿಗೆಯಾಯಿತು. ಕಳೆದೊಂದು ದಶಕದಿಂದ ಈ ರಂಗದಲ್ಲಿ ಮಹಿಳೆಯರು ಉದ್ಯಮರಂಗದಲ್ಲಿ ಮುಂದೆ ನುಗ್ಗಿ ಗಣನೀಯ ಸಾಧನೆಗೈಯುತ್ತಿದ್ದಾರೆ. ಅವರ ಗುರಿಯ ಮಾರ್ಗದಲ್ಲಿ ಸಾಕಷ್ಟು ಸವಾಲುಗಳಿವೆ. ಪೂರ್ವಾಗ್ರಹಗಳನ್ನು ಮೆಟ್ಟಿನಿಲ್ಲಬೇಕು, ಕುಟುಂಬದಲ್ಲಿನ ವಿರೋಧ, ಸಹೋದ್ಯೋಗಿಗಳ ವ್ಯಂಗ್ಯ, ಕುತ್ಸಿತ, ಅಸೂಯಾಪರ ಹೀಗಳಿಕೆ ಇವೆಲ್ಲವೂ ಇದ್ದರೂ ಅಂತಿಮವಾಗಿ ಅವರು ಎಲ್ಲವನ್ನೂ ಮೆಟ್ಟಿನಿಂತು ಪ್ರಗತಿಶೀಲ ಮಹಿಳಾ ಉದ್ಯಮಿಗಳಾಗುತ್ತಿದ್ದಾರೆ.

ಶಿಕ್ಷಣ ಹಾಗೂ ಹೊಸ ಅರಿವಿನ ಮೂಲಕ ಮಹಿಳೆಯರು ತಮ್ಮ ಪತಾಕೆಗಳನ್ನು 'ಇ' ಗಳಲ್ಲಿ (ಎಲೆಕ್ಟ್ರಾನಿಕ್, ಎಂಜನಿಯರಿಂಗ್ ಹಾಗೂ ಎನರ್ಜಿ) ಇನ್ನೂ ಎತ್ತರದಲ್ಲಿ ಹಾರಿಸುತ್ತಿದ್ದಾರೆ. ಇವುಗಳ ಮೂಲಕ ಈ ಮಹಿಳೆಯರು ಸಹಕಾರ ಸಂಘಗಳನ್ನು ಕಟ್ಟಬೇಕು ಹಾಗೂ ಅವುಗಳನ್ನು ಸುಸ್ಥಾಪಿತ

ಆರ್ಥಿಕ ವ್ಯವಸ್ಥೆಯ ಸಾಧನವನ್ನಾಗಿ ಬೆಳೆಸಬೇಕು. ಆದ್ದರಿಂದ ಸಹಕಾರ ಸಂಘಗಳ ರಚನೆ, ಅವುಗಳ ಪ್ರಭೇದಗಳು, ಚುನಾವಣೆ ಮುಂತಾದವುಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಯಬಹುದು.

ಸಹಕಾರವು ದಲಿತ ಹಾಗೂ ಬಡವರ್ಗದ ಜನರಿಗೆ ಹಿತಕಾರಿಯಾದ ಸಂಘಟನೆಯಾಗಿದ್ದು, ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ, ಪರಸ್ಪರ ಬೆಂಬಲ ಹಾಗೂ ನೆರವು ನೀಡುವ ಮೂಲಕ ಸ್ತ್ರೀಶಕ್ತಿಯನ್ನು ಪುನಶ್ಚೇತನಗೊಳಿಸಲು ಸೂಕ್ತ ಆರ್ಥಿಕ ರಂಗವಾಗಿದೆ. ಸಹಕಾರ ಸಂಘಗಳು ವಿವಿಧೋದ್ದೇಶಗಳನ್ನು ಹೊಂದುವ ಮೂಲಕ ಕಾರ್ಯನಿರ್ವಹಿಸುವುದಾದರೂ ಇವುಗಳ ಸಂಘಟನೆಯ ವಿಧಾನವು ಒಂದೇ ಬಗೆಯದಾಗಿರುತ್ತದೆ. ಈ ಸಂಘಗಳನ್ನು ಫ್ರಾನ್ಸ್‌ನ ಪ್ರೊಫೆಸರ್‌ವಾಸ್ ಎಂಬುವವರು ಮೂರು ಪ್ರಕಾರಗಳಾಗಿ ವಿಭಾಗಿಸಿದ್ದಾರೆ.

೧. ಆಧಾರ ಅಥವಾ ಆಶ್ರಯ ಸಹಕಾರ ಸಂಘಗಳು : ಇವು ಸದಸ್ಯರ ಉದ್ಯೋಗ ಅಥವಾ ವ್ಯಾಪಾರಕ್ಕೆ ಅಗತ್ಯವಾಗುವ ಸಾಮಗ್ರಿ ಅಥವಾ ವಸ್ತುಗಳನ್ನು ಒದಗಿಸುವ ಉದ್ದೇಶ ಹೊಂದಿರುತ್ತದೆ.

೨. ಉತ್ಪಾದನಾ ಸಂಘಗಳು : ಈ ಸಹಕಾರ ಸಂಘಗಳಲ್ಲಿ ಸದಸ್ಯರು ಸಾಮುದಾಯಿಕ ಉತ್ಪಾದನೆಗಾಗಿ ಸ್ವಾರ್ಥವನ್ನು ತ್ಯಜಿಸಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿ ಉತ್ಪಾದನೆ ಮಾಡುವ ಹಾಗೂ ಸಾಮುದಾಯಿಕವಾಗಿ ಮಾರಾಟ ನಡೆಸುವ ಕಾರ್ಯಕ್ರಮಗಳನ್ನು ಹೊಂದಲಾಗಿರುತ್ತದೆ.

೩. ಗ್ರಾಹಕರ ಸಂಘಗಳು : ಈ ಸಂಘಗಳಲ್ಲಿ ಬಂಡವಾಳಶಾಹಿ ಹಾಗೂ ಕಾಳಸಂತೆಕೋರರ ವಿರುದ್ಧ ಜನರಲ್ಲಿ ಜಾಗೃತಿಮೂಡಿಸಿ ಅವರಿಗೆ ಅಗತ್ಯವಸ್ತುಗಳನ್ನು ಮುಕ್ತ ಬೆಲೆಗಳಲ್ಲಿ ವಿತರಣೆ ಮಾಡುವ ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತದೆ.

ಎಲ್ಲ ಬಗೆಯ ಸಹಕಾರ ಸಂಘಗಳ ರಚನೆ ಮಾಡುವವರು ನಿರ್ವಹಿಸುವ ವಿಧಿ ವಿಧಾನಗಳು ಸಾಮಾನ್ಯವಾಗಿ ಒಂದೇ ಬಗೆಯದಾಗಿರುತ್ತದೆ. ಸಹಕಾರ ಸಂಘಗಳ ಅಧಿನಿಯಮ, ೧೯೫೯ನ್ನು ಅನುಸರಿಸಿ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಅಭಿವೃದ್ಧಿಯನ್ನು ಗುರಿಯಾಗಿರಿಸಿಕೊಂಡು ಸಹಕಾರ ಸಂಘಗಳನ್ನು ಸ್ಥಾಪಿಸಬೇಕು. ಇಂಥ ಆಸಕ್ತಿ ಹೊಂದಿರುವ ಮಹಿಳೆಯರು/ಪುರುಷರು ತಮ್ಮ ಸಾಮಾನ್ಯ ಆರ್ಥಿಕ ಉನ್ನತಿಯನ್ನು ಸಹಕಾರದ ತಳಹದಿಯ ಮೇಲೆ ಸಾಧಿಸುವ ಇಚ್ಛೆಯನ್ನು ಹೊಂದಿರಬೇಕು. ಇಂಥ ಸಮಾನ ಉದ್ದೇಶವುಳ್ಳ ಕನಿಷ್ಠ ಹತ್ತು ಜನರು ಸಂಘವನ್ನು ಸ್ಥಾಪಿಸಲು ಮುಂದಾಗಬೇಕು. ಸಚೇತಕರು ಸಹಕಾರ ಸಂಘದ ಬಗ್ಗೆ ಪ್ರಚಾರ ನಡೆಸಬೇಕು. ಸಹಕಾರದಿಂದ ದೊರೆಯುವ ಪ್ರಯೋಜನ, ಸಂಘದ ಉದ್ದೇಶ, ಸದಸ್ಯರ ಹೊಣೆಗಾರಿಕೆ, ಕರ್ತವ್ಯ ಇವುಗಳ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡಿಸಬೇಕು. ತರುವಾಯ ಮುಂದಾಳುಗಳೆಲ್ಲ ಒಟ್ಟಿಗೆ ಸೇರಿ ನಾಯಕ ಅಥವಾ ಮುಖ್ಯ ಸಚೇತಕರನ್ನು ಆಯ್ಕೆ ಮಾಡಿಕೊಳ್ಳಬೇಕು.

ಮತ್ತು ಅವರ ಮುಖಂಡತ್ವದಲ್ಲಿ ಸಂಘದ ಕಾರ್ಯನಿರ್ವಹಣೆಗಾಗಿ ಉಪನಿಯಮಗಳನ್ನು(Bye-Laws) ತಯಾರಿಸಬೇಕು. ಇದರಲ್ಲಿ ಸಂಘದ ಹೆಸರು, ವಿಳಾಸ, ಉದ್ದೇಶ, ಬಂಡವಾಳ, ಷೇರುಗಳ ವಿವರ, ಆಡಳಿತ ವ್ಯವಸ್ಥೆ, ಸಾಮಾನ್ಯಸಭೆಯ ವಿಧಾನ (General Body Meeting)ಮತ್ತಿತರ ವ್ಯವಹಾರಗಳ ಬಗ್ಗೆ ಸ್ಪಷ್ಟ ವಿವರಗಳಿರಬೇಕು. ತರುವಾಯ ಸಹಕಾರ ಸಂಘದ ನೋಂದಣಿಗಾಗಿ ನಿಬಂಧಕರಿಗೆ (ರಿಜಿಸ್ಟ್ರಾರ್) ಅರ್ಜಿ ಸಲ್ಲಿಸಬೇಕು. ನೋಂದಣಿ ಮಾಡುವುದು ನಿಬಂಧಕರ ವಿವೇಚನೆಗೆ ಬಿಟ್ಟ ವಿಷಯವಾಗಿರುತ್ತದೆ. ಸಹಕಾರ ಸಂಘಗಳ ಅಧಿನಿಯಮದ ೫ನೇ ಪ್ರಕರಣದ ಮೇರೆಗೆ ಸಹಕಾರ ಸಂಘವನ್ನು ನಿಯಮಿತ ಅಥವಾ ಅನಿಯಮಿತವೆಂಬುದಾಗಿ ನೋಂದಾಯಿಸಬಹುದು. 'ಮಿತ' ಜವಾಬ್ದಾರಿ ಯಲ್ಲಿ ಸದಸ್ಯರ ಜವಾಬ್ದಾರಿ ಅವರು ಪಡೆಯಲು ಒಪ್ಪಿಕೊಂಡಿರುವ ಷೇರು ಬಂಡವಾಳಕ್ಕೆ ಮಾತ್ರವೇ ಸೀಮಿತವಾಗಿರುತ್ತದೆ. ಅನಿಯಮಿತ ಜವಾಬ್ದಾರಿಯಲ್ಲಿ ಸಹಕಾರ ಸಂಘದ ಒಟ್ಟಾರೆ ನಷ್ಟಕ್ಕೆ ಎಲ್ಲ ಸದಸ್ಯರೂ ಒಟ್ಟಾಗಿ ಅಥವಾ ವೈಯಕ್ತಿಕವಾಗಿ ಜವಾಬ್ದಾರರಾಗಿರುತ್ತಾರೆ. ಸಹಕಾರ ಅಧಿನಿಯಮದ ೬ನೇ ಪ್ರಕರಣದ ೩ನೇ ಉಪ ಪ್ರಕರಣದ ಅನುಸಾರವಾಗಿ ನೋಂದಣಿಗಾಗಿ ಅರ್ಜಿಸಲ್ಲಿಸಲು ೧೮ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ಕನಿಷ್ಠ ಪಕ್ಷ ಹತ್ತು ಜನರು ಸಹಿ ಮಾಡಬೇಕು. ಈ ಕೆಳಕಂಡ ವಿಷಯಗಳ ಬಗ್ಗೆ ನಿಬಂಧಕರಿಗೆ ಮನವರಿಕೆಯಾದಲ್ಲಿ ಮಾತ್ರವೇ ಸಹಕಾರ ಸಂಘದ ನೋಂದಣಿಗೆ ಅನುಮತಿ ನೀಡುತ್ತಾರೆ. ಅವುಗಳು ಈ ಮುಂದಿನಂತಿವೆ :

೧. ಅರ್ಜಿಯು ಅಧಿನಿಯಮಕ್ಕೆ ಅನುಸಾರವಾಗಿ ಕ್ರಮಬದ್ಧವಾಗಿರಬೇಕು.

೨. ಸೂಚಿತ ಸಹಕಾರ ಸಂಘದ ಉದ್ದೇಶ ೪ನೇ ಪ್ರಕರಣಕ್ಕೆ ಅನುಸಾರವಾಗಿರಬೇಕು.

೩. ಸಹಕಾರ ಸಂಘದ ಉದ್ದೇಶಗಳು ಸಾಮಾಜಿಕ ನ್ಯಾಯದ ನೀತಿ(Social Justice)ಗೆ ಅನುಗುಣ ವಾಗಿರಬೇಕು.

೪. ಸೂಚಿತ ಸಹಕಾರ ಸಂಘದ ಉಪನಿಯಮಗಳು(Bye Laws) ಸಹಕಾರ ಸಂಘಗಳ ಅಧಿನಿಯಮ ಹಾಗೂ ವಿನಿಮಯಗಳಿಗೆ ಅನುಸಾರವಾಗಿರಬೇಕು.

೫. ನೋಂದಾಯಿತವಾಗುವ ಸಂಘ ಸೂಕ್ತವಾಗಿ ಕಾರ್ಯನಿರ್ವಹಣೆ ಮಾಡುವ ಸಕ್ಷಮತೆ (Competance) ಹೊಂದಿರಬೇಕು.

ಒಂದು ವೇಳೆ ನೋಂದಣಿಯನ್ನು ನಿರಾಕರಿಸಿದಲ್ಲಿ ೧೦೬ನೇ ಪ್ರಕರಣದಡಿಯಲ್ಲಿ ಮೇಲ್ಮನವಿ(Appeel) ಸಲ್ಲಿಸಲು ಅವಕಾಶ ನೀಡಲಾಗಿದೆ. ೮ನೇ ಪ್ರಕರಣದ ಮೇರೆಗೆ ನಿಬಂಧಕರು ನೀಡುವ ಪ್ರಮಾಣ ಪತ್ರವೇ(Cortiticate) ಸಂಘದ ಅಸ್ತಿತ್ವಕ್ಕೆ ಸಾಕ್ಷಿಯಾಗಿರುತ್ತದೆ. ಹಾಗೂ ೯ನೇ ಪ್ರಕರಣದ ಮೇರೆಗೆ

ಅದಕ್ಕೆ ವ್ಯಕ್ತಿ ಸ್ವರೂಪ ಬಂದು ಅದು ಸಹಕಾರ ಸಂಘದ ಹೆಸರಿನಲ್ಲಿ ವ್ಯವಹಾರವನ್ನು ನಡೆಸಬಹುದು. ಉಳಿದಂತೆ ಸಹಕಾರ ಸಂಘದ ಅಧಿನಿಯಮದ ಅಡಿಯಲ್ಲಿ ಆಡಳಿತ, ವ್ಯವಹಾರ, ಕಾರ್ಯನಿರ್ವಹಣೆಯನ್ನು ಮಾಡಬೇಕು.

ಹೀಗೆ ಸಹಕಾರ ಸಂಘಗಳ ರಚನೆ, ನೋಂದಣಿ ಮಂತಾದ ವಿಧಿವಿಧಾನಗಳ ಬಗ್ಗೆ ಪ್ರಾಥಮಿಕ ಮಾಹಿತಿಯನ್ನು ಪಡೆದು ಸೂಕ್ತ ವಿಚಾರ ವಿನಿಮಯದ ನಂತರ ನಿರ್ಧಾರ ತೆಗೆದುಕೊಂಡು ಸಹಕಾರ ಸಂಘವನ್ನು ಸ್ಥಾಪಿಸಲು ಮಹಿಳೆಯರು ಮುಂದಾಗಬೇಕು. ಮಹಿಳೆಯರು ಮಿತವ್ಯಯ, ಉಳಿತಾಯಗಳನ್ನು ಸಹಕಾರ ಸಂಘದ ಮೂಲಕ ಕಂಡುಕೊಳ್ಳಬಹುದಾಗಿದ್ದು ಜಾಣ್ಮೆಯಿಂದ ಹಣವನ್ನು ಬಳಸುವುದನ್ನು ಸಾಲಸೌಲಭ್ಯದಿಂದ ವ್ಯವಹಾರ ಜ್ಞಾನವನ್ನು ತಿಳಿಯಲು ಸಾಧ್ಯವಾಗುತ್ತದೆ. ಬಂಡವಾಳವನ್ನು ಮತ್ತೆ ಮರು ಹೂಡಿಕೆ ಮಾಡದಿದ್ದರೆ ಅದು ಮೃತ ಬಂಡವಾಳ(Dead Capital)ಆಗುತ್ತದೆ. ಆದ್ದರಿಂದ ಇನ್ನಷ್ಟು ಮಹಿಳೆಯರನ್ನು ಸೇರಿಸಿ ಥ್ರಿಫ್ಟ್(Thrift) ಎಂದರೆ ಸಾಲ ಅಥವಾ ಕ್ರೆಡಿಟ್ ಸಹಕಾರ ಸಂಘವನ್ನು ಸ್ಥಾಪಿಸಬಹುದು. ಇದರಿಂದ ಹಲವಾರು ಮಹಿಳೆಯರಿಗೆ ಉದ್ಯೋಗಾವಕಾಶ ಉಂಟಾಗುತ್ತದೆ. ಬೆಂಗಳೂರು ಮಹಿಳಾ ಸಹಕಾರಿ ಬ್ಯಾಂಕು ಹಾಗೂ ಪೂನಾದ ಮಹಿಳಾ ಸಹಕಾರಿ ಬ್ಯಾಂಕು ಇವು ಮೊದಲು ಚಿಕ್ಕ ಸಾಲದ ಸಹಕಾರ ಸಂಘಗಳಾಗಿ ಪ್ರಾರಂಭವಾಗಿ ತರುವಾಯ ಬ್ಯಾಂಕುಗಳಾಗಿ ಪರಿವರ್ತಿತವಾದವು. ಇಂಥವು ಮಹಿಳೆಯರು, ಮಹಿಳೆಯರಿಂದ, ಮಹಿಳೆಯರಿಗಾಗಿಯೇ ಪ್ರಾರಂಭವಾಗಿದ್ದು ದೇಶದಲ್ಲಿಯೇ ದಾಖಲೆಯನ್ನು ಸ್ಥಾಪಿಸಿವೆ ಎಂದರೆ ತಪ್ಪಾಗಲಾರದು.

ಮೇಲೆ ಹೇಳಲಾದಂತೆ ಸಹಕಾರ ಸಂಘವು ಯಶಸ್ವಿಯಾಗಲು ಸೂಕ್ತ ಮಾರ್ಗದರ್ಶನ ಪಡೆಯುವುದು ಅತ್ಯವಶ್ಯ. ನಮ್ಮ ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಯೂನಿಯನ್, ಕೋ ಆಪರೇಟಿವ್ ಟ್ರೈನಿಂಗ್ ಮ್ಯಾನೇಜಮೆಂಟ್ ಇವು ತರಬೇತಿ ಹಾಗೂ ಶಿಕ್ಷಣ ಯೋಜನೆಯ ಮೂಲಕ ಹಲವಾರು ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿವೆ. ಸಹಕಾರಿ ಶಿಕ್ಷಕಿಯರಿಗೆ ತರಬೇತಿ ನೀಡಲಾಗುತ್ತದೆ. ಅವರು ಮಹಿಳೆಯಿರೆಗ ಸಹಕಾರ ಆಂದೋಲನದ ಬಗ್ಗೆ ಅರಿವು ಮೂಡಿಸುವುದು, ನಾಯಕತ್ವ, ಸಣ್ಣ ಉಳಿತಾಯ, ಕುಟುಂಬ ಕಲ್ಯಾಣ ಯೋಜನೆ, ಸಮತೋಲನ ಆಹಾರ ಮತ್ತು ಮಕ್ಕಳ ಆರೋಗ್ಯ ಇವೆಲ್ಲದರ ಬಗ್ಗೆ ತಿಳಿವಳಿಕೆ, ತರಬೇತಿ ನೀಡುತ್ತಾರೆ. ತಮ್ಮೆಲ್ಲ ಬುದ್ಧಿಶಕ್ತಿ, ಉತ್ಸಾಹ, ಆಕಾಂಕ್ಷೆ, ನಿರೀಕ್ಷೆಗಳನ್ನು ಹೊಂದಿ, ಅವಕಾಶಗಳಿಗಾಗಿ ಎದುರು ನೋಡುವ ಮಹಿಳೆಯರು ಈಗ ಈ ಕ್ಷೇತ್ರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ ಈ ಕ್ಷೇತ್ರದ ಪ್ರಗತಿಯ ಭವಿಷ್ಯವನ್ನೂ ನಿರ್ದೇಶಿಸುವ ಹೊಣೆ ಹೊತ್ತು ಮುನ್ನಡೆಯುವ ಸ್ಥೈರ್ಯ ಹೊಂದಿದ್ದಾರೆ. ಸಹಕಾರ ಸಂಸ್ಥೆಗಳಲ್ಲಿ ಮುಕ್ತ ಸದಸ್ಯತ್ವ ಹಾಗೂ ಪ್ರಜಾಸತ್ತಾತ್ಮಕ ಆಡಳಿತ

ವ್ಯವಸ್ಥೆಯಿರುವುದರಿಂದ ಮಹಿಳೆಯರು ಹಿಂಜರಿಕೆಯಿಲ್ಲದೆ ಸದಸ್ಯರಾಗಬಹುದು ಹಾಗೂ ಸಂಸ್ಥೆಯ ನೀತಿ ನಿರ್ಧಾರಗಳಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಧೈರ್ಯವಾಗಿ ಹಲವರ ಮುಂದಿಡಲು ವೇದಿಕೆ ದೊರೆಯುತ್ತದೆ. ಹೀಗೆ ಸದಸ್ಯರಾಗಿ ಸರ್ಕಾರವು ಅಖಿಲ ಭಾರತಮಟ್ಟದಲ್ಲಿ ನಡೆಸುವ ಸಹಕಾರ ಸಪ್ತಾಹಗಳಲ್ಲಿ ಪಾಲ್ಗೊಂಡಾಗ ವಿವಿಧ ರಾಜ್ಯಗಳ ಮಹಿಳಾ ಹಾಗೂ ಪುರುಷ ಸಹಕಾರಿಗಳನ್ನು ಭೇಟಿ ಮಾಡಿ ವಿಚಾರ ವಿನಿಮಯ ನಡೆಸಿ ಹೊಸ ಯೋಜನೆ ಮುಂತಾದವುಗಳ ಬಗ್ಗೆ ಮಾಹಿತಿ ಪಡೆಯಬಹುದು. ಇವುಗಳ ಪೈಕಿ ಆದಾಯ ವೃದ್ಧಿಸುವ ಯೋಜನೆಗಳು ಮಹಿಳೆಯರಿಗೆ ಅತಿಮುಖ್ಯವಾಗುತ್ತದೆ. ಯುವಜನರನ್ನು ಅದರಲ್ಲೂ ನಿರುದ್ಯೋಗಿ ಯುವತಿಯರನ್ನು ಸ್ವಸಹಾಯ ಗುಂಪುಗಳ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಭಾಗವಹಿಸುವಂತೆ ಮಾಡಲು ಶೈಕ್ಷಣಿಕ ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಸಹಕಾರ ಸಂಸ್ಥೆಗಳ ಬಗ್ಗೆ ತರುಣಿಯರು ಸಂಘಟಿತರಾಗಿ ಉದ್ಯಮಗಳನ್ನು ನಡೆಸಲು ಸಾಕಷ್ಟು ಮಾಹಿತಿಗಳನ್ನು ಒದಗಿಸಬೇಕು. ಅಷ್ಟೇ ಅಲ್ಲ ವಿದ್ಯಾವಂತ ನಿರುದ್ಯೋಗಿ ತರುಣಿಯರಿಗೆಂದೇ ಸಹಕಾರ ಸಂಘಗಳನ್ನು ಸ್ಥಾಪಿಸಬಹುದು. ಆಕಾಶವಾಣಿ, ದೂರದರ್ಶನ, ಪತ್ರಿಕಾ ಮಾಧ್ಯಮಗಳ ಮೂಲಕ ಸಹಕಾರ ಕ್ಷೇತ್ರದ ಕಡೆ ಮಹಿಳೆಯರು, ಯುವತಿಯರನ್ನು ಆಕರ್ಷಿಸುವಂತಹ ಕಾರ್ಯಕ್ರಮ, ಚರ್ಚೆ, ಸಂದರ್ಶನ ಮುಂತಾದ ಕಾರ್ಯಕ್ರಮಗಳನ್ನು ರೂಪಿಸಬಹುದು. ಇದರಿಂದ ನಿರುದ್ಯೋಗ ಸಮಸ್ಯೆಯಿಂದ ನಿರಾಶರಾಗಿ ಕುಳಿತ ವಿದ್ಯಾವಂತ ತರುಣಿಯರಿಗೆ ಹೊಸ ಚೈತನ್ಯ ಮೂಡಿ ಮಹಿಳೆಯರು ಸ್ವಯಂ ಸಹಾಯದ ಮೂಲಕ ಸ್ವಾವಲಂಬನೆಯ ದಾರಿ ಹಿಡಿದು ಹೊಸ ಕ್ಷೇತ್ರದಲ್ಲಿ ಹೊಸ ಸಾಹಸಪ್ರಯತ್ನಗಳನ್ನು ನಡೆಸಬಹುದು. ಹಿಂದೆಯೇ ಸೂಚಿಸಿರುವಂತೆ ಭಾರತದ ಸಂವಿಧಾನ ಹಾಗೂ ಸಾಮಾಜಿಕ ನ್ಯಾಯ ಹಾಗೂ ಸಹಕಾರ ತತ್ತ್ವಗಳ ನಡುವೆ ಅತಿಹೆಚ್ಚು ಸಾಮ್ಯವಿದೆ. ಸದಸ್ಯರ ಹಿತಾಸಕ್ತಿ ಕಾಪಾಡುವುದೇ ಸಹಕಾರ ಸಂಘಗಳ ಉದ್ದೇಶವಾದರೂ ತನ್ಮೂಲಕ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವುದೂ ಕೂಡ ಅದರ ಕಾರ್ಯನೀತಿಯಾಗುತ್ತದೆ. ಈ ನಿಟ್ಟಿನಲ್ಲಿ ಸಾಕಷ್ಟು ಸುಸ್ಥಾಪಿತವಾದ, ಪ್ರತಿಷ್ಠಿತ ಸ್ಥಾನ, ಮಾನ್ಯತೆ ಪಡೆದಿರುವ ಮಹಿಳಾ ಸಹಕಾರ ಸಂಘಗಳು ತಮ್ಮ ಲಾಭಾಂಶದಲ್ಲಿ ಸದಸ್ಯರಿಗೆ ಅಗತ್ಯವಾದಲ್ಲಿ ಸಾಮಾಜಿಕ ನ್ಯಾಯ ದೊರಕಿಸಲು ಹಣವನ್ನು ವೆಚ್ಚ ಮಾಡುವುದು ಅಪೇಕ್ಷಣೀಯ.

ಇದೀಗ ಇಪ್ಪತ್ತೊಂದನೇ ಶತಮಾನದಲ್ಲಿ ಮಹಿಳೆಯರ ಸ್ವಾವಲಂಬನೆ, ಸಬಲೀಕರಣದ ಮಹಾ ಅಸ್ತ್ರವಾಗಬಲ್ಲ ಮಹಿಳಾ ಸಹಕಾರ ಆಂದೋಲನ ಇದುವರೆಗೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತ ಪರಿಹಾರಗಳನ್ನು ತಾವಾಗಿಯೇ ಹುಡುಕುವ ತೀವ್ರ ಪ್ರಯತ್ನದಲ್ಲಿ ತೊಡಗಿದೆ. ಇಂಥ ಸಂಧಿ ಕಾಲದಲ್ಲಿ ಸಹಕಾರ ಕ್ಷೇತ್ರದ ಸಾಧನೆ ಹಾಗೂ ವೈಫಲ್ಯಗಳ ಬಗ್ಗೆ ಹಿರಿಯ ಕಿರಿಯ ಮಹಿಳಾ ಸಹಕಾರಿ ಧುರೀಣರು ಚಿಂತನ ಮಂಥನ ನಡೆಸುವುದು ಅಗತ್ಯ. ಏಕೆಂದರೆ ರಾಜ್ಯ ಹಾಗೂ ರಾಷ್ಟ್ರದ ಆರ್ಥಿಕ ಬೆಳವಣಿಗೆಯಲ್ಲಿ

ಸಹಕಾರಿ ಸಂಸ್ಥೆಗಳು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿವೆ. ಅವು ದಕ್ಷತೆ ಹಾಗೂ ಸಾಮರ್ಥ್ಯದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ವಲಯಗಳಿಗಿಂತಲೂ ಉನ್ನತ ಸ್ಥಾನವನ್ನು ಗಳಿಸಿಕೊಂಡಿವೆ. ಜೊತೆಗೆ ಬದಲಾದ ಆರ್ಥಿಕ ಸಾಮಾಜಿಕ ಪರಿಸ್ಥಿತಿಯಲ್ಲಿ ಜಾಗತಿಕ ಸವಾಲುಗಳನ್ನು ಎದುರಿಸುತ್ತ ಸ್ಪರ್ಧಾತ್ಮಕವಾಗಿ ಕಾರ್ಯನಿರ್ವಹಿಸುತ್ತವೆ. ಆದರೆ ಮುಂದಿನ ವರ್ಷಗಳಲ್ಲಿ ಮಹಿಳಾ ಸಹಕಾರ ಸಂಘಗಳ ಮಟ್ಟಿಗೆ ಹೇಳುವುದಾದರೆ ಅವು ಇನ್ನೂ ಹೆಚ್ಚಿನ ಸ್ಪರ್ಧೆಯನ್ನು ಎದುರಿಸುವ ಸಂಭವವಿದೆ. ಆದ್ದರಿಂದ ಮಹಿಳಾ ಸಹಕಾರ ಸಂಸ್ಥೆಗಳು ಸ್ವಾಯತ್ತವಾಗಿ ಆಂದೋಲನವನ್ನು ನಡೆಸುವುದು ಅನಿವಾರ್ಯವಾಗಬಹುದು. ಸಹಕಾರಿ ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳು ಗುಂಪುಗುಳಿತನ, ರಾಜಕೀಯ ನಡೆಸದೆ ಪ್ರಜಾಸತ್ತಾತ್ಮಕ ರೀತಿ ನೀತಿಗಳ ಅಡಿಯಲ್ಲಿ ಕಾರ್ಯಪ್ರವೃತ್ತವಾಗಬೇಕು. ಈ ದೃಷ್ಟಿಯಿಂದ ಸದಸ್ಯೆಯರ ಬಗ್ಗೆ ನಗಣ್ಯ ನಿಲವು ತಾಳದೆ ಅವರ ಪಾತ್ರವನ್ನು ಬಳಸಿಕೊಂಡು, ಅವರ ವಿಶ್ವಾಸದೊಂದಿಗೆ ಆಂದೋಲನವನ್ನು ಯಶಸ್ವಿಯಾಗಿ ಮುನ್ನಡೆಸಬೇಕು. ಈ ಹಿನ್ನೆಲೆಯಲ್ಲಿ ಸಹಕಾರಿ ಸಂಸ್ಥೆಗಳಿಗೆ ಎದುರಾಗುವ ಸವಾಲುಗಳು ಹಾಗೂ ಸಮಸ್ಯೆಗಳ ಬಗ್ಗೆ ವಿಚಾರ ಸಂಕಿರಣಗಳನ್ನು ವ್ಯವಸ್ಥೆ ಮಾಡಬಹುದು. ಯುವ ಪೀಳಿಗೆಯವರನ್ನು ಸೆಳೆಯಲು ಸಹಕಾರ ಆಂದೋಲನದ ಬಗ್ಗೆ ಪ್ರಬಂಧ ಹಾಗೂ ಚರ್ಚಾಸ್ಪರ್ಧೆಗಳನ್ನು ಏರ್ಪಡಿಸಬೇಕು. ಸಹಕಾರಿ ಕ್ಷೇತ್ರದ ಹಿರಿ ಕಿರಿಯ ಮಹಿಳಾ ನಾಯಕಿಯರು ಅಥವಾ ಮುಖಂಡರ ಸಮ್ಮೇಳನ ಅಥವಾ ಸಮಾವೇಶ ನಡೆಸಬಹುದು. ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು ಸಾಧಿಸುತ್ತಿರುವ ಪ್ರಗತಿಯ ಬಗ್ಗೆ ವ್ಯಾಪಕ ಪ್ರಚಾರ ನೀಡಬೇಕು. ಇಂಥ ಕಾರ್ಯಕ್ರಮಗಳನ್ನು ಗ್ರಾಮೀಣ ಹಾಗೂ ನಗರ ಪ್ರದೇಶಗಳೆರಡರಲ್ಲೂ ಏರ್ಪಡಿಸಿದಲ್ಲಿ ಅವಿದ್ಯಾವಂತ, ವಿದ್ಯಾವಂತ ಮಹಿಳೆಯರ ಜೊತೆಗೆ ಗೃಹಿಣಿಯರಾಗಿ ಕೇವಲ ಮನೆಗೆಲಸ, ಗಂಡಮಕ್ಕಳ ಪಾಲನೆ ಪೋಷಣೆಯಲ್ಲಿ ಮೈಮರೆತಂತಿರುವ ಮಹಿಳೆಯರು ಧೂಳು ಕೊಡವಿಕೊಂಡು ಎದ್ದು ತಮ್ಮ ಬುದ್ಧಿ, ವಿದ್ಯಾವಂತಿಕೆಯನ್ನು ಉತ್ತಮ ರೀತಿಯಲ್ಲಿ ಹೊರಗೆ ಹೊಮ್ಮಿಸುವ ಪ್ರಯತ್ನ ಮಾಡುತ್ತಾರೆ. ಒಟ್ಟಿನಲ್ಲಿ ಮಹಿಳೆಯರು ಸಹಕಾರಿಗಳಾಗಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಲು ಸಾಧ್ಯವಾಗುತ್ತದೆ.

ಸಹಕಾರಕ್ಕೆ ನಿಲುಕದ ವಸ್ತು, ಸೇವೆ, ಆರ್ಥಿಕ ಚಟುವಟಿಕೆ, ಸಮಾಜ ಸುಧಾರಣೆ, ಶೈಕ್ಷಣಿಕ, ವೈದ್ಯಕೀಯ ಸೌಲಭ್ಯಗಳಾವುವೂ ಇಲ್ಲ. ಕೆಲವೊಮ್ಮೆ ಸ್ಥಳೀಯ ಕೈಗಾರಿಕೋದ್ಯಮಗಳ ನೆರವು ಪಡೆದು ಆರ್ಥಿಕವಾಗಿ ದುರ್ಬಲರಾದ ಮಹಿಳೆಯರಿಗೆ ಉದ್ಯೋಗಾವಕಾಶಗಳನ್ನು ಒದಗಿಸಬಹುದು ಅಥವಾ ಸಣ್ಣಪುಟ್ಟ ಘಟಕಗಳಿರುವ ಸಹಕಾರ ಸಂಸ್ಥೆಯನ್ನು ಸ್ಥಾಪಿಸಬಹುದು. ಇಂಥ ಸಂಸ್ಥೆಗಳಿಗೆ ವಿಶೇಷ ನೈಪುಣ್ಯತೆಯನ್ನು(ಆರ್ಥಿಕ ಬೆಂಬಲವನ್ನು) ಆಯಾ ಉದ್ಯಮಗಳಿಂದಲೇ ತರಬೇತಿ ಮೂಲಕ ಪಡೆಯಬಹುದು. ಯಾವುದೇ ಸಂಸ್ಥೆಗಳನ್ನು ನಡೆಸಲು ವ್ಯವಹಾರ ಜ್ಞಾನ ಅತ್ಯಗತ್ಯವಾಗಿರಬೇಕಾಗುತ್ತದೆ. ಮಹಿಳಾ ಸಹಕಾರ ಸಂಘಗಳನ್ನು ಸಮರ್ಪಕವಾಗಿ ನಡೆಸಲು ಮಹಿಳೆಯರಿಗೆ ಲೆಕ್ಕಪತ್ರಗಳ ನಿರ್ವಹಣೆ, ರಿಜಿಸ್ಟರುಗಳು,

ಕಾಗದಪತ್ರಗಳು ಇತರ ಆಡಳಿತ ನಿರ್ವಹಣೆಯ ಬಗ್ಗೆ ಸಮಸ್ಯೆಗಳುಂಟಾದಾಗ ಹಿಂಜರಿಕೆಯುಂಟಾಗುವುದು. ಈ ಬಗ್ಗೆ ಮಹಿಳೆಯರು ಹೆದರುವ ಅವಶ್ಯಕತೆಯೇ ಇಲ್ಲ. ಸಾಧ್ಯವಿದ್ದರೆ ಅನುಭವಿಗಳಾದ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬಹುದು ಅಥವಾ ಇರುವವರಿಗೆ ಸಹಕಾರ ತರಬೇತಿ ಕಾಲೇಜಿನಿಂದ ಮೂಲಕ ಲೆಕ್ಕಪತ್ರಗಳ ಬಗ್ಗೆ ತರಬೇತಿ ನೀಡಬಹುದು. ಇಂಥ ಹಲವು ಸಂಸ್ಥೆಗಳು ಒಟ್ಟುಗೂಡಿ ಜಿಲ್ಲಾ ಸಹಕಾರ ಒಕ್ಕೂಟದಿಂದ ಸ್ಥಳೀಯವಾಗಿ ತರಬೇತಿ ಶಿಬಿರಗಳನ್ನು ನಡೆಸಬಹುದು. ಅಲ್ಲದೆ ತಾಂತ್ರಿಕ ನೈಪುಣ್ಯತೆಯ ಅಗತ್ಯವಿದ್ದರೆ ಸದಸ್ಯ ತರಬೇತಿಯ ಮೂಲಕ ಅಗತ್ಯ ಜ್ಞಾನವನ್ನು ಪಡೆಯಬಹುದು. ಒಟ್ಟಿನಲ್ಲಿ ಸಹಕಾರ ಆಂದೋಲನದಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುವ ಅವಕಾಶಗಳು ಹಾಗೂ ಅದಕ್ಕೆ ಅಗತ್ಯವಾದ ಸಾಧನ ಸಲಕರಣೆಗಳು, ಹಣಸೌಲಭ್ಯ, ಬಂಡವಾಳ ಈಗ ಲಭ್ಯವಿದೆ. ಮಹಿಳೆಯರು ಮುನ್ನುಗ್ಗಿ ಅದೆಲ್ಲವನ್ನು ಬಳಸಿಕೊಂಡು ಸ್ವಾವಲಂಬಿಗಳಾಗಿ, ಆರ್ಥಿಕಾಭಿವೃದ್ಧಿ ಸಾಧಿಸಿ ಉತ್ತಮ ಜೀವನ ಪಡೆಯುವುದು ಮಹಿಳೆಯ ಆದ್ಯಕರ್ತವ್ಯವಾಗಬೇಕು. ಕೇವಲ ಕೃಷಿ ಅಭಿವೃದ್ಧಿಗಾಗಿಯೇ ಆರಂಭಗೊಂಡ ಸಹಕಾರ ಕ್ಷೇತ್ರ ಮಹಿಳೆಗೆ ಪ್ರಾಧಾನ್ಯತೆ ನೀಡಿರಲಿಲ್ಲ. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಹಕಾರ ಕ್ಷೇತ್ರ ಸಮಾಜದ ಎಲ್ಲ ವರ್ಗಗಳನ್ನೂ ಒಳಗೊಳ್ಳುವ ಕಾರ್ಯ ಪ್ರಾರಂಭವಾದ ಮೇಲೆ ಸಹಜವಾಗಿಯೇ ಮಹಿಳೆ ಸಹಕಾರ ಕ್ಷೇತ್ರದಲ್ಲೂ ಸಕ್ರಿಯ ಪಾತ್ರವಹಿಸಬೇಕಾಯಿತು. ಇಲ್ಲಿಯೂ ಆಕೆಗೆ ನಾಮಮಾತ್ರದ ಸದಸ್ಯತ್ವ, ಲಾಭ ಗಳಿಕೆಯಲ್ಲಿ, ಸರಕುಗಳ ವಿತರಣೆ ಮಾರಾಟ ಮುಂತಾದ ಮಹತ್ವದ ವಿಷಯಗಳ ಬಗ್ಗೆ ಪ್ರಾತಿನಿಧ್ಯ ನೀಡದೆ ಅಲಕ್ಷ್ಯ ತೋರಲಾಗಿತ್ತು. ಮಹಿಳೆಯರಿಗೆ ಮಧ್ಯವರ್ತಿಗಳ ಕಿರುಕುಳ, ಪೈಪೋಟಿಯಿಂದ ಸಾಕಷ್ಟು ತೊಂದರೆಗಳೂ ಆಗುತ್ತಿತ್ತು. ಆದರೆ ಒಮ್ಮೆ ಮಹಿಳಾ ಜಾಗೃತಿ ಮೂಡಿದ ಮೇಲೆ ಆಕೆ ಈ ಕ್ಷೇತ್ರದಲ್ಲಿ ಕಣ್ಣಿನಲ್ಲಿ ಕಣ್ಣಿಟ್ಟು ಕೆಲಸ ಮಾಡುವ ಶ್ರದ್ಧೆ ರೂಢಿಸಿಕೊಳ್ಳಬೇಕಾಯಿತು. ತತ್ಪರಿಣಾಮವಾಗಿ ಸಹಕಾರಿ ರಂಗದಲ್ಲೂ ಮೊಟ್ಟ ಮೊದಲಬಾರಿಗೆ ಪ್ರಾಥಮಿಕ ಸಹಕಾರಿಸಂಘಗಳ ಆಡಳಿತ ಮಂಡಳಿಯಲ್ಲಿ ಮಹಿಳೆಗೆ ಒಂದು ಸ್ಥಾನವನ್ನು ಮೀಸಲಾಗಿರಿಸಿದ ಕೀರ್ತಿ ಕರ್ನಾಟಕ ರಾಜ್ಯಕ್ಕೆ ಸಲ್ಲುತ್ತದೆ. ಇದರಿಂದ ಉತ್ತೇಜನಗೊಂಡ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಪ್ರವೇಶಿಸಿ, ಸಕ್ರಿಯವಾಗಿ ಕಾರ್ಯನಿರ್ವಹಿಸಲಾರಂಭಿಸಿದರು. ಇದರಿಂದಾಗಿ ನೂರಾರು ಸಂಘಗಳು, ಹತ್ತಾರು ಬ್ಯಾಂಕುಗಳು ಅಸ್ತಿತ್ವಕ್ಕೆ ಬಂದವು. 'ಮಹಿಳೆಗೆ ಹೆಚ್ಚಿನ ಅಧಿಕಾರ' ರಾಜಕೀಯವಾಗಿ ಮೀಸಲಾತಿಯ ಮೂಲಕ ನೀಡಬೇಕೆಂಬ ಬಗ್ಗೆ ಚರ್ಚೆಗಳು ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿವೆ. ಮಹಿಳಾ ಸಬಲೀಕರಣ(Empowerment of women) ಈಗ ಮಹಿಳೆಯರಿಂದಲೇ ನಡೆಯುತ್ತಿರುವುದನ್ನು ಸಹಕಾರ ಕ್ಷೇತ್ರದಲ್ಲಿ ಕಾಣಬಹುದು. ಅವರ ಕಾರ್ಯಕ್ಷಮತೆ, ಬುದ್ಧಿಮತ್ತೆ, ಕಾರ್ಯತಂತ್ರ, ಯೋಜನೆಗಳನ್ನು ರೂಪಿಸುವುದು, ಕೋಟ್ಯಾಂತರ ರೂಪಾಯಿ ವಹಿವಾಟು ನಡೆಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಉದ್ಯಮಿಗಳಾಗಿ ಕೀರ್ತಿಗಳಿಸುವಂತಹ ಉನ್ನತ ಮಟ್ಟಕ್ಕೇರಿರುವುದು ಅದರ ಆತ್ಮವಿಶ್ವಾಸ, ಪರಿಶ್ರಮ

ಪ್ರಾಮಾಣಿಕತೆ ಹಾಗೂ ಸಾಮಾಜಿಕ ಜವಾಬ್ದಾರಿಯಿಂದ ಎಂಬುದು ನಿಚ್ಚಳವಾಗಿದೆ. ಮಹಿಳೆಯರ ಸಾಮರ್ಥ್ಯದ ಬಗ್ಗೆ ಅನುಮಾನಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವಾದರೂ ಕೇವಲ ಪಟ್ಟಣ ಪ್ರದೇಶದ ವಿದ್ಯಾವಂತ ಮಹಿಳೆಯರನ್ನು ಮಾತ್ರ ಗಮನಿಸದೆ ಗ್ರಾಮೀಣ ಪ್ರದೇಶದ ಅವಿದ್ಯಾವಂತ ಹಾಗೂ ಬಾಹ್ಯ ಪ್ರವೇಶಕಾಣದ ಸಹಸ್ರಾರು ಮಹಿಳೆಯರಿಗೆ ಕೂಡ ಅಗತ್ಯ ಶಿಕ್ಷಣ-ತರಬೇತಿ-ಮಾಹಿತಿ ನೀಡುವುದು ಅತಿ ಮುಖ್ಯವಿಚಾರವಾಗುತ್ತದೆ. ಈಗೀಗ ಲಂಬಾಣಿ, ದಲಿತ ಹಾಗೂ ಮೀನುಮಾರುವ, ಹೈನುಗಾರಿಕೆ ಮಾಡುವ ಮಹಿಳೆಯರಿಗೂ ಸಹ ಸಾಕಷ್ಟು ಧೈರ್ಯ ನೀಡಲು ಧನ ಸಹಾಯ ಮತ್ತಿತರ ಅಗತ್ಯತೆಗಳಿಗೆ ತಕ್ಕಂತೆ ಸ್ಪಂದಿಸಿ ಅವರನ್ನೂ ಸಹಕಾರಿಗಳನ್ನಾಗಿ ಪರಿವರ್ತಿಸುವ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದೆ. ಆದಾಗ್ಯೂ ಇಂಥ ಹಾಗೂ ಇನ್ನು ಅನೇಕ ಅಸಂಘಟಿತ ವಲಯಗಳಲ್ಲಿನ ಮಹಿಳೆಯರಲ್ಲಿ 'ಸಬಲೀಕರಣ' ಉಂಟುಮಾಡಲು ಇನ್ನಷ್ಟು ಚಿಂತನೆ, ಪ್ರಯತ್ನ ಹಾಗೂ ಕಾರ್ಯಸಾಧನೆಯಾಗಬೇಕಾಗಿದೆ. ಹಾಗೂ ಮಹಿಳೆಯರಲ್ಲಿ ಈ ಬಗ್ಗೆ ಜಾಗೃತಿ ಮೂಡುತ್ತಿದ್ದು ತಾವಾಗಿಯೇ ತಮ್ಮ ಸ್ವಯಂಪ್ರೇರಿತ, ಸ್ವಸಹಾಯದ, ಸ್ವಾವಲಂಬಿ ಮಾರ್ಗಕ್ಕೆ ಸಹಕಾರ ಕ್ಷೇತ್ರದ ಮೂಲಕ ಯಶಸ್ಸನ್ನು ಗಳಿಸುತ್ತಿದ್ದಾರೆ.

ಅಡಿಟಿಪ್ಪಣಿಗಳು

೧. ಪಿ.ವಿ.ಕಾಣೆ : ''ಕೆಲವೊಂದು ಸಂದರ್ಭಗಳಲ್ಲಿ ವಿಧವೆ ಮಾರುವಿವಾಹವಾಗಬಹುದಿತ್ತೆಂಬುದನ್ನು 'ಪುನರ್ ಬಹು' ಎಂಬ ಶಬ್ದದಡಿಯಲ್ಲಿ ಕಾಣೆಯವರು ಚರ್ಚಿಸಿದ್ದಾರೆ. ಅದೇ ರೀತಿ, 'ನಿಯೋಗ' ಎಂಬ ಶಬ್ದವು ಮೃತನ ಸಹೋದರರು ವಿಧವೆ ಅತ್ತಿಗೆಯನ್ನು ಮರುವಿವಾಹವಾಗಲು ಅವಕಾಶ ಕಲ್ಪಿಸಿತ್ತು. ಇದನ್ನು ನಾವು ಮಹಾಭಾರತ ಕಾವ್ಯದಲ್ಲಿ ಕಾಣುತ್ತೇವೆ. ಆದಾಗ್ಯೂ ಮನು ದಾಂಪತ್ಯ ಜೀವನ ನಡೆಸಿಲ್ಲದ ಬಾಲೆಯ ವಿವಾಹವನ್ನು ಹೊರತುಪಡಿಸಿ ಉಳಿದಂತೆ ವಿಧವಾ ಮರುವಿವಾಹವನ್ನು ನಿಷೇಧಿಸಿದ್ದಾನೆ ಆದರೆ, ದಾಂಪತ್ಯ ಜೀವನ, ಸಂತಾನ, ಲೈಂಗಿಕ ಕಾಮನೆ ಮುಂತಾದ ಅಂಶಗಳನ್ನಾಧರಿಸಿ ವಿಧವಾ ವಿವಾಹವನ್ನು ಕೆಳಮಟ್ಟದ ವಿವಾಹವೆಂದೇ ಪರಿಗಣಿಸಲಾಗಿತ್ತು.'' ಪಿ.ವಿ.ಕಾಣೆ, ಪು.೬೦೮-೧೬

೨. ಡಾ.ಸುಶೀಲಾ ಮೆಹತಾ- ''ರೆವಲ್ಯೂಷನ್ ಅಂಡ್ ದಿಸ್ಟೇಟಸ್ ಆಫ್ ವಿಮೆನ್ ಇನ್ ಇಂಡಿಯಾ'' ಎ ವುಮನ್ಸ್ ಡೆಸ್ಟಿನಿ, ಪು.೩೨-೪೮

ಒಟ್ಟಾರೆ ವಿಧವೆಯರ ಪರಿಸ್ಥಿತಿ ನಮ್ಮ ಸಮಜಕ್ಕೆ ಕರಿಚುಕ್ಕೆಯಾಗಿ ಅಪಮಾನಕರವಾಗಿದೆ. ಇಂದಿಗೂ ಉ.ಪ್ರ.ದ ಬನಾರಸ್‌ನಲ್ಲಿ ವಿಧವೆಯರು ಗುಂಪುಗಳಲ್ಲಿ ಹೀನ ರೀತಿಯಲ್ಲಿ ಬದುಕಿತ್ತಿದ್ದಾರೆ. ಅವರಿಗೆ ನೆರವು ನೀಡುವವರು ಯಾರು ಇಲ್ಲ. ಬೃಂದಾವನ ಹಾಗೂ ಮಥುರಾಗಳಲ್ಲಿ ಭಾರತದ ವಿವಿಧ ಭಾಗಗಳಿಂದ ವಿಶೇಷವಾಗಿ ಬಂಗಾಲ, ಅಸ್ಸಾಂ, ದೆಹಲಿ, ಉ.ಪ್ರ.ಹಾಗೂ ಗುಜರಾತಿನಿಂದ ಬಂದ ಸುಮಾರು ೭,೦೦೦ ಜನ ವಿಧವೆಯರಿದ್ದು, ಅವರು ಹತಾಶರಾಗಿ 'ಜೀವಂತ ಹೆಣ'ಗಳಂತೆ

ಬದುಕಿದ್ದಾರೆ. 'ಜೀವನರಹಿತ ಜೀವ' ವಾದ ಅವರನ್ನು ಜನ 'ಬೃಂದಾವನದ ವಧು'ಗಳು(Brides of Brindavan) ಎಂದು ವ್ಯಂಗ್ಯವಾಗಿ ಕರೆಯುತ್ತಾರೆ.

೩. ಸುಶೀಲಾ ಮೆಹತಾ, 'ಎ ರೆವಲ್ಯೂಷನ್ ದಟ್ ಹ್ಯಾಸ್ ಗಾನ್ ಅವೇ' ರೆವಲ್ಯೂಷನ್ ಅಂಡ್ ದಿ ಸ್ಟೇಟಸ್ ಆಫ್ ವಿಮೆನ್ ಇನ್ ಇಂಡಿಯಾ, ಪು.೨೪೬-೨೪೭

೪. ಶ್ರೀಮತಿ ಹೆಲ್ವಿಸಿಪಿಲಾ - ೧೯೭೫ರ ಅಂತಾರಾಷ್ಟ್ರೀಯ ಮಹಿಳಾ ವರ್ಷದ ಕಾರ್ಯದಾಳ - ಇವರ ಭಾಷಣದ ಉದ್ಧೃತ ಭಾಗ.

೫. ಡಾ.ಸುಶೀಲಾ ಮೆಹತಾ, ಪೇಪರ್ ಟೈಗರ್ಸ್, ರೆವಲ್ಯೂಷನ್ ಅಂಡ್ ದಿ ಸ್ಟೇಟಸ್ ಆಫ್ ವಿಮೆನ್ ಇನ್ ಇಂಡಿಯಾ, ಪು.೧೮೩

೬. ವಿಳಾಸ : ಅವೇಕ್, (ಕರ್ನಾಟಕ ರಾಜ್ಯಮಹಿಳಾ ಉದ್ಯಮಿಗಳ ಸಂಘ) ಬಿ.೭೬ ಕೆ ಎಸ್ ಎಸ್ ಐಡಿಸಿ ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - ೫೬೦೦೪೪ ಕೃಪೆ : ಮಹಿಳಾ ವಿಜಯ(ವಿಜಯವಾಣಿ ಪತ್ರಿಕೆ)

೭. ಎಂ.ಆರ್.ಸುನಂದಾ, ಮಹಿಳಾ ವಿಜಯ ೧೨ ಸೆಪ್ಟೆಂಬರ್, ೨೦೦೦ (ವಿಜಯ ಕರ್ನಾಟಕ ದಿನ ಪತ್ರಿಕೆಯ ಉಚಿತ ಕೊಡುಗೆ)

೮. ೧೦೦ ಇಮಯಾರ್ಸ್ - ಮಹಾತ್ಮಗಾಂಧಿ, ಗಾಂಧೀಜಿ ಮತ್ತು ಮಹಿಳೆಯರು, ಮಧುಕಿಶ್ವರ್, ಪು.೪-

೯. ಮಧುಕಿಶ್ವರ್, ಗಾಂಧೀಜಿ ಮತ್ತು ಮಹಿಳೆಯರು

೧೦. ಅದೇ ,, ಪು.೫೪

೧೧. ಮಹಾತ್ಮಗಾಂಧಿ ಅಂಡ್ ದಿ ಕೊ-ಆಪರೇಟಿವ್

೧೨. ಶ್ರೀಮತಿ ಟಿ.ಎಸ್.ರುಕ್ಮಾಯಿ, ವ್ಯಕ್ತಿಪರಿಚಯ : ಸಹಕಾರ ಶ್ರೀ : ಹಿರಿಯ ಸಹಕಾರಿ ಶ್ರೀಮತಿ ಲೀಲಾ ಸೆಟ್ಟೂರು, ಸಹಕಾರ ಪತ್ರಿಕೆ(ಸಂಚಿಕೆ ೧೩), ಜನವರಿ ೨೧, ೨೦೦೧

೧೩. ಡಿ.ಜಿ.ತೆಂಡೂಲ್ಕರ್, ಮಹಾತ್ಮ, ಸಂ.೮, ಪು.೧೯೮

೧೪. ನಾಯಕತ್ವ ಶ್ರೀಮತಿ ಎಸ್.ಕೆ.ನಾಗರತ್ನರಾವ್, ನಿವೃತ್ತ ಮಹಿಳಾ ಸಹಕಾರಿ ಶಿಕ್ಷಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರಿ ಯೂನಿಯನ್, ನಿಯಮಿತ ಮಹಿಳಾ ಸಹಕಾರಿಗಳ ನಾಯಕತ್ವ ತರಬೇತಿ ಮತ್ತು ಕಾರ್ಯಗಾರ, ಮಾರ್ಚ್ - ೧೯೮೬

೧೫. ಮಹಿಳಾ ಸಹಕಾರ ಸಂಘಗಳ ಆಡಳಿತದಲ್ಲಿ ನಾಯಕತ್ವ ವಹಿಸುವವರ ಪಾತ್ರ, ಶ್ರೀಮತಿ ಕೆ.ಆರ್. ವಿಜಯಲಕ್ಷ್ಮಿ(ಜನರಲ್ ಮ್ಯಾನೇಜರ್, ಕರ್ನಾಟಕ ಭೂ ಅಭಿವೃದ್ಧಿ ಬ್ಯಾಂಕ್ , ಬೆಂಗಳೂರು). ಮಹಿಳಾ ಸಹಕಾರಿಗಳ ನಾಯಕತ್ವ ತರಬೇತಿ ಮತ್ತು ಕಾರ್ಯಗಾರ (ಮಾರ್ಚ್ ೧೯೮೬)

೧೬. ಸಹಕಾರ ಕನ್ನಡ ಸಾಪ್ತಾಹಿಕ ಆಗಸ್ಟ್ ೨, ೧೯೯೮

೧೭. ಮಹಿಳಾ ಸಹಕಾರಿ ಸಂಘಗಳ ಆಡಳಿತದಲ್ಲಿ ನಾಯಕತ್ವ ನಡೆಸುವವರ ಪಾತ್ರ, ಶ್ರೀಮತಿ ಕೆ.ಆರ್. ವಿಜಯಲಕ್ಷ್ಮಿ

೧೮. ಯುಎನ್‌ಡಿಪಿ (೧೯೮೦), "ಇಂಡಿಯನ್ ಫ್ರೇಂವರ್ಕ್ ಫಾರ್ ರೂರಲ್ ಡೆವೆಲಪ್‌ಮೆಂಟ್(, ಇವ್ಯಾಲ್ಯುಯೇಷನ್ ಸ್ಟಡಿ ನಂ. ೩, ಯುಎನ್‌ಡಿಪಿ ನ್ಯೂಯಾರ್ಕ್ ಪು.೨೦೫

೧೯. ಬ್ರಾನ್ಜೆಗ್.ಬಿ. (೧೯೭೯), ವಿಮೆನ್ ಫುಡ್ ಅಂಡ್ ಟೆಕ್ನಾಲಜಿ, ದಿ ಕೇಸ್ ಆಫ್ ಇಂಡಿಯಾ, ಇಕನಾಮಿಕಲ್ ಅಂಡ್ ಲಿಟಿಕಲ್ ವೀಡಿಯಾ, ಸಂ. ಸಂ.೪೭

೨೦. ಎಸ್‌ಕ್ಯಾಪ್ (೧೯೮೯), "ಸ್ಟೇಟಸ್ ಆಫ್ ವಿಮೆನ್ ಇನ್ ಏಷ್ಯಾ ಅಂಡ್ ಫೆಸಿಫಿಕ್ ರೀಜನ್". ಯುಎಸ್. ಇಕನಾಮಿಕ್ ಅಂಡ್ ಸೋಷಿಯಲ್ ಕಮಿಷನ್ ಫಾರ್ ಏಷ್ಯಾ ಅಂಡ್ ದಿ ಪೆಸಿಫಿಕ್ ಬ್ಯಾಂಕಾಕ್, ಪು. ೧೧೩

ಅಧ್ಯಾಯ ೫

ಯಶಸ್ವಿ ಮಹಿಳಾ ಸಹಕಾರ ಸಂಸ್ಥೆಗಳ ಬೆಳವಣಿಗೆ, ಕಾರ್ಯನಿರ್ವಹಣೆ ಹಾಗೂ ಸಮಸ್ಯೆಗಳು

೧. ಕರ್ನಾಟಕದಲ್ಲಿ ಮಹಿಳಾ ಸಂಘ ಸಂಸ್ಥೆಗಳ ಉದಯ

೨. ತರಬೇತಿ - ಮುಖಂಡತ್ವದ ಜವಾಬ್ದಾರಿ

೩. ಉದ್ಯಮ, ಸಹಕಾರ ಸಂಘಗಳು ಹಾಗೂ ಬ್ಯಾಂಕುಗಳಲ್ಲಿ ಮಹಿಳೆಯರ ಯಶೋಗಾಥೆ

೪. ಸಂಘಟನೆಯ ಸಾಧ್ಯತೆಗೆ ಹೊಸ ಆಯಾಮ : ಮಹಿಳಾ ಬಲ

೫. ಮಹಿಳಾ ಸಹಕಾರಿಗಳ ಸಮಸ್ಯೆಗಳು : ಪರಿಹಾರೋಪಾಯಗಳು

೬. ಸಹಕಾರ ಸಂಘ/ಬ್ಯಾಂಕುಗಳ ಲೆಕ್ಕಪರಿಶೋಧನೆ

೭. ಸಹಕಾರಿ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ನಿರೀಕ್ಷೆ

೮. ಸಹಕಾರಿ ವಲಯದಲ್ಲಿ ಸಾಮಾಜಿಕ ನ್ಯಾಯ

ಯಶಸ್ವಿ ಮಹಿಳಾ ಸಹಕಾರ ಸಂಸ್ಥೆಗಳ ಬೆಳವಣಿಗೆ, ಕಾರ್ಯನಿರ್ವಹಣೆ ಹಾಗೂ ಸಮಸ್ಯೆಗಳು

ಪ್ರಜಾಪ್ರಭುತ್ವವು ಅತ್ಯುತ್ತಮ ಆಡಳಿತ ವ್ಯವಸ್ಥೆಯೆಂದು ಪರಿಗಣಿತವಾಗಿದ್ದು, ನಮ್ಮ ರಾಷ್ಟ್ರದ ಆಡಳಿತದ ಎಲ್ಲ ಬಗೆಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ಅಪೇಕ್ಷಣೀಯ ಹಾಗೂ ಅತ್ಯಗತ್ಯ. ಮಹಿಳೆಯರ ಪಾಲಿಗೆ ಎಲ್ಲ ಅವಕಾಶಗಳ ಬಾಗಿಲು ಮುಚ್ಚಿಲ್ಲ ಅಥವಾ ಮಹಿಳೆ ಅಬಲೆಯಂತೂ ಅಲ್ಲ. ಪ್ರಸ್ತುತ, ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ಮುಂಚೂಣಿಯಲ್ಲಿದ್ದು, ಆರ್ಥಿಕ-ಸಾಮಾಜಿಕ ಚಟುವಟಿಕೆಗಳಲ್ಲಿ ಪುರುಷರಿಗೆ ಸಮಾನವಾಗಿ ಅಥವಾ ಇನ್ನೂ ಹೆಚ್ಚು ಬದ್ಧತೆಯಿಂದ ಶ್ರಮಿಸುತ್ತಿದ್ದಾರೆ.

ಪ್ರತಿಯೊಂದು ಕುಟುಂಬವೂ ಸಮಾಜದ ಅತಿಮುಖ್ಯ ಘಟಕವಾಗಿದ್ದು, ಪ್ರತಿಯೊಬ್ಬ ಮಹಿಳೆಯೂ ಆಯಾ ಕುಟುಂಬದ ಸಾಮಾಜಿಕ-ಆರ್ಥಿಕ, ಅಭಿವೃದ್ಧಿ ಹಾಗೂ ಯಶಸ್ಸಿನ ಮೂಲವಾಗಿರುತ್ತಾಳೆ. ಕುಟುಂಬದ ವರಮಾನ ಪತಿ ಅಥವಾ ಪತ್ನಿಯದಾಗಿದ್ದರೂ ಅವರ ವಿತರಣೆ, ವೆಚ್ಚ, ಉಳಿತಾಯ, ಸಂಗ್ರಹಣೆ ಮುಂತಾದ ಮಹತ್ತ್ವದ ಅಂಶಗಳಲ್ಲಿ ಮಹಿಳೆಯ ಪಾತ್ರವೇ ಅತಿಮುಖ್ಯವಾಗುತ್ತದೆ. ಹೀಗಾಗಿ ಒಂದು ಹಿಡಿ ಅಕ್ಕಿ, ಸಾಸಿವೆ ಡಬ್ಬದ ಪುಡಿಕಾಸು ಅಥವಾ ದೇವರ ಹುಂಡಿಯ ಹರಕೆ, ಮುಡಿಪಿನ ಹಣಕೂಡ ಕುಟುಂಬದ ತುರ್ತು ಅಥವಾ ಸಂಕಟ ಪರಿಸ್ಥಿತಿಗಳಲ್ಲಿ ನೆರವಿಗೆ ಬರುತ್ತವೆ. ಜೊತೆಗೆ ಹಾಲು, ದಿನಸಿ, ತರಕಾರಿ, ಬಟ್ಟೆ, ಮಕ್ಕಳ ವಿದ್ಯಾಭ್ಯಾಸ, ಕುಟುಂಬದ ಮನರಂಜನೆ, ಬಂಧುಮಿತ್ರರ ಆಗಮನ, ಹಬ್ಬ, ಮದುವೆ ಮುಂಜಿ ಇತರ ಕಾರ್ಯಗಳಲ್ಲಿ ಆಗುವ ವೆಚ್ಚ, ಇವೆಲ್ಲದರ ಲೆಕ್ಕ ಹೊಂದಾಣಿಕೆ ಸಮತೋಲನದಲ್ಲಿ ಮಹಿಳೆಯ ಬುದ್ಧಿವಂತಿಕೆ, ಕೌಶಲ್ಯ ಅತ್ಯಂತ ಮಹತ್ತ್ವದ್ದು. ಕುಟುಂಬದಿಂದಾಚೆಗಿನ ಹೊರ ಪರಿಸರದ ಪರಿಸ್ಥಿತಿಗಳಿಗೆ ಸ್ಪಂದಿಸುವ ಮಹಿಳೆ ಸಮಾಜದ ಎಲ್ಲ ವ್ಯವಸ್ಥೆ, ಕಾರ್ಯಕ್ರಮ ಹಾಗೂ ಯಶಸ್ಸಿಗೆ ಹಣವೇ ಮೂಲವಾಗಿರುವುದನ್ನು ಅತಿ ಶೀಘ್ರವಾಗಿ ಗುರುತಿಸುತ್ತಾಳೆ. ಪುರುಷರಿಂದ ಅನೇಕ ಬಗೆಯ ಕಿರುಕುಳ ಅನುಭವಿಸುವುದರ ಜೊತೆಗೆ ದುಶ್ಚಟ ಪೀಡಿತ, ದರ್ಪ ಅಹಂಕಾರದ ಬೇಜವಾಬ್ದಾರಿ ತನದ, ಮನೆಗೆ ಮಾರಿ-ಪರರಿಗುಪಕಾರಿ ಸ್ವಭಾವದ ಪುರುಷರಿಂದ ಸಂಸಾರದ ನೊಗ ಎಳೆಯಲಾರದ ಹೆಣ್ಣು ಮಕ್ಕಳಿಗೆ ನೆರವಾಗಲು ಹಾಗೂ ಬರ, ಅತಿವೃಷ್ಟಿ, ಯುದ್ಧ, ಕೃತಕ ಅಭಾವ, ಬೆಲೆಯೇರಿಕೆ ಮುಂತಾದ ಸಮಸ್ಯೆಗಳಿಗೆ ಉತ್ತರ ನೀಡಲು ಮಹಿಳೆಯರು ಸಂಘಟಿತರಾಗಲೇಬೇಕಾದ ಅನಿವಾರ್ಯತೆ ಉದ್ಭವಿಸಿತು.

ಮೂಲಶಿಕ್ಷಣದ ಅವಶ್ಯಕತೆ ಅರಿತ ಮಹಿಳೆಯರು ಮೊದಲು ಶಿಕ್ಷಣ ಸಂಸ್ಥೆಗಳನ್ನೇ ಗುರಿಯಾಗಿಟ್ಟು ಕೊಂಡಿದ್ದು ಅತ್ಯಂತ ಉಚಿತವಾಗಿತ್ತು. ಹೀಗಾಗಿ, ಕರ್ನಾಟಕದಲ್ಲಿ ಮೊಟ್ಟಮೊದಲು ಮಹಿಳಾ ಸಂಘಗಳು ಆರಂಭವಾಗಿದ್ದು ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ನೀಡುವುದರ ಜೊತೆಗೆ ಅವರ ಸಾಮಾಜಿಕ ಸ್ಥಾನಮಾನವನ್ನು ಉತ್ತಮಗೊಳಿಸುವ ಉದ್ದೇಶದಿಂದಲೇ ಎಂಬುದು ಮಹತ್ತ್ವದ ಅಂಶ.

ಕರ್ನಾಟಕದಲ್ಲಿ ಮಹಿಳಾ ಸಂಘಸಂಸ್ಥೆಗಳ ಉದಯ

ವಿಶೇಷವಾಗಿ ವಿಧವೆಯರು, ಪರಿತ್ಯಕ್ತೆಯರು ಮತ್ತಿತರ ಅಸಹಾಯಕ ಮಹಿಳೆಯರಿಗಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ೧೯೫೩ರಲ್ಲಿ ಕೇಂದ್ರ ಸಮಾಜ ಕಲ್ಯಾಣ ಮಂಡಲಿಯನ್ನು ಸ್ಥಾಪಿಸಿದ್ದು, ಕರ್ನಾಟಕದ ಮಹಿಳಾ ಅಭಿವೃದ್ಧಿ ರಂಗದಲ್ಲಿ ಮೈಲಿಗಲ್ಲೆಂದು ಹೇಳಬಹುದು. ಅಷ್ಟೇ ಅಲ್ಲ, ಭಾರತದಲ್ಲಿ ಸ್ವಯಂ ಇಚ್ಛೆಯಿಂದ ಸಮಾಜಸೇವೆ ಸಲ್ಲಿಸಿದ ಇತಿಹಾಸದಲ್ಲಿ ಅದೊಂದು ಮಹತ್ತಪೂರ್ಣ ಸಂಗತಿಯಾಗಿತ್ತು. ಇದಕ್ಕೆ ಕಾರಣಕರ್ತೆಯಾಗಿದ್ದವರು ಬಾಲ್ಯವಿವಾಹಿತೆಯಾಗಿದ್ದ ಶ್ರೀಮತಿ ದುರ್ಗಾಬಾಯಿ ದೇಶಮುಖ್ ರವರು. ಬಾಲ್ಯವಿವಾಹಿತೆಯರಾದ ಮಹಿಳೆಯರು ಹಾಗೂ ವಿಧವೆಯರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ದುರ್ಗಾಬಾಯಿ ದೇಶಮುಖ್ ಅತಿದೊಡ್ಡ ಸಮಾಜ ಸುಧಾರಕಿ, ಉತ್ಕೃಷ್ಟಮಟ್ಟದ ಆಡಳಿತಗಾರರೂ, ಅನುಪಮ ಸಾಂಸ್ಥಿಕ ನಿರ್ಮಾಪಕಿಯೂ ಆಗಿದ್ದು ಮಹಿಳೆಯರ ಅಭಿವೃದ್ಧಿ ಹಾಗೂ ಸಮಾಜದಲ್ಲಿ ಮಹಿಳೆಯರಿಗೆ ನ್ಯಾಯವಾದ ಸ್ಥಾನಮಾನ ದೊರಕಿಸಲು ತಮ್ಮ ಎಂಟನೆಯ ವಯಸ್ಸಿನಿಂದ ಕಡೆಯ ಉಸಿರಿರುವವರೆಗೂ ಅವಿರತವಾಗಿ ಶ್ರಮಹಿಸಿದರು.

ಹಿಂದಿನ ಅಧ್ಯಾಯಗಳಲ್ಲಿ ಸೂಚಿಸಿರುವಂತೆ ಕರ್ನಾಟಕದಲ್ಲಿ ಅನೇಕ ಮಹಿಳಾ ಸುಧಾರಕಿಯರು ಮಹಿಳಾ ಅಭಿವೃದ್ಧಿಗೆ ಹೊಸ ಹೊಸ ಆಯಾಮಗಳನ್ನು ಸೂಚಿಸಿ ಮಾರ್ಗದರ್ಶಕಿಯರಾದರು. ಸ್ವಯಂ ಸೇವಾ ಸಂಘಗಳು, ಮಹಿಳಾ ಮಂಡಲಿಗಳು, ಮಹಿಳಾ ಸಂಘ, ಸಮಾಜಗಳು ಗ್ರಾಮೀಣ ಪ್ರದೇಶ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ನಗರಗಳಲ್ಲಿ ಬೆಳೆಯುತ್ತ ಬಂದಂತೆ ಮಹಿಳಾ ಸಂಘಟನಾ ಕಾರ್ಯವೂ ಜೊತೆ ಯಲ್ಲೇ ನಡೆಯುತ್ತಿತ್ತು. ಆದರೆ, ಕೀಳರಿಮೆ ಹಾಗೂ ಹಿಂಜರಿಕೆಯಿಂದಾಗಿ ಸಹಕಾರ ಸಂಘಗಳ ಸ್ಥಾಪನೆಗೆ, ಸದಸ್ಯತ್ವಕ್ಕೆ ಮಹಿಳೆಯರು ಮುಂದಾಗದಿದ್ದುದಕ್ಕೆ ಪ್ರಾಯಶಃ ಪುರುಷರು ಪ್ರೋತ್ಸಾಹಿಸದೆ ಉತ್ಸಾಹಭಂಗವುಂಟು ಮಾಡುತ್ತಿದ್ದುದೇ ಮುಖ್ಯ ಕಾರಣವಾಗಿರಬಹುದು. ಪ್ರಪಂಚದಲ್ಲೇ ಅತಿದೊಡ್ಡ ಅಭಿವೃದ್ಧಿಪರ ರಾಷ್ಟ್ರವಾದ ಭಾರತವು ಪ್ರಜಾಪ್ರಭುತ್ವ ವಿಧಾನಗಳ ಮೂಲಕ ಕಲ್ಯಾಣ ರಾಜ್ಯ ನಿರ್ಮಾಣ ಮಾಡುವ ಮಹಾನ್ ಪ್ರಯತ್ನಗಳನ್ನು ನಡೆಸಿದೆ. ನಮ್ಮ ಯೋಜನೆಗಳು ಯಶಸ್ವಿಯಾಗಬೇಕಾದರೆ ಸಾರ್ವಜನಿಕ ಸಹಕಾರವು ಕ್ರಿಯಾಶೀಲವಾದ ಹಾಗೂ ಅನನ್ಯ ಪ್ರಯತ್ನವಾಗುತ್ತದೆ. ಸ್ವಯಂ ಸೇವಾಸಂಸ್ಥೆಗಳು ಜನರೊಂದಿಗೆ ನಿಕಟ ಸಂಪರ್ಕ ಹೊಂದಿರುವ ಕಾರಣದಿಂದಾಗಿ ಸಾರ್ವಜನಿಕ ಪಾಲ್ಗೊಳ್ಳುವಿಕೆಗೆ ಅತ್ಯಂತ ಪರಿಣಾಮಕಾರಿಯಾದ

ಮಾಧ್ಯಮವೆಂದು ಮಾನ್ಯತೆ ಪಡೆದಿವೆ. ಇನ್ನೊಂದು ಹೆಜ್ಜೆ ಮುಂದಿಟ್ಟಿರುವ ಸಹಕಾರ ರಂಗವು ವ್ಯಕ್ತಿಗತವಾಗಿ ಮಾತ್ರವಲ್ಲ ಸಾಮೂಹಿಕವಾಗಿ ಕೂಡ ಮಹಿಳೆಯರಿಗೆ ಸ್ವಂತಿಕೆ, ಸ್ವಾವಲಂಬನೆ ಹಾಗೂ ಉನ್ನತ ಸ್ಥಾನಮಾನವನ್ನು ಕಲ್ಪಿಸಿಕೊಡುವ ಅತ್ಯುತ್ತಮ ಕಾರ್ಯಕ್ಷೇತ್ರವಾಗಿದೆ. ತಡವಾಗಿಯಾದರೂ ಮಹಿಳೆಯರು ಈ ಕ್ಷೇತ್ರವನ್ನು ಪ್ರವೇಶಿಸಿ ಉತ್ಸಾಹ ಹಾಗೂ ಕಾರ್ಯಕೌಶಲದಿಂದ ಮುನ್ನಡೆಯುತ್ತಿರುವುದು ಸ್ವಾಗತಾರ್ಹ. ಅವಶ್ಯ ಸೇವೆ, ನಿಸ್ವಾರ್ಥತೆ, ಪ್ರಾಮಾಣಿಕತೆ ಹಾಗೂ ಪರಸ್ಪರ ನಂಬಿಕೆಯ ತಳಹದಿಯ ಮೇಲೆ ಸಹಕಾರ ಸಂಘ ನಿರ್ಮಾಣವಾಗಬೇಕು. ಮಹಿಳೆಯರು ಇವೆಲ್ಲ ಗುಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಲ್ಲರು. ೧೯೮೬ರಲ್ಲಿ ನಮ್ಮ ರಾಜ್ಯದಲ್ಲಿ ಒಟ್ಟು ೨೨೮೦ ಸಹಕಾರ ಸಂಘಗಳಿದ್ದು, ಆ ಪೈಕಿ ೬೦-೬೫ ಮಹಿಳಾ ಸಹಕಾರ ಸಂಘಗಳಿದ್ದವು. ಸಹಕಾರ ಇಲಾಖೆಯ [೨]೧೯೯೫-೯೬ರ ವಾರ್ಷಿಕ ವರದಿಯಲ್ಲಿ ಮಹಿಳಾ ಸಹಕಾರ ಸಂಘಗಳ ಬಗ್ಗೆ ಹೀಗೆ ವಿವರ ನೀಡಲಾಗಿದೆ.

ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಮಹಿಳಾ ಸಹಕಾರ ಸಂಘಗಳ ಸಂಖ್ಯೆ - ೭೨೧

ಸದಸ್ಯತ್ವದ ಸಂಖ್ಯೆ	-	೧.೫೪ ಲಕ್ಷ
ಚಾಲ್ತಿ ಬಂಡವಾಳ	-	ರೂ. ೮೩೩.೭೨ ಲಕ್ಷ
ಷೇರು ಬಂಡವಾಳ	-	ರೂ. ೧೮೩.೩೮ ಲಕ್ಷ
ಸದರಿ ಸಂಘಗಳು ಹೊಂದಿದ್ದ ಠೇವಣಿ ಮೊಬಲಗು	-	ರೂ. ೪೭೩.೫೨ ಲಕ್ಷ

ಸದರಿ ಮಹಿಳಾ ಸಹಕಾರ ಸಂಘಗಳ ಪೈಕಿ ೩೧೮ ಸಂಘಗಳು ೬೦.೨೨ ಲಕ್ಷ ರೂ. ಲಾಭಗಳಿಸಿದ್ದರೆ, ೨೮೪ ಸಂಘಗಳು ೨೩.೧೩ ಲಕ್ಷ ರೂ. ನಷ್ಟವನ್ನು ಹೊಂದಿದ್ದವು. ಉಳಿದ ೧೧೯ ಸಹಕಾರ ಸಂಘಗಳು ಲಾಭ ಅಥವಾ ನಷ್ಟವಿಲ್ಲದೆ ನಡೆಯುತ್ತಿದ್ದವು.

೧೯೯೬-೯೭ರ ಹೊತ್ತಿಗೆ ಈ ಸಂಖ್ಯೆ ೭೭೫ಕ್ಕೆ ಏರಿತ್ತು. ಇವುಗಳ ವಹಿವಾಟು, ಲಾಭ, ನಷ್ಟ ವಿವರಗಳನ್ನು ಗಮನಿಸಬಹುದು. [೩](ಅನುಬಂಧ ನೋಡಿ) ೧೯೯೭ ರಿಂದೀಚೆಗೆ ೨೫ ಮಹಿಳಾ ನಗರ ಸಹಕಾರ ಬ್ಯಾಂಕುಗಳು ಮತ್ತು ೬೪ ಸಾಮಾನ್ಯ ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ. ಅಷ್ಟೇ ಅಲ್ಲ ಇನ್ನೂ ಅನೇಕ ಬ್ಯಾಂಕುಗಳು, ಅವುಗಳ ಶಾಖೆಗಳನ್ನು ತೆರೆದು ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತಿವೆ.

ಪ್ರಸ್ತುತ, ಬೆಂಗಳೂರಿನ ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಐದು ಮಹಿಳಾ ಸಹಕಾರ ಬ್ಯಾಂಕುಗಳಿದ್ದು, ಇತ್ತೀಚೆಗೆ ಬಿಜಾಪುರದಲ್ಲಿ ಮತ್ತೊಂದು ಮಹಿಳಾ ಬ್ಯಾಂಕ್ ಸ್ಥಾಪಿತವಾಗಿದೆ. ಅವುಗಳೆಂದರೆ:

೧. ಮಹಿಳಾ ಸಹಕಾರ ಬ್ಯಾಂಕ್ -ಶೇಷಾದ್ರಿಪುರ, ಬೆಂಗಳೂರು.

೨. ಶ್ರೀಮಾತಾ ಮಹಿಳಾ ಸಹಕಾರಿ ಬ್ಯಾಂಕ್ ನಿಯಮಿತ, ಬನಶಂಕರಿ, ಎರಡನೇ ಹಂತ, ಬೆಂಗಳೂರು.

೩. ಶ್ರೀ ಬನಶಂಕರಿ ಮಹಿಳಾ ಸಹಕಾರ ಬ್ಯಾಂಕ್ ಲಿ. ಕಬ್ಬನ್ ಪೇಟೆ, ಬೆಂಗಳೂರು.

೪. ಶ್ರೀ ಲಕ್ಷ್ಮೀ ಮಹಿಳಾ ಸಹಕಾರ ಬ್ಯಾಂಕ್, ಲಿಮಿಟೆಡ್, ಜೆ.ಪಿ.ನಗರ, ಬೆಂಗಳೂರು.

೫. ಅಭ್ಯುದಯ ಮಹಿಳಾ ನಗರ ಸಹಕಾರ ಬ್ಯಾಂಕ್ ಲಿಮಿಟೆಡ್, ಚನ್ನ ಪಟ್ಟಣ (ಬೆಂಗಳೂರು ಗ್ರಾಮಾಂತರ ಜಿಲ್ಲೆ)

೬. ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ್, ಬಿಜಾಪುರ.

ಮಹಿಳಾ ಸಹಕಾರ ಸಂಘಗಳು ಮುಖ್ಯವಾಗಿ ಕರಕುಶಲ ವಸ್ತುಗಳ ತಯಾರಿಕೆ ಹಾಗೂ ನೋಟ್ ಪುಸ್ತಕಗಳು, ಸಿದ್ಧ ಉಡುಪುಗಳು, ಉಪ್ಪಿನಕಾಯಿ, ಹಪ್ಪಳ, ಸಾಂಬಾರು ಪುಡಿಗಳು, ಸಂಸ್ಕರಿತ ಆಹಾರ ಪದಾರ್ಥಗಳು, ಉಪಕರಣ ಮುಂತಾದವುಗಳನ್ನು ಮಾರಾಟ ಮಾಡುವುದರಲ್ಲಿ ನಿರತವಾಗಿರುತ್ತವೆ. ಆದರೆ, ಮಹಿಳಾ ಸಹಕಾರ ಬ್ಯಾಂಕುಗಳ ಪ್ರಮುಖ ಪ್ರಕಾರ್ಯವೆಂದರೆ ಆರ್ಥಿಕ ನೆರವಿನ ಅಗತ್ಯವಿರುವ ಮಹಿಳೆಯರಿಗೆ (ಮಹಿಳಾ ಸದಸ್ಯರಿಗೆ) ನೆರವು ನೀಡುವುದು ಹಾಗೂ ಸಣ್ಣ ಉಳಿತಾಯದಲ್ಲಿ ಅವರಿಗೆ ಉತ್ತೇಜನ ನೀಡುವುದರ ಜೊತೆಗೆ ಮಹಿಳೆಯರಲ್ಲಿ ಔದ್ಯಮಿಕ ಸಾಮರ್ಥ್ಯಗಳನ್ನು ಬೆಳೆಸಲು ಅಗತ್ಯವಿರುವವರಿಗೆ ಸಾಲ/ಮುಂಗಡಗಳನ್ನು ನೀಡಿ ಪ್ರೋತ್ಸಾಹಿಸುವುದು.

ಸಹಕಾರ ಚಳವಳಿಯಲ್ಲಿ ಮಹಿಳೆಯರು ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳಬಹುದಾದ ಕ್ಷೇತ್ರವೆಂದರೆ ಗ್ರಾಹಕ ಹಾಗೂ ಕೈಗಾರಿಕಾ ಕ್ಷೇತ್ರವೆನ್ನುತ್ತಾರೆ ಸಹಕಾರ ಶಿಕ್ಷಕಿಯಾದ ಶ್ರೀಮತಿ ಎ.ಎಸ್.ಪಾರ್ವತಿ. ಅವರ ಅಭಿಪ್ರಾಯದಂತೆ, ಮಹಿಳೆಗೂ ಗೃಹಬಳಕೆ ವಸ್ತುಗಳಿಗೂ ನೇರಸಂಬಂಧವಿರುವುದರಿಂದ, ನಾಡಿನ ಪ್ರತಿಯೊಬ್ಬ ವ್ಯಕ್ತಿಯೂ ಗ್ರಾಹಕನೇ.... ಬೆಲೆಯೇರಿಕೆ, ಕಲಬೆರಕೆ, ತೂಕ ಅಳತೆಗಳಲ್ಲಿ ಮೋಸ, ಪದಾರ್ಥಗಳ ಕೃತಕ ಅಭಾವ ಇವುಗಳ ತೊಂದರೆಯಿಂದ ಮುಕ್ತರಾಗಬೇಕಾದರೆ ಗ್ರಾಹಕರ ಚಳವಳಿ ಅಭಿವೃದ್ಧಿಯಾಗಬೇಕು. ಆದ್ದರಿಂದ ಮಹಿಳೆಯರೇ ಗ್ರಾಹಕರ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಅದರ ಮೂಲಕವೇ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಬೇಕು. ಗ್ರಾಹಕ ಸಹಕಾರ ಸಂಘಗಳು ನಿಷ್ಠೆಯಿಂದ, ನಿರ್ವಂಚನೆಯಿಂದ, ಸೇವಾ ಮನೋಭಾವದಿಂದ ಕರ್ತವ್ಯ ನಿರ್ವಹಿಸಿದರೆ ಬೆಲೆಗಳನ್ನು ನಿಯಂತ್ರಿಸುವಲ್ಲಿ ಮುಖ್ಯವಾದ ಪಾತ್ರವಹಿಸಬಲ್ಲವು''[೪] ಗ್ರಾಹಕರ ಸಹಕಾರ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ನಿರ್ವಹಿಸಬೇಕಾದ ಕೆಲವು ಕರ್ತವ್ಯಗಳು ಮುಂದಿನಂತಿವೆ:

೧. ಮಹಿಳೆಯರು ಗ್ರಾಹಕರ ಸಹಕಾರ ಕ್ಷೇತ್ರದಲ್ಲಿ ದಕ್ಷ ನಾಯಕತ್ವವನ್ನು ವಹಿಸಬೇಕು.

೨. ತಾವೂ ಪ್ರಾಮಾಣಿಕರಾಗಿರುವುದು ಮಾತ್ರವಲ್ಲದೆ ಉಳಿದವರಿಗೂ ಮಾರ್ಗದರ್ಶನ ನೀಡಿ ಮಾದರಿಯಾಗಬೇಕು.

೩. ಗ್ರಾಹಕರ ಸಹಕಾರ ಸಂಘಗಳಿರುವ ಎಲ್ಲ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಮಹಿಳೆಯರು ತಾವಾಗಿಯೇ ಹೋಗಿ ತಮ್ಮ ಸ್ನೇಹಿತೆಯರನ್ನು ಕರೆದೊಯ್ದು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ಹೊಂದಿರಬೇಕು.

೪. ತಾವು ಸದಸ್ಯರಾಗಿರುವ ಸಹಕಾರ ಸಂಘದ ಮೂಲಕ ಮಾತ್ರವೇ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಬೇಕು.

೫. ಅಗತ್ಯವಸ್ತು ಲಭ್ಯವಿರದಿದ್ದರೆ ಸಹಕಾರ ಸಂಘದ ಪದಾಧಿಕಾರಿಗಳನ್ನು ಭೇಟಿ ಮಾಡಿ ಆ ವಸ್ತುಗಳನ್ನು ಸರಬರಾಜು ಮಾಡುವ ಏರ್ಪಾಡು ಮಾಡಬೇಕು.

೬. ಸಹಕಾರ ಸಂಘದ ಸಾಮಾನ್ಯ ಮಹಾಸಭೆಗೆ(General Body meeting) ಹಾಜರಾಗಿ ಕುಂದುಕೊರತೆ, ಆಡಳಿತ ನಿರ್ವಹಣೆ ಬಗ್ಗೆ ಅಭಿಪ್ರಾಯ ತಿಳಿಸಬೇಕು.

೭. ಸದಸ್ಯರಾಗಿರುವ ಮಹಿಳೆಯರು ಆಡಳಿತ ಮಂಡಳಿಯ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಗೊಂಡಲ್ಲಿ ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

೮. ಸಹಕಾರ ಸಂಘ ಸರಬರಾಜು ಮಾಡುವ ಪದಾರ್ಥಗಳ ಉತ್ತಮ ಗುಣಮಟ್ಟದ ಬಗ್ಗೆ ಎಚ್ಚರಿಕೆ ವಹಿಸಬೇಕು.

೯. ಸಹಕಾರ ಸಂಘದಿಂದಲೇ ವಸ್ತುಗಳನ್ನು ಖರೀದಿಸುವಂತೆ ಇತರರ ಮನವೊಲಿಸಬೇಕು.

೧೦. ಸಹಕಾರ ಸಂಘದಿಂದ ಉಂಟಾಗುವ ಪ್ರಯೋಜನಗಳನ್ನು ಜನರಲ್ಲಿ ಮನದಟ್ಟು ಮಾಡಬೇಕು.

ಮಹಿಳಾ ಸಹಕಾರ ಸಂಘ(co-operative society) ಹಾಗೂ ಮಹಿಳಾ ಸಹಕಾರ ಬ್ಯಾಂಕ್ (co-operative Bank) ಇವುಗಳ ಸ್ವರೂಪ, ಕಾರ್ಯನಿರ್ವಹಣೆ ಹಾಗೂ ಸಹಕಾರ ಕ್ಷೇತ್ರದಲ್ಲಿ ಅತಿಮಹತ್ವ ಹೊಂದಿರುವ ಇವೆರಡೂ ಅಂಗಗಳು ಪರಸ್ಪರ ಹೊಂದಿರುವ ಸಂಪರ್ಕ ಸಮನ್ವಯ ಹಾಗೂ ಸಮಸ್ಯೆಗಳ ಬಗ್ಗೆ ಪರ್ಯಾಲೋಚಿಸಬಹುದು. ಮಹಿಳಾ ಸಹಕಾರ ಸಂಘಗಳು ಪ್ರಾರಂಭವಾಗಿದ್ದು, ಮಹಿಳೆಯರ ದೈನಂದಿನ ಬದುಕಿಗೊಂದು ನೆಲೆಯನ್ನು, ಆರ್ಥಿಕ ಆಸರೆಯನ್ನು ಒದಗಿಸುವ ಸಲುವಾಗಿ. 'ಮಹಿಳಾ ಸಹಕಾರ ಸಂಘ ಮಹಿಳಾ ಸಹಕಾರಿಗಳು' ಎಂದ ಕೂಡಲೇ ಕೇಳಿ ಬರುವ ಹೆಸರು ಸಹಕಾರ ಇಲಾಖೆಯ

ಗ್ರಾಹಕರ ಸಹಕಾರ ಮಹಾಮಂಡಲದಲ್ಲಿ ಅಧಿಕಾರಿಯಾಗಿ ಕೆಲಸ ಮಾಡಿ ನಿವೃತ್ತರಾದ ಶ್ರೀಮತಿ ನಾಗರತ್ನಾರಾವ್ ಅವರದು. ಅವರನ್ನು ಸಂದರ್ಶಿಸಿ ಗ್ರಾಮಾಂತರ ಹಾಗೂ ನಗರ ಪ್ರದೇಶದಲ್ಲಿ ಸಹಕಾರ ಸಂಘ ಹಾಗೂ ಸಹಕಾರ ಬ್ಯಾಂಕುಗಳ ಪ್ರಾರಂಬ ಅವುಗಳ ಕಾರ್ಯನಿರ್ವಹಣೆ ಮುಂತಾದ ಈ ಕ್ಷೇತ್ರದ ಸಮಗ್ರ ವಿವರಗಳ ಬಗ್ಗೆ ಪರ್ಯಾಲೋಚಿಸಿ ಸಂಗ್ರಹಿಸಿದ ಸಂಗತಿಗಳನ್ನು ಇಲ್ಲಿ ದಾಖಲಿಸಲಾಗಿದೆ.

"ವೈಯಕ್ತಿಕವಾಗಿ ಅಥವಾ ಕೆಲವೇ ಮಂದಿ ಒಂದೆಡೆ ಸೇರಿ ಸಣ್ಣಪುಟ್ಟ ಕೆಲಸಮಾಡಿ ಪುಡಿಗಾಸು ಸಂಪಾದಿಸುವಾಗ ಅಂಥವರನ್ನು ಸೇರಿಸಿ ಸಹಕಾರ ಸಂಘ ಪ್ರಾರಂಭಿಸಬಹುದು. ಸಣ್ಣ ಉಳಿತಾಯ, ಮಿತವ್ಯಯದ ಬಗ್ಗೆ ಅವರಿಗೆ ತಿಳಿವಳಿಕೆ ನೀಡಿ ಹೀಗೆ ಸಂಘಟಿಸುವಾಗ ಮೊದಲಬಾರಿಗೆ ಬೆಂಗಳೂರಿನ ಲಿಂಗರಾಜಪುರದಂಥ ಇನ್ನೂ ಅಭಿವೃದ್ಧಿ ಹೊಂದಿರದ ಸ್ಥಳದಲ್ಲಿ ಜಯಲಕ್ಷ್ಮಿ ಎಂಬ ಏಕಾಂಗಿ ಮಹಿಳೆಯರ ಮೂಲಕ ಒಂದು ಸಹಕಾರ ಸಂಘ ಪ್ರಾರಂಭವಾಯಿತು. ಈಗ ಅಲ್ಲಿ ನೂರಾರು ಜನ ಸಂಘಟಿತರಾಗಿದ್ದು ಒಬ್ಬ ಮಹಿಳೆ ದಿನಕ್ಕೆ ಒಂದು ಸಾವಿರ ರೂಪಾಯಿಯವರೆಗೆ ವರಮಾನ ಪಡೆಯುವಂಥ ಸುಭದ್ರಸ್ಥಿತಿಯುಂಟಾಗಿದೆ. ರಾಷ್ಟ್ರೀಕೃತ ಕೆನರಾಬ್ಯಾಂಕಿನ ನೆರವಿನಿಂದ ಕವರುಗಳನ್ನು ಮಾಡುವ ಕೆಲಸದಿಂದಾರಂಭಿಸಿ ಹೊಲಿಗೆ, ಸಿದ್ಧ ಉಡುಪುಗಳ ರಫ್ತಿನವರೆಗೆ ವಿವಿಧ ಆರ್ಥಿಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ದಲಿತ ಮಹಿಳೆಯರಿಗೆ ಪುನರ್ವ್ಯವಸ್ಥೆ ಮಾಡಿ ಮರುಹುಟ್ಟು ನೀಡಿದ ಈ ಮೊದಲ ಮಾದರಿ ಸಹಕಾರಸಂಘ ಇಂದಿಗೂ ಯಶಸ್ವಿಯಾಗಿ ನಡೆದಿದೆ. ಅಲ್ಲಿ ಪ್ರಾಥಮಿಕ ಪ್ರವೇಶ ಪಡೆದ ಮಹಿಳೆಯರು ಈಗ ಮುಖಂಡರಾಗಿ ಸ್ವಾವಲಂಬನೆಯಿಂದ ಸ್ವಂತ ಮನೆ ಇತ್ಯಾದಿ ಸುಖಜೀವನ ಕಾಣುತ್ತಿದ್ದಾರೆ.

೧೯೮೪ರ ನಂತರ ನಾಗರತ್ನಾರಾವ್ ಮಹಿಳಾ ಅಧಿಕಾರಿಯಾಗಿ ಇಡೀ ಕರ್ನಾಟಕ ರಾಜ್ಯದಾದ್ಯಂತ ಪ್ರವಾಸ ಮಾಡಿ ಮಹಿಳೆಯರನ್ನು ಸಂಘಟಿಸಿದರು. ತತ್ಫಲವಾಗಿ ಇಪ್ಪತ್ತೆಂಟು ಮಹಿಳಾ ಸಹಕಾರ ಬ್ಯಾಂಕ್ ಹಾಗು ಇಪ್ಪತ್ತು ವಿವಿಧೋದ್ದೇಶ ಸಹಕಾರ ಸಂಘಗಳು ಸ್ಥಾಪನೆಯಾದವು. ಇವುಗಳ ಜೊತೆಗೆ ಹಾಲು ಸಹಕಾರ ಸಂಘ, ಪತ್ತಿನ(ಕ್ರೆಡಿಟ್) ಸಹಕಾರ ಸಂಘಗಳನ್ನೂ ಕೂಡ ಸ್ಥಾಪಿಸಲಾಯಿತು. ಇಂಥದೊಂದು ಮಹಿಳಾ ಸಂಘಟನೆಯ ಸಹಕಾರ ಆಂದೋಲನ ನಡೆಸುವಾಗ ಸಾಹಿತಿಗಳು, ರಾಜಕಾರಣಿಗಳು, ಸಮಾಜ ಸೇವಕರು, ಉದ್ಯಮಿಗಳು, ಬೇರೆ ಬೇರೆ ಇಲಾಖೆಗಳಿಗೆ ಸೇರಿದ ಸಹಕಾರಿ ಅಧಿಕಾರಿಗಳು ಎಲ್ಲರನ್ನೂ ತೊಡಗಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ. ಆಗ ಮುಂಚೂಣಿಯಲ್ಲಿ ಅಥವಾ ಆಗ್ರ ಶ್ರೇಣಿಯಲ್ಲಿದ್ದ ಮಹಿಳಾ ಮುಖಂಡರೆಂದರೆ ಶ್ರೀಮತಿಯರಾದ ಎಂ.ಆರ್.ಲಕ್ಷಮ್ಮ, ಯಶೋಧರಾ ದಾಸಪ್ಪ, ಪಿ.ಆರ್. ಜಯಲಕ್ಷಮ್ಮ, ಪ್ರಮೀಳ ದೇಶಪಾಂಡೆ, ಲೀಲಾದೇವಿ ಆರ್.ಪ್ರಸಾದ್, ಎ.ಪಂಕಜ ಮುಂತಾದವರು. ತಮ್ಮೆಲ್ಲ ವೈಯಕ್ತಿಕ ಕಷ್ಟಸುಖ, ಅಡ್ಡಿ ಆತಂಕಗಳನ್ನು ಬದಿಗೊತ್ತಿ, ಅಸಹಾಯಕ, ಅನಾಥ, ಆರ್ಥಿಕ ಬೆಂಬಲವಿರದ ಅಬಲೆಯರಾದ ಮಹಿಳೆಯರಿಗೆ ಬಾಳಿನ ಹಾದಿ ಹಾಗೂ ಸ್ವಶಕ್ತಿಯನ್ನು ಪಡೆಯಲು ಈ

ಎಲ್ಲ ಮಹಿಳೆಯರೂ ಅಪಾರವಾಗಿ ಶ್ರಮಿಸಿದರು. ಹಾಗೂ ಇಂದಿಗೂ ಶ್ರೀಮತಿ ಲೀಲಾದೇವಿ ಪ್ರಸಾದ್, ಎ.ಪಂಕಜ, ಟಿ.ಎಸ್.ರುಕ್ಮಾಯಿ, ಪದ್ಮಾಶೇಷಾದ್ರಿ ಮುಂತಾದವರು ಇದೇ ಸಹಕಾರ ಕ್ಷೇತ್ರದ ದಿಗ್ಗಜಗಳಾಗಿ ಅತ್ಯುನ್ನತ ಗೌರವಾದರಗಳನ್ನು ಪಡೆಯುತ್ತಿದ್ದಾರೆ. ಇವರಿಗೆ ಸ್ವಾರ್ಥ, ಕೀರ್ತಿಕಾಮನೆ, ಅಥವಾ ಅಧಿಕಾರದ ಹಂಬಲ ಇರದಿದ್ದುದೇ ಅವರು ಉತ್ತಮ ಮಾರ್ಗದರ್ಶಿಗಳಾಗಲು ಜನಾದರಣೀಯರಾದ, ಜನಪ್ರಿಯರಾದ ಧುರೀಣರಾಗಲು ಕಾರಣವಾಯಿತು. ಮೂಲತಃ ಮಹಿಳೆಯರಿಗೆ ಸ್ವಾವಲಂಬನೆಯ ದಾರಿ ತೋರುವುದೇ ಪ್ರಮುಖ ಗುರಿಯಾಗಿರುವುದರಿಂದ ಆರ್ಥಿಕ ನೆರವು ನೀಡಿ ಅವರಿಗೆ ಉದ್ಯಮದ ಕಾರ್ಯತಂತ್ರಗಳ ಯೋಜನೆ, ಮಾರಾಟ ಮುಂತಾದುವುಗಳನ್ನು ತಿಳಿಸಬೇಕಾಗುತ್ತದೆ. ಹೀಗಾಗಿ, ಮಹಿಳಾ ಸಹಕಾರ ಸಂಘಗಳು ಹಾಗು ಬ್ಯಾಂಕುಗಳು ಒಟ್ಟಿಗೆ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಮಹಿಳಾ ಸಹಕಾರ ಸಂಘಗಳ ಸದಸ್ಯೆಯರಿಗೆ ಹಣದ ನೆರವು ಅಗತ್ಯವಾದಾಗ ಅವರನ್ನು ಬ್ಯಾಂಕಿನ ಸದಸ್ಯರನ್ನಾಗಿ ಮಾಡಿಕೊಂಡು ಸಾಲ ನೀಡಲಾಗುತ್ತದೆ. ಬಹಳಷ್ಟು ಸಲ ಮಹಿಳಾ ಉದ್ಯಮಿಗಳಿಗೆ ದೊಡ್ಡ ಪ್ರಾಜೆಕ್ಟ್ ಗಳಿಗಾಗಿ ಭಾರಿ ಪ್ರಮಾಣದ ಮೊಬಲಗುಗಳು ಕೂಡ ಅಗತ್ಯವಾಗುತ್ತದೆ. ಲಕ್ಷಾಂತರ ರೂಪಾಯಿ ವಹಿವಾಟು ನಡೆಸುವ ಬ್ಯಾಂಕುಗಳೀಗ ಕೋಟ್ಯಾಂತರ ರೂಪಾಯಿ ಲೇವಾದೇವಿ ನಡೆಸುತ್ತಿರುವ ಜ್ವಲಂತ ಉದಾಹರಣೆ ನಮ್ಮ ಕಣ್ಣೆದುರಿನಲ್ಲಿದೆ. ಎಂದರೆ ಮಹಿಳಾ ಉದ್ಯಮಿಗಳಿಗೆ ಅಗತ್ಯವಿರುವ ಒಟ್ಟು ಮೊಬಲಗಿನಲ್ಲಿ ಅರ್ಧಭಾಗದಷ್ಟು ನಿಧಿಯನ್ನು ಇಂಥ ಬ್ಯಾಂಕುಗಳೇ ಕಡಿಮೆ ಬಡ್ಡಿದರದಲ್ಲಿ ಒದಗಿಸುತ್ತವೆ. ಮಹಿಳೆಗೆ ಆರ್ಥಿಕ ಸ್ವಾವಲಂಬನೆಯಿದ್ದಾಗ ಗೌರವ ತಾನಾಗಿಯೇ ದೊರೆಯುತ್ತದೆ. ಪ್ರಾಯಶಃ ಈ ವಿಷಯದಲ್ಲಿ ಜಾಗೃತಿ ಹೊಂದಿದ ಮಹಿಳೆಯರು ತಮಗೆ ತಿಳಿದ ಕರಕುಶಲ ಅಥವಾ ಇನ್ನಾವುದೇ ವಸ್ತುವನ್ನು ತಯಾರಿಸುವುದರ ಜೊತೆಗೆ ತನ್ನ ಅಕ್ಕಪಕ್ಕದವರಿಗೆ ಅವುಗಳನ್ನು ಪ್ರದರ್ಶಿಸಿ ಕ್ರಮೇಣ ಗುಂಪುಗೂಡಿಸಿಕೊಂಡು ಸಹಕಾರ ಸಂಘವನ್ನು ರಚಿಸಿಕೊಳ್ಳುತ್ತಾರೆ. ಅನಂತರ ಹಲವಾರು ಜನರಿಗೆ ನೆರವಾಗುವ ಉದ್ದೇಶದಿಂದ ಉದ್ಯಮವನ್ನು ಪ್ರಾರಂಭಿಸಿ ಉದ್ಯೋಗಗಳನ್ನು ಸೃಜಿಸುತ್ತಾರೆ. ಕೆಲವೇ ವರ್ಷಗಳಲ್ಲಿ ಮಹಿಳಾ ಸಹಕಾರ ಬ್ಯಾಂಕನ್ನು ತೆರೆದು ಆರ್ಥಿಕ ಬೆಂಬಲವನ್ನೂ ತಾವೇ ಗಳಿಸಿಕೊಳ್ಳುವಷ್ಟು ಅನುಭವಿಗಳೂ, ತಜ್ಞರೂ ಆಗುತ್ತಾರೆ. ಇದು ಇಂದಿಗೂ ಪ್ರಗತಿಯ ದಾರಿಯಲ್ಲಿ ನಡೆದು ಸಫಲರಾಗಿ ಸಾಧನೆ ಮಾಡುತ್ತಿರುವ ಮಹಿಳಾ ಉದ್ಯಮಿಗಳ ಪ್ರಯತ್ನದ ಫಲವಾಗಿದೆ. ಮಹಿಳೆಯರ ಬಲವರ್ಧನೆಗೆ ಸ್ವಾವಲಂಬನೆ ಅತ್ಯಗತ್ಯ, ಅನಿವಾರ್ಯವೆಂಬ ಪರಿಸ್ಥಿತಿ ಈಗ ಉಂಟಾಗಿದೆ. ಗ್ರಾಮಾಂತರ ಹಾಗೂ ನಗರ ಪ್ರದೇಶಗಳೆರಡರಲ್ಲೂ ಈಗ ಮಹಿಳೆಯರು ಉತ್ಸಾಹದಿಂದ ಪ್ರತಿಕ್ರಿಯಿಸುತ್ತಿದ್ದಾರೆ. ಮೊದಲು ಸಾಲದ(ಕ್ರೆಡಿಟ್) ಸಹಕಾರ ಸಂಘ ಮಾಡಿಕೊಂಡು, ವಿವಿಧೋದ್ದೇಶಗಳನ್ನು ಸಾಧಿಸುವ ಸಹಕಾರ ಸಂಘದಿಂದ ಮುನ್ನಡೆದು ಸಹಕಾರ ಬ್ಯಾಂಕುಗಳನ್ನು ಮಾಡಿ ಇವೆರಡರಲ್ಲೂ ಅತ್ಯುತ್ತಮವಾಗಿ

ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಎಂದರೆ ಆಸಕ್ತಿ, ಉತ್ಸಾಹ, ಸೇವಾ ಮನೋಭಾವವಿದ್ದರೆ ಅಂಥ ವ್ಯಕ್ತಿಗಳಿಗೆ ಸೂಕ್ತ ಕಾಲದಲ್ಲಿ ಸಾಕಷ್ಟು ಉತ್ತೇಜನ ದೊರಕಿದರೆ ಎಂಥ ಅದ್ಭುತವನ್ನಾದರೂ ನಿರ್ಮಿಸಬಹುದೆಂಬ ಅಭಿಪ್ರಾಯಕ್ಕೆ ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು ಇಂದು ಸಾಧಿಸುತ್ತಿರುವ ಪ್ರಗತಿ ಇಂಬು ನೀಡುತ್ತದೆ.

ತರಬೇತಿ, ಮುಖಂಡತ್ವದ ಜವಾಬ್ದಾರಿ

ಮಹಿಳೆಯರು ತಮಗೆ ತಿಳಿದ ಕಲೆಯನ್ನು ಅರಳಿಸಬಲ್ಲರೇ ಹೊರತು ಅದನ್ನು ಉದ್ಯಮವಾಗಿಸಿ ನಿಧಿಯನ್ನಾಗಿಸುವ ಕಾರ್ಯತಂತ್ರವನ್ನು ಅರಿತಿರುವುದಿಲ್ಲ. 'ಸಮಯವೇ ಹಣ'(Time is money) ಎನ್ನುವಂಥ ಕ್ಷಣಗಣನೆಯ(count down) ಯುಗ ಇದು. ಮಹಿಳೆಯರು ತಮ್ಮ ಕೌಶಲವನ್ನೇ ಬಂಡವಾಳವಾಗಿಸಿ ನಿಗದಿತ ಅವಧಿಯಲ್ಲಿ ಅದನ್ನೇ ಹಣವಾಗಿಸಿ ಲಾಭಪಡೆಯುವ ಔದ್ಯಮಿಕ ವಾತಾವರಣ ಜಾಗತಿಕ ವಲಯದಲ್ಲಿ ಉಂಟಾಗಿದೆ. ಇಂಥ ಕ್ಷಿಪ್ರಗತಿಯ, ಕ್ಷಣಕ್ಷಣಕ್ಕೂ ಪರಿವರ್ತನಶೀಲವಾದ ಅಂತಾರಾಷ್ಟ್ರೀಯ ಉದ್ಯಮ ಜಾಲ(Net work)ದಲ್ಲಿ ಹೇಗಾದರೂ ಮೆಟ್ಟಿ ನಿಲ್ಲಬೇಕೆಂದು ಹವಣಿಸುವ ಪುರುಷರೊಂದಿಗೆ ಸವಾಲು ಹಾಕಬೇಕಾದರೆ ಮಹಿಳೆಯರಿಗೆ ಉದ್ಯಮರಂಗದ 'ಒಳಹೊರಗು'ಗಳ ಬಗ್ಗೆ ಅಪಾರ ಅರಿವಿರುವುದು ಅತ್ಯಗತ್ಯ. ಇಂಥ ಅರಿವನ್ನು ಮೂಡಿಸಲು ಪರಿಣತಿ ಹೊಂದಲು ಅವರಿಗೆ ಸೂಕ್ತ ತರಬೇತಿ ನೀಡುವುದು ಅತ್ಯವಶ್ಯ. ಹೀಗಾಗಿ ಸಹಕಾರ ತರಬೇತಿ ಶಿಬಿರಗಳನ್ನು ನಡೆಸುವುದು ಅಗತ್ಯವಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹಿಂಜರಿಕೆಯಿಂದ ಅಥವಾ ಅನಕ್ಷರತೆ, ಅಜ್ಞಾನದಿಂದ ಮಹಿಳೆಯರು ಇಂಥ ತರಬೇತಿಗಳನ್ನು ಪಡೆಯಲು ಹಿಂದೇಟು ಹಾಕುತ್ತಾರೆ. ಇಂಥ ಪರಿಸ್ಥಿತಿಗಳಲ್ಲಿ ಸಿಂಗಲ್ ವಿಂಡೋ ಸಿಸ್ಟಮ್ ಎಂದರೆ ಒಂದೇ ಸ್ಥಳದಲ್ಲಿ ವಿವಿಧ ವಿಷಯಗಳ ಬಗ್ಗೆ ಮಾಹಿತಿ, ಸಂದರ್ಶನ, ಅರಿವು, ಮಾರ್ಗದರ್ಶನ, ಉಚಿತ ತಪಾಸಣೆ, ಚಿಕಿತ್ಸೆ, ಹಣದ ನೆರವು ದೊರೆಯುವಂತೆ ಮಾಡುವುದು. ಇದಕ್ಕಾಗಿ ಮಹಿಳಾ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯರು, ಬ್ಯಾಂಕಿನವರು ಎಲ್ಲರನ್ನೂ ಕೂಡ ೩ ದಿನ ಅಥವಾ ೫ ಅಥವಾ, ೭ ದಿನಗಳ ತರಬೇತಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದು. ಸ್ಥಳೀಯವಾಗಿ ಲಭ್ಯವಿರುವ ಕಚ್ಚಾಪದಾರ್ಥಗಳು, ಕರಕುಶಲ ಅಥವಾ ಇನ್ನಿತರ ವಸ್ತುಗಳ ಬಗ್ಗೆ ತಿಳಿಸಿ ಹೇಳುವುದರ ಜೊತೆಗೆ ಮಿತವ್ಯಯ, ಆರೋಗ್ಯ, ಕುಟುಂಬ ಕಲ್ಯಾಣ, ಬ್ಯಾಂಕಿನವರ ಸಹಾಯದ ಬಗ್ಗೆ ಸ್ಥಳೀಯ ಮಹಿಳೆಯರಲ್ಲಿ ಕುತೂಹಲ ಕೆರಳಿಸುವುದು. ಹಾಗೂ ಸಹಕಾರ ಸಂಘವನ್ನು ರಚಿಸಿಕೊಳ್ಳುವ ಮೂಲಕ ಅವರಿಗೆ ದೊರೆಯುವ ಎಲ್ಲ ಅನುಕೂಲತೆಗಳನ್ನು ತಿಳಿಸಿಹೇಳುವುದು ತರಬೇತಿ ಹಾಗೂ ಉತ್ಪಾದನೆಗೆ ತಕ್ಕ ಧನಸಹಾಯದ ವ್ಯವಸ್ಥೆಯಿರುವುದು ಮನದಟ್ಟಾದರೆ ಮಹಿಳೆಯರು ತಮ್ಮ ಅನುಮಾನ, ಹಿಂಜರಿಕೆಯನ್ನು ಬಿಟ್ಟು ಮುಂದೆ ಬರುತ್ತಾರೆ. ಕೆಲವೊಮ್ಮೆ ಅದಾಗಲೇ ಇರುವ ರೈತಸಂಘ,

ಸ್ವಯಂ ಉದ್ಯೋಗ ಸಂಸ್ಥೆಗಳ ಮೂಲಕ ಇಂಥ ಕಾರ್ಯಕ್ರಮ ಏರ್ಪಡಿಸಿ ಅಲ್ಲಿ ಸಹಕಾರ ಸಂಘದ ಬಗ್ಗೆ ಅರಿವು ಮೂಡಿಸುವ ಪ್ರಯತ್ನ ನಡೆಯುತ್ತದೆ.

ನಗರಗಳಲ್ಲಿ ಜಾಗೃತಿ ಮೂಡಿಸುವುದಕ್ಕೆ ಹೆಚ್ಚು ಕಷ್ಟವಾಗುವುದಿಲ್ಲ. ಸಾಮಾನ್ಯವಾಗಿ ವಿದ್ಯಾವಂತರಾಗಿ, ಅನೇಕ ರೀತಿಯಲ್ಲಿ ಹೊರಪ್ರಪಂಚದ ಆಗುಹೋಗುಗಳನ್ನು ತಿಳಿದು ವಿವೇಚನೆಯಿಂದ ನಿರ್ಧಾರ ತೆಗೆದುಕೊಳ್ಳುವ ನಗರ ಮಹಿಳೆಯರು ಇತ್ತೀಚೆಗೆ ಸ್ವಯಂ ಉದ್ಯಮಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಜೊತೆಗೆ ಸಹಕಾರ ಸಂಘ ಹಾಗೂ ಮಹಿಳಾ ಸಹಕಾರ ಬ್ಯಾಂಕುಗಳಲ್ಲಿ ಕ್ರಿಯಾಶೀಲರಾಗಿ ದುಡಿಯುತ್ತಿದ್ದಾರೆ. ಆದಾಗ್ಯೂ, ಹಲವಾರು ಹಣಕಾಸು ಸಂಸ್ಥೆಗಳು, ಬ್ಯಾಂಕುಗಳು ಇನ್ನಿತರ ನಿಧಿ ಶೇಖರಣೆ, ಸಾಲ ಸೌಲಭ್ಯಗಳಿರುವ ನಗರಗಳಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಮಹಿಳೆಯರ ಒಲವು ಇನ್ನೂ ಬಲವಾಗಿ ಬೇರೂರಬೇಕಾಗಿದೆ.

ಸಹಕಾರ ಸಂಘಗಳ ಅತ್ಯುತ್ತಮ ಕಾರ್ಯನಿರ್ವಹಣೆಗೆ ಉತ್ತಮ ನಾಯಕತ್ವ ಅತ್ಯಗತ್ಯ. ಪರಿಣಾಮಕಾರಿ ನಾಯಕತ್ವ ದೊರೆತರೆ ದೊಡ್ಡ ಮೊಬಲಗುಗಳ ವಹಿವಾಟು ಹಾಗೂ ಹೆಚ್ಚು ಸಂಕೀರ್ಣವಾದ ಆಡಳಿತವನ್ನು ಸುಲಲಿತವಾಗಿ ನಡೆಸುವುದು ಸಾಧ್ಯವಾಗುತ್ತದೆ ಮಾತ್ರವಲ್ಲ ಅಂಥ ಸಹಕಾರ ಸಂಘ ಅಥವಾ ಬ್ಯಾಂಕಿನ ಕಾರ್ಯನಿರ್ವಾಹಕ ಪದಾಧಿಕಾರಿಗಳು ಕೇವಲ ಮಹಿಳೆಯರೇ ಆಗಿರುವಂತೆ ನೋಡಿಕೊಳ್ಳಬಹುದು. ಇಂಥ ಮುಖಂಡರ ಮೇಲೆ ಸಾಕಷ್ಟು ಜವಾಬ್ದಾರಿ ಒತ್ತಡಗಳು ಬೀಳುವುದು ಸಹಜ. ಆದರೆ ಅತಿ ಸಾಮಾನ್ಯ ಮಹಿಳೆಯರಲ್ಲಿರುವ ಅಸಾಧಾರಣ ಕೌಶಲ, ಹೊಸ ಅನ್ವೇಷಣಾ ದೃಷ್ಟಿಕೋನವನ್ನು ಗುರುತಿಸಿ ಎದುರಾಗಬಹುದಾದ ಸವಾಲು, ನಿರಾಶೆ ಹಾಗೂ ಪರಿಮಿತಿಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಸಂಘಟಿತರಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಅಂಥ ನಿರಂತರ ಕಾರ್ಯಪ್ರವೃತ್ತ ಜೀವನವನ್ನು ಒಪ್ಪಿಕೊಳ್ಳುವಂತೆ ಅವರಿಗೆ ಉತ್ಸಾಹ, ಬೆಂಬಲ ನೀಡುವುದು ತುಂಬಾ ಮಹತ್ತ್ವದ ಅಂಶಗಳೇ ಸರಿ. ಹೀಗೆ ಮಹಿಳೆಯರಲ್ಲಿ ಸ್ಪರ್ಧಾಮನೋಭಾವ, ಕ್ರಿಯಾಶೀಲತೆಯನ್ನುಂಟು ಮಾಡುವ ಅನುಭವಗಳು ದೊರೆತರೆ ಅವರು ಸಮುದಾಯ, ರಾಷ್ಟ್ರ ಹಾಗೂ ವಿಶ್ವಮಟ್ಟದಲ್ಲಿ ಉನ್ನತ ಸ್ಥಾನ, ಗೌರವ ಪಡೆಯಬಲ್ಲ ಮೌಲಿಕವಾದ ತತ್ತ್ವಗಳನ್ನು ಅನುಸರಿಸುವಂತಾಗುತ್ತದೆ. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸಹಕಾರ ಆಂದೋಲನದ ಯಶಸ್ಸಿಗೆ ಇದೇ ಮೂಲ ಕಾರಣವಾಗಿತ್ತು. ಆದ್ದರಿಂದ ಸಹಕಾರ ಸಂಘಗಳು ಮಹಿಳೆಯರಿಗೆ ಕೇವಲ ಸ್ವಾವಲಂಬನೆ, ಆರ್ಥಿಕ ಬೆಂಬಲ, ಅವಶ್ಯಕತೆಗಳನ್ನು ಭರಿಸುವ ನೆರವಿನ ಕಾರ್ಯವನ್ನು ಮಾಡವುದಷ್ಟೇ ಅಲ್ಲ ಮಹಿಳೆಯರು ತಮ್ಮ ಜೀವನಕ್ಕೆ ಸಂಬಂಧಿಸಿದ ಹಾಗೂ ತಾವು ಬದುಕುತ್ತಿರುವ ಸಮಾಜದಲ್ಲಿನ ಇನ್ನಿತರ ಮಹಿಳೆಯರ

ಸಮಸ್ಯೆಗಳಿಗೆ ಪರಿಣಾಮಕಾರಿಯಾದ ಅಭಿವ್ಯಕ್ತಿ, ಸಂವಹನ ಶಕ್ತಿ ನೀಡುವ ಹಾಗೂ ಯಶಸ್ವಿ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲು ಒಂದು ಅತ್ಯುತ್ತಮ ಮಾಧ್ಯಮವೂ ಆಗುತ್ತದೆ.

ಈ ಕ್ಷೇತ್ರದಲ್ಲಿ ಕಾರ್ಯನಿರತರಾದ ಮಹಿಳೆಯರಿಗೆ ಬದ್ಧತೆಯು(Commitment) ತಾನಾಗಿಯೇ ಉಂಟಾಗುವುದಲ್ಲದೆ ಅವರಿಗಾಗಿ ವಿಧಿಸುವಂತಾಗುವುದಿಲ್ಲ. ಆದ್ದರಿಂದಲೇ ಅವರ ಶಕ್ತಿ, ಬೌದ್ಧಿಕತೆ, ಹಾಗೂ ಅನುಭವಗಳು ಅವರ ಅಂತಸ್ತನ್ನು ಉನ್ನತಿಗೇರಿಸಲೂ ಕೂಡ ಕಾರಣವಾಗುತ್ತವೆ. ತಾವೇ ಸಂಘಟಿತರಾಗಿ ರೂಪಿಸಿ ಬೆಳೆಸುವ ಸಹಕಾರ ಸಂಘ ಮಹಿಳೆಯರ ಶಕ್ತಿಸಾಮರ್ಥ್ಯ, ಸಂಘಟನಾ ಚಾತುರ್ಯವನ್ನು ಪ್ರದರ್ಶಿಸುವ ಅನೇಕ ಅವಕಾಶಗಳನ್ನು ಸೃಜಿಸುತ್ತದೆ ಮಾತ್ರವಲ್ಲ ಇತರರಿಗೆ ಅಡಚಣೆಯಾಗದಂತೆ ಹೊಸ ಹೊಸ ಸಾಧನೆಯ ಮಾರ್ಗಗಳನ್ನು, ವಿಸ್ತರಣಾ ಯೋಜನೆಗಳನ್ನು ಕೈಗೊಳ್ಳಲು ಪ್ರಯೋಗಗಳನ್ನು ನಡೆಸಲು ಸಾಧನ ಸಾಮಗ್ರಿಗಳನ್ನು ವಾಹಕಗಳನ್ನು ಒದಗಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾದ ಸಂಗತಿಯೆಂದರೆ ತಮಗೆ ದೊರೆತ ಯಶಸ್ಸು ಅಥವಾ ಲಾಭಗಳಿಂದ ಯಾವುದೇ ಸಹಕಾರ ಸಂಸ್ಥೆ ಅಲ್ಲಿಗೆ ತಮ್ಮ ಗುರಿ ಸಾಧನೆಯಾಯಿತೆಂದು ಕೈ ಕಟ್ಟಿಕುಳಿತುಬಿಡಲು ಸಾಧ್ಯವೇ ಇಲ್ಲ. ಆದ್ದರಿಂದ ಅವರ ಧ್ಯೆಯವಾಕ್ಯ "ನಾವು ಇಷ್ಟು ದೂರ ಯಶಸ್ವಿಯಾಗಿ ಕ್ರಮಿಸಿದ್ದೇವೆ ಆದರೆ ಆ ಸಾಧನೆಯ ದಾರಿ ಇನ್ನೂ ಸಾಕಷ್ಟು ದೂರದಲ್ಲಿದೆ" ಎಂಬುದಾಗಿರಬೇಕು. ಒಮ್ಮೆ ಆಲಸ್ಯದಿಂದ ಅಥವಾ ಯಶಸ್ಸಿನ ಹಮ್ಮಿನಿಂದ ಕಾರ್ಯತತ್ಪರತೆಯಲ್ಲಿ ಏರುಪೇರುಂಟಾದರೆ ಅವರು ಕೈಗೊಂಡ ಕ್ರಮಗಳು, ಯೋಜನೆಗಳು, ದೃಷ್ಟಿಕೋನ, ಜನರ ಪ್ರತಿಸ್ಪಂದನೆ ಎಲ್ಲವೂ ಸ್ಥಗಿತಗೊಂಡು ಕ್ರಮೇಣ ಸದಸ್ಯರನ್ನೂ ಕಳೆದುಕೊಂಡು ರೋಗಗ್ರಸ್ತವಾಗಿ ಮುಚ್ಚಿಹೋಗುತ್ತವೆ. ಎಂದರೆ ನಿತ್ಯ ಚಲನಶೀಲವಾಗದಿದ್ದರೆ ಮಹಿಳೆಯರ ಬಾಳಿಗೆ, ಸಮಾಜದಲ್ಲಿನ ಅವರ ಸ್ಥಾನಮಾನಕ್ಕೆ ಆಧಾರವಾಗುವ ಸ್ವಾವಲಂಬನೆಯ ಬೇರು ಆಳಕ್ಕಿಳಿಯದೆ ಸಹಕಾರ ಆಂದೋಲನ ನೆಲಕಚ್ಚುವಂತಾಗುತ್ತದೆ. ಅದಕ್ಕಾಗಿ ಮಹಿಳಾ ಸಬಲತೆಯ ಪ್ರೇರಕ ಶಕ್ತಿಯಾಗಬಲ್ಲ ಸಹಕಾರವು ಅತ್ಯಂತ ಅನಿವಾರ್ಯ ಆಂದೋಲನವಾಗಿ ರೂಪುಗೊಳ್ಳಬೇಕು.

ಮೊದಲನೇ ಪಾಂಚವಾರ್ಷಿಕ ಯೋಜನೆಯ ಮೊದಲನೇ ಅಧ್ಯಾಯದಲ್ಲಿ ಒಂದು ಮಹತ್ತ್ವದ ಕಂಡಿಕೆ ಈ ಮುಂದಿನಂತಿದೆ.

"ಅಂತಿಮವಾಗಿ, ಮಾನವ ವ್ಯಕ್ತಿತ್ತ್ವದ ಬೆಳವಣಿಗೆಯೇ ಅತ್ಯಂತ ಮಹತ್ತ್ವಪೂರ್ಣವಾಗುತ್ತದೆ. ಯೋಜನೆಯ ಭೌತಿಕ ಬಂಡವಾಳ ಹೂಡಿಕೆಯೇ ಮುಖ್ಯವಾಗಿದ್ದರೂ, ಅದಕ್ಕಿಂತಲೂ ಪ್ರಮುಖವಾದುದು ವ್ಯಕ್ತಿತ್ವದಲ್ಲಿ ಹೂಡುವ ಬಂಡವಾಳ. ಇಂದು ಭಾರತೀಯರು ತಮ್ಮೆಲ್ಲ ಹೊಣೆಗಾರಿಕೆ ಹಾಗೂ ಸಮಸ್ಯೆಗಳನ್ನು ಹೊತ್ತುಕೊಂಡು ಹೊಸದಾಗಿ ನಿರ್ಮಾಣವಾಗಬೇಕಾಗಿರುವ ಹೊಸ ಪ್ರಪಂಚದ ಹೊಸ್ತಿಲಿನಲ್ಲಿ ಆಸೆಗಣ್ಣಿನಿಂದ ನಿಂತಿದ್ದಾರೆ.[೬] ಆದ್ದರಿಂದ ಮಹಿಳಾ ಸಹಕಾರ ಕ್ಷೇತ್ರದ ಯಶಸ್ಸಿನ ಇತಿಹಾಸ ಮಹಿಳೆಯರ

ವೈಯಕ್ತಿಕ ಸ್ವಾವಲಂಬನೆಯನ್ನು ಅವರ ಸಾಮಾಜಿಕ ಉನ್ನತಿಯನ್ನು ಒಳಗೊಳ್ಳುತ್ತದೆ ಎಂದು ಖಂಡಿತವಾಗಿಯೂ ಹೇಳಬಹುದು. ಈ ಹಿನ್ನೆಲೆಯಲ್ಲಿ ಮಹಿಳಾ ಸಹಕಾರಿಗಳ ತರಬೇತಿಗಾಗಿ ಸರ್ಕಾರ ಹಾಗೂ ಇತರ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಬಗ್ಗೆ ಗಮನ ಹರಿಸಬಹುದು.

ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ನಿಯಮಿತ : ಇದು ೧೯೯೨ರ ನವೆಂಬರ್ ತಿಂಗಳಲ್ಲಿ ನೋಂದಾಯಿತವಾಗಿ ೧೯೯೩ ಜನವರಿ ತಿಂಗಳಿಂದ ಕಾರ್ಯಾರಂಭ ಮಾಡಿದೆ. ಈ ಬಗೆಯ ಸಂಸ್ಥೆಗಳಲ್ಲಿ ದೇಶದಲ್ಲೇ ಇದು ಮೂರನೆಯದಾಗಿದ್ದು, ಇದರ ಉದ್ದೇಶಗಳು ಕೆಳಗಿನಂತಿವೆ:

೧. ಜಿಲ್ಲಾ, ಬ್ಲಾಕ್ ಮತ್ತು ಪ್ರಾಥಮಿಕ ಹಂತದ ಮಹಿಳಾ ಸಹಕಾರ ಸಂಘಗಳನ್ನು ಸಂಘಟಿಸುವುದು, ಅಭಿವೃದ್ಧಿಪಡಿಸುವುದು ಇತ್ಯಾದಿ.

೨. ಜಿಲ್ಲಾ ಮಟ್ಟದ ಮಹಿಳಾ ಸಹಕಾರ ಸಂಘಗಳ ಸದಸ್ಯರ ಆರ್ಥಿಕ ಮಟ್ಟವನ್ನು ಸುಧಾರಿಸಲು ಕ್ರಮ ಕೈಗೊಳ್ಳುವುದು ಮತ್ತು ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಯನ್ನು ಉತ್ತಮಪಡಿಸುವುದು.

೩. ಮಹಿಳಾ ಸಹಕಾರ ಸಂಘಗಳ ಸದಸ್ಯರು ಉತ್ಪಾದಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವುದು.

೪. ಮಹಿಳಾ ಸಹಕಾರ ಸಂಘಗಳ ಚಟುವಟಿಕೆಗಳಿಗೆ ಪ್ರಚಾರ ನೀಡುವುದು.

೫. ಸಭೆ, ಸಮ್ಮೇಳನ, ವಿಚಾರಗೋಷ್ಠಿಗಳನ್ನು ಕರೆದು ಮಹಿಳಾ ಸಹಕಾರ ಸಂಘಗಳ ಕಾರ್ಯಕರ್ತರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ವೇದಿಕೆಯನ್ನು ನಿರ್ಮಿಸುವುದು ಇತ್ಯಾದಿ.

ಈ ಸಂಸ್ಥೆಯ ಸದಸ್ಯತ್ವವನ್ನು ಜಿಲ್ಲಾ ಮಟ್ಟದ ಮಹಿಳಾ ಸಹಕಾರಿ ವಿವಿಧೋದ್ದೇಶ ಸಹಕಾರ ಸಂಘಗಳಿಗೆ ಹಾಗೂ ತಾಲ್ಲೂಕು ಮಟ್ಟಕ್ಕಿಂತ ಹೆಚ್ಚಾಗಿದ್ದು ರಾಜ್ಯ ಮಟ್ಟದವರೆಗೆ ಕಾರ್ಯವ್ಯಾಪ್ತಿಯಿರುವ ಮಹಿಳಾ ಸಂಘಗಳಿಗೆ ನೀಡಲಾಗುತ್ತದೆ. ಈ ಸಂಸ್ಥೆಯು ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದ್ದು, ಅವುಗಳಲ್ಲಿ ಮಹಿಳೆಯರು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ವಸ್ತು ಪ್ರದರ್ಶನ ಏರ್ಪಾಡು ಮಾಡುವುದು. ಇತರ ಸಂಸ್ಥೆಗಳು ನಡೆಸುವ ವಸ್ತುಪ್ರದರ್ಶನದಲ್ಲೂ ಭಾಗವಹಿಸುವುದು. ಸ್ವಸಹಾಯ ಗುಂಪುಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಗಳಲ್ಲಿ ಅಧ್ಯಯನ ಪ್ರವಾಸವನ್ನು ನಿರ್ದೇಶಕರುಗಳಿಗಾಗಿ ಏರ್ಪಡಿಸುವುದು. ಮಂಡಲವು ಮಹಿಳಾ ಸಹಕಾರ ಸಂಘಗಳನ್ನು ಆರ್ಥಿಕವಾಗಿ ಸದೃಢಪಡಿಸಿ ತನ್ಮೂಲಕ ಆ ಸಂಘಗಳ ಕಾರ್ಯಚಟುವಟಿಕೆಗಳನ್ನು ಹೆಚ್ಚಿನ ರೀತಿಯಲ್ಲಿ ನಿರ್ವಹಿಸಲು ಸಾಧ್ಯವಾಗುವಂತೆ ಮಾಡಲು ಷೇರು ರೂಪದಲ್ಲಿ ನೆರವು ನೀಡುತ್ತದೆ. ಅಲ್ಲದೆ, ಸಹಕಾರಕ್ಕೆ ಮೀಸಲಾದ,

'ಸಹಕಾರ' ಎಂಬ ವಾರಪತ್ರಿಕೆಯನ್ನು ೧೯೬೯ರಿಂದ ಪ್ರಕಟಿಸುತ್ತಿದ್ದು, ಅಸಂಖ್ಯಾತ ಚಂದಾದಾರರನ್ನು ಹೊಂದಿದೆ.

ಸಹಕಾರ ಇಲಾಖೆಯು ಸಹಕಾರ ಆಂದೋಲನಕ್ಕೆ ಎಲ್ಲ ಬಗೆಯ ನೆರವನ್ನೂ ನೀಡುತ್ತಿದೆ. ಕೃಷಿಪತ್ತು ನೀಡಿಕೆ, ಮಾರಾಟ, ಬಳಕೆ, ಔದ್ಯೋಗಿಕ, ರೇಷ್ಮೆ, ಮೀನುಗಾರಿಕೆ, ಗೃಹನಿರ್ಮಾಣ, ಉಗ್ರಾಣ, ತೋಟಗಾರಿಕೆ ಇತ್ಯಾದಿ ಎಲ್ಲ ಅಭಿವೃದ್ಧಿ ವಲಯಗಳಲ್ಲಿ ವ್ಯಾಪಕವಾಗಿ ವಿಸ್ತರಿಸಿದೆ. ಸಾಮಾನ್ಯ ಜನತೆಯ ಬಡತನ ನಿರ್ಮೂಲನೆ, ಸಮಾಜದ ದುರ್ಬಲ ವರ್ಗದ ಜನತೆಯ ಏಳಿಗೆ, ಇಲಾಖೆಯ ಪ್ರಮುಖ ಉದ್ದೇಶಗಳಾಗಿವೆ. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರು(ರಿಜಿಸ್ಟ್ರಾರ್) ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಸಹಕಾರ ಚಳವಳಿಯಲ್ಲಿ ವಿವಿಧ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿರುವ ಸಹಕಾರ ಸಂಘಗಳ ಪರಿಣಾಮಕಾರಿ ಮೇಲ್ವಿಚಾರಣೆ ಹಾಗೂ ನಿಯಂತ್ರಣ ಹೊಂದಲು ನಿಬಂಧಕರ ಶಾಸನಬದ್ಧ ಅಧಿಕಾರವನ್ನು ಕೈಮಗ್ಗ ಹಾಗೂ ವಿದ್ಯುತ್ ಮಟ್ಟದ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಜವಳಿ ಆಯುಕ್ತರಿಗೆ, ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಸಕ್ಕರೆ ನಿರ್ದೇಶಕರಿಗೆ, ಔದ್ಯೋಗಿಕ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಅಪರ ನಿರ್ದೇಶಕರು, ವಾಣಿಜ್ಯ ಹಾಗು ಕೈಗಾರಿಕೆ ಮತ್ತು ಪದನಿಮಿತ್ತ ಅಪಾರ ನಿಬಂಧಕರು, ಔದ್ಯೋಗಿಕ ಸಹಕಾರ ಸಂಘಗಳು ಮತ್ತು ಮೀನುಗಾರಿಕೆ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಜಂಟಿ ನಿರ್ದೇಶಕರು ಮೀನುಗಾರಿಕೆ ಇಲಾಖೆ ಇವರಿಗೆ ಪ್ರದತ್ತ ಮಾಡಲಾಗಿದ್ದು, ಅಧಿಕಾರ ವಿಕೇಂದ್ರೀಕರಣ ಮಾಡಲಾಗಿದೆ. ಈ ಎಲ್ಲ ವಿವರಗಳನ್ನು ಮಹಿಳಾ ಸಹಕಾರಿಗಳ ಮಾಹಿತಿಗಾಗಿ ನೀಡಲಾಗಿದೆ.

ಮಹಿಳಾ ಸಹಕಾರಿಗಳ ತರಬೇತಿಗಾಗಿ ತರಬೇತಿ ಸಂಸ್ಥೆಯ ಮೂಲಕ ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನದಲ್ಲಿ, ಪರಿಣತರಿಂದ ಭಾಷಣ, ಚರ್ಚೆ ಸಮೂಹ ಚರ್ಚೆಗಳನ್ನು ಏರ್ಪಡಿಸಲಾಗುತ್ತದೆ. ಒಟ್ಟಿನಲ್ಲಿ ಸಹಕಾರ ಸಂಘದಲ್ಲಿ ಮುಖಂಡತ್ವ ಉತ್ತಮವಾಗಿದ್ದರೆ ಆ ಸಂಘ ಯಶಸ್ವಿಯಾಗುತ್ತದೆ. ಅವರು ನಿಷ್ಠಾವಂತರಾಗಿರಬೇಕು. ಸಹಕಾರ ಸಂಘ ಸಾರ್ವಜನಿಕ ಸಂಘವಾಗಿ ಎಲ್ಲ ಸದಸ್ಯರಿಗೂ ಅನುಕೂಲ ಆಗಬೇಕು. ಮುಖಂಡರಾದವರು "ಇವರೆಲ್ಲರ ಶ್ರಮವನ್ನು ತಾನು ತೆಗೆದುಕೊಳ್ಳಬೇಕು, ನನ್ನನ್ನು ನಾಯಕ/ಕಿ ಯನ್ನಾಗಿ ಮಾಡಿದ್ದಾರೆ, ನನ್ನ ನಾಯಕತ್ವದಲ್ಲಿ ಇವರೆಲ್ಲರನ್ನೂ ಮುಂದಕ್ಕೆ ಕರೆದು ಕೊಂಡು ಹೋಗಬೇಕು ಎಂಬ ನಿಶ್ಚಿತ ಭಾವನೆ ಇರಬೇಕು. ಧುರೀಣರು ರಾಜಕಾರಣಕ್ಕೆ ಪ್ರವೇಶಿಸಲು ಸಹಕಾರ ಸಂಘವೇ ಮೂಲಕಾರಣ. ಯಾರೇ ರಾಜಕೀಯವ್ಯಕ್ತಿಯ ಹಿನ್ನೆಲೆಯಲ್ಲಿ ಸಹಕಾರಿ ಚಳವಳಿ ಇರುತ್ತದೆ. ಇದಕ್ಕೆ ಕಾರಣವೆಂದರೆ, ಜನರ ನೇರಸಂಪರ್ಕ ಬರುತ್ತದೆ. ಉದಾಹರಣೆಗೆ, ಒಂದು ಪತ್ತಿನ ಸಹಕಾರ ಸಂಘವನ್ನು ನೋಡೋಣ. ಅದು ಹೆಸರಿಗೆ ತಕ್ಕಂತೆ ಸಾಲದ(credit) ಸಹಕಾರ ಸಂಘ.

ಸದಸ್ಯರಿಗೆ ಅಲ್ಲಿಂದ ಸಾಲವನ್ನು ಮುಖಂಡ ಕೊಡಿಸುತ್ತಾನೆ. ಆ ಗ್ರಾಮೀಣ ಜನರಿಗೆ ಮುಖಂಡನೇ ಸ್ವತಃ ಹಣವನ್ನು ಕೊಟ್ಟಿದ್ದಾನೆ ಎಂದು ತಿಳಿಯುವಷ್ಟು' ಅಮಾಯಕರಾಗಿರುತ್ತಾರೆ. ಅವರು ಹಣವನ್ನು ತಾನು ಕೊಟ್ಟಿಲ್ಲ, ಸಾರ್ವಜನಿಕರಿಂದ ಪಡೆದ ಷೇರು ಹಣವನ್ನು ಕೊಡುತ್ತಿದ್ದೇನೆ ಎಂಬ ಸಂಗತಿಯನ್ನು ಅಥವಾ ಆ ಬಗ್ಗೆ ಮಾಹಿತಿಯನ್ನು ಸರ್ವ ಸದಸ್ಯರ ಸಭೆಯಲ್ಲಿ ಸದಸ್ಯರಿಗೆ ಪೂರ್ಣ ಮಂದಟ್ಟಾಗುವಂತೆ ತಿಳಿಸಬೇಕು. ಅವರಲ್ಲಿ ಜಾಗೃತಿ ಮೂಡಿಸಿ ತಮ್ಮ ಹಕ್ಕು ಬಾಧ್ಯತೆಗಳನ್ನು, ಕರ್ತವ್ಯಗಳನ್ನು, ಸಹಕಾರ ಸಂಘದ ನಿಯಮಗಳು, ಕಾರ್ಯನಿರ್ವಹಣೆ ಎಲ್ಲದರ ಬಗ್ಗೆ ವಿವರ ನೀಡಿ ಅವರಿಗೆ ತರಬೇತಿ ನೀಡಬೇಕು. ಆಗ ಮಾತ್ರವೇ ಮುಖಂಡರು ನಿಜವಾದ ನಾಯಕ/ನಾಯಕಿ ಆಗುತ್ತಾರೆ. ಬದಲಾಗಿ ತಾನೇ ಸಾಲ ನೀಡುವಂತೆ ಧೋರಣೆಯಿಂದ, ಸದಸ್ಯರನ್ನು ಗೌರವದಿಂದ ಕಾಣದೆ ತಪ್ಪು ಮಾಹಿತಿ, ಹಾರಿಕೆ ಉತ್ತರ ನೀಡಿದರೆ, ತಾನೇ ನಾಯಕ ಎಂಬಂತೆ ಅವರನ್ನು ದನಿಯೆತ್ತದಂತೆ ಮಾಡಿದರೆ ಅವನು ಯಶಸ್ವಿಯೂ ಆಗಲಾರ ಜೊತೆಗೆ ಸಂಘವೂ ಮುಚ್ಚುವಂತಾಗುತ್ತದೆ.

ಸಹಕಾರ ಸಂಘಗಳ ಮಹಿಳಾ ಮಹಾಮಂಡಲದ ಅಧ್ಯಕ್ಷಿಣಿಯಾಗಿರುವ ಶ್ರೀಮತಿ ಲೀಲಾದೇವಿ ಆರ್ .ಪ್ರಸಾದ್ ಅವರು ಮಹಿಳಾ ಉದ್ಯಮಿಗಳ ಸಹಕಾರ ಸಂಘದ ಮಾರುಕಟ್ಟೆ ವ್ಯವಸ್ಥೆಗೆ ಬಹುವಾಗಿ ಶ್ರಮಿಸಿದ್ದಾರೆ. ನಿಶ್ಚಿತವಾದ ಕಟ್ಟಡವಿರುವುದರಿಂದ ಮಹಿಳಾ ಉದ್ಯಮಿಗಳು ಸೇವಾಶುಲ್ಕ ನೀಡಿ ಇಲ್ಲಿ ವ್ಯಾಪಾರಗಳನ್ನು ನಡೆಸಲು ಕೌಂಟರುಗಳಿವೆ. ಹಣದ ನೆರವು ದೊರೆಯುವಂತೆ ಯೋಜಿಸಲಾಗಿದ್ದು, ಮಹಿಳಾ ಉದ್ಯಮಿಗಳ ಸಂಘಕ್ಕೆ ಸದಸ್ಯರಾದವರಿಗೆ, ಹಣದ ವ್ಯವಸ್ಥೆ ಮಾಡಲಾಗುತ್ತದೆ. ಚಾಲ್ತಿ ಬಂಡವಾಳ ಹೆಚ್ಚಾದಷ್ಟು ಉದ್ಯಮಿಗಳಿಗೆ ಅನುಕೂಲಗಳೂ ಹೆಚ್ಚಾಗುತ್ತದೆ. ತರಬೇತಿ, ಕಚ್ಚಾವಸ್ತು ಸರಬರಾಜು, ಮಾರುಕಟ್ಟೆ ಎಲ್ಲವೂ ಒಂದೆಡೆಯಲ್ಲಿಯೇ ಲಭ್ಯವಿರುತ್ತದೆ. ಹೀಗಾಗಿ ಬೆಂಗಳೂರಿನಿಂದ ಹೊರಗೆ ಎಂದರೆ ಹುಬ್ಬಳ್ಳಿ, ಗುಲ್ಬರ್ಗ, ಬೀದರ್ ಮುಂತಾದೆಡೆಗಳಿಂದ ಮಹಿಳಾ ಉದ್ಯಮಿಗಳು ವ್ಯವಹಾರ ನಡೆಸುತ್ತಿದ್ದಾರೆ. ರೊಟ್ಟಿಯನ್ನು ಕೂಡ ಸರಬರಾಜು ಮಾಡಲಾಗುತ್ತದೆ. ಬಾಳಕಕ್ಕೆ(ಬ್ಯಾಡಗಿ ಮೆಣಸಿನಕಾಯಿ) 'ಅಂತಾರಾಷ್ಟ್ರೀಯ ಮಾರ್ಕೆಟ್' ಸಿಗುತ್ತಿದೆ. ಈ ಸಹಕಾರ ಸಂಘಗಳನ್ನು ವಿವಿಧೋದ್ದೇಶ ಸಹಕಾರ ಸಂಘಗಳೆಂದು ರಚಿಸಲಾಯಿತು. ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ವಿವಿಧೋದ್ದೇಶ ಸಹಕಾರ ಸಂಘಗಳಿರಬೇಕೆಂದು ಯೋಚಿಸಲಾಗಿತ್ತು. ಮೂರು ಬಗೆಯ ಹಂತಗಳು ಎಂದರೆ ತಾಲೂಕು ಮಟ್ಟ, ಜಿಲ್ಲಾ ಮಟ್ಟ ಹಾಗೂ ರಾಜ್ಯ ಮಟ್ಟದವರಲ್ಲಿ ಪರಸ್ಪರ ಸದಸ್ಯತ್ವ, ಸಂಪರ್ಕ, ಹೊಂದಾಣಿಕೆ ಇರಬೇಕು. ವಿವಿಧೋದ್ದೇಶ ಸಹಕಾರ ಸಂಘಗಳು ಮಾರುಕಟ್ಟೆ ವ್ಯವಸ್ಥೆ ಮಾಡುತ್ತವೆ. ಅಷ್ಟೇ ಅಲ್ಲ ಆಹಾರಧಾನ್ಯಗಳಾದ ಅಕ್ಕಿ, ಗೋಧಿ, ಬೇಳೆ ಕಾಳು ಮುಂತಾದವುಗಳನ್ನು ಸರಬರಾಜು ಮಾಡುವುದು, ಅವುಗಳನ್ನು ಶುದ್ಧಗೊಳಿಸುವುದು, ಪ್ಯಾಕ್ ಮಾಡುವುದು ಮುಂತಾದವುಗಳನ್ನೂ ಮಾಡುತ್ತವೆ. ಇದರಿಂದ

ಸಾಕಷ್ಟು ಜನರಿಗೆ ಉದ್ಯೋಗಾವಕಾಶಗಳು ದೊರೆಯುತ್ತವೆ. ಇಲ್ಲಿ ಮಧ್ಯವರ್ತಿಗಳನ್ನು ನಂಬುವ ಸಾಧ್ಯತೆಗಳಿರುತ್ತವೆ. ಕೆಲವೊಮ್ಮೆ ಸಗಟು ಖರೀದಿಯಲ್ಲಿ ಇಂಥವರು ಕಮಿಷನ್ ಹಾಗೂ ಲಾಭಬಡುಕ ತನದಿಂದ ವಂಚಿಸುವುದುಂಟು. ಇಂಥ ಹೊತ್ತಿನಲ್ಲಿ ಮುಖಂಡರು ಹಾಗೂ ಸದಸ್ಯರು ತುಂಬಾ ಎಚ್ಚರಿಕೆ ವಹಿಸಬೇಕಾಗುತ್ತದೆ. ಮಹಿಳೆಯನ್ನು ಕೇವಲ ಒಬ್ಬ ಸದಸ್ಯಳನ್ನಾಗಿ ಇರಿಸಿಕೊಂಡು ಪುರುಷರು ಸಹಕಾರ ಸಂಘಗಳನ್ನು ನಡೆಸುತ್ತಿದ್ದ ಅಥವಾ ನಡೆಸುತ್ತಿರುವುದನ್ನು ನಾವು ಗಮನಿಸಿದ್ದೇವೆ. ಕೇವಲ ಮಹಿಳಾ ಪ್ರಾತಿನಿಧ್ಯವಿರಬೇಕೆಂಬ ಕಾರಣಕ್ಕೆ ಈ ಅವಕಾಶ ಮಹಿಳೆಗೆ ನೀಡಲಾಗಿತ್ತು. ಆದರೆ ಅಲ್ಲಿ ಆಕೆಗೆ ಅಭಿಪ್ರಾಯ ನೀಡಲು, ಅಧಿಕಾರ, ನಿಯಂತ್ರಣ ಮತ್ತಾವುದೂ ಇರಲಿಲ್ಲ. ಮಹಿಳೆಯರ ಸಹಕಾರ ಸಂಘ ಅಥವಾ ಬ್ಯಾಂಕುಗಳಲ್ಲಿ ಎಲ್ಲವೂ ಮಹಿಳೆಯರ ನಿಯಂತ್ರಣದಲ್ಲಿರುತ್ತವೆ. ಮಹಿಳೆಯರು ಪರಸ್ಪರ ಹೊಂದಿಕೊಂಡು ಹೋಗುವುದಿಲ್ಲ. ಅಸೂಯೆ, ಚಾಡಿಮಾತು, ಪೈಪೋಟಿ, ಗುಂಪುಗಾರಿಕೆ ಇತ್ಯಾದಿ ದೂರುಗಳಿಂದಾಗಿ ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಗಾದೆಯನ್ನು ಇಂಥ ಎಡೆಗಳಲ್ಲೂ ಅನ್ವಯಿಸುತ್ತಾರೆ. ಈ ಬಗ್ಗೆ ಅನೇಕ ಬಾರಿ ಮುಖಂಡತ್ವ ತರಬೇತಿ ನೀಡಿ ಆ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲ ಶ್ರೀಮತಿ ನಾಗರತ್ನರಾವ್ ಹೀಗೆ ಹೇಳುತ್ತಾರೆ.[೮] "ಮಹಿಳೆಯರಲ್ಲಿ ವೀಕನೆಸ್ ಏನಪ್ಪಾ ಅಂದರೆ, ಏನೋ ಒಂದು ಮಾತುಕತೆ ಬರತ್ತೆ ಸಂಸ್ಥೆಯಲ್ಲಿ ಅದನ್ನೇ ದೊಡ್ಡದಾಗಿ ಮಾಡಿಕೊಂಡು ಎನಿಮಿಟಿ ಇಟ್ಕೊಂಡು ಬಿಡ್ತಾರೆ. ಅದೇ ಪುರುಷರಲ್ಲೂ ಬರುತ್ತೆ, ಮೀಟಿಂಗ್‌ನಲ್ಲಿ ಮಾತಾಡಿಬಿಟ್ಟು ನಂತರ ಭುಜದ ಮೇಲೆ ಕೈಹಾಕ್ಕೊಂಡು ಹೊರಟು ಹೋಗ್ತಾರೆ. ನಮ್ಮ ಮಹಿಳೆಯರು ಹಾಗೆ ಮಾಡೋಲ್ಲ. ಯಾರೂ ಪರ್ಮನೆಂಟ್ ಆಗಿ ಅಧ್ಯಕ್ಷೆ ಆಗಿರೋಕೆ ಸಾಧ್ಯವಿಲ್ಲ. ನಮ್ಮ ನಾಯಕತ್ವದಲ್ಲಿ ಇನ್ನೂ ಐದು ಜನರನ್ನು ಬೆಳೆಸುವ ದೊಡ್ಡಗುಣ ಇರಬೇಕು. ಒಬ್ಬಳು ಅಧ್ಯಕ್ಷಳಾಗಿ ಇಳಿದುಬಿಟ್ಟರೆ ಈಗ ನಾನು ಅಧ್ಯಕ್ಷಳಲ್ಲ, ಅವಳು ಏನು ಮಾಡ್ತಾಳೋ ನೋಡ್ತೀನಿ ಅನ್ನೋ ಬುದ್ಧಿ ಇರಕೂಡದು. ಅವಳಿಗೆ ಸಹಾಯ, ಉತ್ತೇಜನ ಎಲ್ಲರೂ ಕೊಡಬೇಕು. ಆ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಅಸೂಯೆ ಜಾಸ್ತಿಯಿರುತ್ತದೆ. ಮಹಿಳೆಯರು ಕತ್ತಿ ಮಸೆಯುವುದನ್ನು ಬಿಡಬೇಕು. ಐದು ಬೆರಳೂ ಒಂದೇ ಸಮ ಇರಲ್ಲ. ಸಂಸ್ಥೆಯಲ್ಲಿ ಕೂತುಕೊಂಡಾಗ, ಚರ್ಚೆ ಮಾಡಿದಾಗ ಭಿನ್ನಾಭಿಪ್ರಾಯ ಬರಬಹುದು. ಅದನ್ನು ಮೀಟಿಂಗ್‌ನಲ್ಲೇ ಬಿಡಬೇಕು. ಅದನ್ನು ಹೊರಗಡೆ ಸಾಧಿಸಬಾರದು. ಆ ಒಂದು ದೊಡ್ಡತನವನ್ನು ನಮ್ಮ ಮಹಿಳೆಯರು ಬೆಳೆಸಿಕೊಳ್ಳಬೇಕು ಅಂತ ನನಗನಿಸುತ್ತೆ." ತರಬೇತಿ ನೀಡುವಂಥವರಿಗೂ ಆಸಕ್ತಿಯಿರಬೇಕು. ನಿವೃತ್ತ ಸಂಪನ್ಮೂಲ ವ್ಯಕ್ತಿಗಳನ್ನು ಕಾಂಟ್ರಾಕ್ಟ್ ಆಧಾರದ ಮೇಲೆ ನೇಮಿಸಿಕೊಂಡು ತಜ್ಞರ ಅನುಭವವನ್ನು ಬಳಸಿಕೊಳ್ಳಬೇಕು. ಈ ಹಿರಿಯ ಸಹಕಾರಿ ಧುರೀಣೆಯ ಮಾತು ನಿಜವಾಗಿಯೂ ಅರ್ಥಗರ್ಭಿತವಾಗಿದೆ. ಮಾತ್ರವಲ್ಲ, ಅವರ ಅಭಿಪ್ರಾಯ, ಸಲಹೆ ಕೇವಲ ಮಹಿಳೆಯರಿಗೆ ಮಾತ್ರವಲ್ಲ, ಒಟ್ಟಾರೆ ಸಹಕಾರ ಕ್ಷೇತ್ರದಲ್ಲಿರುವ ಪುರುಷರಿಗೆ ಕೂಡ ಮನನೀಯವಾಗಿದೆ.

ಸಾಮಾನ್ಯವಾಗಿ ಸಹಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಚರ್ಚಿಸುವಾಗ ಕಾರ್ಯಸ್ಥಗಿತಗೊಂಡಿರುವ (Defunct societies) ಸಹಕಾರ ಸಂಘಗಳು, ನಿಧಿಗಳ ದುರುಪಯೋಗ, ಅಧಿಕನಷ್ಟ, ಕೆಲವು ಕುಟುಂಬ ಸದಸ್ಯರು ಇಡೀ ಸಂಸ್ಥೆಯನ್ನು ಹಿಡಿತದಲ್ಲಿಟ್ಟಿಕೊಳ್ಳುವುದು ಮುಂತಾದ ಅವಹೇಳನಕಾರಿ ಅಭಿಪ್ರಾಯಗಳು ಕೇಳಿಬರುವುದುಂಟು. ಇದನ್ನು ಅಲ್ಲಗಳೆಯಲಾಗದಿದ್ದರೂ ಒಟ್ಟಾರೆ ಸಹಕಾರ ಕ್ಷೇತ್ರದ ಬಗ್ಗೆ ವಿಶೇಷವಾಗಿ ಉದ್ಯೋಗಾವಕಾಶ ಸೃಜನೆ, ಬಡತನ ನಿವಾರಣೆ, ಕೃಷಿ ಆಧಾರಿತ ಹಾಗೂ ಗ್ರಾಮೀಣ ಕಸಬುಗಳ ಅಭಿವೃದ್ಧಿ ಎಲ್ಲಕ್ಕಿಂತ ಹೆಚ್ಚಾಗಿ ರೈತಾಪಿ ಸಮುದಾಯ(ಮಹಿಳೆಯರೂ ಸೇರಿ) ಬೆಳೆದ ಉತ್ಪಾದಿಸಿದ ಬೆಳೆಗಳಿಗೆ, ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಒದಗುವಂತೆ ಮಾಡುವಲ್ಲಿ ಸಹಕಾರಿಗಳು ಅಭಿವೃದ್ಧಿ ಪ್ರಕ್ರಿಯೆಗೆ ನೀಡಿರುವ ಮಹತ್ತ್ವದ ಕೊಡುಗೆಯ ಬಗ್ಗೆ ಸಾಕಷ್ಟು ಅಧ್ಯಯನವೂ ನಡೆದಿಲ್ಲ. ಹಾಗೂ ಇದರಲ್ಲಿ ಮಹಿಳಾ ಸಹಕಾರಿಗಳ ಕ್ಷಿಪ್ರ ಪ್ರಗತಿಯ ಬಗ್ಗೆ ಯೋಜನಾ ಆಯೋಗವು ಹೆಚ್ಚಿನ ಗಮನವನ್ನು ಹರಿಸದಿರುವುದನ್ನು ಕಾಣಬಹುದು.

ಗಾಂಧೀಜಿಯವರ ಜೀವನಪರ್ಯಂತ ಅವರು ಸಂಗಾತಿಯಾಗಿದ್ದ ಕಾಕಾ ಸಾಹೇಬ್ ಕಾಲೇಲ್ಕರ್ ಅವರು ೧೯೬೮ರ ಅಕ್ಟೋಬರ್ ತಿಂಗಳಲ್ಲಿ 'ಮಹಾತ್ಮರ ಸಹಕಾರ ತತ್ತ್ವಗಳ' ಬಗ್ಗೆ ಮಾತನಾಡುತ್ತ ಹೀಗೆ ಹೇಳಿದರು' "ಪ್ರಸ್ತುತ ಒಂದು ಸಹಕಾರ ಸಂಘದ ಮುಖಂಡನೊಬ್ಬನನ್ನು ಅಥವಾ ಪದಾಧಿಕಾರಿಗಳನ್ನು ಆಡಳಿತ ಮಂಡಳಿಯಿಂದ ತೆಗೆದು ಹಾಕಿದರೆ, ಆ ವ್ಯಕ್ತಿ ಅಥವಾ ಆ ಗುಂಪು ಮೂಲ ಸಹಕಾರ ಸಂಘವನ್ನು ದುರ್ಬಲಗೊಳಿಸಿ ಮುಚ್ಚುವಂತೆ ಮಾಡಿ ಹೊಸದೊಂದು ಸಹಕಾರ ಸಂಘವನ್ನು ಪ್ರಾರಂಭಿಸುವ ಪ್ರಯತ್ನ ನಡೆಸುತ್ತದೆ. ಇದು ನೈಜ ಹಾಗೂ ಪ್ರಾಮಾಣಿಕನಾದ ಮುಖಂಡನು ಅನುಸರಿಸುವ ಕ್ರಮವಾಗಲಾರದು. ಗಾಂಧೀಜಿಯವರು ಇಂಥ ಸಂದರ್ಭಗಳಲ್ಲಿ ಈ ಮುಂದಿನಂತೆ ಸೂಚಿಸುತ್ತಿದ್ದರು ಎಂದರೆ :

೧. ಸರ್ಕಾರವು ಸಹಕಾರ ಆಂದೋಲನವನ್ನು ನಿಯಂತ್ರಿಸತಕ್ಕದ್ದಲ್ಲ; ಆದರೆ ಪ್ರಜಾಪ್ರಭುತ್ವದ ಸರ್ಕಾರ ವಾದ್ದರಿಂದ ಸಹಕಾರ ಸಂಘಕ್ಕೆ ಅದು ಧನಸಹಾಯ ಒದಗಿಸಬಹುದು.

೨. 'ಸ್ವಾಭಾವಿಕ ಮುಖಂಡ'ರಾದ ಹಾಗೂ 'ಸಾಂಸ್ಕೃತಿಕ ಧುರೀಣ'ರಾದ ನಾಯಕರು ಗುಂಪು ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು. ಈ ಮುಂಖಡರಿಗೆ ಸದಸ್ಯರು ಗೌರವ ನೀಡಬೇಕಲ್ಲದೆ, ಕಪಟಿಗಳು, ಢೋಂಗಿ ಮುಖಂಡರನ್ನು ಆಯ್ಕೆ ಮಾಡಬಾರದು. ಕಪಟಿಗಳಾದ ಮುಖಂಡರು ಸಹಕಾರ ಆಂದೋಲನದಲ್ಲಿ ಸ್ವಾರ್ಥಕ್ಕಾಗಿ ಭಾಗವಹಿಸುತ್ತಾರಲ್ಲದೆ ಅದರಲ್ಲಿ ನಂಬಿಕೆ ವಿಶ್ವಾಸದಿಂದಲ್ಲ. ಇಂಥವರು ಸೇರಿದರೆ ಬಹುಸಂಖ್ಯಾತ ಮುಗ್ಧ ಜನರ ಜೀವನವನ್ನು ಹಾನಿಗೀಡು ಮಾಡುತ್ತಾರೆ.

೩. ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸೂತ್ರಗಳನ್ನು ನಿಯಮಿಸುವ ಅಗತ್ಯವಿಲ್ಲ. ಸಹಕಾರ ತತ್ತ್ವದಲ್ಲಿ ನಂಬಿಕೆಯಿರುವ, ಅದರ ಬಗ್ಗೆ ವಿಶೇಷ ತಿಳಿವಳಿಕೆ ಹೊಂದಿರುವರು ಹಾಗೂ ಶ್ರದ್ಧೆಯ ಜೊತೆ ಉನ್ನತ ನೈತಿಕ ಮಟ್ಟದಲ್ಲಿರುವಂಥ ಮುಖಂಡರಿರಬೇಕು. ಈ ಕ್ಷೇತ್ರದಲ್ಲಿ ವಾಸ್ತವವಾಗಿ ದುಡಿಯುವಂಥ ಜನಸೇವಾ ಮನೋಭಾವವಿದ್ದು, ಸಮಾಜದಲ್ಲಿ ಸಾಮಾನ್ಯ ವ್ಯಕ್ತಿಗಳಂತೆ ಸರಳಜೀವನವನ್ನು ನಡೆಸುವವರಾಗಬೇಕು. ಇದು ಆದರ್ಶ ಸಹಕಾರಿ ಮುಖಂಡರ ಗುಣಗಳೆಂದು ನಾವು ಹೇಳಬಹುದು. ಆದರೆ ಇಂಥ ಮಾದರಿ ವ್ಯಕ್ತಿಗಳು ನಿಜಕ್ಕೂ ರಾಷ್ಟ್ರದ ಮಹಾನ್ ವ್ಯಕ್ತಿಗಳೇ ಸರಿ. ಈ ಎಲ್ಲ ವಿಶ್ಲೇಷಣೆಗಳ ಹಿನ್ನೆಲೆಯಲ್ಲಿ ಈಗಾಗಲೇ ಸಹಕಾರ ರಂಗದಲ್ಲಿ ಮೇಲು ಹಂತದಲ್ಲಿರುವ ಹಾಗೂ ಹೊಸ ಹೊಸ ಆಯಾಮಗಳತ್ತ ದೃಷ್ಟಿಹರಿಸುತ್ತಿರುವ ಪ್ರಮುಖ ಮಹಿಳಾ ಸಹಕಾರಸಂಘಗಳು ಹಾಗೂ ಬ್ಯಾಂಕುಗಳ ಯಶಸ್ವಿ ಕಾರ್ಯನಿರ್ವಹಣೆಯ ಬಗ್ಗೆ ಗಮನಹಸಬಹುದು.

ಉದ್ಯಮ, ಸಹಕಾರ ಸಂಘಗಳು ಹಾಗೂ ಬ್ಯಾಂಕುಗಳಲ್ಲಿ ಮಹಿಳೆಯರ ಯಶೋಗಾಥೆ

ಹಿರಿಯ ಸಹಕಾರಿ ಧುರೀಣೆಯಾದ ಶ್ರೀಮತಿ ಎ.ಪಂಕಜಾ ಹಾಗೂ ಅವರ ಗೆಳತಿಯರು ೧೯೭೨ರಲ್ಲಿ ಮೊಟ್ಟ ಮೊದಲು ಮಹಿಳಾ ಸಹಕಾರ ಬ್ಯಾಂಕನ್ನು ಸ್ಥಾಪಿಸಿದ್ದು, ಈಗ ಅದು ಎಂಟು ಶಾಖೆಗಳನ್ನು ಹೊಂದಿದೆ. ಇದರ ಷೇರು ಬಂಡವಾಳ ಮೊಬಲಗು ಸುಮಾರು ಹದಿನಾರು ಲಕ್ಷವನ್ನೂ ಮೀರಿದೆ. ಮನೆಮನೆಗೆ ಅಲೆದು ಸದಸ್ಯರನ್ನು ಕಲೆಹಾಕಿದ್ದ ಈ ಬ್ಯಾಂಕಿನ ವಹಿವಾಟನ್ನು ಮೇಲ್ನೋಟದಲ್ಲೇ ಗುರುತಿಸಬಹುದು. ತರಕಾರಿ ಮಾರುವ ಮಹಿಳೆಯರು ಕೂಡ ಈ ಬ್ಯಾಂಕಿನ ಸದಸ್ಯೆಯರಾಗಿದ್ದಾರೆ. ಈ ಬ್ಯಾಂಕಿಂಗ್ ಉದ್ಯಮ ಪ್ರಪಂಚದಲ್ಲಿ ಮಹಿಳೆಯರಿಗೆ ಮಾರ್ಗದರ್ಶನ ನೀಡುತ್ತಿರುವ ಪ್ರಮುಖ ಸಂಸ್ಥೆ ಅವೇಕ್ (ಅಸೋಸಿಯೇಷನ್ ಆಫ್ ವಿಮೆನ್ ಎಂಟರ್ ಪ್ರೆನ್ಯೂರ್ಸ್ ಆಫ್ ಕರ್ನಾಟಕ) ಎಂದರೆ ಕರ್ನಾಟಕ ರಾಜ್ಯ ಮಹಿಳಾ ಉದ್ಯಮಿಗಳ ಸಂಘ. ಇದು ೧೯೮೩ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ವಿಶ್ವದ ಈ ಬಗೆಯ ಕೆಲವೇ ಸಂಸ್ಥೆಗಳಲ್ಲಿ ಇದೂ ಒಂದು. ಹಣಕಾಸು ನೆರವು, ತರಬೇತಿ, ವಿವಿಧ ನೆರವು ಯೋಜನೆಗಳು, ಸಂಸ್ಥೆಗಳು ಇವೆಲ್ಲದರ ಬಗ್ಗೆ ಅರಿವು ಮೂಡಿಸುತ್ತದೆ. ಏಷ್ಯಾ ಖಂಡದಲ್ಲೇ ಪ್ರಥಮ ಪ್ರಯೋಗವಾದ ವ್ಯಾಪಾರಿ ಸಂಘವಾಗಿದ್ದು, ಆಹಾರ ಪದಾರ್ಥಗಳನ್ನು ಸಂಸ್ಕರಿಸಿ ಮಾರುಕಟ್ಟೆಗೆ ಕೊಂಡೊಯ್ಯಲು ಬೇಕಾದ ಎಲ್ಲ ಆಧುನಿಕ ಸಲಕರಣೆಗಳನ್ನು ಹೊಂದಿದೆ. ಸದಸ್ಯರು ವಾರ್ಷಿಕ ಅಥವಾ ತಾತ್ಕಾಲಿಕ ಶುಲ್ಕ ಸಂದಾಯ ಮಾಡಿ ಪ್ರಯೋಜನ ಪಡೆದುಕೊಳ್ಳಬಹುದು. ಸಂಸ್ಥೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಒಬ್ಬ ಯಶಸ್ವಿ ಉದ್ಯಮಿಗೆ ಪ್ರಶಸ್ತಿ ನೀಡಲಾಗುತ್ತದೆ. ಹಿಂದಿನ ಅಧ್ಯಾಯದಲ್ಲಿ ವಿವರಿಸಿರುವಂತೆ ಈ ಅವೇಕ್ ಸಂಸ್ಥೆ ಅದೆಷ್ಟೋ ಮಹಿಳೆಯರ ದಾರಿದೀಪವಾಗಿದೆ. ಶ್ರೀಮತಿ

ನಾಗರತ್ನಾರಾವ್ ಹೇಳುತ್ತಾರೆ, ಮಹಿಳಾ ಸಹಕಾರ ಬ್ಯಾಂಕ್ ಹಾಗು ವಿವಿಧೋದ್ದೇಶ ಸಹಕಾರ ಸಂಘಗಳಿಂದ ಹೆಚ್ಚು ಅನುಕೂಲ ಇದೆ. ಏಕೆಂದರೆ ಷೇರುಹಣಕ್ಕೆ ತಕ್ಕಂತೆ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ. ಸ್ತ್ರೀಶಕ್ತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ, ಅಷ್ಟಲಕ್ಷ್ಮಿ ಸಹಕಾರ ಸಂಘ ಇವುಗಳು ತುಂಬಾ ಚೆನ್ನಾಗಿ ಕಾರ್ಯನಿರ್ವಹಣೆ ಮಾಡುತ್ತಿವೆ.''

''ಮೈಸೂರು ಜಿಲ್ಲಾ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ಮಾದರಿ ಸಂಘವೆನಿಸಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಹಿರಿಯ ಸಮಾಜ ಸೇವಕಿ ಮತ್ತು ಸಹಕಾರಿ ಶ್ರೀಮತಿ ದೇವಕಿ ಬಿ.ಸಿಂಗ್ ಹಾಗೂ ನಿರ್ದೇಶಕ ಮಂಡಳಿ ಶಿಸ್ತುಬದ್ಧವಾಗಿ ವ್ಯವಹಾರ ಚತುರತೆಯಿಂದ ಈ ವಿವಿಧೋದ್ದೇಶ ಸಹಕಾರ ಸಂಘವನ್ನು ಮುನ್ನಡೆಸುತ್ತಿದ್ದಾರೆ. ೧೯೯೧ರಲ್ಲಿ ಪ್ರಾರಂಭವಾದ ಈ ಸಹಕಾರ ಸಂಘದಲ್ಲಿ ೧೬೦೦ ಜನ ಸದಸ್ಯೆಯರಿದ್ದು ಅದರಲ್ಲಿ ೧೫೮ ಹರಿಜನ ಹಾಗೂ ೫೩ ಗಿರಿಜನ ಸದಸ್ಯೆಯರಿದ್ದಾರೆ. 'ಸಹಕಾರ ಸೇವೆಗಾಗಿ ಲಾಭಕ್ಕಲ್ಲ' ಎಂಬ ತತ್ತ್ವಕ್ಕನುಸಾರವಾಗಿ ವಿವಿಧವರ್ಗದ ಮಹಿಳೆಯರಿಗೆ ವಿಭಿನ್ನ ರೀತಿಯ ತರಬೇತಿ ನೀಡುವುದರ ಜೊತೆಗೆ ಅವರು ಸ್ವಯಂ ಉದ್ಯೋಗ ಕೈಕೊಂಡು ಸ್ವಾವಲಂಬಿಗಳಾಗಲು ಅನುಕೂಲವಾಗುವಂತಹ ಮಾರ್ಗದರ್ಶನ ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಅನಕ್ಷರಸ್ಥ ಮಹಿಳೆಯರಿಗೆ ಅಕ್ಷರ ಜ್ಞಾನ ನೀಡಲಾಗುತ್ತಿದೆ. ಸಂಘದಲ್ಲಿ ಈಗಾಗಲೇ ೩೦೦ಕ್ಕೂ ಹೆಚ್ಚು ಜನ ಮಹಿಳೆಯರು ಹೊಲಿಗೆ, ನಿಟ್ಟಿಂಗ್, ಎಂಬ್ರಾಯಿಡರಿ, ಜರಿ ಕೆಲಸ, ಫ್ಯಾಬ್ರಿಕೇಟಿಂಗ್, ಪೇಂಟಿಂಗ್, ಸ್ಕ್ರೀನ್ ಪ್ರಿಂಟಿಂಗ್, ಕರಕುಶಲವಸ್ತುಗಳನ್ನೊಳಗೊಂಡು ವಿವಿಧ ಕಸಬುಗಳ ಬಗ್ಗೆ ತರಬೇತಿ ಪಡೆದಿದ್ದಾರೆ. ತರಬೇತಿ ಅವಧಿಯಲ್ಲಿ ತಯಾರಿಸಲಾದ ವಸ್ತು, ಕಲಾಕೃತಿ, ಸಿದ್ಧ ಉಡುಪುಗಳನ್ನು ಮಾರಾಟ ಮಾಡಲೂ ಕೂಡ ಸಂಘವು ವ್ಯವಸ್ಥೆ ಮಾಡುತ್ತದೆ. ಪದಾಧಿಕಾರಿಗಳು ತಮ್ಮ ಮುಖಂಡರಾದ ಅಧ್ಯಕ್ಷೆ ಶ್ರೀಮತಿ ದೇವಕಿ ಬಿ.ಸಿಂಗ್ ಅವರೊಂದಿಗೆ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿ ಮಹಿಳಾ ಕೈದಿಗಳನ್ನು ಸಂದರ್ಶಿಸಿ ಅವರ ಕಷ್ಟ ಸುಖ ವಿಚಾರಿಸಿ ತಿಳಿವಳಿಕೆ ನೀಡಿದ್ದಾರೆ. ಅವರಲ್ಲಿ ಅನೇಕರಿಗೆ ಉಡುಪುಗಳಿಲ್ಲದಿರುವುದನ್ನು ಗಮನಿಸಿ ಸಂಘದ ಸದಸ್ಯರಿಂದ ಸೀರೆ, ಬಟ್ಟೆ, ಶಾಲು, ಬೆಡ್ ಶೀಟ್, ಸ್ವೆಟರ್ ಮುಂತಾದವುಗಳನ್ನು ಸಂಗ್ರಹಿಸಿ ಮಹಿಳಾ ಹಾಗೂ ಬಾಲಕೈದಿಗಳಿಗೆ ನೀಡಿದ್ದರು. ಸಂಘವು ಗ್ರಾಹಕರ ಜಾಗೃತಿ ಶಿಬಿರಗಳನ್ನು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನಡೆಸಿ ಮಹಿಳೆಯರ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಜೊತೆಗೆ ಸಂಘವು ವ್ಯಾಪಾರ ಅಭಿವೃದ್ಧಿ ಯೋಜನೆಯಲ್ಲಿ ವಿವಿಧ ಬಗೆಯ ವಸ್ತುಗಳನ್ನು ಎಂದರೆ ಫೈಲ್‌ಗಳು, ಲೆದರ್ ಬ್ಯಾಗ್, ಟಿ.ವಿ.ಕವರ್ ಕ್ಯಾಂಡಲ್ ಸ್ಟ್ಯಾಂಡ್ ಮುಂತಾದವುಗಳನ್ನು ತಯಾರಿಸಿ ಮಾರಾಟ ವ್ಯವಸ್ಥೆ ಮಾಡಿದೆ. ಹೀಗೆ ಈ ವಿವಿಧೋದ್ದೇಶ ಸಹಕಾರಿ ಸಂಘವು ಜಿಲ್ಲೆಗೆ ಮಾತ್ರವಲ್ಲದೆ ರಾಜ್ಯಕ್ಕೂ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ.

[೧೨]ಇದು ಕಂಪ್ಯೂಟರ್ ಯುಗ, ಅನೇಕ ಖಾಸಗಿ ಕಂಪನಿಗಳು ಮತ್ತು ಉದ್ಯಮಿಗಳು ಈಗ ಈ ಕಂಪ್ಯೂಟರ್ ಅಥವಾ ಗಣಕಯಂತ್ರ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ತೀವ್ರಸ್ಪರ್ಧೆಗಿಳಿದಿದ್ದಾರೆ. ಸಹಕಾರ ಸಂಘಗಳು ಇಂಥ ಆಧುನಿಕ ಅಗತ್ಯತೆಗಳಿಗೆ ತಕ್ಕಂತೆ ತಮ್ಮ ವ್ಯವಸ್ಥಾಪನೆಯಲ್ಲಿ ಕೂಡ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಗಿದೆ. ಲೆಕ್ಕಪತ್ರಗಳು, ದಾಖಲೆಗಳು, ಕಡತ ನಿರ್ವಹಣೆಯಲ್ಲಿ ಗಣಕೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕಾಗಿದೆ. ಪ್ರಾಯಶಃ ಕರ್ನಾಟಕ ಸಹಕಾರ ಕ್ಷೇತ್ರದಲ್ಲಿಯೇ ಪ್ರಪ್ರಥಮವಾಗಿ ಗೋಲ್ಡ್ ಕಾಯಿನ್ ಗಣಕಯಂತ್ರ ಸಹಕಾರ ಸಂಘವು ೧೯೯೪ರಲ್ಲಿ ತುಮಕೂರಿನಲ್ಲಿ ಪ್ರಾರಂಭವಾಯಿತು. ಇದು ಮುಖ್ಯವಾಗಿ ಆರು ಉದ್ದೇಶಗಳನ್ನು ಹೊಂದಿದೆ.

೧. ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್ ವೇರಗಳಲ್ಲಿ ವಿಶೇಷ ಮಾಹಿತಿ ನೀಡುವುದು.
೨. ಸಾಫ್ಟ್ ವೇರ್ ಅಭಿವೃದ್ಧಿಯಲ್ಲಿ ತರಬೇತಿ ನೀಡುವುದು.
೩. ಗಣಕಯಂತ್ರಗಳ ನಿರ್ವಹಣೆಯಲ್ಲಿ ವಿಶೇಷ ಜ್ಞಾನ ಒದಗಿಸುವುದು.
೪. ಗಣಕಯಂತ್ರ ಜೋಡಣೆ ಕಾರ್ಯಕ್ರಮ.
೫. ಕಂಪ್ಯೂಟರ್ ಬಗ್ಗೆ ಮಾರ್ಗದರ್ಶನ, ಸಲಹೆ ಸೂಚನೆ ನೀಡುವುದು.
೬. ಡಿಟಿಪಿ ಸೇವೆ ಒದಗಿಸುವುದು.

ಉಳಿದ ಸಹಕಾರ ಸಂಘಗಳಂತೆ ೯ ಜನಸದಸ್ಯರ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗವನ್ನು ಇದು ಹೊಂದಿದೆ. ಗ್ರಾಹಕರಿಗೆ ಅತ್ಯುತ್ತಮ ಸೇವೆ ಒದಗಿಸಲು ಬ್ಯಾಂಕುಗಳ ಲೆಕ್ಕಪತ್ರಗಳನ್ನು ಅತ್ಯಾಧುನಿಕ ವ್ಯವಸ್ಥೆಯನ್ನು ತರಲು ಇದು ತುಂಬಾ ಪ್ರಯೋಜನಕಾರಿಯಾಗಿದೆ. ಕಂಪ್ಯೂಟರ್ ಪ್ರಪಂಚ ಮಹಿಳೆಯರ ಸಾಹಸ ಕಲ್ಪನೆಗಳಿಗೆ, ಉದ್ಯಮಯೋಜನೆಗಳಿಗೆ ಜಾಗತಿಕ ಮಟ್ಟದಲ್ಲಿ ಹೊಸ ಆವಿಷ್ಕಾರಗಳ ಅವಕಾಶ ತೆರೆದ ಹೆಬ್ಬಾಗಿಲು ಎಂದರೆ ಅಚ್ಚರಿಯಾಗುವುದಿಲ್ಲ. ಈಗ ಯುವತಿಯರು ಅತಿವೇಗವಾಗಿ ಕಂಪ್ಯೂಟರ್ ಕ್ಷೇತ್ರದಲ್ಲಿ ಲಗ್ಗೆಯಿಟ್ಟದ್ದಾರೆ ಹಾಗೂ ಪ್ರಯೋಗಗಳಲ್ಲಿ ಭಾಗಿಗಳಾಗುತ್ತಿದ್ದಾರೆ. ಹೀಗಾಗಿ ಕಂಪ್ಯೂಟರಿನ ಅತ್ಯಧಿಕ ಬಳಕೆ ಈ ನಮ್ಮ ಪ್ರತಿಭಾನ್ವಿತ ಮಹಿಳೆಯರಿಂದ ಉದ್ಯಮಕ್ಷೇತ್ರದಲ್ಲಿ ಅದ್ಭುತ ಚಮತ್ಕಾರಗಳನ್ನು ಉಂಟುಮಾಡುವುದರಲ್ಲಿ ಸಂದೇಹವಿಲ್ಲ ಎನ್ನಬಹುದು. ಈ ದಿಸೆಯಲ್ಲಿ ಅವೇಕ್ ಸಂಸ್ಥೆಯ ಸಲಹಾ ವಿಭಾಗದ ಅಧ್ಯಕ್ಷೆಯಾಗಿರುವ [೧೩]ಜಗದೀಶ್ವರಿ ಕಂಪ್ಯೂ-ತಿಡ್, ಪಾಯಿಂಟ್, ಇಂಡಸ್ಟ್ರಿಯಲ್ ಪೇಂಟಿಗ್, ಎಂ.ಆರ್.ಎಫ್ ಫ್ರಾಂಚೈಸ್ ಹಾಗೂ ಸಿವಿಲ್ ಕನ್ಸ್ಟ್ರಕ್ಷನ್ ನಡೆಸುತ್ತಿರುವ ಯಶಸ್ವಿ ಮಹಿಳಾ ಉದ್ಯಮಿಯಾಗಿದ್ದಾರೆ. ಇವರ ಕಂಪ್ಯೂಟರ್ ಶಾಲೆಯಲ್ಲಿ ೧೫೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ಮಕ್ಕಳಿಂದ ಹಿರಿಯರ ತನಕ ಕಂಪ್ಯೂಟರ್ ತರಬೇತಿ ನೀಡುವ ಈ ಶಾಲೆಗೆ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಸಣ್ಣ ಮಕ್ಕಳಿಗಾಗಿ ಎಬಿಸಿ ಕ್ವಿಜ್‌ನಿಂದ ಹಿಡಿದು ಇಂಜಿನಿಯರಿಂಗ್,

ಜಿಆರ್‌ಇ, ಜಿಎಂಟಿ ಮುಂತಾದ ಪ್ರವೇಶ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ, ಅಡುಗೆ, ತೋಟಗಾರಿಕೆ ಫ್ಯಾಷನ್, ಡಿಸೈನಿಂಗ್, ಸಂಗೀತ, ಧಾರ್ಮಿಕ ಪ್ರವಚನ, ಲೆಕ್ಕಪತ್ರ, ಆರೋಗ್ಯ ಸಂರಕ್ಷಣೆ, ಸೌಂದರ್ಯ ವರ್ಧನೆವರೆಗೆ ಕಾಂಪ್ಯಾಕ್ಟ್ ಡಿಸ್ಕ್‌ಗಳು ಸಿದ್ಧವಿದ್ದು ಇ-ಮೇಲ್ ಇಂಟರ್ ನೆಟ್ ಸೌಲಭ್ಯ ಇದೆ. ಎಂಭತ್ತರ ದಶಕದಲ್ಲಿ ಎಂಜಿನಿಯರಿಂಗ್ ಬಿಡಿಭಾಗಗಳನ್ನು ತಯಾರಿಸಿ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಸರಬರಾಜು ಮಾಡುತ್ತಿದ್ದ ಈ ಸಾಹಸಿಮಹಿಳೆ ತಿಂಗಳಿಗೆ ೧೬ ರಿಂದ ೧೮ಲಕ್ಷ ವಹಿವಾಟು ನಡೆಸುತ್ತಿದ್ದಾರೆ. 'ಇಷ್ಟೊಂದು ವಹಿವಾಟು ನಡೆಸ್ತಾ ಇರೋ ನನಗೆ ಸಮಸ್ಯೆಗಳು ಖಂಡಿತಾ ಇವೆ. ಆದರೆ ಉದ್ಯಮದಲ್ಲಿ ಅಯಶಸ್ವಿ ಅಂತ ನಾನು ತಿಳ್ಕೊಂಡಿಲ್ಲ ಬಲ್ಲವರೊಡನೆ ಸಮಾಲೋಚಿಸಿ ಪರಿಹಾರ ಕಂಡ್ಕೋತೀನಿ ಎನ್ನುವ ಈಕೆ, ನಮ್ಮಿಂದ ತಪ್ಪುಗಳಾದಾಗ ಉಳಿದವರು ಬಾಯಿಗೆ ಬಂದಂತೆ ಅಂತಾರೆ. ಅದನ್ನೆಲ್ಲ ಅರಗಿಸಿಕೊಳ್ಳೋಕೆ ಸಿದ್ಧರಾಗಿರಬೇಕು' ಎನ್ನುವ ಜಗದೀಶ್ವರಿ ಬೃಹತ್ ಕಂಪೆನಿಗಳನ್ನು ಗ್ರಾಹಕರನ್ನಾಗಿ ಹೊಂದಿರುವ ಯಶಸ್ವಿ ಮಹಿಳಾ ಉದ್ಯಮಿ. ಇವರ ಮೇಲ್ಪಂಕ್ತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳಿಗೆ ದೊರೆತು ಅವರು ಈ ಎಲ್ಲ ಮಾಹಿತಿ, ಕಾರ್ಯನಿರ್ವಹಣೆ ಪ್ರಯೋಜನ ಪಡೆದಲ್ಲಿ ಮಹಿಳಾ ಸಹಕಾರಿಗಳ ಪ್ರಯತ್ನಗಳು ಗುರಿಮೀರಿ ಸಫಲತೆಗಳಿಸುವುದರಲ್ಲಿ ಸಂದೇಹವಿಲ್ಲ.

[೧೪]ಶ್ರೀಮಾತಾ ಮಹಿಳಾ ಸಹಕಾರಿ ಬ್ಯಾಂಕ್ ಬೆಂಗಳೂರು, ಇದು ನಗರದ ಪ್ರತಿಷ್ಠಿತ ಮಹಿಳಾ ಬ್ಯಾಂಕುಗಳಲ್ಲೊಂದಾಗಿದೆ. ಸುಮಾರು ಎರಡು ಸಾವಿರದ ಐನೂರು ಸದಸ್ಯರಿರುವ ಈ ಬ್ಯಾಂಕಿನ ಅಧ್ಯಕ್ಷೆ ಶ್ರೀಮತಿ ಪದ್ಮಾಶೇಷಾದ್ರಿ. ಪುರುಷರಿಗೂ ಕೂಡ ಅತ್ಯಂತ ಸವಾಲಾಗಿರುವ ಪೈಪೋಟಿ ಸ್ಪರ್ಧೆಯೇ ಮುಖ್ಯವಾದ ಹೋಟೇಲ್ ಉದ್ಯಮದಂತಹ ಬೃಹತ್ ಉದ್ಯಮದಲ್ಲಿ ಅತ್ಯಂತ ಯಶಸ್ವಿ ಮಹಿಳಾ ಉದ್ಯಮಿಯಾಗಿರುವ ಶ್ರೀಮತಿ ಪದ್ಮಾಶೇಷಾದ್ರಿ ಈ ಕ್ಷೇತ್ರಕ್ಕೆ ಪ್ರವೇಶಿಸಿದ್ದು ಆಕಸ್ಮಿಕವಾಗಿ. ಉದ್ಯಮದಲ್ಲಿದ್ದ ಇವರ ತಂದೆ ಅಕಾಲದಲ್ಲಿ ಮರಣಹೊಂದಿದಾಗ, ಎದೆಗುಂದದೇ ಅದೇ ಉದ್ಯಮವನ್ನು ದಿಟ್ಟವಾಗಿ ಮುನ್ನಡೆಸಿದ ಸಾಹಸಿ ಮಹಿಳೆ ಈಕೆ. ೧೯೮೬ರಲ್ಲಿ 'ಆತಿಥ್ಯ' ೧೯೯೨ರಲ್ಲಿ 'ಮೇಳ' ಎಂಬ ಹೆಸರಿನ ಹೊಟೇಲ್‌ಗಳನ್ನು ಪ್ರಾರಂಭಿಸಿ ಯಶಸ್ವಿಯಾದ ನಂತರ ಹೊಸೂರಿನಲ್ಲಿ ನಿಸರ್ಗಧಾಮವೆಂಬ ಪ್ರತಿಷ್ಠಿತ ರೆಸ್ಟೋರೆಂಟನ್ನು ನಡೆಸುತ್ತಿದ್ದಾರೆ. ಇಲ್ಲಿ ಸಮಾವೇಶ ಸಭಾಂಗಣಗಳ, ವಸತಿ ವ್ಯವಸ್ಥೆ ಇರುವ ಸ್ಥಳವಾಗಿದೆ. ಇದು ಅಷ್ಟೇ ಅಲ್ಲ ಮದುವೆ ಇನ್ನಿತರ ಸಮಾರಂಭಗಳಿಗೆ ಐವತ್ತು ಜನರಿಂದ ಹಿಡಿದು ಹತ್ತು ಸಾವಿರ ಜನರವರೆಗೆ ಊಟದ ವ್ಯವಸ್ಥೆ ಮಾಡಬಲ್ಲ ಸಶಕ್ತ, ಸಬಲ ಮಹಿಳೆ ಶ್ರೀಮತಿ ಪದ್ಮಾ ಶೇಷಾದ್ರಿ ಅವರ ಸಮರ್ಥ ಮಾರ್ಗದರ್ಶನದಲ್ಲಿ ಐವತ್ತಕ್ಕಿಂತಲೂ ಹೆಚ್ಚು ಜನ ನೌಕರರು ದುಡಿಯುತ್ತಾರೆ. ವೈಯಕ್ತಿಕ ಆಸಕ್ತಿಯಿಂದ ತರಕಾರಿ, ದಿನಸಿಗಳನ್ನು ಖುದ್ದಾಗಿ ಆರಿಸುವ ಈ ಉದ್ಯಮಿ ಗುಣಮಟ್ಟದಲ್ಲಿ ಎಂದಿಗೂ ಹೊಂದಾಣಿಕೆ(ರಾಜಿ) ಅಸಾಧ್ಯವೆನ್ನುತ್ತಾರೆ. ಬರೀ ಹೆಣ್ಣುಮಕ್ಕಳನ್ನೇ ಸೇರಿಸಿಕೊಂಡು ಉದ್ಯಮವನ್ನು

ನಡೆಸಲಿಚ್ಛಿಸುವ ಪದ್ಮಾಶೇಷಾದ್ರಿಯವರು "ನಮ್ಮಲ್ಲಿ ಡಿಗ್ನಿಟಿ ಆಫ್ ಲೇಬರ್ ಇನ್ನೂ ಪೂರ್ಣ ಪ್ರಮಾಣದಲ್ಲಿ ಸ್ವೀಕೃತವಾಗಿಲ್ಲ, ನಮ್ಮ ಅನೇಕ ಸೋದರಿಯರು ಕೆಲಸವಿಲ್ಲದೆ ಪರದಾಡುತ್ತಾರೆ ಹೊರತು ಈ ಉದ್ಯಮಕ್ಕೆ ಬರಲ್ಲ. ಕೌಂಟರ್ ಕೆಲಸಕ್ಕಾದರೂ ಬರಬಹುದು. ಆದರೆ ಅದಕ್ಕೂ ಬರಲ್ಲ" ಎನ್ನುತ್ತಾರೆ ವಿಷಾದದಿಂದ. ಯಾರೇ ಹೆಣ್ಣುಮಗಳು ಈ ಉದ್ಯಮವನ್ನು ಆರಂಭಿಸಲು ಇಷ್ಟಪಟ್ಟಲ್ಲಿ ತಾವು ಕಷ್ಟಪಟ್ಟು ಗಳಿಸಿಕೊಂಡಿರುವ ಅನುಭವದ ಆಧಾರದ ಮೇಲೆ ತರಬೇತಿ ನೀಡಲು ಸಿದ್ಧರಿದ್ದಾರೆ. ಕರ್ನಾಟಕ ಪ್ರದೇಶ ಹೊಟೇಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್‌ನ ಅರವತ್ತು ಮಂದಿಯ ಕಾರ್ಯಕಾರಿ ಸಮಿತಿಯಲ್ಲಿರುವ ಏಕೈಕ ಮಹಿಳಾ ಮುಖಂಡೆ ಶ್ರೀಮತಿ ಪದ್ಮಾಶೇಷಾದ್ರಿ. ೧೯೯೫ರಿಂದ ೨೦೦೦ ಜೂನ್‌ವರೆಗೆ ಅವೇಕ್‌ನ ಅಧ್ಯಕ್ಷರಾಗಿ ಸುಮಾರು ೨೨೦ ಹೊಸ ಉದ್ದಿಮೆಗಳನ್ನು ಸೃಜಿಸುವ ಬೃಹತ್ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ಅಂತಾರಾಷ್ಟ್ರೀಯ ಮಟ್ಟದ "ಆಗ್ ಫಂಡ್ ' ಪ್ರಶಸ್ತಿ ಸಂಸ್ಥೆಗೆ ಲಭಿಸಲು ಕಾರಣರಾಗಿದ್ದಾರೆ. ಸಂಸ್ಥೆ ನಡೆಸಿದ ಹತ್ತುದಿನಗಳ ಕಾರ್ಯಾಗಾರದಲ್ಲಿ ಗ್ರಾಮೀಣ ಮಹಿಳೆಯೊಬ್ಬರು 'ನಾನು ಮನೆಬಿಟ್ಟು ಈ ಕಾರ್ಯಾಗಾರದಲ್ಲಿ ಭಾಗವಹಿಸೋಕೆ ಬಂದಿರೋದೆ ಒಂದು ದೊಡ್ಡ ಸಾಧನೆ' ಎಂದು ನುಡಿದದ್ದು ಇವರನ್ನು ಕಾಡುತ್ತದೆ. "ಯಾರೇ ಹೆಣ್ಣು ಮಗಳು ಉದ್ಯೋಗ ಮಾಡ್ತೀನಿ ಅಥವಾ ಉದ್ದಿಮೆ ಶುರುಮಾಡ್ತೀನಿ ಅಂದರೆ ಕುಟುಂಬದ ಎಲ್ಲ ಸದಸ್ಯರೂ ಆಕೆಗೆ ಸಹಕಾರ, ಪ್ರೋತ್ಸಾಹಗಳನ್ನು ನೀಡಬೇಕು. ಏಕೆಂದರೆ ಶೇ.೯೯ರಷ್ಟು ಮಹಿಳೆಯರು ತಮ್ಮೆಲ್ಲಾ ಆದಾಯವನ್ನು ಕುಟುಂಬದ ಒಳಿತಿಗಾಗೇ ವಿನಿಯೋಗಿಸುತ್ತಾರೆ" ಎಂದು ಪದ್ಮಾ ಕಳಕಳಿಯಿಂದ ನುಡಿದಿದ್ದಾರೆ. ಉದ್ಯಮ ಹಾಗೂ ಶ್ರೀಮಾತಾ ಮಹಿಳಾ ಸಹಕಾರಿ ಬ್ಯಾಂಕು ಇವೆರಡರ ಸಾರಥ್ಯವಹಿಸಿರುವ ಪದ್ಮಾಶೇಷಾದ್ರಿ ಎರಡು ಸಂಸ್ಥೆಗಳ ಕೋಟ್ಯಾಂತರ ರೂಪಾಯಿ ವಹಿವಾಟನ್ನು ಅತ್ಯಂತ ಸಮರ್ಥವಾಗಿ, ಶಿಸ್ತುಬದ್ಧವಾಗಿ ನಿರ್ವಹಿಸಿ ಅತ್ಯುತ್ತಮ ಮಹಿಳಾ ಸಹಕಾರ ಧುರೀಣೆಯಾಗಿದ್ದಾರೆ.

[10]ಪಾವಗಡ ತಾಲ್ಲೂಕಿನ ಮಹಿಳಾ ಮೋರ್ಚಾದ ಅಧ್ಯಕ್ಷೆ ಹಾಗೂ ಉತ್ಸಾಹಿ ಮಹಿಳಾ ಕಾರ್ಯಕರ್ತೆಯಾದ ಶ್ರೀಮತಿ ಪಿ.ಎನ್ .ಲೀಲಾವತಮ್ಮ ಸಾಮಾಜಿಕ ಹಾಗೂ ಸಹಕಾರ ರಂಗಗಳಲ್ಲಿ ಸೇವಾ ಮನೋಭಾವದಿಂದ ದುಡಿಯುವ ಹಂಬಲ ಹೊತ್ತ ಮಹಿಳೆ. ೧೯೯೭ರಲ್ಲಿ ಶ್ರೀಮತಿ ಲೀಲಾವತಮ್ಮ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಮಹಿಳಾ ವಿಭಾಗದ ಶ್ರೀಮತಿ ನಾಗರತ್ನರಾವ್ ಮಾರ್ಗದರ್ಶನದಲ್ಲಿ ಶ್ರೀ ರಾಜೇಶ್ವರಿ ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘವನ್ನು ಸ್ಥಾಪಿಸಿದರು. ಷೇರು ಸಂಗ್ರಹಿಸಲು ಸಹಕಾರ ಇಲಾಖೆಯಿಂದ ಅನುಮತಿ ಪಡೆದು ಅರ್ಹ ಮಹಿಳೆಯರಿಂದ ಸುಮಾರು ೪೦,೦೦೦ ರೂ.ಗಳಿಗೂ ಹೆಚ್ಚು ಷೇರು ಹಣವನ್ನು ಸಂಗ್ರಹಿಸಿ ಮಹಿಳೆಯರನ್ನು ಆ ಮೂಲಕ ಸಂಘಟಿಸಿ ಪಾವಗಡದಲ್ಲಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದಡಿಯಲ್ಲಿ

ನೋಂದಣಿ ಮಾಡಿಸಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಹಿಂದುಳಿದ ಮಹಿಳೆಯರಿಗೆ ಉದ್ಯೋಗಾವಕಾಶ, ತರಬೇತಿ ನೀಡುತ್ತ ಜಿಲ್ಲೆಯ ಕ್ರಿಯಾಶೀಲ ಮಹಿಳೆಯಾಗಿದ್ದಾರೆ. ಸೇವಾ ಮನೋಭಾವದಿಂದ, ಛಲ ಹೊತ್ತು ಮಹಿಳಾ ಸಂಘಟನೆ ಮಾಡಿರುವ ಶ್ರೀಮತಿ ಪಿ.ಎಸ್ .ಲೀಲಾವತಮ್ಮ ಸಹಕಾರಿ ನಾಯಕತ್ವದ ಎಲ್ಲ ಗುಣಗಳನ್ನು ಹೊಂದಿದ್ದು, ವಿವಿಧ ಸಂಘಸಂಸ್ಥೆಗಳ ಸಂಪರ್ಕವನ್ನೂ ಹೊಂದಿ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಗಡಿ ಪ್ರದೇಶದ ಅಪರೂಪದ ಮಹಿಳಾ ಸಹಕಾರಿಯಾಗಿದ್ದಾರೆ.

ಆರೋಗ್ಯವಂತ ಸಮಾಜ ನಿರ್ಮಾಣವಾಗಬೇಕಾದರೆ ಮಹಿಳೆಯರಿಗೆ ಶಿಕ್ಷಣ ಹಾಗೂ ಸಂಘಟನೆ ಅತ್ಯವಶ್ಯ. ಬಿಜಾಪುರದ ಯುವ ವಿಕಾಸಕೇಂದ್ರದಲ್ಲಿ ಬೆರಳಚ್ಚುಗಾರಳಾಗಿ ಕಾರ್ಯನಿರ್ವಹಿಸುತ್ತಿದ್ದ ಮಲ್ಲಮ್ಮನವರಿಗೆ ಗ್ರಾಮೀಣ ಮಹಿಳೆಯರೊಡನೆ ಬೆರೆಯುವ ಅವಕಾಶ ಲಭಿಸಿತ್ತು. ತತ್ಪರಿಣಾಮವಾಗಿ ಕಚೇರಿಯಲ್ಲಿ ಮಹಿಳಾ ವಿಭಾಗ ಪ್ರಾರಂಭವಾಯಿತು. ಜೀವನದಲ್ಲಿ ಏನನ್ನಾದರೂ ಸಾಧಿಸಲೇಬೇಕೆಂಬ ಅದಮ್ಯ ಆಕಾಂಕ್ಷೆ, ಛಲ ಹೊಂದಿದ್ದ ಮಲ್ಲಮ್ಮ ಕೆಲವೇ ಮಹಿಳೆಯರ ಸಹಕಾರದೊಂದಿಗೆ ೧೯೮೯ರಲ್ಲಿ ‘ಸಬಲಾ’ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸರಕಾರದ ನೋಂದಣಿ ಮಾಡಿಸಿ ಪ್ರಾರಂಭಿಸಿದರು. ಈ ಸಂಸ್ಥೆ ಜಿಲ್ಲಯಾದ್ಯಂತ ಚಿರಪರಿಚಿತವಾಗಿದ್ದು, ಸಬಲಾ ಎಂದರೆ ಮಲ್ಲಮ್ಮ ಎಂಬಂತೆ ಅಭಿವೃದ್ಧಿ ಹೊಂದುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಹಿಳೆಯರು ಅದರಲ್ಲೂ ಲಂಬಾಣಿ, ಹರಿಜನ, ಗಿರಿಜನ ಮಹಿಳೆಯರಲ್ಲಿ ಬೇರೂರಿರುವ ಅನಕ್ಷರತೆ, ಮೂಢನಂಬಿಕೆ, ಅರೆಉದ್ಯೋಗ, ಕಡಿಮೆ ಕೂಲಿ, ಲಿಂಗ ತಾರತಮ್ಯದಿಂದ ಅತಂತ್ರತೆಯಲ್ಲಿ ಮುಳುಗಿರುವ ಮುಗ್ಧ ಗ್ರಾಮೀಣ ಮಹಿಳೆಯರಿಗಾಗಿ ಸಂಘಟನೆ, ಸ್ವಾವಲಂಬಿ ಜೀವನಕ್ಕೆ ‘ಸಬಲಾ’ ದಾರಿ ತೆರೆದಿದೆ. ಈ ಸಂಸ್ಥೆಯಲ್ಲಿ ಈಗ ನೂರಾರು ಮಹಿಳಾ ಕಾರ್ಯಕರ್ತರು ಸ್ವಯಂಸೇವಕರಿದ್ದು, ತಮ್ಮ ಮನೆ ಮಠವೆನ್ನದೆ ನಿಸ್ವಾರ್ಥದಿಂದ ಹಳ್ಳಿ ಹಳ್ಳಿಗೆ ಹೋಗಿ ಮುಗ್ಧ ಜನತೆಗೆ ಸ್ವಾವಲಂಬನೆಯ ಬಗ್ಗೆ ತಿಳಿವಳಿಕೆ ನೀಡುವಲ್ಲಿ ಮಹಿಳಾ ಕಾರ್ಯಕರ್ತೆಯರ ಶ್ರಮ, ತ್ಯಾಗ ಭಾವನೆ ತುಂಬ ಮಹತ್ವದ್ದು ಎನ್ನುತ್ತಾರೆ ಮಲ್ಲಮ್ಮ. ತಾನೂ ಬೆಳೆಯುತ್ತ ತಮ್ಮನ್ನೂ ಶಕ್ತಿಶಾಲಿ ಮಾಡಿದ ಈ ‘ಸಬಲಾ’ ಸಂಘಟನೆಯ ಬಗ್ಗೆ ಅವರಿಗೆ ಅಪಾರ ಅಭಿಮಾನ. ಈ ಸಂಸ್ಥೆಗೆ ರಾಜ್ಯಸರ್ಕಾರ ‘ರಾಣಿ ಚೆನ್ನಮ್ಮ’ ಪ್ರತಿಷ್ಠಿತ ಪ್ರಶಸ್ತಿ ನೀಡಿ ಗರಿ ಮೂಡಿಸಿ ಗೌರವಿಸಿದೆ.

ಮಲ್ಲಮ್ಮ ಯಾಳವಾರರ ಅದಮ್ಯ ಚೇತನ ಇಷ್ಟಕ್ಕೇ ತೃಪ್ತವಾಗದೆ ಮಹಿಳೆಯರಲ್ಲಿ ಆರ್ಥಿಕ ಚೈತನ್ಯ ತುಂಬುವ ಸಲುವಾಗಿ ಮನೆಯಲ್ಲಿ ರೊಟ್ಟಿ ಬಡಿಯುತ್ತ ಕುಳಿತಿದ್ದ ಮಹಿಳೆಯರನ್ನು ಬಡಿದೆಬ್ಬಿಸಿ, ಅವರಲ್ಲಿ ಆರ್ಥಿಕ ಸ್ವಾವಲಂಬನೆ ಬಗ್ಗೆ ಚರ್ಚಿಸಿ ‘ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ’ ಎಂಬ ತತ್ತ್ವದ ಮೇಲೆ ಮಹಿಳೆಯರಿಂದ ಮಹಿಳೆಯರಿಗಾಗಿಯೇ ಇರುವ ‘ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ್’ನ್ನು ಪ್ರಾರಂಭಿಸಿದರು.

ಇದು ರಾಜ್ಯದ ಆರನೇ ಮಹಿಳಾ ಸಹಕಾರಿ ಬ್ಯಾಂಕು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತ್ವರಿತಗತಿಯಲ್ಲಿ ಬೆಳೆದ ಈ ಮಹಿಳಾ ಬ್ಯಾಂಕ್ ಇಂದು ಮೂರುಸಾವಿರ ಮಹಿಳಾ ಸದಸ್ಯರನ್ನು ಹೊಂದಿ ಸುಮಾರು ನಾಲ್ಕು ಕೋಟಿ ರೂಪಾಯಿಯ ವಹಿವಾಟು ನಡಸುತ್ತಿದೆ. ಈ ಬ್ಯಾಂಕಿನ ನೆರವು ಕೇಳುವ ಮಹಿಳೆಯರಿಗೆ ಗೃಹಕೈಗಾರಿಕೆ, ವ್ಯಾಪಾರ, ವಾಹನ, ಗೃಹನಿರ್ಮಾಣ ಇನ್ನೂ ಅನೇಕ ಸಾಲ ಯೋಜನೆಗಳನ್ನು ಹಮ್ಮಿಕೊಂಡಿದ್ದು, ತ್ವರಿತಗತಿಯಲ್ಲಿ ಸಾಲದ ವಿತರಣೆ ಮಾಡಿ ಅಸಂಖ್ಯಾತ ಮಹಿಳೆಯರ ಬಾಳಿಗೆ ದಾರಿದೀಪವಾಗಿದೆ.

ಸಹಕಾರ ಕ್ಷೇತ್ರದಲ್ಲಿ ಸ್ವಯಂ ಉದ್ಯೋಗ ಕಲ್ಪಿಸಿಕೊಡಬಲ್ಲ ಉದ್ಯಮಿ ಮಹಿಳೆಯರು, ಸಹಕಾರ ಸಂಘ, ಬ್ಯಾಂಕುಗಳಲ್ಲಿ ಸದಸ್ಯರಾಗಿ, ಷೇರುದಾರರಾಗಿ ತಮ್ಮ ಬದುಕನ್ನು ಹಸನುಮಾಡಿಕೊಳ್ಳುವ ಮಹಿಳೆಯರು, ತಾನು ಪಡೆದುದನ್ನು ಉಳಿದವರಿಗೆ ಹಂಚುವ, ಸಮಾಜದಲ್ಲಿ ತನ್ನ ಸೋದರಿಯರನ್ನು ಹೆಜ್ಜೆ ಊರಲು ಅವಕಾಶ ಮಾಡಿಕೊಡುವ ಉದಾರಿಗಳು, ಸೇವಾ ಮನೋಭಾವದವರು ಇದ್ದಾರೆ. ಈ ಕೊಡುವ-ಕೊಳ್ಳುವ ಪರಸ್ಪರ ಹಿತ ಬಯಸುವ ಕ್ಷೇತ್ರ ಶ್ರೀಮಂತರನ್ನು, ಬಡವರನ್ನು, ಮಧ್ಯಮವರ್ಗದವರನ್ನು ಒಟ್ಟಿನಲ್ಲಿ ಸಮಾಜದ ಎಲ್ಲ ಸ್ತರದ, ಎಲ್ಲ ವರ್ಗಗಳ ವ್ಯಕ್ತಿಗಳನ್ನೂ ಒಳಗೊಳ್ಳುತ್ತದೆ. ಹೀಗಾಗಿ, ಯಶಸ್ವೀ ಉದ್ಯಮಿಗಳು, ಏನೂ ಅಲ್ಲದವರು ಕೂಡ ಇಲ್ಲಿ ತಮ್ಮ ತಮ್ಮ ಗುರಿಸಾಧಿಸಿಕೊಳ್ಳಬಲ್ಲರು. ಪ್ರತಿಯೊಬ್ಬರ ಜೀವನದಲ್ಲೂ ಎಂದೋ ಒಂದೆರಡುಬಾರಿ ಮಾತ್ರ ಅವಕಾಶ, ತಿರುವುಗಳು ಬರುವುದುಂಟು. ಅಥವಾ ದುರಂತ, ಸಂಕಷ್ಟಪರಿಸ್ಥಿತಿ, ಏಕಾಂಗಿತನ, ಅಪಮಾನ ಇಂಥ ಸಂದರ್ಭಗಳು ಪರಿಸ್ಥಿತಿಯ ವಿರುದ್ಧ ಈಸಬೇಕು, ಜೇಸಬೇಕು ಎಂಬ ಎದೆಗಾರಿಕೆ ನೀಡಬಹುದು. ಅಂಥ ಹೊತ್ತಿನಲ್ಲಿ ವಿಶೇಷ ಪ್ರಯತ್ನ ನಡೆಸಿ ವ್ಯಕ್ತಿಗತವಾಗಿ ಯಶಸ್ವಿ ಉದ್ಯಮಿಗಳಾದ ಮೈತ್ರೇಯಿ ತೀರ್ಥ, ಕಲಾವಲಯ ಕಲಾವಿದೆ ಉಮಾ ಅಶೋಕ್, ಉದ್ಯಮ ನಿರ್ವಹಣೆಯ ಸಮರ್ಥೆ ಶ್ಯಾಮಲಾಷಾ(ಅವೇಕ್ ಕಾರ್ಯದರ್ಶಿ) ಪತ್ರಿಕೋದ್ಯಮಿ ಜಯಶ್ರೀ ಹೀಗೆ ಪಟ್ಟಿಯಲ್ಲಿ ಅದೆಷ್ಟೋ ಅಸಂಖ್ಯಾತ ಮಹಿಳೆಯರು ಇಂದು ಕೊಳ್ಳು-ಬಾಕ ಸಂಸ್ಕೃತಿಯ ಮಾರುಕಟ್ಟೆ ಹೋರಾಟದಲ್ಲಿ ಪುರುಷರೊಂದಿಗೆ ಸೆಣಸುತ್ತಿದ್ದಾರೆ. ಜಯಶಾಲಿಗಳಾಗಿದ್ದಾರೆ. ಇಂಥ ಉದ್ಯಮಿಗಳು ಸಹಕಾರ ಚಳವಳಿಯನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಬಳಸಿಕೊಳ್ಳುವ ಅವಕಾಶ ಇನ್ನಷ್ಟು ಹೆಚ್ಚಾಗುತ್ತಿವೆ.

ಸಂಘಟನೆಯ ಸಾಧ್ಯತೆಗೆ ಹೊಸ ಆಯಾಮ

ಮಹಿಳಾ ಬಲ : ಹನಿಹನಿಗೂಡಿದರೆ ಹಳ್ಳವೆಂದು ಸಂಗ್ರಹಣೆಯ ಬಗ್ಗೆ ಹೇಳುತ್ತಾರೆ. ವ್ಯಕ್ತಿ, ವ್ಯಕ್ತಿ ಕೂಡಿ ಸಮಷ್ಟಿಯೆಂಬ ಮಾತಿಗುತ್ತರವೆಂಬಂತೆ ಮಹಿಳಾ ಬಲ ಸಂಘಟಿತವಾಗುತ್ತಿದೆ.[೩] ಇಂಥ ಸಂಘಟಿತ ಸ್ತ್ರೀಶಕ್ತಿ ಹುಣಸೂರಿನ ಹಸಗೋಡು, ಕಸಬಾ, ಗಾವಡಗೆರೆ ಮುಂತಾದ ಕಡೆ ಗಾಂಧೀಜಿಯವರ

ರಾಮರಾಜ್ಯ ಕಲ್ಪನೆಯನ್ನು ಸಾಕಾರಗೊಳಿಸುತ್ತಿವೆ. ನಲವತ್ತೈದು ಮಹಿಳಾ ಸಂಘಗಳು ಒಂದುಗೂಡಿ 'ಶಕ್ತಿಮಹಿಳಾ ಒಕ್ಕೂಟ' ಎಂಬ ಸಂಘಟನೆಯನ್ನು ಹುಟ್ಟುಹಾಕಿವೆ. ೮೦೦ ಕುಟುಂಬಗಳನ್ನು ಮಹಿಳೆಯರು ಪ್ರತಿನಿಧಿಸುತ್ತಿದ್ದಾರೆ. ಹೊಗೆರಹಿತ ಒಲೆ, ಗೊಬ್ಬರ ತಯಾರಿಕೆ, ಒಣಭೂಮಿ ತೋಟಗಾರಿಕೆ, ಉಳಿತಾಯ, ಸ್ವಸಹಾಯ, ನೀರಾವರಿ, ಸಾಲತೀರಿಕೆ, ಪರಿಸರ ಅಭಿವೃದ್ಧಿ, ಪುಸ್ತಕ ಭಂಡಾರ, ರಾತ್ರಿಶಾಲೆ, ಮತದಾರರ ಜಾಗೃತಿ, ಬುಡಕಟ್ಟು ದಲಿತ ಸಂಘಟನೆಗಳು ಮುಂತಾದ ಸಾಮಾಜಿಕ ಬದಲಾವಣೆ ಕಾರ್ಯಕ್ರಮಗಳಲ್ಲಿ ತುಂಬು ಉತ್ಸಾಹದಿಂದ ಪಾಲ್ಗೊಳ್ಳುತ್ತಿರುವ ಇಲ್ಲಿಯ ಮಹಿಳೆಯರು 'ತಮ್ಮ ಮುಂದಾಳತ್ವ ಗ್ರಾಮದ ಅಭಿವೃದ್ಧಿಗೆ ಅಗತ್ಯ'ವೆಂಬುದನ್ನು ಮನಗಂಡಿದ್ದಾರೆ. ಹುಣಸೂರಿನ 'ಪರಿವರ್ತನಾ' ಸಂಸ್ಥೆ ಇವೆಲ್ಲಕ್ಕೂ ಪ್ರೇರಣೆ ನೀಡಿತು. ಈ ಒಕ್ಕೂಟದಲ್ಲಿ ೨೫೦ ಜನ ಮಹಿಳೆಯರ ಮುಂದಾಳ್ತನವಿದೆ! ಸಹಕಾರ, ಸಂಬಂಧ ಹಾಗೂ ಪರಸ್ಪರ ಅಭಿವೃದ್ಧಿಗೆ ಇವರೆಲ್ಲರೂ ಸಾಕ್ಷಿಯಾಗಿದ್ದಾರೆ. ಹುಣಸೂರು ತಾಲ್ಲೂಕಿನ ಶಾಂತಿ ಮಹಿಳಾ ಸಂಘ ಮೈಸೂರಿನ ಜನಾಭಿವೃದ್ಧಿ ಸಂಸ್ಥೆಯ(ಆರ್ಗನೈಸೇಷನ್ ಫಾರ್ ದಿ ಡೆವೆಲಪ್ ಮೆಂಟ್ ಆಫ್ ಪೀಪಲ್ ಒಡಿಪಿ) ಪ್ರೇರಣೆಯಿಂದ ಜನ್ಮ ತಾಳಿತು. ವಿಧವಾ ವಿವಾಹ, ಪತಿಯ ಪರಸ್ತ್ರೀ ಗಮನದಂತಹ ಗ್ರಾಮೀಣ ಮಹಿಳೆಯರ ದಿನನಿತ್ಯದ ಸಮಸ್ಯೆಗಳ ಪರಿಹಾರದೊಂದಿಗೆ ಓದುಬರಹ ಬಾರದ ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದ, ಕೂಲಿ ಮಾಡಿ ಹೊಟ್ಟೆ ಹೊರೆವ ಹೆಂಗಸರ ಈ ಹಳ್ಳಿಯಲ್ಲಿ ಇಂಥ ಅದ್ಭುತವೂ ಸಾಧ್ಯವಾಗಿದೆ. ಊದುಕಡ್ಡಿ ಹೊಸೆಯುವ, ಜಲ್ಲಿಕಲ್ಲು ಒಡೆಯುವ, ಹೊಲಿಗೆ, ಪೆಟ್ಟಿಗೆ ಅಂಗಡಿ ಇಂಥ ಕೆಲಸಗಳನ್ನು ಮಾಡುವ ಮಹಿಳೆಯರು ಸ್ವಸಹಾಯ ಸಂಘದಿಂದ ನೂರಿನ್ನೂರು ರೂಪಾಯಿ ಸಾಲಪಡೆದು ತೀರಿಸುವ ಸಾಮರ್ಥ್ಯ ಹೊಂದಿದ್ದಾರೆ. ಗಂಡ ಹೆಂಡತಿಗೆ ಹೊಡೆಯುವುದು, ಕುಡಿತಕ್ಕೆ ದುಡ್ಡುಕೇಳುವುದು, ದುಶ್ಚಟಗಳು ಇವೆಲ್ಲವೂ ಮಹಿಳೆಯರು ಸಂಘಟಿತರಾಗಿ ಒಗ್ಗಟ್ಟಾದ ಮೇಲೆ ನಿಂತುಹೋಗಿದೆ. 'ಇಂದು ನಮ್ಮ ಸಂಘದ ಯಾವ ಸದಸ್ಯಳಿಗೂ ಅವಳ ಗಂಡ ಹೊಡೆಯುವುದಿಲ್ಲ, ಬದಲಿಗೆ ತುರ್ತು ಅಗತ್ಯ ಬಿದ್ದಾಗ ಅವಳಿಂದಲೇ ಸಾಲ ಪಡೆಯುತ್ತಾನೆ' ಎಂದು ಮಹಿಳೆಯರು ಹೆಮ್ಮೆಯಿಂದ ಹೇಳುವ ಪರಿಸ್ಥಿತಿಯುಂಟಾಗಿದೆ. ಒಟ್ಟಾರೆ ಗಂಡಸರು ಹೆಂಗಸರನ್ನು ನೋಡುವ ದೃಷ್ಟಿಯೇ ಬದಲಾಗಿದೆಯೆಂದರೆ ಮಹಿಳಾ ಸ್ವಾವಲಂಬನೆಗೆ ಇದಕ್ಕಿಂತ ಬೇರೆಯಾದ ಮಹತ್ತ್ವ ಇನ್ನಾವುದರಿಂದ ದೊರೆತೀತು? ೧೮೭ ಮಹಿಳಾ ಸಂಘಗಳು ಸೇರಿ ಮೈಸೂರು ಮುಖ್ಯ ಕೇಂದ್ರವಾಗಿ 'ಮಹಿಳೋದಯ ಮಹಿಳಾ ಒಕ್ಕೂಟ' ಎಂಬ ಬೃಹತ್ ಸಂಘಟನೆ ೧೯೯೨ರ ಜೂನ್ ತಿಂಗಳಲ್ಲಿ ಅಸ್ತಿತ್ವಕ್ಕೆ ಬಂದಿತು. "ಶಿಕ್ಷಣ-ಸಂಘಟನೆ-ಸ್ವಾವಲಂಬನೆ" ಇದು ಮಹಿಳೋದಯದ ಘೋಷಣಾ ವಾಕ್ಯ. ಏಳು ಸಾವಿರ ಮಹಿಳಾ ಸದಸ್ಯರಿದ್ದಾರೆ. ಹತ್ತುವರ್ಷಗಳಲ್ಲಿ ಹಿಂದೆ ಸಂಘಕಟ್ಟುವ ಬಗ್ಗೆ ನಂಬಲಾರದ ಸ್ಥಿತಿಯಲ್ಲಿದ್ದ ಮಹಿಳೆಯರು ಇದೀಗ ಸಮಾಜದಲ್ಲಿ ತಮ್ಮ ಹಕ್ಕುಗಳನ್ನು ಸ್ಥಾಪಿಸುವ ಧೈರ್ಯ ತಾಳಿದ್ದಾರೆ. ಒಟ್ಟಾರೆ ಈ ಬೃಹತ್ ಒಕ್ಕೂಟ ೮೦ ಲಕ್ಷ ರೂಗಳ ವಹಿವಾಟು ನಡೆಸಿದೆ. 'ಹಿಂದೆ ನಾವು

ಒಬ್ಬೊಬ್ಬರೇ ಓಡಾಡಲು ಹೆದರುತ್ತಿದ್ದೆವು. ಈಗ ನಮ್ಮ ಸಂಘದಲ್ಲಿ ಮೀಟಿಂಗ್ ನಡೆಯುವುದೇ ರಾತ್ರಿ ಹತ್ತುಗಂಟೆಯ ಮೇಲೆ. ಒಕ್ಕೂಟದಿಂದಾಗಿ ಭಯವೇ ಹೊರಟುಹೋಗಿದೆ' ಎನ್ನುತ್ತಾರೆ ಕ್ರಿಯಾಶೀಲ ಸದಸ್ಯೆಯರು. ಇಂಥದೊಂದು ಚಮತ್ಕಾರ ಅಬಲೆಯರೆಂದು, ನಿರ್ಗತಿಕರೆಂದು ಕಣ್ಣೀರು ಹಾಕುತ್ತ ದುಸ್ಥಿತಿಯಲ್ಲಿದ್ದ ಮಹಿಳೆಯರು ಸಾಧಿಸಿರುವುದು ಅಪೂರ್ವ ಸಂಗತಿಯೇ ಸರಿ. ಇಂಥ ಸಂಘಟನೆಗಳು ಮುಖ್ಯವಾಗಿ ಪರಸ್ಪರ ಸಹಾಯ, ಸಹಕಾರ ಹಾಗೂ ವಿಶ್ವಾಸದ ಆಧಾರದ ಮೇಲೆಯೇ ನಡೆಯುತ್ತದೆ. ಹೀಗಾಗಿ ಇಂಥ ಸಂಘಗಳಿಗೆ ಸಹಕಾರ ರಂಗದಲ್ಲಿ ಅತ್ಯಂತ ಅಮೂಲ್ಯ ಸ್ಥಾನವುಂಟು. ಸಮಾಜದಲ್ಲಿ ದೀನಸ್ಥಿತಿಗೆ ತಳಲ್ಪಟ್ಟ ಮಹಿಳೆಯರ ಸ್ಥಾನಮಾನವನ್ನು ಅವರೇ ಉನ್ನತಿಗೇರಿಸಿಕೊಂಡ ನಿದರ್ಶನಗಳಿವು.

ವೈಯಕ್ತಿಕ ಸಾಧನೆಗಳು ಎಷ್ಟೇ ಉನ್ನತ ಮಟ್ಟದ್ದಾದರೂ ಸಂಖ್ಯಾದೃಷ್ಟಿಯಿಂದ ಕಡಿಮೆಯಾಗುವುದೆಂಬುದನ್ನು ಮನಗಂಡ ಮಹಿಳೆಯರು ಸಂಘಟಿತರಾಗಿ ಮಹಿಳಾ ಪ್ರಗತಿಗಾಗಿ ಶ್ರಮಿಸುತ್ತಿರುವ ಜ್ವಲಂತ ಉದಾಹರಣೆಗಳು ನಮ್ಮ ಮುಂದಿವೆ. ಇಂಥ ಸ್ವಸಹಾಯ ಗುಂಪು, ಮಹಿಳಾ ಸಂಘ, ಮಹಿಳಾ ಸಹಕಾರ ಸಂಘ, ಮಹಿಳಾ ಸಹಕಾರ ಬ್ಯಾಂಕು. ಇವೆಲ್ಲಕ್ಕೂ ನೆರವು ನೀಡಲು ಸರ್ಕಾರ ಹಲವಾರು ಆರ್ಥಿಕ ಯೋಜನೆಗಳನ್ನು ರೂಪಿಸಿದೆ. ಜೊತೆಗೆ ಭಾರತದ ಸಣ್ಣಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್ (ಎಸ್ ಐಡಿಬಿ), ಮಹಿಳಾ ಉದ್ಯೋಗ ನಿಧಿ ಯೋಜನೆ, ಮಹಿಳಾ ಉದ್ಯಮಿಗಳಿಗೆ ಆರ್ಥಿಕ ನೆರವು ನೀಡಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ, ರಾಷ್ಟ್ರೀಯ ಮಹಿಳಾ ಕೋಶ ಮುಂತಾದ ಸಂಸ್ಥೆಗಳು ವಿವಿಧ ಸ್ಕೀಮು ಹಾಗೂ ಯೋಜನೆಗಳನ್ನು ರೂಪಿಸುತ್ತಿವೆ.

ಮಹಿಳಾ ಸಬಲತೆಗೆ ಸಾಲವೊಂದು ಸಾಧನ. ಮಹಿಳೆಯರಿಗೆ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಸಮಾನ ಸ್ಥಾನಮಾನ, ನಿರ್ಧಾರ ತೆಗೆದುಕೊಳ್ಳಲು ಅಧಿಕಾರ ನೀಡಿದಾಗ ಮಾತ್ರವೇ ಸಬಲತೆಯುಂಟಾಗುತ್ತದೆ ಎನ್ನುತ್ತಾರೆ ಸಹಕಾರ ತಜ್ಞ ಸುರಂಜನಗುಪಾಟ. ತೊಟ್ಟಿಲು ತೂಗುವ ಕೈಗೆ ಸಹಕಾರ ಕ್ಷೇತ್ರವನ್ನೇ ಅದ್ವಿತೀಯ ಉದ್ಯಮ ತೊಟ್ಟಿಲಾಗಿಸಿತು. ಆದರೆ ಇಂಥ ಸಹಕಾರ ಸಂಸ್ಥೆಗಳಲ್ಲಿ ಉಳಿತಾಯ ಮತ್ತು ಸಾಲಗುಂಪುಗಳನ್ನು ರಾಷ್ಟ್ರಾದ್ಯಂತ ವಿವಿಧ ಪ್ರದೇಶಗಳಲ್ಲಿ ವಿವಿಧ ಹೆಸರಿನಿಂದ ಕರೆಯಲಾಗುತ್ತಿದ್ದು, ಇವು ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಸಂಸ್ಥೆಯಾಗಿ ಪರ್ಯಾಯ ಸಮುದಾಯವನ್ನು ಹುಟ್ಟುಹಾಕಿ ಮಹಿಳೆಯರಿಗೆ ತಮ್ಮ ಸಾಲದ ಅವಶ್ಯಕತೆಗಳನ್ನು ಪೂರೈಸುತ್ತಿವೆ. ಮಹಾರಾಷ್ಟ್ರದಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು ಹಾಗೂ ಸಹಕಾರೇತರ ಸಂಸ್ಥೆಗಳ ಜಾಲದೊಂದಿಗೆ ಕೆಲಸ ಮಾಡುವ ಸ್ವಯಂ ಶಿಕ್ಷಣ ಪ್ರಯೋಗ್ ಎಂಬ ಸಂಸ್ಥೆಯು ಮಹಿಳೆಯರ ಸಹಕಾರದ ಮೂಲಕ ಉಳಿತಾಯ ಮತ್ತು ಸಾಲಗಳೆರಡರ ಮೂಲಕ ಆರ್ಥಿಕ ಅಗತ್ಯತೆಗಳನ್ನು ಪೂರೈಸಿಕೊಂಡು ಸಂಪನ್ಮೂಲಗಳನ್ನು ಬೆಳೆಸುವ ವಿಧಾನಗಳ ಬಗ್ಗೆ ಅಧ್ಯಯನ ಕೈಗೊಂಡಿತ್ತು.

ಭಾರತದ ಗ್ರಾಮೀಣ ಬಡವರು ಮತ್ತು ಮಹಿಳೆಯರಿಗಾಗಿ ಆರ್ಥಿಕ ಸೇವೆಗಳನ್ನು ಕುರಿತ ವಿಶ್ವ ಬ್ಯಾಂಕ್ ವರದಿಯಲ್ಲಿ ಸಾಧ್ಯತೆ ಹಾಗೂ ನಿರಂತರತೆ ಮಾರ್ಚ್, ೧೯೯೫ ಗೃಹ ಸಂಬಂಧಿತ ವಿವಿಧ ಉದ್ದೇಶಗಳಿಗಾಗಿ ಮಹಿಳೆಯರು ಪಡೆದ ಸಾಲಗಳನ್ನು ಹೀಗೆ ಉಲ್ಲೇಖಿಸಿದೆ :

೧. ಸಾಲವೊದಗಿಸುವ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಶೇ.೧೬ರಷ್ಟನ್ನು ಔಪಚಾರಿಕ ಮೂಲಗಳು ಎಂದರೆ ಬ್ಯಾಂಕುಗಳು ಮತ್ತು ಸಹಕಾರಸಂಘಗಳ ಮೂಲಕ ಹಾಗೂ ಉಳಿದ ಸೇ೫೮ಳರಷ್ಟನ್ನು ಅನೌಪಚಾರಿಕ ಮೂಲಗಳಿಂದ ಪಡೆಯಲಾಗಿತ್ತು.

೨. ಸಾಲದ ಬಳಕೆಯನ್ನು, ಒಟ್ಟು ಸಾಲದ ಶೇ.೩೦ರಷ್ಟನ್ನು ಉತ್ಪಾದನಾ ಉದ್ದೇಶಗಳಿಗಾಗಿ ಉಳಿದ ಶೇ.೬೦ರಷ್ಟನ್ನು ಗ್ರಾಹಕ ಅವಶ್ಯಕತೆಗಳಿಗಾಗಿ ಮಾಡಲಾಗಿತ್ತು.

೩. ಈ ಅಧ್ಯಯನದಲ್ಲಿ ವಾರ್ಷಿಕ ಸಾಲಬಳಕೆ ಸರಾಸರಿಯಲ್ಲಿ ಪುರುಷರು ಬಳಸಿದ್ದುದಕ್ಕಿಂತ ಮಹಿಳೆಯರೇ ಹೆಚ್ಚು ಪ್ರಮಾಣದಲ್ಲಿ ಬಳಸಿದ್ದುದಾಗಿ ತಿಳಿದುಬರುತ್ತದೆ.

ಸಹಕಾರ ಬ್ಯಾಂಕು ಮತ್ತು ಸಂಘಗಳ ಮೂಲಕ ಸಾಲಪಡೆದು ಮರು ಸಂದಾಯ ಮಾಡುವ ಮಹಿಳೆಯರು ಇದೇ ಕಾರಣದಿಂದಾಗಿ ಒಟ್ಟಿಗೆ ಸೇರಿ, ತಮ್ಮ ಹಾಗೂ ಇತರರ ಬಗ್ಗೆ ತಿಳಿದುಕೊಳ್ಳುವುದಲ್ಲದೆ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ. ಇಂಥ ಚಟುವಟಿಕೆಗಳಿಂದ ಮಹಿಳೆಯರು ಹಲವಾರು ಸಮಸ್ಯೆ, ವಿಷಯಗಳ ಬಗ್ಗೆ ಒಟ್ಟು ಅಭಿಪ್ರಾಯ ಪಡೆದುಕೊಂಡು ಕಾರ್ಯನಿರ್ವಹಿಸಲು ಸಾಧ್ಯ. ಅಷ್ಟೇ ಅಲ್ಲ ಹಣದ ನಿರ್ವಹಣೆಯಲ್ಲಿ ಆತ್ಮವಿಶ್ವಾಸ, ಸಾಮರ್ಥ್ಯ ಹೊಂದುವುದಲ್ಲದೆ ಮಹಿಳಾಭಿವೃದ್ಧಿ ಯೋಜನೆಗಳಿಗಾಗಿ ಸಂಪನ್ಮೂಲಗಳ ಕ್ರೋಡೀಕರಣ ಮತ್ತು ಬಳಕೆಯ ಬಗ್ಗೆ ಕೂಡ ನಿರ್ಧರಿಸಲು ಸಾಧ್ಯವಾಗುತ್ತದೆ. ಇದರಿಂದ ಸಮಾಜದಲ್ಲಿ, ಸಮುದಾಯದಲ್ಲಿ ತಮ್ಮ ಆರ್ಥಿಕ ಸ್ಥಿತಿಗತಿ, ಸ್ಥಾನಮಾನದಲ್ಲಿ ಬದಲಾವಣೆ ಬಗ್ಗೆ ಇತರರ ಗಮನ ಸೆಳೆಯುವತ್ತ ಕೂಡ ಸಫಲರಾಗುತ್ತಾರೆ. ಸಹಕಾರ ಸಂಘಗಳು ಯಶಸ್ವಿಯಾಗಲು ಉತ್ತಮ ಆರ್ಥಿಕ ನಿರ್ವಹಣೆ ಅತಿಮುಖ್ಯವಾಗುತ್ತದೆ ಎಂದರೆ:

೧. ನಿಧಿಗಳನ್ನು ದಕ್ಷತೆಯಿಂದ ಬಳಸುವುದು

೨. ಎಲ್ಲ ವ್ಯವಹಾರಗಳನ್ನು ಪಾರದರ್ಶಕ ರೀತಿಯಲ್ಲಿ ನಡೆಸುವುದು

೩. ನಿಯತ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನೆ

೪. ಈ ಎಲ್ಲ ಕರ್ತವ್ಯಗಳನ್ನು ಲೆಕ್ಕಪರಿಶೋಧನೆ ಸಮಯದಲ್ಲಿ ಚಾಚೂತಪ್ಪದೆ ಪಾಲಿಸಿರುವ ಬಗ್ಗೆ ತಪಾಸಣೆ ನಡೆಸುವುದು

ಮ್ಯಾನೇಜರ್ ಅಥವಾ ವ್ಯವಸ್ಥಾಪಕರು ಸಹಕಾರ ಸಂಸ್ಥೆಯ ಎಲ್ಲ ದಾಖಲೆ, ದಸ್ತಾವೇಜುಗಳನ್ನು ಎಂದರೆ

- ಉಳಿತಾಯ ರಿಜಿಸ್ಟರ್
- ಸಾಲದ ರಿಜಿಸ್ಟರ್
- ವೈಯಕ್ತಿಕ ಪಾಸ್‌ಬುಕ್ಕಗಳು
- ಸಂಸ್ಥೆಯ ಆದಾಯ ಮತ್ತು ವೆಚ್ಚ, ನಗದು ಹಣವನ್ನು ಸೂಚಿಸುವ ನಗದು ಪುಸ್ತಕ
- ಮಿನಿಟ್ ಪುಸ್ತಕಗಳು
- ಜಮೆ ಬಗ್ಗೆ ಸ್ವೀಕೃತಿಗಳು

ಇವೆಲ್ಲವನ್ನು ತಹಲ್‌ವರೆಗೆ ನಮೂದಿಸಿರತಕ್ಕದ್ದು.

ಇಂದು, ಸಹಕಾರ ಸಂಸ್ಥೆಗಳ ಮೂಲಕ ಮಹಿಳಾ ಸಬಲತೆ, ಸ್ವಾವಲಂಬನೆ ಸಾಧ್ಯವೆ ಎಂಬ ಬಗ್ಗೆ ವಿವಿಧಮಟ್ಟಗಳಲ್ಲಿ ಪ್ರಶ್ನೆಗಳು ಏಳಬಹುದು. ಏಕೆಂದರೆ ಸಹಕಾರ ಸಂಸ್ಥೆಗಳಲ್ಲಿ ಬೇರೂರಿದ ಪುರುಷ ಧುರೀಣರು ಅವೇ ಸಂಸ್ಥೆಗಳ ಮೂಲಕ ಬೆಳೆದು ರಾಜಕಾರಣದಲ್ಲಿ ಪ್ರವೇಶಿಸಿ ಮಂತ್ರಿ, ಎಂ.ಎಲ್.ಎ., ಎಂ.ಪಿ.ಗಳಾಗಿ ಮೆರೆಯುವುದರ ಜೊತೆಗೆ ತಾವು ಮುಂದೆ ಬಂದ ಸಹಕಾರ ಸಂಸ್ಥೆಗಳಲ್ಲಿ ಅನೇಕ ದುಷ್ಕೃತ್ಯ, ದುರುಪಯೋಗದಿಂದ ಅವುಗಳನ್ನೇ ಮುಳುಗಿಸಿರುವ ಬಗ್ಗೆ ಪತ್ರಿಕಾ ವರದಿಗಳನ್ನು ಓದುತ್ತೇವೆ. ಆದ್ದರಿಂದ ಇಂಥ ಸಂಸ್ಥೆಗಳು ಮಹಿಳೆಯರಿಗೆ ಸಬಲತೆ, ಸ್ವಾವಲಂಬನೆ ಒದಗಿಸಲು ಸಾಧ್ಯವೇ ಎಂದು ಟೀಕಾಕಾರರು ವ್ಯಂಗ್ಯವಾಡಬಹುದು. ಇದರಲ್ಲಿ ತಥ್ಯವೂ ಇಲ್ಲದಿಲ್ಲ. ಆದರೆ ಯಾವುದೇ ಕ್ಷೇತ್ರದಲ್ಲಿರುವ ಧುರೀಣರು ಪ್ರಾಮಾಣಿಕರಾಗಿ, ಸೇವಾಮನೋಭಾವ, ಸೌಜನ್ಯದಿಂದ ದುಡಿದರೆ ಆಯಾಕ್ಷೇತ್ರಗಳು, ಸಮೃದ್ಧವಾಗಿ ಬೆಳೆಯುವುದಿಲ್ಲವೆ. ಇದು ಸಹಕಾರ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಸಾಲನೀಡಿ, ಮರುಪಾವತಿ ಮಾಡಿ ಮಹಿಳೆಯರು ಸ್ವಾವಲಂಬಿತರಾಗುವುದನ್ನು ಖಂಡಿತ ರುಜುವಾತುಪಡಿಸಬಹುದಾಗಿದೆ.

ಮಹಿಳಾ ಸಹಕಾರಿಗಳ ಸಮಸ್ಯೆಗಳು

೧. **ಮಹಿಳಾ ಸದಸ್ಯರ ಸಂಖ್ಯೆಯ ಕೊರತೆ :** ಕರ್ನಾಟಕದಲ್ಲಿ ಈಗ ಒಂದು ಸಾವಿರಕ್ಕೂ ಹೆಚ್ಚು ಮಹಿಳಾ ಸಹಕಾರ ಸಂಘಗಳಿವೆ. ೩೦೦ಕ್ಕೂ ಹೆಚ್ಚು ಹಾಲು ಉತ್ಪಾದಕ ಸಹಕಾರ ಸಂಘಗಳಿವೆ. ಪ್ರಾರಂಭದ ಹಂತದಲ್ಲಿ ಮಹಿಳೆಯರನ್ನು ಮನೆಯಿಂದ ಹೊರಕ್ಕೆ ಕರೆತರುವುದು ಕೂಡ ಕಷ್ಟವಾಗಿತ್ತು. ಕೌಟುಂಬಿಕ ಅಡಚಣೆಗಳು ಮನೆಯವರ ವಿರೋಧ, ಮಹಿಳೆಯರ ಕಾರ್ಯಕ್ಷಮತೆ, ಬುದ್ಧಿವಂತಿಕೆ ಬಗ್ಗೆ ವಿಶೇಷವಾಗಿ ಹಣ, ಲೆಕ್ಕಪತ್ರಗಳ ಬಗ್ಗೆ ತಿಳಿವಳಿಕೆಯಿರುವುದಿಲ್ಲವೆಂಬ ತಪ್ಪು ಲೆಕ್ಕಾಚಾರದಿಂದ ಮಹಿಳೆಯರಿಗೆ ಕೀಳರಿಮೆ ಉಂಟಾಗುತ್ತಿತ್ತು. ಬಲವಂತವಾಗಿ ಮನವೊಲಿಸಿ ಅತಿ ಕಡಿಮೆ ಷೇರು ಹಣದಿಂದ ಸಹಕಾರ

ಸಂಘಗಳನ್ನು ಸ್ಥಾಪಿಸಲಾಗುತ್ತಿತ್ತು. ೧೯೬೬ರಲ್ಲಿ ಈ ಬಗ್ಗೆ ಕಾರ್ಯಕ್ರಮ ರೂಪಿಸಿ ಸದಸ್ಯರಿಗೆ ಪ್ರೋತ್ಸಾಹ ತರಬೇತಿ ನೀಡುವ ವ್ಯವಸ್ಥೆಯುಂಟಾಯಿತು. ಇನ್ನು ಕ್ರಿಯಾಶೀಲರಾಗಿ ಸಂಘದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವ ಸಂಖ್ಯೆ ತುಂಬಾ ಕಡಿಮೆಯಿರುತ್ತದೆ. ಇದರಿಂದ ವಿವಿಧೋದ್ದೇಶ ಸಹಕಾರ ಸಂಘಗಳಲ್ಲಿ ಪ್ರಗತಿ ಯೋಜನೆಗಳನ್ನು ರೂಪಿಸುವುದರಲ್ಲಿ ತೊಡಕಾಗುತ್ತದೆ. ಯಾವ ದಿಕ್ಕಿನಲ್ಲಿ ಹೋಗಬೇಕೆಂಬ ಸಮಸ್ಯೆಯುಂಟಾಗಿರುತ್ತದೆ. ಒಂದೇ ಬಗೆಯ ಕಾರ್ಯಕ್ರಮಗಳಿದ್ದರೆ ಹೆಚ್ಚು ಜನರನ್ನು ಆಕರ್ಷಿಸಲು ಸಾಧ್ಯವಾಗುವುದಿಲ್ಲ. ಸಹಕಾರ ಸಂಘವನ್ನು ಪ್ರಾರಂಭಿಸುವಾಗ ಹಲವಾರು ಅಂಶಗಳು ಪ್ರಮುಖವಾಗಿ ಎದುರಾಗುತ್ತವೆ. ಹಣದ ಕೊರತೆಯಿರುವವರು ಸಾಲಪಡೆದು, ತೀರಿಸಿ ಸಂಘಕಟ್ಟುವ ಕೆಲಸಕ್ಕೆ ಮುಂದಾಗಬೇಕು. ನೋಂದಣಿ ಕಡ್ಡಾಯವಾದ್ದರಿಂದ ಸದಸ್ಯರಿಗೆ ಸಹಕಾರ ಅಧಿನಿಯಮ ಹಾಗೂ ಸಂಘದ ಉಪನಿಯಮಗಳ ಬಗ್ಗೆ ಅರಿವು ಮೂಡಿಸಬೇಕು.[೧೮] ಸಹಕಾರಿ ಆಂದೋಲನದ ಕಾರ್ಯತಂತ್ರವನ್ನು ರೂಪಿಸುವಾಗ ಬದಲಾವಣೆಗಳನ್ನು ಗುರುತಿಸುವಲ್ಲಿ ಸದಸ್ಯರ ಆರ್ಥಿಕ-ಸಾಮಾಜಿಕ ಹಾಗೂ ಮಾನಸಿಕ ಸಿದ್ಧತೆಯನ್ನು ಅರಿಯುವುದು ಕಷ್ಟವಾಗುತ್ತದೆ.

೨. ರಾಜಕಾರಣಿಗಳ ಮಧ್ಯಪ್ರವೇಶ : ಮಹಿಳೆಯರ ಜೀವನದ ಏರುಪೇರು, ಸಂಕೀರ್ಣತೆ ಕಳೆದು, ಸ್ವಾವಲಂಬನೆ ಮೂಲಕ ಸಮಾಜದಲ್ಲಿ ಆಕೆಗೆ ಗೌರವಯುತ ಜೀವನದ ಅವಕಾಶ ಕಲ್ಪಿಸಲು ಸಹಕಾರ ಚಳವಳಿ ಮಹಿಳೆಯರಿಂದಲೇ ಆರಂಭವಾಗಬೇಕು. ಆದರೆ ಸರ್ಕಾರದ ಹಸ್ತಕ್ಷೇಪವಿಲ್ಲದಿದ್ದರೂ, ಹಣ, ಅಧಿಕಾರ, ವರ್ಚಸ್ಸು ಮುಂತಾದವುಗಳ ದಾಹದಿಂದ ರಾಜಕಾರಣಿಗಳು ಈ ಕ್ಷೇತ್ರವನ್ನು ದುರುಪಯೋಗ ಪಡಿಸಿಕೊಂಡಿರುವ ಅನುಭವ ಸಾಕಷ್ಟು ಪ್ರಚಾರ ಕಂಡಿದೆ. ಗೆದ್ದಲು ಕಟ್ಟಿದ ಹುತ್ತದಲ್ಲಿ ಹಾವು ಬಂದು ಸೇರುವಂತೆ ತ್ಯಾಗ, ನಂಬಿಕೆ, ಸೇವಾ ಮನೋಭಾವದಿಂದ ಸಂಘವನ್ನು ಕಟ್ಟಿ ಅದು ಪ್ರೌಢಾವಸ್ಥೆಗೆ ಬಂದು ಹಲವರಿಗೆ ನೆರಳು ಕೊಡುವ ವ್ಯವಸ್ಥೆಯಾದಾಗ ಮುಖಂಡರು, ಸದಸ್ಯರು ಅಥವಾ ಹೊರಗಿನ ವ್ಯಕ್ತಿಗಳು ದುರುಪಯೋಗ ಅಥವಾ ಮಾರ್ಗಪಲ್ಲಟ ಮಾಡುವ ಸಮಸ್ಯೆ ಸಾಮಾನ್ಯವಾಗಿ ಉದ್ಭವಿಸುತ್ತದೆ. ರಾಜಕಾರಣಿಗಳು ಸಹಕಾರ ಸಂಘಗಳು ತಮ್ಮ ರಾಜಕೀಯ ಜೀವನದ ಯಶಸ್ಸಿನ ಮೊದಲ ಮೆಟ್ಟಿಲೆಂದು ಭಾವಿಸುತ್ತಾರೆ. ತಾವು ಮೇಲೇರುತ್ತ ಹೋದಂತೆ ಆಂದೋಲನದ ಮುಖ್ಯ ಅಂಗಗಳನ್ನೇ ಅಸ್ತವ್ಯಸ್ತಗೊಳಿಸಿ ಅದರ ಆಂತರಿಕ ಶಕ್ತಿಯನ್ನೇ ಕುಂಠಿತಗೊಳಿಸುತ್ತಾರೆ. [೧೯]"ವಿಧಾನಸಭಾ ಸದಸ್ಯ(ಎಂಎಲ್ ಎ), ಲೋಕಸಭಾ ಸದಸ್ಯ(ಎಂಪಿ) ರಾಗುವುದನ್ನು ತಪ್ಪಿಸಿದಲ್ಲಿ ನಾವು ನಿಷ್ಠಾವಂತರಾದ ಹಲವಾರು ಸಹಕಾರ ಧುರೀಣರನ್ನು ಸೃಜಿಸಬಹುದಾಗಿದ್ದು, ಅವರು ಜನರ ಮೂಲ ಅವಶ್ಯಕತೆಗಳನ್ನು ಪೂರೈಸಲು ಸಹಕಾರ ಚಳವಳಿಗೆ ಹೊಸ ಆಯಾಮವನ್ನು ಕೊಡುವರೆಂದು ಆಶಿಸಬಹುದಾಗಿದೆ. ಜೊತೆಗೆ ಸಹಕಾರ ಚಳವಳಿಯ ಸುಧಾರಣೆಗಾಗಿ ವೃತ್ತಿಪರ ಆಡಳಿತ ನಿರ್ವಹಣೆಯನ್ನೂ ಒದಗಿಸಬಹುದಾಗಿರುತ್ತದೆ". ಇದನ್ನು ನಾವು ಮಹಿಳಾ

ಮುಖಂಡರಿಗೆ ಅನ್ವಯಿಸಲು, ಪ್ರಸ್ತುತ ಸಂದರ್ಭದಲ್ಲಿ ಸಾಧ್ಯವಿಲ್ಲವಾದರೂ ಪುರುಷರ ಒತ್ತಾಯ, ಆಮಿಷ, ಒತ್ತಡ, ಬೆದರಿಕೆಗಳು ಇಲ್ಲವೆಂದು ಅಥವಾ ಮುಂದೆ ಇರಲಾರದೆಂದು ಖಂಡಿತವಾಗಿ ಹೇಳಲಾಗುವುದಿಲ್ಲ. ಆದ್ದರಿಂದ ಇಂಥ ಪರಿಸ್ಥಿತಿ ಉದ್ಭವಿಸದಂತೆ ಮಹಿಳಾ ಸಹಕಾರಿಗಳು ಕಟ್ಟೆಚ್ಚರ ದಿಂದಿರಬೇಕು.

೩. **ಸಹಕಾರ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳದಿರುವುದು :** ಆಯಾ ಸಹಕಾರ ಸಂಘ, ಬ್ಯಾಂಕುಗಳು, ರಾಜ್ಯ ಮಹಿಳಾ ಸಹಕಾರ ಫೆಡರೇಷನ್, ಸಹಕಾರ ವ್ಯವಸ್ಥಾಪನಾ ಸಂಸ್ಥೆಗಳು ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಿ ಸಹಕಾರ ತತ್ತ್ವಗಳು, ಆದರ್ಶ ರೀತಿ ನೀತಿ, ನಿಯಮಗಳು ಪ್ರಕ್ರಿಯೆ ಸಂಖ್ಯೆಯಲ್ಲಿ ಮಹಿಳೆಯರು ಕುಂಟುನೆಪವೊಡ್ಡಿ ತರಬೇತಿಗೆ ಹಾಜರಾಗುವುದಿಲ್ಲ. ಇಂಥ ದಿವ್ಯನಿರ್ಲಕ್ಷ್ಯದಿಂದ ಅವರಿಗೆ ಮಾಹಿತಿ, ತಾಂತ್ರಿಕ ಕ್ರಮ ಮುಂತಾದ ಮುಖ್ಯ ವಿಷಯಗಳು ತಿಳಿಯದೆ ಕರ್ತವ್ಯ ಪ್ರಜ್ಞೆಯುಂಟಾಗುವುದಿಲ್ಲ. ಕೆಲವೊಮ್ಮೆ ತರಬೇತಿಗಳನ್ನು ಶಿಸ್ತಿನಿಂದ ನಡೆಸದಿರುವುದೂ ಇದಕ್ಕೆ ಕಾರಣವಾಗಬಹುದು.

೪. **ಚಾಲ್ತಿ ಬಂಡವಾಳದ ಕೊರತೆ :** ಬಹುಪಾಲು ಮಹಿಳಾ ಸಹಕಾರ ಸಂಘಗಳಲ್ಲಿ ಚಾಲ್ತಿ ಬಂಡವಾಳದ ಕೊರತೆ ಕಂಡುಬರುತ್ತದೆ. ಸದಸ್ಯೆಯರು ಪಡೆದ ಸಾಲ, ಬಡ್ಡಿಯನ್ನು ಹಿಂದಿರುಗಿಸದಿದ್ದರೆ, ಷೇರು ಹಣವನ್ನು ಸಂದಾಯಮಾಡದಿದ್ದರೆ ಈ ಸಮಸ್ಯೆ ಎದುರಾಗುತ್ತದೆ. ವರಮಾನ ಕಡಿಮೆಯಾದರೆ ಹೆಚ್ಚು ಮೊಬಲಗನ್ನು ಬಂಡವಾಳದಲ್ಲಿ ತೊಡಗಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಹಣಕಾಸು ನೆರವು ನೀಡುವ ಸಂಸ್ಥೆಗಳು, ಬ್ಯಾಂಕುಗಳು ಇಂಥ ಸಹಕಾರ ಸಂಘಗಳ ಬಗ್ಗೆ ಆಸಕ್ತಿ ತೋರಿಸುವುದಿಲ್ಲ. ಕೊನೆಗೊಮ್ಮೆ ವಹಿವಾಟು ನಿಂತುಹೋಗಿ ಸಂಘ ಸ್ಥಗಿತವಾಗುತ್ತದೆ.

೫. **ಕೈಗಾರಿಕಾ ಸಹಕಾರ ಸಂಘಗಳಿಗೆ ಹೆಚ್ಚಿನ ಆದ್ಯತೆ ನೀಡುವುದು :** ಕೈಗಾರಿಕಾ ಸಹಕಾರ ವಲಯದಲ್ಲಿ ಇರುವ ಬಹುತೇಕ ಮಹಿಳಾ ಸಹಕಾರ ಸಂಘಗಳು ಸಾಮಾನ್ಯವಾಗಿ ಹಪ್ಪಳ, ಉಪ್ಪಿನಕಾಯಿ, ಸಾಂಬಾರ ಪದಾರ್ಥಗಳು, ಕಾಗದದ ಲಕೋಟೆ, ಹೊಲಿಗೆ, ಕಸೂತಿ, ಕರಕುಶಲ ವಸ್ತುಗಳು ಮುಂತಾದವುಗಳನ್ನೇ ಉತ್ಪಾದನೆ ಮಾಡುತ್ತವೆ. ಮಹಿಳೆಯರು ಉದ್ಯಮರಂಗದ ಇನ್ನಿತರ ಘಟಕಗಳಾದ ಕಂಪ್ಯೂಟರ್, ಯಂತ್ರಭಾಗಗಳು, ಸಿದ್ಧ ಉಡುಪು, ಇನ್ನಿತರ ತಯಾರಿಕೆಗಳತ್ತ ಗಮನಹರಿಸಿ ಸ್ಪರ್ಧಾಕಣಕ್ಕೆ ಇಳಿಯಲು ಪ್ರಯತ್ನಿಸದಿರುವುದೇ ಇದಕ್ಕೆ ಕಾರಣ. ಈ ಬಗ್ಗೆ ತಿಳಿವಳಿಕೆ ಮೂಡಿಸಬೇಕಾಗಿದ್ದು, ಈಗಿನ ವಿವಿಧೋದ್ದೇಶ ಸಹಕಾರ ಸಂಘಗಳಲ್ಲಿ ಇವುಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಆದರೆ ಪರಿಣತರಾದ, ಇಂಜಿನಿಯರಿಂಗ್ ಚಾರ್ಟರ್ಡ್ ಅಕೌಂಟೆಂಟ್, ಬಿಸಿನೆಸ್ ಮ್ಯಾನೇಜ್‌ಮೆಂಟ್ ಮಾಡಿರುವ ಮಹಿಳೆಯರು ಕ್ಷೇತ್ರಕ್ಕೆ ಕಾಲಿಡದೆ ಹೆಚ್ಚಿನ ಹಣಸಂಪಾದನೆಗಾಗಿ ಬಹುರಾಷ್ಟ್ರೀಯ ಕಂಪೆನಿಗಳಿಗೆ, ವಿದೇಶಿ ಉದ್ಯೋಗಗಳಿಗೆ ಶರಣಾಗುತ್ತಿರು

ವುದರಿಂದ ದೇಶೀಯ ಹಾಗೂ ಮಹಿಳಾ ಸ್ಥಾನಮಾನದ, ಸ್ವಾವಲಂಬನೆಯ ಗುರಿಯನ್ನು ಸಹಕಾರದ ಮೂಲಕ ತಲುಪಿಸಲು ಸಾಧ್ಯವಾಗುತ್ತಿಲ್ಲ. ಈ ಪರಿಸ್ಥಿತಿ ತಪ್ಪಿ ವಿದ್ಯಾವಂತ, ಸಂಪನ್ಮೂಲ ಮಹಿಳೆಯರು `ಅವೇಕ್'ನಂಥ ಸಂಸ್ಥೆ ಮೂಲಕ ಅಥವಾ ಇನ್ನಾವುದೇ ರೀತಿಯಿಂದ ಮಹಿಳೆಯರ ಪ್ರಗತಿಗೆ ನೆರವಾಗಬೇಕು.

೬. **ಸರಕು ಸಾಗಣೆ ಮತ್ತು ಮಾರುಕಟ್ಟೆ ಸಮಸ್ಯೆ :** ಮಹಿಳಾ ಉದ್ಯಮಿಗಳಿಗೆ ಇದೊಂದು ದೊಡ್ಡ ಸಮಸ್ಯೆ. ಉದಾಹರಣೆಗೆ ಮೀನುಗಾರಿಕೆ ಮಹಿಳಾ ಸಂಘಗಳಿಗೆ ಕಡಲ ತೀರದಿಂದ ಮೀನುಗಳನ್ನು ಹೆಚ್ಚು ವ್ಯಾಪಾರ ನಡೆಯುವ ಸಮೀಪದ ಪಟ್ಟಣ ಅಥವಾ ನಗರಕ್ಕೆ ಕೊಂಡೊಯ್ಯಲು ತುಂಬ ಕಷ್ಟವಾಗುತ್ತದೆ. ಮುಷ್ಕರ, ಅಪಘಾತ, ಅಥವಾ ಮಳೆಗಾಲಗಳಲ್ಲಂತೂ ವ್ಯವಹಾರ ನಡೆಸಲು ಅಸಾಧ್ಯವಾಗುತ್ತದೆ. ಇದು ಹೈನಗಾರಿಕೆ, ಕೋಳಿಸಾಗಣೆ, ಅಣಬೆ ರೇಷ್ಮೆ ಬೇಸಾಯ ಮುಂತಾದವುಗಳಿಗೂ ಅನ್ವಯಿಸುತ್ತದೆ. ಪರಿಣಾಮವಾಗಿ ಹೊಟ್ಟೆಗೂ ಸಿಗದಷ್ಟು ನಷ್ಟದ, ಬಡತನದ ಪರಿಸ್ಥಿತಿ ಉಂಟಾಗಬಹುದು.

೭. **ಉತ್ತಮ ಮುಖಂಡತ್ವದ ಕೊರತೆ :** ಇದರಿಂದ ಸಹಕಾರ ಸಂಘದ ಪ್ರಗತಿಯೇ ಸ್ಥಗಿತವಾಗಬಹುದು. ಹಾಗೂ ಕಚ್ಚಾವಸ್ತುಗಳನ್ನು ಪಡೆಯಲು, ಮಾರುಕಟ್ಟೆ, ಮಧ್ಯವರ್ತಿಗಳ ಕಾಟ, ಬೆಲೆಗಳಲ್ಲಿ ಏರುಪೇರು ಮುಂತಾದ ಅತಿ ಪ್ರಮುಖ ಸಮಸ್ಯೆ ಉದ್ಭವಿಸುವ ಅಪಾಯವಿರುತ್ತದೆ.

ಪರಿಹಾರೋಪಾಯಗಳು : ಈ ಎಲ್ಲ ಸಮಸ್ಯೆಗಳ ಬಗ್ಗೆ ಆಲೋಚಿಸಿದಾಗ ಮುನ್ನಡೆ ಸಾಧ್ಯವೇ ಎಂಬ ಪ್ರಶ್ನೆ ಮೂಡುವುದು ಸಹಜ. ಆದರೆ ಪ್ರತಿಭಾವಂತರಿಗೆ ಎಲ್ಲ ರಂಗಗಳಲ್ಲಿಯೂ ಸಮಸ್ಯೆ, ಸವಾಲು ಎದುರಾಗುವುದರಲ್ಲಿ ಸಂದೇಹವಿಲ್ಲ. ಅವುಗಳನ್ನು ಎದುರಿಸಿ ಗುರಿಸಾಧನೆ ಮಾಡುವುದೇ ಯಶಸ್ವಿಗಳಾದ ವ್ಯಕ್ತಿಗಳ ಉದ್ದೇಶವಾಗಿರಬೇಕು. ಅದನ್ನು ಸಾಧಿಸುವ ಛಲ ಅತಿಮುಖ್ಯ. ಮಹಿಳಾ ಸಹಕಾರಿಗಳು ಮಾರುಕಟ್ಟೆ ಅಧ್ಯಯನ ನಡೆಸುವ ಮೂಲಕ, ಗ್ರಾಹಕರನ್ನು ಭೇಟಿಮಾಡಿ ಕುಂದುಕೊರತೆಗಳನ್ನು ಅರಿತು ವ್ಯವಹಾರವನ್ನು ನಿರಂತರವಾಗಿ ಮತ್ತು ಲಾಭದಾಯಕವಾಗಿ ನಡೆಸಲು ಆಗಾಗ ಉತ್ಪನ್ನಗಳನ್ನು ಬದಲಿಸುತ್ತಿರಬೇಕು. ಮಹಿಳಾ ಸಹಕಾರಿ ಸಂಘಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಮೂಲ ಬಂಡವಾಳವನ್ನು ಪೂರ್ವ ಅಗತ್ಯತೆ(pr-Requisit)ಯಾಗಿ ಇಟ್ಟುಕೊಳ್ಳಬೇಕು. ಬಂಡವಾಳ ಮೂಲವನ್ನು ಬಲಪಡಿಸಲು ಸರ್ಕಾರವು ಹೆಚ್ಚು ಹೆಚ್ಚು ಷೇರುಗಳನ್ನು ಪಡೆಯಬೇಕಲ್ಲದೆ, ಕಡಿಮೆ ಬಡ್ಡಿಯ ಸಾಲಗಳನ್ನು ನೀಡುವ ಮೂಲಕ ಮಹಿಳಾ ಸಹಕಾರ ಸಂಘಗಳ ಚಾಲ್ತಿ ಬಂಡವಾಳವನ್ನು ಹೆಚ್ಚಿಸಬೇಕು. ಸದಸ್ಯತ್ವ ಸಂಖ್ಯೆಯನ್ನು ಏರಿಸಲು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಿಳೆಯರನ್ನು ಆಕರ್ಷಿಸಬೇಕು. ಮೀನುಗಾರಿಕೆಯಂಥ ಋತುಮಾನ ಆಧಾರಿತ ಸಹಕಾರ ಸಂಘಗಳಲ್ಲಿ ಬದಲಿ ಕಾರ್ಯಕ್ರಮಗಳನ್ನು ರೂಪಿಸಬಹುದು. ಮಹಿಳಾ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ನಿರ್ದೇಶಕ

ಮಂಡಲಿಯವರು ಸಹಕಾರ ಸಂಘಗಳ ಬೆಳವಣಿಗೆಗೆ ಅತ್ಯವಶ್ಯವಾದ ತರಬೇತಿ ಸೌಲಭ್ಯಗಳನ್ನು ತಮ್ಮ ಸದಸ್ಯೆಯರಿಗೆ ಒದಗಿಸಲು ರಾಜ್ಯ ಮಟ್ಟದ ತರಬೇತಿ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದುವುದೂ ಅವಶ್ಯ.

ಇತ್ತೀಚಿನ ಜಾಗತೀಕರಣ ಹಾಗೂ ಉದಾರೀಕರಣದ ಹೆಸರಿನಲ್ಲಿ ವಿಶ್ವಾದ್ಯಂತ ಕೊಳ್ಳುಬಾಕ ಸಂಸ್ಕೃತಿ ಕಾಲಿಟ್ಟಿದೆ. ಔದ್ಯಮಿಕ ಹಿಂತೆಗೆತ(Industrial Recession) ರಾಷ್ಟ್ರದ ಆರ್ಥಿಕ ನೀತಿಯ ಮೇಲೆ ಪರಿಣಾಮ ಬೀರಿದೆ. ಇದರಿಂದ ಬೃಹತ್ ಉದ್ಯಮಗಳೇ ವಹಿವಾಟನ್ನು ಸ್ಥಗಿತಗೊಳಿಸುವ ಪರಿಸ್ಥಿತಿಯುಂಟಾಗಿದೆ. ಜಾಗತಿಕ ಸ್ಪರ್ಧಾಕಣದಲ್ಲಿ ಬಹುರಾಷ್ಟ್ರೀಯ ಕಂಪನಿಗಳೂ ಕುಸಿಯುತ್ತಿರುವುದರಿಂದ ಬೃಹತ್ ಉದ್ಯಮಿಗಳಿಗೆ ಭಾರಿ ಅವಕಾಶಗಳನ್ನು ಕೊಡಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಇದರಿಂದ ಸಾಮಾನ್ಯ ಹಾಗೂ ಬಡಜನರ, ಮಹಿಳೆಯರ ಆಧಾರ ಸಂಸ್ಥೆಯೆನಿಸುವ ಸಹಕಾರ ಚಳವಳಿಗೆ ಕೊಡಲಿಯೇಟು ಬೀಳಬಹುದು. ನಿಧಿಗಳು ದೊರಕದಿರುವ ಸಂಭವವೂ ಉಂಟಾಗುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಮಹಿಳಾ ಸಹಕಾರಿಗಳು ಸೂಕ್ತ ಆಲೋಚನೆ ನಡೆಸಿ ಪರಿಸ್ಥಿತಿಯನ್ನು ನಿಭಾಯಿಸಬೇಕು.

ಸಹಕಾರ ಸಂಘಬ್ಯಾಂಕುಗಳ ಲೆಕ್ಕ ಪರಿಶೋಧನೆ(Auditing)

[೨೦]ಸಹಕಾರ ಸಂಘಗಳ ಆಡಳಿತದಲ್ಲಿ, ಅವುಗಳ ಪ್ರಗತಿಯಲ್ಲಿ ಲೆಕ್ಕ ಪರಿಶೋಧನೆ ಮಹತ್ವದ ಪಾತ್ರವಹಿಸುತ್ತದೆ. ಸಹಕಾರಿ ಲೆಕ್ಕ ಪರಿಶೋಧನೆ ಮಹತ್ತ್ವದ ಪಾತ್ರವಹಿಸುತ್ತದೆ. ಸಹಕಾರಿ ಲೆಕ್ಕ ಪರಿಶೋಧನೆ ಕೇವಲ ಪುಸ್ತಕಗಳು, ವ್ಯವಹಾರಿಕ ಪರೀಶೀಲನೆಯಷ್ಟೇ ಆಗಿರುವುದಿಲ್ಲ. ಅದು ಆಡಳಿತಾತ್ಮಕ ಪರಿಶೀಲನೆಯೂ ಆಗುವುದರಿಂದ ಅತ್ಯಂತ ಕರಾರುವಾಕ್ಕಾಗಿ, ಕ್ಲುಪ್ತವಾಗಿ ಆಗಬೇಕು. ಅಲ್ಲದೆ, ಲೆಕ್ಕಪರಿಶೋಧಕರು ಸಂಘಗಳ ಮಾರ್ಗದರ್ಶಕರೂ ಆಗಿರುತ್ತಾರೆಂಬುದನ್ನು ಮರೆಯುವಂತಿಲ್ಲ. ಸಂಸ್ಥೆಗಳ ವ್ಯವಹಾರದಲ್ಲಿ ತಿಳಿದೋ, ತಿಳಿಯದೆಯೋ ತಪ್ಪುಗಳು ಆಗುವುದುಂಟು. ಅಂತಹ ತಪ್ಪುಗಳನ್ನು ಹುಡುಕಿ ಕ್ರಮ ತೆಗೆದುಕೊಳ್ಳುವುದು ಒಂದು ತೆರನಾದರೆ, ಅಂತಹ ತಪ್ಪುಗಳು ಮತ್ತೆ ಮರುಕಳಿಸದಂತೆ ಸೂಕ್ತ ಮಾರ್ಗದರ್ಶನ ಮಾಡುವುದೂ ಲೆಕ್ಕಪರಿಶೋಧಕರ ಕರ್ತವ್ಯವಾಗಿರುತ್ತದೆ. ಲೆಕ್ಕ ಪರಿಶೋಧನಾ ಸಮಯದಲ್ಲಿ ಹಲವಾರು ಸಮಸ್ಯೆಗಳು ಎದುರಾಗುವುದುಂಟು. ಮಾಹಿತಿ ಲಭ್ಯವಾಗದಿರುವುದು, ಸಿಬ್ಬಂದಿ ಗೈರುಹಾಜರಾಗುವುದು, ಅಚ್ಚುಕಟ್ಟುತನ, ನಿಷ್ಪಕ್ಷತೆ ಇಲ್ಲದಿರುವುದು. ಇಂತಹ ಸಂದರ್ಭಗಳಲ್ಲಿ ಲೆಕ್ಕ ಪರಿಶೋಧಕರು ಹೆಚ್ಚಿನ ಶ್ರಮವಹಿಸಬೇಕು. ಸೂಕ್ತ ಸಮಯದಲ್ಲಿ ಲೆಕ್ಕಪರಿಶೋಧನಾ ಕಾರ್ಯವು ನಡೆಯದಿದ್ದರೆ ಅನೇಕ ಆಘಾತಗಳು ತಲೆದೋರಬಹುದು. ಇತ್ತೀಚಿನ ದಿನಗಳಲ್ಲಿ ಲೆಕ್ಕ ಪರಿಶೋಧನೆಯನ್ನು ಚಾರ್ಟರ್ಡ್ ಅಕೌಂಟೆಂಟರಿಗೆ ವಹಿಸುವ ಅವಕಾಶವಿದೆ. ಆದ್ದರಿಂದ ಸಹಕಾರ ಸಂಘಗಳ ಲೆಕ್ಕ ಪರಿಶೋಧಕರು ತಮ್ಮ

[illegible]

ಮನೋಭಾವಗಳನ್ನು ಬದಿಲಿಸಿಕೊಂಡು ಕಾರ್ಯನಿರ್ವಹಿಸಬೇಕು. ಏಕೆಂದರೆ ಹಲವಾರು ವರ್ಷಗಳ ಅವಧಿಯಿಂದ ಅನೇಕ ಸಂಸ್ಥೆಗಳ ಲೆಕ್ಕ ಪರಿಶೋಧನೆ ನಡೆದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಲೆಕ್ಕ ಪರಿಶೋಧನಾ ಇಲಾಖೆ ಹೆಚ್ಚಿನ ನಿಷ್ಠೆ ಹಾಗೂ ಆಸ್ಥೆಯಿಂದ ಕೆಲಸ ಮಾಡುವುದು ಅಪೇಕ್ಷಣೀಯ.

ಸಾಮಾನ್ಯ ಸಭೆಗಳಲ್ಲಿ ಲೆಕ್ಕಪತ್ರವರದಿ ಲೆಕ್ಕ ಪರಿಶೋಧನೆಯನ್ನೇ ಆಧರಿಸಿರುತ್ತದೆ. ಆದ್ದರಿಂದ ಮಹಿಳಾ ಸದಸ್ಯೆಯರು ಈ ಅಂಶವನ್ನು ಗಂಭೀರವಾಗಿ ಪರಿಗಣಿಸಿ ಸಹಕಾರರಂಗದ ಈ ಅದ್ವಿತೀಯ ಸಂಸ್ಥೆಗಳನ್ನು ಯುಕ್ತ ಆಡಳಿತ, ನಿಷ್ಠೆ, ನಂಬಿಕೆಯಿಂದ ಪ್ರವರ್ತಿಸುವಂತೆ ತಮ್ಮ ಅಭಿಪ್ರಾಯಗಳನ್ನು ನೀಡಿ, ಪ್ರಶ್ನಿಸಿ, ಗಂಭೀರವಾಗಿ ಪರಿಗಣಿಸಬೇಕು. ಇದನ್ನು ಪ್ರತಿಯೊಬ್ಬ ಮುಖಂಡರೂ ಸದಸ್ಯೆಯರ ಗಮನಕ್ಕೆ ಮಂದಟ್ಟಾಗುವಂತೆ ಅವರ ಕರ್ತವ್ಯವೆಂಬಂತೆ ತಿಳಿಸಿರಬೇಕು.

"ಸಹಕಾರಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ನಿರೀಕ್ಷೆ

"೧೯೫೯ರ ಸಹಕಾರ ಅಧಿನಿಯಮದಲ್ಲಿ ಅನೇಕ ಲೋಪದೋಷಗಳನ್ನು ಗುರುತಿಸಲಾಗಿದೆ. ಸಹಕಾರ ಸಂಘವೊಂದರ ಹುಟ್ಟು ಇಲ್ಲವೇ ಸಾವು ಸಹಕಾರ ಸಂಘಗಳ ಉಪನಿಬಂಧಕರನ್ನು(ಡೆಪ್ಯುಟಿ ರಿಜಿಸ್ಟ್ರಾರ್) ಅವಲಂಬಿಸಿದೆ. ಸಿಬ್ಬಂದಿ ನೇಮಕ, ಸಂಬಳ ಹೆಚ್ಚಳ, ಆಸ್ತಿ ಖರೀದಿ ಮತ್ತು ಮಾರಾಟ ಎಲ್ಲದಕ್ಕೂ ಉಪ-ನಿಬಂಧಕರ ಅನುಮತಿ ಪಡೆಯಬೇಕು. ಆಡಳಿತ ಮಂಡಳಿಗೆ ಅಧಿಕಾರವೇ ಇಲ್ಲ. ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆ(Account) ತೆರೆಯಲೂ ಕೂಡ ಅವರ ಒಪ್ಪಿಗೆಬೇಕು. ಇಲಾಖೆಯಿಂದಲೇ ಲೆಕ್ಕ ಪರಿಶೋಧನೆ ಮಾಡಿಸಬೇಕು. ಹೀಗಾಗಿ ಈ ಅಧಿನಿಯಮದಲ್ಲಿ ಭ್ರಷ್ಟಾಚಾರಕ್ಕೆ ಸಾಕಷ್ಟು ಅವಕಾಶಗಳಿದ್ದವು. ಈ ಹಿನ್ನೆಲೆಯಲ್ಲಿ ಯೋಜನಾ ಆಯೋಗ ಅಧ್ಯಯನ ನಡೆಸಲು ಅರ್ಧನಾರೀಶ್ವರನ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಅದು ೧೯೮೭ರಲ್ಲಿ ತನ್ನ ವರದಿ ನೀಡಿ, ಸಹಕಾರ ಚಳವಳಿಯ ವೈಫಲ್ಯಕ್ಕೆ ಸರ್ಕಾರದ ಅತಿಯಾದ ಹಸ್ತಕ್ಷೇಪವೇ ಕಾರಣವೆಂದು ಅಭಿಪ್ರಾಯಪಟ್ಟಿತು. ಸದಸ್ಯರಿಗೇ ಹೆಚ್ಚಿನ ಅಧಿಕಾರ ಕೊಡುವ ನೂತನ ಶಾಸನ ರಚನೆಗಾಗಿ ಇನ್ನೊಂದು ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಿತು. ಈ ಸಮಿತಿ ೧೯೯೧ರಲ್ಲಿ ಮಾದರಿ ಶಾಸನವನ್ನು ರೂಪಿಸಿತು. ಈ ಮಾದರಿ ಸಹಕಾರಿ ಶಾಸನವನ್ನು ಕರ್ನಾಟಕ ಸರ್ಕಾರವು "ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ೧೯೯೭"ನ್ನು, ೧೯೯೭ರಲ್ಲಿ ಜಾರಿಯಲ್ಲಿ ತಂದಿತು. ಆದಾಗ್ಯೂ ಈ ಅಧಿನಿಯಮವೂ ಕೂಡ ದೋಷಮುಕ್ತವಾಗಿಲ್ಲ. ಯಾವುದೇ ಸಹಕಾರ ಸಂಘ ಈ ಅಧಿನಿಯಮದಡಿ ಪರಿವರ್ತಿತವಾದರೆ (ಎಂದರೆ ೧೯೫೯ರ ಅಧಿನಿಯಮದ ಆಳವಡಿಕೆಗೆ ಬದಲಾಗಿ ಹೊಸ ಅಧಿನಿಯಮವನ್ನು ಅಂಗೀಕರಿಸಿದಲ್ಲಿ) ಕೂಡಲೇ "ಆಡಳಿತ ಮಂಡಳಿಗೆ ಕಡ್ಡಾಯವಾಗಿ ಚುನಾವಣೆ ನಡೆಸಬೇಕು" ಎಂಬ ನಿಯಮ ಪ್ರಸ್ತುತ ಆಡಳಿತ ಮಂಡಳಿಗಳಿಗೆ ಭೀತಿಯುಂಟು ಮಾಡಿತು. ಚುನಾವಣೆ ನಡೆಸಿದರೆ ಅಧಿಕಾರ ಕಳೆದುಕೊಳ್ಳುವ ಆತಂಕದಿಂದಾಗಿ

ಮೌನವಾಗಿದ್ದವು. ಇದರಿಂದ ಉಂಟಾಗಬಹುದಾದ ತೊಂದರೆಗಳನ್ನು ಗಮನಿಸಿದ ಸರ್ಕಾರ ಹೊಸ ಸುತ್ತೋಲೆಯನ್ನು ಹೊರಡಿಸಿ ಹಾಗೆ ಚುನಾವಣೆ ನಡೆಸುವ ಅವಶ್ಯಕತೆಯಿಲ್ಲವೆಂದು ತಿಳಿಸಿತು. ಇದನ್ನು ಮಹಿಳಾ ಸಹಕಾರಿಗಳೂ ಕೂಡ ಗಮನಿಸಿ ಪರಿವರ್ತನೆಯ ಬಗ್ಗೆ ಕ್ರಮ ತೆಗೆದುಕೊಳ್ಳಬಹುದಾಗಿದೆ. "[೩೩]ಕರ್ನಾಟಕ ರಾಜ್ಯ ಸಹಕಾರಿ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಕೇಲವೇ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದ ಜನತೆಯಲ್ಲಿ ಸಹಕಾರ ತತ್ತ್ವ 'ರಕ್ತಗತ'ವಾಗಿದೆ ಎನ್ನುವಷ್ಟರ ಮಟ್ಟಿಗೆ ಜನರು ಸಹಕಾರ ತತ್ತ್ವ ಮತ್ತು ಆಚರಣೆಯಲ್ಲಿ ವಿಶ್ವಾಸವಿರಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಒಟ್ಟು ೨೬,೦೦೦ ಸಹಕಾರ ಸಂಘಗಳು, ೧ ಕೋಟಿ ೩೬ ಲಕ್ಷ ಸದಸ್ಯರು, ೨೦೦೦ ಕೋಟಿ ರೂ. ಚಾಲ್ತಿ ಬಂಡವಾಳವಿರುವುದು ಹೆಮ್ಮೆಯ ವಿಷಯ. ಪಟ್ಟಣ ಬ್ಯಾಂಕುಗಳು, ಮಹಿಳಾ ಬ್ಯಾಂಕುಗಳು ಪ್ರಶಂಸನೀಯವಾಗಿ ಕೆಲಸ ಮಾಡುತ್ತಿವೆ." ಇನ್ನು ರಾಷ್ಟ್ರೀಯ ಮಟ್ಟದಲ್ಲಿ ನೋಡುವುದಾದರೆ[೩೪] ಸಹಕಾರ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ರಾಷ್ಟ್ರೀಯ ಸಹಕಾರಿ ಯೂನಿಯನ್ ಪ್ರಧಾನಿಯವರನ್ನು ಕೋರಿದೆ. ಹಿಂದೆ ಜವಾಹರಲಾಲ್ ನೆಹರೂ ಅವರು ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರೆಂದು ಹಿರಿಯ ಸಹಕಾರಿಗಳು ಸ್ಮರಿಸಿಕೊಳ್ಳುವುದುಂಟು. ಸಹಕಾರಿ ಕಾಮನ್ವೆಲ್ತ್ ಆಗಬೇಕೆಂದು ನೆಹರೂ ಬಯಸಿದ್ದುದೂ ಉಂಟು. ವಿಶ್ವದ ಹಲವಾರು ಸಮಸ್ಯೆಗಳಿಗೆ ಸಹಕಾರ ತತ್ವ ಪರಿಹಾರ ನೀಡಬಲ್ಲುದೆಂದು ಅವರು ನಂಬಿದ್ದರು. ಸಹಕಾರ ರಾಜ್ಯಗಳಿಗೆ ಸಂಬಂಧಿಸಿದ ವಿಷಯವಾದರೂ ಕೇಂದ್ರದ ನೆರವು, ಪ್ರೋತ್ಸಾಹ ಅಗತ್ಯ. ಪಾಂಚವಾರ್ಷಿಕ ಯೋಜನೆಯ ಕರಡಿನಲ್ಲಿ ಸಹಕಾರ ಕ್ಷೇತ್ರವನ್ನು ಪರಿಗಣಿಸಿಲ್ಲ ಎಂಬ ಅಭಿಪ್ರಾಯವೂ ಇದೆ. ಒಟ್ಟಾರೆ ರಾಷ್ಟ್ರದಲ್ಲಿ ಮೂರೂವರೆ ಲಕ್ಷ ಸಹಕಾರ ಸಂಘಗಳು(೧೯೯೮ರ ಆಗಸ್ಟ್ ನಲ್ಲಿದ್ದಂತೆ), ೧೮ ಕೋಟಿ ಜನಸದಸ್ಯರು, ಒಂದು ಲಕ್ಷಕೋಟಿಗೂ ಮೀರಿ ಚಾಲ್ತಿ ಬಂಡವಾಳವನ್ನು ಹೊಂದಿರುವ ಸಹಕಾರ ಕ್ಷೇತ್ರ ರಾಷ್ಟ್ರದ ಅರ್ಥವ್ಯವಸ್ಥೆಯಲ್ಲಿ ಪರಿಣಾಮಕಾರಿ ಪಾತ್ರ ಹೊಂದಿರುವುದರಲ್ಲಿ ಎರಡಾಭಿಪ್ರಾಯವಿರಲು ಸಾಧ್ಯವಿಲ್ಲ. ಆರ್ಥಿಕ ಉದಾರೀಕರಣದ ನಂತರ ಸಹಕಾರಕ್ಷೇತ್ರ ಹೊಸಹೊಸ ಅವಿಷ್ಕಾರ, ಆಯಾಮಗಳೊಂದಿಗೆ ಆರ್ಥಿಕ ರಂಗದಲ್ಲಿ ಪ್ರಭಾವೀ ಪಾತ್ರ ಹೊಂದಲು ಸನ್ನದ್ಧವಾಗಿರುವಾಗ ಅದನ್ನು ನಿರ್ಲಕ್ಷಿಸಲಾಗದು, ನಿರ್ಲಕ್ಷಿಸಬಾರದು. ಆದ್ದರಿಂದ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಸಲಹೆ ಸೂಚನೆ ನೆರವು ನೀಡಿ ಸಹಕಾರ ಕ್ಷೇತ್ರದ ಸಮಸ್ಯೆಗಳ ಪರಿಹಾರ ಮಾಡಿ ಸಹಕಾರ ಕ್ಷೇತ್ರಕ್ಕೆ ಪ್ರಮುಖಸ್ಥಾನ ನೀಡಿದಲ್ಲಿ ರಾಷ್ಟ್ರದ ಅರ್ಥವ್ಯವಸ್ಥೆಗೆ ಹೊಸ ರೂಪ ಕೊಟ್ಟಂತಾಗುತ್ತದೆ."

ಸಹಕಾರ ವಲಯದಲ್ಲಿ ಸಾಮಾಜಿಕ ನ್ಯಾಯ : ಸಹಕಾರ ಅಧಿನಿಯಮದ ಪ್ರಧಾನ ಉದ್ದೇಶಗಳಲ್ಲಿ, ಸಂವಿಧಾನದಲ್ಲಿ ಸೂಚಿಸಿರುವ ಸಾಮಾಜಿಕ ನ್ಯಾಯವನ್ನು ಒದಗಿಸುವುದೂ ಸೇರಿದೆ. ಅಧಿನಿಯಮದ ೭ನೇ

ಪ್ರಕರಣದ ಅಡಿಯಲ್ಲಿ ಸಹಕಾರ ಸಂಘಗಳ ನಿಬಂಧಕರು ಯಾವುದೇ ಪ್ರಸ್ತಾವಿತ ಸಹಕಾರ ಸಂಘದ ಧ್ಯೇಯಗಳು ಸಾಮಾಜಿಕ ನ್ಯಾಯತತ್ತ್ವಗಳಿಗೆ ಅನುಗುಣವಾಗಿರದಿದ್ದರೆ ಅಂಥ ಸಂಘವು ನೋಂದಣಿಗಾಗಿ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬಹುದು.

ರಾಜ್ಯ ಸರ್ಕಾರವು, ಯಾವುದೇ ಜಾತಿ ಅಥವಾ ಕೋಮಿಗೆ ಸೇರದ ಸರ್ಕಾರವಾಗಿದೆ ಎಂಬ ಕಾರಣದ ಮೇಲೆ, ತಾರತಮ್ಯವನ್ನು ನಿಷೇಧಿಸಬೇಕಾದ ಸಂವಿಧಾನಾತ್ಮಕ ನಿರ್ಬಂಧಕ್ಕೆ ವ್ಯತಿರಿಕ್ತವಾಗುವುದರಿಂದ, ಯಾವುದೇ ಜಾತಿ ಅಥವಾ ಕೋಮಿಗೆ ಸೇರಿದ ಸಹಕಾರ ಸಂಘದಲ್ಲಿ ಪಾಲುದಾರನಾಗಲು ಸಾಧ್ಯವಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಸಹಕಾರ ಸಂಘಗಳ ನಿಬಂಧಕರು ನಿರ್ದಿಷ್ಟ ಜಾತಿ ಅಥವಾ ಕೋಮಿನ ಸದಸ್ಯರ ಪಾಲುದಾರಿಕೆ ಇರುವ ಅನೇಕ ಸಹಕಾರ ಸಂಘಗಳನ್ನು ನೋಂದಣಿಗೆ ಅನುಮತಿ ನೀಡಿರುವುದನ್ನು ಖಂಡಿಸಲಾಗಿದೆ. ಇದು ಅಧಿನಿಯಮದ ನಿಯಮಗಳಿಗೆ ಸಂಪೂರ್ಣವಾಗಿ ವಿರೋಧವಾಗುತ್ತದೆ. ವೈಯಕ್ತಿಕ ಹಿತಾಸಕ್ತಿಯಿಂದ ಜಾತಿ ಹಾಗೂ ಕೋಮು ಉದ್ದೇಶಗಳಿಂದ ಜಾತ್ಯತೀತತೆಗೆ ತಿಲಾಂಜಲಿ ನೀಡಿದಂತಾಗುತ್ತದೆ. ಇಂಥದನ್ನು ತೊಡೆದುಹಾಕಲು ಹಾಗೂ ಸಹಕಾರ ಆಂದೋಲನದಲ್ಲಿ ಸಾಮಾಜಿಕ ನ್ಯಾಯವನ್ನು ಸುಸ್ಥಾಪಿಸಲು ಅಧಿನಿಯಮದ ೨೮ಎ ಪ್ರಕರಣವನ್ನು ಸೇರ್ಪಡೆ ಮಾಡಿ ತಿದ್ದುಪಡಿಮಾಡಲಾಯಿತು. ಸದರಿ ತಿದ್ದುಪಡಿಯಿಂದಾಗಿ ಮೊಟ್ಟ ಮೊದಲಬಾರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗಾಗಿ ಮತ್ತು ಮಹಿಳೆಯರ ಪರವಾಗಿ ಮೀಸಲಾತಿಯನ್ನು ನೀಡಲಾಗಿದೆ. ಆದ್ದರಿಂದ ಪ್ರಸ್ತುತ ಅಧಿನಿಯಮದ ೨೮ಎ ಪ್ರಕರಣದ (೩)ನೇ ಉಪ-ಪ್ರಕರಣವನ್ನು ಈ ಮುಂದಿನಂತೆ ಉಪಬಂಧಿಸಲಾಗಿದೆ.

[೨೪]೨೮ಎ(೩) ಪ್ರತಿಯೊಂದು ಪ್ರಾಥಮಿಕ ಸಹಕಾರ ಸಂಘದ ಸಮಿತಿಯಲ್ಲಿ ಈ ಮುಂದಿನಂತೆ

೧. ಒಂದು ಸ್ಥಾನವನ್ನು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಂದ ಚುನಾವಣೆ ಮೂಲಕ ಭರ್ತಿ ಮಾಡುವುದಕ್ಕಾಗಿ

೨. ಒಂದು ಸ್ಥಾನವನ್ನು ಮಹಿಳೆಯರಿಂದ ಚುನಾವಣೆ ಮೂಲಕ ಭರ್ತಿಮಾಡುವುದಕ್ಕಾಗಿ ಮೀಸಲಿಡತಕ್ಕದ್ದು.

ಪರಂತು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ವರ್ಗಗಳು ಮತ್ತು ಮಹಿಳೆಯರಿಗೆ ಸೇರಿದ ಯಾರೇ ಸದಸ್ಯರು ಇಲ್ಲದಿದ್ದ ಸಂಘದ ಸಂದರ್ಭದಲ್ಲಿ ಯಾವುದೇ ಅಂಥ ಮೀಸಲಾತಿಯನ್ನು ಮಾಡುವುದು ಅಗತ್ಯವಾಗಿರತಕ್ಕದಲ್ಲ.

ಈ ಉಪಬಂಧವನ್ನು ಕೆ.ಪಿ.ಶೆಣೈ ವಿರುದ್ಧ, ಕರ್ನಾಟಕ ಸರ್ಕಾರ ಮತ್ತು ಇತರರು ೧೯೬೬(೫) ಕರ್ನಾ.ಲಾ.ಜ. ೨೨೭(ವಿಭಾಗ ನ್ಯಾಯಪೀಠ)೭ ಇದರಲ್ಲಿ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿತ್ತು. ಆಗ ಉಚ್ಚನ್ಯಾಯಾಲಯದ ಮುಂದಿದ್ದ "ಸಹಕಾರ ಸಂಘದಲ್ಲಿ ಪರಿಶಿಷ್ಟ ಜಾತಿ,

ಪಂಗಡಗಳು ಅಥವಾ ಮಹಿಳೆಯರ ಪರವಾಗಿ ಮೀಸಲಾತಿ ನೀಡಬಹುದೇ?" ಎಂಬ ಪ್ರಶ್ನೆ ಬಗ್ಗೆ ಉಪಬಂಧದ ಸಂವಿಧಾನಾತ್ಮಕ ಮಾನ್ಯತೆಯನ್ನು ವಿಶ್ಲೇಷಿಸಲಾಯಿತು. ನಿರ್ದೇಶಕರ ಮಂಡಲಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರಿಗೆ ಮೀಸಲಾತಿಯನ್ನು ವಿಧಿಸುವ ಮೂಲಕ ಸಂವಿಧಾನದ ಅನುಚ್ಛೇದ ೧೯(೧)(ಸಿ) ಅಡಿಯಲ್ಲಿ ನಿರ್ವಚಿಸಲಾರ ವ್ಯಾಪಾರ ಸ್ವಾತಂತ್ರ್ಯದ ಹಕ್ಕು ಹಾಗೂ ಅನುಚ್ಛೇದ ೧೯(೧)(ಜಿ) ಅಡಿಯಲ್ಲಿ ನಿರ್ವಚಿಸಲಾದ ವ್ಯಾಪಾರವನ್ನು ಮುಂದುವರಿಸುವ ಹಕ್ಕನ್ನು ಉಲ್ಲಂಘಿಸಲಾಗಿದೆಯೆಂದು ವಾದಮಾಡಲಾಗಿತ್ತು. ಈ ವಾದವನ್ನು ತಿರಸ್ಕರಿಸಿದ ಕರ್ನಾಟಕ ಉಚ್ಚನ್ಯಾಯಾಲಯವು ಹೀಗೆ ತೀರ್ಪು ನೀಡಿದೆ.

"ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಹಾಗೂ ಮಹಿಳೆಯರು ಸಮಾಜದ ದುರ್ಬಲವರ್ಗಗಳಿಗೆ ಸೇರಿದವರೆಂಬುದು ಸರ್ವವಿದಿತ ಸಂಗತಿ. ಆದ್ದರಿಂದ, ಅವರ ಹಿತಾಸಕ್ತಿಗಳನ್ನು ಕಾಪಾಡಲು ಸಂವಿಧಾನದಲ್ಲಿಯೇ ವಿಶೇಷ ಉಪಬಂಧಗಳನ್ನು ಕಲ್ಪಿಸಲಾಗಿದೆ. ಈ ಅಂಶಗಳನ್ನು ಗಮನಿಸಿ ರಾಜ್ಯ ಸರ್ಕಾರವು ಅದಕ್ಕೆ ಸಂಬಂಧಿಸಿದಂತೆ ವಿಶೇಷ ಉಪಬಂಧಗಳನ್ನು ಕಲ್ಪಿಸುವುದು ಯುಕ್ತವೆಂದು ಪರಿಗಣಿಸಿದೆ. ಇದರಿಂದ ಅರ್ಜಿದಾರನ ಆಡಳಿತ ನಿರ್ವಹಣಾ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಿದಂತಾಗುವುದಿಲ್ಲ. ಒಂದು ಸಹಕಾರ ಸಂಘದಲ್ಲಿ ಮಹಿಳೆಯರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಸದಸ್ಯರಿದ್ದು, ಅವರಿಗೆ ಆಡಳಿತ ಮಂಡಳಿಯಲ್ಲಿ ಪ್ರಾತಿನಿಧ್ಯ ನೀಡಲು ಉಪಬಂಧವನ್ನು ಕಲ್ಪಿಸಲಾಗಿದ್ದರೆ ಸಮಾಜಕ್ಕೆ ಅದೊಂದು ಶುಭ ಮುನ್ಸೂಚನೆಯಾಗುವುದಲ್ಲದೆ ಸಹಕಾರ ಸಂಘದ ಉತ್ತಮ ಆಡಳಿತ ನಿರ್ವಹಣೆಯನ್ನು ಸೂಚಿಸುತ್ತದೆ."

ಮಹಿಳೆಯರಿಗೆ ಇಂಥ ಅವಕಾಶ ಕಲ್ಪಿಸಿರುವುದು ಸೂಕ್ತವಾಗಿದೆ. ಮಹಿಳಾ ಸಂಘಟನೆಗೆ ಸಹಕಾರ ಕ್ಷೇತ್ರ ಅತ್ಯುತ್ತಮ ನೆಲೆಯೊದಗಿಸುವುದರಿಂದ ಮಹಿಳೆಯರನ್ನು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಚಳುವಳಿಯಲ್ಲಿ ಸೇರುವಂತೆ ಪ್ರೇರಣೆ ನೀಡುವುದು ಅತ್ಯಾವಶ್ಯಕ.[೨೫] ಪುರುಷ ಪ್ರಧಾನ ಸಮಾಜದಲ್ಲಿ ಪುರುಷನಿಗೆ ಸಮಾನವಾದ ಸ್ಥಾನಮಾನಗಳನ್ನು ಹೊಂದಲು, ಸಾಮಾಜಿಕ ವ್ಯವಸ್ಥೆಯನ್ನು ಮರುವಿಶ್ಲೇಷಣೆಗೊಳಪಡಿಸಲು ಅಖಿಲಭಾರತ ಮಟ್ಟದಲ್ಲಿ ಏಳು ಸಂಘಟನೆಗಳಿವೆ. ಅವುಗಳೆಂದರೆ:

೧. ಭಾರತ ಮಹಿಳೆಯರ ಒಕ್ಕೂಟ.

೨. ಅಖಿಲಭಾರತ ಪ್ರಜಾಸತ್ತಾತ್ಮಕ ಮಹಿಳೆಯರ ಸಂಘ.

೩. ಅಖಿಲ ಭಾರತ ಮಹಿಳೆಯರ ಸಮಾವೇಶ.

೪. ಮಹಿಳೆಯರ ಜಂಟಿಕಾರ್ಯಕ್ರಮ.

೫. ಮಹಿಳೆಯರ ಅಭ್ಯುದಯ ಅಧ್ಯಯನ ಕೇಂದ್ರ.

೬. ತರುಣ ಕ್ರಿಶ್ಚಿಯನ್ ಮಹಿಳೆಯರ ಸಂಘ.

೭. ಮಹಿಳಾ ಉದ್ಯೋಗಿಗಳ ಸಮನ್ವಯ ಸಮಿತಿ.

ಇವುಗಳನ್ನು ಸಪ್ತ ಸೋದರಿಯರೆಂದು(seven sisters) ಎಂದು ಕರೆಯಲಾಗಿದೆ. ಇವುಗಳು ಮಹಿಳೆಯರಲ್ಲಿ ಅಂತಃಶಕ್ತಿಯನ್ನು ತುಂಬಲು ಶ್ರಮಿಸುತ್ತಿವೆ. ಆದರೆ ಇದುವರೆಗೆ ಈ ಸಂಘಟನೆಗಳು ತೆಗೆದುಕೊಂಡ ತೀರ್ಮಾನಗಳಾಗಲಿ, ಹಮ್ಮಿಕೊಂಡ ಹೋರಾಟಗಳಾಗಲಿ ಕೇವಲ ವರದಿ ರೂಪದಲ್ಲಿ ಸರ್ಕಾರದ ಕಡತ ಸೇರಿದೆಯೇ ಹೊರತು ಮಹಿಳೆಯರ ಸಮಾನ ಹಕ್ಕುಬಾಧ್ಯತೆಗೆ ಯಾವುದೇ ಸೂಕ್ತ ಮಾರ್ಗದರ್ಶನ ನೀಡದಿರುವುದು ವಿಷಾದನೀಯ. ಇಂಥ ಹೋರಾಟವನ್ನು ಜೀವಂತವಾಗುಳಿಸಿಕೊಳ್ಳುವುದರಲ್ಲಿ ಮಹಿಳೆಯರ ಆತ್ಮಬಲದ ಅಥವಾ ಅಂತಃಶಕ್ತಿಯ ಅರ್ಥವಿದೆ.

ಮಹಿಳೆಯರನ್ನು ಇಂದಿಗೂ ದುರ್ಬಲ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ‘ಅತಿದೊಡ್ಡ ಏಕೈಕ ಗುಂಪು’ ಎಂದೇ ಪರಿಗಣಿಸಲಾಗುತ್ತಿರುವುದು ವಿವಿಧ ಸಮೀಕ್ಷೆ, ಅಧ್ಯಯನ ವರದಿಗಳಿಂದ ಬೆಳಕಿಗೆ ಬಂದ ಸಂಗತಿಯಾಗಿದೆ. ಕಾನೂನುಗಳು ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನಗೊಳಿಸುವ ಮಹಾನ್ ಅಸ್ತ್ರಗಳಾಗದಿದ್ದರೂ ಸಾಮಾಜಿಕ ಪರಿವರ್ತನೆಗೆ, ಅವು ಖಂಡಿತ ನೆರವಾಗುತ್ತವೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯಾನಂತರ ಮಹಿಳೆಯರ ಅಭಿವೃದ್ಧಿ, ಕಲ್ಯಾಣ ಹಾಗೂ ಹಕ್ಕುಗಳನ್ನು ನೀಡುವಂಥ ಅನೇಕ ಕಾನೂನುಗಳನ್ನು ರಚಿಸಲಾಗಿದೆ. ಆದರೆ ಅನಕ್ಷರತೆ, ಅಜ್ಞಾನ ಮುಂತಾದ ಹಲವು ಕಾರಣಗಳಿಂದಾಗಿ ಮಹಿಳೆಯರಿಗೆ ತಮ್ಮ ಹಕ್ಕು, ಅಧಿಕಾರ, ಜವಾಬ್ದಾರಿಗಳ ಬಗ್ಗೆ ಅರಿವೇ ಉಂಟಾಗಿರುವುದಿಲ್ಲ. ಸುಶಿಕ್ಷಿತ ಮಹಿಳೆಯರಿಗೂ ಕೂಡ ಇಂಥ ವಿಷಯಗಳು ಹೆಚ್ಚಾಗಿ ಗಮನಕ್ಕೆ ಬಂದಿರುವುದಿಲ್ಲ. ಮಹಿಳಾ ಸಹಕಾರ ಕ್ಷೇತ್ರದಲ್ಲಿ ಉದ್ಯಮ, ಹಣಕಾಸು ವಹಿವಾಟು, ಕಾನೂನು, ಲೆಕ್ಕಪರಿಶೋಧನೆ, ಸಾಮಾಜಿಕ ನ್ಯಾಯ, ಕಾರ್ಮಿಕ ಸಮಸ್ಯೆ ಹೀಗೆ ಅಸಂಖ್ಯಾತ ವಿಷಯಗಳಿಗೆ ಸಂಬಂಧಪಟ್ಟಂತೆ ಮಹಿಳೆಯರು ಸಾಕಷ್ಟು ಜ್ಞಾನವನ್ನು ಪಡೆದಿರಬೇಕು. ಆಸ್ತಿ ವಿವಾದ, ಚುನಾವಣೆ, ಭೂವಿವಾದ, ಮುಂತಾದವುಗಳಿಗೆ ಸಂಬಂಧಪಟ್ಟಂತೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ಪರಿಹರಿಸಲು ಸಂಬಂಧಪಟ್ಟ ಕಾನೂನುಗಳನ್ನು ತಿಳಿದು, ವಕೀಲರ, ನ್ಯಾಯಾಲಯದ ನೆರವು ಪಡೆದು ಮುನ್ನಡಿಯಿಡಬಹುದು. ಆದ್ದರಿಂದ, ಯಶಸ್ವಿ ಮಹಿಳಾ ಸಹಕಾರಿಗಳಿಗೆ ಉಪಯುಕ್ತವಾಗಬಹುದಾದ ಮಹಿಳಾ ಹಕ್ಕುಗಳ ಅಧಿನಿಯಮಗಳ ಪಟ್ಟಿಯನ್ನು[೨೬] ಅನುಬಂಧ IIರಲ್ಲಿ ನೀಡಲಾಗಿದೆ. ಇದೀಗ ಮಹಿಳೆಯರು ವಿಶ್ವದಾದ್ಯಂತ ರಾಜಕೀಯ, ಆರ್ಥಿಕ, ಭೌಗೋಳಿಕ, ಜನಾಂಗಿಕ ವರ್ಗಕಲಹ ಹಾಗೂ ಇನ್ನೂ ಇತರ ವಲಯಗಳಲ್ಲಿ ಸವಾಲುಗಳನ್ನೆದುರಿಸುತ್ತಿದ್ದಾರೆ. ಉದಾಹರಣೆಗೆ ನೀಗ್ರೋ ಅಥವಾ ಕಪ್ಪು ಮಹಿಳೆಯರು ಜನಾಂಗಿಕ ಹಾಗೂ ವರ್ಗೀಯ ಕಲಹದ ಪರಿಣಾಮವಾಗಿ ಕಪ್ಪು ಹಾಗೂ ಬಿಳಿಯ ಪುರುಷರಿಬ್ಬರ ತುಳಿತಕ್ಕೆ ಸಿಲುಕಿರುವ ದುರವಸ್ಥೆ ಶತಮಾನಗಳಿಂದಲೂ ಅವ್ಯಾಹತವಾಗಿ

ನಡೆದು ಬರುತ್ತಿದೆ. ಕೇವಲ ಐದುವರ್ಷದ ಪುಟ್ಟ ಬಾಲಿಕೆಗೆ ಆಕೆಯ ಕನ್ಯಾಪೊರೆಯನ್ನು ರಕ್ಷಿಸುವ ಸಲುವಾಗಿ ಸುಡುಸುಡುವ ನಡು ಮಧ್ಯಾಹ್ನ ಕಾಡಿನ ಮರೆಯಲ್ಲಿ ಬಂಡೆಗಳ ಮೇಲೆ ಮಲಗಿಸಿ ಯೋನಿ ಹಾಗೂ ಮೂತ್ರ ದ್ವಾರಗಳನ್ನು ಸೇರಿಸಿ ಕತ್ತರಿಸಿ ಹೊಲಿಗೆ ಹಾಕುವ ಬರ್ಬರ ಪದ್ಧತಿ ಇಂದಿಗೂ ಸೋಮಾಲಿಯಾದಲ್ಲಿ ರೂಢಿಯಲ್ಲಿದೆ. ಸಾವಿರಾರು ಹಸುಳೆಗಳು ರಕ್ತ ಹಾಗೂ ಮಾಂಸ ತುಣುಕುಗಳನ್ನು ಚೆಲ್ಲಾಡಿ ಅಲ್ಲಿಯೇ ಕೊನೆಯುಸಿರೆಳೆಯುತ್ತವೆ. ಬದುಕುಳಿದ ಕನ್ಯೆ ಜೀವಮಾನವಿಡೀ ಒಂದು ಸಣ್ಣ ರಂಧ್ರದ ಮೂಲಕ ಮೂತ್ರ ಹಾಗೂ ಋತುಸ್ರಾವದ ಸಂಕಟವನ್ನು ಅನುಭವಿಸುತ್ತಾಳೆ. ಈ ಸಂಗತಿ ಹೆಸರಾಂತ ಕಪ್ಪ ರೂಪದರ್ಶಿನಿಯೊಬ್ಬಳು ರೀಡರ್ಸ್‌ಡೈಜೆಸ್ಟ್ ಪತ್ರಿಕೆಯಲ್ಲಿ ಮನಕರಗುವಂತೆ ತೋಡಿಕೊಂಡಿದ್ದಳು ಎಂದ ಮೇಲೆ ಹೆಣ್ಣಿಗೆ ಯಾವುದರ ಬಗ್ಗೆ ಮುಕ್ತಿ ಬೇಕು? ಇದು ಸ್ತ್ರೀವಾದಿಗಳ, ವಿಮೋಚನಾ ಕಾರ್ಯಕರ್ತೆಯರ ಹೋರಾಟದಲ್ಲೆಲ್ಲೂ ಈತನಕ ಕೇಳಿದ, ಕಂಡಿರುವ, ವರದಿಯಾದ ವಿಷಯವಾಗಿಲ್ಲ. ಎಂದರೆ, ಇಂದಿಗೂ ಮಹಿಳೆಯ ದಾಸ್ಯ ಜೀವನದ ಅವಸ್ಥೆಯು ಯಾವ ಸುಧಾರಣೆಯನ್ನೂ ಕಂಡಿರದ ಭೂಭಾಗಗಳಿವೆ ಎಂಬುದು ದೃಢಪಡುತ್ತದೆ. ಇಂಥೆಡೆಗಳಲ್ಲಿ ಎದುರಾಗುವ ಸವಾಲುಗಳು ಹಿಂಸೆ, ಅನಿಷ್ಟಪದ್ಧತಿ, ಕಂದಾಚಾರ, ಆರೋಗ್ಯ, ಆಹಾರ, ಸಮಾನತೆ, ಜೀವನಾಧಾರ ಹಾಗೂ ಈ ಮಹಿಳೆಯರಿಗೆ ವ್ಯಕ್ತಿಗತವಾಗಿ, ಕೌಟುಂಬಿಕವಾಗಿ ಬೆಂಬಲ, ಆಧಾರ ಇವೆಲ್ಲವನ್ನೂ ಒಳಗೊಳ್ಳುತ್ತವೆ. ಪ್ರಪಂಚದ ಮಹಿಳೆಯರೆಲ್ಲರಿಗೂ ವಿಭಿನ್ನ ಹಿನ್ನೆಲೆಗಳಿರುತ್ತವಾದರೂ ಅವರ ಹೋರಾಟ ಸಾಮಾನ್ಯವಾದುದೇ ಆಗಿರುತ್ತದೆ. ಆದರೆ ಪರಸ್ಪರ ಸಹಕಾರದಿಂದ ಬೆಳವಣಿಗೆಗೆ, ಅರಿವು ಹಾಗೂ ಪರಿವರ್ತನೆಗೆ ಕಾರಣವಾಗುವಂತಹ ಪ್ರಯತ್ನಗಳನ್ನು ಮಾಡಿದಾಗ ಒಗ್ಗಟ್ಟಿನ ಅಂಥ ಕಾರ್ಯದಿಂದ ನಿಜವಾಗಿಯೂ ಸಬಲೀಕರಣ ಸಾಧ್ಯವೆಂಬ ಭಾವನೆ ಮೂಡುತ್ತದೆ. ಸಬಲೀಕರಣವು ಜಾಗೃತಿ, ಸಾಮರ್ಥ್ಯನಿರ್ಮಾಣದ ಒಂದು ಪ್ರಕ್ರಿಯೆಯಾಗಿದ್ದು ವಿವೇಚನೆಯಿಂದ ನಿರ್ಧಾರ ತೆಗೆದುಕೊಳ್ಳುವ, ಅಧಿಕಾರ, ನಿಯಂತ್ರಣ ಹಾಗೂ ಕ್ರಿಯಾಶೀಲತೆಯನ್ನು ಇತರರಲ್ಲೂ ಮೂಡಿಸಬಲ್ಲ ಕಾರ್ಯದಲ್ಲಿ ಪಾಲ್ಗೊಳ್ಳುವಂಥ ಆತ್ಮಬಲವನ್ನು ತಂದುಕೊಡುವಂಥದ್ದಾಗಿದೆ. ಆದ್ದರಿಂದ ಮಹಿಳಾ ಸಬಲೀಕರಣದ ಗುರಿಗಳು ಪುರುಷ ಪ್ರಧಾನ ಆದರ್ಶಗಳನ್ನು ಪ್ರಶ್ನಿಸಲು, ಲಿಂಗತಾರತಮ್ಯ ಹಾಗೂ ಸಾಮಾಜಿಕ ಅಸಮಾನತೆಯನ್ನು ಇನ್ನಷ್ಟು ಹೇರಲು ಹಾಗೂ ಬಲಾತ್ಕರಿಸುವಂಥ ಸಾಮಾಜಿಕ ಸಂರಚನೆಗಳು ಮತ್ತು ಸಂಸ್ಥೆಗಳನ್ನು ಆಮೂಲಾಗ್ರವಾಗಿ ಬದಲಾಯಿಸಬಲ್ಲ, ಹಾಗೂ ಭೌತಿಕ ಹಾಗೂ ಮಾಹಿತಿಸಂಪನ್ಮೂಲಗಳೆರಡರಲ್ಲೂ ಮಹಿಳೆಯರಿಗೆ ಪ್ರವೇಶ ನೀಡಿಲ್ಲ, ನಿಯಂತ್ರಣಾಧಿಕಾರ ಹೊಂದುವ ಅರ್ಹತೆಯನ್ನು ನೀಡುತ್ತದೆ. ಆದ್ದರಿಂದ ಸಬಲೀಕರಣ ಒಂದು ಪ್ರಕ್ರಿಯೆಯೂ ಹೌದು, ಧ್ಯೇಯವೂ ಹೌದು. ಇಂಥ ಸಬಲೀಕರಣದ ಪ್ರಕ್ರಿಯೆಗಳು ಮೂರು ಬಗೆಯದಾಗಿವೆ :

೧. ವ್ಯಕ್ತಿಗತ(Personal) ತನ್ನತನ ಹಾಗೂ ವೈಯಕ್ತಿಕವಾಗಿ ಆತ್ಮವಿಶ್ವಾಸ ಮತ್ತು ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು.

೨. ಸಂಬಂಧವನ್ನು ಬೆಳೆಸುವುದು(Relational) ಇತರರೊಡನೆ ಪರಸ್ಪರ ಸಂವಹನ ಬೆಳೆಸಿಕೊಳ್ಳುವ ಮೂಲಕ ಆಲೋಚನಾ ಸಾಮರ್ಥ್ಯವನ್ನು ಬೆಳೆಸಿಕೊಂಡು ಅದರಂತೆ ನಿರ್ಧಾರ ತೆಗೆದುಕೊಳ್ಳುವುದು.

೩. ಒಟ್ಟುಗೂಡುವುದು (Collective)ಒಂಟಿಯಾಗಿ ಕಾರ್ಯಸಾಧನೆ ಮಾಡಲು ಪ್ರಯತ್ನಿಸುವುದಕ್ಕಿಂತ ಇತರರೊಂದಿಗೆ ಸೇರಿ ಸಂಘಟಿತರಾಗಿ ಒಗ್ಗಟ್ಟಿನಿಂದ ಕೆಲಸ ಮಾಡಿ ಇನ್ನಷ್ಟು ಪರಿಣಾಮಕಾರಿಯಾಗಿ ಗುರಿಸಾಧಿಸುವುದು. ಇವು ಮೂರು ಕೂಡ ಪರಸ್ಪರ ಸಂಬಂಧಹೊಂದಿವೆ. ಆದ್ದರಿಂದ ಒಂದು ಆಯಾಮದಲ್ಲಿ ಸಕಾರಾತ್ಮವಾಗಿ ಪರಿವರ್ತನೆ ಉಂಟಾದಲ್ಲಿ ಉಳಿದೆರಡು ಹಾಗೂ ಇನ್ನಿತರ ವಿಷಯಗಳ ಫಲಿತಾಂಶವೂ ಕೂಡ ಪ್ರೋತ್ಸಾಹದಾಯಕವಾಗಿ ಇರುತ್ತದೆ. ಈ ದೃಷ್ಟಿಯಿಂದ ಮಹಿಳೆಯರಿಗೆ ಶಿಕ್ಷಣವನ್ನು ನೀಡಿದಲ್ಲಿ ಮಹಿಳೆಯರಿಗೆ ಅವಕಾಶಗಳು ಹಾಗೂ ಆಯ್ಕೆಗಳು ತಾವಾಗಿಯೇ ಒದಗಿಬರುತ್ತವೆ. ಅಭಿವೃದ್ಧಿ ಕಾರ್ಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಇನ್ನಷ್ಟು ಹೆಚ್ಚಿಸಲು ಶಿಕ್ಷಣ ಅತಿಮುಖ್ಯ ಪಾತ್ರವಹಿಸುತ್ತದೆ. ಸಬಲತೆಯಿಂದ ಮಹಿಳೆಯರಿಗೆ ಒದಗುವ ಪ್ರಯೋಜನಗಳು ಹೀಗಿವೆ :

- ಕುಟುಂಬ, ಸಮುದಾಯ ಮತ್ತು ಇಡೀ ಸಮಾಜದಲ್ಲಿ ಲಿಂಗ ಸಂಬಂಧಿ ತಾರತಮ್ಯಗಳನ್ನು ಕಡಿಮೆ ಮಾಡುತ್ತದೆ.
- ಅಸಾಂಪ್ರದಾಯಿಕ ವಲಯಗಳಲ್ಲಿ ಉದಾಹರಣೆಗೆ ಉದ್ಯಮ ಹಾಗೂ ವೃತ್ತಿಪರತೆಯಲ್ಲಿ ಪ್ರವೇಶ ಪಡೆಯಲು ಅರ್ಹತೆ ಹಾಗೂ ಉತ್ಸಾಹವನ್ನು ಸೃಜಿಸುವುದಲ್ಲದೆ ಪುರುಷರಿಗೆ ಸಾಂಪ್ರದಾಯಿಕವಾಗಿ ನಿಷೇಧಿಸಿದ್ದ ಪಾತ್ರಗಳನ್ನು ಉದಾ. ಅಡಿಗೆ ಮಾಡುವುದು, ಮಕ್ಕಳನ್ನು ನೋಡಿಕೊಳ್ಳುವುದು, ಗೃಹಕೃತ್ಯ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ಆಣಿಗೊಳಿಸುವುದು.
- ಸಬಲೀಕರಣದ ಪ್ರಕ್ರಿಯೆಯು ನಿರಂತರವಾಗಿರುವಂತೆ ಹೊಸ ಕ್ಷೇತ್ರಗಳನ್ನು ಸೃಜಿಸುವುದು ಹಾಗೂ ಅದಕ್ಕೆ ಬೆಂಬಲ ನೀಡುವುದು ಹಾಗೂ ಇಡೀ ಸಮಾಜವನ್ನು ಪರಿವರ್ತನಶೀಲವಾಗುವಂತೆ ಬದಲಿಸುವುದು.
- ಭೌತಿಕ, ಆರ್ಥಿಕ ಹಾಗೂ ಬೌದ್ಧಿಕ ಸಂಪನ್ಮೂಲಗಳ ಪ್ರಾಪ್ತಿಯಾಗುವಂತೆ ಹಾಗೂ ಅದರ ಮೇಲೆ ನಿಯಂತ್ರಣ ಹೊಂದುವಂತೆ ಮಾಡುವುದು.

ಹೀಗೆ ಮಹಿಳೆಯರು ಸಬಲತೆಯನ್ನು ಪಡೆಯಲು ತಾವೇ ಪ್ರಯತ್ನಿಸಬೇಕು. ಬಾಹ್ಯ ವ್ಯಕ್ತಿಗಳು ಹಾಗೂ ಬಾಹ್ಯ ಸಂಘಸಂಸ್ಥೆಗಳು ಮಹಿಳೆಯರ ಸಬಲತೆಗೆ ಸೂಕ್ತ ವಾತಾವರಣವನ್ನು ಸೃಜಿಸುತ್ತವೆ. ಹಾಗೂ

ಮಹಿಳಾ ಸಬಲೀಕರಣ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ನೆರವಾಗುವ ಪ್ರಕ್ರಿಯೆಗಳಿಗೆ ಬೆಂಬಲ ನೀಡುತ್ತಾರೆ. ಲಿಂಗಸಂಬಂಧಿ ಜವಾಬ್ದಾರಿಗಳು ಬದಲಾವಣೆಯಾಗುತ್ತಿರುವ ಈ ಸಂಧಿ ಕಾಲದಲ್ಲಿ ಪ್ರಪಂಚದಲ್ಲಿ ತಮ್ಮೆಲ್ಲ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಮಹಿಳೆಯರಿಗೆ ಧೈರ್ಯ, ಶಕ್ತಿ ಹಾಗೂ ದೂರದೃಷ್ಟಿಯನ್ನು ನೀಡುವುದೇ ಎಲ್ಲರ ಆಶಯವಾಗಿದೆ. ಮಹಿಳೆಯರ ಸಬಲೀಕರಣಕ್ಕೆ ಪರಿಣಾಮಕಾರಿಯೆಂದು ಪರಿಗಣಿಸಲಾಗಿರುವ ಕಾರ್ಯತಂತ್ರಗಳು ಮಹಿಳೆಯರ ಜೀವನ ಮಟ್ಟವನ್ನು ಉನ್ನತಿಗೇರಿಸಲು, ಪುರುಷರೊಂದಿಗೆ ಸಮಾನ ಸ್ಥಾನಮಾನವನ್ನು ಪಡೆಯಲು ಮತ್ತು ಉತ್ತಮ ಸಾಮಾಜಿಕ ನ್ಯಾಯ ಹಾಗೂ ಪ್ರಜಾಪ್ರಭುತ್ವವನ್ನು ಕಾಪಾಡುವ ನಿಟ್ಟಿನಲ್ಲಿ ತಮ್ಮ ಪರಿಸರವನ್ನು ಬದಲಾಯಿಸಿಕೊಳ್ಳಲು ಮಹಿಳೆಯರಿಗೆ ನೆರವಾಗುತ್ತದೆ. ಹೀಗೆ ಮಹಿಳೆಯರ ಸಬಲೀಕರಣವನ್ನು ಆಗುಮಾಡಲು ಸ್ವಯಂಸೇವಾ ಸಂಸ್ಥೆಗಳು ಹೊಸ ಪ್ರಯತ್ನವನ್ನು ಹಮ್ಮಿಕೊಂಡದ್ದರ ಫಲವಾಗಿ ಮಹಿಳೆಯರಲ್ಲಿ ಉದ್ಯಮಶೀಲತೆ ನಿರ್ಮಾಣವಾಯಿತು. ರಾಜಕೀಯ ಪುನರ್ವ್ಯವಸ್ಥೆ, ಆರ್ಥಿಕ ಮರುಹೊಂದಾಣಿಕೆ ಹಾಗೂ ಸಾಮಾಜಿಕ ಸುಧಾರಣೆ ಇವು ತನ್ನಿಂತಾನೆ ಆಗುವಂಥ ಕಾರ್ಯಗಳಾಗಿರದೆ ವ್ಯಕ್ತಿ, ವಿಕಾಸದ ಯಾವುದೇ ಹಂತವನ್ನು ಘಾಸಿಗೊಳಿಸದೆ ಕ್ರಾಂತಿಯುಂಟುಮಾಡುವುದನ್ನು ಖಚಿತಪಡಿಸಿ, ನವ ಸಮಾಜದ ನಿರ್ಮಾಣದ ಪ್ರಯತ್ನ ಮಾಡುವುದು ಕಷ್ಟಸಾಧ್ಯ. ಆದರೆ ಸ್ವಯಂ ಸೇವಾ ಸಂಸ್ಥೆಗಳ ಇತಿಹಾಸವೆಂದರೆ ವ್ಯಕ್ತಿವಿಕಾಸವನ್ನೇ ತಮ್ಮ ಪ್ರಜ್ಞಾಪೂರ್ವಕ ಗುರಿಯನ್ನಾಗಿ ಹೊಂದಿರುವ ಸಂಸ್ಥೆಗಳ ಕಥೆಯಾಗಿದ್ದು, ಅವುಗಳ ಬಲವನ್ನು ವರ್ಧಿಸಿದಲ್ಲಿ ಅವುಗಳ ಗುರಿಗಳನ್ನು ಸಾಧಿಸಲು ನೆರವಾದಂತೆಯೇ ಆಗುತ್ತದೆ. ವಿಜ್ಞಾನ ಹಾಗೂ ತಂತ್ರಜ್ಞಾನದ ತೀವ್ರ ಗತಿಯ ಬೆಳವಣಿಗೆಯಿಂದ ಆರ್ಥಿಕ ಸಾಮಾಜಿಕ ಪರಿತವರ್ತನೆಗಳೂ ಕೂಡ ಅಷ್ಟೇ ಕ್ಷಿಪ್ರಗತಿಯಿಂದ ಆಗುತ್ತಿರುವುದನ್ನು ಗಮನಿಸಬಹುದಾಗಿದೆ. ಭಾರತದಲ್ಲಿ ಪ್ರಸ್ತುತ ಇಂಥ ಬದಲಾವಣೆಗಳು ಆಗುತ್ತಿರುವುದರ ಪರಿಣಾಮವಾಗಿ, ಸಾಂಪ್ರದಾಯಿಕ ಸಾಮಾಜಿಕ ಸಂಸ್ಥೆಗಳಲ್ಲಿ, ಆಡಳಿತ ಪದ್ಧತಿಗಳಲ್ಲಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳಲ್ಲಿ ಉಂಟಾಗುತ್ತಿರುವ ತೀವ್ರ ಏರುಪೇರುಗಳನ್ನು ನಾವು ನಿರ್ಲಕ್ಷಿಸಲೂ ಕೂಡ ಸಾಧ್ಯವಿಲ್ಲ. ಆದರೆ ಬೇರೂರಿದ ಪುರುಷ ಪ್ರಾಬಲ್ಯದ ಪರಿಣಾಮವಾಗಿ ಮಹಿಳೆಯರನ್ನು ಅಸಹಾಯಕರನ್ನಾಗಿಸಿ ದೌರ್ಜನ್ಯ, ತುಳಿತ ಹಾಗೂ ಅಮಾನವೀಯವಾಗಿ ನಡೆಸಿಕೊಂಡುದರ ಒಟ್ಟು ಪರಿಣಾಮವಾಗಿ ಇಷ್ಟೆಲ್ಲ ಮರು ಮೌಲ್ಯಮಾಪನವಾಗಬೇಕಾದ ಪರಿಸ್ಥಿತಿಗೆ ಕಾರಣದ ಮೂಲವನ್ನು ಹುಡುಕಬೇಕಾಗುತ್ತದೆ. ಜತೆಗೆ ಮಹಿಳೆಯರಲ್ಲಿ ಹೆಚ್ಚು ಜನರು ತನ್ನನ್ನು ತಾನು ರಕ್ಷಿಸಿಕೊಳ್ಳಲು ಎಂದರೆ ಆತ್ಮರಕ್ಷಣೆ ತನಗೆ ಸಾಧ್ಯವಿಲ್ಲ, ತನಗೆ ಆಗುತ್ತಿರುವ ಅವಮಾನ, ನಿಂದನೆ, ಅನ್ಯಾಯ, ಅಸಮಾನತೆ ಮುಂತಾದವುಗಳನ್ನು ತನ್ನ ಆತ್ಮಬಲದ ಮೂಲಕ ಮೆಟ್ಟಿ ನಿಲ್ಲಬಹುದು ಎಂಬುದನ್ನೇ ತಿಳಿದುಕೊಂಡಿರುವುದಿಲ್ಲ. ಅಷ್ಟೇ ಅಲ್ಲ ಹೋರಾಟ, ಸಂಘರ್ಷ, ತಿಕ್ಕಾಟ ಇವೆಲ್ಲ ಮಹಿಳೆಯರಲ್ಲಿ ಎದುರಿಸಲಾಗದ ಹಾಗೂ ಪುರುಷರು

ಮಾತ್ರವೇ ಗೆಲ್ಲಬಲ್ಲ ಸ್ಪರ್ಧೆಗಳು ಎಂಬಂತೆ ಹಿಂಜರಿಯುತ್ತಾರೆ. ಇದರೊಡನೆ ಪುರುಷನ ಬಗ್ಗೆ ಅಂತರಂಗದ ಒಳಗೇ ಬೇರುಬಿಟ್ಟಿರುವ ಭೀತಿ ಅವನನ್ನು ಎದುರಿಸುವ ಸಂದರ್ಭಗಳನ್ನೇ ನಿವಾರಿಸುವಂತೆ ಮಾಡುತ್ತದೆ. ಆದಿಶಕ್ತಿ ಎಂಬ ಅಂತಃಶಕ್ತಿಯ ಮೂಲವನ್ನೇ ಹೆಣ್ಣಿನ ಸಬಲತೆಗೆ ದ್ಯೋತಕವಾಗಿ ಗುರುತಿಸಿದ್ದ ಆಯುಧಗಳನ್ನೆಲ್ಲ ಆಕೆಯ ಕೈಗೆ ಕೊಟ್ಟಿದ್ದರೂ ಸಾಮಾನ್ಯ ಮಹಿಳೆಗೆ ಯಾರ ಮೂಲಕವಾದರೂ ತೊಂದರೆ ನಿರಂತರವಾಗಿ ಜೊತೆಯಲ್ಲೇ ಬಂದ ವಿಪರ್ಯಾಸ ನಮ್ಮ ದೇಶದಲ್ಲಿ ಕಂಡುಬರುತ್ತಿದೆ. ಈ ಶತಮಾನದ ಸಾಮಾಜಿಕ, ಆರ್ಥಿಕ, ರಾಜಕೀಯ, ವೈಜ್ಞಾನಿಕ, ಶೈಕ್ಷಣಿಕ ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆ ತನ್ನ ಶಕ್ತಿಯನ್ನು ಸಾಬೀತುಪಡಿಸಲು ಛಲದಿಂದ ಮುಂದಡಿಯಿಡಲು ಅಂಜುತ್ತಾಳೆ. ಶೇ.೧೦ ಮಂದಿ ಮಾತ್ರವೇ ಮಹತ್ವಾಕಾಂಕ್ಷೆಯನ್ನು ಹೊಂದಿದ್ದರೆ ಉಳಿದ ಶೇ.೯೦ ಮಂದಿ ಸುಂದರ ಸಂಸಾರ, ಪತಿ ಹಾಗೂ ಮಕ್ಕಳ ಒಡನಾಟ, ಜಂಜಾಟ, ಸ್ಪರ್ಧೆ ಇರದ ನಿರಾಳ ಜೀವನ ಬಯಸುತ್ತಾರೆಂಬುದಾಗಿ ಗುರುತಿಸಲಾಗಿದೆ. ಹೀಗಾಗಿ ಅಬಲೆಯೆನಿಸಿಕೊಂಡರೂ ಚಿಂತೆಯಿಲ್ಲ ಎಂಬ ದಿವ್ಯ ನಿರ್ಲಕ್ಷ್ಯಕ್ಕೆ ಮಹಿಳೆಯರು ಒಗ್ಗಿ ಹೋಗಿದ್ದಾರೆ. ಆದರೆ ಗೃಹಿಣಿಯಾಗಿ ಮಹಿಳೆಯ ದುಡಿಮೆ ಕೂಡ ಕೂಲಿ ಅಥವಾ ಮಜೂರಿಗೆ ಒಳಪಡುತ್ತದೆ ಎಂಬ ಅಂಶ ಇತ್ತೀಚಿವರೆಗೂ ತಿಳಿದಿರಲಿಲ್ಲ ತನ್ನ ರೋಗ ರುಜಿನ, ಮಾನಸಿಕ ದೈಹಿಕ ಶ್ರಮವನ್ನು ಮಹಿಳೆಯಾಗಲಿ, ಪುರುಷರಾಗಲಿ ಲೆಕ್ಕಕ್ಕೆ ಇಟ್ಟಿರಲೇ ಇಲ್ಲ. ಆದ್ದರಿಂದ ಅದು ಅನಿವಾರ್ಯ ಕರ್ತವ್ಯವೆಂಬ ಅಭಿಪ್ರಾಯವೇ ಬೇರೂರಿದೆ. ಇದೇ ರೀತಿ ಕೃಷಿ ಕ್ಷೇತ್ರದಲ್ಲಿ ಕೂಡ ಹೆಣ್ಣುಮಕ್ಕಳ ಶ್ರಮವನ್ನು ಗಣನೆಗೆ ತರಲಾಗಿಲ್ಲ. ದೂರದ ಸ್ಥಳಗಳಿಂದ ನೀರು, ಉರವಲು ತರುವುದು, ಮೇವು ಸಂಗ್ರಹ, ದನಕರುಗಳ ಪಾಲನೆ ಇವೆಲ್ಲವೂ ಕೂಡ ಕೆಲಕದ ಚೌಕಟ್ಟಿನಲ್ಲಿ ಸೇರಿಸಲಾಗಿಲ್ಲ. ೧೯೯೧ರ ಜನಗಣತಿಯಲ್ಲಿ ಶೇ.೯೦ರಷ್ಟು ಮಹಿಳೆಯರು ಉದ್ಯೋಗರಹಿತರು ಎಂಬುದಾಗಿ ದಾಖಲಿಸಲಾಗಿತ್ತು. ಆದರೆ ಇಂಥ ಅವಿರತ ದುಡಿಮೆಯಿಂದಾಗಿ ಆಕೆ ಆರ್ಥಿಕವಾಗಿ ಲಾಭದಾಯಕ ಉದ್ಯಮ, ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂಬ ಸಂಗತಿ ಯಾರಿಗೂ ಹೊಳೆಯುವುದಿಲ್ಲ. ೨೦೦೧ರ ಜನಗಣತಿಯಲ್ಲಿ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಲಾಗಿದ್ದು ಮಹಿಳಾ ಕ್ಷೇತ್ರದ ಪರಿಣಿತರು, ಮಹಿಳಾ ಅಧ್ಯಯನ ಕೇಂದ್ರಗಳು, ಸರ್ಕಾರ ಸೂಕ್ಷ್ಮವಾಗಿ ಅವಲೋಕನ ನಡೆಸುತ್ತಿವೆ. ೨೦೦೧ರ ಜನಗಣತಿಯಲ್ಲಿ ಕೆಲಸವೆಂದರೆ ಆರ್ಥಿಕವಾಗಿ ಲಾಭಕರ ಚಟುವಟಿಕೆ, ಮತ್ತು ಯಾವುದೇ ಆರ್ಥಿಕ ಚಟುವಟಿಕೆ ಎಂಬುದಾಗಿ ಸೂಚಿಸಲಾಗಿದೆ. ೨೦೦೧ರ ಜನಗಣತಿ ಕೈಪಿಡಿ ಲಿಂಗಸಂವೇದಿ ಭಾಷೆಯನ್ನು ಬಳಸಿರುವುದರ ಜೊತೆಗೆ ಮಕ್ಕಳು, ಸ್ತ್ರೀಯರನ್ನು ಕೆಲಸರಹಿತರು ಎಂದು ಪರಿಗಣಿಸಬಾರದೆಂದು ಸೂಚಿಸಲಾಗಿದೆ.

ಮಹಿಳೆ ತನ್ನ ಮೇಲಾಗುತ್ತಿರುವ ದೌರ್ಜನ್ಯವನ್ನು ಎದುರಿಸಲು ಸಜ್ಜಾಗಿರುವುದು ತನ್ನ ಸ್ವಾವಲಂಬನೆ ಯಿಂದಾಗಿ. ೨೦೦೧ ರಿಂದ ಸರ್ಕಾರವೇ ಈ ಬಗ್ಗೆ ಸಾಕಷ್ಟು ಆಸಕ್ತಿ ತೋರಿಸುತ್ತಿದೆ. ಮಹಿಳೆಯರಿಗೆ

ಕುಟುಂಬದೊಳಗಿನ ದೌರ್ಜನ್ಯ ಅಥವಾ ಹಿಂಸೆಯನ್ನು ತಡೆಯಲು ಹೊಸ ಕಾನೂನನ್ನು ತರಲಾಗಿದೆ. ಜೊತೆಗೆ ಸಮಗ್ರ ಮಹಿಳೆಯರ ಅಭಿವೃದ್ಧಿ ಯೋಜನೆಯನ್ನು ಇಂಟಿಗ್ರೇಟೆಡ್ ವಿಮೆನ್ಸ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್-IWDP) ಪ್ರಾರಂಭಿಸುವ ಬಗ್ಗೆ ಕೂಡ ಆಗಲೇ ಸೂಚಿಸಲಾಗಿತ್ತು. ಯೋಜನಾ ಆಯೋಗದ ಉಪಾಧ್ಯಕ್ಷ ಕೆ.ಸಿ.ಪಂತ್ ಅವರ ನೇತೃತ್ವದಲ್ಲಿ ಸಚಿವರ ತಂಡ ಹೊಂದು 'ಮಹಿಳಾ ಸ್ವಾವಲಂಬನೆ ನೀತಿ'ಯ ಕರಡನ್ನು ಸಿದ್ಧಪಡಿಸಿತು. ಮಹಿಳೆಯರಿಗಾಗಿಯೇ ಇರುವ ಕೆಲವು ಕಾಯಿದೆಗಳನ್ನು ತಿದ್ದುಪಡಿ ಮಾಡಲು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ವಹಿಸಿಕೊಡಲಾಗಿದೆ. ೧೯೯೬ ರಲ್ಲಿ ಪ್ರಪಥಮವಾಗಿ ಮಹಿಳಾ ಸ್ವಾವಲಂಬನೆ ನೀತಿಯನ್ನು ರಚಿಸಲಾಗಿತ್ತು. ಆಗಿನಿಂದಲೂ ಅದಕ್ಕೆ ಇಂದಿವರೆಗೆ ಮಂಜೂರಾತಿ ದೊರೆತಿಲ್ಲ. ಇದರಲ್ಲಿ ಮಹಿಳೆಯರ ಆರ್ಥಿಕ, ಸಾಮಾಜಿಕ ಸ್ವಾವಲಂಬನೆಗೆ ಒತ್ತುಕೊಟ್ಟಿರುವುದರೊಂದಿಗೆ ಆರೋಗ್ಯ, ಶಿಕ್ಷಣ, ಗೃಹದೌರ್ಜನ್ಯ ತಡೆ ಮೊದಲಾದ ಸಂಗತಿಗಳನ್ನು ಗಮನಿಸಲಾಗಿದೆ. ಮಹಿಳಾ ಸ್ವಾವಲಂಬನೆ ವರ್ಷವಾಗಿ ೨೦೦೧ನೇ ಇಸವಿಯನ್ನು ಯೋಜಿಸಲಾಗಿದ್ದು ಮಹಿಳೆಯರ ಮೂಲಭೂತ ಸಮಸ್ಯೆಗಳನ್ನು ನಿವಾರಿಸಲು ಕೆಲವು ಯೋಜನೆಗಳನ್ನು ಆರಂಭಿಸಲೂ ಕೂಡ ಸರ್ಕಾರ ಆಲೋಚಿಸಿತ್ತು. ಈ ಐಡಬ್ಲ್ಯುಡಿಪಿಯಲ್ಲಿ ಮಹಿಳೆಯರು ಸಾಮಾಜಿಕ ಚಟುವಟಿಕೆಗಳು ಮತ್ತು ಸಾಮೂಹಿಕ ಯೋಜನೆಗಳಲ್ಲಿ ಪಾಲ್ಗೊಳ್ಳುವುದನ್ನು ಉತ್ತೇಜಿಸುವ ಗುರಿ ಹೊಂದಲಾಗಿತ್ತು. ಇದಕ್ಕಾಗಿ ಸ್ವಸಹಾಯ ಗುಂಪುಗಳ ಸಕ್ರಿಯ ಭಾಗವಹಿಸುವಿಕೆ ಅಗತ್ಯವೆಂದು ಸರ್ಕಾರ ಸೂಚಿಸಿತ್ತು. ಗೃಹದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ರಚಿಸಲು ಕೆಲವು ಆಡಳಿತಾತ್ಮಕ ಮಾನದಂಡಗಳ ಬಗ್ಗೆ ಕೂಡ ಸರ್ಕಾರ ಆಲೋಚನೆ ನಡೆಸಿತ್ತು. ಇದಕ್ಕಾಗಿ ಜಿಲ್ಲಾ ಮಟ್ಟದ ಸಮಿತಿಗಳನ್ನು ರಚಿಸಲಾಯಿತು. ಮಹಿಳಾ ದೌರ್ಜನ್ಯ, ಲೈಂಗಿಕ ಕಿರುಕುಳಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯ ರೂಪಿಸಲು ಕಾರ್ಯಾಗಾರಗಳನ್ನು ವ್ಯವಸ್ಥೆ ಮಾಡಿದೆ. ಜೊತೆಗೆ ಮಹಿಳಾ ಗುಂಪುಗಳೊಂದಿಗೆ ಕೂಡ ಸಂವಾದ ನಡೆಸಿದೆ. ಇದರಿಂದ ಮಹಿಳಾ ಸ್ವಾವಲಂಬನೆ ನೀತಿ ಕರಡಿನ ಬಗ್ಗೆ ಸರ್ಕಾರೇತರ ಸಂಘಟನೆಗಳ ಅಭಿಪ್ರಾಯ ಮತ್ತು ದೃಷ್ಟಿಕೋನಗಳನ್ನು ತಿಳಿಯಲು ಸರ್ಕಾರಕ್ಕೆ ಸಾಧ್ಯವಾಯಿತು. ಜೊತೆಗೆ ವಿವಿಧ ಇಲಾಖೆಗಳ ಅಭಿಪ್ರಾಯವನ್ನೂ ಕೂಡ ಪಡೆಯಲಾಗಿತ್ತು. ಮಹಿಳೆ ತನ್ನೆಲ್ಲ ಒಟ್ಟಾರೆ ಶಕ್ತಿ ಆತ್ಮಬಲವನ್ನು ಕ್ರೋಡೀಕರಿಸಿ ಮಹಿಳೆಯರ ಸಂಘಟನೆ ನಡೆಸಿ ತನ್ನ ಸ್ನೇಹಹಸ್ತ, ಸೇವಾ ಮನೋಭಾವ, ಸಹಕಾರದ ಸ್ಪಂದನದಿಂದ ತನ್ನ ನಿಜವಾದ ಸಬಲತೆಯನ್ನು ಮತ್ತೆ ಪಡೆದುಕೊಳ್ಳಬೇಕು. ಈ ದಿಶೆಯಲ್ಲಿ ಈ ಕೆಲವು ದಿಟ್ಟ ವಿಚಾರಗಳನ್ನು ಹೊಂದಿರಬೇಕು. ಅವುಗಳೆಂದರೆ :

೧. ಪುರುಷನಿಗೆ ಸಮಾನವಾದ ಶಿಕ್ಷಣವನ್ನು ಪಡೆಯಲು ಆಸಕ್ತಿ, ಛಲಹೊಂದಿರಬೇಕು.

೨. ಪುರುಷ ಪ್ರಧಾನ ಸಮಾಜದಲ್ಲಿ ಪುರುಷನ ಯಜಮಾನಿಕೆ ಹಾಗೂ ದಬ್ಬಾಳಿಕೆಯನ್ನು ವಿರೋಧಿಸುವ ದಿಟ್ಟತನವನ್ನು ಮೈಗೂಡಿಸಿಕೊಳ್ಳಬೇಕು.

೩. ಕೌಟುಂಬಿಕವಾಗಿ ತನ್ನ ಮೇಲುಗೈಯನ್ನೇ ಸಾಧಿಸಬೇಕು.

೪. ಆರ್ಥಿಕವಾಗಿ ಸ್ವಾವಲಂಬಿಯಾಗಲು ಪ್ರಯತ್ನಿಸಬೇಕು

೫. ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಯಾವುದೇ ಹಿಂಜರಿಕೆಯಿಲ್ಲದೆ ಪಾಲ್ಗೊಳ್ಳುವ ಎದೆಗಾರಿಕೆ ಇರಬೇಕು.

೬. ತನಗೆ ಬೇಕಾದ ಸವಲತ್ತುಗಳನ್ನು ಬೇಡಿಪಡೆಯದೆ ಆಗ್ರಹದಿಂದ ಪಡೆಯುವ ಸ್ವಸಾಮರ್ಥ್ಯವನ್ನು ಪ್ರದರ್ಶಿಸಬೇಕು.

೭. ಮಹಿಳಾಪರ ಆಲೋಚನೆಗಳನ್ನು ನಿರ್ಭೀತಿಯಿಂದ ತಿಳಿಸಬೇಕು.

೮. ಮಹಿಳಾ ಸಂಘಟನೆಗಳನ್ನು ಪ್ರಾರಂಭಿಸುವ ಸಂಘಟನಾತ್ಮಕ ಚಾತುರ್ಯವನ್ನು ಹೊಂದಿರಬೇಕು.

೯. ಸಮಾಜದ ಅಂದರೆ ಕೃಷಿ, ಕೈಗಾರಿಕೆ, ಸಾರಿಗೆ, ವ್ಯಾಪಾರ ವಾಣಿಜ್ಯ ಇತ್ಯಾದಿ ಕ್ಷೇತ್ರಗಳಲ್ಲಿ ಕೀಳರಿಮೆ ಇಲ್ಲದೆ ಪುರುಷನೊಂದಿಗೆ ಸರಿಸಮನಾಗಿ ತೊಡಗಿಸಿಕೊಳ್ಳುವ ಇಚ್ಛಾಶಕ್ತಿಯನ್ನು ಹೊಂದಿರಬೇಕು.

೧೦. ರಾಷ್ಟ್ರದ ಸಮಾಜದ ಪ್ರಗತಿಯಲ್ಲಿ ತನ್ನದು ಪಾತ್ರವಿದೆ ಎಂಬ ಸ್ವಾಭಿಮಾನಿ ಮನೋಭಾವ ರೂಢಿಸಿಕೊಳ್ಳಬೇಕು.

ಈ ಮೇಲ್ಕಂಡ ಎಲ್ಲ ಅಂಶಗಳು ಕೂಡ ಮಹಿಳೆ ಸ್ವಸಾಮರ್ಥ್ಯದಿಂದ ತನ್ನಲ್ಲಿನ ಅಂತಃಶಕ್ತಿಯನ್ನು ಉದ್ದೀಪನಗೊಳಿಸಿಕೊಳ್ಳಲು ಅವಶ್ಯವಾಗುತ್ತದೆ. ಇವೆಲ್ಲವನ್ನು ಬಲವಂತವಾಗಿ ಸ್ವೀಕರಿಸಿ ಆಚರಣೆಗೆ ತರುವ ಆಡಂಬರ ಕೂಡದು. ಬದಲಾಗಿ ವಾಸ್ತವ ಪರಿಸ್ಥಿತಿಗೆ ತಕ್ಕಂತೆ ಸಾಂದರ್ಭಿಕ ಸಮಸ್ಯೆಗಳಿಗೆ ಅನುಗುಣವಾಗಿ ಅನುಸರಿಸುವ ಮಹಿಳೆಯೊಳಗಣ ಇಚ್ಛಾಶಕ್ತಿಯೇ ಅವಳ ಅಂತಃಶಕ್ತಿಯನ್ನು ಪ್ರಚೋದಿಸುತ್ತದೆ. ನ್ಯಾಯಬದ್ಧವಾದ, ಸರ್ವಸಮಾನತತ್ತ್ವಗಳನ್ನಾಧರಿಸಿದ ಸಮಾಜದ ನಿರ್ಮಾಣ ಮಾಡಬೇಕೆಂದು, ಮಹಿಳೆಯರ ಸಮಗ್ರ ಬೆಳವಣಿಗೆ ಅದರಲ್ಲಿ ಮುಖ್ಯವಾಗಿರಬೇಕೆಂದು ಬಯಸುವ ಹಿತಚಿಂತಕರ ಆಶಯ ಹಾಗೂ ಬದ್ಧತೆ ಮಹಿಳಾ ಮುಖಂಡರಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಬೇಕು. ಅಂಥವರು ಸದ್ಭಾವನೆಯಿಂದ, ಸಮರ್ಪಣಭಾವದಿಂದ ಹುಟ್ಟುಹಾಕುವ, ಬೆಳೆಸುವ ಮಹಿಳಾ ಸಹಕಾರ ಸಂಸ್ಥೆಗಳು ತ್ವರಿತಗತಿಯಲ್ಲಿ, ಉದ್ಯಮಶೀಲ ಮಹಿಳೆಯರ ಶ್ರಮದ ಸಹಿತ ಬೆಳೆಯುತ್ತವೆ. ಹೀಗಾಗಿ ಉತ್ತಮನಾಯಕತ್ವ ಹಾಗೂ ಪ್ರಗತಿಪಥದತ್ತ ದಾಪುಗಾಲು ಹಾಕುವ ಅವರ ಹಿಂಬಾಲಕಿಯರು ತಮ್ಮ ಜೀವನದಲ್ಲಿ ಈ ಮುಂದಿನ ಅಗತ್ಯತೆಗಳನ್ನು ಹೆಚ್ಚುಹೆಚ್ಚಾಗಿ ಅಳವಡಿಸಿಕೊಳ್ಳುತ್ತಾರೆ :

೧. ಮಹಿಳಾ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಹಾಗೂ ತಾವು ಬದುಕುತ್ತಿರುವ ಆಗುಹೋಗುಗಳಲ್ಲಿ ಅಭಿವೃದ್ಧಿ ಸಮಸ್ಯೆಗಳ ಸಂಕೀರ್ಣತೆ ಬಗ್ಗೆ ಆಳವಾದ ಅರಿವು ಹೊಂದಿರುವುದು.

೨. ತಾವು ನಿರ್ಮಿಸಲು ಹೊರಟಿರುವ ಸಹಕಾರ ಸಂಘ ಯಾವ ಬಗೆಯದಾಗಿರಬೇಕು ಎಂಬ ಬಗ್ಗೆ ಸ್ಪಷ್ಟ ನಿಲುವು ತಳೆದಿರುವುದು

೩. ಯುಕ್ತವಾದ ಕಾರ್ಯತಂತ್ರ ಹಾಗೂ ಚಾಕಚಕ್ಯತೆಯಿಂದ ಕೂಡಿದ ವಾಸ್ತವಿಕ ಕ್ರಿಯಾ ಯೋಜನೆ

೪. ಸಾಮಾನ್ಯ ಮಹಿಳೆಯರ ಮನೋಭಾವಗಳ ಬಗ್ಗೆ ಚಿಂತಿಸಿ ತರಬೇತಿ ಹಾಗೂ ಅನುಭವ ಪಡೆದು ನೈಜ ನಡವಳಿಕೆಯಿಂದ, ಸಹಕಾರಿ ಸಂಘಟನಕಾರರಾಗಿ, ಅತ್ಯಂತ ಕೆಳಗಿನ ಗ್ರಾಸ್‌ರೂಟ್ ಮಟ್ಟದ ಮಹಿಳೆಯರ ಬಗ್ಗೆ ಕೂಡ ಆಲೋಚಿಸಿ ಕೆಲಸ ಮಾಡುವ ಸ್ವಯಂ ಸೇವಾ ಕಾರ್ಯಕರ್ತೆಯರಾಗುವುದು. ಈ ಎಲ್ಲ ಕಾರ್ಯಗಳು, ಧ್ಯೇಯಗಳು ಎಷ್ಟೇ ವಿವಾದಾಸ್ಪದವಾಗಿರಲಿ, ಅಥವಾ ಕಷ್ಟಸಾಧ್ಯವಾದುದಾಗಿರಲಿ ಅವುಗಳನ್ನು ಧೈರ್ಯ ಹಾಗೂ ಸ್ಥೈರ್ಯಗಳಿಂದ ಎದುರಿಸಿ ಯಶಸ್ಸು ಕಾಣುವ ಪ್ರಯತ್ನ, ಮನೋಬಲ, ಶ್ರಮದಾನದ ದೃಢನಿರ್ಧಾರ ಇರಬೇಕೇ ವಿನಾ ಅವುಗಳನ್ನಾಗಲಿ, ಪ್ರಶ್ನಿಸುವ ಮಹಿಳೆಯರನ್ನಾಗಲಿ ನಿವಾರಿಸಿಕೊಳ್ಳುವ, ನೆವ ಹೇಳಿ ನುಣಚಿಕೊಳ್ಳುವ, ಪಲಾಯನವಾದಿತನವನ್ನು ಮಾತ್ರ ಹೊಂದಿರಬಾರದು. ಹೀಗೆ ಬೇಜವಾಬ್ದಾರಿತನದಿಂದ ವರ್ತಿಸಿದಾಗ ಅದು ಇತರರ ವರ್ತನೆಗೆ, ದುರಾಸೆಗೆ ಎಡೆಕೊಟ್ಟು ಯಾವ ನೈತಿಕ ತಳಹದಿಯ ಮೇಲೆ ಸಂಸ್ಥೆಯನ್ನು ಹುಟ್ಟು ಹಾಕಲಾಗಿತ್ತೋ ಆ ಎಲ್ಲ ಸಹಕಾರತತ್ತ್ವಗಳು ಮರೆಯಾಗಿ ದುರಾಡಳಿತ, ಹಣವನ್ನು ಬಾಚಿಕೊಳ್ಳಲು, ದುರುಪಯೋಗ ಮಾಡಲು ದಾರಿಯಾಗುತ್ತದೆ. ಆದ್ದರಿಂದ ಮಹಿಳೆಯರು ವಂಚಕತನ, ಅಪ್ರಾಮಾಣಿಕತೆ ಹಾಗೂ ಅಸೂಯೆಯನ್ನು ಬಿಟ್ಟು ನಿಜವಾದ ಅರ್ಥದಲ್ಲಿ ಸೇವಾ ಮನೋಭಾವದಿಂದ ದುಡಿದಲ್ಲಿ ಸಹಕಾರಿ ಸಂಸ್ಥೆಗಳು ಮುಚ್ಚಿ ಹೋಗದೆ ಸಾವಿರಾರು ಜನರ ಬಾಳದಾರಿಯಾಗುತ್ತವೆ.

ಒಟ್ಟಾರೆಯಾಗಿ ಹೇಳುವುದಾದರೆ, ಗ್ರಾಮಾಂತರ ಅಥವಾ ನಗರ ಪ್ರದೇಶಗಳಾಗಲಿ ಮಹಿಳೆಯರು ತಮ್ಮ ವ್ಯಕ್ತಿಗತ ನೋವು, ನಿರಾಶೆ ಹಾಗೂ ದಾಸ್ಯಬಾವನೆಯನ್ನು ನಿವಾರಿಸಿಕೊಳ್ಳಲು ಸ್ವಾವಲಂಬನೆಯ ದಾರಿ ಹಿಡಿಯುವುದು ಅನಿವಾರ್ಯವಾಗುತ್ತದೆ. ಹಾಗೆಯೇ ತನ್ನಂತೆಯೇ ಅಸಹಾಯ ಸ್ಥಿತಿಯಲ್ಲಿರುವ ಅಥವಾ ತನಗಿಂತ ಸಾಕಷ್ಟು ಮುಂದಡಿಯಿಟ್ಟಿರುವ ಮಹಿಳೆಯರನ್ನು ಜೊತೆಯಲ್ಲಿ ಸೇರಿಸಿಕೊಂಡು ಪರಸ್ಪರ ಸೌಹಾರ್ದ, ಸಹಕಾರದಿಂದ ಸಂಘಟಿತ ಕಾರ್ಯಾಚರಣೆ ನಡೆಸಿ ಆರ್ಥಿಕ ಸ್ವಾವಲಂಬನೆ ಪಡೆಯುವುದು ಮಾತ್ರವಲ್ಲ, ತಮ್ಮ ಕುಟುಂಬದ, ಸಮಾಜದ ಹಾಗೂ ದೇಶದ ಪ್ರಗತಿಗೂ ಕಾರಣವಾಗುತ್ತಾರೆ. ಅಷ್ಟೇ ಅಲ್ಲ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಪುರುಷರ ನಡುವೆ ಸಮಾನತೆ ಉಂಟುಮಾಡಲು, ರಾಜಕಾರಣದ, ಅಧಿಕಾರದ ಚುಕ್ಕಾಣಿ ಹಿಡಿಯಲು ಸಮರ್ಥಳಾದ ನಾಯಕತ್ವ ತರಬೇತಿ ಪಡೆಯುತ್ತಾರೆ. ನನಸಾಗದ ಕನಸುಗಳೆಂದು, ಕಷ್ಟಕೋಟಲೆಗಳಲ್ಲಿ ಕಾಲಹರಣ ಮಾಡುವುದಕ್ಕಿಂತ ಕಷ್ಟಪಟ್ಟು ದುಡಿದು, ಸಮಾಜದ ಗಣ್ಯ ವ್ಯಕ್ತಿಯಾಗಿ, ಹೆಸರಾಂತ ಉದ್ಯಮಿಗಳಾಗಿ, ನಿಷ್ಠಾವಂತ, ಕರ್ತವ್ಯಬದ್ಧನಾಗರಿಕಳಾಗಿ

ಜೊತೆಗೆ ಕುಟುಂಬದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು, ಅಂತಸ್ತನ್ನು ಉನ್ನತಸ್ಥಾನಕ್ಕೆ ಕೊಂಡಯ್ಯುತ್ತಾರೆ. ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಗಿಳಿದಿರುವ ಮಹಿಳೆ ಸಹಕಾರ ಕ್ಷೇತ್ರದಿಂದ ತನ್ನೆಲ್ಲ ಪ್ರಯತ್ನಗಳಲ್ಲಿಯೂ ಯಶಸ್ವಿನಿಯಾಗಿ ತನ್ನ ಸಬಲತೆಗೆ ಅರ್ಥವಂತಿಕೆಯನ್ನು, ಅಸ್ತಿತ್ವಕ್ಕೆ ಮಾನ್ಯತೆಯನ್ನು ತಂದುಕೊಡಬಲ್ಲ ಮನೋಬಲ ಹೊಂದಿದ ಮಹಿಳೆಯಾಗುವುದರಲ್ಲಿ ಸಂದೇಹವಿಲ್ಲ.

ಅಡಿಟಿಪ್ಪಣಿಗಳು

೧. ಬಿ.ಎಸ್.ಗಂಗೂಲಿ(ಶಿಕ್ಷಣ) ಸೋಷಿಯಲ್ ಡೆವೆಲಪ್‌ಮೆಂಟ್ ಎಸ್ಸೇಸ್ ಇನ್ ಆನರ್‌ಆಫ್ ಶ್ರೀಮತಿ ದುರ್ಗಾಬಾಯಿ ದೇಶಮುಖ್, ನ್ಯೂಡೆಲ್ಲಿ, ಸ್ಟರ್ಲಿಗ್ ಪಬ್ಲಿಷರ್ಸ್, ಪ್ರೈ.ಲಿ.೧೯೭೭

೨. ಸಹಕಾರ ಇಲಾಖೆಯ ವಾರ್ಷಿಕವರದಿ ೧೯೯೫-೯೬, ಪು.೪೨

೩. ಅನುಬಂಧ, ಮಹಿಳಾ ಸಹಕಾರ ಸಂಘಗಳು, ೧೯೯೬-೯೭.

ಮಾಹಿತಿ : ವಾರ್ಷಿಕ ವರದಿ ಕೋಷ್ಟಕಗಳು, ೧೯೯೬-೯೭ ಕೋ-ಅಪರೇಷನ್ ಮೂವ್ ಮೆಂಟ್ ಅಟ್ ಎಗ್ಲಾನ್ಸ್ ಇನ್ ಕರ್ನಾಟಕ, ೧೯೯೬-೯೭. ಪ್ರಕಾಶಕರು : ರಿಸರ್ಚ್ ಅಂಡ್ ಇವ್ಯಾಲ್ಯುಯೇಷನ್ ಸೆಲ್, ಆಫೀಸ್ ಆಫ್ ದಿ ರಿಜಿಸ್ಟ್ರಾರ್ ಆಫ್ ಕೋ-ಅಪರೇಟಿವ್ ಸೊಸೈಟೀಸ್, ಬೆಂಗಳೂರು-೫೬೦೦೦೫೨

೪. ಸಹಕಾರ ಚಳವಳಿಯಲ್ಲಿ ಮಹಿಳೆಯರ ಪಾತ್ರ, ಶ್ರೀಮತಿ ಎ.ಎಸ್ .ಪಾರ್ವತಿ ಜಿಲ್ಲಾ ಮಹಿಳಾ ಸಹಕಾರ ಶಿಕ್ಷಣ, ಮೈಸೂರು, ಮಹಿಳಾ ಸಹಕಾರಿಗಳ ನಾಯಕತ್ವ ತರಬೇತಿ ಮತ್ತು ಕಾರ್ಯಾಗಾರ, ಮಾರ್ಚ್ ೧೯೮೬

೫. ಮಾತುಕತೆ ನಾಗರತ್ನರಾವ್ ಅವರೊಂದಿಗೆ, ಸಂದರ್ಶನ : ವೈ.ಎಸ್ .ಜ್ಯೋತಿ ಶಶಿಕುಮಾರ್, ಮಹಿಳಾ ಅಧ್ಯಯನ ದಕ್ಷಿಣಾಯನ ಸಂಚಿಕೆ, ಜುಲೈ ೨೦೦೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಮೊದಲನೇ ಪಾಂಚವಾರ್ಷಿಕ ಯೋಜನೆ, ಅಧ್ಯಾಯ ೧

೭. ಸಹಕಾರ ಇಲಾಖೆ ವಾರ್ಷಿಕ ವರದಿ, ೧೯೯೫-೯೬

೮. ನಾಗರತ್ನಾರಾವ್ ಅವರೊಂದಿಗೆ ಮಾತುಕತೆ, ಸಂದರ್ಶಕಿ ವೈ.ಎಸ್ .ಜ್ಯೋತಿಶಶಿಕುಮಾರ್ , ಮಹಿಳಾ ಅಧ್ಯಯನ ಸಂಪುಟ ೪, ಸಂಚಿಕೆ ೧, ದಕ್ಷಿಣಾಯನ ಸಂಚಿಕೆ, ಜುಲೈ ೨೦೦೨

೯. ಇಂಟರ್ ವ್ಯೂ ವಿತ್ ಕಾಕಾ ಕಾಲೇಲ್ಕರ್ : ಬಿ.ಕೆ.ಸಿನ್ಹಾ ಮಹಾತ್ಮಗಾಂಧಿ ಅಂಡ್ ದಿ ಕೊ. ಅಪರೇಟಿವ್ ಮೂವ್‌ಮೆಂಟ್ ಅನುಬಂಧ II ಪುಟ.೧೬೫-೧೬೬

೧೦. ಎಂ.ಆರ್.ಸುನಂದಾ : ಉದ್ಯಮ ಪ್ರಪಂಚದಲ್ಲಿ ಮಹಿಳೆಯರಿಗೆ ಹಾದಿ ತೋರುವ ಅವೇಕ್:
ಮಹಿಳಾ ವಿಜಯ, ೩೧-೧೦-೨೦೦೦

೧೧. ಬಿ.ಸಿ.ಶಿವಾನಂದ್ : ಮಾದರಿ ಸಂಘ ಯಶಸ್ವೀ ಕಾರ್ಯ
ಮೈಸೂರು ಮಹಿಳಾ ವಿವಿಧೋದ್ದೇಶ ಸಹಕಾರಿ ಸಂಘ
ಸಹಕಾರ ವಾರಪತ್ರಿಕೆ, ಆಗಸ್ಟ್ ೩೦, ೧೯೯೮

೧೨. ಶಂಕರ ಹೆಗಡೆ : ಮುಖ್ಯ ಕಾರ್ಯ ನಿರ್ವಹಣಾಧಿಕಾರಿ
ಜಿಲ್ಲಾ ಸಹಕಾರ ಯೂನಿಯನ್ , ತುಮಕೂರು
ಸಹಕಾರ ಕ್ಷೇತ್ರದಲ್ಲೊಂದು ವಿನೂತನ ಪ್ರಯೋಗ
ಗೋಲ್ಡ್ ಕಾಯಿನ್ ಗಣಕಯಂತ್ರ ಸಹಕಾರ ಸಂಘ.
ಸಹಕಾರ ವಾರಪತ್ರಿಕೆ ಆಗಸ್ಟ್ ೩೦, ೧೯೯೮

೧೩. ಎಂ.ಆರ್.ಸುನಂದಾ - ಬಹು ಉದ್ಯಮಗಳನ್ನು ನಡೆಸುತ್ತಿರುವ ಸಮರ್ಥೆ ಜಗದೀಶ್ವರಿ; ಮಹಿಳಾ ವಿಜಯ, ೨೦ನೇ ಡಿಸೆಂಬರ್, ೨೦೦೦

೧೪. ಹೊಟೇಲ್ ಉದ್ಯಮಿ : ಪದ್ಮಾಶೇಷಾದ್ರಿ - ಎಂ.ಆರ್.ಸುನಂದಾ ಮಹಿಳಾ ವಿಜಯ, ೯-೧-೨೦೦೧

೧೫. ಶಂಕರ ಹೆಗಡೆ : ಉತ್ಸಾಹ ಹುಮ್ಮಸ್ಸಿನ ಕಾರ್ಯಕರ್ತೆ, ಶ್ರೀಮತಿ ಪಿ.ಎನ್ .ಲೀಲಾವತಮ್ಮ, ಸಹಕಾರ ವಾರಪತ್ರಿಕೆ, ಸೆಪ್ಟೆಂಬರ್ ೭, ೧೯೯೭

೧೬. ರಾಘವೇಂದ್ರ ಕುಲಕರ್ಣಿವಾಚ್ : ಸಂಘಟನಾ ಮನೋಭಾವದ ದಿಟ್ಟ ಹೆಣ್ಣು : ಮಲ್ಲಮ್ಮ ಯಾಳವಾರ - ಮಹಿಳಾ ವಿಜಯ ೯ನೇ ಮೇ ೨೦೦೦

೧೭. ಎಸ್.ಶ್ರೀಕಾಂತ್, ಸಂಘಟನೆಯ ಸಾಧ್ಯತೆಗೆ ಹೊಸ ಆಯಾಮ ಮಹಿಳಾಬಲ ನಿರಂಜನವಾನಳ್ಳಿ ಮಹಿಳೋದಯವೆಂಬ ಮಹಾಸಂಘ : ಸುಧಾವಾರಪತ್ರಿಕೆ, ಮಾರ್ಚ್ ೮, ೧೯೯೮

೧೮. ಡಾ.ಬೈದ್ಯನಾಥ ಮಿಶ್ರಾ, ಕೊ-ಆಪರೇಟಿವ್ ಮೂವ್ ಮೆಂಟ್ ಇನ್ ಇಂಡಿಯಾ - ಪೀಠಿಕೆ.

೧೯. ಅದೇ

೨೦. ಲೆಕ್ಕ ಪರಿಶೋಧಕರಿಗೆ ಹಿತನುಡಿ, ಸಂಪಾದಕೀಯ : ಸಹಕಾರ ಪತ್ರಿಕೆ ಜನವರಿ ೨೧, ೨೦೦೧.

೨೧. ಮ.ಕೆ.ಹೆಗಡೆ - ಸಹಕಾರಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ನಿರೀಕ್ಷೆ, ಕನ್ನಡಪ್ರಭ. ೧೧, ನವೆಂಬರ್, ೨೦೦೨

೨೨. ಕಾನೂನು ತಿದ್ದುಪಡಿ, ಸಂಪಾದಕರ ಪುಟ, ಸಹಕಾರ ವಾರಪತ್ರಿಕೆ, ಸೆಪ್ಟೆಂಬರ್ ೭, ೧೯೯೭

೨೩. ಸಹಕಾರ ಕ್ಷೇತ್ರದ ಬಗ್ಗೆ ಪ್ರಧಾನಿಗೆ ಮನವಿ, ಸಂಪಾದಕರ ಪುಟ, ಸಹಕಾರ ಪತ್ರಿಕೆ, ಆಗಸ್ಟ್ ೨, ೧೯೯೮

೨೪. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, ೧೯೫೯(೧೯೫೯ರ ಕರ್ನಾಟಕ ಅಧಿನಿಯಮ ಸಂ.೧೧) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, ೧೯೬೦.

೨೫. ಸಾಪ್ತಾಹಿಕ ಪುರವಣಿ; ಕೇಳೇ ಗೆಳತಿ, ವಿಜಯಲಕ್ಷ್ಮಿ ಮನಾಕಪುರ ೭ನೇ ಜುಲೈ ೨೦೦೨

೨೬. ಅನುಬಂಧ II, ಮಹಿಳಾ ಹಕ್ಕುಗಳ ಪಟ್ಟಿ.

೨೭. ಪ್ರೊ.ಕೆ.ಎಸ್.ಉಮಾದೇವಿ ವಿಮೆನ್ಸ್ ಎಂಪವರ್‌ಮೆಂಟ್ ಬಿಲ್ಡಿಂಗ್ ದಿ ಪ್ಯೂಚರ್ ಟೇಕ್ಸ್, ಎಫರ್ಟ್ ಅಂಡ್ ವಿಷನ್, ಸಮನ್ವಿತ ಮಹಿಳಾ ಅಧ್ಯಯನ ವಿಭಾಗದ ಪತ್ರಿಕೆ, ಎನ್.ಎಂ.ಕೆ.ಆರ್.ವಿ. ಕಾಲೇಜು ಸಂ.೪, ಮಾರ್ಚ್, ೨೦೦೨

೨೮. ಅದೇ,

೨೯. ಗೃಹಿಣಿಯರ ದುಡಿಮೆಗೆ ಮನ್ನಣೆ ಮಹಿಳಾ ವಿಜಯ ಪತ್ರಿಕೆ ನವೆಂಬರ್ ೨೧, ೨೦೦

೩೦. ಮಹಿಳಾ ಸ್ವಾವಲಂಬನೆ ವರ್ಷವಾಗಿ ೨೦೦೧ ಮಹಿಳಾ ವಿಜಯ ಪತ್ರಿಕೆ, ಜನವರಿ ೯, ೨೦೦೧

೩೧. ವಿಜಯಲಕ್ಷ್ಮೀ ಮನಾಪುರ ಅಂತಃಶಕ್ತಿಯೇ ಸ್ತ್ರೀಶಕ್ತಿ, ಪ್ರಜಾವಾಣಿ ಸಾಪ್ತಾಹಿಕ ಪುರವಣಿ, ೭ನೇ ಜುಲೈ, ೨೦೦೨

೩೨. ಸುರಂಜನಾ ಗುಪಾಟ ಕ್ರೆಡಿಟ್ ಆಸ್ಎಟೂಲ್ ಫಾರ್ ವಿಮೆನ್ಸ್ ಎಂಪವರ್‌ಮೆಂಟ್.

ಉಪಸಂಹಾರ

ಉಪಸಂಹಾರ

ಶತಶತಮಾಗಳಿಂದಲೂ ಮಾನವ ಸಂಸ್ಕೃತಿಯನ್ನು ಮುಂದುವರೆಸುತ್ತ ಬಂದಿರುವ ಮಹಿಳೆಯರು ಗೌರವಾನ್ವಿತ ಜೀವನಕ್ಕಾಗಿ ಹಾತೊರೆಯುತ್ತಿದ್ದಾರೆ. ಅವರಿಗೆ ಮಹಿಳೆ ಹಾಗೂ ಪುರುಷ ಇಬ್ಬರೂ ಸರಿಸಮಾನ ವ್ಯಕ್ತಿಗಳೆಂದು ಪರಿಗಣಿಸಲಾದ ಜೀವನ ಬೇಕು. ಕುಟುಂಬ ಹಾಗೂ ಸಮಾಜಕ್ಕೆ ತಾನು ಅನಿವಾರ್ಯವೆಂದು ಭಾವಿಸುವಂಥ ನಿರಾತಂಕ ಜೀವನ ಪ್ರತಿಯೊಬ್ಬ ಮಹಿಳೆಗೂ ಬೇಕು. ಮಹಿಳೆಯರನ್ನೂ ಮನುಷ್ಯರೆಂದು ಭಾವಿಸಿದ್ದೇ ಆದರೆ ಅವರನ್ನು ಮನುಷ್ಯತ್ವದಿಂದಲೇ ಕಾಣಬೇಕು. ಅಷ್ಟೇ ಅಲ್ಲ ಮನುಷ್ಯರಿಗೆ ಕೊಡ ಮಾಡಿರುವ ಎಲ್ಲ ಅನುಕೂಲಗಳು, ಹಕ್ಕುಗಳು ಮಹಿಳೆಯರಿಗೆ ದೊರೆಯಲೇಬೇಕು. ಇಬ್ಬರೂ ಮಾನವ ಜೀವಿಗಳಾಗಿ ಮಹಿಳಾ ಹಾಗೂ ಪುರುಷ ಒಂದೇ ಸ್ವಭಾವ, ಸಂಘಜೀವನ, ಸಾಮಾಜಿಕತೆ, ವೈಚಾರಿಕತೆ, ಗೌರವ, ಸ್ವಾತಂತ್ರ್ಯ, ಸಮಾನತೆ, ಹಕ್ಕುಗಳು ಹಾಗೂ ಕರ್ತವ್ಯಗಳು, ಜವಾಬ್ದಾರಿಗಳನ್ನು ಹೊಂದಿದ್ದು ಸಮಾಜದಲ್ಲಿ ಪರಸ್ಪರ ಪೂರಕವಾಗಿ ಬದುಕುವ ಅವಕಾಶವನ್ನು ಪಡೆದಿದ್ದಾರೆ. ಹೀಗಾಗಿ, ಮೇಲು ಕೀಳು ಎಂಬುದು ಗಂಡು ಹೆಣ್ಣಿನ ನಡುವೆ ತಲೆಹಾಕಬಾರದಿದ್ದ ವಿಷಯವಾಗುತ್ತದೆ. ಆದ್ದರಿಂದಲೇ ಲಿಂಗಭೇದ, ತಾರತಮ್ಯ ಇವು ಮಾನವ ಸಂಸ್ಕೃತಿಗೇ ಮುಳುವಾಗಿರುವ ಸಮಸ್ಯೆಗಳೆಂದು ಅಧ್ಯಯನದ ಪ್ರಾರಂಭದಲ್ಲಿ ಸೂಚಿಸಲಾಗಿದೆ. ಇದೇ ನೆಲೆಯಲ್ಲಿ ಈ ಅಧ್ಯಯನವೂ ಮೊದಲಾಗಿದೆ. ಮಾನವತೆಗೆ ಮೊದಲ ಪ್ರಾಶಸ್ತ್ಯ ದೊರೆಯಬೇಕು. ಪುರುಷ ಪ್ರಾಧಾನ್ಯತೆ ಬೇರುಬಿಟ್ಟ ಅವಧಿಯಿಂದ ಗಂಡು ಹೆಣ್ಣಿನ ಸಮಾನ ಸ್ಥಾನಮಾನ, ಅಧಿಕಾರ ಹಾಗೂ ಹಕ್ಕುಗಳು ಜೀವನದ ಎಲ್ಲ ಭಾಗಗಳಲ್ಲಿಯೂ ಕಣ್ಮರೆಯಾಯಿತು. ಸಾಮಾಜಿಕ ಸಂರಚನೆ, ಮನೋಭಾವಗಳಲ್ಲಿ ಪರಿವರ್ತನೆ, ಶೋಷಿತೆ ಹಾಗೂ ಶೋಷಕ ಇವರಿಬ್ಬರಲ್ಲೂ ಜಾಗೃತಿ ಮಾಡಿ ಹೊಸ ಸಮಾಜ ವ್ಯವಸ್ಥೆ ನಿರ್ಮಾಣವಾದೀತೆಂದು ರಮ್ಯ ಕನಸುಗಳನ್ನು(Romantic Dreams) ಹೆಣೆಯುವ ಹಾಗೂ ನಿರೀಕ್ಷೆಯಿಂದಲೇ ಕೈಗೆಟಕುವ ಅವಕಾಶವನ್ನು ಕಳೆದುಕೊಳ್ಳುವ ಅಥವಾ ಅದನ್ನು ವಂಚಿಸುವ ಹುಸಿತುಂಬಿದ ಊಹೆಗಳು ಇನ್ನೂ ಪ್ರವರ್ಧಮಾನವಾಗಿಯೇ ಸಾಗಿವೆ. ಆದರೆ ಕಲ್ಪನೆ, ಊಹೆ, ಭ್ರಮೆ, ಭರವಸೆ ಇವುಗಳೆಲ್ಲವೂ ಮಹಿಳೆಯರ ವಾಸ್ತವ ಜೀವನಕ್ಕೆ ಯಾವ ಕೈಮರವನ್ನೂ ತೋರಿಸಲಾರವು ಎಂಬುದು ಸತ್ಯ.

ಡಾ.ಎಚ್.ಎಸ್.ಶ್ರೀಮತಿಯವರು 'ಚಹರೆ' ಕೃತಿಯಲ್ಲಿ ಹೆಣ್ಣಿನ ಸಂವೇದನೆ ಬಗ್ಗೆ ವಿಶ್ಲೇಷಿಸುತ್ತ "ಮಹಿಳಾ ಜಗತ್ತು ಹೊಂದಿರುವ ಸಂವೇದನೆಗಳ ಸ್ವರೂಪ ಅತ್ಯಂತ ಸಂಕೀರ್ಣವಾದದ್ದು. ಈ

ಸಂವೇದನೆಗಳ ಅಭಿವ್ಯಕ್ತಿಗೆ ಸಮಾಜ ಅವಕಾಶಕೊಟ್ಟಿದ್ದೂ ಇಲ್ಲ. ಆರ್ಥಿಕ ಹಾಗೂ ರಾಜಕೀಯ ರಂಗಗಳಲ್ಲಿ ದೊರಕುವ ಸ್ಥಾನಮಾನ ಬಹುಮಟ್ಟಿಗೆ ಉಳಿದ ರಂಗಗಳಲ್ಲಿ ದೊರಯಬಹುದಾದ ಸ್ಥಾನ ಮಾನಗಳ ಸ್ವರೂಪವನ್ನು ನಿರ್ದೇಶಿಸುತ್ತದೆ'' ಎನ್ನುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ದೇಶವು ೨೧ನೇ ಶತಮಾನದಲ್ಲಿ ಮುನ್ನುಗ್ಗಿ ವಿಶ್ವದಾದ್ಯಂತ ಎಲ್ಲ ರಂಗಗಳಲ್ಲೂ ದಾಪುಗಾಲಿಡಲು ಸನ್ನದ್ಧವಾಗ ಬೇಕೆಂದು ಘೋಷಿಸಲಾಗುತ್ತಿದೆ. ಆದರೆ ಮಹಿಳೆಯರ ಸ್ಥಿತಿಗತಿಯ ದೃಷ್ಟಿಯಿಂದ ಅವಲೋಕಿಸಿದಾಗ ಭವಿಷ್ಯದಲ್ಲಿ ಆಶಾಕಿರಣದ ಜೊತೆಗೆ ಭೀತಿಯ ಛಾಯೆಯೂ ಇರುವುದನ್ನು ಊಹಿಸಿಕೊಳ್ಳಬಹುದು. ಹೊಸ ಶತಮಾನವು ಮಹಿಳೆಯರ ಪಾಲಿಗೆ ಪುರುಷರೊಂದಿಗೆ ಸಮಾನತೆ ಹಾಗೂ ಶಾಂತಿಯನ್ನು ನೆಲೆಗೊಳಿಸಬಹುದೆಂಬ ಆಶಾಭಾವನೆಯಿದ್ದರೆ, ಪ್ರಸ್ತುತ ಶತಮಾನದ ಆರಂಭದಲ್ಲಿಯೇ ಮಹಿಳೆಯರು ಎದುರಿಸುತ್ತಿರುವ ಯುದ್ಧ ಭೀತಿ, ನೂರೆಂಟು ಸಮಸ್ಯೆಗಳಿಂದಾಗಿ ಇಡೀ ಮಾನವಕುಲಕ್ಕೆ ಎಂಥ ವಿಪತ್ತು ಕಾದಿದೆಯೋ ಎಂಬ ಅವ್ಯಕ್ತ ಭೀತಿಯೂ ಕಾಡುತ್ತದೆ. ಏಕೆಂದರೆ ಭವಿಷ್ಯವು ವರ್ತಮಾನದ ಪರಿಣಾಮವಾಗಿದ್ದರೆ ವರ್ತಮಾನವು ಭೂತಕಾಲದ ಫಲಿತಾಂಶವಾಗಿರುತ್ತದೆ. ಇದನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳಬೇಕೆಂದರೆ, ನಮ್ಮ ಹಿಂದಿನ ಹಾಗೂ ಇಂದಿನ ಪರಿಸ್ಥಿತಿಗಳನ್ನು ನಾವು ಅರ್ಥೈಸಿಕೊಂಡಿರುವುದರ ಆಧಾರದ ಮೇಲೆ ಮಾತ್ರವೇ ಮುಂದಿನ ಭವಿಷ್ಯವನ್ನು ರೂಪುಗೊಳ್ಳಿಸಲು ಸಾಧ್ಯ. ಸುಮಾರು ಐದುಸಾವಿರ ವರ್ಷಗಳ ಮಾನವೇತಿಹಾಸದಲ್ಲಿ ಮಹಿಳೆಯರ ಬಗ್ಗೆ ನಮಗೆ ತಿಳಿದುಬರುವ ಸಂಗತಿಗಳೆಂದರೆ, ದೇವದಾಸಿಯರು, ಬಾಲ್ಯವಿವಾಹ, ಸತಿಪದ್ಧತಿ, ಬಾಲವಿಧವೆಯರು, ಹೆಣ್ಣುಮಕ್ಕಳ ದುಸ್ಥಿತಿ ಇವೇ ಮುಂತಾದವು. ಈ ಅಂಶಗಳನ್ನು ಕೂಡ ಸಮಾಜ ಸುಧಾರಕರಾಗಿದ್ದ ಪುರುಷರು ಹಾಗೂ ಮೆಕಾಲೆ, ವಿಲಿಯಂ ಬೆಂಟಿಂಕ್, ಮಾರ್ಕ್ಸ್ ಫಲ್ಲರ್‌ರಂತಹ ಪಾಶ್ಚಾತ್ಯ ಸುಧಾರಕರು ಹೊರಗೆಡವಿದ್ದರು. ಕಳೆದ ಶತಮಾನದ ಕೊನೆಯ ಭಾಗದಲ್ಲಿ ಆಂಗ್ಲಶಿಕ್ಷಣ ಪಡೆದ, ಮೇಲ್ವರ್ಗ, ಮೇಲ್ಜಾತಿಯ ಹಾಗೂ ಸ್ವಾತಂತ್ರ್ಯ ಆಂದೋಲನದಲ್ಲಿ ರಾಜಕೀಯವಾಗಿ ಮೇಲ್ದರ್ಜೆಗೇರಿದ ಕುಟುಂಬಗಳಿಗೆ ಸೇರಿದ ಮಹಿಳೆಯರ ಬಗ್ಗೆ ಮಾತ್ರವೇ ಪ್ರಚಾರ, ಪ್ರಸಿದ್ಧಿ ಕೇಳಿಬರುತ್ತಿತ್ತು.

ಆದರೆ ಕೆಳವರ್ಗದ, ಬಡವರಾದ ಕೆಳಮಧ್ಯಮವರ್ಗದ ಮಹಿಳೆಯರು ಕೇವಲ ಹೊಲಗಳಲ್ಲಿ ಕೆಲಸ ಮಾಡುತ್ತ, ನೂಲುವ, ನೇಯುವ, ಇತರ ಗೃಹಕೃತ್ಯದ ಸಾಮಾನ್ಯ ಕೆಲಸಗಳನ್ನು ಮಾಡುವವರೆಂದು ಮಾತ್ರವೇ ಗುರುತಿಸಲಾಗಿತ್ತು. ಮೇಲಿಂದ ಮೇಲೆ ಬಸುರಿ, ಹೆರಿಗೆ, ಆರೈಕೆಯಿಲ್ಲದೆ ಅಪೌಷ್ಟಿಕತೆಯಿಂದ ಮಹಿಳೆಯರ ಜೀವನ ದಾರುಬಾಗಿ ಮರಣಾಂತಿಕವಾಗುವಷ್ಟು ಅಪಾಯಕಾರಿಯಾಗಿತ್ತು. ಅಷ್ಟೇ ಅಲ್ಲ ಪ್ರತಿಯೊಂದು ಗ್ರಾಮ, ಜಾತಿ ವರ್ಗಗಳಿಗೂ ಅವರದೇ ಆದ ರೀತಿನೀತಿ ಕಟ್ಟುಪಾಡುಗಳಿಂದ ಹಿಂದೂ ಮಹಿಳೆಯರು ಇಂಥ ಎಲ್ಲ ಆದರ್ಶ ಮಾದರಿಗಳ ಪಾಲನೆಯಲ್ಲಿ ಶೂನ್ಯವ್ಯಕ್ತಿತ್ವದವರಾಗಿದ್ದರು.

ಸ್ವಾತಂತ್ರ್ಯ ಹೋರಾಟದ ಚಳವಳಿಯಿಂದಾಗಿ ಈ ಎಲ್ಲ ಮಹಿಳೆಯರಿಗೆ ತಮ್ಮ ದೈನಂದಿನ ಜಂಜಾಟದಿಂದ ಕೊಂಚ ಬಿಡುವು, ಹೊಸ ದೃಷ್ಟಿಕೋನ, ಗುರಿ, ಉದ್ದೇಶ ದೊರಕಿತೆನ್ನಬಹುದು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಿಶೇಷವಾಗಿ ಪ್ರಸ್ತುತ ಭಾರತದಲ್ಲಿ ಭಾರತೀಯ ಮಹಿಳೆಯರು ಹಲವಾರು ಕ್ಷೇತ್ರಗಳಲ್ಲಿ ವಿಕ್ರಮಗಳನ್ನು ಸಾಧಿಸಿದ್ದಾರೆ. ಇಂದು ಮಹಿಳೆಯರು ಇಂಜನಿಯರಿಂಗ್, ವೈದ್ಯಕೀಯ, ಅಣುವಿಜ್ಞಾನ, ಕಂಪ್ಯೂಟರ್, ಆಡಳಿತ, ಮ್ಯಾನೇಜ್‌ಮೆಂಟ್ ಕಲೆ, ಮಾನವಿಕ ವಿಜ್ಞಾನ, ಅಂತರೀಕ್ಷ ವಿಜ್ಞಾನ ಹೀಗೆ ಎಲ್ಲ ಆಧುನಿಕ, ಆನ್ವಯಿಕ ವೈಜ್ಞಾನಿಕ ಅಭಿವೃದ್ಧಿ ಅಧ್ಯಯನಗಳಲ್ಲಿ ಪುರುಷರಿಗೆ ಸಾಟಿಯಾಗಿ ಅಥವಾ ಅವರನ್ನು ಹಿಂದೊತ್ತುವಷ್ಟು ಮುಂದುವರಿದಿದ್ದು, ದೇಶ ವಿದೇಶಗಳಲ್ಲಿ ನೆಲೆಸಿ ಕಾರ್ಯಸಾಧಿಸುತ್ತಿದ್ದಾರೆ. ಆದರೆ ಈ ಎಲ್ಲ ಮಹಿಳಾ ಸಾಧನೆಗಳ ಬಗ್ಗೆ ನಾವು ಹೆಮ್ಮೆ ಪಟ್ಟುಕೊಳ್ಳುವುದರ ಜೊತೆಗೆ ನೋವಿನ ಎಳೆಗಳನ್ನೂ ಮರೆಯುವಂತಿಲ್ಲ. ಏಕೆಂದರೆ ಭಾರತದ ೪೦೦೦ ಮಿಲಿಯನ್‌ಗಿಂತಲೂ ಹೆಚ್ಚಿನ ಮಹಿಳಾ ಜನಸಂಖ್ಯೆಯ ಪೈಕಿ ಶೇ.೭೫ರಷ್ಟು ಜನ ಮಹಿಳೆಯರು ಇನ್ನೂ ಅನಕ್ಷರಸ್ಥರಾಗಿದ್ದರೆಂಬುದು ತಲೆತಗ್ಗಿಸುವಂಥ ಸಂಗತಿಯಾಗಿದೆ. ಇವರಲ್ಲಿ ಹೆಚ್ಚಿನಮಂದಿ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರಾಗಿ, ಸಾಗುವಳಿದಾರರಾಗಿ, ಗ್ರಾಮೀಣ ಕುಶಲ ಕರ್ಮಿಗಳಾಗಿ ಗುರುತಿರದ ಜೀವನ ಸಾಗಿಸುತ್ತಿದ್ದಾರೆ. ಇವರೆಲ್ಲ ಇನ್ನೂ ಹಳೆಯ ಕಂದಾಚಾರದ ಎಲ್ಲ ಬಗೆಯ ಒತ್ತಡ, ತುಳಿತ, ದಮನಕ್ಕೆ ಒಳಾಗಿದ್ದಾರೆ. ಭಾರತವನ್ನು ಪ್ರತಿನಿಧಿಸುವ ಭಾಷಣ, ಗೋಷ್ಠಿಗಳಲ್ಲಿ, ಸಮಾವೇಶಗಳಲ್ಲಿ ಇವರನ್ನು ಮಾತ್ರವೇ ವೈಭವೀಕರಿಸಲಾಗುತ್ತಿದೆ. ರಾಷ್ಟ್ರೀಯ ಅಭಿವೃದ್ಧಿಯ ಉನ್ನತ ಧ್ಯೇಯದಲ್ಲಿ ಮಹಿಳೆಯರು ಈಗ ಎಲ್ಲಿ, ಯಾವ ಸ್ಥಾನ ಪಡೆಯಬಹುದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕಾನೂನು, ಸಾಂಸ್ಕೃತಿಕ, ಔದ್ಯಮಿಕ ಹಾಗೂ ರಾಜಕೀಯರಂಗಗಳಲ್ಲಿ ಇಂದು ಭಾರತೀಯ ಮಹಿಳೆಯ ಪಾತ್ರ ಹಾಗೂ ಸ್ಥಾನಮಾನ ಏನು? ನಮ್ಮ ಮಹಿಳೆಯರು ಸಮಾನ ಅಂತಸ್ತು ಮತ್ತು ಸಮಾನಾವಕಾಶಗಳನ್ನು ಪಡೆದುಕೊಳ್ಳುವಲ್ಲಿ ಪ್ರಗತಿ ಸಾಧಿಸಿದ್ದಾರೆಯೆ? ಅವರ ಪುರುಷ ಸಂಗಾತಿಗಳ ಮನೋಭಾವ ಹೇಗಿದೆ? ಅವರು ಅಸಹಾಯಕರಾಗಿ ತಟಸ್ಥರಾಗುವರೆ? ಅಥವಾ ಅಸೂಯೆ ಹಾಗೂ ಅಸಮಾಧಾನದಿಂದ ಆರ್ಥಿಕ ಸಮರದಲ್ಲಿ ಮಹಿಳೆಯರು ಅನಗತ್ಯ ಸ್ಪರ್ಧಿಗಳಾಗಿರುವರೆಂದು ಕಿಡಿಕಾರುವರೆ? ಅಥವಾ ಸಹಕಾರ ಮನೋಧರ್ಮದಿಂದ ನೆರವಿನ, ಪ್ರೋತ್ಸಾಹದ ಹಸ್ತ ನೀಡುತ್ತಿರುವರೆ? ಯೋಜಿತ ಬದಲಾವಣೆಗಳನ್ನು ಕುರಿತ ಹೊಸ ಆಲೋಚನೆಗಳೊಂದಿಗೆ ಸಕಾಲದಲ್ಲಿ ಹಳೆಯ ಅಭಿಪ್ರಾಯಗಳನ್ನು ಅಳಿಸಿಹಾಕಿ ಹೊಸ ಮೌಲ್ಯ ಹಾಗೂ ಕ್ರಮಗಳಿಗೆ ಎಡೆಗೊಡಲು ಸಾಧ್ಯವಾಗುವುದೇ ಅಥವಾ ಧ್ಯೇಯಗಳೆಲ್ಲವೂ ಕೇವಲ ಕಾಗದದ ಮೇಲಷ್ಟೇ ಉಳಿದುಬಿಡಬಹುದೆ - ಹೀಗೆ ಹಲವು ಪ್ರಶ್ನೆಗಳ ಪಟ್ಟಿಯೂ ಬೆಳೆಯುತ್ತ ಹೋಗುತ್ತವೆ.

ಭಾರತೀಯ ಮಹಿಳೆಯರ ಬಗ್ಗೆ ಕಲ್ಪಿತ ಮಾದರಿ ಪಾತ್ರಗಳು(Role models) ಎಂಥದೊಂದು ಸಾಮಾಜಿಕ ಹಂದರವನ್ನು ನಿರ್ಮಿಸಿವೆ ಎಂದರೆ ಈಗ ಅವುಗಳೇ ಮಹಿಳೆಯರ ಜೀವನದ ತಳಹದಿ(ಅಡಿಪಾಯ) ಎಂಬಂತೆ ನೆಲೆಯೂರಿವೆ. ಅದಕ್ಕನುಸಾರವಾಗಿಯೇ ಪುರುಷ ಸಂತತಿಯನ್ನು ಮಾತ್ರ ವೃದ್ಧಿಪಡಿಸಲಾಗತ್ತಿದೆ. ಮಹಿಳೆಯರನ್ನು ಬೇಕಾದಂತೆ ಹೊಸಕಿ ಬದಿಗೆ ತಳ್ಳಿ ಪುರುಷರ ಹಾದಿಯನ್ನು ಸುಗಮವಾಗಿಸುವ ತಂತ್ರ ಅವ್ಯಾಹತವಾಗಿ ನಡೆದಿದೆ. ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆ, ಸಾಂಸ್ಕೃತಿಕ ಪ್ರವೃತ್ತಿ ಹಾಗೂ ಮೌಲ್ಯ ನಿರ್ಧರಣೆಗಳು ಭಾರತೀಯ ಮಹಿಳೆಯರನ್ನು ನಿರ್ಧಾರ ತೆಗೆದುಕೊಳ್ಳುವುದು, ಕರ್ತವ್ಯ ಹಾಗೂ ಜವಾಬ್ದಾರಿ, ಹಾಗೂ ಅಧಿಕಾರದಲ್ಲಿ ಪಾಲುಪಡೆಯುವ ವಿಷಯಗಳಿಗೆ ಸಂಬಂಧಪಟ್ಟಂತೆ ಇನ್ನೂ ಪ್ರತಿಕೂಲ ಪರಿಸ್ಥಿತಿಯಲ್ಲೇ ಮುಂದುವರಿಯುವಂತೆ ಮಾಡಿವೆ. ಮಹಿಳೆಯರ ಸಾಮಾಜಿಕ ಸ್ಥಾನಮಾನವಂತೂ ಹಲವು ಬಗೆಯ ಸಾಂಸ್ಥಿಕ ಸಂಕೀರ್ಣತೆ, ಹಾಗೂ ಮಿಥ್ಯೆಗಳಿಂದ ಕೂಡಿದೆ. ಮಹಿಳಾ ವಿಮೋಚನೆಯನ್ನು ಯಾವುದೇ ಪಕ್ಷ, ಸರ್ಕಾರ ಅಥವಾ ರಾಜಕೀಯ ಚಳವಳಿಯ ಮೂಲಕ ಬೆಳ್ಳಿ ತಟ್ಟೆಯಲ್ಲಿಟ್ಟು ಯಾರು ಕೊಡುವುದಿಲ್ಲ. ಆಮಿಷ ತೋರಿಸಿ ಇನ್ನೂ ಪ್ರಪಾತಕ್ಕೆ ತಳ್ಳುವ ಹುನ್ನಾರವಿರಬಹುದಷ್ಟೆ. ಸಮಾನತೆಗಾಗಿ ಹೋರಾಡಬೇಕೆಂದಿದ್ದರೆ, ಮಹಿಳೆಯರು ಅದನ್ನು ಸಾಧಿಸಲು ತಮ್ಮ ಪಾಲ್ಗೊಳ್ಳುವಿಕೆಗಾಗಿ ಮುನ್ನುಗ್ಗಬೇಕು ಹಾಗೂ ಪ್ರತಿಮಹಿಳೆ ತನ್ನ ಸ್ವಂತ ಏಳಿಗೆಗಾಗಿ, ತನ್ನಂಥ ಅಸಂಖ್ಯಾತ ಶೋಷಿತ ಮಹಿಳೆಯರ ಅಭಿವೃದ್ಧಿಯ ಅಗತ್ಯತೆಗಾಗಿ ಸ್ಪಂದಿಸಬೇಕು. ಪರಾವಲಂಬಿತನವನ್ನು ಕ್ರಮೇಣ ಕೊಡವಿಕೊಳ್ಳುತ್ತ ಸ್ವಾವಲಂಬನೆಯಿಂದ ತಲೆಯೆತ್ತಬೇಕು. ಮಹಿಳೆಯರ ಸ್ಥಾನಮಾನದಲ್ಲಿ ಬದಲಾವಣೆಯನ್ನು ಒಳಗೊಂಡಿರದ ಯಾವುದೇ ಸಾಮಾಜಿಕ ಪರಿವರ್ತನೆಯ ಆಂದೋಲನವೂ ನಿರರ್ಥಕವಾಗುತ್ತದೆ ಹಾಗೂ ಅಂತಿವಾಗಿ ವಿಫಲವಾಗುತ್ತದೆ. ಆದ್ದರಿಂದ ರಾಷ್ಟ್ರೀಯ ಅಭಿವೃದ್ಧಿಯ ಗುರಿಸಾಧಿಸಲು ಮಾಡುವ ಪ್ರಯತ್ನಗಳಲ್ಲಿ ಮಹಿಳೆಯರ ಸಮಗ್ರ ಪಾಲ್ಗೊಳ್ಳುವಿಕೆ(Total participalion) ಅತ್ಯಗತ್ಯ.

ಇಂದಿನ ಭಾರತೀಯ ಸಮಾಜದಲ್ಲಿ ಪರಿವರ್ತನೆಯ ಹೊಸ ಆಯಾಮಗಳು ಮಹಿಳೆಯರಿಗೂ ಎಟುಕುತ್ತಿವೆ. ನಮ್ಮ ಮಹಿಳೆಯರಲ್ಲಿ ಸ್ಥಿರಮನಸ್ಸು, ಪ್ರಯತ್ನ ಶೀಲತೆ, ಕಾರ್ಯಸಾಧನೆಯ ಸಾಮರ್ಥ್ಯ, ಹಾಗೂ ನಿಸ್ವಾರ್ಥ ಸೇವಾ ಮನೋಭಾವ ಇವೆಲ್ಲವೂ ಇವೆ. ಆದರೆ ಅವು ಬೆಳಕಿಗೆ ಬರುವಂಥ ಅವಕಾಶಗಳನ್ನು ಅವರೇ ಕಲ್ಪಿಸಿಕೊಳ್ಳಬೇಕಾದ ಪರಿಸ್ಥಿತಿಯೂ ಉಂಟಾಗಿದೆ. ಮಹಿಳೆಯರ ಈ ಗುಣಗಳಿಗೆ ಜೊತೆಯಾಗಿ ಶಿಕ್ಷಣ, ತರಬೇತಿ, ಪ್ರೋತ್ಸಾಹ, ದೊರೆಯಬೇಕು. ಅವರಿಗೆ ಸಾಮಾಜಿಕ ಭದ್ರತೆಯಿರಬೇಕಾದರೆ ಸ್ವಾವಲಂಬನೆ ಅತ್ಯುತ್ತಮ ಮಾರ್ಗವಾಗಿದ್ದು ಆರ್ಥಿಕ ಸ್ವಾತಂತ್ರ್ಯ, ಮಹಿಳೆಯರ ಹಂಗಿನ ಜೀವನ, ದಾಸ್ಯ, ಕೀಳರಿಮೆ ಹಾಗೂ ಅಪಮಾನದಿಂದ ಆತ್ಮಹತ್ಯೆಯಂಥ ಪ್ರಯತ್ನಕ್ಕೆ ಕೈಹಾಕುವ ಅಸಹಾಯಕತೆಯನ್ನು ನಿವಾರಿಸುತ್ತದೆ. ಮಹಿಳೆಯರು ಗೊಡ್ಡು ಸಂಪ್ರದಾಯ, ಮೂಢನಂಬಿಕೆಗಳನ್ನು ಧಿಕ್ಕರಿಸುವ ಹಾಗೂ

ಹೊಸಬಗೆಯ ದಿಟ್ಟತನದಿಂದ ಪ್ರಜ್ಞಾವಂತಿಕೆ, ಹೊಸದನ್ನು ಸೃಜಿಸುವ ಕ್ರಿಯಾಶೀಲತೆ, ಧ್ಯೇಯೋದ್ದೇಶಗಳು ಬೆಟ್ಟದಷ್ಟಿದ್ದು ಸಾಧನ ಸಾಮಗ್ರಿಗಳು ಅತಿ ಕಡಿಮೆಯಿದ್ದರೂ ನಮ್ಮ ಗುರಿಯನ್ನು ಮುಟ್ಟಲು ಶತ ಪ್ರಯತ್ನ ನಡೆಸುವ ನಿರ್ಧಾರವನ್ನು ಹೊಂದಿರಬೇಕು. ಇದಕ್ಕಾಗಿ ವ್ಯಕ್ತಿಗತವಾಗಿ ಹಾಗೂ ಸಾಮೂಹಿಕವಾಗಿ ಶಿಸ್ತು, ತಂಡಸ್ಫೂರ್ತಿ, ಸಹಕಾರ ಹಾಗೂ ಸಮನ್ವಯ ಮನೋಭಾವ ಬೆಳೆಸಿಕೊಳ್ಳುವುದು ಅಗತ್ಯ. ಸಲ್ಲದ ಮಡಿವಂತಿಕೆ, ಹಿಂಜರಿಕೆ, ಭೀರುತ್ವಗಳನ್ನು ಕಳೆಯಲು ದಿಟ್ಟತನದ ಸ್ವಂತಿಕೆಯನ್ನು ಪ್ರದರ್ಶಿಸಬೇಕು. ಹೊರ ಪ್ರಪಂಚದ ಅಸಂಖ್ಯ ಅಡ್ಡಿ ಆತಂಕ, ಕಾಲೆಳೆಯುವ ಸಂಚುಗಳಿಗೆ, ಧೂರ್ತತೆಗೆ ಉತ್ತರ ನೀಡುವ, ಸವಾಲೆಸೆಯುವ ವ್ಯಕ್ತಿತ್ವ ನಿರ್ಮಾಣವಾಗಬೇಕು. ಇದಕ್ಕೆ ವೈಯಕ್ತಿಕವಾಗಿ ಉದ್ಯಮಶೀಲತೆ, ಹೊಣೆಗಾರಿಕೆ, ಸತತ ಪ್ರಯತ್ನದ ಅವಶ್ಯಕತೆಯಿದ್ದರೆ, ಸಾಮೂಹಿಕವಾಗಿ ಸಮಾಜವ್ಯವಸ್ಥೆಗೆ ಸಡ್ಡು ಹೊಡೆಯುವ ಮಹಿಳಾ ಸಂಘಟನೆ ಕಾರ್ಯ ನಡೆಸಬೇಕು. ಆಗ ಕೇವಲ ಕುಟುಂಬವಷ್ಟೇ ಅಲ್ಲ ಹೊಸ್ತಿಲಾಚೆ, ಪ್ರಪಂಚದಾದ್ಯಂತ ಮಹಿಳೆಯರ ಅನಿವಾರ್ಯತೆ ಅಭಿವೃದ್ಧಿಪರ ಉದ್ಯಮ ಕ್ಷೇತ್ರದಲ್ಲಿ ಸಾಬೀತಾಗುತ್ತದೆ. ಈ ನಿಟ್ಟಿನಲ್ಲಿ ತಮ್ಮ ಧ್ಯೇಯ ಸಾಧನೆಗೆ ಮುಖಂಡತ್ವ ಗುಣ ಬೆಳೆಸಿಕೊಳ್ಳುವುದು ಅತಿಮಹತ್ವದ ಅಂಶ. ಕ್ರಮಿಸಬೇಕಾದ ಕಠಿಣ ಮಾರ್ಗ ಹಾಗೂ ಅಗತ್ಯವಾಹಕಗಳನ್ನು ಗುರುತಿಸಬೇಕು. ಎದುರಾಗುವ ಎಡರು ತೊಡರುಗಳನ್ನು ಅಲ್ಲಿಗಲ್ಲಿಗೇ ನಿವಾರಿಸಿಕೊಂಡು ಸಬಲತೆಯನ್ನು ಹೊಂದಿ, ಸಮಾಜದಲ್ಲಿ ಗೌರವಯುತ ಜೀವನ ನಡೆಸಲು ಪ್ರಯತ್ನಶೀಲರಾಗಬೇಕು. ತನ್ನೆಲ್ಲ ಲಾಭಗಳಿಗೂ ಮಹಿಳೆಯರನ್ನು ಬಳಸಿಕೊಳ್ಳುತ್ತ, ಅವಳಿಗೆ ಬೀಡಾಡಿ ಗತಿಯುಂಟುಮಾಡುವ ಪುರುಷ ಪ್ರಾಧಾನ್ಯ ಸಂಸ್ಕೃತಿಗೆ ಅಂತಿಮ ಗಡುವು ನೀಡಿ ಸಮಾಜದಲ್ಲಿ ಸರ್ವಸಮಾನತೆಯ ವಾತಾವರಣ ಮೂಡಿಸಲು ಮಹಿಳೆಗೆ ಮಾತ್ರವೇ ಸಾಧ್ಯ.

ಈ ವಿಚಾರಧಾರೆಯ ಹಿನ್ನೆಲೆಯೊಂದಿಗೆ, ಈ ಮಹಾಪ್ರಬಂಧದಲ್ಲಿ ಮಹಿಳೆಯರ ಏಳಿಗೆಗೆ ಆರ್ಥಿಕ ಸ್ವಾವಲಂಬನೆಯಿಂದ ಮೂಲಭೂತ ಪ್ರೇರಣೆ ದೊರೆಯುತ್ತದೆ, ಮಹಿಳೆಯರ ವ್ಯಕ್ತಿತ್ವ ವಿಕಾಸ(Personality Development) ಸ್ವಂತಿಕೆ, ಉದ್ಯಮ ಶೀಲತೆಗೆ ಸಹಕಾರ ಕ್ಷೇತ್ರದಂತಹ ದೈತ್ಯ ಶಕ್ತಿಯ ಬೃಹತ್ ಆರ್ಥಿಕ ಕ್ಷೇತ್ರವು ಮಹಿಳೆಯರ ಸ್ಥಾನಮಾನ, ಅಸ್ತಿತ್ವ ಸ್ಥಾಪನೆ, ಸಬಲತೆಗೆ ಮಹತ್ತರ ಬೆಂಬಲ ನೀಡುತ್ತದೆ. ಎಂಬ ಮುಖ್ಯಾಂಶವನ್ನು ಗುರುತಿಸಲಾಗಿದೆ. ಆದ್ದರಿಂದ ಮಹಿಳೆಯರು ತಮ್ಮ ಸ್ಥಾನಮಾನಗಳನ್ನು ಪುರುಷರೊಂದಿಗೆ ಸಮಾನವಾಗಿ ಹಂಚಿಕೊಂಡಿದ್ದ ಅವಧಿಯಿಂದ ಅಂತಸ್ತು ಹಾಗೂ ಅಸ್ತಿತ್ವವನ್ನೇ ಕಳೆದುಕೊಂಡದ್ದು, ಮರಳಿ ಅದನ್ನು ಪಡೆಯಲು ಘಟಿಸಬೇಕಾದ ಮಹತ್ವದ ಸಾಮಾಜಿಕ ಪರಿವರ್ತನೆಯ ವರೆಗೆ ಇವೆರಡು ತುದಿಗಳ ನಡುವಣ ವಿವಿಧ ಹಂತಗಳು ಅಥವಾ ಕೊಂಡಿಗಳನ್ನು ಈ ಮುಂದಿನಂತೆ ಪರಾಮರ್ಶಿಸಲಾಗಿದೆ.

ಮೊದಲನೆಯ ಅಧ್ಯಾಯ 'ಭಾರತೀಯ ಸಮಾಜದಲ್ಲಿ ಮಹಿಳೆಯ ಸ್ಥಾನಮಾನ ಹಾಗೂ ಅವಳ ಪಾತ್ರದ ಸಮೀಕ್ಷೆ ನಡೆಸುತ್ತ ಮಹಿಳೆ ಪುರುಷಾವಲಂಬಿಯಾದ ಸನ್ನಿವೇಶಗಳನ್ನು ಗುರುತಿಸಲಾಗಿದೆ. ಈ ಅಧ್ಯಯನದಲ್ಲಿ, ಮುಖ್ಯವಾಗಿ ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನವನ್ನು ಒಂದು ಚೌಕಟ್ಟಿಗೆ ಅಥವಾ ಪರಿಧಿಗೆ ಮಾತ್ರವೇ ಸೀಮಿತಗೊಳಿಸಿದುದಕ್ಕೆ ಕೇವಲ ಧರ್ಮವೊಂದೇ ಕಾರಣವಾಯಿತೆಂದು ಹೇಳಲಾಗುವುದಿಲ್ಲ. ಏಕೆಂದರೆ ಭಾರತೀಯ ಧಾರ್ಮಿಕ ಕಟ್ಟಳೆಗಳು, ಸಾಂಪ್ರದಾಯಿಕ ಆಚಾರ ವಿಚಾರಗಳು ಇಡೀ ವಿಶ್ವಕ್ಕೆ ಮಾದರಿ ಅಥವಾ ಗುರುತ್ವದ ಸ್ಥಾನದಲ್ಲಿರುವ ಭಾರತೀಯ ಆಧ್ಯಾತ್ಮವನ್ನು(ದರ್ಶನಶಾಸ್ತ್ರ) ಒಳಗೊಂಡಿತ್ತು. ಆದರೆ ಮಾನವನ ಮೂಲಭೂತ ಹಕ್ಕುಗಳಾದ ಸ್ವಾತಂತ್ರ್ಯ, ಸಮಾನತೆ ಹಾಗೂ ಜೀವನಾವಕಾಶ ಹಾಗೂ ಭ್ರಾತೃತ್ವವನ್ನೂ ಕೂಡ ಮಹಿಳೆಗೆ ದಕ್ಕದ ಹಕ್ಕುಗಳಾಗಿ ಮಾಡಲಾದುದರ ಬಗ್ಗೆ ಜಿಗುಪ್ಸೆ ಮೂಡುತ್ತದೆ. ವೇದಗಳ ಕಾಲದಲ್ಲಿ ಮಹಿಳೆಯರಿಗೆ ಶಿಕ್ಷಣ, ಪತಿ ಆಯ್ಕೆ, ವೇದ ವಿಚಾರಗೋಷ್ಠಿಗಳಲ್ಲಿ ಸ್ವತಂತ್ರ ವಿಚಾರ ಮಂಡನೆಗೆ ಅವಕಾಶ, ಆರ್ಥಿಕ ಎಂದು ಹೇಳುವುದಾದರೆ ಆಸ್ತಿಯಲ್ಲಿ ಕೆಲಮಟ್ಟಿಗಿನ ಹಕ್ಕು(೧/೩ಭಾಗ) ವಿಧವೆಯರಿಗೆ ಜೀವನಾಧಾರಕ್ಕೆ ಆಸ್ತಿ, ಹಾಗೂ ಅನೇಕ ರಕ್ಷಣೆಗಳಿದ್ದುದನ್ನು ಗುರುತಿಸಲಾಗಿದೆ. ನಂತರ ರಾಮಾಯಣ, ಮಹಾಭಾರತದಂಥ ಮಹಾಕಾವ್ಯಗಳು ಹಾಗು ಇತರ ಪುರಾಣಗಳ ಕಾಲದಲ್ಲಿ ಹಾಗೂ ಸ್ಮೃತಿಗಳ ರಚನೆಯಾದ ತರುವಾಯ ಮಹಿಳೆಯರು ಸಂರಕ್ಷಿಸಬೇಕಾದ 'ಜಡ ಅಥವಾ ಚರಸ್ವತ್ತು'ಗಳಂತೆ ಪುರುಷರ ಅಧೀನದಲ್ಲಿರುವ ಪರಿಸ್ಥಿತಿಯುಂಟಾಯಿತು. ಹೆಣ್ಣು ದೇವತೆಗಳನ್ನು ಪೂಜಿಸಿ ಆರಾಧಿಸಿ ಮುಕ್ತಿ ಪಡೆಯಲು ಹಾತೊರೆದ ಆದಿ ಶಂಕರಾಚಾರ್ಯರಾದಿಯಾಗಿ ಎಲ್ಲ ಋಷಿಗಳು, ದಾರ್ಶನಿಕರು ಸಾಮಾಜಿಕ ಜೀವನದಲ್ಲಿ ಮಾತ್ರ ಮಹಿಳೆಯರನ್ನು ಘೋರಶಿಕ್ಷೆಗೆ ಗುರಿ ಮಾಡಿದ್ದು ವಿಪರ್ಯಾಸ! ಮಧ್ಯಕಾಲೀನ ಯುಗದಲ್ಲಿ ಆಕ್ರಮಣಕಾರರ ದುರಾಡಳಿತ, ದುಷ್ಚಟಗಳಿಂದಾಗಿ ಮಹಿಳೆಯರ ಸ್ವರೂಪವೇ ವಿರೂಪಗೊಂಡು, ಸಹಗಮನ, ಬಾಲ್ಯವಿವಾಹ, ಪರದಾ, ಮುಸುಕು ಮೊದಲಾದ ಅನಿಷ್ಟ ಪದ್ಧತಿಗಳಿಗೆ ಬಲಿಪಶುಗಳಾಗಬೇಕಾಯಿತು. ವೇಶ್ಯಾಸಮಸ್ಯೆ, ದೇವದಾಸಿ, ವಿಧವೆ, ಅವಿವಾಹಿತ ತಾಯಿ, ಪರಿತ್ಯಕ್ತೆ, ಬಹುಪತ್ನಿತ್ವದಿಂದ ಶೋಷಿತೆ, ಅನಕ್ಷರಸ್ಥೆ ಹೀಗೆ ಮಹಿಳೆಯರ ಬಾಳು ನಿತ್ಯ ನರಕದ ಮನೆಯಾಗಿತ್ತು. ಎಂದರೆ ಸಾಮಾಜಿಕವಾಗಿ ತಲೆಯೆತ್ತದಂತೆ ಆಕೆ ದಾಸ್ಯ ಜೀವನಕ್ಕೆ ಒಗ್ಗಿಕೊಳ್ಳುವ ವಾತಾವರಣದಲ್ಲಿದ್ದಳು. ಆಕೆಗೆ ಶೈಕ್ಷಣಿಕ, ಆರ್ಥಿಕ, ರಾಜಕೀಯ, ಕಾನೂನು ಸಾಂಸ್ಕೃತಿಕ ಮುಂತಾದ ಯಾವೊಂದು ಸಾಮಾಜಿಕ ಬೆಂಬಲವೂ ಇರಲಿಲ್ಲ. ಒಟ್ಟಿನಲ್ಲಿ ಹೆಣ್ಣು ಮಗುವಿನ ಜನನವೇ ಕುಟುಂಬ, ಸಮಾಜ ಹಾಗೂ ವಂಶಕ್ಕೆ ಕಳಂಕ, ವಿನಾಶಕಾರಿ ಎಂಬ ಅಭಿಪ್ರಾಯ ಮೂಡಿತ್ತು. ಅದರ ಮುಂದುವರಿದ ಸ್ತ್ರೀ ಭ್ರೂಣದ ಹತ್ಯೆಯಂತಹ ಪೈಶಾಚಿಕ ಕೃತ್ಯಗಳು ಈಗಿನ ಅತ್ಯಾಧುನಿಕ, ವೈಜ್ಞಾನಿಕ ಯುಗದಲ್ಲೂ ಕಾಣುತ್ತಿರುವುದರಿಂದ ಮಹಿಳೆಯರು 'ಉಭಯಭ್ರಷ್ಟ' ಪರಿಸ್ಥಿತಿಯಲ್ಲೇ ಮುಂದುವರಿದಿದ್ದಾರೆನ್ನ

ಬಹುದು. ಆದಾಗ್ಯೂ, ಮಹಿಳೆಯರ ಸಂಕಷ್ಟಕ್ಕೆ ಮರುಗಿದ, ಸಹಾನುಭೂತಿ ತೋರಿದ ಮಹನೀಯರು, ಬ್ರಿಟಿಷ್ ಸರ್ಕಾರ, ಗಾಂಧೀಜಿ ಮುಂತಾದವರು ಮಹಿಳೆಯರ ಶಿಕ್ಷಣಕ್ಕೆ, ಕಾರ್ಯ ಕೌಶಲ್ಯಕ್ಕೆ ನೆರವಾದುದನ್ನು ಗುರುತಿಸಲಾಗಿದೆ. ಅಲ್ಲಿಂದ ಮುಂದೆ ಮಹಿಳೆಯರ ನಾಲ್ಕು ಗೋಡೆಗಳ ಒಳಗಿನ ಜೀವನಕ್ಕೆ ತಿರುವು ಬಂದು ಹೊಸ್ತಿಲಾಚೆಯ ಪ್ರಪಂಚಕ್ಕೆ ದಾರಿಯಾಯಿತು. ಆದಾಗ್ಯೂ, ವರದಕ್ಷಿಣೆ, ವಧೂದಹನ, ಅತ್ಯಾಚಾರ, ಕಿರುಕುಳ ಇವು ಇಂದಿಗೂ ಅವ್ಯಾಹತವಾಗಿ ನಡೆಯುತ್ತಲೇ ಇವೆ. ಸಂವಿಧಾನ, ಅನೇಕ ಶಾಸನಗಳು ಮುಂತಾದ ರಕ್ಷಕ ಕಾನೂನುಗಳಿದ್ದರೂ ಮಹಿಳೆಯರ ಬವಣೆ ತಪ್ಪಿಲ್ಲ. ಆದರೆ ಮರೆಯಲ್ಲಿ ನಡೆದು ಮುಚ್ಚಿಹೋಗುತ್ತಿದ್ದ ಕೃತ್ಯಗಳಲ್ಲಿ ಇಂದು ಕೆಲವಾದರೂ ವರದಿಯಾಗುತ್ತವೆ. ಕೆಲವೊಮ್ಮೆ ನ್ಯಾಯವೂ ದೊರೆಯುತ್ತದೆ. ಆದರೂ ಮಹಿಳೆಯರ ಮಾನಸಿಕ, ದೈಹಿಕ ಸ್ಥಿತಿಗತಿ, ಜೀವನ ನಿರ್ವಹಣೆಯ ದಾರಿ ಇವುಗಳು ನಿರಾತಂಕವಾಗಿವೆಯೆಂದು ಹೇಳಲಾಗದು. ಹಳೆಯ ಮೈಸೂರು ರಾಜ್ಯದಲ್ಲಿ ಕೂಡ ಮಹಿಳೆಯರ ಸ್ಥಿತಿ ತುಂಬಾ ಶೋಷನೀಯವಾಗಿದ್ದು, ಅಂದಿನ ಮಹಾರಾಜರು, ದಿವಾನರು ಇನ್ನಿತರ ಮಹನೀಯರು ಮತ್ತು ಮಹಿಳೆಯರು, ಮಹಿಳೆಯರ ಶಿಕ್ಷಣ, ಸಾಮಾಜಿಕ ಸ್ಥಾನಮಾನದಲ್ಲಿ ಸುಧಾರಣೆ ತರಲು ಪ್ರಯತ್ನಿಸಿದ್ದ ಬಗ್ಗೆ ದಾಖಲೆಗಳು ಲಭ್ಯವಿದೆ. ಹಿಂದೊಮ್ಮೆ ಗಾಂಧೀಜಿಯವರು ಸೂಚಿಸಿದಂತೆ, ಭಾರತೀಯ ಧರ್ಮಗ್ರಂಥಗಳನ್ನು ಪುರಾಣಗಳನ್ನು ಮರು-ಅಧ್ಯಯನ ಮಾಡಿ ಮತ್ತೊಮ್ಮೆ ಅವುಗಳನ್ನು ರಚಿಸುವ ಅವಶ್ಯಕತೆಯಿದೆ ಎನಿಸುತ್ತದೆ. ಏಕೆಂದರೆ ಪುರುಷ ನಿರ್ಮಿತ ಗ್ರಂಥಗಳು, ವಿಧಿ, ನಿಷೇಧಗಳು ಮಹಿಳೆಗೆ ಪೂರಕವಾಗಿರುವ ಬದಲಿಗೆ ಮಾರಕವಾಗಿವೆ. ಹೀಗಾಗಿ ಪುರುಷ ಅಥವಾ ಸ್ತ್ರೀಪ್ರಾಧಾನ್ಯ ದೃಷ್ಟಿಯಿಂದಲ್ಲದೆ ಕೇವಲ ಸಮಾಜದ ವ್ಯಕ್ತಿಗಳಾಗಿ, ಮನುಷ್ಯ ಜೀವನದ ಏಳಿಗೆಗೆ ಬೆಂಬಲವಾಗುವಂತಹ ಕೃತಿಗಳ ರಚನೆಯಾಗುವುದು ಅಗತ್ಯ. ಸಮಾಜದಲ್ಲಿ ಜಾತಿ, ಮತ, ಪಂಥ, ಧರ್ಮಗಳೆಂಬ ವೈರುಧ್ಯಗಳ ವಿಷಮತೆಯನ್ನು ಅಲ್ಲಗಳೆಯಲು ಪಂಪನ 'ಮಾನವ ಜಾತಿ ತನೊಂದೆವಲಂ' ಎಂಬ ಧ್ಯೇಯವಾಕ್ಯವಷ್ಟೇ ಬದುಕಿನ ತತ್ತ್ವವಾಗುವುದಕ್ಕೆ ಬದಲು ಮಹಿಳೆಯರು ತಾವು ಬಯಸಿದಂತೆ ಇರಲು ಬಿಟ್ಟರೆ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಅದಾಗಿಯೇ ಸೂಕ್ತತೆಯನ್ನು ಕಂಡುಕೊಳ್ಳಲು ಸಾಧ್ಯವಾದೀತು ಎಂಬುದೇ ಈ ಅಧ್ಯಾಯದಲ್ಲಿ ಗುರುತಿಸಿದ ಸಂಗತಿಗಳಾಗಿವೆ.

ಎರಡನೆಯ ಅಧ್ಯಾಯವಾದ ''ಸಾಮಾಜಿಕ-ಆರ್ಥಿಕ ಬದಲಾವಣೆಯ ವಾಹಕರು'' ಇದರಲ್ಲಿ ಮಹಿಳೆಯರ ಸತದೃಷ್ಟ ಬದುಕಿನಲ್ಲಿ ಆಶಾಕಿರಣ ಮೂಡಿಸಿದ ಅಂಶಗಳನ್ನು ಗುರುತಿಸಲಾಗಿದೆ. ಅವಿಭಕ್ತ ಕುಟುಂಬಗಳಲ್ಲಿ ಸ್ತ್ರೀ ಪುರುಷರು ಒಟ್ಟಿಗೆ ದುಡಿದು ಸಮುದಾಯವನ್ನು ಮುನ್ನಡೆಸುತ್ತಿದ್ದ ಪದ್ಧತಿ ನಿಂತುಹೋಗಿ ಮಹಿಳೆ ಪುರುಷಾವಲಂಬಿಯಾದಾಗ ಸಹಜವಾಗಿಯೇ ಆಕೆ ಸಂಖ್ಯೆಯಿಂದಲ್ಲದಿದ್ದರೂ ಗಳಿಕೆ, ಬೌದ್ಧಿಕತೆಯಲ್ಲಿ ಹಿಂದುಳಿದು ಅಲ್ಪಸಂಖ್ಯಾತ ಅಥವಾ ದುರ್ಬಲ ಗುಂಪಿಗೆ ಸೇರಿದ ವ್ಯಕ್ತಿಯಾದಳು. ಅಸಮಾನತೆಯ

ಮೂರು ಪ್ರಮುಖ ಆಯಾಮಗಳಾಗಿ ಆರ್ಥಿಕ ಪರಿಸ್ಥಿತಿ(ವರ್ಗ), ಸಾಮಾಜಿಕ ಅಂತಸ್ತು(ಸ್ಥಾನಮಾನ) ಹಾಗೂ ಅಧಿಕಾರ(ರಾಜಕೀಯ ಅಧಿಕಾರ)ಗಳನ್ನು ಸೂಚಿಸಲಾಗುತ್ತದೆ. ಇದರ ಜೊತೆಗೆ ಶಿಕ್ಷಣ ವಂಚನೆ, ಉದ್ಯೋಗ ನಿಷೇದ ಹಾಗೂ ವಿವೇಚನಾಧಿಕಾರಗಳನ್ನು ಕಸಿದುಕೊಂಡುದನ್ನು ನಾವು ಸೇರಿಸಬಹುದು. ಈ ಅಧ್ಯಾಯದಲ್ಲಿ ಮುಖ್ಯವಾದ ಕೆಲವು ಸಂಗತಿಗಳ ಬಗ್ಗೆ ಮರುಪರಿಶೀಲತೆ ಮಾಡುವಾಗ ಸುಧಾರಣಾ ವಾದಿಗಳ ಮಹಿಳಾ ಪರ ಕಾಳಜಿ, ವಿಧವಾ ಮರುವಿವಾಹ, ಬಾಲ್ಯವಿವಾಹ ನಿಷೇಧ ಶಿಕ್ಷಣ ವ್ಯವಸ್ಥೆಗಳ ಬಗ್ಗೆ ವಿವರಿಸಲಾಗಿದೆ. ಈ ಎಲ್ಲ ಸುಧಾರಕರು ಗಾಂಧೀಜಿಯವರನ್ನೂ ಒಳಗೊಂಡು, ಅಂದಿನ ಸಮಾಜದಲ್ಲಿ ಬೇರೂರಿದ್ದ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಿದ್ದರು. ಅದಕ್ಕಾಗಿಯೇ ಬ್ರಹ್ಮೋ ಸಮಾಜ, ಥಿಯಾಸಾಫಿಕಲ್ ಸೊಸೈಟಿ, ಹೋಂರೂಲ್ ಗಳಂಥ ಸಂಸ್ಥೆಗಳು ಆವಿರ್ಭವಿಸಿದವು. ಎಲ್ಲಕ್ಕಿಂತ ಹೆಚ್ಚಾಗಿ ಬ್ರಿಟಿಷ್ ಸರ್ಕಾರ ಮಹಿಳಾ ಶಿಕ್ಷಣ, ಹಾಗೂ ಉನ್ನತ ಶಿಕ್ಷಣದ ಬಗ್ಗೆ ಅತ್ಯಾಸಕ್ತಿತೋರಿಸಿ ಬಾಲಕಿಯರಿಗಾಗಿ ಶಾಲೆಗಳನ್ನು ಪ್ರಾರಂಭಿಸಿತು. ಮಿಷನರಿ ಶಾಲೆಗಳು ಶಿಕ್ಷಣದ ಜೊತೆಗೆ ಮತಪ್ರಚಾರವನ್ನು ಮಾಡುತ್ತಿದ್ದು, ಮತಾಂತರಕ್ಕೆ ಪ್ರೋತ್ಸಾಹ ನೀಡುತ್ತಿದ್ದ ಬಗ್ಗೆ ಸಾಕಷ್ಟು ದಾಖಲೆಗಳಿವೆ! ಹೀಗಾಗಿ ಮಹಿಳಾ ಸುಧಾರಕರನ್ನು ಹೊರತುಪಡಿಸಿ ಉಳಿದಂತೆ ಸುಧಾರಣಾವಾದಿಗಳಿಗಾಗಲಿ, ಸರ್ಕಾರಕ್ಕಾಗಲಿ ಮಹಿಳೆಯರನ್ನು ವಿದ್ಯಾವಂತರನ್ನಾಗಿಸುವಲ್ಲಿ ಅಘೋಷಿತ ಉದ್ದೇಶಗಳು ಇದ್ದಿರಬಹುದೆಂಬ ಗುಮಾನಿ ಮೂಡುತ್ತದೆ. ಇವೇ ಉದ್ದೇಶಗಳು ಹತ್ತೊಂಬತ್ತನೆಯ ಶತಮಾನದಲ್ಲಿ ಬಹುಮಟ್ಟಿಗೆ ಇಂಗ್ಲಿಷ್ ಶಿಕ್ಷಣ, ಸಂಸ್ಕೃತಿ, ನಡವಳಿಕೆಗಳನ್ನು ಭಾರತೀಯ ಸಮಾಜದಲ್ಲಿ ನೆಲೆಯೂರಲು ಪರೋಕ್ಷವಾಗಿ ಕಾರಣವಾದವು. ಈಶ್ವರಚಂದ್ರ ವಿದ್ಯಾಸಾಗರ್, ವಿವೇಕಾನಂದ ಮೊದಲಾದವರು ಭಾರತೀಯತೆ, ಹಿಂದುತ್ವದ ಬಗ್ಗೆ ಪ್ರಚಾರ ಮಾಡಿದ್ದರಾದರೂ ಉಳಿದಂತೆ ಅನೇಕ ಸುಧಾರಣಾವಾದಿಗಳು ತಮ್ಮ ಉನ್ನತ ವ್ಯಾಸಂಗ, ಅಧಿಕಾರ, ಹುದ್ದೆಗೆ ತಕ್ಕಂತೆ ಸ್ಪಂದಿಸಲು, ಆಲಂಕಾರಿಕವೆನ್ನುವಂತೆ ತಮ್ಮ ಕುಟುಂಬದ ಮಹಿಳೆಯರಿಗೆ ಶಿಕ್ಷಣ, ಮೇಲ್ವರ್ಗದ ಜನರೊಡನೆ ಬೆರೆಯಲು ಅವಕಾಶ ನೀಡಿದ್ದರಲ್ಲದೆ ಮಹಿಳೆಯರಿಗೆ ಸ್ವತಂತ್ರ ವಿಚಾರ, ಸ್ವಾವಲಂಬನೆಯ ಅವಕಾಶವನ್ನು ನೀಡಿರಲಿಲ್ಲವೆಂಬುದಾಗಿ ತಿಳಿದುಬರುತ್ತದೆ. ಇದರಿಂದ, ಆಧುನಿಕ ಶಿಕ್ಷಣ, ಮಹಿಳಾ ಉದ್ಯೋಗ ಅಥವಾ ಸಂಘಟನೆ ಇವುಗಳ ಮೂಲೋದ್ದೇಶ ಮಹಿಳಾಪರವಾಗಿದ್ದಿತೇ ಅಥವಾ ಅದರಲ್ಲಿಯೂ ಯಾವುದಾದರೂ ಒಳ ಉದ್ದೇಶಗಳೇನಾದರೂ(Hidden objectives) ಇದ್ದಿರಬಹುದೇ ಎಂದು ಸಂಶಯವುಂಟಾಗಲೂ ಅವಕಾಶವಿದೆ. ಪಾಶ್ಚಾತ್ಯರ ಕಣ್ಣಿಗೆ ಭಾರತೀಯರು ಹಿಂದುಳಿದ, ಅಧಃ ಪತನಹೊಂದಿದ ಸಮಾಜ ವ್ಯವಸ್ಥೆಯೆಂದು ಹೀಗಳೆಯುವ ದೃಶ್ಯ ಕಾಣದಂತೆ ನೋಡಿಕೊಳ್ಳಲು ತಮ್ಮ ಸುಧಾರಣಾ ಮನೋಭಾವವನ್ನು ಬೇರೆಯವರೆದುರಿನಲ್ಲಿ ಬಿಂಬಿಸಲು, ಆಧುನಿಕ ಶಿಕ್ಷಣ ಪಡೆದ ಮಹಿಳೆಯರು ತಮ್ಮ ಮಕ್ಕಳನ್ನು ಹಾಗೂ ಇತರರನ್ನು ಇಂಗ್ಲಿಷ್ ಕಲಿಯಲು ಉತ್ತೇಜನ ನೀಡಿ ಆಧುನಿಕರಾದ ಭ್ರಮೆ ಮೂಡಿಸಲು ಡಾಂಭಿಕ ಜೀವನವನ್ನು ಅನುಸರಿಸುತ್ತಿದ್ದರು.

ಆದರೆ ಮಹಿಳೆಯರ ಆಂತರಿಕ ತುಮುಲ, ನಿರ್ಬಂಧ, ಆರ್ಥಿಕ ಅಸಹಾಯಕತೆಗೆ ಯಾವ ಬೆಂಬಲವೂ ದೊರಕಲಿಲ್ಲ. ಅಷ್ಟೇ ಅಲ್ಲ ಅಂಥ ಮುಕ್ತಿಯನ್ನು ಮಹಿಳೆಯರು ಬಯಸುವುದಿಲ್ಲವೆಂಬುದಾಗಿ ತಾವೇ ನಿರ್ಧಾರ ತೆಗೆದುಕೊಳ್ಳುತ್ತಿದ್ದಂಥ ಪರಿಸ್ಥಿತಿಯುಂಟಾಗಿತ್ತು. ಹೀಗಾಗಿ, ಮಹಿಳಾ ವಿಮೋಚನೆ, ಮಹಿಳಾ ಉದ್ಯೋಗ, ಮಹಿಳಾ ಶಿಕ್ಷಣ ಇವಾವುದೂ ಕೂಡ ಸಮಾಜ ಸುಧಾರಣಾ ವಾದದ ಮುಖ್ಯಗುರಿ ಅಥವಾ ವಿಷಯಗಳಾಗಿರದೇ ಕೇವಲ ಅಂಥ ಸುಧಾರಣೆಗೆ ಪೂರಕ ವಿಷಯಗಳಾಗಿದ್ದಿತೆಂದು ಗ್ರಹಿಸಲು ಸಾಕಷ್ಟು ಪುರಾವೆಗಳಿವೆ. ಏಕೆಂದರೆ ಎಲ್ಲಕ್ಕಿಂತ ಮುಖ್ಯವಾಗಿ ಶಿಕ್ಷಣದ ಮೂಲ ಉದ್ದೇಶ ವ್ಯಕ್ತಿತ್ವ ವಿಕಾಸವಾಗಬೇಕು. ಆದರೆ ಶಿಕ್ಷಣವು ಕೇವಲ ವಿವಾಹ ಹಾಗೂ ಕುಟುಂಬ ನಿರ್ವಹಣೆಗಷ್ಟೇ ಸೀಮಿತವಾಗಿ ಶಿಕ್ಷಣದಿಂದ ದೊರೆಯಬಹುದಾದ ಇನ್ನಿತರ ಸೌಲಭ್ಯಗಳಿಂದ ಮಹಿಳೆಯನ್ನು ವಂಚಿಸಿದ್ದು ಆಕೆಯ ಆರ್ಥಿಕ ಸ್ವಾತಂತ್ರ್ಯಕ್ಕೆ, ಸ್ವಾವಲಂಬನೆಗೆ ಕೊಡಲಿಪೆಟ್ಟು ಹಾಕಿದಂತಾಯಿತು. ಹಾಗೂ ಆಕೆಗೆ ಸ್ವಾತಂತ್ರ ವಿಚಾರ, ನಿರ್ಧಾರಕ್ಕೆ ಕೂಡ ಅವಕಾಶವಿರಲಿಲ್ಲ. ಏಕೆಂದರೆ ಪುರುಷ ಪ್ರಾಧಾನ್ಯತೆಯಿರುವ ಸಮಾಜದಲ್ಲಿ ಮಹಿಳೆಯರ ಪ್ರಗತಿ, ಸ್ವತಂತ್ರ್ಯ, ಹಕ್ಕು ಚಲಾವಣೆಗೆ ಗಮನಕೊಡುವುದಕ್ಕಿಂತ ಹೆಚ್ಚಾಗಿ ಆಕೆಯ ಬೇಕುಬೇಡ, ಇತಿಮಿತಿ ಇವೆಲ್ಲವೂ ಪುರುಷರ ಆಶಯದಂತೆಯೇ ನಡೆಯಬೇಕಾಗಿತ್ತು. ಗಾಂಧೀಜಿಯವರು ಇತರ ಸುಧಾರಕರಿಗಿಂತ ತೀರಾ ಭಿನ್ನ ಅಥವಾ ಮಹಿಳಾ ಪ್ರಗತಿ ಪರವಿಚಾರಗಳನ್ನು ಹೊಂದಿದ್ದರೆಂದು ಹೇಳಲಾಗ ದಿದ್ದರೂ ಕೆಲವು ಅಂಶಗಳಲ್ಲಿ ಅವರು ಪರಂಪರೆಯಿಂದ ಹೊರಬರುವಂತೆ ಮಹಿಳೆಯರಿಗೆ ಪ್ರೇರಣೆ, ಪ್ರಚೋದನೆ, ಪ್ರೋತ್ಸಾಹ ನೀಡಿದ್ದರು. ಅಲ್ಲದೆ, ಮಹಿಳೆ ಕ್ರಿಯಾಶೀಲಳಾದ, ಆತ್ಮ ಬಲವುಳ್ಳ, ಸಾಮಾಜಿಕ ಪರಿವರ್ತನೆ ಉಂಟುಮಾಡಲು ಸಶಕ್ತಳಾದ ವ್ಯಕ್ತಿಯೆಂದು ಭಾವಿಸಿದ್ದರು. ಮಹಿಳೆಯರ ಕಾರ್ಯರಂಗ ಮನೆಯೇ ಆಗಿದ್ದು, ಅಲ್ಲಿಯೇ ಆಕೆ ಸ್ತ್ರೀಪುರುಷರ ಸಮಾನ ಗೌರವ, ಚಿಂತನೆಗಳಿಂದ ಪುರುಷಕೃತ ಬಂಧನಗಳಿಂದ ಹೊರಬರಲು ಸಾಧ್ಯವೆಂದು ಭಾವಿಸಿದ್ದರು. ಆದರೆ ಅವರ ಸಮಾನತೆಯ ಕಲ್ಪನೆಯಲ್ಲಿ ಸಮಾನ ಉದ್ಯೋಗಾವಕಾಶ, ಆರ್ಥಿಕ, ರಾಜಕೀಯ ಅಧಿಕಾರ ಕ್ಷೇತ್ರಕ್ಕೆ ಮಹಿಳೆಯರು ಅರ್ಹರೆಂದು ಪರಿಗಣಿಸಿರಲಿಲ್ಲ. ಮಹಿಳೆಯರನ್ನು ಅಸಹಕಾರ ಆಂದೋಲನದ ಮೂಲಕ ರಾಷ್ಟ್ರೀಯ ಹೋರಾಟಕ್ಕೆ ಆಕರ್ಷಿಸಿದ ಗಾಂಧೀಜಿ ಅವರಿಗೆ ಚರಕಾ, ಖಾದಿ ಹಾಗೂ ಗುಡಿಕೈಗಾರಿಕೆಗಳ ಮೂಲಕ ಆರ್ಥಿಕ ಸಬಲತೆಯ ಹೊಸ ದಾರಿಯೊಂದನ್ನು ತೋರಿದರು. ಅಷ್ಟೇ ಅಲ್ಲ, ಮಹಿಳಾ ಸಂಘಟನೆ ರಾಷ್ಟ್ರದ ಸ್ವಾತಂತ್ರ್ಯದ ಸಾಧನೆಯ ನಿಮಿತ್ತವಾಗಿದ್ದರೂ ಅದಕ್ಕೆ ನೈತಿಕ ಬೆಂಬಲ ನೀಡಿದ್ದರಿಂದ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಗೆ ಸಮಾಜದ ಯಾವ ಸ್ತರದಿಂದಲೂ ವಿರೋಧ ವ್ಯಕ್ತವಾಗಲಿಲ್ಲ. ಎಂದರೆ ಕಾರ್ಯಕಾರಣ ಹಾಗೂ ಮುಂದಾಳತ್ವದ ಮಹತ್ತ್ವವನ್ನು ಗಾಂಧೀಜಿಯವರು ಮಹಿಳೆಯರಿಗೆ ಆಗಲೇ ಸೂಚಿಸಿದ್ದರೆನ್ನಬಹುದು. ಇದರಿಂದ ಮುಂದೆ ಮಹಿಳಾ ಸಂಘಟನೆ ಹಾಗೂ ಮಹಿಳಾ ಉದ್ಯಮರಂಗಕ್ಕೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಂವಿಧಾನ, ಇನ್ನಿತರ ಕಾನೂನುಗಳ ಮೂಲಕ ಹಕ್ಕುಗಳು, ಅಧಿಕಾರಗಳು, ಸರ್ಕಾರದ

ಇನ್ನಿತರ ಸಂಘಸಂಸ್ಥೆಗಳ ನೆರವು ಒದಗಿತು. ಆದ್ದರಿಂದ ಮಹಿಳೆಯರ ಕಲ್ಯಾಣ ಮಹನೀಯರಿಂದ ಮಾತ್ರವೇ ಸಾಧ್ಯ ಎಂಬ ಸಿದ್ಧವಾಕ್ಯವನ್ನು ತಿರಸ್ಕರಿಸಿ ಮಹಿಳೆಯರಿಗೆ ಅವಕಾಶ ನೀಡಿದರೆ ಸಮಾಜದ ಪರಿವರ್ತನೆ, ರಾಷ್ಟ್ರದ ಪ್ರಗತಿಸಾಧ್ಯವೆಂಬುದನ್ನು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸುವ ಮೂಲಕ ಅಂದಿನ ಹೊರಪ್ರಪಂಚದ ಗಾಳಿಯನ್ನು ಸವಿದಿರದ ಮಹಿಳೆಯರು ಸಾಬೀತುಪಡಿಸಿದ ಸಂಗತಿ ಇತಿಹಾಸದಲ್ಲಿ ದಾಖಲೆಯಾದುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಮೂರನೆಯ ಅಧ್ಯಾಯ "ಸಾಮೂಹಿಕ ಸ್ವಾವಲಂಬನೆ ಕ್ಷೇತ್ರವಾಗಿ ಸಹಕಾರ ಕ್ಷೇತ್ರ" ರಾಷ್ಟ್ರದ ಆರ್ಥಿಕ ರಂಗದಲ್ಲಿ ಬಹುಮುಖ್ಯ ಸ್ಥಾನಪಡೆದಿದೆ. ಭಾರತದಂಥ ಬೃಹತ್ ರಾಷ್ಟ್ರ ಬ್ರಿಟಿಷರ ಆಡಳಿತದಲ್ಲಿ ತನ್ನೆಲ್ಲ ಅಪಾರ ಸಂಪನ್ಮೂಲಗಳನ್ನೂ ನಿರರ್ಥಕವಾಗುವಂತೆ ಪರಕೀಯರ ಅಧೀನದಲ್ಲಿತ್ತು. ಸ್ವಾತಂತ್ರ್ಯವನ್ನು ಮರಳಿ ಪಡೆದು ಸಾಮಾಜಿಕ-ರಾಜಕೀಯ, ಆರ್ಥಿಕವಾಗಿ ಸಬಲವಾದ ರಾಷ್ಟ್ರ ನಿರ್ಮಾಣ ಮಾಡಲು ಜನ ಜಾಗೃತಿ ಹಾಗೂ ಸಂಘಟನೆ, ಇಡೀ ದೇಶದ ಒಗ್ಗಟ್ಟಿನ ಹೋರಾಟ ಅನಿವಾರ್ಯವಾಯಿತು. ದೇಶದ ಸ್ತ್ರೀ ಪುರುಷರು ಒಟ್ಟಾಗಿ ನಿಂತಾಗ ಬ್ರಿಟಿಷ್ ಆಡಳಿತ ಅದಾಗಿಯೇ ದೇಶಕ್ಕೆ ಮುಕ್ತಿ ನೀಡುವಂಥ ಸನ್ನಿವೇಶ ಅಸಹಕಾರ ಆಂದೋಲನದಿಂದಲೇ ನಿರ್ಮಾಣವಾಯಿತೆನ್ನುವುದು ಇತಿಹಾಸದಲ್ಲಿ ದಾಖಲಾದ ಉಜ್ಜ್ವಲ ಸಂಗತಿಯಾಗಿದೆ. ಇಂಥ ಅಸಹಕಾರ ಚಳವಳಿಯ ಸೃಷ್ಟಿಕರ್ತ ಹಾಗೂ ನೇತಾರ ಮಹಾತ್ಮಗಾಂಧಿಯವರಾಗಿದ್ದರು. ಮಾಲೀಕರ, ಆಳುವವರ ದರ್ಪ, ಶೋಷಣೆ ಹಾಗೂ ಅದನ್ನು ಎದುರಿಸಲಾಗದ ಅಸಹಾಯಕತೆಯಿಂದ ಕುಗ್ಗಿಹೋಗಿದ್ದ ಕೃಷಿಕ ಜನರ ಸ್ಥಿತಿಗತಿಯನ್ನು ಉತ್ತಮಪಡಿಸಲು ಅವರ ಸಂಘಟನೆಯ ಕಾರ್ಯ ಕೈಗೊಂಡ ಗಾಂಧೀಜಿ ಪರಸ್ಪರ ಸಹಾಯ, ಸಹಕಾರ, ನಿಷ್ಠೆ, ಪ್ರಾಮಾಣಿಕತನದ ದುಡಿಮೆಯ ಮಹತ್ತ್ವವನ್ನು ರೈತ, ಕಾರ್ಮಿಕರಿಗೆ ಮಾತ್ರವಲ್ಲ ದೇಶಭಕ್ತಿಯಿದ್ದರೂ ದೇಶಕ್ಕಾಗಿ ಹೋರಾಡಿ ಸ್ವಾತಂತ್ರ್ಯ ಗಳಿಸುವ ತಾಕತ್ತಿರದಿದ್ದ ದೇಶೀಯರಿಗೂ ತೋರಿಸಿಕೊಟ್ಟರು. ಸಾಮೂಹಿಕವಾಗಿ ಕೈಗೊಳ್ಳುವ ಕಾರ್ಯ ಸಫಲವಾಗುತ್ತದೆ. ಸಹಕಾರದ ತತ್ತ್ವಗಳು ವ್ಯಕ್ತಿಗತವಾಗಿ ಬಾಳಿಗೆ ಬೆಳಕು ನೀಡುವುದರ ಜೊತೆಗೆ ಸಮುದಾಯದ ಒಳಿತಿಗೂ ಅತ್ಯವಶ್ಯವೆಂಬ ಮಹತ್ತ್ವದ ವಿಚಾರವನ್ನು ಭಾರತೀಯರ ಹೃದಯ, ಬುದ್ಧಿಗಳಲ್ಲಿ ಬಿತ್ತಿದ ಗಾಂಧೀಜಿ ಜನರು ಸಹಕಾರ ತತ್ತ್ವಗಳನ್ನು ಪಾಲಿಸುವುದಕ್ಕಾಗಿ ಖಾದಿ, ಚರಕದ ಮೂಲಕ ನೇಯುವ ಕಾಯಕವನ್ನು ಕೈಗೊಂಡು ಪ್ರಾಮಾಣಿಕರಾಗುವಂತೆ ಮಾರ್ಗದರ್ಶನ ಮಾಡಿದರು. ಇದೇ ಕಾರಣ ಬ್ರಿಟಿಷರನ್ನು ದೇಶದಿಂದ ಹೊರಗಟ್ಟಲು ಅಸಹಕಾರ ಚಳವಳಿಯಾಗಿ ಯಶಸ್ವಿಯಾಯಿತು. ಸತ್ಯಾಗ್ರಹದ ಮೂಲಕ ಅಸಹಕಾರ ಆಂದೋಲನಕ್ಕೆ ಮಹಿಳೆಯರೂ ಕೂಡ ಧಾವಿಸಲು ಗಾಂಧೀಜಿಯವರೇ ಕಾರಣರಾದರು. ಪ್ರತಿಯೊಬ್ಬ ವ್ಯಕ್ತಿಗಾಗಿ ಎಲ್ಲರೂ, ಎಲ್ಲರಿಗಾಗಿ ಪ್ರತಿಯೊಬ್ಬ ಎಂಬ ಸಹಕಾರತತ್ತ್ವ ಸಾಮೂಹಿಕ ಹೋರಾಟಕ್ಕೆ ಹೆಚ್ಚು ಬೆಂಬಲ ಒದಗಿಸಿತು. ಜೀವನದ ಮೌಲ್ಯಗಳನ್ನೇ ಆರ್ಥಿಕ, ಸಾಮಾಜಿಕ,

ರಾಜಕೀಯ ರಂಗಗಳಲ್ಲಿ ಅಳವಡಿಸಿಕೊಳ್ಳಲು ಸಹಕಾರತತ್ತ್ವಗಳು ನೆರವಾದವು. ಅಷ್ಟೇಕೆ ಬಡವ, ಶ್ರೀಮಂತ, ವಿದ್ಯಾವಂತ, ಅನಕ್ಷರಸ್ಥ ಇವರೆಲ್ಲರೂ ಸಮಾನ ಹಕ್ಕು-ಬಾಧ್ಯತೆಗಳನ್ನು ಹೊಂದಿರುವ ಪೌರರು ಎಂಬ ಸರ್ವಸಮಾನತೆಯ ಸೂತ್ರವನ್ನು ಸಹಕಾರವು ಕಲಿಸುತ್ತದೆ. ಸಹಕಾರ ಸಂಘಗಳ ಆವಿಷ್ಕಾರ, ಬೆಳವಣಿಗೆ, ಇವುಗಳ ಕಾರ್ಯನಿರ್ವಹಣೆಗಾಗಿ ಅಧಿನಿಯಮ ರಚನೆ ಇವೆಲ್ಲ ಅಂಶಗಳ ಬಗ್ಗೆ ಅಧ್ಯಾಯದಲ್ಲಿ ವಿವರವಾಗಿ ತಿಳಿಸಲಾಗಿದೆ.

ಮಹಿಳೆಯರ ಆರ್ಥಿಕ ಸ್ವಾವಲಂಬನೆ ಬಗ್ಗೆ ಚರ್ಚಿಸುವಾಗ ನಾವು ಸಹಕಾರ ರಂಗವು ಆರ್ಥಿಕ ಹಾಗೂ ಸಾಮಾಜಿಕ ಸಬಲೀಕರಣದ ವಿವಿಧ ಮಜಲುಗಳನ್ನು ತಲುಪಿರುವುದನ್ನೂ ಗುರುತಿಸಬಹುದು. ಆರ್ಥಿಕ ಸಬಲತೆಗಾಗಿಯೇ ಸಹಕಾರದ ಆವಿಷ್ಕಾರವಾಗಿದ್ದು ಅದನ್ನು ಬೀಜಸ್ವರೂಪದ್ದೆಂದು ಭಾವಿಸಿದರೆ ಸಹಕಾರ ತತ್ತ್ವಗಳ ವ್ಯಾಪ್ತಿ ಅಷ್ಟಕ್ಕೇ ಸ್ಥಗಿತವಾಗದೆ ವ್ಯಕ್ತಿಯ ಸಮಗ್ರ ಬೆಳವಣಿಗೆಗೆ ಪ್ರೇರಕವಾಗುವ ಮನೋಬಲವನ್ನು ನೀಡುವಂಥದ್ದಾಗಿದೆ. ಎಂದರೆ ಕೃಷಿ ಕಾರ್ಮಿಕನೊಬ್ಬ ಲೇವಾದೇವಿಗಾರರ ಕೈಗೆ ಸಿಲುಕಿ ತನ್ನ ಉತ್ಪನ್ನಗಳನ್ನು, ತನ್ನ ನೈತಿಕ ಬಲವನ್ನು ಅಂತಿಮವಾಗಿ ಅಸ್ತಿತ್ವವನ್ನೇ ಹಣಕ್ಕಾಗಿ ಮಾರಿಕೊಂಡು, ದಾಸ್ಯದಲ್ಲಿ ನಲುಗುವ ನಿದರ್ಶನ ನೋಡೋಣ. ಸಹಕಾರ ತತ್ತ್ವ ಇಲ್ಲಿ ಅನೇಕ ಬಡ ಕೃಷಿಕರ ಸಂಘಟನೆಯಿಂದ ಅವರ ಆರ್ಥಿಕ ಸಂಕಷ್ಟ ನೀಗುವುದರ ಜೊತೆಗೆ ಅವರು ಎಂಥ ಬಲಾಢ್ಯ ಪ್ರತಿಸ್ಪರ್ಧಿಯನ್ನೂ ಎದುರಿಸುವ ಶಕ್ತಿ ಹಾಗೂ ಕಾರ್ಯತಂತ್ರವನ್ನು ಒದಗಿಸುತ್ತದೆ. ಇದರಿಂದ ಮತ್ತೊಬ್ಬರ ನೆರವಿಗಾಗಿ ಕಾಯದೇ ತಮ್ಮ ತಮ್ಮ ಅಗತ್ಯತೆಗಳಿಗೆ ತಾವೇ ಸಾಧನಗಳನ್ನು ಹುಡುಕುವ, ಪಡೆಯುವ ಛಲ ಮೂಡುತ್ತದೆ. ಇದು ಸ್ವಾವಲಂಬನೆಯ ಮಹತ್ತ್ವ. ವ್ಯಕ್ತಿ ಒಂಟಿಯಾಗಿ ಸಾಧಿಸುವುದನ್ನು ಸಮೂಹದ ಮೂಲಕ ಸಾಧಿಸಿದಲ್ಲಿ ಅದರ ಮೌಲ್ಯ ಇನ್ನೂ ಅಧಿಕವಾಗುತ್ತದೆ. ವ್ಯಕ್ತಿತ್ವ ವಿಕಾಸದ ಶಾಖೆಗಳು ಹರಡುತ್ತ ಸಮೂಹವೇ ಸ್ವಾವಲಂಬನೆಯ ಮಹಾವೃಕ್ಷವಾಗಬಲ್ಲುದು. ಎಂದರೆ ಕೇವಲ ಹಣದ ಸಮಸ್ಯೆ ಮಾತ್ರವಲ್ಲದೆ, ವ್ಯಕ್ತಿಗಳ ನಡುವೆ ಬೆಸುಗೆ ಹಾಕುವ ಸಹಕಾರ ಕ್ಷೇತ್ರವು ಮಹಿಳೆಯರಿಗೆ ಸುಲಭ ಪ್ರವೇಶದ, ಸರಳ ಹಾಗೂ ಸ್ವಯಂ ನಿರ್ಧಾರದ ಸದಸ್ಯತ್ವದ ಕಾರ್ಯಕ್ಷೇತ್ರವಾಗುತ್ತದೆ. ತನ್ನದೇ ಪರಿಸ್ಥಿತಿಯಲ್ಲಿ ಇರುವ ಅನೇಕರನ್ನು ಒಟ್ಟುಗೂಡಿಸಿಕೊಂಡು ಕಟ್ಟುವ ಸಹಕಾರ ಸಂಘ ಸಮಾಜದ ವಿವಿಧ ವರ್ಗಗಳಿಗೆ ಸೇರಿದ, ವಿಭಿನ್ನ ವ್ಯಕ್ತಿತ್ವದ, ಜನರನ್ನು ಸಂಘಟಿಸುವ ಸಂಸ್ಥೆಯಾಗಿದೆ. ಹಣ ಸಾಲನೀಡಿಕೆ, ವಸೂಲಿ, ವ್ಯವಹಾರದ ಮೂಲಕ ಸಹಕಾರ ಕ್ಷೇತ್ರವು ಮೌಲ್ಯಾಧಾರಿತ ಸಂಸ್ಥೆಯಾಗಿದ್ದು, ಈ ಬಗ್ಗೆ ನಡೆಸಲಾದ ಅಧ್ಯಯನದ ವಿವಿಧ ಅಂಶಗಳನ್ನು ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯವಾದ "ಮಹಿಳೆ ಮತ್ತು ಸಹಕಾರ ಕ್ಷೇತ್ರ"ದಲ್ಲಿ ಮಹಿಳೆಯರಿಗೆ ಸ್ವಾವಲಂಬನೆ ಆರ್ಥಿಕ ನೆರವು, ಧ್ಯೇಯ ಸಾಧನೆ, ಹಾಗೂ ಸಹಕಾರ ಕ್ಷೇತ್ರವು ಮಹಿಳೆಯ ವ್ಯಕ್ತಿತ್ವ ವಿಕಾಸಕ್ಕೆ ನೀಡುವ

ಮಹತ್ತ್ವದ ಕೊಡುಗೆಯ ಬಗ್ಗೆ ಪರಾಮರ್ಶಿಸುವ ಪ್ರಯತ್ನ ಮಾಡಲಾಗಿದೆ. ಆರ್ಥಿಕ ಸ್ವಾವಲಂಬನೆಗೆ ಭಿನ್ನವಾದ ನಿರ್ವಚನದ ಅಗತ್ಯವಿದೆ. ಕೇವಲ ಹಣ ಸಾಲವಾಗಿ ಕೊಡುವ ಹಾಗೂ ಸಾಲವನ್ನು ಮರುಸಂದಾಯ ಮಾಡುವ ಪ್ರಕ್ರಿಯೆಯಷ್ಟೇ ಮುಖ್ಯವಾಗುವುದಿಲ್ಲ. ಇದರ ಹಿಂದಿರುವ ಇಬ್ಬರು ವ್ಯಕ್ತಿಗಳು ಹಾಗೂ ಅವರ ವ್ಯಕ್ತಿತ್ವ, ಸ್ವಭಾವ, ಪರಿಸರ, ವರ್ತನೆ ಇವೆಲ್ಲವೂ ಕೂಡ ಅದರಲ್ಲಿ ಪ್ರತಿಬಿಂಬಿತವಾಗುತ್ತದೆ. ಹೀಗಾಗಿ ಇಲ್ಲಿ ಎರಡು ಮನಸ್ಸುಗಳ ಆಲೋಚನಾ ದಿಕ್ಕುಗಳು, ಕ್ರಿಯೆ ಮತ್ತ ಪ್ರತಿಕ್ರಿಯೆಗಳು ವ್ಯಕ್ತವಾಗಿ ಅವು ಸಮಾಜದ ಇತರ ವ್ಯಕ್ತಿಗಳ ಮೇಲೂ ಪರಿಣಾಮ ಬೀರುತ್ತವೆ. ಆದ್ದರಿಂದ ಆರ್ಥಿಕ, ಸ್ವಾವಲಂಬನೆ ಬಗ್ಗೆ ಇನ್ನಷ್ಟು ವಿವರಣೆ ನೀಡಲು ಸಾಧ್ಯವಿದೆ.

ಹಲವಾರು ಕಾರಣಗಳಿಂದ ದುಃಖ ಜೀವನ ನಡೆಸುವ ಪರಿಸ್ಥಿತಿಯಲ್ಲಿರುವ ಮಹಿಳೆಯರು ಇತರರ ಅನುಕಂಪ ಕರುಣೆಯಿಂದ ಜೀವನಸಾಗಿಸಬೇಕಾಗುತ್ತದೆ. ಆದರೆ ಪುರುಷನಿಂದ ಅಥವಾ ತನ್ನದೇ ದುಡುಕಿನಿಂದ ಏರುಪೇರು ಬದುಕಾಗುವ ಮಹಿಳೆಗೆ ಇತರರಿಂದ ನಿಂದೆಯ ಜೊತೆಗೆ ತಾನೊಲ್ಲದ ಹೀನವೃತ್ತಿಗಳಿಗೆ ತೊಡಗುವ ಅನಿವಾರ್ಯತೆಯೂ ಉಂಟಾಗುತ್ತದೆ. ಗ್ರಾಮೀಣ ಹಾಗೂ ನಗರ ಮಹಿಳೆಯರಿಬ್ಬರಿಗೂ ಅವರದೇ ಆದ ಸಮಸ್ಯೆಗಳು ಎದುರಾಗುತ್ತವೆ. ಕೊನೆಗೆ ಬದುಕಿನ ಆಸರೆಯೂ ಇಲ್ಲದಂಥ ಅಸಹಾಯಕ ಪರಿಸ್ಥಿತಿಯೊದಗುವ ಸನ್ನಿವೇಶಗಳು ಏರ್ಪಡುತ್ತವೆ. ಇಂಥ ಕರುಣಾಜನಕ ಪರಿಸ್ಥಿತಿಗೆ ಮುಖ್ಯ ಕಾರಣ ಆಕೆಗೆ ಆರ್ಥಿಕ ನೆಲೆಯಿಲ್ಲದಿರುವುದು. ಎಂದರೆ ಜೀವನೋಪಾಯವನ್ನು ಕಂಡುಕೊಂಡಿದ್ದರೆ ಇನ್ನೊಬ್ಬರ ಹಂಗಿನ ತುತ್ತಿಗೆ ಕೈಯೊಡ್ಡುವ ಪ್ರಮೇಯ ಒದಗಲಾರದು. ಅಂದರೆ ಆರ್ಥಿಕ ಸ್ವಾವಲಂಬನೆ ಎಷ್ಟೋ ಜನ ಮಹಿಳೆಯರಿಗೆ ಇತರರ ಆಶ್ರಯದಲ್ಲಿ ಬದುಕುವ ದೈನ್ಯತೆಯನ್ನು ನಿವಾರಿಸುತ್ತದೆ. ಅಷ್ಟೇ ಅಲ್ಲ ದುಡಿದು ಸಂಪಾದಿಸುವ ಹೆಣ್ಣಿನ ಬಗ್ಗೆ ಗೌರವ, ಮರ್ಯಾದೆಯ ಪ್ರಶ್ನೆಗಿಂತ ಇತರರ ಅವಹೇಳನೆ, ಕೆಳಮಟ್ಟದ ಆಲೋಚನೆಗಳಿಗೆ ಬಹುಮಟ್ಟಿಗೆ ಕಡಿವಾಣ ಬೀಳುತ್ತದೆ. ಆದ್ದರಿಂದ ಮಹಿಳೆಯರು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಸ್ವಾವಲಂಬನೆ ಮಾರ್ಗಗಳನ್ನು ಕಂಡುಹಿಡಿದು ಅದರ ಮೂಲಕ ಅಸಹಾಯಕತನವನ್ನು ಹೋಗಲಾಡಿಸಿಕೊಂಡು ಸಂಘಟಿತ ಪ್ರಯತ್ನದಿಂದ ಉದ್ಯಮ ರಂಗದಲ್ಲಿ ಪರಸ್ಪರ ಸಹಕಾರ, ನಂಬಿಕೆ, ವಿಶ್ವಾಸ, ಪ್ರಾಮಾಣಿಕತೆಯಿಂದ ದುಡಿದು ಸಮಾಜದಲ್ಲಿ ಉನ್ನತ ಸ್ಥಾನಮಾನವನ್ನು ಹೊಂದುವ ಅವಕಾಶಗಳಿವೆ. ಇಂದು ಸಹಕಾರ ಆಂದೋಲನ ಸಾವಿರಾರು ಮಹಿಳೆಯರಿಗೆ ಬದುಕಿನ ಪ್ರಶ್ನೆಯನ್ನು ಪರಿಹರಿಸಿದೆ. ಜೊತೆಗೆ ಅನೇಕ ವೈಯಕ್ತಿಕ ಅವಕಾಶ ಹಾಗೂ ಪ್ರಯೋಜನಗಳನ್ನೂ ತೆರೆದಿಟ್ಟಿದೆ. ಮಹಿಳೆಯರು ಸಹಕಾರ ಕ್ಷೇತ್ರವನ್ನು ಸ್ವಾವಲಂಬನೆ ಮಾರ್ಗವಾಗಿ ಆಯ್ಕೆ ಮಾಡಿಕೊಂಡಲ್ಲಿ ಅವರಿಗೆ ತನ್ಮೂಲಕ ವೈಯಕ್ತಿಕ ಗೆಲುವಿನ ಜೊತೆಗೆ ತನ್ನ ಹಾಗೆಯೇ ಕಷ್ಟಪರಿಸ್ಥಿತಿಯಲ್ಲಿರುವ ಲಕ್ಷಾಂತರ, ಮಹಿಳೆಯರನ್ನು ಈ ಆಂದೋಲನದ ಮೂಲಕ ಸ್ವಾವಲಂಬಿಗಳನ್ನಾಗಿ, ವ್ಯಕ್ತಿಗತವಾಗಿ ತೃಪ್ತರನ್ನಾಗಿ ಮಾಡುವ ವಿಪುಲ ಅವಕಾಶಗಳು ದೊರೆಯುತ್ತವೆ. ಅವುಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

೧. ಸಹಕಾರ ವಲಯ ಮತ್ತು ಮಹಿಳೆಯರ ವೈಯಕ್ತಿಕ ನೆಲೆಯ ಸಂಬಂಧದಿಂದಾಗಿ ಆಕೆಯ "ವ್ಯಕ್ತಿತ್ವ ಬೆಳವಣಿಗೆ"ಯ ಹಲವಾರು ಪದರಗಳು ಒಂದರ ಮೇಲೊಂದರಂತೆ ತೆರೆದುಕೊಳ್ಳುತ್ತವೆ. ಎಂದರೆ ಜೀವನ ನಿರ್ವಹಣೆಯ ಸಮಸ್ಯೆ ಪರಿಹಾರಕ್ಕಾಗಿ ಆಕೆ ಇತರರೊಡನೆ ಸ್ಪಂದಿಸುವ, ಚರ್ಚಿಸುವ, ದುಡಿಯುವ ಹಾಗೂ ಹೊಸ ಮಾರ್ಗಗಳ ಬಗ್ಗೆ ಚಿಂತಿಸುವ ಆಲೋಚನಾ ಶಕ್ತಿಯನ್ನು ಪಡೆಯುತ್ತಾಳೆ.

೨. "ಆರ್ಥಿಕ ಸ್ವಾವಲಂಬನೆ" ಎಂದರೆ ಆರ್ಥಿಕ ಸ್ವಾತಂತ್ರ್ಯ ಮಾತ್ರವಲ್ಲ ಹಣದ ಮೂಲಕ ತನ್ನ ವ್ಯಕ್ತಿತ್ವವನ್ನು ಸ್ವತಂತ್ರವಾಗಿಕ ರೂಪಿಸಿಕೊಳ್ಳುವುದು. ಎಂದರೆ ಮಹಿಳೆ ತನ್ನನ್ನು ತಾನು ರೂಪಿಸಿ ಕೊಳ್ಳುವುದು. ಹಾಗೂ ಅದಕ್ಕಾಗಿ ಎದುರಾಗಬಹುದಾದ ಅಡ್ಡಿ ಆತಂಕಗಳನ್ನು ನಿವಾರಿಸಿಕೊಳ್ಳುವ ಉಪಾಯಗಳನ್ನು ಆಲೋಚಿಸಿ ಪ್ರಯೋಗಿಸುವುದು.

೩. ಹಣಕಾಸು ವಿಚಾರವಾಗಲಿ, ಇತರ ಸಮಸ್ಯೆಗಳ ಬಗ್ಗೆಯಾಗಲಿ ಪುರುಷನ(ಪತಿ, ತಂದೆ, ಮಾವ, ಪೋಷಕರು ಯಾರೇ ಆಗಲಿ) ನಿರ್ಧಾರವನ್ನೇ ಅಂತಿಮವೆಂದು ಅಂಗೀಕರಿಸದೆ, ತಲೆಬಾಗದೆ ಹಣಕಾಸು, ವ್ಯವಹಾರದಲ್ಲಿ ತನ್ನ ವಿವೇಚನೆ, ನಿರ್ಧಾರಕ್ಕೆ ಮಾನ್ಯತೆ ದೊರೆಯುವಂತೆ ಮಂಡಿಸುವುದು ಹಾಗೂ ಅದಕ್ಕೆ ಮಾತ್ರವೇ ತನ್ನ ಒಪ್ಪಿಗೆ ನೀಡುವುದು.

೪. ವ್ಯವಹಾರಗಳ ಬಗ್ಗೆ ಪುರುಷರೇ ನಿರ್ಧರಿಸುವುದಕ್ಕೆ ಅವಕಾಶ ನೀಡದಿರುವುದು. ಉದಾಹರಣೆಗೆ, ವೆಚ್ಚಗಳನ್ನು ಭರಿಸುವುದು ಮಾತ್ರ ಮಹಿಳೆಯರ ಜವಾಬ್ದಾರಿಯಾಗಿ ಅದರ ಕಾರಣಗಳನ್ನು ಕೇಳಬಾರದೆಂಬ ದರ್ಪಕ್ಕೆ ಸೋಲದಿರುವುದು.

೫. ಮಹಿಳೆಯ "ಆರ್ಥಿಕ ಸಬಲೀಕರಣ, ಸ್ವಾವಲಂಬನೆಯ ಹಾದಿಯಲ್ಲಿ ಪ್ರಪ್ರಥಮ ಹಂತವಾಗಿರುತ್ತದೆಯೇ ಹೊರತು ಅದೇ ಸ್ವಾವಲಂಬನೆಯಲ್ಲ. ಆರ್ಥಿಕ ಬೆಂಬಲದೊಂದಿಗೆ ಆಕೆ ಸ್ವಾವಲಂಬನೆಯ ವಿವಿಧ ಹಂತಗಳ ಮೂಲಕ ವ್ಯಕ್ತಿತ್ವದ ಬೆಳವಣಿಗೆಯನ್ನು ಪಡೆಯುತ್ತಾಳೆ. ಇದು ಮಹತ್ತ್ವದ ಅಂಶ.

೬. ಸಹಕಾರ ರಂಗ ಮಹಿಳೆಗೆ ಸಬಲೀಕರಣದ ಇನ್ನಿತರ ವಿಭಾಗಗಳಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕಾನೂನು, ಸಾಂಸ್ಕೃತಿಕ ಹಾಗೂ ರಾಜಕೀಯ ರಂಗಗಳಿಗೆ ಪ್ರವೇಶಾವಕಾಶಗಳನ್ನು ಸೃಜಿಸುತ್ತದೆ. ಇದು ಮಹಿಳೆಯ ವ್ಯಕ್ತಿತ್ವದ ಪೂರ್ಣ ವಿಕಾಸದ ಹಂತವಾಗುತ್ತದೆ. ತನ್ಮೂಲಕ ಆಕೆ ಇತರರಲ್ಲಿ ಹೆಚ್ಚಿನ ಅರಿವು ಮೂಡಿಸಬಲ್ಲ ಧುರೀಣತ್ವದ ಪ್ರಜ್ಞಾವಂತ ಚೇತನವನ್ನು ಹೊಂದುತ್ತಾಳೆ.

೭. ಮಹಿಳೆ ತನ್ನ ಹಿಂದಿನ ಇಂದಿನ ಹಾಗೂ ಮುಂದಿನ ಪರಿಸ್ಥಿತಿಗಳನ್ನು ವಿಶ್ಲೇಷಿಸಿ ಮತ್ತೊಮ್ಮೆ ಇತಿಹಾಸ ಮರುಕಳಿಸದಂತೆ ಮಾಡಬೇಕಾದರೆ ಜಾಗತಿಕ ಮಟ್ಟದಲ್ಲಿ, ಪ್ರಪಂಚದಾದ್ಯಂತ ತನ್ನ ಅಸ್ತಿತ್ವದಲ್ಲಿ ಸಾಮರ್ಥ್ಯವನ್ನು, ಸಾಧನೆಯನ್ನು ಪ್ರಕಟ ಹಾಗೂ ಪ್ರಚುರಪಡಿಸುವ ಮಹದವಕಾಶ ಲಭ್ಯವಾಗುತ್ತದೆ.

೮. ಉದ್ಯಮ, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಕೇವಲ ಪುರುಷೋತ್ತಮರು ಮಾತ್ರವೇ ಪರಿಹರಿಸಬಲ್ಲರೆಂಬ ಅಭಿಪ್ರಾಯವನ್ನು ಬದಲಿಸಿ ಮಹಿಳೆಯರಿಗೆ ಅಂಥ ಅವಕಾಶಗಳು ದೊರೆತಲ್ಲಿ ಇನ್ನೂ ಸುಗಮವಾಗಿ ಪರಿಹರಿಸಬಲ್ಲ ಮುಖಂಡತ್ವ ಗುಣವನ್ನು ಬೆಳೆಸುತ್ತದೆ.

ಒಟ್ಟಾರೆಯಾಗಿ ಸಹಕಾರ ಕ್ಷೇತ್ರದಲ್ಲಿ ದುಡಿಯುವ, ಗಳಿಸುವ, ಸಮಾಜ ವ್ಯವಸ್ಥೆಯಲ್ಲಿ ಮರುಜನ್ಮ ಪಡೆವ ಛಲ ಹೊತ್ತ ಮಹಿಳೆಯರಿಗೆ ಸಹಕಾರ ಕ್ಷೇತ್ರ ವ್ಯಕ್ತಿತ್ವ ವಿಕಾಸದ ವಿವಿಧ ಹಂತಗಳನ್ನು ನಿರಂತರವಾಗಿರಿಸುತ್ತದೆ. ಹೀಗಾಗಿ ಅಭಿವೃದ್ಧಿ ಪ್ರಕ್ರಿಯೆಯ ಅವಿರತ ಅವಕಾಶಗಳು ದೊರೆತು ಮಹಿಳೆಯರು ಈ ಕ್ಷೇತ್ರದಲ್ಲಿ ನೆಲೆಯೂರಲು ಹೊಸ ಹೊಸ ಆಯಾಮಗಳೊಂದಿಗೆ ಸಾಮಾಜಿಕ ವ್ಯವಸ್ಥೆಯೊಂದಿಗೆ ಚಕಮಕಿ ನಡೆಸಿ, ಪುರಷ ಪ್ರಾಧಾನ್ಯತೆಯನ್ನು ಕಡ್ಡಾಯವಾಗಿ ಕೆಳಗಿಳಿಸಲು ಸಾಧ್ಯವೆಂಬ ಅಭಿಪ್ರಾಯ ಈ ಅಧ್ಯಾಯದಿಂದ ವ್ಯಕ್ತವಾಗುತ್ತದೆ.

ಐದನೆಯ ಅಧ್ಯಾಯದಲ್ಲಿ "ಯಶಸ್ವಿ ಮಹಿಳಾ ಸಹಕಾರ ಸಂಘಗಳ ಬೆಳವಣಿಗೆ, ಕಾರ್ಯ ನಿರ್ವಹಣೆ ಹಾಗೂ ಕೆಲವು ಸಮಸ್ಯೆಗಳು" ಈ ಬಗ್ಗೆ ಸಾಕಷ್ಟು ವಿಸ್ತೃತ ವಿವೇಚನೆ ನಡೆಸಲಾಗಿದೆ. ಸಹಕಾರ ಸಂಘಗಳ ಬಗ್ಗೆ ಮಾತ್ರವಲ್ಲದೆ ಮಹಿಳಾ ಉದ್ಯಮಿಗಳ ಯಶಸ್ಸು, ಮಹಿಳಾ ಸಹಕಾರಿ ಬ್ಯಾಂಕುಗಳ ನೆರವು ಹಾಗೂ ಉದ್ಯಮಿ ಹಾಗೂ ಸಹಕಾರಿ ಧುರೀಣೆಯರಾದ ಮಹಿಳೆಯರ ಕಾರ್ಯಕ್ಷಮತೆ, ಉದ್ಯಮಶೀಲತೆ ಹಾಗೂ ಸಫಲತೆಯನ್ನು ಗುರುತಿಸುವ ಪ್ರಯತ್ನವಿದೆ. ಸಹಕಾರ ಕ್ಷೇತ್ರದಲ್ಲಿ ಪ್ರವೇಶ ಮಾಡಿರುವ ಮಹಿಳೆಯರು ತಮ್ಮ ಪ್ರತಿಭೆ, ಕೌಶಲ್ಯಗಳನ್ನು ಇತರ ಸದಸ್ಯೆಯರ ಜೊತೆಗೂಡಿ ಬೆಳಕಿಗೆ ತಂದು ಸಂಘಟನೆಯನ್ನು ಪರಿಣಾಮಕಾರಿಯಾಗಿಸಿದ್ದಾರೆ. ಜೊತೆಗೆ ಸೌಜನ್ಯ, ಪ್ರಾಮಾಣಿಕತೆ, ಸೇವಾ ಮನೋಭಾವದಿಂದ ನಾಯಕತ್ವ ವಹಿಸಿ ಸಂಸ್ಥೆಗಳನ್ನು ಕಟ್ಟುವಲ್ಲಿ ಯಶಸ್ವಿಗಳಾಗಿದ್ದಾರೆ. ಯಶಸ್ಸಿಗೆ ಅಗತ್ಯವಾದ ತರಬೇತಿ, ಬಂಡವಾಳ ಆರ್ಥಿಕ ನೆರವು ಇವುಗಳನ್ನು ಒದಗಿಸಿಕೊಳ್ಳುವಲ್ಲಿ ಸದಾ ಪ್ರಯತ್ನಶೀಲರಾಗಿದ್ದಾರೆ. ವರಮಾನಗಳಿಗೆ ಹಾಗೂ ವೆಚ್ಚ ಇವೆರಡರಲ್ಲಿ ತಾವೇ ಸಕ್ರಿಯವಾಗಿ ಭಾಗವಹಿಸುವ ಮೂಲಕ ಸಂಪನ್ಮೂಲಗ ಹಾಗೂ ಸ್ವಾವಲಂಬನೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಮಹಿಳೆಯರು ಸ್ವಯಂ ಸಹಾಯಕಾಗಿ ತಾವಾಗಿಯೇ ಪರಿಸ್ಥಿತಿಗೆದುರಾಗಿ ನಿಲ್ಲುತ್ತಾರೆ. ಆಗ ಹಲವು ಉದ್ದೇಶಗಳಿಂದ ಕೂಡಿದ್ದರೂ, ಸ್ವಯಂ ಉದ್ಯೋಗ, ಸ್ವಸಹಾಯ, ಸ್ವಯಂ ಪರಿಪೂರ್ಣತೆ ಇವೆಲ್ಲವೂ ಈ ಕ್ಷೇತ್ರದ ಧ್ಯೇಯಗಳಾಗಿರುತ್ತವೆ. ಆದ್ದರಿಂದ ಮಹಿಳಾ ಸ್ವಯಂಸೇವಾಸಂಸ್ಥೆಗಳು ತನ್ನಂಥವರಿಗೆ ತಾನು ನೆರವಾಗುವ ಹಾಗೂ ನೆರವು ಪಡೆಯುವ ವ್ಯವಸ್ಥೆಯನ್ನು ಹೊಂದಿರುತ್ತವೆ. ಇಲ್ಲಿ ಸೋದರಿತನದ ಒಂದು ಕಲ್ಪನೆ(sister hood Image) ಕಂಡುಬರುತ್ತದೆ. ಇದೇ ಮಹಿಳಾ ಸಹಕಾರ ಸಂಸ್ಥೆಗಳ ಮೂಲವೂ ಆಗಿದೆ. ಈಗಾಗಲೇ ವಿಶ್ಲೇಷಿಸಿರುವಂತೆ ಆರ್ಥಿಕ ಸ್ವಾವಲಂಬನೆಯಿಂದ ಮಹಿಳೆಯರು ಪ್ರಸ್ತುತ ಇರುವ ಅಸಹಾಯಕ,

ಶೋಷಣೆಯುತ ಪುರುಷ ದಬ್ಬಾಳಿಕೆಯ ಭೀತಿಯ ಪರಿಸರದಿಂದ ಹೊರಬರಬೇಕು. ಇಲ್ಲಿ ಎರಡು ಅಂಶಗಳು ಎದುರಾಗುತ್ತವೆ.

೧. ವ್ಯಕ್ತಿಗತವಾಗಿ ಆರ್ಥಿಕ ಸ್ವಾವಲಂಬನೆ, ಮಹಿಳೆಯರನ್ನು ವ್ಯಕ್ತಿವಿಕಾಸದ ಉನ್ನತಸ್ತರಗಳಿಗೆ ಕೊಂಡೊಯ್ಯುವುದು, ಬೌದ್ಧಿಕ ಚಟುವಟಿಕೆ, ಉನ್ನತ ಶಿಕ್ಷಣ ಸ್ಥಾನಮಾನ, ಅಧಿಕಾರ, ಶ್ರೀಮಂತಿಕೆ ಇವುಗಳನ್ನು ಪಡೆಯುವುದು. ಅತ್ಯಂತ ಕೆಳಸ್ತರದ ಸಾಮಾನ್ಯವರ್ಗದ, ಅಥವಾ ಬಡಮಹಿಳೆ ಸ್ವಾವಲಂಬಿಯಾಗಿರುವುದು.

೨. ಆರ್ಥಿಕ ಸ್ವಾವಲಂಬನೆಯಿಲ್ಲದೆ ಎಂದರೆ ಹಣಕಾಸು ಅಥವಾ ಇತರ ಸೌಲಭ್ಯಗಳ ಅಗತ್ಯವಿಲ್ಲದೆಯೂ ಪರಾವಲಂಬಿಯಾಗುವುದು. ಅತ್ಯಂತ ಶ್ರೀಮಂತವರ್ಗದ ಮಹಿಳೆಯರಿಗೆ ಸಕಲ ಸೌಲಭ್ಯಗಳು, ಆಡಂಬರ ಜೀವನವಿದ್ದಾಗ್ಯೂ ಅವರ ವ್ಯಕ್ತಿತ್ವ ವಿಕಾಸಕ್ಕೆ, ತಮ್ಮ ಇಷ್ಟಾನಿಷ್ಟಗಳನ್ನು ಈಡೇರಿಸಿಕೊಳ್ಳುವ ಆಯ್ಕೆಯ ಸ್ವಾತಂತ್ರ್ಯವನ್ನಾಗಲಿ, ವಿವೇಚನಾಧಿಕಾರವನ್ನಾಗಲಿ ಪಡೆಯದೆ ಚಿನ್ನದ ಪಂಜರದಲ್ಲಿ ಬಂಧಿಸಲಾದ ಗಿಣಿಯಂತಹ ನಿರ್ಬಂಧಿತ ಜೀವನ ನಡೆಸುವುದು. ಇದರಿಂದ ಹಣವೊಂದೇ ಸಮಾಜದಲ್ಲಿ ಎಲ್ಲಾ ಸ್ಥಾನಮಾನವನ್ನು ಕೊಡಲಾರದು. ಆದರೆ ಸ್ಥಾನಮಾನ ಪಡೆಯುವುದಕ್ಕೆ ಅದೂ ಒಂದು ಅಗತ್ಯತೆ(Reguirement) ಆಗುತ್ತದೆ. ಆದರೆ ನಾಯಕತ್ವವಹಿಸುವ, ಉಳಿದವರಿಗೆ ಮಾರ್ಗದರ್ಶನ ಮಾಡುವ ಸಂಪನ್ಮೂಲ ಗುಣಗಳನ್ನು ಪಡೆದಲ್ಲಿ ಅಂಥವರು ಸಮಾಜದ ಪರಿವರ್ತನೆಯಲ್ಲಿ ಅತ್ಯಮೌಲ್ಯ ಪಾತ್ರ ಮಾದರಿಗಳಾಗುತ್ತಾರೆ. ಮಧ್ಯಮವರ್ಗದ ಮಹಿಳಾ ಮುಖಂಡರು ಪ್ರಜ್ಞಾವಂತ ಸ್ವಯಂ ಸೇವಕರಂತೆ ವರ್ತಿಸಬಲ್ಲರು. ಅವರಿಗೆ ಆತ್ಮವಿಶ್ವಾಸ, ತ್ಯಾಗದ ಬೆಲೆ, ಬಂಡವಾಳ ಹೂಡಿಕೆ, ಲಾಭದ ಹಂಚಿಕೆ ಮಾತ್ರವಲ್ಲ ತರಬೇತಿ ಹಾಗೂ ಸೇವಾ ಮನೋಭಾವವನ್ನು ಸದಸ್ಯರಲ್ಲಿ ಬಿತ್ತುವ ನೈಪುಣ್ಯತೆ ಇರುತ್ತದೆ. ಇಂಥ ಹಲವಾರು ಜನ ಮಹಿಳಾ ಧುರೀಣೆಯರು ಸ್ವಾತಂತ್ರ್ಯ ಹೋರಾಟಕಾಲದಲ್ಲೂ ಇದ್ದರು, ಈಗಲೂ ಇದ್ದು ವಿವಿಧ ಕಾರ್ಯಚಟುವಟಿಕೆಗಳನ್ನು ಹೊಂದಿರುತ್ತಾರೆ. ಹೀಗಾಗಿ ಗುಡಿಕೈಗಾರಿಕೆ, ಹೈನುಗಾರಿಕೆ, ಕರಕುಶಲತೆ, ಗ್ರಾಹಕ ತರಬೇತಿ, ಕೈಗಾರಿಕಾ ಸಲಕರಣೆಗಳು, ಕಂಪ್ಯೂಟರ್ ವರೆಗೆ ಎಲ್ಲ ವಿಷಯಗಳಲ್ಲಿ ಆಸಕ್ತಿ ಹೊಂದಿರುತ್ತಾರೆ. ಮಾರುಕಟ್ಟೆ, ಬಡ್ಡಿ, ಲಾಭಾಂಶ, ಲೆಕ್ಕಪರಿಶೋಧನೆವರೆಗೆ ಎಲ್ಲ ವಿಭಾಗಗಳ ಬಗ್ಗೆ ಗಮನಹರಿಸಿ ತಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳುತ್ತಾರೆ. ಹೊಟೇಲ್ ಉದ್ಯಮದಂತಹ ಸಂಕೀರ್ಣವಾದ, ಮಹಿಳಾ ಬ್ಯಾಂಕುಗಳಂಥ ಕೋಟ್ಯಾಂತರ ರೂಪಾಯಿ ವ್ಯವಹಾರನಡೆಸುವ ಮಹಿಳಾ ಉದ್ಯಮಿಗಳು ಮೂರನೇ ವಿಶ್ವದ ಬೆಳವಣಿಗೆಯ ಕೇಂದ್ರಬಿಂದುಗಳಾಗಿ ದ್ದಾರೆ ಎಂದರೆ ಅಂತಿಶಯೋಕ್ತಿಯಾಗಲಾರದು. ಒಟ್ಟಾರೆಯಾಗಿ ಹೇಳುವುದಾದರೆ ಮಹಿಳಾ ಸಬಲೀಕರಣದ ವಿವಿಧ ಹಂತಗಳನ್ನು ಮಹಿಳಾ ಸಹಕಾರಿಗಳು ಯಶಸ್ವಿಯಾಗಿ ನಡೆಸುತ್ತಿದ್ದಾರೆ ಎಂಬ ಸಂಗತಿಗಳನ್ನು ನಾನು ಈ ಅಧ್ಯಾಯದಲ್ಲಿ ಗುರುತಿಸಲಾಗಿದೆ.

ಮೇಲೆ ಸಂಕ್ಷಿಪ್ತವಾಗಿ ವಿಶ್ಲೇಷಿಸಲಾದ ಎಲ್ಲ ವಿಷಯಗಳ ಬೆಳಕಿನಲ್ಲಿ ಈ ಮಹಾಪ್ರಬಂಧದ ಅಧ್ಯಯನದ ಮುಖ್ಯ ವಸ್ತುವಿಷಯದ ಬಗ್ಗೆ ಈ ಮುಂದಿನ ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಮುಂದಿನ ಕೆಲವು ದಶಕಗಳಲ್ಲಿ ಭಾರತೀಯ ಸಮಾಜದಲ್ಲಿ ಭಾರಿ ಪರಿವರ್ತನೆ ಸಾಧ್ಯವಾಗಬಹುದೆ? ಕುಟುಂಬವನ್ನು ಪ್ರಪಥಮ ಸಾಮಾಜಿಕ ಘಟಕವೆಂದು ಗುರುತಿಸಲಾಗಿರುವುದರಿಂದ ಅವಿಭಕ್ತ ಕುಟುಂಬದಿಂದ ಇಂದಿನ 'ನಾವಿಬ್ಬರು ನಮಗೊಂದೇ ಮಗು' ಎಂಬ ಪುಟ್ಟ ಅಣು ಕುಟುಂಬದ(Neuclear family)ವರೆಗೆ ಅವಲೋಕಿಸಿದಾಗ ಒಂದೊಮ್ಮೆ ಕುಟುಂಬದ ಅಸ್ತಿತ್ವವೇ ಕಣ್ಮರೆಯಾಗಬಹುದೇನೋ ಎಂಬ ಸಂಶಯ ಮೂಡದಿರದು. ಇಂಥ ಹಲವಾರು ತೀವ್ರಸ್ವರೂಪದ ಬದಲಾವಣೆಗಳು ಎದುರಾಗುವ ಸಂಭವವೂ ಇಲ್ಲದಿಲ್ಲ. ಕುಲ ಕಸಬುಗಳು ಮರೆಯಾಗುತ್ತಿದ್ದು ಆರ್ಥಿಕ ಒತ್ತಡಗಳಿಂದಾಗಿ ಕುಟುಂಬಗಳಲ್ಲಿ ಅಭದ್ರತೆ, ಭೀತಿ, ಏಕಾಂಗಿತನ ಖಿನ್ನತೆಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಮಹಿಳೆಯರು ಶತಮಾನಗಳಿಂದ ತುಳಿತಕ್ಕೆ, ಶೋಷಣೆಗೆ ಗುರಿಯಾಗಿ ಇದೀಗ ಸಂಪೂರ್ಣ ಅರಿವು ಪಡೆದುಕೊಳ್ಳುತ್ತ ತಮ್ಮ ಅಸ್ತಿತ್ವವನ್ನು ಹೊಸವಿಧಾನಗಳ ಮೂಲಕ ದಾಖಲಿಸಹೊರಟಿದ್ದಾರೆ. 'ಸಂಸ್ಕೃತಿ' ಹಾಗೂ 'ಆದರ್ಶ' ಪಾತ್ರಗಳು ದಮನಕಾರಿ ಪಟ್ಟಭದ್ರ ಗುಂಪುಗಳ ಆಯುಧಗಳಾಗಿದ್ದವೆಂಬುದು ಈಗ ಸಾಬೀತಾಗಿರುವ ಸಂಗತಿಗಳಾಗಿವೆ. ಹೀಗಾಗಿ ಈಗ ಹೊಸದಾಗಿ ತಲೆಯೆತ್ತಿರುವ ಮಹಿಳಾ ವಿಮೋಚನಾ, ಸಬಲೀಕರಣ, ಸ್ವಾವಲಂಬನೆಯ ಆಂದೋಲನಗಳ ಹಳೆಯ ಗೊಡ್ಡು ಪ್ರವೃತ್ತಿಗಳ ಬಗ್ಗೆ ಹೆಚ್ಚು ಹೆಚ್ಚು ಜಾಗೃತಿವಹಿಸಿ ಅವುಗಳನ್ನು ಮೂಲೆಗೊತ್ತರಿಸಿ ಅಥವಾ ನಿರ್ಮೂಲನೆ ಮಾಡುವ ಹೊಸ ಕಾರ್ಯತಂತ್ರಗಳನ್ನು ಯೋಜಿಸಲಾಗುತ್ತಿದೆ. ಹೀಗಾಗಿ ಇನ್ನು ಮುಂದೆ ಮಹಿಳಾ ಅಧ್ಯಯನದ ವಸ್ತುವಿಷಯಗಳಲ್ಲಿ ಇನ್ನಷ್ಟು ಆಧುನಿಕ ವ್ಯಾಖ್ಯಾನಗಳನ್ನು, ಹೊಸ ಶಾಖೆಗಳನ್ನು ಅನ್ವೇಷಿಸುವ ಅನಿವಾರ್ಯತೆಯುಂಟಾಗುತ್ತಿದೆ. ಚಾರಿತ್ರಿಕವಾಗಿ ನೋಡುವುದಾದರೆ, ಮಹಿಳೆಯರು ಎಲ್ಲಾ ಕಾಲದಲ್ಲೂ, ಎಲ್ಲ ಬಗೆಯ ಆರ್ಥಿಕ ಪ್ರಗತಿಗೆ ಸಮುದಾಯದ ಸಂಪನ್ಮೂಲಗಳಿಂದ ಉತ್ಪಾದನೆ ಹಾಗೂ ವಿತರಣೆಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಇದೀಗ ಮಹಿಳೆಯರು ತಂತಮ್ಮ ಮನೆಗಳ ಚೌಕಟ್ಟಿಗೆ ಅಂಟಿಕೊಂಡಿರಬೇಕೆಂಬ ಸಾಂಪ್ರದಾಯಿಕ ಅಂತಸ್ತನ್ನು ಧಿಕ್ಕರಿಸಿ ಹೊರಗಿನ ವಿಶಾಲ ಪ್ರಪಂಚಕ್ಕೆ ದಾಂಗುಡಿಯಿಟ್ಟಿರುವುದು ರುಜುವಾತಾಗಿರುವ ಸಂಗತಿಯಾಗಿದೆ. ಆರ್ಥಿಕಾಭಿವೃದ್ಧಿ ಹಾಗೂ ಸಮೃದ್ಧಿಯತ್ತ ತಮ್ಮ ಕುಟುಂಬ ಹಾಗೂ ಸಮುದಾಯಗಳನ್ನು ಒಯ್ಯಲು ಮಹಿಳೆಯರು ತಮ್ಮೆಲ್ಲ ಕಾರ್ಯತಂತ್ರ ಸಾಮರ್ಥ್ಯಗಳನ್ನು ವಿನಿಯೋಗಿಸಿ ಸಶಕ್ತಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ತತ್ಪರಿಣಾಮವಾಗಿ ಕ್ರಮೇಣ ಪುರುಷರು ಮಹಿಳೆಯರಿಗೆ ಸಮಾನ ಹಕ್ಕುಗಳು ಹಾಗೂ ಸಮಾನ ಸ್ಥಾನಮಾನವನ್ನು ತಾವಾಗಿಯೇ ಬಿಟ್ಟುಕೊಡಬೇಕಾದ ಸನ್ನಿವೇಶಗಳು ಎದುರಾಗುತ್ತಿವೆ. ಇಂದಿನವರೆಗೂ ಮಹಿಳೆಯರಿಗೆ ಸ್ವಾತಂತ್ರ್ಯ, ಸ್ಥಾನಮಾನ ಹಾಗೂ ಜೀವನಾನುಕೂಲಗಳನ್ನು ಒದಗಿಸುವಲ್ಲಿ ತಾರತಮ್ಯವಾಗಿರುವ

ದೃಷ್ಟಿಯಿಂದ ಈಗ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಅವರನ್ನು ಸಬಲೆಯರನ್ನಾಗಿಸುವ ಶ್ರಮಸಾಧ್ಯ ಪ್ರಯತ್ನಗಳನ್ನು ಸರ್ಕಾರ, ಸಂಸ್ಥೆ ಇತ್ಯಾದಿಗಳು ಮಾಡುತ್ತಿವೆ. ಆದರೆ ಇವುಗಳ ವಾಸ್ತವಿಕ ಪರಿಣಾಮಗಳು ಸತ್ಯವೋ ಮಿಥ್ಯವೋ ಎಂಬುದನ್ನು ಅಧ್ಯಯನದಿಂದಲೇ ತಿಳಿಯಬೇಕು. ಮಹಿಳೆಯರು ಕೇವಲ ಪ್ರಜನನ ಕಾರ್ಯಕ್ಕೆ ಸಂಗಾತಿಗಳು, ಪುರುಷರ ಕಾಮನೆಗಳಿಗೆ ಈಡಾಗುವಂಥವರೂ ಆಗಿರದೆ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲೂ ಅರ್ಹ ಪಾಲುದಾರರೆಂಬುದನ್ನು ಮನಗಾಣಿಸುವ ಸಮಯ ಬಂದಿದೆ.

ಮಹಿಳೆಯರ ಸ್ವಾವಲಂಬನೆಯನ್ನು ಕುರಿತು ಈ ಅಧ್ಯಯನವನ್ನು ಕೈಗೊಂಡ ಉದ್ದೇಶ, ಸಹಕಾರ ಕ್ಷೇತ್ರ ಮಹಿಳೆಯರ ಕಾರ್ಯಕ್ಷೇತ್ರವಾಗಿ ಅವರ ಮುನ್ನಡೆಗೆ ನೆರವಾಗಬಹುದೆ? ಈ ರಂಗದ ಬೆಳವಣಿಗೆಯ ಜೊತೆಗೆ ಮಹಿಳೆಯರ ಸ್ಥಾನಮಾನದಲ್ಲಿ ಬದಲಾವಣೆ ಉತ್ತಮ ಸುಧಾರಣಾ ಕ್ರಮವಾಗುವುದೆ ಎಂಬುದರ ಬಗ್ಗೆ ಸಂಶೋಧನೆ ಮಾಡುವುದಾಗಿತ್ತು. ಇಂಥ ಇನ್ನು ಅನೇಕ ಪ್ರಶ್ನೆಗಳಿಗೆ ಸಮರ್ಪಕ ಹಾಗೂ ಅತ್ಯಂತ ಸೂಕ್ತ ಪರಿಹಾರ ಮಹಿಳಾ ಸಂಘಟನೆ, ಸಹಕಾರದ ಮೂಲಕ ಸಾಧ್ಯ ಎಂಬುದು ಹಲವಾರು ರೀತಿಗಳಿಂದ ರುಜುವಾತಾಗಿರುವ ಸಂಗತಿಯಾಗಿದೆ. ಆದರೆ, ಸಹಕಾರ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಳ್ಳುವುದು ಅಪೇಕ್ಷಣೀಯ. ಏಕೆಂದರೆ ಸಾಮುದಾಯಿಕ ಅಭಿವೃದ್ಧಿಯು ವ್ಯಕ್ತಿಯ ಕಲ್ಯಾಣವನ್ನೂ ಒಳಗೊಳ್ಳುವುದರಿಂದ ಮಹಿಳೆಯರ ಸಂಘಟನಾ ಕಾರ್ಯವು, ಮಹಿಳಾ ಸಂಘ, ಸ್ವಯಂ ಸೇವಾ ಏಜೆನ್ಸಿ, ಮಹಿಳಾ ಸಮಾಜ ಸಹಕಾರ ಸಂಸ್ಥೆಗಳ ಮೂಲಕ ನೆರವೇರಬೇಕಾಗಿರುತ್ತದೆ. ಈ ಎಲ್ಲ ಸಂಸ್ಥೆಗಳ ಮೂಲೋದ್ದೇಶ ಒಂದೇ ಗುರಿಯಾಗಿದ್ದು ಪ್ರಜಾಸತ್ತಾತ್ಮಕ, ಸಮಾನತೆಯ, ಪರಸ್ಪರ ನಂಬಿಕೆ, ವಿಶ್ವಾಸ, ನೆರವಿನ ಸೇವೆಗಳನ್ನು ಪಡೆಯುವುದು ಹಾಗೂ ಅಗತ್ಯವಿರುವ ಮಹಿಳೆಯರಿಗೆ ಒದಗಿಸುವುದೇ ಆಗಿದೆ.

ಭಾರತೀಯ ಮಹಿಳೆಯರು ತಮಗೆ ಸಮಾಜದಲ್ಲಿ ನಿರ್ಬಧರಹಿತ ಸ್ವಾತಂತ್ರ್ಯ(ಸ್ವಚ್ಛಂದ?) ಹಾಗೂ ಹೊಸ ಸ್ಥಾನಮಾನಗಳನ್ನು ಕೆಲಮಟ್ಟಿಗೆ ಪಡೆದುಕೊಂಡಿದ್ದಾರೆ. ಅಥವಾ ತಮ್ಮದಾಗಿಸಿಕೊಳ್ಳಲು ಪ್ರಯತ್ನ ನಡೆಸಿದ್ದಾರೆ. ಮಹಿಳೆಯು ಯಾವ ಕ್ಷೇತ್ರದಲ್ಲಾದರೂ ಶ್ರಮವಹಿಸಿ ದೈಹಿಕ, ಮಾನಸಿಕ, ಕೌಟುಂಬಿಕ ಒತ್ತಡಗಳ ನಡುವೆಯೂ ಕೆಲಸ ಮಾಡುವ ಸಾಮರ್ಥ್ಯ ಹಾಗೂ ಛಲವನ್ನು ಹೊಂದಿದ್ದಾಳೆ. ಮುಖ್ಯವಾಗಿ ತನ್ನ ಕಾಲ ಮೇಲೆ ತಾನು ನಿಂತು ಸ್ವಯಂ ಪೂರ್ಣಳಾಗುವ ದಿಕ್ಕಿನಲ್ಲಿ ಯಶಸ್ಸಿನ ಮಾರ್ಗದಲ್ಲಿದ್ದಾಳೆ. ಇಲ್ಲಿಯವರೆಗೆ ಮಹಿಳಾ ಪರ ಅಧ್ಯಯನಗಳಲ್ಲಿ ಕಾನೂನು, ಸಮಾಜ, ಸಂಸ್ಕೃತಿ, ಮಹಿಳಾ ವಾದದ ತಾರ್ಕಿಕ ನೆಲೆಗಳು ಮುಂತಾದ ವಿಷಯಗಳ ಬಗ್ಗೆ ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಣೆ, ವಾದ-ಪ್ರತಿವಾದ ಮಂಡನೆಗಳು ನಡೆಯುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಇದೀಗ ಸಾಹಿತ್ಯ ಚರಿತ್ರೆಯಂಥ

ಐತಿಹಾಸಿಕ ದಾಖಲೆಯಲ್ಲಿ ಮತ್ತೊಮ್ಮೆ ಮಹಿಳಾ ಕೃತಿಗಳ ಮಹಿಳಾ ಚಳವಳಿ ಮುಂತಾದ ವಾಸ್ತವಿಕ ಸಂಗತಿಗಳನ್ನು ನಮೂದಿಸಬೇಕೆಂಬ ಬಗ್ಗೆ ವಿಚಾರ ವಿಮರ್ಶೆ ನಡೆಯುತ್ತಿದೆ. ಆದರೆ ಮಹಿಳೆಯರ ವಾಸ್ತವಿಕ ದೈನಂದಿನ ಸಂವೇದನಶೀಲ ಬದುಕಿನಲ್ಲಿ ಕೇವಲ ಮೂಕವೇದನೆ, ಅಸಹಾಯಕತೆ, ತಾರತಮ್ಯ, ಪ್ರಾಣ-ಮಾನ ಹಾನಿ, ಪರಾವಲಂಬನೆಯನ್ನು ತೊಡೆದು ಸಮಾಜದಲ್ಲಿ ಸಮಾನತೆಯಿಂದ ಬಾಳುವ ಅವಕಾಶವೊದಗಿಸುವ ಪ್ರಯತ್ನಕ್ಕೆ ಹೆಚ್ಚು ಒತ್ತು ನೀಡಬೇಕು. ಅಂಥ ಪ್ರಯತ್ನಗಳಿಂದ ಮಹಿಳೆಯರು ಸ್ವಾವಲಂಬಿಗಳಾಗಿ, ಸಶಕ್ತರಾಗಲು ವಿಪುಲ ಅವಕಾಶಗಳಿರುವ ಮಾರ್ಗಸೂಚಿಗಳನ್ನು ಒದಗಿಸಬೇಕು. ಎಂದರೆ ಮಹಿಳಾ ಸ್ವಾವಲಂಬನೆಯಂಥ ಅತ್ಯಂತ ಪ್ರಮುಖ ವಿಷಯವನ್ನು ಮಹಿಳಾ ಅಧ್ಯಯನದ ವಿಷಯವನ್ನಾಗಿಸಬೇಕೆಂಬುದು ಇಲ್ಲಿನ ಅತ್ಯಂತ ಕಳಕಳಿಯ ಅಭಿಪ್ರಾಯವಾಗುತ್ತದೆ.

ಜಾಗತಿಕ ಮಟ್ಟದಲ್ಲಿ ಇದೀಗ ಎರಡು ಮುಖ್ಯ ವಿಷಯಗಳು ಅಥವಾ ಸಮಸ್ಯೆಗಳು ಅಥವಾ ಸವಾಲುಗಳು ಎದುರಾಗಿವೆ. ಇಡೀ ಮಾನವಕುಲದ ವಿನಾಶಕ್ಕೆ ಕಾರಣವಾಗಬಹುದಾದ ಪರಿಸರ ಹಾನಿ ಹಾಗೂ ಲಿಂಗಭೇದ ಇವೇ ಆ ಎರಡು ಪಿಡುಗುಗಳು. ಪರಿಸರವಿನಾಶದಿಂದ ಪ್ರಾಣಿ, ಪಕ್ಷಿ, ವೃಕ್ಷ, ಸಸ್ಯ ಸಂಕುಲಗಳ ಕಣ್ಮರೆ, ಅಂತರ್ಜಲ ಕುಸಿತ, ಮುಂತಾದ ಪರಿಣಾಮಗಳ ಮೂಲಕ ಭೂಮಿ ವಾಸಯೋಗ್ಯ ವಾತಾವರಣವನ್ನೇ ಕಳೆದುಕೊಳ್ಳುವ ಭೀತಿ ತಲೆದೋರಿದೆ. ಸ್ತ್ರೀಭ್ರೂಣ ಹತ್ಯೆ, ಹೆಣ್ಣು ಶಿಶುವಿನ ಕೊಲೆ, ಮಹಿಳೆಯರಿಗೆ ನೀಡಲಾಗುವ ನಾನಾ ಬಗೆಯ ಪೀಡೆಗಳು, ಇತ್ಯಾದಿಗಳ ಮೂಲಕ ಸ್ತ್ರೀಯರ ಸಂಖ್ಯೆ ಇಳಿಮುಖವಾಗಿದ್ದು, ಮುಂದೊಮ್ಮೆ ಮಾನವ ಜೀವನವೇ ದಾರುಣಸ್ಥಿತಿಗೀಡಾಗಬಹುದು. ಮನುಷ್ಯನ ಇಂಥ ಅವಿವೇಕದ ಕೃತ್ಯಗಳು ನಿಲ್ಲಬೇಕಾದರೆ ಮಹಿಳೆಯರಿಗೆ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಸೂಕ್ತ ಸ್ಥಾನಮಾನ, ಗೌರವ ಪ್ರಾಪ್ತಿಯಾಗಬೇಕು. ಇದಕ್ಕಾಗಿ ಮಹಿಳೆಯರು ಸ್ವಾಭಿಮಾನಿಗಳಾಗಿ ಜಾಗೃತರಾಗಿ ತಮ್ಮ ಸಕಲ ಸಾಮರ್ಥ್ಯವನ್ನೂ ಯುಕ್ತ ಪ್ರಯತ್ನಗಳ ಮೂಲಕ ಪ್ರಯೋಗಿಸಿ ಯಶಸ್ವಿಗಳಾಗಬೇಕು. ಇಂಥ ಪ್ರಯತ್ನಗಳನ್ನು ಗುರುತಿಸುವ, ದಾಖಲಿಸುವ ಹಾಗೂ ಆ ಬಗ್ಗೆ ಹೆಚ್ಚು ಹೆಚ್ಚು ಅಧ್ಯಯನ, ಸಮೀಕ್ಷೆಗಳನ್ನು ನಡೆಸಲು ವಿಶ್ವವಿದ್ಯಾಲಯಗಳು ಪಠ್ಯವಿಷಯಗಳಲ್ಲೂ ಒಳಗೊಳ್ಳುವ ಮೂಲಕ ಮಹಿಳಾ ಸಬಲೀಕರಣಕ್ಕೆ ಸೂಕ್ತ ಬೆಂಬಲ, ಪ್ರೋತ್ಸಾಹ ನೀಡಬಹುದು ಎಂಬುದನ್ನು ಅಂತಿಮವಾಗಿ ಈ ಅಧ್ಯಯನವು ಶೃತಪಡಿಸುತ್ತದೆ.

ಆಧಾರ ಗ್ರಂಥಗಳು

ಆಧಾರ ಗ್ರಂಥಗಳು

ಕನ್ನಡ ಗ್ರಂಥಗಳು

೧. ಅಲೆಕ್ಸಿಸ್ ಕೆರೆಲ (ಅನು), ೧೯೯೯, ಅವ್ಯಕ್ತಮಾನವ, ಪ್ರೊ.ಯು.ಲಕ್ಷ್ಮೀಕನಾರಾಯಣಾಚಾರ್ಯ, ಪ್ರೊ.ಕು.ಶಿ. ಹರಿದಾಸಭಟ್ಟ, ರೀಜನಲ್ ರಿಸೋರ್ಸ್‌ಸ್ ಸೆಂಟರ್ ಅಂಡ್ ರಾಷ್ಟ್ರಕವಿಗೋವಿಂದ ಪೈ ಸಂಶೋಧನಾ ಕೇಂದ್ರ, ಎಂ.ಜಿ.ಎಂ ಕಾಲೇಜು, ಉಡುಪಿ

೨. ಗಾಂಧಿ.ಎಂ.ಕೆ, ೧೯೮೭, ನನ್ನ ಕಲ್ಪನೆಯ ಸಮಾಜವಾದ, (ಅನು) ಎಸ್.ಆರ್.ಕುಲಕರ್ಣಿ, ಭಾರತೀಯ ವಿದ್ಯಾಭವನ, ಬೆಂಗಳೂರು

೩. ಗೀತಾ ಕೃಷ್ಣಮೂರ್ತಿ, ೨೦೦೧, ಮಹಿಳೆ, ಕಾನೂನು ಮತ್ತು ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಇಂದಿರಾ ಆರ್., ೨೦೦೨, ಮಹಿಳೆ, ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೫. ಜೆರಾಲ್ಡಿನ್ ಫೋರ್ಬ್ಸ್, ೨೦೦೧, ಆಧುನಿಕ ಭಾರತದಲ್ಲಿ ಮಹಿಳೆ, (ಅನು) ಎಚ್.ಎಸ್.ಶ್ರೀಮತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬. ಜ್ಯೋತಿ ಶಶಿಕುಮಾರ್ , ೧೯೭೬, ಮಹಿಳೆ ಮತ್ತು ಕಲೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೭. ಭಾಷಾಂತರ ನಿರ್ದೇಶನಾಲಯ, ೨೦೦೦, ಭಾರತದ ಸಂವಿಧಾನ, ಬೆಂಗಳೂರು

೮. ಭಟ್ ಎಸ್.ಆರ್., ೧೯೮೪, ಪ್ರಾಚೀನ ಭಾರತದಲ್ಲಿ ಜನಜೀವನ, ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈ.ಲಿ. ಬೆಂಗಳೂರು,

೯. ಪ್ರೀತಿ ಶುಭಚಂದ್ರ, ೨೦೦೨, ಮಹಿಳಾ ಅಧ್ಯಯನದ ತಾತ್ತ್ವಿಕ ಚಿಂತನೆಗಳು ಮತ್ತು ಮಹಿಳಾ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦. ಮಾಸ್ತಿ ವೆಂಕಟೇಶ ಅಯ್ಯಂಗಾರ್ , ೧೯೬೬, ಭಾರತ ತೀರ್ಥ, ಎಂವಿಜೆಕೆ ಟ್ರಸ್ಟ್ , ಬೆಂಗಳೂರು

೧೧. ಮೂರ್ತೀಶ್ವರಯ್ಯ ಬಿ.ಕೆ, ೨೦೦೦, ಮಹಿಳೆ ಸಮಾಜ ಮತ್ತು ಕಾನೂನು, ನವಕರ್ನಾಟಕ ಪಬ್ಲಿಕೇಷನ್ಸ್, (ಪ್ರೈ)ಲಿ. ಬೆಂಗಳೂರು

೧೨. ತಿಪ್ಪೇಸ್ವಾಮಿ ಜಿ.ಆರ್.(ಸಂ), ೨೦೦೦, **ವಿಚಾರ ಸಾಹಿತ್ಯ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೩. ರೊಮಿಲಾ ಥಾಪರ್(ಅನು), ೧೯೯೯, ಎಂ.ಆರ್.ದೀಕ್ಷಿತ್, **ಚಾರಿತ್ರಿಕ ವ್ಯಾಖ್ಯಾನಗಳು ಮತ್ತು ಭಾರತೀಯ ಸಮಾಜದ ಧರ್ಮ ನಿರಪೇಕ್ಷೀಕರಣ**, ಕನ್ನಡ ಸಾಹಿತ್ಯ ಪರಿಷತ್ತು, ವಿಸ್ತಾರ ಪಬ್ಲಿಕೇಷನ್ಸ್, ಬೆಂಗಳೂರು

೧೪. ವರದಾ ಶ್ರೀನಿವಾಸ, ೧೯೯೯, **ಮಹಿಳೆಯ ಸ್ಥಿತಿಗತಿ ಅಂದು ಇಂದು**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ

೧೫. ವಿಜಯಾದಬ್ಬೆ(ಸಂ), ೧೯೮೯, **ಶ್ಯಾಮಲಾ ಸಂಚಯ**, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

೧೬. ವಿಜಯಾದಬ್ಬೆ, ೧೯೯೭, **ನಾರಿ-ದಾರಿ-ದಿಗಂತ**, ರಚನಾ ಪ್ರಕಾಶನ, ಮೈಸೂರು

೧೭. ವಿಮಲಾ ರಾಮರಾವ್, ೧೯೭೬, **ಮಹಿಳೆ ಮತ್ತು ನಗರ ಜೀವನ**

೧೮. ಶ್ರೀಧರ್ ಭಾಸ್ಕರ್ ಪೆರ್ಣೇಕರ್, ೧೯೮೭ **ಭಾರತೀಯ ವಿದ್ಯೆ**, ಅನು : ಬಿ.ಎಸ್.ರಾಮಕೃಷ್ಣರಾವ್, ಭಾರತೀಯ ವಿದ್ಯಾಭವನ, ಬೆಂಗಳೂರು.

೧೯. ಶ್ರೀಮತಿಎಚ್ .ಎಸ್., ೧೯೯೯, **ಸ್ತ್ರೀವಾದಿಚಿಂತನೆ, ಕೆಲವು ಪ್ರಶ್ನೆಗಳು ಸಂದೇಹಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦. ಶ್ರೀಮತಿ ಎಚ್.ಎಸ್., ೧೯೯೯, **ಚಹರೆ**, ಇಳಾ ಪ್ರಕಾಶನ, ಬೆಂಗಳೂರು

೨೧. ಸುಬ್ರಹ್ಮಣ್ಯಂ ಜಿ., ೧೯೯೮, **ಭಾರತೀಯ ಸಮಾಜದ ಸಮಾಜಶಾಸ್ತ್ರ**, ಸುಭಾಸ್ ಪಬ್ಲಿಕೇಷನ್ಸ್, ಬೆಂಗಳೂರು.

೨೨. ಸುಮಿತ್ರಾಬಾಯಿ.ಬಿ.ಎನ್., ೧೯೯೨, **ಕಲ್ಯಾಣ ಸರಸ್ವತಿ**, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

01. Altekar A.S., 1991, **The Position of Women in Hindu Civilization,** Mothilal Banarasidas Publisher(Pvt) Ltd., N.Delhi

02. Baidyanath Misra, **Co-operation Movement in India,** Delhi

03. Bose, Nirmal Kumar, 1947, **Studies of Gandhism,** Indian Associated Publishing Co., Calcutta

04. Dibakar School, 1988, **The Concept of Justice,** Atlantic Pub., & Distributors, New Delhi

05. Harsh Mandes, 2002, **Cry, The Beloved Country Books for change,** Bangalore

06. Harish, **Economic Development and Role of Indian Women**

07. Huegh E.M., 1932, **The Co-operative Movement in India**

08. Ghosh S.K., **Indian Women Through Ages**

09. John Ralackal, 1977, **Post Independence Economic Policies, Centre for Social Action,** Bangalore

10. Joyoti Mitra, **Women and Soceity,** Calcutta

11. Kamal Singh, 1992, **Women Entrepreneurs**

12. Leelavathi Chari, 1990, **Rights of Women,** Indian Federation of Women lawyers (Karnataka Brach), Bangalore

13. Mir murtuza Hussain, **Tran: G.H.Ram Rao,** Mysore

14. Pranabkumar Charkraborthy, **Problems of Co-operative Movement in India**

15. Sebastian L.Raj, 1991, **Quest for Gender Justic,** Sathyanilayam, Madras

16. Ramala M.Buxmas, 1991, Hemasubrahmanyam, **Assistance for Women's Development** from National Agencies Popular Prakshan, Bombay

17. Radhakumar, 1998, **The History of Doing, Kali for Women,** New Delhi

18. Sinha B.K., 1970, **Mahatma Gandhi and the Co-operative Movement**, National Co-operative Union of India, New Delhi.

19. Saxena D.R., 1976, **Law, Justice and Social Change,** Deep and Deep Publication, F-159

20. Shyama Rao M., 1936, **Modern Mysore**

21. Shesha Iyengar A., 1952, **The Indian Citizen,** Mysore

22. Susan Vishwanathan, **The Question of Human Rights**, India Peace Centre, Nagpur

23. Susheela Mehtha, **Revolution and the Status of Women in India,** B.V.Gupt, Metropolitan Book Company Pvt., Ltd., New Delhi

24. Shamsuddin Shyams, **Women, Law and Social Changes,** New Delhi

25. Susictharu & K.Lalitha, 1995, **Women Writeing in India, Neil Obrion,** New Delhi

26. Usha Rao N.J., **Women In Developing Society**

27. Vijay Agnew, **Elite Women in Indian Politics**

28. Verrier Elvin, 1972, **Leaves from the Jungle,** Delhi

ಪತ್ರಿಕೆಗಳು, ವರದಿಗಳು, ಇತ್ಯಾದಿ

೧. ಕರ್ನಾಟಕ ರಾಜ್ಯ ಸಹಕಾರಿ ಯೂನಿಯನ್ ನಿಯಮಿತ ಕಾರ್ಯಾಗಾರಗಳ ವರದಿಗಳು

೨. ಲಿಂಗಾಧಾರಿತ ತಾರತಮ್ಯದ ಮೂಲಕ ಜಿಲ್ಲಾ ಮಟ್ಟದ ಆಡಳಿತದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಬಲಪಡಿಸುವುದು, ೧೯೯೯ ಸಮೀಕ್ಷೆ ವರದಿ, ಸಿಂಗಮ್ಮ ಶ್ರೀನಿವಾಸನ್ ಸಂಸ್ಥೆ, ಬೆಂಗಳೂರು

೩. ಸಹಕಾರ ಇಲಾಖೆ ವಾರ್ಷಿಕ ವರದಿಗಳು

೪. ಸಹಕಾರ ಪತ್ರಿಕೆ ಸಂಚಿಕೆಗಳು

೫. ಮಹಿಳಾ ವಿಜಯ (ವಿಜಯವಾಣಿ) ಸಂಚಿಕೆಗಳು

೬. ಸುಧಾ ವಾರಪತ್ರಿಕೆ

೭. ಪ್ರಜಾವಾಣಿ, ಕನ್ನಡ ಪ್ರಭ, ಉದಯವಾಣಿ (ಸಾಪ್ತಾಹಿಕ ಪುರವಣಿ), ದಿನಪತ್ರಿಕೆಗಳು

೮. ಸಮನ್ವಿತ ಎನ್‌ಎಂಕೆಆರ್‌ವಿ ಕಾಲೇಜಿನ ವಾರ್ಷಿಕ ಸಾವೆನೀರ್

೯. ವಿವಿಧ ಕಮ್ಮಟಗಳು, ಸಮಾವೇಶಗಳ ಭಾಷಣಗಳ ವರದಿ, ಸಂದರ್ಶನ ಟಿಪ್ಪಣಿಗಳು

೧೦. ಆಕಾಶವಾಣಿ, ದೂರದರ್ಶನ ಇನ್ನಿತರ ಸಮೂಹ ಮಾಧ್ಯಮಗಳಲ್ಲಿನ ವಾರ್ತೆ, ಟಿಪ್ಪಣಿಗಳು

೧೧. Voices-understanding Human Rights-A journal

೧೨. Towards-Equality Report of the Dept. of Social Welfare & Education on Status of Women in India

೧೩. Dr.Nanjundappa Commission Report on the Regional imbalances in Karnataka

೧೪. Co-operative Movement at glance in Karnataka, 1996-97, A Report

೧೫. The seeds of Change- Women's Organisation Centre for Development of Women Studies, New Delhi

೧೬. Seminar, 1998, Monthly symposium Editors, Raj & Ramesh Thaper, New Delhi

೧೭. Swayam Shikshana Prayog- Suranjana Gupta, 1996

೧೮. Outlook, The Week, Times of India, The Hindu, The Deccan Herald Etc.

೧೯. ಶ್ರೀಮತಿ ಎಚ್.ಎಸ್.(ಸಂ), ಮಹಿಳಾ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅನುಬಂಧ ೧

ಮಹಿಳಾ ಸಹಕಾರ ಸಂಘಗಳು ೧೯೯೬-೯೭

ಕ್ರ.ಸಂಖ್ಯೆ	ವಿವರಗಳು	ಸಂಖ್ಯೆ	ಮೊಬಲಗು (ಲಕ್ಷ ರೂ.ಗಳಲ್ಲಿ)
೧.	ಸಹಕಾರ ಸಂಘಗಳ ಸಂಖ್ಯೆ	೭೭೫	-
೨.	ಒಟ್ಟು ಸದಸ್ಯತ್ವ		
	ಎ.ವ್ಯಕ್ತಿಗತವಾಗಿ		೧೬೬೦೩೪
೩.	ಒಟ್ಟು ಷೇರು ಬಂಡವಾಳ	-	೨೧೪.೭೯
	ಎ. ವ್ಯಕ್ತಿಗತವಾಗಿ	-	೧೧೯.೭೯
	ಬಿ.ಸರ್ಕಾರ	-	೯೫.೦೦
೪.	ಎ. ಸ್ವೀಕರಿಸಿದ ಸರ್ಕಾರದ ಸಹಾಯಧನ -	೨೦.೭೭	
೫.	ಮೀಸಲು ಮತ್ತಿತರ ನಿಧಿಗಳು	-	೪೫.೮೩
೬.	ಠೇವಣಿಗಳು	-	೬೪.೫೧
೭.	ಒಟ್ಟಾರೆ ಸಾಲಗಳು	-	೧೧೪.೫೭
	ಎ. ಸರ್ಕಾರ	-	೪೩.೯೪
	ಬಿ. ಸಿ.ಎಫ್ .ಎಗಳು	-	೩೧.೨೬
	ಸಿ. ಇತರೆ - ೩೯.೩೭		
೮.	ಚಾಲ್ತಿ ಬಂಡವಾಳ	-	೭೦೭.೦೫
೯.	ಒಟ್ಟಾರೆ ಮಾರಾಟ	-	೧೧೭೭.೧೨
೧೦.	ಲಾಭದಲ್ಲಿರುವ ಸಹಕಾರ ಸಂಘಗಳ ಸಂಖ್ಯೆ	-	೩೧೩
೧೧.	ಲಾಭದ ಮೊಬಲಗು	-	೪೮.೫೦
೧೨.	ಒಟ್ಟು ನಷ್ಟದ ಮೊಬಲಗು	-	೨೭.೬೪
೧೩.	ಲಾಭ ಅಥವಾ ನಷ್ಟವಿಲ್ಲದ ಸಹಕಾರ ಸಂಘಗಳ ಸಂಖ್ಯೆ		೫೨

ಮಾಹಿತಿ ಮೂಲ : ವಾರ್ಷಿಕ ವರದಿ ಕೋಷ್ಟಕಗಳು, ೧೯೯೬-೯೭

ಸಿಎಫ್ ಎ : ಸೆಂಟ್ರಲ್ ಫೈನಾನ್ಸಿಂಗ್ ಏಜೆನ್ಸೀ

ಅನುಬಂಧ ೨

ಮಹಿಳಾ ಅಭಿವೃದ್ಧಿ, ಕಲ್ಯಾಣ, ಹಕ್ಕುಗಳ ಅಧಿನಿಯಮಗಳು

೧. ಭಾರತದ ಸಂವಿಧಾನ

೨. ವಿಶೇಷ ವಿವಾಹ ಅಧಿನಿಯಮ ೧೯೫೪.

೩. ಹಿಂದೂ ಉತ್ತರಾಧಿಕಾರ ಅಧಿನಿಯಮ, ೧೯೫೬

೪. ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, ೧೯೫೬

೫. ಕಾರ್ಖಾನೆಗಳ ಅಧಿನಿಯಮ, ೧೯೫೮

೬. ಗಣಿಗಳ ಅಧಿನಿಯಮ, ೧೯೫೨

೭. ಬೀಡಿ ಮತ್ತು ಸಿಗಾರ್ ಗಳ ಅಧಿನಿಯಮ, ೧೯೬೬

೮. ಪ್ರಸೂತಿ ಸೌಲಭ್ಯ ಅಧಿನಿಯಮ, ೧೯೬೧

೯. ಸಮಾನ ವೇತನ ಅಧಿನಿಯಮ, ೧೯೭೬

೧೦. ನೌಕರರ ನಷ್ಟಪರಿಹಾರ ಅಧಿನಿಯಮ, ೧೯೨೩

೧೧. ಔದ್ಯಮಿಕ ವಿವಾದಗಳ ಅಧಿನಿಯಮ, ೧೯೪೭

೧೨. ಕನಿಷ್ಠ ಮಜೂರಿ ಅಧಿನಿಯಮ, ೧೯೪೮

೧೩. ನೌಕರರ ರಾಜ್ಯವಿಮಾ ಅಧಿನಿಯಮ, ೧೯೪೮

೧೪. ನೌಕರರ ಭವಿಷ್ಯನಿಧಿ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, ೧೯೫೨

೧೫. ಶಿಶುವಿವಾಹ ಪ್ರತಿಬಂಧಕ ಅಧಿನಿಯಮ, ೧೯೨೯(೧೯೭೮)

೧೬. ಅನೈತಿಕ ವ್ಯವಹಾರ ನಿಷೇಧ ಅಧಿನಿಯಮ, ೧೯೫೬

೧೭. ವರದಕ್ಷಿಣೆ ನಿಷೇಧ ಅಧಿನಿಯಮ, ೧೯೬೧

೧೮. ವೈದ್ಯಕೀಯ ಗರ್ಭಪಾತ ಅಧಿನಿಯಮ, ೧೯೭೨

೧೯. ಮಹಿಳೆಯರ ಅಸಭ್ಯ ಪ್ರದರ್ಶನ(ನಿಷೇಧ) ಅಧಿನಿಯಮ, ೧೯೮೬

೨೦. ಸತಿ(ನಿಷೇಧ) ಅಧಿನಿಯಮ, ೧೯೮೭

೨೧. ಲಿಂಗ ಪರೀಕ್ಷೆ, ತಂತ್ರಗಳು(ನಿಯಂತ್ರಣ ಮತ್ತು ದುರುಪಯೋಗ ತಡೆಯುವುದು) ಅದಿನಿಯಮ, ೧೯೯೪

೨೨. ಮುಸ್ಲಿಂ ಮಹಿಳೆಯರ (ವಿವಾಹವಿಚ್ಛೇದನ ಹಕ್ಕುಗಳ ರಕ್ಷಣೆ) ಅಧಿನಿಯಮ, ೧೯೮೬

೨೩. ಮಾನವ ಹಕ್ಕುಗಳ ಅಧಿನಿಯಮ, ೧೯೯೩

೨೪. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, ೧೯೫೯

೨೫. ಕರ್ನಾಟಕ ಸೌಹಾರ್ದ ಸಹಕಾರ ಸಂಘಗಳ ಅಧಿನಿಯಮ, ೧೯೯೭